
ಕರ್ನಾಟಕ ಸರ್ಕಾರ

ಸಂಸ್ಕೃತಿ - ಸಂಚಯ



ಮರಾಠಿ ಮೂಲ : **ದುರ್ಗಾ ಭಾಗವತ**

ಸಂಪಾದನೆ : ಮೀನಾ ವೈಶಂಪಾಯನ

ಕನ್ನಡಕ್ಕೆ : ಚಂದ್ರಕಾಂತ ಪೋಕಳೆ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು - ೫೬೦೦೭೨

ಟಿ. ಎಸ್. ನಾಗರಾಜ್
08-02-2023

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೩೮೦
ವಿಚಾರ ಸಾಹಿತ್ಯಮಾಲೆ - ೧೮೭

ಸಂಸ್ಕೃತಿ - ಸಂಚಯ

(ಆಯ್ದ ಚಿಂತನ ಬರಹಗಳು)

ಸಂಸ್ಕೃತಿ – ಸಂಚಯ

(ಆಯ್ದ ಚಿಂತನ ಬರಹಗಳು)

ಮರಾಠಿ ಮೂಲ

ದುರ್ಗಾ ಭಾಗವತ

ಸಂಪಾದನೆ

ಮೀನಾ ವೈಶಂಪಾಯನ

ಕನ್ನಡಕ್ಕೆ

ಚಂದ್ರಕಾಂತ ಪೋಕಳೆ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ

ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ

ಬೆಂಗಳೂರು – ೫೬೦ ೦೫೬

SAMSKRUTHI - SANCHAYA - Originally writter in Marathi by - **Durga Bhagwat;** Edited by - **Meena Vaishampayan;** Translated into Kannada by - **Chandrakant Pokale;** Published by **Sri Ishwar K. Mirji,** Registrar, Kuvempu Bhasha Bharathi Pradhikara, Kalagrama, Jnana Bharathi, Mallattahalli, Bengaluru-560 056; First Edition: 2018; pp: xvi + 204; Price: Rs. 150.00

ಮೊದಲ ಮುದ್ರಣ : ೨೦೧೮
ಪುಟಗಳು : xvi + ೨೦೪
ಬೆಲೆ : ರೂ. ೧೫೦/-
ಪ್ರತಿಗಳು : ೫೦೦

ಪ್ರಕಾಶಕರು
ಶ್ರೀ ಈಶ್ವರ್ ಕು. ಮಿರ್ಜಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಮುಖಪುಟ ವಿನ್ಯಾಸ : **ಪ.ಸ. ಕುಮಾರ್**

ISBN No. : 978-93-8759-273-5

ಮುದ್ರಕರು
ರಾಜಾ ಪ್ರಿಂಟರ್ಸ್
ನಂ. ೨೦/೧, ೧ನೇ ಅಡ್ಡರಸ್ತೆ, ೩ನೇ ಮುಖ್ಯ ರಸ್ತೆ
ಪುಖ್‌ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು-೫೬೦ ೦೩೦. ದೂ: ೦೮೦-೨೨೨೩೪೦೬೬

ಅಧ್ಯಕ್ಷರ ಮಾತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಕರ್ನಾಟಕ ಸರಕಾರವು ಕನ್ನಡ ಮತ್ತು ಇತರ ಭಾಷೆಗಳೊಡನೆ ತಿಳಿವಿನ ನಂಟನ್ನು ಬೆಳೆಸುವ ಗುರಿಯಿಂದ ರೂಪಿಸಿದೆ. ಬೇರೆ ಭಾಷೆಗಳ ತಿಳಿವನ್ನು ಕನ್ನಡಕ್ಕೆ ದೊರಕಿಸಲು ಅನುವಾಗುವಂತೆ ಸಿದ್ಧ ಕೃತಿಗಳ ಅನುವಾದ ಮತ್ತು ಪ್ರಕಟಣೆಯ ಕೆಲಸದಲ್ಲಿ ಪ್ರಾಧಿಕಾರವು ತೊಡಗಿಕೊಂಡಿದೆ. ಅಲ್ಲದೆ ಕನ್ನಡದ ತಿಳಿವು ಇತರ ನುಡಿಗಳಿಗೂ ಸಿಗುವಂತಾಗಲು ಬೇಕಾದ ಯೋಜನೆಗಳನ್ನು ಹಮ್ಮಿಕೊಂಡಿದೆ. ಈವರೆಗೆ ಸುಮಾರು ಮುನ್ನೂರ ಅರವತ್ತು ಪುಸ್ತಕಗಳನ್ನು ಕನ್ನಡಿಗರ ಓದಿನ ಲೋಕಕ್ಕೆ ಪ್ರಾಧಿಕಾರವು ಸೇರಿಸಿದೆ. ಅಲ್ಲದೆ ಸರಕಾರವು ಬೇರೆ ಯೋಜನೆಗಳ ಮೂಲಕ ಪ್ರಾಧಿಕಾರಕ್ಕೆ ಕನ್ನಡ ಜಗತ್ತನ್ನು ವಿಸ್ತರಿಸುವ ಹೊಣೆಯನ್ನೂ ನೀಡಿದೆ. ಅದಕ್ಕೆ ಬೇಕಾದ ಅನುದಾನವನ್ನೂ ಒದಗಿಸಿದೆ. ಕನ್ನಡ ನಾಡಿನ ಪ್ರಾಜ್ಞರ ನೆರವಿನಿಂದ ಈವರೆಗೆ ಪ್ರಾಧಿಕಾರವು ತನಗೆ ವಹಿಸಲಾದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ.

ನಮ್ಮ ಕಾಲದ ಅಗತ್ಯಕ್ಕೆ ಬೇಕಾದ ಜ್ಞಾನ-ವಿಜ್ಞಾನಗಳನ್ನು ಭಾರತೀಯ ಮತ್ತು ಜಾಗತಿಕ ಮಟ್ಟದಲ್ಲಿನ ಲೇಖನ ಮತ್ತು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಇದರ ಜೊತೆಗೆ ಕನ್ನಡದ ಉತ್ತಮ ಜ್ಞಾನ ವಿಜ್ಞಾನಗಳ ಕೃತಿಗಳನ್ನು ಭಾರತೀಯ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದಿಸುವ ಕೆಲಸವೂ ಮುಂದುವರಿಸಲಾಗುತ್ತಿದೆ.

ಶ್ರೀಮತಿ ದುರ್ಗಾ ಭಾಗವತ ಅವರು ಜಾನಪದ, ಮಾನವವಂಶಶಾಸ್ತ್ರ, ಸಮಾಜಶಾಸ್ತ್ರ, ಧಾರ್ಮಿಕ, ವಿಶೇಷವಾಗಿ ಬೌದ್ಧಧರ್ಮ ಮತ್ತು ಪರಂಪರೆ ಈ ಬಗೆಯ ಸಂಶೋಧನಾ ಬರಹಗಳನ್ನು ಬರೆಯುವುದರಲ್ಲಿ ಆಸಕ್ತರು. ಮಾನವ ಸೃಷ್ಟಿಯಲ್ಲಿನ ಜೈವಿಕ ಜಾಲದಲ್ಲಿನ ಪ್ರತಿಯೊಂದು ಜೀವಜಂತುವಿಗೂ ಒಂದು ಸ್ಥಾನವಿದೆ. ಮಾನವ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅವುಗಳೆಲ್ಲದರ ಸಹಭಾಗಿತ್ವವಿದೆ ಎಂಬುದನ್ನು ದುರ್ಗಾ ಭಾಗವತ ಅವರು ತಮ್ಮ ಬರಹಗಳಲ್ಲಿ ಶೋಧಿಸುತ್ತಾರೆ. ೧೯೩೮ರಿಂದ ೧೯೪೦ರ ಅವಧಿಯಲ್ಲಿ ಮಧ್ಯಪ್ರದೇಶದ ಆದಿವಾಸಿಗಳ ತಾಣಗಳಲ್ಲಿ ಸುತ್ತಾಡಿ ಅವರ ಜೀವನಕ್ಕೆ, ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳನ್ನು, ನಾಗರಿಕ ಜಗತ್ತಿನಲ್ಲಿ ಅವರಿಗಿರುವ ಸ್ಥಾನಮಾನವನ್ನು ಅವರು ಇಲ್ಲಿ ವಿವೇಚಿಸಿದ್ದಾರೆ. ಸಮಾಜ ಸಂಸ್ಕೃತಿಗೆ ಸಂಬಂಧಿಸಿದ

ದುರ್ಗಾ ಭಾಗವತ್ ಅವರ ಉಪಯುಕ್ತ ಆಯ್ದುಬರಹಗಳ ಕೃತಿಯನ್ನು ಶ್ರೀ ಚಂದ್ರಕಾಂತ ಪೋಕಳೆ ಅವರು ಮರಾಠಿ ಮೂಲದಿಂದ ಅನುವಾದಿಸಿಕೊಟ್ಟಿರುವುದಕ್ಕೆ ಅವರಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಭಿನಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವತಿಯಿಂದ ಈ ಕೃತಿಯನ್ನು ಸಿದ್ಧಪಡಿಸಲು ಆಸಕ್ತಿ ವಹಿಸಿದ ಪ್ರಾಧಿಕಾರದ ಸದಸ್ಯರಿಗೆ, ಪ್ರಾಧಿಕಾರದ ಕೆಲಸ ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಈಶ್ವರ್ ಕು.ಮಿರ್ಜಿ ಅವರಿಗೆ, ಶ್ರೀ ಎಚ್.ದಂಡಪ್ಪನವರಿಗೆ, ಶ್ರೀ ಜೆ.ಎನ್.ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಇತರ ಸಿಬ್ಬಂದಿ ವರ್ಗದವರಿಗೂ, ಅಂದವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ರಾಜಾ ಪ್ರಿಂಟರ್ಸ್, ಬೆಂಗಳೂರು ಅವರಿಗೂ ನಮ್ಮ ವಂದನೆಗಳು.

ಡಾ. ಕೆ. ಮರುಳಸಿದ್ದಪ್ಪ
ಅಧ್ಯಕ್ಷರು

ದುರ್ಗಾ ಭಾಗವತ

ದುರ್ಗಾ ಭಾಗವತರು ಮಾನವವಂಶಶಾಸ್ತ್ರ, ಸಮಾಜಶಾಸ್ತ್ರ, ಜಾನಪದ, ಬೌದ್ಧಧರ್ಮ ಮತ್ತು ಪರಂಪರೆಯ ಬಗೆಗೆ ಆಳವಾಗಿ ಅಧ್ಯಯನವನ್ನು ಕೈಕೊಂಡಿದ್ದಾರೆ. ಇಂಥ ಗಂಭೀರ ವಿಷಯಗಳ ಕುರಿತು ಸಂಶೋಧನೆಯನ್ನು ಕೈಕೊಂಡು, ಮಾನವನ ಜೀವನದ ಬಗೆಗೂ ಅರಿಯುವ ಪ್ರಯತ್ನ ಮಾಡಿದ್ದಾರೆ. ಇವುಗಳನ್ನು ಸಂಪಾದನೆ ಮಾಡುವದೂ ಸಹ ಅವರಿಗೆ ಅಗತ್ಯದ್ದು ಎಂದೆನಿಸಿತು. ಮಾನವನ ಸೃಷ್ಟಿಯಲ್ಲಿ ಕ್ಷುದ್ರವೇ ಆಗಿರಲಿ ಅಥವಾ ಭವ್ಯವೇ ಆಗಿರಲಿ, ಅದೆಲ್ಲಕ್ಕೂ ಈ ನಿಸರ್ಗದ ವಿರಾಟ ಪಟದಲ್ಲಿ ಸ್ಥಾನವಿದೆ. ಮಾನವ ಸಂಸ್ಕೃತಿಯ ಮುನ್ನಡೆಯಲ್ಲಿ ಅವುಗಳ ಸಹಭಾಗಿತ್ವವಿದೆ ಎಂದೇ ಭಾವಿಸಿದರು.

ಮಾನವ ಸಂಸ್ಕೃತಿಯ ಏಕತೆಯು ಕನಸು ಅಥವಾ ಕಲ್ಪನೆಯಾಗಿರದೆ, ವಾಸ್ತವವಾಗಿದೆ ಎಂಬ ವ್ಯಾಪಕ ಪ್ರಜ್ಞೆಯಿಂದಲೇ ಅವರು ಬರೆಯಲಾರಂಭಿಸಿದರು. ಈ ಕಾರಣದಿಂದಾಗಿಯೇ ಅವರ ಮನದೊಳಗೆ ಧರ್ಮ, ಜಾತಿ, ದೇಸಿ, ವಿದೇಶಿ, ನಗರ, ಗ್ರಾಮ್ಯ ಎಂಬ ಯಾವ ಭೇದ-ಭಾವವಿಲ್ಲ. ಅದರ ಬಗೆಗೆ ಕುತೂಹಲ, ಜಿಜ್ಞಾಸೆ ಅವರನ್ನು ಎಲ್ಲ ಕಡೆಗೆ ಹೋಗುವಂತೆ ಮಾಡುತ್ತದೆ. ತಾನು ಅರಿತ ವಿಷಯ ಉಳಿದವರಿಗೂ ಗೊತ್ತಾಗಲಿ ಎಂಬ ಆತ್ಯಂತಿಕ ಸೆಳೆತದಿಂದ ಅವರು ಹೇಳುತ್ತಲೇ ಹೋಗುತ್ತಾರೆ.

ಚಂದ್ರಕಾಂತ ಪೋಕಳೆ

ಶ್ರೇಷ್ಠ ಅನುವಾದ ಓದಲು ಸಿಗುವುದೇ ಅಪರೂಪ, ರಚನೆ ಮಾಡುವದು ತುಂಬ ಕಷ್ಟ. ಅದಕ್ಕೆ ಅಭಿಜಾತ ಅನುವಾದಕನೇ ಹುಟ್ಟಿ ಬರಬೇಕಾಗುತ್ತದೆ. ಅನುವಾದದ ಮಹತ್ವ ಓದುಗನಿಗೆ ಗೊತ್ತಿರುತ್ತದೆ. ಅದಕ್ಕಿಂತ ಅನುವಾದಕನಿಗೆ ಗೊತ್ತು ಇರಲೇಬೇಕು. ಅನ್ಯ ಭಾಷೆಯ ಅಜ್ಞಾತ ಕೃತಿಯನ್ನು ತನ್ನ ಭಾಷಿಕರಿಗೆ ಪರಿಚಯ ಮಾಡಿಕೊಡುವದೇ ಅನುವಾದದ ಉದ್ದೇಶ... ಹಳೆಯ ಶ್ರೇಷ್ಠ ಸಾಹಿತ್ಯದ ಕಾಲ ಸರಿದಂತೆ ಕಣ್ಮರೆಯಾಗುತ್ತ ಹೋಗುತ್ತದೆ. ಅಂಥದರಲ್ಲಿ ಅನ್ಯಭಾಷೆಯು ಎಷ್ಟು ಜನರಿಗೆ ಅರ್ಥವಾಗುತ್ತದೆ? ಅಂಥ ಶ್ರೇಷ್ಠ ಕೃತಿಯ ಕನಿಷ್ಠ ಜ್ಞಾನ ರಸಿಕರಿಗೆ, ಅಧ್ಯಯನಕಾರರಿಗೆ ಸಿಗಲೇಬೇಕು. ಆ ಕೆಲಸ ಮಾಡುವದೇ ಅನುವಾದದ ಉದ್ದೇಶ. ಆ ಕೃತಿಯ ಅಲ್ಪಸ್ವಲ್ಪ ಪರಿಚಯವು ಅಜ್ಞಾನಕ್ಕಿಂತ ಉತ್ತಮ...

– ದುರ್ಗಾ ಭಾಗವತ

ಮನದಾಳದ ಮಾತು

೬೧ ವರ್ಷಗಳ ಈವರೆಗಿನ ಆಯುಷ್ಯ. ಎಷ್ಟೆಲ್ಲ ನೆನಪುಗಳು ! ಕಿಕ್ಕಿರಿದ ಬಾಲ್ಯದ ನೆನಪುಗಳೆಲ್ಲ ತಲೆ ಎತ್ತಲು ಹವಣಿಸುತ್ತಿವೆ. ಅವೆಲ್ಲವೂ ಸುಖದಾಯಕವಾಗಿವೆ ಎಂದೇನಲ್ಲ. ಅದರಲ್ಲಿ ಸಿಟ್ಟಿನ, ಪ್ರೇಮದ, ದುಃಖದ ಮತ್ತು ನಾಚಿಕೆಯ ಸಂಗತಿಗಳೂ ಇವೆ.

ಜೀವನದುದ್ದಕ್ಕೂ ಓದು, ಬರೆಹ ಮಾಡುತ್ತಲೇ ಬಂದೆ. ನನಗೆ ಬರವಣಿಗೆ ಇಷ್ಟವೆಂದು ಬರೆಯಲಾರಂಭಿಸಿದೆ. ನನ್ನ ಬರವಣಿಗೆಯನ್ನು ನಾನು ಧ್ಯೇಯ ಸ್ವರೂಪದ್ದೆಂದು ಭಾವಿಸಲಿಲ್ಲ. ಆ ಪ್ರಕೃತಿ ಧರ್ಮವೆಂದು ಭಾವಿಸಿದೆ, ಆಸಕ್ತಿಯೆಂದು ಭಾವಿಸಿದೆ, ಹವ್ಯಾಸವೆಂದು ಭಾವಿಸಿದೆ, ಆಟವೆಂದು ಭಾವಿಸಿದೆ ಮತ್ತು ಕರ್ತವ್ಯವೆಂದೂ ಭಾವಿಸಿದೆ. ಈ ಬರವಣಿಗೆಯೇ ನನ್ನ ಸಂಸಾರ. ಈ ಸಂಸಾರ ಅಚ್ಚುಕಟ್ಟಾಗಿರಿಸುವ ಪ್ರಯತ್ನ ಮಾಡಿದೆ. ಈ ಯೋಚನೆಯೂ ಸ್ವಾರ್ಥ ಮೂಲದಿಂದಾಗಲಿ ಅಹಂಭಾವದಿಂದಾಗಲಿ ಬಂದದ್ದಲ್ಲ. ಏಕೆಂದರೆ ಈ ಸಂಸಾರದಲ್ಲಿ ನನ್ನ ಜೊತೆಗೆ ಓದುಗ ಸಮೂಹವೂ ಇದೆ. ಸಹೃದಯ ಓದುಗರನ್ನು ಗೌರವಿಸುವಂತಹ ಬರವಣಿಗೆ ಮಾಡಬೇಕೆನ್ನುವುದೇ ನನ್ನ ಧ್ಯೇಯ. ಹಾಗದು ಸುಲಭದ್ದಲ್ಲ. ಆದ್ದರಿಂದ ಲೇಖಕನಾದವನು ಸದಾ ಜಾಗೃತನಾಗಿರಬೇಕೆಂದು ನನಗೆ ಅನಿಸುತ್ತದೆ.

ಓದು-ಬರೆಹದಿಂದಾಗಿ ಹಲವು ಓದುಗರ ಸಂಬಂಧ ಬಂತು. ವಿಚಾರವಂತರ ಸಂಬಂಧವೂ ಬಂತು. ತಮ್ಮ ವಿಚಾರವನ್ನು ಮುಕ್ತವಾಗಿ ಹೇಳುವ ದೇಶ-ವಿದೇಶಿ ವಿಚಾರವಂತರದ್ದೂ. ಹೀಗಾಗಿ ರಾಜವಾಡೆ, ಕೇತಕರ, ರಾಜಾರಾಮ ಶಾಸ್ತ್ರಿ, ಭಾಗವತ, ಥೋರೋ, ಗಾಂಧಿ, ಟಾಲ್‌ಸ್ಟಾಯ್ ಇವರು ನನ್ನ ಸನಿಹದವರೆಂದು ಅನಿಸಲು ತೊಡಗಿತು. ನಾನು ಸತತ ಸ್ವಾತಂತ್ರ್ಯವನ್ನು ಮುಕ್ತ ಆವಿಷ್ಕಾರವನ್ನು ಮೌಲ್ಯವಾಗಿ ಸ್ವೀಕರಿಸಿದೆ. ಮುಕ್ತ ವಿಚಾರವೇ ಸಂಸ್ಕೃತಿಯ ಆಧಾರ. ಹೀಗಾಗಿ ಅದನ್ನು ಪ್ರಾಣ ಒತ್ತೆಯಿಟ್ಟಾದರೂ ಸಂರಕ್ಷಿಸುವದೇ ನನ್ನ ಕರ್ತವ್ಯವಾಗುತ್ತದೆ. ಕಾಲದ ಚಕ್ರ ತಿರುವುಮುರುವಾಗಿ ಸುತ್ತುತ್ತಿರುವದು ಆಚೆಈಚೆ ನೋಡಿದಾಗ ಗೊತ್ತಾಗುತ್ತದೆ. ನಿತ್ಯದ ವಾರ್ತೆಯನ್ನು ಓದಿ ಕಸಿವಿಸಿಯಾಗುತ್ತದೆ. ಕಪ್ಪು ನೆರಳು ಪಸರಿಸಿದಂತೆ ಅನಿಸುತ್ತದೆ.

ಇತ್ತೀಚೆಗೆ ಕೊಠೆವಾಡೆಯಲ್ಲಿ ನಡೆದ ಸಾಮೂಹಿಕ ಬಲಾತ್ಕಾರದ ಸುದ್ದಿ ಓದಿದೆ. ಮನಸ್ಸು ನಾಚಿಕೆಯಿಂದ ಮುದುಡಿತು. ದೇಶದಲ್ಲಿಯ ಪ್ರತಿ ಮನುಷ್ಯರು ಆಂತರಿಕ

ಹಾಗೂ ಬಾಹ್ಯವಾಗಿ ಬದಲಾಗುತ್ತಿದ್ದಾರೆ. ಈ ಸಾಮಾಜಿಕ ಅನ್ಯಾಯಕ್ಕೆ, ಅತ್ಯಾಚಾರಕ್ಕೆ ವಿರೋಧ ವ್ಯಕ್ತವಾಗಬೇಕು. ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

ನಮ್ಮ ಲೇಖಕರೂ ಸಹ ಜಾಗರೂಕರಾಗಿರಬೇಕು. ಸ್ವಾರ್ಥರಹಿತ ಹಾಗೂ ನಿರ್ಭಯವಾಗಿರಬೇಕು. ಪ್ರತಿಯೊಬ್ಬ ಲೇಖಕನೂ ಕಟ್ಟಲ್ಪಟ್ಟಿರುತ್ತಾನೆ. ತನ್ನ ಕಾಲದೊಂದಿಗೆ ಬದ್ಧನಾಗಿರುತ್ತಾನೆ. ಸಮಾಜದೊಂದಿಗೆ ಬದ್ಧನಾಗಿರುತ್ತಾನೆ. ಏಕೆಂದರೆ ಅವನು ರಕ್ತ ಮಾಂಸದ ಜಗತ್ತಿನಲ್ಲೇ ನೆಲೆಸಿರುತ್ತಾನೆ. ಆದರೆ ವಿಚಾರವಂತರ ಮೇಲೆ, ಲೇಖಕರ ಮೇಲೆ ಕೃತ್ರಿಮ ಬಂಧನ ಬಂತೆಂದರೆ ಲೇಖನ ಸಾಯುತ್ತದೆ. ಲೇಖನ ಸತ್ತರೆ ವಿಚಾರ ಸಾಯುತ್ತದೆ ಮತ್ತು ವಿಚಾರ ಸತ್ತರೆ ಸಂಸ್ಕೃತಿಗೆ ಗಂಡಾಂತರ ಬಂದು ವಿಕೃತಿ ಶುರುವಾಗುತ್ತದೆ.

ಇದೆಲ್ಲ ಲೇಖಕನ ಗಮನದಲ್ಲಿರಬೇಕಾಗುತ್ತದೆ. ಲೇಖಕ ಶ್ರಮಜೀವಿಯೂ ಜಾಗರೂಕನೂ ಆಗಿರಬೇಕು. ಅವನು ಪ್ರಾಮಾಣಿಕ ಅಭಿಪ್ರಾಯವನ್ನು ಹೊಂದಿರಬೇಕು. ತನ್ನ ಸ್ವಂತ ಅಭಿಪ್ರಾಯವನ್ನು ರೂಪಿಸಬೇಕು. ಅದಕ್ಕೆ ದಿಟ್ಟತನ ಬೇಕು. ತಪಸ್ಸಾಧನೆ ಬೇಕು. ಸತತ ಹೊಸತನದ ಹುಡುಕಾಟ ನಡೆಸಬೇಕು.

ನಾನು ಈತನಕ ಹಾಗೆ ಮಾಡುತ್ತ ಬಂದೆ ಎಂದು ನನ್ನ ಭಾವನೆ. ಬರವಣಿಗೆಯಲ್ಲಿಯ ನಿರ್ಮಲ ಸಂತಸವನ್ನು ದೋಚಿದೆ. ಹೊಚ್ಚ ಹೊಸ ದೃಷ್ಟಿಯಿಂದ ಸಮಾಜದಲ್ಲಿಯ ಮತ್ತು ಸೃಷ್ಟಿಯಲ್ಲಿಯ ಬೆರಗನ್ನು ನೋಡುತ್ತ ಬಂದೆ. ಆದುದರಿಂದ ಇಂದು ೯೧ರ ವಯಸ್ಸಿನಲ್ಲೂ ನನಗೆ ಬದುಕಿನಲ್ಲೇ ಸುಖ ಕಂಡಿದ್ದೇನೆ ಎಂದೆನಿಸಿದ್ದು ಆ ಕಾರಣಕ್ಕಾಗೇ !

ನಾವು ನಮ್ಮ ಸಂತೋಷಕ್ಕಾಗಿ ಸ್ವಂತ ಮಾನಸಿಕ ನೆಮ್ಮದಿಗಾಗಿ ಕೆಲಸ ಮಾಡುತ್ತಿರಬೇಕು. ಜೀವನದಲ್ಲಿ ಎಷ್ಟೋ ಸುಖ ದುಃಖದ ಪ್ರಸಂಗಗಳು ಬಂದವು. ಆದರೆ ಆಯುಷ್ಯವಿಡೀ ನಿಸರ್ಗದ ಸಹವಾಸ ಲಭಿಸಿತು. ಈ ನಿಸರ್ಗದ ಬಲದಿಂದಲೇ ಪ್ರಿಯ ಬಂಧು-ಬಳಗದವರ ಸಾವನ್ನೂ ಸಹ ಅರಗಿಸಿಕೊಳ್ಳುವದು ಸಾಧ್ಯವಾಯಿತು !

ನಾನು ತಾರುಣ್ಯದ ಉತ್ಸಾಹದಲ್ಲಿದ್ದಾಗ ನನ್ನ ಆರೋಗ್ಯ ಹದಗೆಟ್ಟಿತು. ಆದರೆ ಆ ರೋಗದ ಮುಳ್ಳಿನ ಅನುಭವವು ಮನದ ಮೇಲೆ ಹೊಸ ಹಚ್ಚೆಯನ್ನು ಒತ್ತಿತು. ನಿಸರ್ಗ ಎಂಬ ಸಜೀವ ಚಿತ್ರಣವು ನಿಜಕ್ಕೂ ಅನನ್ಯವಾದುದು. ಆ ನಿಸರ್ಗವು ಸೃಷ್ಟಿಯ ಚರಾಚರ ರಹಸ್ಯವನ್ನು ಬಳಿಗೆ ತಂದು, ಮೆಲ್ಲಗೆ ಗಾಯದ ಮುಳ್ಳುಗಳನ್ನು ಕಿತ್ತೆಸೆದು, ಅದು ತನ್ನ ಬಲಿಷ್ಠ ಪಾದವನ್ನು ನನ್ನ ಸಂವೇದನೆಯಲ್ಲಿ ಊರಿತು. ಹೊಸ ಅತಿಥಿಯು ಮಾಲೀಕನಾದ. ಏನು ಅಚ್ಚರಿ ಅಂತೀರಾ ನಾನು ಸ್ವಸಂತೋಷದಿಂದ ಅದರಲ್ಲಿ ಒಂದಾದೆ. ಸಂಪೂರ್ಣ ವಿದ್ಯೆಯೂ ಹೊಸ ಚಿತ್ರಲಿಪಿಯಲ್ಲಿ ಮತ್ತೆ ಮೂಡಿತು.

ಈಗಷ್ಟೇ ನನ್ನ ಸೋದರಿಯಾದ ಕಮಲಕ್ಕ ತೀರಿಕೊಂಡಳು. ಈ ವಯಸ್ಸಿನಲ್ಲಿ

ನನ್ನ ಬಲವೇ ಕುಂದಿದಂತಾಯಿತು. ಆದರೆ ಒಂದು ದಿನ ಸಹಜವಾಗಿ ಮುಗಿಲಿನ ಕಡೆಗೇ ನೋಟ ಹರಿಯಿಸಿದೆ. ಆ ಆಗಸವು ಅನುಪಮ ಹಾಗೂ ಸುಂದರವಾಗಿ ಗೋಚರಿಸಿತು; ಇಷ್ಟು ಸುಂದರವಾದ ಮುಸ್ಸಂಜೆಯ ಆಗಸವನ್ನು ನಾನು ಈವರೆಗೆ ನನ್ನ ಆಯುಷ್ಯದಲ್ಲೇ ಕಂಡಿರಲಿಲ್ಲ. ಅದು ನನ್ನ ದುಃಖವನ್ನು ಹಗುರಗೊಳಿಸಿತು. ಈ ಆಗಸವೇ ನಮ್ಮ ಕಮಲಕ್ಕನನ್ನು ಮೇಲೆತ್ತಿ ಒಯ್ದಿದೆ ಎಂದು ಮನದಲ್ಲಿ ಮೂಡಿತು.

ಈಗ ಈ ನನ್ನ ಚೊಕ್ಕ ಮುದಿತನದಲ್ಲಿ ಮನೆಯ ಬಂಧು ಬಳಗದವರಂತೆ ನನಗೆ ಅದರದ್ದೇ ಸಹವಾಸ ಲಭಿಸಿದೆ. ಮನುಷ್ಯ ಹುಟ್ಟಿದ ದಿನದಿಂದಲೇ ಅವನ ಜೀವನ ಶುರುವಾಗುತ್ತದೆ. ಅವನು ಸತ್ತಾಗ ಅದೇ ದಿನ ಅವನ ಜೀವನ ಅಂತ್ಯಗೊಳ್ಳುತ್ತದೆ. ಅಂದರೆ ಸಂಪೂರ್ಣ ಇಲ್ಲವಾಗುತ್ತದೆ. ನನ್ನ ಜೀವನವೂ ಒಂದು ದಿನ ಮುಗಿಯಲಿದೆ. ಒಂದೊಂದೇ ಅವಯವ ವಿರಮಿಸುತ್ತಿವೆ. ಕಣ್ಣು ಮಂಜಾಗಿದೆ. ಆಗ ನಮ್ಮ ಸಂವಾದ ನವ್ಮೊಂದಿಗೇ! ಅದಕ್ಕಿಂತ ಬೇರೆ ಸುಖ ಯಾವುದಿದೆ? ಕಿವಿ ಕೇಳಿಸುವುದೂ ಕಡಿಮೆಯಾಗಿದೆ. ಒಳ್ಳೆಯದಾಯಿತು. ಅದರಿಂದ ಯಾರಿಗೆ ತೊಂದರೆಯಾಗಲಿದೆ? ಎಷ್ಟು ಬೇಕೋ ಅಷ್ಟೇ ಕೇಳಿಸುತ್ತದೆ. ವ್ಯಾಯಾಮ ಮತ್ತೊಬ್ಬ ಮಿತ್ರ. ಸದಾ ಅಂಟಿಕೊಂಡಿರುತ್ತಾನೆ. ಪ್ರೇಮ ಮಾಡುವ ಪರಿಚಯವನ್ನು ಕೇಳಬೇಡಿ. ವ್ಹಾ! ಸಂಪೂರ್ಣ ದೇಹ ಆ ಲಹರಿಗೆ ಅನುಗುಣವಾಗಿ ಕುಣಿಯುತ್ತದೆ; ನನ್ನ ಸ್ನೇಹ ನನ್ನ ಜೊತೆಗೇ ಆಳಕ್ಕೆ ಇಳಿದ ಸ್ನೇಹ. ಮನಕ್ಕೂ ಸುಖ. ಜೀವನವು ನನ್ನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದಿದೆ. ಅಂದ ಬಳಿಕ ಸಾವಿನ ಸಾಮೀಪ್ಯವನ್ನು ನೆನಪಿಸುವ, ತೋರಿಸುವ ಮೈಮೇಲಿನ ಸುಕ್ಕು ತೊಗಲನ್ನು ದೇಹದ ವೇದನೆಯನ್ನು ನಾನಾದರೂ ಏಕೆ ಲೆಕ್ಕಿಸಲಿ! ಭರ್ತೃಹರಿ ಹೇಳುವಂತೆ ಈ ಸುಕ್ಕು ಮುದಿತನದ ಲೀನ, ಆದರೆ ಸುಂದರವಾದ ಅಲಂಕಾರವಾಗಿದೆ. ಅದು ಸಾವನ್ನು ಆಮಂತ್ರಿಸುತ್ತದೆ ಹಾಗೂ ತಡೆಹಿಡಿಯುತ್ತದೆ!

– ದುರ್ಗಾ ಭಾಗವತ

ಲೋಕಸತ್ತಾ, ೧೧ ಫೆಬ್ರವರಿ ೨೦೦೧

ಪ್ರಸ್ತಾವನೆ

ದುರ್ಗಾ ಭಾಗವತರು ತಮ್ಮ ಬರವಣಿಗೆಯ ಬಗೆಗೆ ಹೇಳಿದ ಮಾತು ಹೀಗಿದೆ:- ನನ್ನ ಬರೆಹದಲ್ಲಿ ಅಧ್ಯಯನಶೀಲ ಹಾಗೂ ಲಲಿತ ಬರೆಹ ಹೀಗೆ ಎರಡು ಬಗೆಗಳಿವೆ. ಅಧ್ಯಯನದ ಬರೆಹದಿಂದಲೇ ಮುಂದೆ ಬೇರೆ ರೂಪ, ಗತಿ ಪ್ರಾಪ್ತವಾಯಿತು. ಅದರ ಮೂಲ ಒಂದೇ. ಪ್ರಕ್ರಿಯೆ ಮತ್ತು ಆವಿಷ್ಕಾರದಲ್ಲಷ್ಟೇ ವ್ಯತ್ಯಾಸ.

ಪರಸ್ಪರ ಜೀವನ ರಸದಿಂದಲೇ ಈ ಬರೆಹ ಪೋಷಣೆಗೊಂಡವು. ಜಾನಪದ, ಮಾನವ ವಂಶಶಾಸ್ತ್ರ, ಸಮಾಜಶಾಸ್ತ್ರ, ಧಾರ್ಮಿಕ, ವಿಶೇಷವಾಗಿ ಬೌದ್ಧ ಧರ್ಮ ಮತ್ತು ಪರಂಪರೆ – ಈ ಬಗೆಯ ಸಂಶೋಧನ ಬರೆಹಗಳ ಜೊತೆ ಜೊತೆಗೇ ಲಲಿತ ಬರೆಹಗಳು ಸಹ ರಚನೆಗೊಂಡವು. ಮಾನವ ಸಮಾಜದ ಬಗೆಗೆ ತಮ್ಮ ಅರಿವಿಗೆ ಬಂದದ್ದನ್ನೆಲ್ಲ ಬರೆದರು. ಮಾನವ ಸೃಷ್ಟಿಯ ಪ್ರತಿಯೊಂದು ಸಂಗತಿ–ಅದು ಭವ್ಯವೇ ಆಗಿರಲಿ ಇಲ್ಲವೇ ಕ್ಷುದ್ರವೇ ಆಗಿರಲಿ ಅದಕ್ಕೆ ಸೃಷ್ಟಿಯ ವಿರಾಟ ಪರಿಸರದಲ್ಲಿ ಸ್ಥಾನವಿದೆ. ಮಾನವ ಸಂಸ್ಕೃತಿಯ ಮುನ್ನಡೆಯಲ್ಲಿ ಇದೆಲ್ಲದರ ಸಹಭಾಗಿತ್ವವಿದೆ.

ಆರಂಭಕ್ಕೆ ಅವರು ಸಮಾಜಶಾಸ್ತ್ರದ ಅಧ್ಯಯನಕ್ಕಾಗಿ ಅದನ್ನು ಗಮನಿಸಿದರು. ಜಾನಪದವನ್ನು ಎಲ್ಲರೂ ತೀರ ನಿರ್ಲಕ್ಷಿಸಿದ್ದರು. ಅವರು ಮಾತ್ರ ಅದರ ಗಂಭೀರವಾಗಿ ಅಧ್ಯಯನವನ್ನು ಆರಂಭಿಸಿದರು. ತತ್ಕಾಲದ ಮಧ್ಯ ಪ್ರದೇಶದಲ್ಲಿರುವ ಬುಡಕಟ್ಟು ಸಮಾಜ, ಅವರ ದೈನಂದಿನ ಜೀವನ, ಸಾಹಿತ್ಯದ ನಿರೀಕ್ಷಣೆ, ಓದು, ಚಿಂತನೆಯಿಂದ ಆ ಮಾನವ ಜೀವನವನ್ನು ಗ್ರಹಿಸಲಾರಂಭಿಸಿದರು. ಆ ಸಮುದಾಯದವರ ಕಥಾ ಸಾಹಿತ್ಯ, ಹಾಡುಗಳ ಪರಿಚಯವಾಗುತ್ತ ನಡೆದಂತೆ, ಅವರಿಗೆ ಜಗತ್ತಿನ ತುಂಬೆಲ್ಲ ಇರುವ ಜಾನದಪ ಕಥೆ, ಅವು ಒಂದು ದೇಶದಿಂದ ಬೇರೊಂದು ದೇಶಕ್ಕೆ ಕೈಕೊಂಡ ಪ್ರವಾಸ, ಅವುಗಳ ನಕಾಶೆಯೆಲ್ಲ ದುರ್ಗಾ ಭಾಗವತರ ಕಣ್ಣೆದುರಿಗೆ ಸ್ಪಷ್ಟವಾಗುತ್ತ ಹೋಯಿತು. ಈ ಸಂಸ್ಕೃತಿಯ ಏಕತೆಯು ಇದೆಲ್ಲ ನಾವು ಅರಿತುಕೊಳ್ಳಬೇಕಾದ ವಸ್ತುಸ್ಥಿತಿಯೇ ವಿನಾ ಕನಸಾಗಲಿ–ಕಲ್ಪನೆಯಾಗಲಿ ಅಲ್ಲ ಎನ್ನುವ ಅರಿವು ಮೂಡಿತು. ಈ ವಿಶಾಲ ಪ್ರಜ್ಞೆಯಿಂದಲೇ ಅವರು ಬರೆಯುತ್ತ ಸಾಗಿದರು. ಇದರಿಂದಾಗಿಯೇ ಅವರ ಮನದಲ್ಲಿ ಬರೆವಣಿಗೆಯಲ್ಲಿ ಯಾವುದೇ ಧರ್ಮ, ಜಾತಿ, ದೇಶ, ನಗರ, ಗ್ರಾಮೀಣ ಎಂಬ ಭೇದ–ಭಾವ ಗೋಚರಿಸುವಂತಿಲ್ಲ. ಈ ಕುತೂಹಲ ಅವರನ್ನು ಎಲ್ಲೆಡೆ ಸಂಚರಿಸುವಂತೆ ಮಾಡುತ್ತದೆ. ಕೊನೆಗೆ ಅದನ್ನೇ ಆತ್ಯಂತಿಕ ಸೆಳೆತದಿಂದ ಉಳಿದವರಿಗೂ ಹೇಳುತ್ತಾರೆ.

ಮನುಷ್ಯ ಭಾವನೆ, ಪ್ರೇರಣೆ, ಸುಖ ದುಃಖ ಎಲ್ಲೆಡೆ ಒಂದೇ ರೀತಿಯಾಗಿರುತ್ತದೆ. ಜಗತ್ತಿನಲ್ಲಿರುವ ಸಮಾಜಗಳು ಬೇರೆ ಬೇರೆ ಅವಸ್ಥೆಯಲ್ಲಿ ಹಾದು ಹೋಗುತ್ತಿದ್ದರೂ ಅದರ ವಿವಿಧತೆಯಲ್ಲಿ ಏಕತೆಯಿದೆ. ಮಾನವ ಸಂಸ್ಕೃತಿಯಲ್ಲಿ ವಿಕಾಸ ಪಡೆಯುತ್ತ ಹೋಗುವದೆಲ್ಲವೂ ನಿಸರ್ಗದಿಂದ ಸುಸಂವಾದಿಯಾಗಿದೆ ಎಂಬ ಗ್ರಹಿಕೆಯನ್ನು ಅವರು ನಮಗೆ ತಲುಪಿಸಿದ್ದಾರೆ. ಅದು ಕೇವಲ ಬೌದ್ಧಿಕ ಗ್ರಹಿಕೆಯಾಗಷ್ಟೇ ಉಳಿಯದೇ ಅದು ಸಮಗ್ರ ಜೀವನದೃಷ್ಟಿಯದೇ ಆಧಾರವಾಯಿತು. ಹೀಗಾಗಿ ಎಲ್ಲ ಮೂಲಗಳಿಂದ ಲಭಿಸಿದ ಜ್ಞಾನವನ್ನು ಸಮಾಜಕ್ಕೂ ತಲುಪಿಸುವ ಪ್ರಯತ್ನವನ್ನು ಸತತ ಮಾಡುತ್ತ ಬಂದರು. ಅವರಿಗೆ ಯಾವ ವಿಷಯದ ಬಗೆಗೆ ತಿರಸ್ಕಾರವಿರಲಿಲ್ಲ. ದೇಶ-ವಿದೇಶದ ಸಂದರ್ಭವನ್ನು ಅವರು ಬರವಣಿಗೆಯಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾರೆ. ಪಾಶ್ಚಾತ್ಯ ಜಾನಪದ ಪರಂಪರೆಯ ಬಗೆಗೆ ಹೇಳ-ಹೇಳುತ್ತ ನಮ್ಮ ಕೊಂಕಣ-ಕರಾವಳಿ ಪ್ರದೇಶದ ಮಹತ್ವದ ಸಂಗತಿಗಳತ್ತ ನಮ್ಮ ಗಮನ ಸೆಳೆಯುತ್ತಾರೆ. ಲಮಾಣಿ ಮಹಿಳೆಯರ ಪೋಷಾಕದ ಮೇಲಿರುವ ಕಲಾ ಕುಸುರಿಯ ಬಗೆಗೂ ಹೊಲಿಗೆಯ ನೈಪುಣ್ಯದ ಬಗೆಗೂ ದಾಖಲಿಸುತ್ತಾರೆ.

ಮಾನವ ಸಂಸ್ಕೃತಿಯ ಈ ಘಟಕವನ್ನೆಲ್ಲ ಸಂರಕ್ಷಿಸಬೇಕೆನ್ನುವದು ಅವರ ಒತ್ತಾಸೆ. ಈ ಕಾರಣಕ್ಕಾಗೇ ಅವರು ಜಾನಪದ ಸಾಹಿತ್ಯವನ್ನು ಸಂಕಲನ ಮಾಡಿ ವರ್ಗೀಕರಣ ಮಾಡಿದರು. ಅನುವಾದ ಸಹ ಮಾಡಿದರು. ಓದುಗರಿಗೆ ತಲುಪಿಸಿದರು. ತಮ್ಮ ವ್ಯಾಸಂಗದ ಶಕ್ತಿಯಿಂದ ಶಾಸ್ತ್ರಶುದ್ಧವಾಗಿ ಮಾಡಿದರು. ಜ್ಞಾನದ ಕ್ಷೇತ್ರದಲ್ಲಿ ಯಾವುದೂ ಗೌಣವಲ್ಲ ಎಂದು ಭಾವಿಸಿದರು. ಈ ಕಾರಣದಿಂದಾಗಿ ಸಂಶೋಧಕರಿಗೆ ಅವರ ಬರವಣಿಗೆಯಲ್ಲಿ ಅಸ್ತವ್ಯಸ್ತ, ವಿಸಂಗತಿ ಗೋಚರಿಸಿರಬೇಕು. ಇಲ್ಲಿಯ ಜಾನಪದ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಲು ಪಾಶ್ಚಾತ್ಯ ಪರಂಪರೆಯ ಶಿಸ್ತನ್ನು ರೂಢಿಸಿಕೊಂಡರು. ವಿದೇಶಿ ಅಧ್ಯಯನದ ಚೌಕಟ್ಟಿನಾಚೆಗೂ ಅದಕ್ಕಿರುವ ಬೇರೊಂದು ಆಯಾಮವನ್ನು ಎತ್ತಿ ತೋರಿಸಿದರು. ಅಂಥ ಮೌಲಿಕ ನೋಟವನ್ನು ಮುಂದಿನ ಸಂಶೋಧಕರಿಗೆ ನೀಡಿದರು. ಆ ನಿಲುವಿನ ಹಿನ್ನೆಲೆಯಲ್ಲೇ ಸಂಸ್ಕೃತಿ ಸಂಚಯದಲ್ಲಿಯ ಬರೆಹಗಳನ್ನು ಸಂಕಲನ ಮಾಡಲಾಗಿದೆ.

* * * *

ಕೃಷಿ ಹಾಗೂ ದಲಿತ ಸಮುದಾಯದ ಜಾನಪದ ಸಾಹಿತ್ಯದಲ್ಲಿಯ ಮೌಖಿಕ ಪರಂಪರೆಯಲ್ಲಿರುವ ಶಾಬ್ದಿಕ ಸಂಪತ್ತು ಅವರಿಗೆ ಮಹತ್ವದ್ದೆನಿಸಿತು. ಹೀಗಾಗಿ ಅವರು ಒಬ್ಬ ಮಹಾರ ಮಹಿಳೆಯಿಂದ 'ತಮಾಶಾ' ಎಂಬ ಜಾನಪದ ಕಲೆಯ ಮಾಹಿತಿಯನ್ನು ಕಲೆಹಾಕಿದರು. ಜಾನಪದ ಕಲೆ ಪ್ರಸಾರಗೊಳ್ಳಲು ಈ ತಮಾಶಾನೇ ಮುಖ್ಯ ಕಾರಣವೆಂಬುದನ್ನು ಮನಗಂಡರು. ಅದರ ಬಲಸ್ಥಾನವನ್ನು ಗುರುತಿಸಿದರು. ಕಥೆ, ಲಾವಣಿ, ವಗ್-ಮುಂತಾದವುಗಳ ಪ್ರಸಾರಕ್ಕಾಗಿ ಮಾಹಿತಿಯನ್ನು ಸಂಗ್ರಹಿಸಿದರು.

೧೯೫೭ರಲ್ಲಿ ಜರುಗಿದ ತಮಾಶಾ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅವರು ಅಲಂಕರಿಸಿದರು.

ದುರ್ಗಾ ಭಾಗವತರು ಭಾವುಕರಾಗಿ ಎಂದು ಜಾನಪದದ ಬಗೆಗೆ ಯೋಚಿಸಲಿಲ್ಲ. ಅಲ್ಲಿರುವ ನಿರರ್ಥಕ ಹಾಗೂ ಪುನರುಕ್ತಿಯ ಕಡೆಗೂ ನಿರ್ದೇಶನ ಮಾಡಿದರು. ಈ ಜಾನಪದ ಸಾಹಿತ್ಯದ ಕೊಂಡಿ ವೇದ ಸಾಹಿತ್ಯದವರೆಗೂ ಚಾಚಿಕೊಂಡಿದೆ ಎಂಬುದನ್ನು ಗುರುತಿಸಿದರು. ಇದರಲ್ಲಿ ಒಳಿತೂ ಇದೆ, ಕೆಡಕೂ ಇದೆ! ಈ ಕಥೆಯಲ್ಲಿ ಹಾಡುಗಳಲ್ಲಿರುವ ಸಾಂಸ್ಕೃತಿಕ ಮೌಲ್ಯವೂ ಅವರ ಅರಿವಿಗೆ ಬಂತು. ಹೀಗಾಗಿ ಅವುಗಳ ಅಸ್ತಿತ್ವವನ್ನು ಸಂರಕ್ಷಿಸುವುದು ತೀರ ಅಗತ್ಯವೆಂದು ಅವರು ಭಾವಿಸುತ್ತಾರೆ.

ಭಾರತೀಯ ಪ್ರಾಚೀನ ಕಥಾ ಪರಂಪರೆಯಲ್ಲಿರುವ ತುಳಸಿಯ ಹಲವು ಪರ್ಯಾಯ ಕಥೆಗಳನ್ನು ಸಂಗ್ರಹಿಸಿದ್ದಾರೆ. ದೈವಕಥೆಯೂ ಇಲ್ಲಿದೆ. ಅವರು ಬರೇ ಕಥೆಯನ್ನಷ್ಟೇ ಹೇಳಿ ನಿಲ್ಲದೆ, ಕಥೆಯ ಬೀಜ, ಜಗತ್ತಿನ ತುಂಬ ನಡೆದ ಅದರ ಪ್ರಸಾರ ಹಾಗೂ ಅಲ್ಲಿಯ ಸಾಮ್ಯವನ್ನು ಹೇಳುತ್ತಾರೆ. ನಮ್ಮ ಪರಂಪರೆಯಲ್ಲಿರುವ ಜಾನಪದ ಸಾಹಿತ್ಯದ ಮಹತ್ವವನ್ನೂ ದಾಖಲಿಸುತ್ತಾರೆ. ಧರ್ಮ ಮತ್ತು ಮಾಟ-ಮಂತ್ರಗಳ ನಡುವಣ ಸಂಬಂಧವನ್ನು ಗುರುತಿಸುತ್ತಾರೆ. ಹೀಗೆ ದುರ್ಗಾ ಭಾಗವತರು ನಿರಂತರವಾಗಿ ಜಾನಪದ ಸಂಶೋಧನೆ ಮಾಡುತ್ತ ಇರುತ್ತಿದ್ದರು. ಕಣ್ಮರೆಯಾಗುತ್ತಿರುವ ಸಂಗತಿಗಳನ್ನು ಜತನ ಮಾಡುವುದರಲ್ಲಿ ಅವರಿಗೆ ವಿಶೇಷ ಆಸಕ್ತಿಯಿತ್ತು. ಹೀಗಾಗಿ ಅವರು ಕಸೂತಿ, ಕಲಾ ಕುಸುರಿ, ಹಚ್ಚೆ, ಭೋಜನದ ವೈಶಿಷ್ಟ್ಯದ ಬಗೆಗೂ ಒಲವು ತೋರಿಸಿದ್ದಾರೆ. ಅವರು ದಾಖಲಿಸುವ ವಿಷಯ ಹಲವು ಮಗ್ಗಲುಗಳಿಂದ ತೆರೆದು ಅನಾವರಣಗೊಳ್ಳುತ್ತವೆ.

* * *

ಅನುವಾದ ದುರ್ಗಾ ಭಾಗವತರಿಗೆ ಪ್ರಿಯವಾದ ಕೆಲಸ. ಬಾಣನ ಕಾದಂಬರಿ, ಪಾಲಿ ಭಾಷೆಯ ಜಾತಕ ಕಥೆ, ಹೆನ್ರಿ ಡೆವ್ಹಿಡ್ ಥೋರೊನ ತತ್ವಜ್ಞಾನವನ್ನು ಅನುವಾದಿಸಿದ್ದಾರೆ. ರವೀಂದ್ರನಾಥರ ಕಥೆ, ಜಾನಪದ ಲೇಖನವನ್ನು ಭಾಷಾಂತರಿಸಿದರು.

ಸಂಶೋಧನೆಯ ಕೆಲಸಕ್ಕಾಗಿ ದುರ್ಗಾ ಭಾಗವತರು ೧೯೩೭-೪೦ರ ಕಾಲದಲ್ಲಿ ಮಧ್ಯ ಪ್ರದೇಶದ ಆದಿವಾಸಿಗಳ ತಾಣದಲ್ಲೆಲ್ಲ ಸುತ್ತಾಡಿದರು. ಅಲ್ಲಿ ಕೈಕೊಂಡ ನಿರೀಕ್ಷಣೆ, ತಪಶೀಲು ಅನಂತರ ಬರವಣಿಗೆಯ ರೂಪದಲ್ಲಿ ಪ್ರಕಟಗೊಂಡವು. ಆದಿವಾಸಿಗಳ ಜೀವನಕ್ಕೆ, ಸಂಸ್ಕೃತಿಗೆ ಸಂಬಂಧಿಸಿದ ಲೇಖನವೂ ಇಲ್ಲಿದೆ. ಅವರ ತತ್ವಜ್ಞಾನ, ನಾಗರಿಕ ಜಗತ್ತಿನಲ್ಲಿ ಅವರಿಗಿರುವ ಸ್ಥಾನಮಾನವನ್ನು ಅವರು ವಿವೇಚನೆ ಮಾಡಿದ್ದಾರೆ.

– ಮೀನಾ ವೈಶಂಪಾಯನ

ಪರಿವಿಡಿ

ಸಂಸ್ಕೃತಿ – ಸಂಚಯ

ಭಾಗ – ೧

೧. ಆದಿವಾಸಿಗಳ ಮೃತ್ಯುಂಜಯ ತತ್ವಜ್ಞಾನ

ಮಾನವ ಮನಸ್ಸು ಎಲ್ಲಿದೆಯೋ, ವ್ಯವಹಾರವನ್ನು ಸಂಕೇತದಿಂದ ಎಲ್ಲಿ ಬಂಧಿಸಲಾಗಿದೆಯೋ ಅಲ್ಲೆಲ್ಲ ಮಾನವನು ನಿರ್ಮಿಸಿದ ತತ್ವಜ್ಞಾನವು ಇದ್ದೇ ಇದೆ. ತೀರ ಅನಾಗರಿಕ ಕಾಡುಜನರೆಂದು ಭಾವಿಸಲಾಗುವ ಕಾಡುಜನರ ಜೀವನವನ್ನೇ ನೋಡಿ. ಇಲ್ಲವೇ ತೀರ ಕೊಬ್ಬಿದ ಸಂಸ್ಕೃತಿಯಲ್ಲಿ ವ್ಯವಹರಿಸುವ ಯಾವುದೇ ಸಮಾಜದ ನಿರೀಕ್ಷಣೆಯನ್ನು ಆಳವಾಗಿ ಮಾಡಿ, ವಾಸ್ತವವಾಗಿ ಈ ಎರಡೂ ಅವಸ್ಥೆಯಲ್ಲಿ ಸಾಕಷ್ಟು ಅಂತರವಿದೆ ! ಆದರೆ ಸಂಪೂರ್ಣ ಮಾನವ ಸಂಸ್ಕೃತಿಯ ಯಾವುದೇ ಪಾತಳಿಯಲ್ಲಿರಲಿ, ಒಂದೇ ಗುಣದ, ಒಂದೇ ಬಣ್ಣದ್ದಾಗಿದೆ ಎಂದು ಸಿದ್ಧಮಾಡುವ ಮನುಷ್ಯ ಮನೋವ್ಯಾಪಾರದ ಯಾವ ಒಂದು ವಿಶಾಲ ತತ್ವವಿದೆಯೋ ಅದರ ಅನುಭವವು ಪ್ರತಿಯೊಬ್ಬ ಪ್ರಜ್ಞಾವಂತ ಮನುಷ್ಯನಿಗೆ ಬಂದೇ ಬರುತ್ತದೆ. ಮನಸು ಮನಸ್ಸನ್ನು ಸ್ಪರ್ಶಿಸುವ ಈ ತತ್ವವು ಎಲ್ಲೇ ಹೋಗಲಿ, ತಮ್ಮ ಶಾಶ್ವತ ಸೌಂದರ್ಯದಿಂದ ಹೊಳೆಯುವುದನ್ನು ಕಾಣುತ್ತೇವೆ. ಹೀನ ಸ್ಥಿತಿಯಲ್ಲಿರುವ ದಾರಿದ್ರ್ಯ, ಅಜ್ಞಾನವು ಅದನ್ನು ಉರುಳಿಸುವದು ಸಾಧ್ಯವಿಲ್ಲ. ಅದೇ ರೀತಿ ಉನ್ನತ ರಾಷ್ಟ್ರದ ವಿಜ್ಞಾನ ಮತ್ತು ಐಶ್ವರ್ಯವು ಯಾತನೆ ಮತ್ತು ಆನಂದ, ಜೀವನದಲ್ಲಿಯ ಎಲ್ಲ ಒದ್ದಾಟ, ಬಿಡಿಸಲಾಗದ ಸಾವಿನ ನಿಗೂಢತೆ ಮತ್ತು ದಾರುಣ ಭಯ, ಈ ಎಲ್ಲ ಅನುಭವಗಳಿಂದ ಮೂಡುವ ಯಾವ ಒಂದು ಸ್ಥಿರ ವಿಚಾರಗಳ ಶಾಖೆಯಿರುವುದೋ ಅದೇ ಈ ತತ್ವದ ಮೂಲವಾಗಿದೆ. ಈ ತತ್ವವನ್ನು ಸರಳ ಭಾಷೆಯಲ್ಲಿ ಹೇಳುವದಾದರೆ ಜನ್ಮ – ಮರಣದ ಒಗಟು. ಇದರಿಂದ ಪಾರಾದವರು ಯಾರಾದರೂ ಇದ್ದಾರೆಯೇ? ಜಗತ್ತಿನ ಯಾವುದೇ ತತ್ವಜ್ಞಾನವನ್ನು ಪರೀಕ್ಷಿಸಿ ನೋಡಿ. ಸಚೇತನ ಮತ್ತು ಅಚೇತನ ಸೃಷ್ಟಿಯ ಉತ್ಪತ್ತಿಯ ಮತ್ತು ವಿನಾಶದ ಯಾವುದೇ ಹೊಚ್ಚ ಹೊಸ ಸಿದ್ಧಾಂತವನ್ನು ಪರೀಕ್ಷಿಸಿ ನೋಡಿ. ಅದರಲ್ಲಿ ಇದೊಂದೇ ತತ್ವ, ಜನ್ಮ ಮರಣದ ರಹಸ್ಯವನ್ನು ಪ್ರಮುಖವಾಗಿ ಪೋಣಿಸಲಾಗಿದೆ. ಆದಿವಾಸಿಗಳು ಈ ದೊಡ್ಡ ಪ್ರಶ್ನೆಯನ್ನು ಜಿಜ್ಞಾಸೆಯಿಂದ ಕಂಡಿದ್ದಾರೆ. ಶತಶತಮಾನಗಳಿಂದಲೂ ಸುತ್ತಲಿನ ಕಾಡು ಪರಿಸ್ಥಿತಿಯನ್ನು ನಿರೀಕ್ಷಣೆ ಮಾಡಿ, ಮನುಷ್ಯ ಜೀವನದ ಈ ಗೂಢವನ್ನು ತಮ್ಮ ಸರಳ, ಒರಟು ಭಾಷೆಯ ಜಾನಪದ ಗೀತೆಯಲ್ಲಿ ಕಥೆಗಳ ಅಮರ ಸೂತ್ರದಲ್ಲಿ ಪೋಣಿಸಿಯಿರಿಸಿದ್ದಾರೆ. ಸಾತಪುಡಾದ ಕಾಡುಮೇಡುಗಳಲ್ಲಿ

ಅಲೆದಾಡುವಾಗ ಆದಿವಾಸಿ ಜೀವನದ ಸ್ಥೂಲದರ್ಶನ ನನಗಾಯಿತು. ಅಲ್ಲಿಯ ವಿವಿಧ ಬಗೆಯ ಪದರುಗಳು ನನ್ನ ಮನವನ್ನು ಸೆಳೆದವು. ಅವರ ಜೀವನದ ಬಗೆಗಿನ ಕುತೂಹಲ, ಉನ್ಮಾದದಿಂದ ಜೀವನವನ್ನು ಅನುಭವಿಸುವ ತೀವ್ರ ಇಚ್ಛೆ ಮತ್ತು ಈ ಇಚ್ಛೆಯಿಂದ ಹುಟ್ಟಿಕೊಂಡ ಅವರ ಜನ್ಮ-ಮರಣದ ಬಗೆಗಿನ ತಾತ್ವಿಕ ವಿಚಾರಗಳ ಆಳವಾದ ಮುದ್ರೆ ನನ್ನ ಮನದ ಮೇಲೆ ಮೂಡಿತು. ಅದಕ್ಕೆ ನಾನಿಲ್ಲಿ ಶಬ್ದರೂಪ ಕೊಡುವ ಪ್ರಯತ್ನ ಮಾಡಿದ್ದೇನೆ.

ಕಾಡಿನ ರಾಜಾ : ಬುಡಕಟ್ಟು ಜನರ ತಾಯ್ನಾಡು ಎಂದರೇ ಕಾಡು. ಅದನ್ನು ಹೇಗೆ ಬಣ್ಣಿಸಲಿ? ಹರದಾರಿ ದೂರದವರೆಗೂ ಕಾಡು ಪರಸರಿಸಿದೆ. ಅಲ್ಲಿ ಇಲ್ಲಿ ಚಿಕ್ಕ ದೊಡ್ಡ ದಿನ್ನೆಗಳು ತಲೆಯೆತ್ತಿವೆ. ಅದರ ನುಣುಪು ಹಸಿರು ಕಪ್ಪು ಕಾಡಿನ ಗಾಂಭೀರ್ಯವನ್ನು ಮತ್ತಷ್ಟು ಬೆಳೆಸುತ್ತಿವೆ. ಅದರ ಸುತ್ತಮುತ್ತಲಿರುವ ವರ್ಷದಲ್ಲಿ ಎಂಟೂ ತಿಂಗಳು ಒಣಗಿರುವ ಹಳ್ಳಗಳು ಉದ್ದೋ ಉದ್ದ ಹಾವಿನ ಪರೆಯಂತೆ ಪಸರಿಸಿವೆ. ಪ್ರವಾಸಿಗರನ್ನು ಮೋಹಗೊಳಿಸಲು ಎಲ್ಲೋ ಒಂದೆರಡು ಹೊಂಡಗಳೂ, ಅಲೆಅಲೆಯಾಗಿ ಮಂದಹಾಸವನ್ನು ಬೀರಿ ಸ್ವಲ್ಪ ಸದ್ದೂ ಮಾಡುತ್ತವೆ. ಆಚೆ ಈಚೆಗೆ ಪಾಚಿಯ ಗಬ್ಬು, ಆದರೆ ಮನಕ್ಕೆ ತಂಪೆರೆವ ವಾಸನೆ ಬರುತ್ತದೆ. ಕಾಲ ಕೆಳಗಿನ ತರಗೆಲೆಯ ಕುರ್ರ್ ಕರ್ ಎಂದು ಸದ್ದು ಮಾಡುತ್ತವೆ. ಆಚೆ ಈಚೆ ಓತಿಕಾಟಗಳು ಸೂsssಸೂss ಎಂದು ಓಡುತ್ತಿವೆ. ಮಂಗಗಳು ಹಲ್ಲು ಕಿರಿಯುತ್ತ ರೆಂಬೆಗಳಿಗೆ ತೂಗುಬಿದ್ದಿವೆ. ಪರಚಿ ಮರಗಳಿಗೆ ಹೈರಾಣುಗೊಳಿಸುತ್ತಿವೆ. ಅಲ್ಲಲ್ಲಿ ಚಿಗರೆ ಮತ್ತು ಮೊಲಗಳು ವೇಗದಿಂದ ಓಡುವದು ಕಾಣುತ್ತದೆ. ಅಳಿಲುಗಳು ಮೋಜಿನಿಂದ ಓಲಾಡುತ್ತವೆ. ಕಾಡುಹಕ್ಕಿಗಳು ವಿಚಿತ್ರವಾಗಿ ಕೂಗು ಹಾಕುತ್ತವೆ. ಈ ಎಲ್ಲ ಜೀವಗಳೂ ತಮ್ಮ ತಮ್ಮ ಮಸ್ತಿಯಲ್ಲಿ ತನ್ಮಯಗೊಂಡಿವೆ. ಒಂದು ಮತ್ತೊಂದರ ಆಹಾರವಾಗುತ್ತಲೇ ಇದೆ. ಒಂದು ದೀರ್ಘವಾದ ಕಿರುಚುವಿಕೆ ಇಲ್ಲವೇ ಭಯಂಕರ ಒದ್ದಾಟ ಕ್ಷಣಕಾಲ ನಡೆಯುತ್ತದೆ. ಒಂದೆರಡು ಕ್ಷಣಗಳ ಬಳಿಕ ಏನೂ ನಡೆದೇ ಇಲ್ಲವೆಂಬಂತೆ ಜೀವನದ ಆಟ ಮುಂದುವರಿಯುತ್ತದೆ. ಮಧ್ಯಾಹ್ನ ಸೂರ್ಯ ನೆತ್ತಿಗೆ ಬಂದನೆಂದರೆ ಬಿಸಿಲಿನ ಕಿರಣಗಳು ದುಂಡಗೆ-ದುಂಡಗೆ, ಚಿಕ್ಕ-ದೊಡ್ಡ ಚುಕ್ಕೆಯಾಗಿ ಈ ವನಚರ ಪ್ರಾಣಿಗಳಂತೆ ಬೇರೆ ಬೇರೆಯಾಗಿ ಸಂಚರಿಸುವುದನ್ನು ಕಾಣುತ್ತೇವೆ. ಕ್ಷಣಕಾಲ ಒಂದು ಮತ್ತೊಂದರೊಳಗೆ ಮಿಲನವಾಗುತ್ತದೆ. ಮರಳಿ ಮತ್ತೆ ಒಂಟಿ ಒಂಟಿಯಾಗಿ ಬೇರೆಯಾಗುತ್ತದೆ. ಅದೂ ಸಹ ಜೀವನದ ಉನ್ಮಾದದಲ್ಲಿ. ಕಿರಣಗಳು ಕಾಡಿನ ಮೇಲೆ ಒಂದೇ ಸೂರ್ಯನ ಬೆಳಕಿನಲ್ಲಿ ಕೂಡಿಕೊಂಡಂತೆ ತೀರ ಯಥಾವತ್ತಾಗಿ, ಕಾಡಿನ ಜೀವಗಳು ಜನ್ಮ-ಮರಣದ ಅನಾದಿ-ಅನಂತ ಸೂತ್ರದಿಂದಲೇ ಬಂಧಿಸಲ್ಪಟ್ಟಿವೆ. ಪ್ರತಿಯೊಂದು ಜೀವಜಂತುವಿನ ಜೀವನವು ಅದೆಷ್ಟೇ ಕ್ಷುದ್ರವಾಗಿರಲಿ ಭೂಮಿಯ ಪೃಷ್ಠಭಾಗ ಮಾತ್ರ ಸ್ವತಂತ್ರವಾಗೇ ಇರುತ್ತದೆ.

ಇದಾಯಿತು ಕಾಡಿನ ಮೋಡಿ ಹಾಕುವ ಚಿತ್ರ. ಆದರೆ ಕಾಡಿನ ಭಯ ಸಹ ಎದೆ ನಡುಗಿಸುವ ಭಯಾನಕವಾಗಿರುತ್ತದೆ. ಚೊಕ್ಕ ಹಗಲಿನಲ್ಲಿಯೂ ಪೊದೆ ಕಂಟಿಗಳಲ್ಲಿ ನರಿ-ತೋಳಗಳ, ಚಿರತೆಗಳ ಭಯವಿರುತ್ತದೆ. ಕೆಲವು ನೀರಿರುವ ಜಾರುವ ಜಾಗದಲ್ಲಿ ಹುಲಿಗಳ ಮಲದ ದುರ್ಗಂಧವು ಸದಾ ತುಂಬಿಕೊಂಡಿರುತ್ತದೆ. ಆ ಕೆಟ್ಟ ವಾಸನೆಗಿಂತ ಅಲ್ಲಿರುವ ಹಿಂಸ್ರ ಪ್ರಾಣಿಗಳ ಅಸ್ತಿತ್ವದ ಯೋಚನೆಯಿಂದಲೇ ಮೈ ನಡುಗುತ್ತದೆ. ಸಾಯಂಕಾಲವಂತೂ ಎಲ್ಲೆಡೆ ಕತ್ತಲೆಯಂತೂ ಇದ್ದೇ ಇರುತ್ತದೆ. ಈ ಕತ್ತಲೆಯಲ್ಲೂ ಮಸಕಾದ ಬಿಳಿಯ ಕತ್ತಲೆ, ಮೆಲ್ಲಗೆ ಗಾಢವಾಗುತ್ತಿರುವ ಹಸಿರು-ಕಂದು ಕತ್ತಲೆ - ಹೀಗೆ ಎಷ್ಟೋ ಬಗೆಯಿರುತ್ತದೆ. ಯಾವ ವಸ್ತು ಸಹ ಗೋಚರಿಸುವದಿಲ್ಲ. ಮಿಣುಕು ಹುಳದ ಬೆಳಕಂತೂ ವಂಚನೆಯದ್ದು, ಆದರೆ ಮರದ ರೆಂಬೆ ಅಲುಗಿದರೆ ಸಾಕು, ಅಥವಾ ಬಾವಲಿಗಳು ಅಥವಾ ಗೂಬೆಗಳು ರೆಕ್ಕೆ ಫಡಫಡಿಸುತ್ತ ಹೋದರೆ ಸಾಕು, ಕೂಡಲೇ ಕತ್ತಲೆಯ ವಿನ್ಯಾಸ ಬದಲಾಗುತ್ತದೆ. ಭೀತಿಯಿಂದ ಎದೆ ಡವ ಡವ್ ಎನ್ನುತ್ತದೆ. ಅಂಥದರಲ್ಲಿ ರಾತ್ರಿ ಕೀಟಗಳ ಕಿರ್ರ್‌ss ಎಂಬ ಸದ್ದು, ನರಿಗಳ ಓಟದ ಕಾಲಸದ್ದು, ವಿಕಾರವಾಗಿ ಊಳಿಡುವದು. ಭೂತಗಳೇ ಆಗುತ್ತಿರುವಂತೆ ಭಾಸವಾಗುತ್ತದೆ. ಅದೂ ಅಲ್ಲದೆ ದೂರದಿಂದ ಕೇಳಿಬರುವ ಹುಲಿಯ ಗರ್ಜನೆಯಂತೂ ನಿದ್ದೆಯೇ ಹಾರಿ ಹೋಗುವಂತೆ ಮಾಡುತ್ತದೆ. ಹಾವುಗಳ ಸರಸರ ಓಟ ಸಹ ಅಷ್ಟೇ ಭೀತಿದಾಯಕವಾಗಿರುತ್ತದೆ. ಇಂಥ ಅರಣ್ಯದಲ್ಲಿ ರಾತ್ರಿಯ ಸಮಯದಲ್ಲಿ ಡಾಕಿನಿ-ಶಾಕಿನಿಯರು ವಸತಿ ಮಾಡುತ್ತಾರೆಂಬ ಭಾವನೆಯನ್ನು ಇಂಥ ವಾತಾವರಣದಲ್ಲಿರುವ ಜನರ ಮನದಿಂದ ಹೇಗೆ ದೂರ ಮಾಡುವದು ಸಾಧ್ಯ?

ಕಾಡಿನ ಈ ಎರಡೂ ದರ್ಶನದಿಂದ ಬುಡಕಟ್ಟು ಜನರ ಮನದ ಮೇಲೆ ಎಂಥ ಆಳವಾದ ಪರಿಣಾಮ ಬೀರಿದೆ ಎಂದರೆ, ಆ ವಾತಾವರಣ ಮತ್ತು ಆ ಯೋಚನೆಯು ತೀರ ಅವಿಭಕ್ತವಾಗಿವೆ. ಅಲ್ಲಲ್ಲಿ ಏಕರೂಪವೇ ಆಗಿದೆ. ಕಾಡಿನ ಈ ಚರಾಚರ ಸೃಷ್ಟಿಯನ್ನು ಉಪಭೋಗಿಸುವವನು, ಒಂದು ರೀತಿಯಲ್ಲಿ ಧಣಿಯೇ! ಎನ್ನಿ. ಮನುಷ್ಯನೇ ಆಗಿದ್ದಾನೆ ಎಂಬ ಭಾವನೆಯು ಆದಿವಾಸಿಗಳ ಮನದಲ್ಲಿ ಆಳವಾಗಿ ಬೇರೂರಿದೆ. ಹೀಗಾಗಿಯೇ ಮೇಲೆ ಹೇಳಿದ ಎಲ್ಲ ಬಗೆಯ ಸಂಕಟವನ್ನು ಅವನು ನಸುನಗುತ್ತ ಸ್ವೀಕರಿಸುತ್ತಾನೆ. ಸತ್ತರೂ ಬದುಕುಳಿದಿರುತ್ತಾನೆ. ಪರಂಪರಾಗತವಾಗಿ ತನ್ನ ಕಾಡಿನ ಮೇಲಿನ ಆಧಿಪತ್ಯವನ್ನು ಸಾಬೀತು ಮಾಡುತ್ತಾನೆ.

ಠಾಣೆ ಜಿಲ್ಲೆಯ ಅಂಬಿಗರು (ಸೋನ ಅಂಬಿಗರಲ್ಲ) ಗಂಡಸರು ಸತ್ತರೆ ಅವನ ಕಿವಿಯಲ್ಲಿ ಒಬ್ಬೊಬ್ಬರಾಗಿ ಒಂದು ಮಂತ್ರವನ್ನು ಉಸುರುತ್ತಾರೆ. 'ಅಂಬಿಗರಲಿ ಜನಿಸಿದರೆ ಕಾಡಿನ ರಾಜನಾಗುವಿ/ಬ್ರಾಹ್ಮಣರೊಳು ಜನಿಸಿದರೆ ವಿಲಿವಿಲಿ ಒದ್ದಾಡಿ ಸಾಯುವಿ' / ಇದಕ್ಕಿಂತ ಮಾರ್ಮಿಕವಾದ ಕಾಡಿನ ಸಂಸ್ಕೃತಿಯ ಸಂದೇಶ ಬೇರೊಂದಿದೆಯೇ?

ಕಾಡಿನ ಕಾನೂನು : ಕಾಡಿನ ಈ ಅಮಾಯಕರ ಮನಸ್ಸು ಹೀಗೆ ದಿಟ್ಟವಾಗಿರಲು ಬೇರೊಂದು ಕಾರಣವಿದೆ. ಸದಾಕಾಲ ನಿಸರ್ಗದ ನೆರಳಲ್ಲಿರುವ ಈ ಜನರು ನಿಸರ್ಗದ ಒಂದು ಅಬಾಧಿತ ನಿಯಮವನ್ನು ನಿರಂತರವಾಗಿ ನೋಡುತ್ತಿರುತ್ತಾರೆ. ಈ ವಿಷಯದ ಕುರಿತು ಹಿರಿ–ಕಿರಿಯರಲ್ಲಿ, ಸ್ತ್ರೀ–ಪುರುಷರಲ್ಲಿ ಸತತ ಚರ್ಚೆಯೂ ನಡೆದಿರುತ್ತದೆ. ಸಾತಪುಡಾದ ಕಾಡು ಘನಘೋರವಾದುದು. ಸಾಗವಾನಿ, ಹೊನ್ನೆಯಂತಹ ಎತ್ತರೆತ್ತರ ಮರಗಳಿಂದ ತುಂಬಿಕೊಂಡಿದೆ. ಈ ಮರಗಳ ಶಿಖರದ ಮೇಲೆ ಗೋಂಡ, ಕೊರಕು ಜನರ ದೇವರ ಕಾಡು ದೊಡ್ಡ ದೇವರ, ನಾರಾಯಣ ದೇವರ ವಸತಿ ಇದೆ. ಆಗಾಗ ಬೆಟ್ಟದ ನೆತ್ತಿಯಿಂದ ಎಲ್ಲ ಬಗೆಯ ರೂಪವನ್ನು ಧಾರಣ ಮಾಡಿ ದೇವರು ತನ್ನ ತಂಡದ ಪುರುಷರಿಗೆ ನಾನಾ ಬಗೆಯ ಸಂದೇಶವನ್ನು ನೀಡುತ್ತಾನೆ. ಕೆಲವೊಮ್ಮೆ ಅದು ಬೆದರಿಕೆ ಹಾಕುತ್ತದೆ. ಕೆಲವೊಮ್ಮೆ ಪ್ರತಿಪಕ್ಷದವರನ್ನು ತಣ್ಣಗೆಗೊಳಿಸುವ ಭರವಸೆಯನ್ನೂ ನೀಡುತ್ತವೆ. ಹಾಗಾದರೆ ಈ ದೇವರು ನಿಜವಾಗಿಯೂ ಯಾರು? ಗೋಂಡ ಮುಂತಾದ ಜನರ ದೈವಗಳ ಸಮಗ್ರ ಇತಿಹಾಸವನ್ನು ಅರಿಯುವಾಗ ನನ್ನ ಗ್ರಹಿಕೆಗೆ ಬಂದದ್ದೇನೆಂದರೆ ಈ ದೇವರು ಬೇರೆ ಯಾರೂ ಅಲ್ಲ, ನೂರಾರು ವರ್ಷಗಳ ಹಿಂದೆ ರಣಾಂಗಣದಲ್ಲಿ ಅಥವಾ ಅಪಘಾತದಲ್ಲಿ ಆಕಸ್ಮಿಕವಾಗಿ ತೀರಿಕೊಂಡ ಈ ಜನರ ಕುಟುಂಬ ಮತ್ತು ಪೂರ್ವಜರು ಗಂಡಸರು ಆಗಿದ್ದಾರೆ. ಅಂದರೆ ಮೃತರ ಪೂಜೆಗೆ ಯಾವ ಧರ್ಮದಲ್ಲಿ ಅಗ್ರಸ್ಥಾನ ಸಿಗುತ್ತದೆಯೋ, ಆ ಸಂಸ್ಕೃತಿಯಲ್ಲಿ ಅದು ಯಾವ ಸ್ತರದ ಸಂಸ್ಕೃತಿಯಾಗಿದ್ದರೂ ಸರಿ ಜನ್ಮ ಮರಣದ ತತ್ವಜ್ಞಾನಕ್ಕೆ ಅವಾಸ್ತವ ಮಹತ್ವ ಭಂದೇ ಬರುತ್ತದೆ ಎಂದು ಭಾವಿಸಬೇಕು.

ಯಾವ ಮರದ ಆಸರೆಯಲ್ಲಿ ಈ ದೇವರು ವಾಸಿಸುವನೋ ಇಲ್ಲವೇ ಗೋಂಡರ ಮತದಂತೆ ದೇವರ ಆವಾಹನೆಯಾಗಿದ್ದರಿಂದಲೇ ಈ ಮರ ಬೃಹದಾಕಾರದಲ್ಲಿ ಬೆಳೆಯುತ್ತದೆ ಮತ್ತು ಸುತ್ತಲಿನ ವೃಕ್ಷಸೃಷ್ಟಿಯ ಮೇಲೆ ಅಖಂಡ ಪ್ರಭುತ್ವವನ್ನು ಚಲಾಯಿಸುತ್ತವೆ. ಆ ಮರಗಳ ಜೀವನಗಾಥೆಯೂ ಆದಿವಾಸಿಗಳ ತತ್ವಜ್ಞಾನದೊಂದಿಗೆ ಸಂಪೂರ್ಣ ಮೇಳೈಸಿದೆ. ನಿಸರ್ಗದ ಬೆನ್ನೇ ಆಗಿರುವಂತೆ ಅನಿಸುತ್ತದೆ! ಈ ಬೋಧನೆಗೆ ಸಾಗವಾನಿ, ಹೊನ್ನೆ, ದೇವದಾರ ಮುಂತಾದ ಹೆಮ್ಮರಗಳ ಪರಂಪರೆಯಿದೆ. ಕೆಲವೆಡೆ ಈ ಮರಗಳು ಜೋಡಿಯಾಗಿರುವುದನ್ನು ಕಾಣಬಹುದು. ಉದಾಹರಣೆಗಾಗಿ ಒಂದೆಡೆ ಐನ್ ಮರದ ಲವಲೇಶವೂ ಇರುವುದಿಲ್ಲ. ಇಂಥ ಎಡೆಗಳಲ್ಲಿ ಮೊದಲಿಗೆ ಇದಕ್ಕಿಂತ ಕಡಿಮೆ ಸುಂದರವಾಗಿರುವ, ಕಡಿಮೆ ಎತ್ತರವಾಗಿರುವ ಸಾಗವಾನಿಯ ಮರ ಅಥವಾ ಕಾಡೇ ಬೆಳೆದಿರುತ್ತದೆ. ಮುಂದೆ ಹೇಗೋ ಏನೋ ಇನ್ನೂ ಬೆಳವಣಿಗೆ ಪೂರ್ಣವಾಗದ ಸಾಗವಾನಿಯ ಗಿಡದ ಬುಡದಲ್ಲಿ ಅಂಟಿಕೊಂಡೇ ಐನ್‌ದ ಒಂಟಿ ಸಸಿಯು ತಲೆ ಎತ್ತುತ್ತದೆ. ಈ

ನಾಜೂಕು ಸಸಿಗೆ ಗಾಳಿ ಬಿಸಿಲು ಮಳೆಯನ್ನು ಹೆಚ್ಚು ಸಹಿಸುವ ಶಕ್ತಿಯಿರುವುದಿಲ್ಲ. ಸಾಗವಾನಿಯ ಅಗಲವಾದ ಎಲೆಯು ಅದಕ್ಕೆ ನೆರಳು ನೀಡುತ್ತದೆ. ಕಾವು ನೀಡುತ್ತದೆ. ಬೇರುಗಳು ನೀರನ್ನು ತಡೆದು ಹಿರಿಕೊಂಡು ಅದಕ್ಕೂ ಅಲ್ಪ ಸ್ವಲ್ಪ ನೀಡುತ್ತವೆ. ಆ ಸಸಿಯು ಒಂದೆರಡು ವರ್ಷದೊಳಗೆ ವೇಗವಾಗಿ ಬೆಳೆಯಲಾರಂಭಿಸುತ್ತದೆ. ಸಾಗವಾನಿ ಗಿಡವೂ ಬೆಳೆಯಬೇಕಲ್ಲ. ಆದರೆ ಇತರ ಗಿಡದಂತೆ ಅದರ ಬೆಳವಣಿಗೆ ಆಗುವುದಿಲ್ಲ. ಐನ್ ಗಿಡ ಬೆಳೆಯುತ್ತಿದ್ದಂತೆ ಸಾಗವಾನಿಯು ಕುಂಠಿತಗೊಳ್ಳುತ್ತದೆ. ಯಾವ ಕ್ಷಣಕ್ಕೆ ಐನ್ ಗಿಡಕ್ಕೆ ಏಕಾಕಿಯಾಗಿ ಜೀವಿಸುವಷ್ಟು ಶಕ್ತಿ ಬರುತ್ತದೆಯೋ ಆಗ ಅದನ್ನು ಪೋಷಿಸುವ ದಾಯಿಯು ಸೊರಗತೊಡಗುತ್ತದೆ. ಮತ್ತು ಐನ್ ಪೊಗದಸ್ತಾಗಿ ಬೆಳೆಯುವ ಕಾಲ ಶುರುವಾಗುತ್ತದೆ. ಕೆಲ ಕಾಲದ ಬಳಿಕ ಐನ್‌ದ ಬೀಜಗಳು ಕೊಬ್ಬಿ ಸಂಪೂರ್ಣ ಕಾಡಿನ ತುಂಬೆಲ್ಲ ಐನ್ ಹರಡಲು ಆರಂಭಿಸುತ್ತದೆ. ಜೀವನ್ಮರಣದ ರೂಪಕವೇ ವೃಕ್ಷಸೃಷ್ಟಿಯ ಪ್ರತ್ಯಕ್ಷ ಜೀವನವಾಗಿ ಆದಿವಾಸಿಗಳ ಮನದ ಮೇಲೆ ಎಂಥ ಪರಿಣಾಮ ಬೀರುತ್ತದೆಂದು ಬೇರೆ ಹೇಳಬೇಕೆ? ತಾಯಿಯಂತೆ ದಾಯಿಯ ಪಾತ್ರವೂ ಪರಿಶುದ್ಧ ಪ್ರೇಮ ಮತ್ತು ತ್ಯಾಗದ್ದಾಗಿದೆ ಎಂದು ಆದಿವಾಸಿಗಳಿಗೆ ಹೇಳಬೇಕಾಗಿಲ್ಲ. ಅವರ ಸಮಾಜದಲ್ಲಿ ಸಂಬಂಧಿಕರ ತಬ್ಬಲಿ ಮಕ್ಕಳನ್ನು ಸಾಕುವದು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಲಾಗುತ್ತದೆ. ಜಾತಿವಂತ ಆದಿವಾಸಿಗಳಿಗೆ ಅನಾಥಾಲಯದ ಕಲ್ಪನೆಯು ಹಾಸ್ಯಾಸ್ಪದವೆನಿಸುತ್ತದೆ. ಇದು ಸಾಹೇಬ ಜನರ ಕಲ್ಪನೆ ಎಂದವರು ಹೇಳುತ್ತಾರೆ. ಮೇಲಿನ ಮರದ ಕಕ್ಷೆಯಲ್ಲಿರುವ ವೇದಾಂತವು ಕೇವಲ ಕರುಣೆಯಿಂದ ತುಂಬಿಕೊಂಡಿದೆ ಎಂದೇನಲ್ಲ. ಅದರಲ್ಲಿ ವಿಚಿತ್ರವಾದ ಕಠೋರತನವೂ ಇದೆ. ಅಂದರೆ ಅತ್ಯಂತ ಭಾವನಾವಿವಶ ಮತ್ತು ಅಷ್ಟೇ ನಿರ್ಲಕ್ಷಿತ ಈ ಎರಡೂ ವೃತ್ತಿಗಳು ಆದಿವಾಸಿಗಳ ಜೀವನದಲ್ಲಿ ಸಂಪೂರ್ಣ ಹೂತು ಕೂತಿರುವದು ಅವರ ಮೂಲ ಮೇಲಿನ ಸಿದ್ಧಾಂತದಲ್ಲೇ ಲಭಿಸುತ್ತದೆ.

ಪಾರ್ವತಿಯ ಉಪೇಕ್ಷಿತ ಮಕ್ಕಳು : ಸತ್ತ ಪೂರ್ವಜರ ಎಲ್ಲ ಕಾರ್ಯವನ್ನು ಪುರುಷರೇ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ, ಸಾವು ಬಂದಾಗಲೂ ಸಕಲ ಕಾರ್ಯವನ್ನು ಪುರುಷರೇ ಮಾಡುತ್ತಾರೆ. ಹೆಣ್ಣಿನ ರಜೋದರ್ಶನವು ಭಯಾವಹವೂ, ಅಪವಿತ್ರವೂ ಆಗಿದೆ. ಆ ಕಾರಣದಿಂದಲೇ ಅವಳಿಗೆ ವ್ಯವಹಾರದಲ್ಲಿ ಗೌಣತ್ವ ಪ್ರಾಪ್ತವಾಗಿದೆ ಎನ್ನುವದು ಆದಿವಾಸಿಗಳ ಭಾವನೆಯಾಗಿದೆ. ಈ ಕಾರಣಕ್ಕಾಗಿ ಎಲ್ಲ ದೊಡ್ಡ ದೇವಕಾರ್ಯವನ್ನು ಒಂಟಿ ಪುರುಷನೇ ಮಾಡುತ್ತಾನೆ. ಜೀವನದ ಅತ್ಯುಚ್ಚ ತತ್ವ ಪುರುಷರೂಪವೇ ಆಗಿದೆ ಎಂದು ಆದಿವಾಸಿಗಳು ದೃಢವಾಗಿ ನಂಬಿದ್ದಾರೆ. ಅವರ ಕಥೆಗಾಥೆಗಳಲ್ಲಿ ಶಿವನಿಗೆ ತುಂಬ ಮಹತ್ವವಿದೆ. ಪಾರ್ವತಿಯು ಸ್ತ್ರೀ ಸುಲಭ ಜಿಜ್ಞಾಸೆಗೆ ಬಲಿಬಿದ್ದು ಶಿವನ ಆಜ್ಞೆಯನ್ನು ಭಂಗ ಮಾಡಿದಳು.

ಮಹಾದೇವನು ಕೆಲಸದ ನಿಮಿತ್ತ ಹೊರಗೆ ಹೋದಾಗ 'ಶಿವನ ಹೊರತು ಪಾರ್ವತಿ ಕಾಲಕಳೆಯುವದು ಸಾಧ್ಯವಿಲ್ಲ' ಎಂದು ಪಾರ್ವತಿ ಅವನಿಗೆ ಹೇಳಿದಳು. ಆಗ ಅವಳ ಮನಸಿಗೆ ಮುದ ನೀಡಲೆಂದು ಶಿವನು ಒಂದು ದೊಡ್ಡ ತೋಟದ ಬಾಗಿಲು ತೆರೆದನು. ಒಳಗೆ ಹೂವು ಹಣ್ಣುಗಳಿಂದ ತುಂಬಿದ ಏಳು ತೋಟಗಳಿದ್ದವು. 'ಇಲ್ಲಿಯ ಆರೂ ತೋಟದಲ್ಲಿ ನೀನು ಸುತ್ತಾಡು. ಹಣ್ಣು ಹಂಪಲ ತಿನ್ನು. ಆದರೆ ಏಳನೆಯ ತೋಟದ ಬಾಗಿಲು ತೆರೆಯಬೇಡ. ಪಶ್ಚಾತ್ತಾಪಪಡಬೇಕಾದೀತು !' ಎಂದು ಹೇಳಿ ಶಿವನು ಹೊರಟುಹೋದ. ಪಾರ್ವತಿ ತೋಟದೊಳಗೆ ಹೋದಳು. ಆ ರಮ್ಯ ತಾಣದಲ್ಲಿ ತಿಂಗಳು ತಿಂಗಳು ಕಳೆದಳು. ಆದರೆ ಏಳನೇ ತೋಟಕ್ಕೆ ಹೊಗದೆ ಇರುವುದು ಅವಳಿಗೆ ಸಾಧ್ಯವಾಗಲಿಲ್ಲ. ಅಲ್ಲಿ ಏನಿರಬಹುದು? ಎಂಬ ಜಿಜ್ಞಾಸೆ ಮತ್ತು ಭೀತಿಯಿಂದ ಅವಳು ಬಾಗಿಲು ತೆರೆದಳು. ಒಳಗೆ ಕೆಂಪು ತುರಾಯಿ ಬಂದ ತರಕಾರಿಯ ಸುಂದರವಾದ ತೋಟವಿತ್ತು. ಪಾರ್ವತಿಗೆ ಸಂತೋಷವಾಯಿತು. ಒಳಗೆ ಹೋದಳು. ತರಕಾರಿಯ ಅಂಕುರವನ್ನು ನೇವರಿಸಿದಳು. ಕಿತ್ತಳು. ಆ ಎಲೆಯನ್ನು ತಿನ್ನಲಾರಂಭಿಸಿದಳು. ತುರಾಯಿಯನ್ನು ತಲೆಗೂದಲಿಗೆ ಸಿಕ್ಕಿಸಿಕೊಂಡಳು. ಸೊಂಟಕ್ಕೆ ಕಟ್ಟಿಕೊಂಡಳು. ಕಾಲಿಗೆ ಕಾಲುಬಳೆಯಂತ ತೊಟ್ಟುಕೊಂಡಳು. ಪಾರ್ವತಿಯ ನರನಾಡಿಗಳಲ್ಲಿ ನವ ಯೌವ್ವನ ಹರಿಯಲಾರಂಭಿಸಿತು. ಅವಳ ದೇಹಕಾಂತಿ ಅರಳಲಾರಂಭಿಸಿತು. ದೇಹ ಪುಷ್ಪಗೊಂಡಿತು. ಸ್ವಭಾವ ಉತ್ತೇಜಿತಗೊಂಡಿತು. ಮನಸು ಪ್ರಫುಲ್ಲಿತಗೊಂಡಿತು. 'ನಿಜಕ್ಕೂ, ಶಿವ ಇಲ್ಲಿ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು !' ಪಾರ್ವತಿಯ ಮನದೊಳಗೆ ಈ ಯೋಚನೆ ಮೂಡಿದ್ದೇ ತಡ ಎಲ್ಲ ಕಳೆ ಬದಲಾಯಿತು. ಸುತ್ತಲಿನ ತರಕಾರಿಗಳು ಬೆಳೆದು ದೊಡ್ಡದಾಗಿ ಅವು ಅಕರಾಳ-ವಿಕರಾಳ ರೂಪ ಧರಿಸಿದವು. ಪಾರ್ವತಿ ಭಯಚಕಿತೆಯಾದಳು. ಕಂಪಿಸಲಾರಂಭಿಸಿದಳು. ಇಡೀ ದೇಹ ಯಾತನೆಯಿಂದ ಕಂಗಾಲಾಯಿತು. ಪಾರ್ವತಿಯ ಉದರದಿಂದ ರಕ್ತದ ಹೊಳೆ ಹರಿಯಲಾರಂಭಿಸಿತು. ಪಾರ್ವತಿ ಕಿರುಚಿದಳು, ಹೆದರಿ ಪ್ರಜ್ಞೆ ತಪ್ಪಿದಳು. ಜಗನ್ಮಾತೆಯ ಆ ಕೂಗು ಆಗಸವನ್ನು ಭೇದಿಸಿತು. ಶಿವನಿಗೆ ಗೊತ್ತಾಯಿತು. ಅವನು ಉದಾಸದಿಂದ ನಕ್ಕನು. ಅವಸರದಿಂದ ಧಾವಿಸಿ ಬಂದ. ಅವನು ತನ್ನ ಮಂತ್ರ ಸಾಮರ್ಥ್ಯದಿಂದ ಆ ರಕ್ತವರ್ಣ ಮರಗಳನ್ನು ಮಾಯ ಮಾಡಿದ. ಪಾರ್ವತಿಯ ವೇದನೆ ನಿಂತಿತು. ಅವಳು ಎಚ್ಚರಗೊಂಡಳು, ಅಳಲಾರಂಭಿಸಿದಳು. ಶಿವನು ಗಂಭೀರವಾಗಿ ಹೇಳಿದನು. 'ಪಾರ್ವತಿ, ನಾನು ಬೇಡೆಂದರೂ ನೀನಾಗಿಯೇ ಈ ಸಂಕಟವನ್ನು ನಿನ್ನ ಮೇಲೂ, ಸಂಪೂರ್ಣ ಸ್ತ್ರೀ ಜಾತಿಯ ಮೇಲೂ ಎಳೆದುಕೊಂಡಿದಿಯೆ. ಪ್ರತಿ ತಿಂಗಳು, ಪ್ರತಿ ಗರ್ಭಧಾರಣೆಗೂ ಪ್ರಸೂತಿಗೂ ಹೆಣ್ಣಾದವಳು ಈ ದುಃಖವನ್ನು ಅನುಭವಿಸಬೇಕಾಗುವದು. ವೇದನೆಯಿಲ್ಲದೆ ಈ ಯಾವ ಪ್ರಾಣಿಯು ಜನಿಸಲಾರದು!'

ಪಾರ್ವತಿ ಮೌನವಾಗಿ ಆಲಿಸುತ್ತಿದ್ದಳು. ಅಂದಿನಿಂದ ನಾರೀಜಾತಿಯು ಜೀವನದೊಂದಿಗೆ ಸಾವಿನ ಹೋರಾಟ ನಡೆಸಿಯೇ ಬದುಕಬೇಕಾಗಿ ಬಂತು. ಮಾತೃತ್ವದ ಹೊರತು ಜೀವನ ಸಫಲವಾಗದು. ಕಷ್ಟವಿಲ್ಲದೆ ಮಾತೃತ್ವವಿಲ್ಲ. ಈ ಶಾಪವು ಇಷ್ಟಕ್ಕೇ ನಿಲ್ಲಲಿಲ್ಲ. ಅಂದಿನಿಂದ ಪಾರ್ವತಿಯು ಮನವು ದುರ್ಬಲಗೊಂಡಿತು. ಮಾತೃತ್ವದ ಯಾತನೆಯು ಎಷ್ಟು ಅಸಹನೀಯವಾಯಿತೆಂದರೆ ಅವಳು ಅಸಂಖ್ಯ ಮಕ್ಕಳಿಗೆ ಜನ್ಮ ನೀಡಿದಳು. ಅದರಲ್ಲಿ ಅವಳು ಬಿಳಿಯ ಮಕ್ಕಳನ್ನು ಮಾತ್ರ ಪ್ರೀತಿಸುತ್ತಿದ್ದಳು. ಆ ಮಕ್ಕಳೆಂದರೆ ಹಿಂದೂ, ಕಪ್ಪು ಕುರೂಪಿ ಮಕ್ಕಳನ್ನು ದೂರ ಸರಿಸಿದಳು. ಅವರೇ ದೋಂಡ ಮುಂತಾದ ಆದಿವಾಸಿಗಳು. ಇಂದಿಗೂ ಪಾರ್ವತಿಯ ಆ ಉಪೇಕ್ಷಿತ ಮಕ್ಕಳು ಕಾಡಿನಲ್ಲೇ ಮೈ ಮುರಿದು ದುಡಿಯುತ್ತ ಅರೆ ಹೊಟ್ಟೆಯಲ್ಲೇ ದಿನ ಕಳೆಯುತ್ತಿದ್ದಾರೆ. ಕೇವಲ ಶಿವನ ವರದಾನವೆಂದೇ ಗೋಂಡ ಜನರು ಹೆಸರಿಗೆ ಹಾಜರಾದರು.

ಧರಣಿ ಮಾತೆ : ನಮ್ಮಂತೆ ಆದಿವಾಸಿಗಳೂ ಸಹ ನಿಸರ್ಗದ ಪ್ರಾಣರೂಪ ಶಕ್ತಿಯನ್ನು ಪುರುಷ ಸ್ವರೂಪದಲ್ಲಿದೆ ಎಂದೇ ಭಾವಿಸುತ್ತಾರೆ. ಅದೇ ರೀತಿ ಜಡಸ್ವರೂಪವನ್ನು ಹೆಣ್ಣಿನಲ್ಲಿದೆ ಎಂದೇ ಅಂದುಕೊಂಡಿದ್ದಾರೆ. ಈ ಸ್ತ್ರೀ ರೂಪಿ ಶಕ್ತಿಯು ಶಿವನ ಪ್ರೇರಣೆಯಿಂದ ಪಾರ್ವತಿಯ ಮೂಲಕ ಉತ್ಪನ್ನಗೊಂಡು ಧರಣಿಮಾತೆಯ ರೂಪದಲ್ಲಿ ಸ್ಥಿರ ಮತ್ತು ಶಾಶ್ವತಗೊಂಡಿತು. ಮಣ್ಣಿನ ರೂಪದ ಪ್ರಾಣಿಗಳ ಕಾಯಾ, ಧರಣಿಯ ವಿಶಾಲ ಅನಾದಿ ಅಂತ ಮಣ್ಣಿನಲ್ಲಿ ವಿಲೀನವಾಗುತ್ತದೆ. ಧರಣಿಯು ವೃಕ್ಷವನಸ್ಪತಿಗಳ ಚಿಕ್ಕ ದೊಡ್ಡ ಜೀವಜಂತುಗಳ ಮಾತೆಯಾಗಿದ್ದಾಳೆ. ಆಗಾಗ ಭೂಕಂಪನದ ಪ್ರಸವ ವೇದನೆಯ ಆಘಾತ ತಿನ್ನುತ್ತ, ಧರಣಿಯು ಅಖಂಡವಾಗಿ ಹೊಸ ಜೀವನಕ್ಕೆ ಜನ್ಮ ನೀಡುತ್ತ ಇರುತ್ತದೆ. ಎಲ್ಲರ ಬಗೆಗೂ ಸಮಾನ ಮಾಯೆಯಿರಿಸಿ, ಕಠೋರ ನ್ಯಾಯ ಬುದ್ಧಿಯಿಂದ ಅವಳು ತನ್ನ ಸಂತಾನವನ್ನು ಪೊರೆಯುತ್ತಾಳೆ. ಮಕ್ಕಳ ಭಾರವನ್ನು ಸಹಿಸುತ್ತಾಳೆ. ಆದರೆ ವಿನಾಕಾರಣ ಅತಿರೇಕದ ವರ್ತನೆಯನ್ನು ಅವಳು ಸಹಿಸುವದಿಲ್ಲ. ದೇವಧರ್ಮದ, ಮಾನವೀಯತೆಯ ನಿಯಮವನ್ನು ಮುರಿಯುವ ತುಂಟ ಹುಡುಗರ ಬೆನ್ನಿಗೆ ಅವಳು, ಸದಾಕಾಲ ಕತ್ತಲೆಯ ಕೋಣೆಯಲ್ಲಿ ಬಂಧಿಸಿಟ್ಟ ತನ್ನ ದುಷ್ಟಮಕ್ಕಳನ್ನು ರೋಗದ ರೂಪದಿಂದ ಬಿಡುತ್ತಾಳೆ. ಆ ಮಕ್ಕಳು ನೀರಿಗೆ ಹೋಗಿ ಅಲ್ಲಿಂದ ಉದರವನ್ನು ಸೇರುತ್ತದೆ. ಹಲವು ಬಗೆಯ ರೋಗರುಜಿನವನ್ನು ಅವು ನಿರ್ಮಾಣ ಮಾಡುತ್ತವೆ. ಮಾರೆವ್ವ ಈ ರೋಗಗಳ ಮುಖ್ಯ ದೇವಿ. ಅವಳು ಏನೇನು ಮಾಡುತ್ತಾಳೆ ಗೊತ್ತೆ? ಮಾರೆವ್ವ ತನ್ನ ತಾಂಡಾಗಳ ಜೊತೆಗೆ ಹೊರಟರೆ, ಆದಿವಾಸಿಗಳು ತ್ರಸ್ತರು, ಭಯಭೀತರೂ ಆಗಿರುತ್ತಾರೆ. ಆಕೆಗೆ ಹರಕೆ ಹೊರುತ್ತಾರೆ. ಎಲ್ಲಿ ಈ ರೋಗದಿಂದ ಸತ್ತ ಜನರನ್ನು ಹುಗಿಯಲಾಗಿದೆಯೋ ಅಲ್ಲಿ ಜೋಕಾಲಿ

ಕಟ್ಟುತ್ತಾರೆ. ಗೋಂಡರಂತೆ ಮಾರೆವ್ವನಿಗೂ ಜೋಕಾಲಿಯ ಆಟ ತುಂಬ ಪ್ರಿಯ. ಕೋಳಿ-ಹಂದಿಗಳ ಬಲಿತಿಂದು ಅವಳು ತುಂಬ ಸಂತುಷ್ಟಳಾಗುತ್ತಾಳೆ. ಆದಿವಾಸಿಗಳ ಮಸಣದಲ್ಲಿ ಇಂಥ ಕಟ್ಟಿಗೆಯ ಜೋಕಾಲಿಗಳು ಅಲ್ಲಲ್ಲಿ ಕಾಣಸಿಗುತ್ತವೆ. ಮಾರೆವ್ವನ ಸೇನೆಯ ಸೈನಿಕರ ಪರಿ ನಾನಾ ರೀತಿಯಲ್ಲಿದೆ. ಪುಟಗಳ ಮಿತಿಯಿಂದಾಗಿ ನಾನದನ್ನು ಹೇಳುವದು ಸಾಧ್ಯವಾಗುತ್ತಿಲ್ಲ.

ಕೇವಲ ಧರಣಿಯ ಕೋಪದಿಂದಷ್ಟೇ ಅಲ್ಲ. ಮಾಂತ್ರಿಕರ, ಅರ್ಚಕರ, ಮಾಟಗಾತಿಯರ ಜಾರಣ ಮರಣ, ವಶೀಕರಣ, ಮುಂತಾದ ಶಿವಪ್ರಣೀತ, ಆದರೂ ಅಘಾಸುರ, ಬಕಾಸುರ ದೈತ್ಯರು ಜೋಪಾಸನೆ ಮಾಡಿದ ಮಂತ್ರವಿದ್ಯೆಯಿಂದಾಗಿ ಧರಣಿಯ ಉಪಾಯ ನಡೆಯದೆ ಮಾರೆವ್ವ ಮತ್ತು ಅವಳ ಸೈನ್ಯವು ನಿರ್ದಿಷ್ಟ ಮನುಷ್ಯನನ್ನು ರೋಗಕ್ಕೀಡುಮಾಡುತ್ತದೆ. ಕೊಂದೂ ಹಾಕುತ್ತದೆ. ಸಾಮೂಹಿಕ ಸಾಂಕ್ರಾಮಿಕ ರೋಗ ಬಂದರೆ ಅದನ್ನು ಧರಣಿಯ ಕೋಪವೆಂದು ಭಾವಿಸಬೇಕು. ಇಲ್ಲದೆ ಹೋದರೆ, ಸಾವು ಮತ್ತು ರೋಗವೆಲ್ಲ ಮಂತ್ರವಿದ್ಯೆಯ ಚೇಷ್ಟೆಯಾಗಿದೆ. ಯಾವುದೇ ಸಾವು ಸಹಜವಾಗಿ ಸೃಷ್ಟಿಯ ನಿಯಮವೆಂದು ಬರುವದೇ ಇಲ್ಲ. ಬಂದರೂ ಪೂರ್ಣ ನೂರು ವರ್ಷಗಳು ಬರುತ್ತದೆ, ಇಲ್ಲದಿದ್ದರೆ ಇಲ್ಲ ಎಂಬ ದೃಢವಾದ ನಂಬಿಕೆಯೂ ಗೋಂಡ, ಕೊರಕು, ಬೈಗಾ, ಮಾರಿಯಾ, ಕುಮಾರ ಮುಂತಾದ ಜಾತಿಯಲ್ಲಿ ಸ್ವತಃ ನನಗಷ್ಟೇ ಕಂಡುಬಂದಿಲ್ಲ, ಸಂಪೂರ್ಣ ಭಾರತದಲ್ಲಿರುವ ವನ್ಯಜಾತಿಯು ಬಗೆಗಿನ ಸಾಹಿತ್ಯದಲ್ಲೆಲ್ಲ ಇದು ಸೂಚಿತಗೊಂಡಿರುವದು ನನ್ನ ಗಮನಕ್ಕೆ ಬಂದಿದೆ. ಹೈರಾಣುಗೊಳಿಸುವ ಪೈಶಾಚಿಕ ಶಕ್ತಿಗಳಲ್ಲಿ ಎಲ್ಲಕ್ಕಿಂತ ಕಡಿಮೆ ಜೀವ ತೆಗೆದುಕೊಳ್ಳುವ, ಮನದೊಳಗೆ ದಯೆ ಇರುವ ಶಕ್ತಿಯೆಂದರೆ ಮೋಹಿನಿ. ಈ ಕಾಮದೇವತೆಯು ಸ್ವಭಾವದಿಂದ ಬೇಟೆಯ ಬೆನ್ನು ಹತ್ತುವವಳಾಗಿದ್ದರೂ, ದಯಾಳು ಆಗಿದ್ದಾಳೆ. ಮೋಹಿನಿ ವಿದ್ಯೆಯ ಬಳಕೆಯನ್ನು ತನಗೆ ಬೇಕಾದ ಹೆಣ್ಣು ಇಲ್ಲವೇ ಪುರುಷನು ಬೇರೆಯವರಿಗೆ ಲಭಿಸಿದಾಗ ಅವಳು ಅಥವಾ ಅವನು ತನ್ನ ಬಳಿಗೆ ಮರಳಿ ಬರಬೇಕು ಮತ್ತು ಅವನ ಸಂಸಾರ ಹಾಳಾಗಲಿ ಎಂದು ಮಾಡಲಾಗುತ್ತದೆ. ಅವರು ಸಾವಿನಲ್ಲಿ ಪರ್ಯಾವಸಾನಗೊಳ್ಳುವುದು ತೀರ ವಿರಳ. ಉಳಿದ ಸಮಯದಲ್ಲಿ ಮಾತ್ರ, ತೀರ ಹಳೆಯ ಪರಂಪರೆಗೆ ಅಂಟಿಕೊಂಡ ಗೋಂಡ ಹಳ್ಳಿಗಳಿವೆಯೋ ಅಲ್ಲಿಯ ಜನರ ಮೇಲೆ ಸಾವಿನ ಪರಿಣಾಮ ಹೇಗೆ ಬೀರಬಲ್ಲದು ಎನ್ನುವುದು ಮುಂದಿನ ಸಂಗತಿಯಿಂದ ಗಮನಕ್ಕೆ ಬರಬಹುದು.

ದ್ರುಗ ಎನ್ನುವುದು ತೀರ ಹಿಂದುಳಿದ ಮತ್ತು ಅನಾಗರಿಕ ಜಿಲ್ಲೆಯಾಗಿದೆ. ಅಲ್ಲಿಯ ಒಂದು ಗೋಂಡ ಹಳ್ಳಿಯಲ್ಲಿ ಒಬ್ಬ ವ್ಯಕ್ತಿಯು ಎರಡು ಮೂರು ದಿನ ರೋಗದಿಂದ ಬಳಲಿ ಅಸುನೀಗಿದ. ಯಾರೋ ಮಾಟ ಮಾಡಿದ್ದರಿಂದ

ಹೀಗಾಯಿತು ಎಂದು ಜನರು ಅಂದುಕೊಂಡರು. ಆದರೆ ಖಚಿತವಾಗಿ ಮಾಡಿದ್ದು ಯಾರು? ಊರಲ್ಲಿರುವ ಅರ್ಚಕ ಈ ವಿಷಯದಲ್ಲಿ ನುರಿತ ವ್ಯಕ್ತಿ. ದೇವರಿಗೆ ಕೌಲು ಹಚ್ಚಿ ಅವನು ಅಪರಾಧಿಯನ್ನು ಕಂಡುಹಿಡಿದ. ಅವನೊಬ್ಬ ಹದಿನಾರರ ಹರೆಯದ ಪೋರನಾಗಿದ್ದ. ಹೆಣವನ್ನು ಎತ್ತಿತಂದು ಅವನ ಬಾಗಿಲಲ್ಲಿ ಇಡಲಾಯಿತು. ಇಡೀ ಊರು ಅವನ ಹೆಸರಿನಲ್ಲಿ ಬೊಬ್ಬೆ ಹಾಕಿ ಆಕ್ರೋಶವನ್ನು ವ್ಯಕ್ತ ಮಾಡಿತು. ಆ ಹುಡುಗ ಹೆದರಿ ಅಡಗಿ ಕುಳಿತ. ಅವನ ಮಾತೇ ಹೂತುಹೋಯಿತು. 'ನೀನು ಏಕೆ ಅವನ ಮೇಲೆ ಮಾಟ ಮಾಡಿ ಕೊಂದುಹಾಕಿದೆ?' ಅರ್ಚಕ ಕೇಳಿದ 'ನಾನು ಮಾಟವನ್ನು ಮಾಡಲಿಲ್ಲ. ನಾನೇಕೆ ಮಾಡಲಿ?' ಎಂದು ಹುಡುಗ ಉತ್ತರಿಸಿದ. ಆದರೆ ಊರ ಜನ ಕೇಳಿಯಾರೆ? ಒಬ್ಬಾತ ಅವರಿಬ್ಬರ ಜಗಳವನ್ನು ಏಳೆಂಟು ತಿಂಗಳ ಹಿಂದೆ ಕಂಡಿದ್ದ. ಆ ಜಗಳವನ್ನು ಆ ಹುಡುಗನ ತಲೆಗೆ ಕಟ್ಟಲಾಯಿತು. ಹೇಳು ಜಗಳಾಡಿದ್ದೀರೋ ಇಲ್ಲವೋ? ಹುಡುಗ ಜಗಳವನ್ನು ಮರೆತೂಬಿಟ್ಟಿದ್ದ. ಆದರೆ ಈಗ ಅವನಿಗೂ ನೆನಪಾಯಿತು. ಅವನು ಅಪರಾಧಿಯಂತೆ ಗೋಣು ಹಾಕಿದ. ಜಾತಿ ಜನರಿಗೆ ಸಂತೋಷವಾಯಿತು. ಯಾರ ಪಾಪವೊ ಅವನಿಗದನ್ನು ತಲುಪಿಸಲಾಯಿತು. ಎಲ್ಲರೂ ಸೇರಿ ಅವನನ್ನು ಹೊಡೆದರು. ಹುಡುಗ ಮಾಟ ಮಾಡಿದ್ದನ್ನು ಒಪ್ಪಿಕೊಂಡ. ಈಗ ಅವನಿಗೂ ತಾನು ಮಾಟ ಮಾಡಿದ್ದೇನೆ ಎಂದೆನಿಸಲಾರಂಭಿಸಿತು. ಏಕೆಂದರೆ ಜಾತಿಯ ಬಹಿಷ್ಕಾರಕ್ಕಿಂತ ಬೇರೆ ಘೋರಶಿಕ್ಷೆ ಮತ್ತೊಂದಿಲ್ಲ ಎನ್ನುವದು ಅವನಿಗೆ ಗೊತ್ತಿತ್ತು. ಜಾತಿ ಕರಗಿತು. ದಂಡವೆಂದು ಊರಿಗೆ ಊಟ, ಅಂತ್ಯಸಂಸ್ಕಾರದ ಖರ್ಚು ಮತ್ತು ಅರ್ಚಕನಿಗೆ ಬಹುಮಾನ ಅವನಿಂದ ವಸೂಲಿ ಮಾಡಲಾಯಿತು. ಇದರಿಂದ ಅವನ ಮೇಲೆ ಬಿದ್ದ ಹೊರೆಯಿಂದಾಗಿ ಅವನ ಮದುವೆ ಮುಂದೆ ಹೋಯಿತು ಮತ್ತು ಬೇರೆ ಊರಿಗೆ ಹೋಗಿ ದಿನಗೂಲಿ ಕೆಲಸ ಮಾಡಬೇಕಾಯಿತು!

ಪುನರ್ಜನ್ಮ : ನಮ್ಮಂತೆ ಆದಿವಾಸಿಗಳಿಗೂ ಪುನರ್ಜನ್ಮದ ಮೇಲೆ ದೃಢವಾದ ನಂಬಿಕೆಯಿದೆ. ವ್ಯತ್ಯಾಸವಿಷ್ಟೇ. ನಾವು ಕಲಿತ ಜನರ ಮೇಲೆ ವೇದಾಂತದ ಹೊರೆ ಬಿದ್ದಿದ್ದರಿಂದ ನಮ್ಮ ಕಲ್ಪನೆಯು ಬೇರಿಗೆ ಅಂಟಿಕೊಂಡು ತೀರಾ ರೂಕ್ಷಗೊಂಡಿದೆ. ಆದಿವಾಸಿಗಳ ಜೀವನ ಮತ್ತು ಯೋಚನೆಯು ತೀರಾ ಸಾದಾ ಸರಳವಾಗಿರುವುದರಿಂದ ಅವರ ಕಲ್ಪನೆಗಳು ತೀರ ಸುಗಮವಾಗಿವೆ. ಜೀವನದ ಆಸ್ವಾದದಿಂದ ರಸಭರಿತವಾಗಿವೆ. ಉದಾ ಎಲ್ಲ ಜೀವಗಳು ಸಾಯುತ್ತವೆ. ಆದರೆ ನಾಶವಾಗುವುದಿಲ್ಲ. ಭೂಮಿಯು ಮೃತದೇಹವನ್ನು ಉದರದಲ್ಲಿ ಇರಿಸಿಕೊಳ್ಳುತ್ತದೆ. ಜೀವವು ಮಹಾದೇವನ ಹತ್ತಿರ ಸಾಗವಾನಿ, ಐನ್ ಮರದ ಮೇಲೆ ಕುಳಿತು ಪುನರ್ಜನ್ಮದ ಹಾದಿ ಕಾಯುತ್ತದೆ. ಭೂಮಿಯ ಉದರದಲ್ಲಿ ಅದರ ಬೀಜ ತಯಾರಾಗುತ್ತದೆ. ಅದನ್ನು ಅದು ಅನ್ನದ ಅಂಶದಿಂದ, ನೀರಿನ ಅಂಶದಿಂದ

ಸ್ತ್ರೀ ಪುರುಷರ ದೇಹಕ್ಕೆ ತಲುಪಿಸುತ್ತದೆ. ಸರಿಯಾದ ಕಾಲಕ್ಕೆ ಮಗು ಜನ್ಮ ನೀಡುವಾಗ ಮಹಾದೇವನು ತನ್ನ ಹತ್ತಿರದಲ್ಲಿದ್ದ ಜೀವಕ್ಕೆ ಮಗುವಿನ ದೇಹವನ್ನು ಪ್ರವೇಶಿಸುವಂತೆ ತಿಳಿಸುತ್ತಾನೆ. ಈ ರೀತಿಯಲ್ಲಿ ಆದಿವಾಸಿಗಳ ಜಾತಿಯ ಪರಂಪರೆಯು ಅಖಂಡಿತವಾಗುಳಿಯುತ್ತದೆ. ಧರಣಿ ಮತ್ತು ಇತರ ಮಾತೆಯರಲ್ಲಿರುವ ವ್ಯತಾಸವೇನೆಂದರೆ ಧರಣಿಯ ಎಲ್ಲ ಮಕ್ಕಳು ಸತ್ತರೂ, ಅವಳದೇ ಉದರದಲ್ಲಿ ಹೊಸದಾಗಿ ಜನ್ಮ ತಾಳುತ್ತವೆ. ಇತರ ಮಾತೆಯರಿಗೆ ಈ ಸುಖ ಲಭಿಸುವುದಿಲ್ಲ. ಮೃತ ಬಾಲಕನು ಮರಳಿ ಅದೇ ತಾಯಿಯ ಉದರದಲ್ಲಿ ಬರುವ ಸಾಧ್ಯತೆ ವಿರಳ. ಒಬ್ಬಳ ಮಗು ಮತ್ತೊಬ್ಬಳ ಉದರದಲ್ಲಿ ಹೋಗುವುದು ನಿಶ್ಚಿತ. ಪ್ರಾಯಃ ಪೂರ್ವಜರೇ ಜನಿಸುತ್ತಾರೆ ಎಂಬ ಭಾವನೆಯು ಇರುವುದರಿಂದ ಆದಿವಾಸಿಗಳು ಮಕ್ಕಳನ್ನು ತುಂಬ ಪ್ರೀತಿಯಿಂದ ಕಾಣುತ್ತಾರೆ.

ಅವರ ಕಥೆ–ಗಾಥೆಗಳಲ್ಲಿ ನನಗೆ ಕಂಡುಬಂದ ಸಂಗತಿ ಏನೆಂದರೆ ಸತ್ತ ಬಳಿಕ ಯಾವುದೇ ಜೀವದ ಲಿಂಗ ಬದಲಾಗುವುದಿಲ್ಲ. ನರನು ಯಾವುದೇ ಯೋನಿಗೆ ಹೋದರೂ ನರವಾಗಿಯೇ ಇರುತ್ತಾನೆ. ನಾರಿಯು ನಾರಿ ಜಾತಿಯಲ್ಲೇ ಜನ್ಮ ತಾಳುತ್ತಾಳೆ. ಇದೇ ಅವರ ಮತ್ತು ನಮ್ಮ ತತ್ವಜ್ಞಾನದಲ್ಲಿರುವ ವ್ಯತ್ಯಾಸ. ಸ್ತ್ರೀಜಾತಿಯು ದುಃಖವನ್ನು ಭೋಗಿಸುವ, ವಿಶ್ವ ಸಂಸಾರದಲ್ಲಿ ಗೌಣತ್ವವನ್ನು ಪಡೆದದ್ದರಿಂದ ಕೀಳು ಎಂಬ ಭಾವನೆಯು ಆದಿವಾಸಿಗಳ ಮನದೊಳಗೆ ನಮ್ಮಂತೆ ಆಳವಾಗಿ ಬೇರೂರಿದೆ. ಛಂದವಾಡೆಯ ಭರಿಯಾ ಜನರ ಹಾಡಿನಲ್ಲಿ ಬರುವ ವಿಷಯ ಹೀಗಿದೆ. (ಮೂಲ ಹಾಡಿನ ಗದ್ಯರೂಪವನ್ನು ನೀಡುತ್ತಿದ್ದೇನೆ) ಔಡಲ ಮುಳ್ಳಿನ ಹಣ್ಣನ್ನು ಪ್ರಸವಿಸುವ ಫಲದ ಉಪಮೆಯನ್ನು ಹುಡುಗಿಗೆ ನೀಡಲಾಗಿದೆ. ಜಾಣ, ಸುಂದರ ಹುಡುಗಿ ಜನಿಸಿದರೂ ತಾಯಿಯ ಗರ್ಭ ಬಂಜೆಯೇ. ಹುಡುಗ ಜನಿಸಿದರೆ ತಾಯಿಯ ಬಾಳು ಬಂಗಾರವಾಗುತ್ತದೆ. (ಸಿಸಿ ಸಿಸಿ ಆರಂಡಿ ಜಮಾತಿ... ಸೋನೆ ಮಥಾಯ.)

ಪುನರ್ಜನ್ಮದ ಮೃತ್ಯುಂಜಯ ತತ್ವಜ್ಞಾನ

ಗೋಂಡ ಮುಂತಾದ ಜನರ ಮರಣ ಕಾಲದ ವಿಧಿಯು ಚಿತ್ತವೇಧಕವಾಗಿದೆ. ಆದರೆ ಅದನ್ನು ಹೇಳಲು ಇಲ್ಲಿ ಅವಕಾಶವಿಲ್ಲ. ತೀರ ಪುರಾತನ ಗೋಂಡ ರೂಢಿಯಂತೆ ಯಾರೇ ಪುರುಷರು ಸತ್ತರೆ ಅವನನ್ನು ಮಣ್ಣು ಮಾಡಿದ ಬಳಿಕ ಒಂದು ಮೀನು ಹಿಡಿದು ತರುತ್ತಾರೆ. ಸದಾಕಾಲ ಚಲಿಸುವ, ಸಕಲ ಜೀವ ಜಂತುಗಳಿಗೆ ಆಧಾರವಾಗಿದ್ದ ನೀರಿನಲ್ಲಿ ವಾಸಿಸುವ, ಹಗಲಿನಲ್ಲಿ ಬೆಳಗುವ, ರಾತ್ರಿ ಬೆಳದಿಂಗಳಲ್ಲು ಹೊಳೆಯುವ ಸುಂದರವಾದ ಮೀನು ಮೃತಜೀವಗಳ ಚೈತನ್ಯಮಯ ಪ್ರತೀಕವೆಂದು ಗೋಂಡ ಜನರು ಅದನ್ನ ಇಷ್ಟಪಡುತ್ತಾರೆ. ಸ್ತ್ರೀ

ಸ್ವತಂತ್ರ ಪ್ರತೀಕವಿಲ್ಲ. ಅವಳ (ಮೊದಲ) ಗಂಡನ ಜೀವ, ಬಳಿಕ ಅವನ ಸಾವು ಮೊದಲೇ ಆಗಲಿ ಅಥವಾ ಬಳಿಕವಾಗಲಿ ಅವಳ ಜೀವವನ್ನು ಸದಾ ತನ್ನ ಕೈವಶದಲ್ಲಿರಿಸಿಕೊಳ್ಳುತ್ತದೆ. ಕುಮಾರಿಕೆಗೆ ಹಾಗೆಯೇ ಕುಮಾರನಿಗೆ ವಿಧಿಯಿಲ್ಲ. ಅದು ಹಕ್ಕಿಯಾಗಿ ಹಾರುತ್ತ ಹೋಗುತ್ತದೆ. ಆಟ ಮುಗಿದ ಬಳಿಕ ಮತ್ತೆ ಜನ್ಮ ತಾಳುತ್ತವೆ.

ಕರಸಾಳ ಹಾಡು : ಕರಸಾಳ ಗೋಂಡರಲ್ಲಿ ಸಾವಿನ ಮೂರನೇ ದಿನ ಪುರುಷರು ಮೃದಂಗವನ್ನು ಬಾರಿಸುತ್ತ ಹಾಡುತ್ತಾರೆ. ದೀಪಾವಳಿಯ ದಿನ ಸಹ ಮೃದಂಗದ ಜೊತೆಗೆ ಕುಣಿಯುತ್ತಾರೆ. ಈ ಎಡರಲ್ಲಿ ವ್ಯತ್ಯಾಸವಿಷ್ಟೇ ಎರಡೂ ಸಮಯದ ಹಾಡು ಬೇರೆ ಬೇರೆ. ಅಂತ್ಯಕ್ರಿಯೆ ಹಾಡಿಗೆ ಕರಸಾಳ ಹಾಡು ಎನ್ನುತ್ತಾರೆ. ಕರಸಾಳ ಹಾಡು ಅನ್ನುವಾಗ ಊರಲ್ಲಿಯ ಎಲ್ಲರಿಗಿಂತ ಹಿರಿಯನಾದ ಮಾಂತ್ರಿಕ ಮತ್ತು ಅರ್ಚಕ, ನಡುವೆ ಒಂದು ಢೋಲು ವಿಶಿಷ್ಟ ಬಗೆಯಲ್ಲಿ ತಿಕ್ಕಿ ತಿಕ್ಕಿ ಬಾರಿಸುತ್ತಾನೆ ಮತ್ತು ಹಾಡುತ್ತಾನೆ. ಉಳಿದ ಗಂಡಸರು ಅವನ ಬಳಿಕ ಹಾಡುತ್ತಾರೆ. ಹೇಳುವವರು ಎರಡು ತಂಡಗಳಿರುತ್ತಾರೆ. ಹಾಡು ಒಗಟಿನ ರೂಪದಲ್ಲಿರುತ್ತದೆ. ಅದಕ್ಕೆ ಒಡಪೂ ಅನ್ನುತ್ತಾರೆ. ಒಂದು ಕಥೆಯಿಂದ ಪ್ರಶ್ನೆ ಕೇಳುವದು, ಮತ್ತೊಂದೆಡೆ ಉತ್ತರ ನೀಡುವದು, ಪ್ರಶ್ನಿಸುವವರು 'ತಮ್ಮ' ಉತ್ತರಿಸುವವನು 'ಅಣ್ಣ'ನೆನಿಸಿಕೊಳ್ಳುತ್ತಾರೆ. ಪ್ರಶ್ನೋತ್ತರವು ಜನನ-ಮರಣದ ಬಗೆಗಿರುತ್ತದೆ. ಈ ಕರತಾಳ ಹಾಡು ಶುದ್ಧ ಗೋಂಡಿ ಭಾಷೆಯಲ್ಲಿದೆ. ಇದರ ಹಿಂದಿ ಅವತರಿಣಿಕೆ ಇಲ್ಲ. ಮರಾಠಿ ಪ್ರಾಂತದಲ್ಲಿ ಅಪರೂಪಕ್ಕೆ ಈ ಗೋಂಡ ಹಾಡು ಜೀವಂತವಾಗಿದೆ. ಇದು ನೀಳ್ಗವಿತೆಯ ಮಾದರಿಯಲ್ಲಿದೆ, ಎಲ್ಲಕ್ಕೂ ಒಂದೇ ರೂಪವಿದೆ. ಆ ಹಾಡಿನ ಸಾರಾಂಶವನ್ನು ಇಲ್ಲಿ ನೀಡುತ್ತಿದ್ದೇನೆ. 'ತಮ್ಮಾ, ನೀನು ಸದಾ ಕಾಲ ಕಥೆ ಹೇಳು ಅಂತಿಯಾ. ಈಗದನ್ನು ಕೇಳು. ಕಿವಿಗೊಟ್ಟು ಕೇಳು. ತಿಲಮಾತ್ರವೂ ತಪ್ಪಬೇಡ. ನಾನು ಸದಾಕಾಲ ಹುಡುಗಿ-ಹುಡುಗಿ ಅಂತಿಯಾ, ಹಾಗಾದರೆ ಹೇಳು ನೋಡೋಣ, ಆ ಕುಮಾರಿ ಯಾರು ಅಂತ? ಏಳು ಪದರಿನ ಸೀರೆ ಉಡುತ್ತಾಳೆ, ಅದಕ್ಕೆ ತೂತು ಮಾಡಿ ಹೊರ ಬರುತ್ತಾಳೆ. ಹೀಗವಳು ದಢೂತಿಯಾಗಿದ್ದಾಳೆ. ಸುಂದರವಾಗಿದ್ದಾಳೆ. ಸಜೀವವೂ ನಿರ್ಜೀವವೂ ಆಗಿದ್ದಾಳೆ. ಈ ಲೋಕದವಳೂ, ಪರಲೋಕದವಳೂ ಆಗಿದ್ದಾಳೆ. ಆದರೆ ಅವಳ ಕಥೆ ಮಾತ್ರ ಇಲ್ಲೇ ಜರುಗುತ್ತದೆ, ತಿಳಿಯಿತೆ ! ಹಾಗಾದರೆ ಆ ಕುಮಾರಿ ಯಾರು ಹೇಳು? ನಿನಗೆ ಗುರುತಿಸುವದು ಸಾಧ್ಯವಿಲ್ಲ. ನಾನೇ ಹೇಳಬೇಕಾಗುವದು. ಅಣ್ಣ, ನಾವಿಬ್ಬರೂ ಒಂದೇ ಊರಿನವರು. ನಮ್ಮೊಳಗೆ ಜಗಳ ತಂಟೆ ಬೇಡ, ಮುನಿಸೂ ಬೇಡ. ಇಬ್ಬರೂ ಕೂಡಿಯೇ, ಒಡಪು ಆಡೋಣ' ಎಂದು ಹೇಳುತ್ತಾನೆ.

ಈ ಹಾಡಿನ ಆರಂಭಕ್ಕೆ 'ಕಿರಿವಿರಿ ಕಿರಿವಿರಿ ಕರವಂತ' ಎಂದು ನಿರರ್ಥಕ

ಆದರೆ ಅಳಲು ಅನುಕೂಲವಾಗುವ ಸ್ವರದಲ್ಲಿರುತ್ತದೆ. ಇದೇ ಹಾಡಿನ ಪಲ್ಲವಿ.

ಇದಕ್ಕೆ ತಮ್ಮನ ಉತ್ತರ ಹೀಗಿದೆ : 'ಚೆನ್ನಾಗಿ ಹೇಳಿದೆ ಅಣ್ಣಾ, ಕುಮಾರಿ ಅಂತಿಯಾ, ಅಂದರೆ ಚಿಕ್ಕವಳಲ್ಲ, ವಯಸ್ಸಿಗೆ ಬಂದವಳು ಅಲ್ಲವೇ? ತುಂಬ ಖ್ಯಾತಿ ಪಡೆದವಳು. ಅವಳು ಜೀವಂತವಾಗಿದ್ದಾಳೆ. ಹಾಗೆ ಎಷ್ಟೋ ಕುಮಾರಿಕೆಯರು ಇದ್ದಾರೆ. ನೀನು ಅಂದಂತೆ ಕುಮಾರಿಯಾಗಿದ್ದಾಳೆ. ಅಂದರೆ ತೀರ ಪುಟ್ಟ ಹುಡುಗಿಯೆ? ಅವಳು ಮೇಲೆ ಇದ್ದರೆ, ನಾನು ಹೇಗೆ ಹೇಳಲಿ? ಭೂಮಿ ನಾಲ್ಕು ಖಂಡದಲ್ಲಿದೆ. ಅದು ನನಗೆ ಗೊತ್ತು. ಮೇಲೆ ಏನಿದೆ, ನನಗೆ ಗೊತ್ತಿಲ್ಲ. ಕೆಳಗೆ ಏನಿದೆ, ನನಗೆ ಗೊತ್ತಿಲ್ಲ. ನನಗೆ ಕಾಲ ವೇಳೆಯೂ ಗೊತ್ತಿಲ್ಲ. ನೀನೆ ಉತ್ತರಿಸಬೇಕಾಗುವದು. ಏಳು ಪದರಿನ ಸೀರೆ ಉಟ್ಟವಳು ಯಾರೆಂದು ನೀನೆ ಹೇಳಬೇಕು.'

ಈ ರೀತಿ ಹಾಡು ಮುಂದುವರಿಯುತ್ತದೆ. ಕೊನೆಗೆ ಅಣ್ಣ ನವ ಯೌವ್ವನೆಯಾದ ಕುಮಾರಿಕೆಯ ವರ್ಣನೆ ಮಾಡುತ್ತಾನೆ. ಅವಳು ಏಳು ತರುಣರನ್ನು ಬಾಗಿಸುತ್ತಾಳೆ. ಅವರ ಹೃದಯವನ್ನು ಭಗ್ನಗೊಳಿಸುತ್ತಾಳೆ. ಈ ಕುಮಾರಿ ಎಂದರೆ ಜೀವ. ಅವಳ ಪ್ರಿಯಕರನೆಂದರೆ ದೇಹ. ಒಂದು ಜೀವ ಏಳು ದೇಹವನ್ನು ಬದಲಾಯಿಸುತ್ತದೆ. ಬಳಿಕ ಅಣ್ಣನು ಕುಮಾರಿಕೆಯನ್ನು ಬಿದಿರಿನ ಮೊಳಕೆಗೆ ಹೋಲಿಸುತ್ತಾನೆ. ನೋಡಲು ಸುಂದರವಾದಾಗ ಗಟ್ಟಿಮುಟ್ಟಾದ ಬಿದಿರಿನ ಮೊಳಕೆಯು ಏಳು ಪದರವನ್ನು ಸೀಳಿ ಹೊರಬರುತ್ತದೆ. ಎತ್ತರವಾಗಿ ಬೆಳೆಯುತ್ತದೆ. ಕಣ್ಣು ತುಂಬುತ್ತದೆ. ಆದರೆ ಅರವತ್ತು ವರ್ಷಕ್ಕೊಮ್ಮೆ ಹೂ ಬಿಡುತ್ತದೆ. ಹಾಗೆ ಈ ಜೀವವಿದೆ. ಜೀವಿಸುವಾಗ ಲೋಭವನ್ನುಂಟುಮಾಡುತ್ತದೆ. ಸಾಯುವಾಗ ಅರಳುತ್ತದೆ. ಬಿದಿರಿನ ಹೂವಿನಂತೆ ಕೈಗೆ ಸಿಗುವುದಿಲ್ಲ !

ಕುಮಾರಿಕೆ ಮತ್ತು ಅವಳ ವಿವಾಹಪೂರ್ವದ ಪ್ರಣಯವು ಆದಿವಾಸಿಗಳ ಜೀವನದಲ್ಲಿಯ ಅತ್ಯಂತ ಚೈತನ್ಯಮಯ ಮತ್ತು ಕಾವ್ಯಮಯ ಭಾಗವಾಗಿದೆ. ಅವರ ಉನ್ಮತ್ತ ವೃತ್ತಿ ಮತ್ತು ಜೀವನದಲ್ಲಿ ಮೈಮರೆಯುವ ವೃತ್ತಿಯು ಈ ಹಾಡಿನಲ್ಲಿಯೂ ಸಹ ಮಾರ್ಮಿಕವಾಗಿ ವ್ಯಕ್ತಮಾಡಲಾಗಿದೆ. ಸಾವಿನ ಅಂತ್ಯ ಜೀವನದಲ್ಲಾಗುತ್ತದೆ. ಜೀವನ ಸಮೃದ್ಧವಾಗಿದೆ. ಅಖಂಡವಾಗಿದೆ. ಇದೇ ಆಶಾವಾದ ಈ ಆದಿವಾಸಿಗಳ ವಿಲಾಪಿಕಾದಲ್ಲಿ ಅಥವಾ ಶೋಕಗೀತೆಯಲ್ಲಿ ತುಂಬಿದೆ. ಕಳೇಬರ ಕಿಂಚಿತ್ ಕಾಣಿಸಿಕೊಂಡು ಇಲ್ಲವಾಗುತ್ತದೆ. ನಾಲ್ದೆಸೆಯಲ್ಲೂ ಜೀವನ ತುಂಬಿಕೊಂಡಿದೆ. ಅಲ್ಲಿವರೆಗೆ ಮನುಷ್ಯನು ಜೀವನದ ಮೇಲೆ ನಂಬಿಕೆಯಿಡಬೇಕೆಂದು ಈ ಮೃತ್ಯುಂಜಯ ತತ್ವಜ್ಞಾನ ಹೇಳುತ್ತದೆ.

– ಮೌಜ್, ದೀಪಾವಳಿ, ೧೯೪೯

* * * *

೨. ನಮ್ಮ ಸಮಾಜದಲ್ಲಿ ಆದಿವಾಸಿಗಳ ಸ್ಥಾನ–ಮಾನ

ಭಾರತದಲ್ಲಿ ೨೫೦ ಆದಿವಾಸಿ ಸಮುದಾಯದವರಿದ್ದು, ಅವರ ಜನಸಂಖ್ಯೆಯು ಸುಮಾರು ಎರಡೂವರೆ ಕೋಟಿಯಷ್ಟಿದೆ. ಇಂಥ ದೊಡ್ಡ ಸಂಖ್ಯೆಯ ಅಖಂಡ ಆದಿವಾಸಿ ಸಮಾಜವು, ಕೇವಲ ದೊಡ್ಡ ಸಂಖ್ಯೆಯಿಂದಾಗಿಯೇ ರಾಜಕೀಯದ ಮತ್ತು ಸಾಮಾಜಿಕ ಕಾರ್ಯಕರ್ತರಿಗೆ ಮರುಳು ಮಾಡುವ ವಿಶಿಷ್ಟ ಘಟಕವು ಭಾರತೀಯ ಸಮಾಜದ ಒಂದು ಭಾಗವಾಗಿರಬೇಕೆಂದು ಅನಿಸಿದರೆ ಬೆರಗಾಗಬೇಕಿಲ್ಲ. ಇಂದಿನ ಆದಿವಾಸಿ ಜಾತಿಯ ಕುರಿತು ಪ್ರಕಟವಾಗುವ ಪತ್ರಿಕಾ ಲೇಖನ ಮತ್ತು ಪ್ರಬಂಧಗಳನ್ನು ಗಮನಿಸಿದರೆ, ಈ ಸಮಾಜದ ಬಗೆಗೆ ಉಂಟಾದ ಕುತೂಹಲ ಮತ್ತು ಸಾರ್ವಜನಿಕ ಮಹತ್ವವು ಕೇವಲ ಕಳೆದ ೧೦–೧೨ ವರ್ಷಗಳ ಉದ್ದೇಶಪೂರ್ವಕ ರಾಜಕಾರಣ ಮತ್ತು ಸಮಾಜಕಾರಣದಿಂದ ನಿರ್ಮಾಣವಾಗಿದೆ ಎನ್ನುವದು ಕಂಡುಬರುತ್ತದೆ. ಈ ಕುತೂಹಲ ಯಾವ ಬಗೆಯದು ಎನ್ನುವದು ಅರಿವಾಗಲು ಆದಿವಾಸಿಗಳ ರಾಜಕೀಯ ಮತ್ತು ಸಾಮಾಜಿಕ, ಅಂದರೆ ಒಂದರ್ಥದಲ್ಲಿ ಸಾಂಸ್ಕೃತಿಕ ನಿಲುವು ಏನಿದೆ ಎಂಬುದು ಸ್ಪಷ್ಟವಾಗುವ ಅವಶ್ಯಕತೆಯಿದೆ. ಒಟ್ಟಿನಲ್ಲಿ ಜಾತಿ–ಜಾತಿಗಳಲ್ಲಿ ವಿಭಾಗಿಸಲ್ಪಟ್ಟ, ಆದರೂ ಹಿಂದೂತ್ವದಿಂದ ಒಂದಾಗಿರುವ ಈ ಬಹುಸಂಖ್ಯ ಭಾರತೀಯ ಸಮಾಜವು ಆದಿವಾಸಿಗಳೊಂದಿಗೆ ಹೊಂದಿದ ಪೂರ್ವಾಪರ ಸಂಬಂಧವು ಎಂಥದ್ದು. ಅವರು ಮತ್ತು ನಾವು ಎಲ್ಲಿವರೆಗೆ ಹೊಂದಿಕೊಂಡಿದ್ದೇವೆ ಎನ್ನುವದು ಅರಿಯಬೇಕಾದ ಅಗತ್ಯವಿದೆ. ಆದಿವಾಸಿಗಳ ಪ್ರಶ್ನೆಯ ರಾಜಕೀಯ ಮಹತ್ವ ಮತ್ತು ಅವರು ಎಂದೂ ಸಮಾಜದೊಂದಿಗೆ ಹೊಂದಿದ ಪಾರಂಪಾರಿಕ ವ್ಯವಹಾರದ ಬಗೆಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಆದಿವಾಸಿಗಳ ಜೀವನಗಾಥೆ ಕರುಣೆಯಿಂದ ಕೂಡಿದೆ. ಭಾರತದಲ್ಲಿ ಈ ಜನರನ್ನು ನೋಡಿದಲ್ಲೆಲ್ಲ ದಾರಿದ್ರ್ಯ ಮುತ್ತಿಕೊಂಡಿದೆ. ಹಿಂದಿನ ಕಾಲ ಕಳೆದದ್ದರಿಂದ ತ್ರಸ್ತರಾಗಿದ್ದಾರೆ, ಗಲಿಬಿಲಿಗೊಂಡಿದ್ದಾರೆ. ಹಿಂದೂಸ್ತಾನದಲ್ಲಿ ದಲಿತರೆಂದು ಅನಿಸಿಕೊಳ್ಳುವವರು, ಮುಖ್ಯವಾಗಿ ಅಸ್ಪೃಶ್ಯ ಮುಂತಾದವರು, ತಮ್ಮ ಸ್ವಂತ ಹಕ್ಕಿಗಾಗಿ, ಇಲ್ಲವೇ ತಮ್ಮ ಜಾತಿಗೆ ಸುಧಾರಿತ ಭಾವನೆ ಬರಲೆಂದು ಸ್ವಯಂಸ್ಫೂರ್ತಿಯಿಂದ ಪ್ರಯತ್ನ ಮಾಡುತ್ತಿದ್ದಾರೋ, ಅದರ ಕೊರತೆಯು ಆದಿವಾಸಿ ಸಮುದಾಯದವರಲ್ಲಿ

ಮುಖ್ಯವಾಗಿ ಕಾಣಿಸಿಕೊಳ್ಳುತ್ತಿದೆ. ಕಳೆದ ಏಳೆಂಟು ವರ್ಷಗಳಿಂದ ಅಸಾಮಿನ ಆದಿವಾಸಿಗಳು ನಡೆಸಿದ ಹಿಂಸಾತ್ಮಕ ಚಳವಳಿಗೆ ಮುಖ್ಯವಾಗಿ ಹಿಂದೂಗಳೇ ಕಾರಣರಾಗಿದ್ದರು. ಆದರೆ ಪಕ್ಷಪಾತ ಮಾಡದೇ ಆ ಚಳವಳಿಯನ್ನು ಗಮನಿಸಿದಿರೆಂದರೆ ಅದು ಸ್ವಯಂಪೂರ್ಣವಾಗಿರದೆ, ಆ ಚಳವಳಿಯ ಜನಕರು ವಿದೇಶಿಗಳಾಗಿದ್ದು, ಅವರು ಅದೃಶ್ಯವಾದ ರೀತಿಯಲ್ಲಿ, ವ್ಯವಸ್ಥಿತವಾಗಿ ಭಾರತದ ರಾಷ್ಟ್ರೀಯ ರಾಜಕಾರಣವನ್ನು ಸದೆಬಡಿಯಲು ಪ್ರಯತ್ನಿಸುತ್ತಿದ್ದರು. ಯಾವ ಹಿಂದೂ ಸಮಾಜದಲ್ಲಿ ಉಳಿದ ಯಾವುದೇ ಸಮುದಾಯದವರಿಗಿಂತ ಸಹಜವಾಗಿ ವಿಲೀನವಾಗುವದು ಸಾಧ್ಯವಿತ್ತೋ ಅದರಿಂದ ಬೇರ್ಪಡಿಸುವ ಹುನ್ನಾರು ನಡೆದಿತ್ತು. ಆಂಗ್ಲಸತ್ತೆಯು ಹಿಂದೂ–ಮುಸಲ್ಮಾನ ಮತ್ತು ಬ್ರಾಹ್ಮಣ–ಬ್ರಾಹ್ಮಣೇತರ ಎಂಬ ವಿಷಬೀಜವನ್ನು, ಸಕಲ ಜಾತಿಗೆ ಸಮಾನ ಸ್ಥಾನಮಾನ ನೀಡಿ, ಜಾತೀಯತೆಯನ್ನು ಹೋಗಲಾಡಿಸುವ ಮೋಹಕ ಹೆಸರಿನಲ್ಲಿ ಹಿಂದೂಸ್ತಾನದ ಎಲ್ಲೆಡೆ ಧೂರ್ತತನದಿಂದ ಬಿತ್ತಲಾಗಿತ್ತೋ, ಅದೇ ಮಾದರಿಯಲ್ಲಿ ಈ 'ಹಿಂದೂ–ಆದಿವಾಸಿ' ಬಿಕ್ಕಟ್ಟು ನಿರ್ಮಾಣ ಮಾಡಲಾಗಿದೆ. ಆಂಗ್ಲರ ಪರಸ್ಪರ ಕೋಳಿ ಜಗಳ ಮಾಡಿಸುವ ಧೋರಣೆಯು ಕೊನೆಯು ಮುರಿಯಿದು. ಎರಡನೆಯು ಮತ್ತೊಂದು ಬಂಡಾಯವೆಂದರೆ, ಶೇಠ–ಸಾಹುಕಾರರ ವಿರುದ್ಧ ಮೂರ್‍ನಾಲ್ಕು ವರುಷಗಳ ಹಿಂದೆ ಆದಿವಾಸಿಗಳ ಠಾಣೆ ಜಿಲ್ಲೆಯಲ್ಲಿ ನಡೆಸಿದ ಹೋರಾಟವೂ ಸಹ, ಕೃತ್ರಿಮವಾಗಿದ್ದು, ಆರ್ಥಿಕ ಸಮತೆಯನ್ನು ಬೆಂಬಲಿಸುವ ಬುರಖಾದ ಹಿಂದೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸದೆಬಡೆಯಲೆಂದು ಕಮ್ಯುನಿಸ್ಟರು ರಚಿಸಿದ ಒಂದು ತಂತ್ರವಾಗಿತ್ತು.

ಅಸಾಮಿನದೇ ಆಗಿರಲಿ ಅಥವಾ ಠಾಣೆಯದೇ ಆಗಿರಲಿ ಮೂಲತಃ ರಾಜಕಾರಣಿಗಳು ತಮ್ಮ ಪಕ್ಷ ಅಥವಾ ವರ್ಗದ ಸಂಕುಚಿತ ಧೋರಣೆಯನ್ನು ಈ ಅಜ್ಞ ಮತ್ತು ಬಡ ಜನರ ತಲೆಗೆ ಕಟ್ಟಿ, ಅವರ ಸಮುದಾಯದ ಮೊದಲೇ ಕ್ಷೀಣಗೊಂಡ ಶಕ್ತಿಯನ್ನು ಮತ್ತಷ್ಟು ಕ್ಷೀಣಗೊಳಿಸಿತು. ಅವರ ಕಪಿಮುಷ್ಟಿಯಲ್ಲಿ ಸಿಕ್ಕ ಹಿಂದೂ (ಕೆಲ ನಾಯಕರ) ಮತ್ತು ಸಾಹುಕಾರರ ವಿರುದ್ಧ ಕೇವಲ ದ್ವೇಷದಿಂದ ವೈಯಕ್ತಿಕ ಹಲ್ಲೆ ಮಾಡುವ ಅಕವಾಶ ಅವರಿಗೆ ಲಭಿಸಿತು. ಆದಿವಾಸಿಗಳ ಚಳವಳಿಯು ಕೃತಕವಾದುದು ಎಂಬ ಸಂಗತಿಯನ್ನು ನಿರ್ಲಕ್ಷಿಸುವದು ಸರಿಯಲ್ಲ. ಆದಿವಾಸಿಗಳ ರಾಜಕೀಯ ಜೀವನದ ಹಕೀಕತ್ತು ಮನೋರಂಜಕವಾಗಿದೆ. ಆದರದು ತೀರ ವಿಸ್ತೃತವೂ, ಸಿಕ್ಕುಸಿಕ್ಕಿನದೂ ಆಗಿದ್ದರಿಂದ ಒಂದೆರಡು ಘಟನೆಗಳಷ್ಟೇ ಇಲ್ಲಿ ಪ್ರಸ್ತಾಪ ಮಾಡಲಾಗಿದೆ.

ಅಸಾಮಿ ಮತ್ತು ಠಾಣೆ ಜಿಲ್ಲೆಯಲ್ಲಿ ನಡೆದ ಗೋಲಿಬಾರಿನ ಪ್ರಕರಣದಿಂದಾಗಿ ಒಟ್ಟು ಹಿಂದೂಸಮಾಜ ಮತ್ತು ಅದರೊಂದಿಗೆ ಇರುವ ಆದಿವಾಸಿಗಳ ವ್ಯವಹಾರ

ಮತ್ತು ಆರ್ಥಿಕ ಸಂಬಂಧದ ಬಗೆಗೆ ಈ ಹಿಂದೆಂದಿಗಿಂತಲೂ ಹೆಚ್ಚು ಅವಲೋಕನ ಮಾಡಬೇಕಾದ ಅಗತ್ಯ ಇಂದು ಬಂದಿದೆ. ತಲೆತಲಾಂತರವಾಗಿ ಮುಂದುವರಿಯುತ್ತಲೇ ಇರುವ ರಾಷ್ಟ್ರದ ವಿಧಾಯಕ ಕಾರ್ಯಕ್ರಮಗಳಲ್ಲಿ ಒಂದು ಎಂದರೆ ಆದಿವಾಸಿಗಳ ಜೀವನವನ್ನು ಸಮೃಧ್ಧಗೊಳಿಸುವದು. ಸುಖಕರವನ್ನಾಗಿ ಮಾಡುವದು. ಈ ಕಾರ್ಯಕ್ರಮವನ್ನು ಖಾಸಗಿ ಸಂಸ್ಥೆ ಅಥವಾ ಕಾರ್ಯಕರ್ತರ ಧೋರಣೆಗೆ ಅನುಗುಣವಾಗಿ ಈ ಹಿಂದೆ ಅವಲಂಬಿಸಿದಂತೆ ಮಾಡದೇ ಸರಕಾರದ ಧೋರಣೆಗೆ ತಕ್ಕಂತೆ ಮುನ್ನಡೆಸಿಕೊಂಡು ಹೋಗಬೇಕು. ಯಾವುದೇ ಪಕ್ಷದ ಸರಕಾರವಿರಲಿ, ಈಗದು ಭಾರತದಲ್ಲಿ ಜನಾಭಿಮುಖವಾಗಿರುವದಂತೂ ಸತ್ಯ. ಹೀಗಾಗಿ ಕೆಳವರ್ಗದವರ ಧೋರಣೆಯಲ್ಲಿ ಯಾವುದೇ ಬಗೆಯ ಮೂಲಗ್ರಾಹೀ ಬದಲಾವಣೆಯಾಗುವದು ಸಾಧ್ಯವಿಲ್ಲ. ಏಕೆಂದರೆ ಉಳುವವನೆ ಹೊಲದೊಡೆಯ ಎಂಬ ಕಾನೂನನ್ನು ಈಗ ಯಾವ ಸರಕಾರವು ಹಿಂಪಡೆಯುವದು ಸಾಧ್ಯ? ವಯಸ್ಸಿಗೆ ಬಂದ ಪ್ರತಿಯೊಬ್ಬ ವ್ಯಕ್ತಿಯೂ ಮತದಾನ ಮಾಡುವ ಹಕ್ಕಿನಿಂದಾಗಿ ಪ್ರಜಾಪ್ರಭುತ್ವದ ಬುನಾದಿಯು ಭದ್ರವಾದ ತತ್ವದ ಮೇಲೆ ನಿಂತಿಲ್ಲವೇ? ನನ್ನ ಅನಿಸಿಕೆ ಏನೆಂದರೆ, ಈ ಎರಡೂ ಹಕ್ಕುಗಳನ್ನು ಅಮಲಿಗೆ ತರುವುದು ರೀತಿಯ ಮಾರ್ಗದಿಂದ ಸಾಧ್ಯವಿರುವುದರಿಂದ ಅಸಾಮಿ ಇಲ್ಲವೇ ಠಾಣೆಯಂಥ ಪ್ರಸಂಗವನ್ನು ಈ ದೀನ ದರಿದ್ರರಲ್ಲಿ ಹುಟ್ಟುಹಾಕುವುದು ಬಾಹ್ಯ ಪುಢಾರಿಗಳಿಗೆ ಶೋಭಿಸುವಂತಹದಲ್ಲ. ಇದು ಆದಿವಾಸಿಗಳ ಪ್ರಗತಿಗೆ ಆತ್ಮಘಾತುಕವಾದುದು. ಆದ್ದರಿಂದಲೇ ಆದಿವಾಸಿಗಳ ಆರ್ಥಿಕ ಜೀವನವನ್ನು ಸರಕಾರದ ಧೋರಣೆಯ ಅಡಿಯಲ್ಲೇ ನಿಯಂತ್ರಿಸುವುದು ಹೆಚ್ಚು ಶ್ರೇಯಸ್ಕರವಾದುದು. ಏಕೆಂದರೆ ಪ್ರಜಾಪ್ರಭುತ್ವದ ಹಕ್ಕಿನ ಜೊತೆಗೇ ಈ ಜನರಲ್ಲಿ ಸ್ವಕರ್ತವ್ಯ, ತಮ್ಮ ಕೆಲಸವನ್ನು ಶಿಸ್ತಿನಿಂದ ಮಾಡುವ ಸ್ವಾಭಿಮಾನ ಮತ್ತು ತಮ್ಮ ಸಮಾಜದ ಭವಿತವ್ಯವನ್ನು ಉತ್ತಮಗೊಳಿಸುವ ಮಹಾತ್ವಾಕಾಂಕ್ಷೆಯನ್ನು ನಿರ್ಮಿಸುವದು, ವರ್ಷಾನುಗಟ್ಟಲೆ ಮುನ್ನಡೆಯುವ ಶೈಕ್ಷಣಿಕ ಸ್ವರೂಪದ ವಿಧಾಯಕ ಕಾರ್ಯವಾಗಿದೆ. ಹಕ್ಕಿನ ಜೊತೆಗೆ ಹೊಣೆಗಾರಿಕೆಯ ಅರಿವು ಮಾಡಿಸುವುದು ಪ್ರಜಾಪ್ರಭುತ್ವ ನಾಗರಿಕ ಜೀವನಕ್ಕೆ ಅಗತ್ಯವಾಗಿದೆ. ಯಾವ ಮುಖಂಡರು ಈ ಅರಿವನ್ನು ದಲಿತರಲ್ಲಿ, ಕಾರ್ಮಿಕರಲ್ಲಿ ಮತ್ತು ಆದಿವಾಸಿಗಳಲ್ಲಿ ಮೂಡಿಸಲು ಹಿಂಜರಿಯುತ್ತಾರೋ ಮತ್ತು ಕೇವಲ ಹಕ್ಕಿಗಾಗಿ ಸತತ ಜಗಳಾಡುವುದನ್ನು ಕಲಿಸುತ್ತಾರೋ, ಅವರು ಈ ಅಜ್ಞಾನಿ ಮತ್ತು ಬಡ ಜನರ ಕ್ಷೋಭೆಯನ್ನು ಕೇವಲ ತಮ್ಮ ವೈಯಕ್ತಿಕ ಮತ್ತು ನೈಮಿತ್ತಿಕ ರಾಜಕೀಯ ಆಕಾಂಕ್ಷೆಗಾಗಿಯೇ ಉಪಯೋಗ ಮಾಡಿಕೊಳ್ಳುತ್ತಾರೆ ಎಂದೆನ್ನಬೇಕಾಗುತ್ತದೆ.

ಆದಿವಾಸಿಗಳ ಮಹತ್ವ : ಭಾರತದಲ್ಲಿಯ ಆದಿವಾಸಿಗಳಿಗೆ ಲಭಿಸಿದ

ಸಾಮಾಜಿಕ ಮತ್ತು ರಾಜಕೀಯ ಮಹತ್ವಕ್ಕೆ, ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿ ದಲಿತ ಮತ್ತು ಹಿಂದುಳಿದವರಿಗೆ ಸಿಗುವ ಜನಮತದ ಬೆಂಬಲ ಒಂದೇ ಕಾರಣವಲ್ಲ. ಅದರಲ್ಲಿ ಪಕ್ಷ-ಉಪಪಕ್ಷಗಳ ಕೈಯಿದೆ. ಆಂಗ್ಲರು ಮರಳಿ ಹೋಗುವಾಗ ಬೇಕೆಂದೇ ಒಡಕಿನ ಬೇರನ್ನು ಆಳವಾಗಿ ಹುಗಿದು ಹೋಗಿದ್ದಾರೆ. ಇದರಿಂದಾಗಿ ಒಂದು ಬಗೆಯ ಅತೀ ಮಹತ್ವ ಈ ಜನರಿಗೆ ಬಂದಿದೆ. ವಾಸ್ತವಿಕವಾಗಿ ಬಹುಸಂಖ್ಯಾತ ಬಡ ರೈತಾಪಿ ಹಳ್ಳಿಗರಿಗಿಂತ ಅವರ ಸ್ಥಿತಿ ಭಿನ್ನವಾಗಿಲ್ಲ. ಅವರ ಪ್ರಶ್ನೆ, ಅವರ ಸುಖ-ದುಃಖ ಏನಿದೆಯೋ ಇವರದೂ ಅದೇ ಆಗಿದೆ. ಅಸ್ಪೃಶ್ಯರಂತೆ ಅವರನ್ನು ಯಾರೂ ತ್ಯಾಜ್ಯರೆಂದೂ ಭಾವಿಸುವುದಿಲ್ಲ. ಹೀಗಾಗಿ ಅವರ ಬೇಡಿಕೆಗೆ ವಾಸ್ತವಿಕ ಬಹುಸಂಖ್ಯಾತ ದಲಿತ ಹಿಂದೂ ಸಮಾಜದವರಿಗಿಂತ ಬೇರೆ ಸ್ವರೂಪ ನೀಡಬೇಕಾದ ಅಗತ್ಯವಿಲ್ಲ. ಆದಾಗ್ಯೂ ಮೇಲೆ ನಮೂದಿಸಿದಂತೆ ರಾಜಕಾರಣದ ಹಸ್ತಕ್ಷೇಪದಲ್ಲಿ ಆದಿವಾಸಿಗಳನ್ನು ಬೇಕೆಂದೇ ಬೇರೆ ಎಂದು ಸಂಬೋಧಿಸಿ ಸೆಳೆದುಕೊಳ್ಳುವ ಮುಖ್ಯ ಕಾರಣವೆಂದರೆ, ಈ ದೇಶದ ಅಲ್ಲಲ್ಲಿ ಪಸರಿಸಿದ ಅವರ ಬಹುದೊಡ್ಡ ಸಂಖ್ಯೆ ಮತ್ತು ಅಜ್ಞಾನ. ಅವರದ್ದೇ ಸ್ವತಂತ್ರ ಮತಕ್ಷೇತ್ರವನ್ನು ನಿರ್ಮಿಸಿ ಅವರನ್ನು ಹಿಂದೂ ಸಮಾಜದಿಂದ ಶಾಶ್ವತವಾಗಿ ಬೇರ್ಪಡಿಸುವ ಹುನ್ನಾರವನ್ನು ಕೆಲವರು ಮಾಡಿದ್ದರು. ಬಿಳಿಯರು ಈ ಬೀಜವನ್ನು ಬಿತ್ತಿದರು, ರಾಷ್ಟ್ರೀಯ ಸಭೆ ವಿರುದ್ಧದ ಕಮ್ಯುನಿಸ್ಟ್ ಗುಂಪು ಅದೇ ತತ್ವವನ್ನು ಬೆಂಬಲಿಸಿದರು. ಆದರೆ ಭಾರತದ ಲೋಕಸಭೆಯಲ್ಲಿ ಅಸ್ಪೃಶ್ಯರ ಸ್ವತಂತ್ರ ಪಕ್ಷದಂತೆಯೇ ಅದಕ್ಕೆ ಅನುಮೋದನೆ ಸಿಗಲಿಲ್ಲ. ಯಾವ ರೀತಿ ಜೈನರು ಸಾಂಸ್ಕೃತಿಕವಾಗಿ ತಾವು ಹಿಂದೂಗಳಲ್ಲವೆಂದು ಹಿಂದೂ ಸಮಾಜದಿಂದ ದೂರ ಸರಿಯಲು ಬಯಸುತ್ತಾರೋ, ಅದೇ ರೀತಿ ಕೆಲ ಕರಿ-ಬಿಳಿ ಮುಖಂಡರು ಅವರನ್ನು ಅಹಿಂದೂ ಎಂದು ನಿರ್ಧರಿಸುತ್ತಾರೆ. ಇದೆಲ್ಲ ಹಾಳು ರಾಜಕಾರಣವಾಗಿದ್ದು ಅದರಲ್ಲಿ ಆ ಸಮುದಾಯದ ಹಿತದ ವಿಧಾಯಕ ದೃಷ್ಟಿಯಿಲ್ಲ ಎನ್ನುವುದು ಬಹಿರಂಗ ಸತ್ಯ. ತಾತ್ಕಾಲಿಕ ಜನಪ್ರಿಯತೆ ಮತ್ತು ಮುಂಬರುವ ಚುನಾವಣೆಯಲ್ಲಿ ತಮ್ಮ ಪಕ್ಷವನ್ನು ಬಲಪಡಿಸುವ ಎರಡನೇ ದರ್ಜೆಯ ಪುಢಾರಿಗಳ ಆಟ ಎನ್ನುವುದು ಬಿಟ್ಟರೆ, ಈ ಪ್ರಶ್ನೆಗೆ ಹೆಚ್ಚು ಮಹತ್ವವಿಲ್ಲ.

ಆದಿವಾಸಿಗಳ ಚರಿತ್ರೆ ಮತ್ತು ಅವರು ಹಿಂದೂ ಸಮಾಜದೊಂದಿಗೆ ಹೊಂದಿರುವ ವ್ಯವಹಾರವನ್ನು ಸಿಂಹಾವಲೋಕನ ಮಾಡಿದರೆ ಭಾರತದಲ್ಲಿಯ ಆದಿವಾಸಿಗಳ ಸ್ಥಾನಮಾನ ಸಹಜವಾಗಿ ಅರಿಯಬಹುದಾಗಿದೆ. ಅದು ಹೀಗಿದೆ-

ಆದಿವಾಸಿಗಳ ಭೌಗೋಳಿಕ ಸ್ಥಾನ : ಭಾರತದಲ್ಲಿ ಆದಿವಾಸಿ ಜಾತಿಗಳ ಸಂಖ್ಯೆಯು ಸುಮಾರು ಇನ್ನೂರೈವತ್ತರಷ್ಟಿದೆ. ಈ ಜಾತಿಯು ಭಾರತದ ಬೇರೆ-ಬೇರೆ ಬೆಟ್ಟ ಪ್ರದೇಶಗಳಲ್ಲಿ ಪಸರಿಸಿಕೊಂಡಿದ್ದು ರೂಪ, ಗುಣ, ಬುದ್ಧಿ, ಸಂಸ್ಕೃತಿ ಹಾಗೂ ಆರ್ಥಿಕ ಸ್ಥಿತಿಯನ್ನು ಗಮನಿಸಿದರೆಂದರೆ ಈ ಸಮುದಾಯದವರಲ್ಲಿ

ಒಂದೇ ಬಗೆ ಗೋಚರಿಸುವುದಿಲ್ಲ; ಆದಿವಾಸಿಗಳ ಜನಸಂಖ್ಯೆಯು ಎರಡೂವರೆ ಕೋಟಿಯಷ್ಟಿದೆ. ಆದ್ದರಿಂದ ಆದಿವಾಸಿಗಳ ವರ್ಗ ಒಂದೇ ಎಂದು ಭಾವಿಸಿ ಪ್ರತ್ಯೇಕಗೊಳಿಸಿದರೆ, ಅದು ರಾಜಕೀಯ ಸಾಂಸ್ಕೃತಿಕ ಮತ್ತು ಆರ್ಥಿಕವಾಗಿ ಯಾವುದೇ ರಾಜಕೀಯ ಪಕ್ಷಗಳ ಮುಂದೆ ಸ್ವಂತ ಪ್ರಜಾಪ್ರಭುತ್ವದ ಧೋರಣೆಯನ್ನು ಪ್ರದರ್ಶನ ಮಾಡಲು ಮಹತ್ವದ ಘಟಕವಾಗಬಹುದು. ಈ ಸಾಧ್ಯತೆಯಲ್ಲೇ ಆದಿವಾಸಿಗಳ ರಾಜಕೀಯ ಅಸಂತೋಷದ ಮತ್ತು ಆರ್ಥಿಕ ಚಳುವಳಿಯ ಸಾಕಷ್ಟು ರಹಸ್ಯ ಹುದುಗಿದೆ.

ಆದಿವಾಸಿ ಜಾತಿಗಳ ಸ್ಥೂಲ ವಿಭಾಗ : ದೇಶದ ತುಂಬೆಲ್ಲ ಪಸರಿಸಿದ ಆದಿವಾಸಿ ಜಾತಿಗಳಲ್ಲಿ ಕೆಲವು ಇನ್ನೂ ಎಂಥ ಕಾಡು ಸ್ಥಿತಿಯಲ್ಲಿದ್ದಾರೆಂದರೆ ಸುಧಾರಿಸಿದ ಜಗತ್ತಿಗೆ ಇನ್ನೂ ಯಾವ ಮಾಹಿತಿಯೂ ಇಲ್ಲ. ಹಿಮಾಲಯದ ಕೆಲವು ತಾಣಗಳು ಎಷ್ಟು ದುರ್ಗಮವಾಗಿವೆ ಎಂದರೆ ಅವು ಎತ್ತರವಾಗಿರದಿದ್ದರೂ ನಾವಲ್ಲಿಗೆ ಇನ್ನೂ ಹೋಗಿ ತಲುಪಲಿಲ್ಲ. ಗೋದಾವರಿ ತೀರ, ಮದ್ರಾಸ ಮತ್ತು ಮಧ್ಯಪ್ರದೇಶದ ಅರಣ್ಯಗಳು ಹೇಗಿವೆ ಎಂದರೆ ಉಸಿರುಗಟ್ಟಿಸುವ, ಉಷ್ಣಗಾಳಿಯ, ಮಲೇರಿಯಾ ರೋಗದ ಮತ್ತು ವಿಷಕಾರಿ ಝುರಿಯ ತಾಣವಾಗಿರುವದರಿಂದ ಅವುಗಳನ್ನು ಸಾವಿನ ತವರುಮನೆ ಎಂದು ಭಾವಿಸಲಾಗುತ್ತದೆ. ಇಂಥ ತಾಣಗಳಲ್ಲಿ ಮನುಷ್ಯ ವಸತಿಯಿರಬಹುದೆಂದು ಊಹಿಸುವಂತೆಯೂ ಇಲ್ಲ. ಆದರೆ ಆದಿವಾಸಿಗಳು ಇಂಥ ಕಡೆಗಳಲ್ಲೂ ನೂರಾರು ವರ್ಷಗಳಿಂದ ವಾಸಿಸುತ್ತ ಬಂದಿದ್ದಾರೆ. ಅವರು ಹೊರ ಜಗತ್ತಿಗೆ ಅನಾಮಿಕರು. ಇಂಥ ತಾಣಗಳಲ್ಲಿರುವ ಆದಿವಾಸಿಗಳಿಗೆ ವಿಜ್ಞಾನಿಗಳು 'ದುರ್ಗಮ' ಎಂದು ಹೆಸರಿಸಿದ್ದಾರೆ.

ಯಾವ ಆದಿವಾಸಿಗಳು ಜನರೊಂದಿಗೆ ಬೆರೆತು-ಹೋಗಿ-ಬರುತ್ತಾರೋ, ಯಾವ ಆದಿವಾಸಿಗಳ ಬಳಿಗೆ ನಾವು ಹೋಗಿ-ಬರುತ್ತೇವೋ, ಯಾವ ಬಹುಸಂಖ್ಯಾತ ಆದಿವಾಸಿಗಳು ದೇಶದಲ್ಲಿರುವ ಗಿರಿ-ಗಹ್ವರಗಳಲ್ಲಿ ಪಸರಿಸಿದ್ದಾರೋ ಅವರನ್ನು ಶಾಸ್ತ್ರೀಯ ಭಾಷೆಯಲ್ಲಿ 'ಸುಗಮ' ಎಂಬ ಹೆಸರಿದೆ. ಈ ವರ್ಗವು ಹಿಮಾಲಯ, ಅಸಾಮ, ವಿಂಧ್ಯ, ಸಾತಪುಡಾ, ಸಹ್ಯಾದ್ರಿ ಮತ್ತು ಪೂರ್ವದ ಘಟ್ಟ ಪ್ರದೇಶಗಳಲ್ಲಿ ಗುಂಪು ಗುಂಪಾಗಿ ನೆಲೆಸಿದ್ದಾರೆ. ಈ ಸಮುದಾಯದಲ್ಲಿಯ ಕೆಲವು ಜಾತಿಗಳು (ಮಧ್ಯ ಪ್ರದೇಶದ ಭಂಜಿಯಾ, ಕುಮಾರ, ಮುಂ.) ಉಳಿದವರಿಂದ ನಿರ್ಲಿಪ್ತವಾಗುಳಿದು, ನೂರಾರು ವರ್ಷಗಳಿಂದ ನಡೆಯುತ್ತ ಬಂದ ಆಚಾರವನ್ನು ಯಥಾವತ್ತಾಗಿ ಪಾಲಿಸುತ್ತ ಬಂದಿರುವುದನ್ನು ಕಾಣಬಹುದಾಗಿದೆ. ಆದರೆ ಈ ವರ್ಗ ತೀರ ಚಿಕ್ಕದು. ಬಹುಸಂಖ್ಯಾತ ಆದಿವಾಸಿಗಳು ವಾಸಿಸುವ ಬೆಟ್ಟ, ಠಾಣೆ ಜಿಲ್ಲೆ ಮತ್ತು ಡಾಂಗ್ ಪ್ರದೇಶದಂತೆ ಸುತ್ತಲೂ ಬಯಲು ಪ್ರದೇಶದಂತೆ ಆವರಿಸಿಕೊಂಡಿದೆ. ಎಲ್ಲ ಬಗೆಯ ಬೌದ್ಧಿಕ ಮತ್ತು ಯಾಂತ್ರಿಕ

ಸಂಸ್ಕೃತಿಯು ಬೆಳೆಯುತ್ತ ಇರುತ್ತದೆ. ಸಂತೆಯ ವ್ಯಾಪಾರದಿಂದ ನಗರ ಹಾಗೂ ಗ್ರಾಮೀಣ ರೈತ ಸಂಸ್ಕೃತಿಯ ಪರಿಣಾಮವು ಹಗಲಿರುಳು ಆಗುತ್ತಿರುತ್ತದೆ. ಈ ಹಿಂದೆ ಈ ಸಂಬಂಧವು ಹಳ್ಳಿಗಳಿಗೆ ಮಾತ್ರ ಸೀಮಿತವಾಗಿತ್ತು. ಈಗಲೂ ಸಹ ಹಲವು ಆದಿವಾಸಿ ಜನರು ತಮ್ಮ ಜಿಲ್ಲೆಯ ದೊಡ್ಡ ನಗರಗಳನ್ನು ನೋಡಿರುವುದಿಲ್ಲ. ಆದರೆ ಕಾಡು ಕಡಿಯುವ ಸುತ್ತಿಗೆ ಪದ್ಧತಿಯಿಂದಾಗಿ, ಸಾಹುಕಾರಿ ಪದ್ಧತಿಯಿಂದಾಗಿ ಮತ್ತು ಮದ್ಯದಂಗಡಿಗಳ ವ್ಯಾಪಾರದಿಂದಾಗಿ ಆದಿವಾಸಿಗಳ ಪ್ರದೇಶಗಳಲ್ಲಿ ನಗರವಾಸಿಗಳು ಸಹಜವಾಗಿ ಓಡಾಡಲಾರಂಭಿಸಿದರು. ಧರ್ಮದಿಂದಾಗಿ ಮಿಶನರಿಗಳು ನುಗ್ಗಿದರು. ಇದರಿಂದಾಗಿ ಸುತ್ತಮುತ್ತಲಿನ ಹಳ್ಳಿಗಳ ಸಂಸ್ಕೃತಿಯ ಮತ್ತು ಸ್ವಾಭಾವಿಕ ವರ್ಚಸ್ಸಿನ ಪ್ರಭಾವವು ಆದಿವಾಸಿಗಳ ಮೇಲೆ ಪ್ರಾಚೀನ ಕಾಲದಿಂದಲೂ ಇತ್ತೋ ಅದು, ಮತ್ತು ಈ ಎರಡೂ ಪ್ರಕಾರದ ಜನ ಸಮೂಹಗಳ ಮೇಲೆ, ಆಚಾರ ವಿಚಾರಗಳ ಮೇಲೆ ಇಬ್ಬರಿಗೂ ಹಿತಕಾರಕವಾಗಿದ್ದ ದೀರ್ಘಕಾಲೀನ ಸಾಂಸ್ಕೃತಿಕ ಐಕ್ಯವಿತ್ತೋ ಅದು ಬಿರುಕು ಬಿಟ್ಟಿತು. ಇಂದು ಗೋಚರಿಸುವ ವಿಕೃತ ರಾಜಕೀಯ ನಿಲುವು ಅದರಿಂದೇ ಉತ್ಪನ್ನಗೊಂಡಿರುವಂತಹದು.

ಸಾಂಸ್ಕೃತಿಕ ವ್ಯವಹಾರ : ಈವರೆಗೆ ಸುತ್ತಮುತ್ತಲಿನ ಯಾವ ಗ್ರಾಮ ಸಂಸ್ಕೃತಿ ಇತ್ತೋ, ಅದು ಉಚ್ಚ ಹಿಂದೂ ಸಂಸ್ಕೃತಿಯಲ್ಲಿ, ಹಾಗೆಯೇ ಆದಿವಾಸಿ ಸಂಸ್ಕೃತಿಯಲ್ಲೂ ಸಮಾವೇಶಗೊಂಡಿರುವಂತಹದಾಗಿತ್ತು. ಈ ಎರಡೂ ಸಂಸ್ಕೃತಿಗಳು ಪರಸ್ಪರಾವಲಂಬಿಯಾಗಿದ್ದರೂ ಗ್ರಾಮಗಳ ಉಚ್ಚ ಸಂಸ್ಕೃತಿಯು ಆದಿವಾಸಿ ಸಂಸ್ಕೃತಿಗಳ ಮೇಲೆ ಬೀರಿದ ಪರಿಣಾಮವು ಆಳ, ದೃಢ ಅಷ್ಟೇ ಸಹಜವೂ ಆಗಿತ್ತು. ಈ ಎರಡೂ ಸಂಸ್ಕೃತಿಯ ಸಮ್ಮಿಳನ ಫಲವು ಹಿಂದೂ ಸಂಸ್ಕೃತಿಗೆ ಏಕತೆಯನ್ನು ನೀಡಿ ಗಟ್ಟಿಗೊಳಿಸುವಂತಹದಾಗಿತ್ತು. ಏಕೆಂದರೆ ಈ ಸಮ್ಮಿಳನವು ಇಬ್ಬಗೆಯದೂ, ಸ್ವಯಂಸ್ಫೂರ್ತಿಯದೂ ಆಗಿತ್ತು. ಅದರಲ್ಲಿ ಬಲವಂತ ಇರಲಿಲ್ಲ. ಹಿಂದೂ ಪುರಾಣ ಮತ್ತು ಸಾಮಾಜಿಕ ರೀತಿ ರಿವಾಜನ್ನು ಗಮನಿಸಿದಿರೆಂದರೆ, ನಮ್ಮ ಹಲವು ಧಾರ್ಮಿಕ ಮತ್ತು ಸಾಮಾಜಿಕ ಆಚಾರ ವಿಚಾರಗಳ ಮೂಲ ಬೇರು ಆದಿವಾಸಿಗಳ ಕಥೆಗಳಲ್ಲಿ, ರಿವಾಜುಗಳಲ್ಲಿ ಸಿಗುತ್ತವೆ.

ಆದಿವಾಸಿ ರಾಜರು : ಇಷ್ಟಾಗಿಯೂ ಹಿಂದೂಗಳ ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ಆದಿವಾಸಿಗಳಿಗೆ ಹಿಂದಿನ ಶೂರ ಪುಳಿಂದರು, ಶಬರ ಮುಂತಾದ ಕಾಡು ಜಾತಿಗಳನ್ನು ಬ್ರಾಹ್ಮಣರಾಗಲಿ, ಕ್ಷತ್ರಿಯ, ವೈಶ್ಯರಾಗಲಿ ಎಲ್ಲೂ ಸಮಾನತೆಯಿಂದ ಸಂಬೋಧಿಸಲಿಲ್ಲ. ಅವರನ್ನು ಶೂದ್ರರೆಂದು ಪರಿಗಣಿಸಲಾಗಿತ್ತೋ, ಏನೋ ಯಾರಿಗ್ಗೊತ್ತು; ಆದರೆ ಧರ್ಮಶಾಸ್ತ್ರದಲ್ಲೆಲ್ಲೂ ಹಾಗೆ ಸ್ಪಷ್ಟವಾದ ಉಲ್ಲೇಖವಿಲ್ಲ. ಅವರನ್ನು ಎಂದೂ ಅಸ್ಪೃಶ್ಯರೆಂದು ಪರಿಗಣಿಸಲಾಗಿರಲಿಲ್ಲ ಎನ್ನುವದೂ ಅಷ್ಟೇ ಸತ್ಯ. ಒಟ್ಟಿನಲ್ಲಿ ಹಿಂದೂ ಸಮಾಜವು ಭಿಲ್ಲರನ್ನು ಶಬರರನ್ನು

ತುಚ್ಛವಾಗಿ ನೋಡಿಕೊಂಡಿದ್ದು ಕಂಡುಬರುತ್ತದೆ. ವಿರಳವಾಗಿ ಹಿಂದೂ ರಾಜರು ಅವರನ್ನು ನಿರ್ದಯತೆಯಿಂದ ನೋಡಿದ್ದೂ ಕಂಡುಬರುತ್ತದೆ. ಉದಾ: ಪೇಶ್ವೆಯರು ಮಾಡಿದ ಭಿಲ್ಲರ ಕಗ್ಗೊಲೆ. ಆದರೂ ಕಾಡು ಜಾತಿಯು ಹತ್ತಿಕ್ಕಿ ತುಳಿಯುವ ಜಾತಿಯಲ್ಲ ಎಂದು ಹಿಂದೂರಾಜರು ಮೊದಲಿನಿಂದಲೂ ಗುರುತಿಸಿದ್ದರು. ಭಿಲ್ಲರು, ಶಬರರು ಲೂಟಿಕೋರರೂ, ಕಾದಾಡುವ ವೀರರೂ ಎಂಬ ಖ್ಯಾತಿಯಿತ್ತು. ಗೋಂಡರು ಕಾತಕರಿಗಳು (ಒಂದು ಜಾತಿ) ಮಾಂತ್ರಿಕರೆಂದು ಪ್ರಸಿದ್ಧರಾಗಿದ್ದರು. ಅವಕಾಶ ಸಿಕ್ಕರೆ ಕ್ಷತ್ರಿಯರಂತೆ ಕೆಚ್ಚೆದೆಯ ವೃತ್ತಿಯ ಈ ಜನರು ರಾಜ್ಯವನ್ನು ವಶಪಡಿಸಿಕೊಳ್ಳುವಂತಹರಾಗಿದ್ದರು. ಭಿಲ್ಲರು, ಮುಂಡಾ, ಗೋಂಡ ಮತ್ತು ಅಂಬಿಗರು ತಮ್ಮ ತಮ್ಮ ಪ್ರಾಂತಗಳಲ್ಲಿ ತುಲ್ಯಬಲವಾದ ರಾಜ್ಯವನ್ನು ನಿರ್ಮಿಸಿದರಿಂದ ಈ ಅನುಭವವು ಮುಸಲ್ಮಾನ ರಾಜರಿಗೂ ಬಂದಿತ್ತು. ಹೀಗಾಗಿ ಬಹುಸಂಖ್ಯಾತ ಹಿಂದೂಗಳು ಮತ್ತು ಮುಸಲ್ಮಾನರೂ ಆದಿವಾಸಿಗಳು ಬಂಡೇಳುವವರು, ಸೇಡು ತೀರಿಸಿಕೊಳ್ಳುವವರು ಎಂದುಕೊಂಡು ಭಯದಿಂದ ಇರುತ್ತಿದ್ದರು. ಪ್ರಸಂಗ ಬಂದರೆ ಅವರನ್ನು ಗೌರವದಿಂದಲೂ ಕಾಣುತ್ತಿದ್ದರು. ಎಲ್ಲಿ ಆದಿವಾಸಿ ರಾಜರು ಆಳಿದರೂ ಅಲ್ಲಿ ಹಿಂದೂ ಆದಿಯಾಗಿ ಎಲ್ಲ ವರ್ಣದವರು ಅವರ ಅಧಿಕಾರವನ್ನು ಸಂತೋಷದಿಂದ ಒಪ್ಪಿದರು. ಅವರ ಸೇವೆಯನ್ನು ಖುಷಿ ಹಾಗೂ ಶ್ರದ್ಧೆಯಿಂದ ಮಾಡಿದರು. ಅವರನ್ನು ಸಾಮಾನ್ಯ ರಾಜರೆಂದೇ ಪರಿಗಣಿಸಲಾಗುತ್ತಿತ್ತು. ಆದರೆ ಅವರ ಧಾರ್ಮಿಕ ಆಚಾರ ಮಾತ್ರ ಕುಲಾಚಾರದಂತೆ ಕೇವಲ ಕುಟುಂಬದವರಿಗಷ್ಟೇ ಸೀಮಿತವಾಗಿದ್ದು ನಿರ್ಲಿಪ್ತವಾಗಿ ನೆರವೇರಿಸಲಾಗುತ್ತಿತ್ತು. ಉಳಿದ ಸಾರ್ವಜನಿಕ ಸ್ವರೂಪದ ಗ್ರಾಮದೇವತೆಯ ಪೂಜೆಯಂತೆ ಆಯಾ ಪ್ರಾಂತದ ಪೂರ್ವಾಪರ ರೂಢಿಯಂತೆ ಜರುಗುತ್ತಿತ್ತು. ಭಿಲ್ಲ, ಗೋಂಡ ಮತ್ತು ಅಂಬಿಗ ಮುಂತಾದ ಆದಿವಾಸಿ ಜಾತಿಯ ರಾಜರಿಂದಾಗಿ ಹಿಂದೂ ಸಮಾಜದಲ್ಲಿ ಆದಿವಾಸಿಗಳ ಸ್ಥಾನ ಎತ್ತರವಾಯಿತು. ಆರ್ಥಿಕ ಮತ್ತು ಸಾಮಾಜಿಕ ಬಾಬತ್ತಿನಲ್ಲಿ ಅವರು ರಾಜ್ಯವನ್ನು ಕಳಕೊಂಡರೂ ಅವರು ರಾಜಮನೆತನದ ಕುಟುಂಬವಾಗಿ ಉಳಿದವು. ಅವರ ಸ್ಥಾನಮಾನವಂತೂ ತಾಣದ ರೈತಾಪಿ ಜನರಿಗಿಂತ ಎಷ್ಟೋ ಪಟ್ಟು ಶ್ರೇಷ್ಠವಾಗಿರುತ್ತದೆ. ಮನೆಯಲ್ಲಿ ಕಡು ಬಡತನವಿದ್ದರೂ ಮನೆತನದ ವರ್ಚಸ್ಸು ಇರುತ್ತದೆ. ಈ ಬಗೆಯಲ್ಲಿ ಆದಿವಾಸಿಗಳಲ್ಲಿ ಯಾವ ಜಾತಿಯಲ್ಲೂ ಮಹತ್ವಾಕಾಂಕ್ಷೆ ಮತ್ತು ಸ್ವಂತ ಭವಿತವ್ಯವನ್ನು ಉಜ್ವಲಗೊಳಿಸಬೇಕೆಂಬ ಪ್ರಯತ್ನವಿತ್ತೋ, ಅಂಥವರನ್ನು ಹಿಂದೂ ಸಮಾಜದಲ್ಲಿ ಸೇರ್ಪಡೆ ಮಾಡಿಕೊಳ್ಳಲಾಯಿತು. ಅಂಥವರಲ್ಲಿ ಕೆಲವರು ಅಂದರೆ ಭಿಲ್ಲರ, ಗೋಂಡರ ನೆಂಟಸ್ತಿಕೆಯು ಕ್ಷತ್ರಿಯರೊಂದಿಗೆ ನಡೆಯಿತು. ಗೋಂಡರಾಣಿ ದುರ್ಗಾದೇವಿಯ ವಂಶವು ಸಮ್ಮಿಶ್ರ ರಕ್ತದ್ದೇ ಆಗಿತ್ತು. ಮಹಾರಾಷ್ಟ್ರದ ಸಂಪೂರ್ಣ ಅಂಬಿಗ ಜಾತಿಯವರು ಮೂಲದಲ್ಲಿ ಆದಿವಾಸಿಗಳೇ ಆಗಿದ್ದರು ಎಂದರೆ

ಯಾರಾದರೂ ನಂಬಬಹುದೇ? ಆ ಜಾತಿ ಈಗ ಶುದ್ಧ ಹಿಂದುವಾಗಿದ್ದರೆ, ಬಿಹಾರ, ಒರಿಸ್ಸಾದ ಅವರ ಪೂರ್ವಕಾಲದ ಬಂಧುಗಳು ಮಾತ್ರ ಆದಿವಾಸಿಗಳೇ ಆಗಿ ಉಳಿದರು. ಕುರುಬರ ಸ್ಥಿತಿಯೂ ಹೀಗೇ. ಒಟ್ಟಿನಲ್ಲಿ ಭಾರತದಲ್ಲಿಯ ಪಶುಪಾಲಕ ಉದ್ಯೋಗದ ಬಗೆಗೆ ಯೋಚಿಸಿದಿರಿ ಎಂದರೆ, ಮೇಯಿಸುವ ಜಾತಿಯವರು ಅವರ ಆರಂಭದ ಅಲೆಮಾರಿತನದಿಂದಾಗಿ ಇತರ ಜಾತಿಗಳಲ್ಲಿ ಬೇಗ ಸೇರ್ಪಡೆಗೊಂಡರು. ಅದರಿಂದಾಗಿ ಗೋಪಾಲಕರ ವಿಶಿಷ್ಟ ಪೂರ್ಣ ಸಂಸ್ಕೃತಿಯು ಜನ್ಮತಾಳಿತು. ಹಿಂದೂ ಸಂಸ್ಕೃತಿಯ ಮೇಲೆ ಗೋಪಾಲ ಸಂಸ್ಕೃತಿಯ ಪರಿಣಾಮ ಎಷ್ಟು ಆಳವಾಗಿ ಆಗಿದೆ ಎನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಈ ಗೌಳಿ ಸಂಸ್ಕೃತಿಯಿಂದಾಗಿಯೆ, ಹಿಂದೂಸ್ತಾನದಲ್ಲಿ ಕೃಷಿ ಜೀವನದ ಸಂಸ್ಕೃತಿಯು ಸ್ಥಿರಗೊಂಡಿತು ಮತ್ತು ಬೆಳೆಯಿತು. ಶಿವ ಮತ್ತು ಅವನ ನಂದಿ, ಕೃಷ್ಣ ಮತ್ತು ಅವನ ಗೋವು ಹೀಗೆ ಶೈವ ಮತ್ತು ವೈಷ್ಣವ ಪಂಥದ ಅವಿಭಾಜ್ಯ ಮತ್ತು ಮಧುರ ಸಂಗಮವು ಕೃಷಿ ಜೀವನದ ಆಚಾರ–ವಿಚಾರಗಳಲ್ಲಿ ಕಾಣಬರುತ್ತದೆ. ಬಿಹಾರ, ಒರಿಸ್ಸಾದ ಗಡಬರ ಹಿಂದುಳಿದ 'ಅರ್ಧ ಆದಿವಾಸಿ' ಜಾತಿಯನ್ನು ನೋಡಿ ಅಥವಾ ನಮ್ಮಲ್ಲಿಯ ಬಾಗಲಾಣ ಮಾಣದೇಶದ ಧನಗರ ಅವರನ್ನು ನೋಡಿ ಇವರನ್ನು ಹಿಂದೂಗಳಲ್ಲವೆಂದು ಯಾರಾದರೂ ಅನ್ನಬಹುದೇ? ಈ ಉದಾಹರಣೆ ನೀಡುವ ಉದ್ದೇಶವೇನೆಂದರೆ ಕೇವಲ ಜಾತಿಯಷ್ಟೇ ಅಲ್ಲ, ಉಪಜೀವಿತದ ವೃತ್ತಿಯಿಂದಾಗಿಯೂ ಮೂಲ ಆದಿವಾಸಿಯಾಗಿದ್ದ ಎಷ್ಟೋ ಜಾತಿಗಳು ನೂರಾರು ವರ್ಷಗಳಿಂದ ಹಿಂದೂಗಳೇ ಆಗಿದ್ದು, ಅವರು ಆದಿವಾಸಿಗಳೊಂದಿಗೆ ಹೊಂದಿರುವ ಸಂಬಂಧ ಕಳಚಿಹೋಗಿದೆ ಅಥವಾ ತಾತ್ಕಾಲಿಕವಾಗಿ ಉಳಿದುಕೊಂಡಿದೆ. ಹಾಗಿದ್ದರೂ ಸಹ, ಕ್ರಮೇಣವಾಗಿದ್ದರೂ ಖಚಿತವಾಗಿ ಮತ್ತು ಶತಶತಮಾನಗಳ ಸ್ಥಿತ್ಯಂತರದಿಂದಾಗಿ ಇವತ್ತಿಗೂ ಆದಿವಾಸಿ ಹಾಗೂ ಹಿಂದೂಗಳ ನಡುವೆ ಯಾವುದೇ ಸಂಘರ್ಷ ನಡೆದಿಲ್ಲ. ಸಾನಿಧ್ಯದಿಂದಾಗಿ ದುರ್ಬಲ ಸಂಸ್ಕೃತಿಯು ಉಚ್ಚ ಸಂಸ್ಕೃತಿಯಲ್ಲಿ ವಿಲೀನಗೊಳ್ಳುವುದು ಸ್ವಾಭಾವಿಕ, ಅದರಲ್ಲೂ ಈ ಸಾಂಸ್ಕೃತಿಕ ವ್ಯವಹಾರವು ಒಮ್ಮುಖವಾಗಿರದೆ, ಕೊಡುಕೊಳ್ಳುವ ಸ್ವರೂಪದ ಮತ್ತು ಆಯಾಕಾಲದ ಅಗತ್ಯಕ್ಕೆ ಅನುಗುಣವಾಗಿ ಆಯಾ ಜನರು ಸ್ವಸಂತೋಷದಿಂದ ಸ್ವೀಕರಿಸಿದ್ದರು. ಅದರಿಂದಾಗಿ ಅದು ಶಾಶ್ವತವಾಯಿತು. ಈ ರೀತಿ ಯಾವುದೇ ಬಗೆಯಲ್ಲಿ ಬಲವಂತ ಮಾಡದೇ ಎಲ್ಲೆಲ್ಲಿ ಸಮಾನಶೀಲ ಮತ್ತು ಆಕರ್ಷಕ ಆಚಾರ ಕಾಣಸಿತ್ತೋ ಅಲ್ಲೆಲ್ಲ ಅದನ್ನು ಹಿಂದೂ ಸಮಾಜವು ಹಸ್ತಗತ ಮಾಡಿಕೊಂಡಿತು. ಈ ಕಾರಣದಿಂದಾಗಿಯೇ ಹಿಂದೂ ಸಮಾಜದಲ್ಲಿ ಅತ್ಯಂತ ಪರಸ್ಪರ ವಿರೋಧಿಯಾದ ಆಚಾರಗಳು ಒಂದರೊಳಗೊಂದು ಸೇರಿಕೊಂಡಿರುವುದನ್ನು ಕಾಣುತ್ತೇವೆ. ರೂಢಿಯೂ ಪ್ರಾಬಲ್ಯವೂ ಗೋಚರಿಸುತ್ತದೆ.

ಒಟ್ಟಿನಲ್ಲಿ ಏನೆಂದರೆ, ಪಾಶ್ಚಾತ್ಯ ವರ್ಚಸ್ಸು ಶಾಶ್ವತವಾಗಿ ಉಳಿಸಲು ಮನುಷ್ಯರನ್ನು ಕದ್ದೊಯ್ಯುವ ವಿದ್ಯೆಯನ್ನು ಬಳಕೆಗೆ ತಂದ ಮಿಶನರಿಗಳ ತಂತ್ರ ನಮಗೆ ತೀರ ಅಪರಿಚಿತವೂ ಅನಾವಶ್ಯಕವೂ ಆಗಿತ್ತು. ಮಿಶನರಿಗಳ ಧೂರ್ತತನದಿಂದ 'ಹಿಂದೂ ಆದಿವಾಸಿಗಳ ವೈರತ್ವ' ಎಂಬ ಕೃತ್ರಿಮ ವಿಚಾರ ಅಸ್ತಿತ್ವಕ್ಕೆ ಬಂತು. ಅದು ರಾಜಕಾರಣದಲ್ಲೂ ಚಾಣಾಕ್ಷತನದಿಂದ ಸೇರ್ಪಡೆಯಾಯಿತು. ಹೀಗಾಗಿ ಯಾವ ಆದಿವಾಸಿಗಳು ಕ್ರೈಸ್ತ ಅಥವಾ ಮುಸಲ್ಮಾನರಾದರೋ ಅವರು ಸ್ವತ್ವವನ್ನು ಕಳಕೊಂಡರು. ಉಳಿದ ಜಾತಿಗಳಲ್ಲಿ ಅವರ ಆಚಾರ ವಿಚಾರ ರೂಢಿಯಂತೆ ಮುಂದುವರೆದಿದೆ!

ಸಾಂಸ್ಕೃತಿಕ ವೈಶಿಷ್ಟ್ಯ : ಆದಿವಾಸಿಗಳಲ್ಲಿ ಮೂರು ಬಗೆಯ ಸ್ಥೂಲ ವೈಶಿಷ್ಟ್ಯವನ್ನು ಗುರುತಿಸಲಾಗುತ್ತಿದೆ. ಸೂರ್ಯೋಪಾಸನೆ, ಹಂದಿ ಮಾಂಸದ ಧಾರ್ಮಿಕ ಮಹತ್ವ, ಹಾಡು-ಕುಣಿತದ ಐಹಿಕ ಸುಖೋಪಭೋಗಕ್ಕಾಗಿ ಮತ್ತು ಸಂಕಟದ ನಿವಾರಣೆಗಾಗಿ ದೈವವನ್ನು ಖುಷಿಪಡಿಸುವ ಮಹತ್ವ

ಹಿಂದೂಗಳ ಸಹವಾಸ ಹೆಚ್ಚು ಇದ್ದಲ್ಲಿ, ಸುಧಾರಿಸಿದ ಆದಿವಾಸಿಗಳು ಹಂದಿಯ ಮಾಂಸವನ್ನು ತ್ಯಜಿಸಿದ್ದಾರೆ. ಅದೇ ರೀತಿ ಗೋಂಡ ಮುಂತಾದ ಕೆಲವು ಜಾತಿಗಳಲ್ಲಿ ಗೋವು ಬಲಿಯನ್ನು ಶ್ರಾದ್ಧದ ಕಾಲಕ್ಕೆ ನೀಡುವ ಪದ್ಧತಿಯಿದೆ. ಈಗ ಅದೂ ಸಹ ಹಲವೆಡೆ ಸ್ಥಗಿತಗೊಂಡಿದೆ. ಎಮ್ಮೆಯ ಜೋಪಾಸನೆ, ಉಪಾಸನೆ ಮಾಡುವ ನೀಲಗಿರಿಯ ತೋಡರು ಅದರದ್ದೇ ಬಲಿ ನೀಡಿ ಪಿತೃಪೂಜೆಯನ್ನು ಮಾಡುತ್ತಾರೆ. ಈ ಕೆಲವು ಕಾರಣದಿಂದಾಗಿ ಅವರ ಮತ್ತು ಹಿಂದೂಗಳ ಮಿಲನವಾಗುವದು ದುಸ್ತರವಾಗಿದೆ. ಆದಿವಾಸಿ ಮತ್ತು ಹಿಂದೂಗಳನ್ನು ಸಾಂಸ್ಕೃತಿಕವಾಗಿ ಅವಿಭಾಜ್ಯವಾಗಿಸುವ ಒಂದು ಧಾರ್ಮಿಕ ವಿಧಿಯಿದೆ-ಅದೆಂದರೆ ಪಿತೃಪೂಜೆ. ಹಿಂದೂ ಮತ್ತು ಆದಿವಾಸಿಗಳ ಯಾವುದೇ ಹಬ್ಬಗಳ ಮತ್ತು ಪೂಜೆಯನ್ನು ಸೂಕ್ಷ್ಮವಾಗಿ ಪೃಥಕ್ಕರಣ ಮಾಡಿದರೆ ಆ ಉತ್ಸವದ ಮೂಲದಲ್ಲಿ ಯಾವುದಾದರೂ ಮೃತರ ಶಾಂತಿ ಮತ್ತು ನೆನಪಿರುತ್ತದೆ. ಈ ಬಗೆಯಲ್ಲಿ ವಿಭೂತಿ ಪೂಜೆಯ ವಿಶಿಷ್ಟ ಪದ್ಧತಿಯು ಆಸೇತು ಹಿಮಾಚಲದವರೆಗೆ ಪ್ರಸ್ತಾಪಿತಗೊಂಡಿದೆ. ಪಿತೃಪೂಜೆಯ ಜೊತೆಗೇ ಕರ್ಮ ಮತ್ತು ಪುನರ್ಜನ್ಮದ ತತ್ವಜ್ಞಾನವು ಹಿಂದೂ ಮತ್ತು ಆದಿವಾಸಿಗಳಲ್ಲಿ ಯಥಾವತ್ತಾಗಿದೆ. ಯಾರು ಯಾರಿಂದ ಏನು ಪಡೆದರು ಎಂದು ಹೇಳುವುದಾದರೂ ಹೇಗೆ?

ಸಂಘರ್ಷದ ಒಂದು ಪುರಾವೆ : ಆದಿವಾಸಿಗಳಿಗೂ ಹಿಂದೂಗಳಿಗೂ ಪರ್ಯಾಯವಾಗಿ ಬ್ರಾಹ್ಮಣರಿಗೂ ವೈರತ್ವವಿರುವ ಏಕೈಕ ಪುರಾವೆಯು ನನಗೆ ಮಧ್ಯ ಪ್ರದೇಶದ ರಾಯಪುರ ಜಿಲ್ಲೆಯ ಒಂದು ಪರಿತ್ಯಕ್ತ ದೇಗುಲದಲ್ಲಿ ಲಭಿಸಿತು. ಭುಂಜಿಯಾ ಎಂಬ ಒಂದು ಚಿಕ್ಕ ಜಾತಿಯಿದೆ. ಎರಡು ಸಾವಿರ ಜನ

ವಸತಿಯಿರಬೇಕು. ಅವರು ಕರ್ಮಠರೂ, ಕ್ರೂರಿಗಳೂ ಎಂದು ಜನರು ಅಂದುಕೊಂಡಿದ್ದಾರೆ. ಅವರು ತಮ್ಮ ಜಾತಿಯ ಹೊರತು ಬೇರೆ ಯಾರೊಂದಿಗೂ ಸೇರುವುದಿಲ್ಲ. ಹೀಗಾಗಿ ಅವರ ಬಗೆಗೆ ಯಾರಿಗೂ ಏನೂ ಗೊತ್ತಿಲ್ಲ. ಮಹಾನದಿಯ ಪರಿಸರದಲ್ಲಿ ಅವರೇ ಕೆತ್ತಿ ನಿರ್ಮಿಸಿದ ಬಮಿನಿನ್ ದೇವತೆ ಎಂಬ ಒಂದು ದೇಗುಲವಿದೆ. ಅದ ಪಿತೃಪೂಜೆಯ ತಾಣ. ಸುತ್ತಮುತ್ತಲಿನ ಹಲವು ದಿನ್ನೆಗಳಿಗೂ ಇದೇ ಹೆಸರಿದೆ. ಅಲ್ಲಿ ಈ ಮೊದಲು ನರಬಲಿಯ ಪದ್ಧತಿಯಿತ್ತು. ನಾನು ಕಂಡ ತಾಣದ ಮಹತ್ವವೇನೆಂದರೆ ಅಲ್ಲಿ ಕಬ್ಬಿಣದ ಢೋಲು ಇದೆ. ಅದನ್ನು ಒಂದು ಬಂಡೆಯ ಮೇಲೆ ಮಗುಚಿ ಇಡಲಾಗಿದೆ. ಹಿಂದೆ ಬ್ರಾಹ್ಮಣನನ್ನು ಕೊಂದು ಅವನ ಎದೆಯ ತೊಗಲನ್ನು ಕಿತ್ತಿ ತೆಗೆದು, ಅದನ್ನೇ ಢೋಲಿಗೆ ಉಪಯೋಗಿಸಿ ಭುಂಜಿಯಾ ಜನರು ದೇವತೆಗಳನ್ನು ಸಂತುಷ್ಟಗೊಳಿಸುತ್ತಿದ್ದರು. (ಇಂದಿಗೂ ಹಿಂದೂ ಜನರು ಅಲ್ಲಿ ಕಾಲಿಡಲು ಹಿಂಜರಿಯುತ್ತಾರೆ.) ಆದರೆ ಒಬ್ಬ ಬ್ರಾಹ್ಮಣ ಮಾಂತ್ರಿಕನು ಅವರ ವಿದ್ಯೆಯನ್ನೇ ಅವರಿಗೆ ತಿರುಗಿಸಿ ಆ ಡೋಲನ್ನು ತುಂಬಿ ಮಗುಚಿ ಇಟ್ಟಿದ್ದಾನೆ. ಯಾರು ಅದನ್ನು ಸ್ಪರ್ಶಿಸಿ ಬ್ರಾಹ್ಮಣನನ್ನು ಕೊಲ್ಲುತ್ತಾನೋ ಅವನು ನಿರ್ವಂಶವಾಗುವನು ಎಂದು ಘೋಷಣೆ ಹಾಕಿದ್ದಾನೆ. ಭುಂಜಿಯಾ ಜನರು ಆ ತಾಣವನ್ನು ತೊರೆದಿದ್ದಾರೆ. ಇಂದಿಗೂ ಆ ಢೋಲು ಮತ್ತು ಮನುಷ್ಯರನ್ನು ಕೊಲ್ಲುವ ಆ ಭಯಂಕರ ಹತ್ಯಾರುಗಳು ಅಲ್ಲಿ ಎಷ್ಟೋ ವರ್ಷಗಳಿಂದ ತುಕ್ಕು ಹಿಡಿದು ಬಿದ್ದಿವೆ. ಆದರೆ ನನಗೆ ಈ ಉದಾಹರಣೆಯನ್ನು ಹಿಂದೂ ಆದಿವಾಸಿಗಳ ವೈಮನಸ್ಸಿನ ಉತ್ತಮ ಉದಾಹರಣೆಯಾಗಿ ಬಳಸಬೇಕೆಂದೆನಿಸುವುದಿಲ್ಲ. ಏಕೆಂದರೆ ಭುಂಜಿಯಾಗಳು ಗೋಂಡರೊಂದಿಗೆ ಇಂತಹದೇ ವೈರತ್ವವನ್ನು ಹೊಂದಿದ್ದಾರೆ ಎಂದು ಚರಿತ್ರೆ ಹೇಳುತ್ತದೆ. ಕಮಾರ ಎಂಬ ಬಡ ಆದಿವಾಸಿಗಳ ಜೀವವನ್ನು ಅವರು ಹಿಂಡುತ್ತಿದ್ದಾರೆ. ಇದರ ಪರಿಣಾಮವೇನಾಯಿತೆಂದರೆ [ಯಾವ ಜಾತಿಗಳು ಹಿಂದೂಗಳೊಂದಿಗೆ ಉತ್ತರೋತ್ತರ ಏಕರೂಪವನ್ನು ಹೊಂದುತ್ತ ನಡೆದವೋ ಆ ಜಾತಿಯೂ ಸಂಖ್ಯೆಯಿಂದ ಬಲಿಷ್ಠಗೊಂಡಿತು. ಭುಂಜಿಯಾದಂತಹ (ಕಮಾರದಂಥವರು ಕೂಡ) ಅಲ್ಪಸಂಖ್ಯಾತ ಜಾತಿಯು ಹಠ ಹಿಡಿದು ನಿರ್ಲಿಪ್ತವಾಗುಳಿಯಿತೋ ಅವು ಮಾತ್ರ ವಿನಾಶದ ಅಂಚಿನಲ್ಲಿವೆ. ಅವರನ್ನು ಯಾರೂ ರಕ್ಷಿಸುವಂತಿಲ್ಲ. ಆದ್ದರಿಂದ ನಿರ್ಲಿಪ್ತವಾಗುಳಿದ ಆದಿವಾಸಿಗಳೇ ಏಳ್ಗೆ ಹೊಂದುತ್ತಾರೆ ಎಂದು ಎಲ್ವಿನ್ ಸಿದ್ಧಾಂತ ಹೇಳುತ್ತದೆ. ಹಿಂದೂಗಳೊಂದಿಗೆ ಸಮಾವೇಶಗೊಂಡ ಜಾತಿಗಳು ದುರ್ದಶೆ ಹೊಂದುವುದು ಖಚಿತ (ನೋಡಿ The Loss of Nerves, The Baiga ಇತ್ಯಾದಿ).]

ಆದಿವಾಸಿಗಳ ಭವಿತವ್ಯ : ಭಾರತದಲ್ಲಿಯ ಆದಿವಾಸಿಗಳ ಭವಿತವ್ಯವು ಅಮೆರಿಕೆಯ ರೆಡ್ ಇಂಡಿಯನ್‌ರಂತೆ ಇಲ್ಲವೇ ಟೆಸ್ಮೆನಿಯನ್‌ರಂತೆ ಅಥವಾ

ಆಫ್ರಿಕೆಯ ಪಿಗ್ಮಿಗಳಂತೆ ಆಗಬಹುದೇ? ಬಿಳಿಯ ಅಮೆರಿಕನ್‌ರು ರೆಡ್ ಇಂಡಿಯನ್ನರನ್ನು ಬೇರುಸಹಿತ ಉಚ್ಚಾಟನೆ ಮಾಡಿದರು. ಬಿಳಿಯರ ಆಕ್ರಮಣದಿಂದ ನೂರಾರು ಟೆಸ್ಮೆನಿಯರ್‌ರು ಆತ್ಮಹತ್ಯೆ ಮಾಡಿಕೊಂಡರು. ಅದರಿಂದಾಗಿ ಒಬ್ಬ ಟೆಸ್ಮೆನಿಯನ್ ಆದಿವಾಸಿಯೂ ಜೀವಂತವಾಗಿ ಉಳಿದಿಲ್ಲ. ಪಿಗ್ಮಿಗಳೂ ವಿದೇಶಿ ಬಿಳಿಯ ಸಂಸ್ಕೃತಿಯ ದೌರ್ಜನ್ಯದಿಂದ ನಾಮಾವಶೇಷಗೊಂಡರು. ಹಾಗೆಯೇ ಹಿಂದೂಗಳ ಆಕ್ರಮಣದಿಂದಾಗಿ ಈ ಬಡ ಅಮಾಯಕ ಕಾಡು ಜಾತಿಯವರ ಗತಿಯಾಗಬಹುದೇ ಎಂಬ ಭೂತದಯೆಯ ಕರೆಯನ್ನು ಕೆಲವು ಶಾಸ್ತ್ರಜ್ಞರು, ಚಿಂತಕರು ನೀಡಿದ್ದಾರೆ. ಆದರೆ ಈ ಕರೆಯು ಮೇಲೆ ಉಲ್ಲೇಖಿಸಿದ ಒಂದು ರಾಜಕೀಯ ಲಹರಿಯ ಒಂದು ಬೆದರುಗೊಂಬೆಯಾಗಿದೆ.

ಹಿಂದೂ ಮತ್ತು ಆದಿವಾಸಿ ಸಂಸ್ಕೃತಿಯ ಏಕರೂಪವನ್ನು ಗಮನಿಸಿದಿರಿ ಎಂದರೆ, ಹಿಂದೂಗಳ ಆಕ್ರಮಣವು ಬಿಳಿಯರ ಆಕ್ರಮಣಕ್ಕಿಂತ ಎಷ್ಟು ಭಿನ್ನವಾಗಿದೆ ಎನ್ನುವುದು ಸಹಜವಾಗಿ ಕಾಣಬರುತ್ತದೆ. ಹಿಂದೂ ಸಂಸ್ಕೃತಿಯ ವೈಶಿಷ್ಟ್ಯವೇನೆಂದರೆ ಅದರಲ್ಲಿಯ ಮೂಲದ ಉದಾರತೆಯಿಂದಾಗಿ ಅದು ಚಿಕ್ಕ ಚಿಕ್ಕ ಜಾತಿಯವರಿಗೂ ನಿರ್ಲಿಪ್ತವಾಗಿ ಸುಖವಾಗಿ ಬದುಕಲು ಅವಕಾಶ ಮಾಡಿಕೊಟ್ಟಿತು. ಹಿಂದೆ ದೊಡ್ಡ ಪ್ರಮಾಣದಲ್ಲಿ ಹಿಂದೂಗಳದ್ದೇ ರಾಜ್ಯವಿದ್ದರೂ ಕಾಡುಜಾತಿ ಸುರಕ್ಷಿತವಾಗುಳಿಯಿತು. ಮುಂದೆ ಮುಸಲ್ಮಾನರ ಮತ್ತು ಪಾಶ್ಚಾತ್ಯರ ಆಡಳಿತದಲ್ಲಿ ಹಿಂದೂಗಳ ರಾಜಕೀಯ ಪ್ರಭಾವ ನಾಶಗೊಂಡಾಗ, ಈಗ ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವ ತತ್ವದಿಂದಾಗಿ ಸಂಪೂರ್ಣ ನಿಯಂತ್ರಣಗೊಂಡಿರುವಾಗ ಆದಿವಾಸಿಗಳ ಮೇಲೆ ಅವರ ಅನಿಷ್ಟ ಆಕ್ರಮಣವಾಗಬಹುದೆಂಬ ಭಯವೇಕೆ? ಅಮೆರಿಕಾ ಆಫ್ರಿಕಾ ಮತ್ತು ಟೆಸ್ಮಾನಿಯಾದಲ್ಲಿಯ ಜಾತಿಗಳು ನಾಶಗೊಂಡವು, ಏಕೆಂದರೆ ಬಿಳಿಯರ ಸಂಸ್ಕೃತಿಯೂ ಅವರಿಗಿಂತ ತೀರ ಭಿನ್ನವಾಗಿತ್ತು. ಆ ಜನರನ್ನು ಮಣಿಸಲು ಬಂದೂಕಿನ ತಂತ್ರವನ್ನು ಮುಕ್ತವಾಗಿ ಬಳಸಿದರು. ಭಾರತದಲ್ಲಿ ಹಾಗೆಲ್ಲಾಗಿದೆ?

ಒಟ್ಟಿನಲ್ಲಿ ಆದಿವಾಸಿಗಳ ಭವಿತವ್ಯವು ಬಹುಸಂಖ್ಯಾತ ಭಾರತೀಯರಿಗಿಂತ ಭಿನ್ನವಾಗಿದೆ. ತೀರಾ ಕಠಿಣವೂ ಆಗಿಲ್ಲ. ಹಿಂದುಳಿದವರಿಗೆ ಸಿಕ್ಕ ಬೆಂಬಲ ಅವರಿಗೂ ಸಿಕ್ಕರೆ ಮತ್ತು ಕಾಡು ಬೆಳೆಸುವ ನಮ್ಮ ಧೋರಣೆಯೂ ಖಚಿತಗೊಂಡರೆ ಈ ಜಾತಿಯವರು ದೇಶಕ್ಕೆ ಭಾರವಾಗಲಿ, ಹೊರೆಯಾಗಲಿ ಆಗದೆ ಉಪಯೋಗವೇ ಆಗುತ್ತಾರೆ.

(ಕಲ್ಪನಾ, ದೀಪಾವಳಿ ಸಂಚಿಕೆ, ೧೯೫೦)

* * * *

೩. ಧರ್ಮ ಮತ್ತು ವಾಮಾಚಾರ ಹಾಗೂ ಪರಂಪರೆ

ಧರ್ಮ ಮತ್ತು ವಾಮಾಚಾರ ಈ ಎಡರಲ್ಲೂ ಮಂತ್ರಗಳ ಹಾಗೂ ಪರಿಹಾರದ ಬಳಕೆ ಮಾಡಲಾಗುತ್ತದೆ. ಜಾದೂವಿನ ಮಂತ್ರ ಇಲ್ಲವೇ ಪರಿಹಾರವನ್ನು ಕೆಲವೊಮ್ಮೆ ಸ್ವಂತ ಮಂಗಲದ ಕಾಮನೆಗಾಗಿ, ಕೆಲವೊಮ್ಮೆ ಶತ್ರುವಿನ ಕಾಮನೆಯನ್ನು ಬಯಸುವದಾಗಿರುತ್ತದೆ. ಒಂದೇ ಆರಾಧ್ಯ ದೇವತೆಯನ್ನು ಉದ್ದೇಶಿಸಿ ಪ್ರಾರ್ಥನೆ, ಆತ್ಮಮಂಗಲ ಮತ್ತು ಪರನಾಶವನ್ನು ಸಾಧಿಸುವ ಫಲಿತದ ಅಪೇಕ್ಷೆಯಿರುತ್ತದೆ. ಇಂಥ ಮಂತ್ರಗಳ ಉಪಲಬ್ಧವಿವೆ. ಇಂಥ ಮಂತ್ರದಲ್ಲಿ ಧರ್ಮ ಮತ್ತು ಮಾಟಮಂತ್ರದ (ಅಭಿಚಾರ) ಸೀಮಾ ರೇಖೆಯನ್ನು ನಿರ್ಧರಿಸುವುದು ಸಾಧ್ಯವಿಲ್ಲ. ಸಂಹಿತಾ ಸಾಹಿತ್ಯ ಇದಕ್ಕೆ ಸಾಕ್ಷಿ. ಹಾಗಾದರೆ ಎಲ್ಲ ಸಾಹಿತ್ಯವನ್ನು ಧಾರ್ಮಿಕ ಅಥವಾ ಅಭಿಚಾರಿಕ ಎಂದು ಭಾವಿಸಬೇಕೆ ಎಂಬ ಪ್ರಶ್ನೆಯು ಕಾಡುತ್ತದೆ. ಇದರ ಬಗೆಗೆ ನಿರ್ಣಯ ತೆಗೆದುಕೊಳ್ಳುವದು ಕಷ್ಟಸಾಧ್ಯವಾಗಿದ್ದರೂ ಅಸಾಧ್ಯವೇನಿಲ್ಲ. ಎಲ್ಲಿ ಮೂಲ ಪ್ರೇರಣೆಯು ವಿಶ್ವಮಂಗಲ ಮತ್ತು ಆತ್ಮಮಂಗಲವಾಗಿರುತ್ತದೆಯೋ ಅಲ್ಲಿ ಪದವಿನಾಶದ ಆಕಾಂಕ್ಷೆಯು ಈ ಬೃಹತ್ ಮಂಗಲಕ್ಕಿಂತ ಕಡಿಮೆಯಿರುತ್ತದೆ. ಅಲ್ಲಿ ಅದರ ಕಾರ್ಯವು ಆ ಮುಖ್ಯ ಉದ್ದೇಶಕ್ಕೆ ಕೇವಲ ಮಾರಕ ಮತ್ತು ಪ್ರೇರಕವಾಗಿರುತ್ತದೆ. ಯಾವುದರಲ್ಲಿ ಆತ್ಮ ಕಲ್ಯಾಣದ ಭಾವನೆಯು ಇರುವದೋ ಅದರಲ್ಲಿಯ ಭಾವನೆಯು ಹೀನತೆಯ ದ್ಯೋತಕವಾಗಿರುವದಿಲ್ಲವೋ ಆಗ ಇಂಥ ಇಬ್ಬಗೆಯ ಮಂತ್ರ ಸಾಹಿತ್ಯವನ್ನು ಧರ್ಮದಲ್ಲಿ ಸೇರಿಸಲು ಅಡ್ಡಿಯಿಲ್ಲ. ರಾಕ್ಷಸ, ಭೂತ, ಪಿಶಾಚ, ಪಿಶುನ್ (ದುಷ್ಟ), ಶತ್ರು ಮತ್ತು ರೋಗಕಾರಕ ಶಕ್ತಿಯ ನಾಶ ಮಾಡಲು ಪ್ರಾಯಃ ಮಾಟ ಮಂತ್ರದ ಉಪಯೋಗ ಮಾಡಲಾಗುತ್ತದೆ. ಮಾನವ ಕಲ್ಯಾಣ ವಿಧ್ವಂಸನಾತ್ಮಕ ಪ್ರವೃತ್ತಿಯನ್ನು ನಿಯಂತ್ರಿಸುವುದೇ ಈ ಅಭಿಚಾರಿಕ ಸಾಹಿತ್ಯದ ಮುಖ್ಯ ಉದ್ದೇಶವಾಗಿದೆ. ಧರ್ಮದ ನಿಷೇಧಾತ್ಮಕ ಭಾಗವಾಗಿರುತ್ತದೋ ಅದಕ್ಕೆ ಪೂರಕವಾದ ಕಾರ್ಯವನ್ನು ಈ ಅಭಿಚಾರಿಕ ಮಂತ್ರ ಇಲ್ಲವೇ ಪರಿಹಾರವನ್ನು ಮಾಡುತ್ತಿರುತ್ತದೆ. ಅಂದರೆ ಧಾರ್ಮಿಕ ಮತ್ತು ಅಭಿಚಾರಿಕದಂತಹ ಉಭಯ ವಿಧ ಉದ್ದೇಶವನ್ನು ಈ ಶುಭ ಅಭಿಚಾರಿಕ ಮಂತ್ರಗಳ ಮೂಲಕ ಸಾಧಿಸಲಾಗುತ್ತದೆ. ಸಂಹಿತೆಯಲ್ಲಿ 'ಅಸುರ', 'ಮಾಯೆ', 'ಮಾಯಾವಿನ್' ಎಂಬ ಶಬ್ದವನ್ನು ಈ ಉಭಯವಿಧ ಸಂದರ್ಭದಲ್ಲಿ ಬಳಸಲಾಗಿರುವುದು ಸ್ಪಷ್ಟ. ಮಂತ್ರವು, ಅದು ಬೇಕಾದರೆ ಕೇವಲ ಧಾರ್ಮಿಕವಾಗಿರಲಿ, ಧರ್ಮಪೂರಕ ಅಭಿಚಾರಿಕವಾಗಿರಲಿ

ಇಲ್ಲವೇ ಕೇವಲ ವಿನಾಶಕಾರಿಯಾಗಿರುವ 'ಕೃತ್ಯ' ಇಲ್ಲವೇ 'ಕೃತ್ಯಾ ಸ್ವರೂಪ' ಅಂದರೆ ಮಾಟದ್ದಾಗಿರಲಿ, ಅದನ್ನು ವಿಧಿಗೆ ಜೋಡಿಸಲಾಗುತ್ತದೆ. ಒಂದೇ ಮಂತ್ರವನ್ನು ಕಲ್ಯಾಣಪ್ರದ ವಿಧಿಗೆ ಜೋಡಿಸಿದರೆ ಅದನ್ನು ಶುಭವೆಂದು ಒಪ್ಪಲಾಗುವುದು. ಆದರೆ ಅದೇ ಮಂತ್ರವನ್ನು ವಿಧಿಯ ಕ್ರಿಯೆಯನ್ನು ಬದಲಾಯಿಸಿ ಇಲ್ಲವೇ ಅದೇ ಕ್ರಿಯೆಯನ್ನು ವಿರುದ್ಧ ರೀತಿಯಲ್ಲಿ ಬಳಸಿದರೆ ಆ ಕೃತ್ಯದ ಫಲಿತವೂ ಸಹ ವಿಪರೀತವೇ ಆಗುತ್ತದೆ. ಒಂದು ಮಂತ್ರವನ್ನು ಯೋಗ್ಯವಾಗಿ ಬಳಸಿದರೆ ಅದರ ಫಲ ಶುಭ ಮತ್ತು ಉಲ್ಟಾ ಹೇಳಿದರೆ ಅದರ ಫಲ ಅಶುಭವಾಗಿರುತ್ತೆ. ಈ ಬಗೆಯಲ್ಲಿ ಮಂತ್ರಗಳ ಪರಿವರ್ತನೆಯಾಗಬಾರದೆಂದು ತಂತ್ರವಾಙ್ಮಯದಲ್ಲಿ ಬೀಜಾಕ್ಷರಯುಕ್ತ ಮಂತ್ರವನ್ನು ಬಳಸಿದ್ದು ಕಂಡುಬರುತ್ತದೆ. ಅಕ್ಷರಗಳ ಬಿಗಿಯಾದ ಬಂಧನದಲ್ಲಿ ಈ ಮಂತ್ರವನ್ನು ಕುಂದಣದ ಹರಳಿನಂತೆ ಕೂರಿಸಲಾಗುತ್ತದೆ. ವೇದದಲ್ಲೂ ಅಕ್ಷರದ ಮೇಲಿನ ಆಘಾತ ಸ್ವರದಲ್ಲಿಯ ವ್ಯತ್ಯಾಸ ಇದರಿಂದಾಗಿ ಮಂತ್ರದ ಅರ್ಥದ ಅನರ್ಥವಾಗುತ್ತಿರುತ್ತದೆ. ಹೀಗಾಗಿ ಮಂತ್ರೋಚ್ಚಾರಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ. 'ಇಂದ್ರಾಯ ಸ್ವಾಹಾ, ತಕ್ಷಕಾಯ ಸ್ವಾಹಾ' ಎಂಬ ವಾಕ್ಯ ಪ್ರಯೋಗವು ಮಂತ್ರದಲ್ಲಿಯ ಆಹುತಿ ದೇವತೆಗಳ ಗೊಂದಲ ಹೇಗಾಗುತ್ತದೆ ಮತ್ತು ಮಂತ್ರದ ಉಚ್ಚಾರಣೆಯು ಸರಿಯಾಗಿ ಆಗದಿದ್ದರೆ ಇಷ್ಟಫಲ ಹೇಗೆ ಲಭಿಸುವುದಿಲ್ಲ ಎಂಬುದರ ದ್ಯೋತಕವಾಗಿದೆ. ಯಾವುದು ಇಂದ್ರನಿಗೆ ಉದ್ದೇಶಿಸಿ ಹೇಳಲಾಗಿದೆಯೋ ಅದು ದೇವತಾ ಸಂವಾಹಿಕ ವಾಕ್ಯವೆಂದರ್ಥ ಧರ್ಮಮಯ ಸೂಕ್ತ ಅಥವಾ ಮಂತ್ರವಾಗಿದೆ. ಆದರೆ ತಕ್ಷಕನ ಆವಾಹನೆ ಮಾಡುವ ವಾಕ್ಯವು ಮೂಲತಃ ಅಭಿಚಾರಕವಾಗಿದೆ. ಎಲ್ಲಿ ಇಂದ್ರ ಮತ್ತು ತಕ್ಷಕ ಎಂಬೆರಡು ಪರಸ್ಪರ ಶತ್ರುವಾಗಿರುವವರನ್ನು ಕೂಡಿಯೇ ಆವಾಹನೆ ಮಾಡಿದಾಗ ಅಲ್ಲಿ ಕಲ್ಯಾಣಪ್ರದವಾಗಿರುವ ಇಂದ್ರನ ಬಲವು ಕುಗ್ಗಿ, ತಕ್ಷಕನದು ಬೆಳೆಯುತ್ತದೆ. ಅಂದರೆ ಇಷ್ಟಫಲ ಇಲ್ಲಿ ಧರ್ಮ ಪೂರಕವಾಗಿರುವುದಿಲ್ಲ. ಧರ್ಮಸ್ಥಿತಿಯು ಅಭಿಚಾರ ಸಿದ್ಧಿಗಿಂತ ಕಡಿಮೆಯಾಗಿ ಮಿಶ್ರಫಲ ಬರುತ್ತದೆ.

ಸಂಹಿತೆಯಲ್ಲಿಯ ಮಂತ್ರ ಪರಂಪರೆಯಾಗಲಿ ಇಲ್ಲವೇ ತಂತ್ರದಲ್ಲಿಯ ಮಂತ್ರ ಪರಂಪರೆಯಾಗಲಿ ಅಭಿಜಾತ ಮಂತ್ರ ಪರಂಪರೆಯಾಗಿದೆ ಮತ್ತು ಧರ್ಮಸಾಧನೆಯೇ ಅದರ ಉದ್ದೇಶವಾಗಿದೆ. ಲೌಕಿಕ ಪರಂಪರೆಯಲ್ಲೂ ಈ ಉಭಯ ವಿಧ ಪರಂಪರೆಯ ಪ್ರತಿಧ್ವನಿಯು ಗೋಚರಿಸುತ್ತದೆ. ವಿಶೇಷವಾಗಿ ತಂತ್ರಪರಂಪರೆಯು ಲೌಕಿಕ ಪರಂಪರೆಯೊಂದಿಗೆ ನಿಕಟ ಸಂಬಂಧವನ್ನು ವಿಶೇಷವಾಗಿ ವ್ರತಾಚಾರದೊಂದಿಗೆ ಹೊಂದಿರುತ್ತದೆ. ಮೇಲಿನ ಪರಂಪರೆಯಲ್ಲಿ ಮಂತ್ರವು ಸಂಸ್ಕೃತದಲ್ಲೇ ಇರುತ್ತದೆ. ಆದರೆ ಲೌಕಿಕ ಪರಂಪರೆಯಲ್ಲಿ ಈ ಮಂತ್ರವು ಪ್ರಾಂತಕ್ಕೆ ಅನುಸರಿಸಿ ಭಿನ್ನವಾಗಿದ್ದು, ಅಭಿಜಾತ ಪರಂಪರೆಯಲ್ಲಿಯ

ಸಾರ್ವತ್ರಿಕತೆಯ ಅಭಾವ ಅದರಲ್ಲಿರುತ್ತದೆ. ಅಷ್ಟೇ ಅಲ್ಲ, ಅಭಿಜಾತ ಮಂತ್ರದಲ್ಲಿ ಸಾಂಪ್ರದಾಯಕತೆಯಿರುತ್ತದೆ. ಗುರುಪರಂಪರೆಯಿರುತ್ತದೆ. ಹಾಗದು ಈ ಲೌಕಿಕ ಮಂತ್ರದಲ್ಲಿ ಗೋಚರಿಸುವದಿಲ್ಲ. ಅಭಿಜಾತ ಪರಂಪರೆಯಂತೆ ಲೌಕಿಕ ಪರಂಪರೆಯಲ್ಲಿ ದೇವತಾ ಸಂವಾಹನವಿರುತ್ತದೆ. ಆದರೆ ಅಭಿಜಾತ ಪರಂಪರೆಯಲ್ಲಿ ಮತ್ತು ಇಲ್ಲಿ ಈ ದೇವತಾ ಸಂವಾಹನದಲ್ಲಿ ಒಮ್ಮೊಮ್ಮೆ ವ್ಯತ್ಯಾಸ ಕಂಡುಬರುತ್ತದೆ. ಅಭಿಜಾತ ಪರಂಪರೆಯಲ್ಲಿ ಇಂದ್ರ, ವರುಣ, ರುದ್ರ, ಅಗ್ನಿ ವಗೈರೆ ದೇವತೆಗಳನ್ನು ಪ್ರತ್ಯೇಕವಾಗಿಯೋ ಇಲ್ಲವೇ ಸಾಮೂಹಿಕವಾಗಿಯೋ ಸೂಕ್ತಗಳ ಮೂಲಕ ಆವಾಹನೆ ಮಾಡಲಾಗುತ್ತದೆ. ತಂತ್ರ ಪರಂಪರೆಯಲ್ಲಿ ಅನೇಕ ವಿಧ ಶಕ್ತಿ ದೇವತೆಗಳ ಆವಾಹನೆಯನ್ನು ಬೀಜಮಂತ್ರಗಳ ಮೂಲಕ ಮಾಡಲಾಗುತ್ತದೆ. ಮಾತೃಕೆ ಪೂಜೆಯು ತಂತ್ರ ಪರಂಪರೆಯ ಮುಖ್ಯ ವೈಶಿಷ್ಟ್ಯ. ಯಕ್ಷ ಗಣಪೂಜೆಯೂ ಸಹ ಆ ಪರಂಪರೆಯ ಒಂದು ಭಾಗವೇ ಆಗಿದೆ.

ಲೌಕಿಕ ಪರಂಪರೆಯು ತಾಂತ್ರಿಕ ಪರಂಪರೆಯ ಅನುಕರಣೆಯನ್ನು ಹೆಚ್ಚು ಹೆಚ್ಚಾಗಿ ಮಾಡಿದೆ. ಕ್ಷುದ್ರ ಉಪಾಸ್ಯ ದೇವತೆ, ಗಿಡಮರ, ಪಶುಪಕ್ಷಿಗಳ ಪೂಜೆಯು ಲೌಕಿಕ ಪರಂಪರೆಯಲ್ಲಿ ದೇಸಿ ಭಾಷೆಯಲ್ಲಿ ರಚಿಸಿದ ಪದ್ಯರೂಪ ಮಂತ್ರಗಳಲ್ಲಿ, ವಿಶಿಷ್ಟ ಪೂಜಾವಿಧಿ ಸಹಿತ ಸಂಪಾದಿಸಲಾಗುತ್ತದೆ. ತುಳಸಿಯ ಪೂಜೆಯು ಹೀಗೇ ಪ್ರಾಕೃತ ಪರಂಪರೆಯಿಂದ ಎತ್ತಿಕೊಂಡಿದ್ದು, ಕೊನೆಗೆ ಪೌರಾಣಿಕ ಪರಂಪರೆಯಲ್ಲಿ ಸ್ಥಿರವಾಯಿತು. ಅರಳಿ, ಆಲ, ಔದುಂಬರ, ವಗೈರೆ ಮರಗಳ ಬಗೆಗೆ ಏನು ಹೇಳಬಹುದೆಂದರೆ ವೈದಿಕ ಕಾಲದಿಂದಲೂ ಅದರ ಪೂಜೆ ಅಸ್ತಿತ್ವದಲ್ಲಿತ್ತು. ಪೂರ್ವ ವೈದಿಕ ಪರಂಪರೆಯಿಂದದು ವೈದಿಕ ಪರಂಪರೆಯಲ್ಲಿ ಸ್ಥಿರಗೊಂಡಿತು. ಈಗಲೂ ಸಹ ವೈದಿಕ ಪರಂಪರೆಯ ಸಹಾಯದಿಂದ ಪೌರಾಣಿಕ ಪರಂಪರೆಯಲ್ಲಿ ಮತ್ತು ತೀರ ಕೆಳಪ್ರಾಕೃತ ಸ್ತರದಿಂದ ಉನ್ನಯನಗೊಂಡು ಈ ಮರಗಳ ಪೂಜೆಯು ಲೌಕಿಕ ಪರಂಪರೆಯಲ್ಲಿ ಪ್ರಾಂತ–ಪ್ರಾಂತಗಳಲ್ಲಿ ಸ್ಥಿರಗೊಂಡಿದ್ದು ಕಂಡುಬರುತ್ತದೆ. ಯಾವ ಗಿಡಮರಗಳು ಪೌರಾಣಿಕ ಪರಂಪರೆಯಲ್ಲಿ ಸಾಕಷ್ಟು ಸಲ ಗೋಚರಿಸುವುದಿಲ್ಲವೋ ಅದನ್ನು ಲೌಕಿಕ ವ್ರತಗಳ ಸಹಾಯದಿಂದ ನಿರ್ದೇಶನ ಮಾಡಿದ್ದನ್ನು ಕಾಣಬಹುದಾಗಿದೆ. ಈ ಪದ್ಧತಿಯ ಮುಖ್ಯ ಆಧಾರವೆಂದರೆ ತಂತ್ರವಿದ್ಯೆ.

ತಂತ್ರವಿದ್ಯೆಯ ವಿಶೇಷ ಪ್ರಭಾವವು ಬಂಗಾಲದಲ್ಲಿರುವುದರಿಂದ ಬಂಗಾಲದಲ್ಲಿ ರೂಢಿಯಲ್ಲಿರುವ ವ್ರತಗಳಲ್ಲಿ ಹಲವು ಪಶು ಪಕ್ಷಿ, ವೃಕ್ಷ ಮತ್ತು ಪದಾರ್ಥಗಳನ್ನು ದೇವರೆಂದು ಭಾವಿಸಿ, ಅದರ ಆವಾಹನೆಯನ್ನು ಪ್ರಾಕೃತದ ಮೂಲಕ ಬಂಗಾಲಿಯಲ್ಲಿ ಮಾಡಿದ್ದು ಕಂಡುಬರುತ್ತದೆ. ಉದಾಹರಣೆಗಾಗಿ 'ಸೇಜುತಿ' ಎಂಬ ಅಗ್ರಹಾಯಣದಲ್ಲಿಯ ಕುಮಾರಿ ವ್ರತವನ್ನು ನೋಡಬಹುದು.

ಕುಮಾರಿಕೆಯರು ಈ ವ್ರತದ ಮೂಲಕ ಇಷ್ಟ ವರನನ್ನು ಪಡೆಯಲು ಬಯಸುತ್ತಾರೆ. ಈ ವ್ರತದಲ್ಲಿಯ ಹಲವು ಮಂತ್ರಗಳನ್ನು ಹುಲ್ಲು, ಕಬ್ಬು, ಬಿದಿರು, ಮುಂತಾದವುಗಳಿಗೆ ಉದ್ದೇಶಿಸಿ ಹೇಳಲಾಗುತ್ತದೆ.

ಉದಾ: ಒಬ್ಬ ಕುಮಾರಿಕೆಯು ತನ್ನ ಸೋದರನಿಗೆ ಐಶ್ವರ್ಯ, ಸನ್ಮಾನ ಸಿಗಲೆಂದು ಬಯಸುತ್ತಾಳೆ. ಅವಳ ಕಾಮನೆಯನ್ನು ಹಾಡುಗಳ ಮುಖಾಂತರ ವ್ಯಕ್ತಮಾಡಲಾಗಿದೆ..... ಪಿತ ಮತ್ತು ಸೋದರನ ಅಭ್ಯುದಯಕ್ಕಾಗಿ ಅಡಕೆಯ ಮರವನ್ನು ಉದ್ದೇಶಿಸಿ ಹೇಳಲಾದ ಮಾತುಗಳೂ ಇವೆ... ಬಿದಿರನ್ನು ಉದ್ದೇಶಿಸಿ ಇಂಥದೇ ಬೇಡಿಕೆಯನ್ನು ಮಾಡಲಾಗಿದೆ. ಅಷ್ಟೇ ಅಲ್ಲ, ಅದರಲ್ಲಿ ಇಂದ್ರ ಪೂಜೆ, ಸಾವಿತ್ರಿಯ ವ್ರತದ ಉಲ್ಲೇಖ ಸಹ ಇದೆ. ನಾನು ಅಂತರಂಗ ಶುದ್ಧಿಯಿಂದ ಇಂದ್ರನ ಪೂಜೆಯನ್ನು ಮಾಡುತ್ತೇನೆ. ನಾನು ಏಳು ಸೋದರರ ಸೋದರಿ ನಾನಾಗಲಿ. ನಾನು ಸಾವಿತ್ರಿಯಂತಾಗಲಿ.

ಇದರಲ್ಲಿ ಲೌಕಿಕ ವ್ರತವು ಪೌರಾಣಿಕ ಮತ್ತು ವೈದಿಕ ಪರಂಪರೆಯ ಆಧಾರದಿಂದ ಪಡೆದು ಸ್ವಂತ ಅಧಿಷ್ಠಿತ ದೈವವನ್ನು ಪ್ರತ್ಯೇಕವಾಗಿರಿಸಿ ಹೇಗೆ ಸ್ಥಿರಗೊಳ್ಳುತ್ತದೆ ಎನ್ನುವದು ಗಮನಿಸುವಂತಹದಾಗಿದೆ. ವೈದಿಕ, ಪೌರಾಣಿಕ ಮತ್ತು ಲೌಕಿಕ ಪರಂಪರೆಯ ಸಮ್ಮಿಳನವು ಇಂಥ ಸಂದರ್ಭದಲ್ಲಿ ಗೋಚರಿಸುತ್ತದೆ.

ಈ ಸಮ್ಮಿಳನದ ಮತ್ತೂ ಒಂದು ಬಗೆ ಈ ವ್ರತದಲ್ಲಿಯ ಶಿವಪೂಜೆಯ ಮಂತ್ರದಲ್ಲಿ ಗೋಚರಿಸುತ್ತದೆ. ಪ್ರಾಕೃತವನ್ನು ಸಂಸ್ಕೃತೀಕರಣ ಮಾಡಿ ವೈದಿಕ ಸ್ಮಾರ್ತ, ಪೌರಾಣಿಕ ಮತ್ತು ತಾಂತ್ರಿಕ ಪರಂಪರೆಯಿಂದ ಮಂತ್ರದ ಬಗೆಗಿನ ಯಾವ ಗಾಂಭೀರ್ಯವು ಗಿರ್ವಾಣ ಭಾಷೆಯ ಆಧಾರದಿಂದ ಅನುಭವಕ್ಕೆ ಬರುತ್ತದೋ ಆ ಗಾಂಭೀರ್ಯ ಮತ್ತು ಆ ಅಧಿಕಾರವನ್ನು ಈ ಪ್ರಾಕೃತ ಭಾಷೆಯ ಮಂತ್ರಗಳಿಗೆ ತಂದುಕೊಡುವ ಮೊದಲ ಪ್ರಯತ್ನವಿದು.

ಉದಾ: ಹೇ ಹರನೆ, ಶಂಕರನೆ, ದಿನಕರನೆ, ನಾಥನೇ ನಾನೆಂದೂ ಮೂರ್ಖರ ಕೈಗೆ ಸಿಕ್ಕಿ ಬೀಳಬಾರದು. 'ನಾಥ' ಎಂಬ ಸಂಸ್ಕೃತ ಪದದ ಲಿಂಗ, ವಿಭಕ್ತಿ ಮುಂತಾದವುಗಳನ್ನೆಲ್ಲ ಬದಲಾಯಿಸಿ, 'ಕೈ' ಎಂಬ ಪ್ರಾಕೃತ ಪದವನ್ನು ಸಂಸ್ಕೃತದಲ್ಲಿ ಉನ್ನಯನ ಮಾಡಿ. ಅಂ ಎಂಬ ಸದಾ ಸಂಸ್ಕೃತದಲ್ಲಿರುವ ಪ್ರತ್ಯಯದ ಬಳಕೆ ಅನುನಾಸಿಕದ ಮೂಲಕ ಗಾಂಭೀರ್ಯವನ್ನು ಸಾಧಿಸಲಾಗಿದೆ. ಅದೂ ಅಲ್ಲದೆ ಶಿವ ಮತ್ತು ಸೂರ್ಯ ಇವುಗಳ ಏಕೀಕರಣ ಮಾಡಿದ್ದನ್ನು ಈ ಮಂತ್ರದಲ್ಲಿ ಕಾಣಬಹುದು. 'ಹೇ ಹರ ಶಙ್ಕರ ದಿನಕರ ನಾಥಮ್ / ಕಖನೋ ನಾ ಪಡಿ ಏನ್ ಮೂರ್ಖೇರ ಹಾತಮ್'.

ಈವರೆಗೆ ನೋಡಿದ ಭಿನ್ನ ಪರಂಪರೆಯ ದೃಶ್ಯವು ಕೇವಲ ಮಂಗಲಾಕಾಂಕ್ಷೆಯ ಸ್ವರೂಪದಲ್ಲಿ ಈ ಮಾರಕ ವೃತ್ತಿಯ ಪೋಷಣೆಯಾದ

ಅಭಿಚಾರಿಕ ಮಂತ್ರವನ್ನು ನೋಡೋಣ. ಈ ಮಂತ್ರವೂ ಮೇಲಿನ ಮಂತ್ರದೊಂದಿಗೆ ಸಂಲಗ್ನವಾಗಿರುವುದು ವಿಶೇಷ. 'ಸವತಿಯಿರುವದೆಂದರೆ ಹೆಂಗಸರಿಗೆ ಸಾವು ಬಂದಂತೆ' ಈ ವೃತ್ತಿಯನ್ನು ಗಮನಿಸಿ. ಈ ಮಂತ್ರದಲ್ಲಿ ಸವತಿಯ ವಿನಾಶದ ಕಾಮನೆಯು ವ್ಯಕ್ತವಾಗಿದೆ. ಗಿಡಮರಗಳು, ಹಕ್ಕಿ, ಅಂಗಳ ಇವೆಲ್ಲವುಗಳಿಗೆ ಸವತಿಯನ್ನು ನಾಶ ಮಾಡುವಂತೆ ಆವಾಹನೆ ಮಾಡಲಾಗಿದೆ. ಉದಾ: 'ನಾನು ಅರಳಿ ಮರದಡಿಯಲ್ಲಿ ವಾಸಿಸುತ್ತೇನೆ. ಸವತಿಯನ್ನು ಕತ್ತರಿಸಿ ನಿರ್ಮೂಲನೆ ಮಾಡುತ್ತೇನೆ'. 'ಮೈನಾ ಮೈನಾ ನನಗೆ ಸವತಿಯಿರದಿರಲಿ' ಇತ್ಯಾದಿ.

ಈ ಬಗೆಯಲ್ಲಿ ಧಾರ್ಮಿಕ ಮಹತ್ವ ಮತ್ತು ಅಭಿಚಾರಿಕ ಮಂತ್ರದ ಪದರು ವೈದಿಕ, ಸ್ಥಾಪನ, ಪೌರಾಣಿಕ ಮತ್ತು ಲೌಕಿಕ ಪರಂಪರೆಯ ನಿರ್ದಿಷ್ಟ ಭಿನ್ನ ಭಿನ್ನ ಕಕ್ಷೆಯನ್ನು ದಾಟಿ ಒಂದರೊಳಗೊಂದು ಸೇರಿ ಹೋದದ್ದು ಲೌಕಿಕ ಪರಂಪರೆಯ ಕ್ಷೇತ್ರದಲ್ಲಿ ಹೇಗೆ ಗೋಚರಿಸುತ್ತದೆ ಎನ್ನುವದು ಸ್ಪಷ್ಟವಾಗಿ ಕಾಣಬರುತ್ತದೆ. ಕೇವಲ ವಿನಾಶದ ಉದ್ದೇಶದಿಂದ ಮಾಡಲಾದ ಹಲವು ಶಕ್ತಿ ಮತ್ತು ಭೂತ ಪಿಶಾಚಾದಿಗಳ ಆವಾಹನೆಯನ್ನು ಮಾಟಮಂತ್ರ ಎನ್ನಬಹುದು. ಅದು ಕೇವಲ 'ಕೃತ್ಯ' ಮೇಲೆ ಉಲ್ಲೇಖಿಸಿದ ಧರ್ಮವನ್ನು ಅನುಸರಿಸಿ ಮಾಡಲಾದ ಅಭಿಚಾರದಿಂದ ಅದು ಭಿನ್ನವಾಗಿರುತ್ತದೆ. ಅದಕ್ಕೂ ಪರಂಪರೆಯ ಯಾವುದೇ ಸ್ತರಕ್ಕೂ ಧರ್ಮದೊಂದಿಗೆ ಸಂಬಂಧವಿರುವುದಿಲ್ಲ.

ಪರೋಹಿತ, ಮಾಂತ್ರಿಕ, ಭಗತ, ದೇವರ್ಷಿ ಮುಂತಾದವರ ಸಂಬಂಧವು ಧಾರ್ಮಿಕ ಮತ್ತು ಅಭಿಚಾರಕ ವಿದ್ಯೆಯೊಂದಿಗಿದೆ. ಆದರೆ ಆ ಅಭಿಚಾರಕ ಸಂಬಂಧವು ತಾರಕ ಸ್ವರೂಪದ್ದಾಗಿದ್ದು ಅದರಲ್ಲಿಯ ಮಾರಕ ತತ್ವವು ಗೌಣವಾಗಿರುತ್ತದೆ. ಆದರೆ ಮಾಟವು ಕೇವಲ ಮಾರಕವಾಗಿರುತ್ತದೆ. ಅದರ ಸಂಬಂಧವು ಧಾರ್ಮಿಕ ವ್ಯವಹಾರದೊಂದಿಗಿರುವುದಿಲ್ಲ. ಅದರಲ್ಲಿ ಸಾಮಾಜಿಕಕ್ಕಿಂತ ವೈಯಕ್ತಿಕ ಉದ್ದೇಶಕ್ಕೆ ಪ್ರಾಧಾನ್ಯವಿರುತ್ತದೆ. ಮಾಟದ ವಿದ್ಯೆ ಮಾಡುವವರಿಗೆ ಮಾಂತ್ರಿಕನ ಸ್ಥಾನ ಎಂದೂ ಲಭಿಸಲಿಲ್ಲ.

(ಸತ್ಯಕಥೆ, ನವೆಂಬರ್ ೧೯೬೩)

(ಉದಾಹರಣೆಯನ್ನು ಡಾ. ವಿಜನವಿಹಾರಿ ಭಟ್ಟಾಚಾರ್ಯ ಅವರ ಸಮೀಕ್ಷೆ, ವ್ರತೇರ ಫಲ, ಪುಟ ೧೨ರಿಂದ ೫೨ರಿಂದ ಪಡೆಯಲಾಗಿದೆ.)

೪. ಅಮೆರಿಕೆಯ ಜಾನಪದ ಸಾಹಿತ್ಯದ ಅಧ್ಯಯನ : ಒಂದು ಟಿಪ್ಪಣಿ

ಅಮೆರಿಕೆಯ ಜಾನಪದ ಸಾಹಿತ್ಯದ ಅಧ್ಯಯನ ಕೈಕೊಳ್ಳುವಾಗ ಹಲವು ಮಹತ್ವದ ಸಂಗತಿಗಳು ಗಮನಕ್ಕೆ ಬರುತ್ತವೆ. ವಿಶೇಷವಾಗಿ ಅಮೆರಿಕನ್ ಅಧ್ಯಯನಕಾರರ ನಿಲುವು ಹಿಂದಿನ ಪಾಶ್ಚಾತ್ಯ ಅಧ್ಯಯನಕಾರರಿಗಿಂತ ಭಿನ್ನವಾಗಿರುವುದು ತಕ್ಷಣ ಗಮನಕ್ಕೆ ಬರುತ್ತದೆ. ಜಾನಪದ ಸಾಹಿತ್ಯವು ಮಾನವವಂಶದ ಒಂದು ಶಾಖೆಯಾಗಿದೆ. ಮತ್ತು ಅಲ್ಲಿಯ ವಾಙ್ಮಯ ವಿಷಯದ ಭಾಗವು ಸಾಹಿತ್ಯದ ಶಾಖೆಯಲ್ಲಿ ಸಮಾವೇಶಗೊಂಡಿರುತ್ತದೆ. ಆದರೂ ಈ ಸಾಹಿತ್ಯ ಸಹ ಮಾನವಶಾಸ್ತ್ರದ ಸಂಬಂಧದಿಂದ ಬಿಗಿಯಾಗಿ ಬಂಧಿಸಲ್ಪಟ್ಟಿರುತ್ತದೆ. ಈ ಕಾರಣದಿಂದಾಗಿ ಜಾನಪದ ಸಾಹಿತ್ಯದ ವಿದ್ವಾಂಸರು ಮಾನವ ಶಾಸ್ತ್ರಕ್ಕೆ ವಿಶೇಷ ಮಹತ್ವ ನೀಡಿದ್ದಾರೆ. ಮಾನವ ಶಾಸ್ತ್ರದ ಸಾಂಸ್ಕೃತಿಕ ವಿಭಾಗದಲ್ಲಿ ಜಾನಪದಕ್ಕೆ ಸ್ಥಾನವಿದೆ.

ಜಾನಪದ Folklore– ಈ ಹೆಸರಿನಲ್ಲಿರುವ ಸಂದಿಗ್ಧತೆಯ ಅರಿವು ವಿದ್ವಾಂಸರಿಗಾಗಿದೆ. ಜಾನಪದ ಎಂಬ ಒಂದೇ ಸಂಜ್ಞೆಯನ್ನು ಸಾಹಿತ್ಯ ಉರ್ಫ್ ಸಾಧನ ಸಾಮಗ್ರಿಗೆ ಮತ್ತು ಶಾಸ್ತ್ರಕ್ಕೆ ಬಳಸಲಾಗಿದೆ. ಈ ಸಂದಿಗ್ಧತೆಯು ನಿವಾರಣೆಯಾಗಿ ಹೊಸ ಸಂಜ್ಞೆಯು ಅಸ್ತಿತ್ವಕ್ಕೆ ಬರಬೇಕೆನ್ನುವ ಸಂಗತಿಯನ್ನು ಅವರು ಮಂಡಿಸುತ್ತಾರೆ. 'ಜಾನಪದ' ಎಂಬ ಸಂಜ್ಞೆಯನ್ನು ಸಾಹಿತ್ಯ ಸಾಮಗ್ರಿಗೆ ಬಳಸಬೇಕು ಮತ್ತು ಜಾನಪದ ಶಾಸ್ತ್ರ Folkloristics ಎಂಬ ಸಂಜ್ಞೆಯನ್ನು ವಿಜ್ಞಾನ ಶಾಖೆಗೆ ಬಳಸಬೇಕು ಎಂಬ ರೂಢಿಯು ಅಮೆರಿಕೆಯಲ್ಲಿ ಬಳಕೆಯಲ್ಲಿ ಬರುತ್ತಿದೆ. ಆದರೆ ಜಾನಪದ ಎಂಬ ಸಂಜ್ಞೆಯನ್ನು ಈಗಲೂ ಬಳಸಲಾಗುತ್ತಿದೆ. ಜಾನಪದ ಶಾಸ್ತ್ರವನ್ನು ಮಾತ್ರ ಅಮಾನ್ಯ ಮಾಡಲಿಲ್ಲ.

ಈ ಸಂದಿಗ್ಧತೆಯು ಕೇವಲ ಹೆಸರಿನ ಮಟ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ವಿಷಯದ ವ್ಯಾಖ್ಯೆಯಲ್ಲೂ ಅದು ಕಂಡುಬರುತ್ತದೆ. ಜಾನಪದ ಸಮರ್ಪಕ ವ್ಯಾಖ್ಯೆಯು ಲಭಿಸುವುದು ಅಸಂಭವವಾಗಿದೆ– ಎಂಬ ಟೀಕೆಯನ್ನು ವಿದ್ವಾಂಸರು ಮಾಡಿದ್ದಾರೆ. ಮಾರಿಯಾ ಲೀಚ್ ಅವರ "The Dictionary of Folklore, Mythology and Legend I, 1949" ಈ ಕೋಶದಲ್ಲೇ ಅಮೆರಿಕೆಯ

ಧೋರಣೆಯನ್ನು ವ್ಯಕ್ತಮಾಡಿದ್ದು ಕಂಡುಬರುತ್ತದೆ. ಈ ಕೋಶದಲ್ಲಿ ೩೨ ಅಮೆರಿಕನ್ ವಿದ್ವಾಂಸರು ವ್ಯಕ್ತಮಾಡಿದ ಜಾನಪದ ಸಾಹಿತ್ಯದ ಬಗೆಗಿನ ೨೧ ವ್ಯಾಖ್ಯೆಗಳು ಉಪಲಬ್ಧವಾಗಿವೆ. ಅಮೆರಿಕೇತರ ವಿದ್ವಾಂಸರ ಕೃತಿಯನ್ನು ನಿರ್ಲಕ್ಷಿಸುವ ವೃತ್ತಿಯನ್ನು ಇಲ್ಲಿ ನಮೂದಿಸಲಾಗಿದೆ. ಅಷ್ಟೇ ಅಲ್ಲ, ಈ ವಿದ್ವಾಂಸರ ವ್ಯಾಖ್ಯೆಯಲ್ಲೂ ಒಮ್ಮತವಿಲ್ಲ– ಎಂಬ ಟೀಕೆಯನ್ನು ಅನಂತರದ ಲೇಖಕರು ಮಾಡಿರುವುದು ಕಾಣಸಿಗುತ್ತದೆ.[2] ಫ್ರಾನ್ಸಿಸ್ ಲೀ ಉಟಲೇ ಇವರು ಈ ೩೨ ವ್ಯಾಖ್ಯೆಗಳ ಸಮೀಕ್ಷೆಯನ್ನು ಕೈಕೊಂಡಿದ್ದಾರೆ. ಮೊದಲಿಗೆ ಗಮನಿಸಬೇಕಾದ ಸಂಗತಿಯೇನೆಂದರೆ ಉಟಲಿಯವರು 'ಈ ಎಲ್ಲ ವ್ಯಾಖ್ಯೆಗಳಲ್ಲಿ ನಿಜವಾದ ವ್ಯಾಖ್ಯೆಯನ್ನು ನೀಡಲಿಲ್ಲ. ಇಲ್ಲಿ ಕೇವಲ ಜಾನಪದ ಸಾಹಿತ್ಯದಲ್ಲಿ ಸಮಾವೇಶಗೊಂಡ ವಿಷಯಗಳ ಅನುಕ್ರಮಣಿಕೆಯನ್ನು ನೀಡಲಾಗಿದೆ' ಎಂದು ಸ್ಪಷ್ಟವಾಗಿ ಹೇಳಲಿಲ್ಲ. ವಿಷಯಗಳ ಚರ್ಚೆ ಮಾಡುವಾಗ ಅವರು ಹೇಳುವುದೇನೆಂದರೆ ಹದಿನಾಲ್ಕು ಜಾನಪದ ವ್ಯಾಖ್ಯೆಯಲ್ಲಿ ಆದಿಮ ಸಮುದಾಯದ ಮತ್ತು ಸಭ್ಯ ಸಮುದಾಯದ ಉಪಸಂಸ್ಕೃತಿಯಲ್ಲಿಯ ವಿಷಯ ಸಾಮಗ್ರಿಯೂ ಸಮಾವೇಶಗೊಂಡಿದೆ. ಮತ್ತೆ ಆರು ವ್ಯಾಖ್ಯೆಯಲ್ಲಿ ಇದೇ ಕಲ್ಪನೆಗೆ ಮಹತ್ವ ನೀಡಲಾಗಿದೆ. ಆದರೆ ಇವುಗಳಲ್ಲಿ ನಾಲ್ಕು ವ್ಯಾಖ್ಯೆಯಲ್ಲಿ ಸಭ್ಯ ಸಮಾಜದಲ್ಲಿ ಜಾನಪದವು ಮುಖ್ಯವಾಗಿ ಗ್ರಾಮೀಣವಾಗಿರುತ್ತದೆ ಎಂಬ ನಿರ್ಣಯಕ್ಕೆ ಬರಲಾಗಿದೆ.

ಈ ವ್ಯಾಖ್ಯೆಯಲ್ಲಿ ಜಾನಪದದಲ್ಲಿ ಸಮಾವೇಶಗೊಂಡಿರುವ ವಿಷಯ ಹೀಗಿದೆ:

೧. ಸಾಹಿತ್ಯ ಮತ್ತು ಇತರ ಕಲೆ

೨. ನಂಬಿಕೆ, ಆಚಾರ ಮತ್ತು ವಿಧಿ ಕರ್ಮಗಳು

೩. ಹೆಣಿಕೆ, ಚಿಪ್ಪಾಡಿಯ ಹಾರದ ರಚನೆ ಮುಂತಾದ ಕಾರ್ಯ ಕೌಶಲ್ಯ

೪. ಭಾಷೆ ಇಲ್ಲವೆ ಆಡುಮಾತು

ಜಾನಪದ ಲಕ್ಷಣ ಮತ್ತು ವ್ಯಾಪ್ತಿಯ ಬಗೆಗೆ ಯೋಚಿಸುವಾಗ ಕೆಲವು ಪದಗಳ ಅರ್ಥವನ್ನು ಖಚಿತಗೊಳಿಸಬೇಕಾಗುತ್ತದೆ. ಏಕೆಂದರೆ ಈ ಪದಗಳು ಜಾನಪದದ ವ್ಯಾಖ್ಯೆಯಲ್ಲಿ ಆಗಾಗ ಬರುತ್ತವೆ. ಪದಗಳೆಂದರೆ 'ಜನ', 'ಪರಂಪರೆ', 'ಮೌಖಿಕ' 'ಸಂಕ್ರಮಣ' ಮತ್ತು ಉತ್ತರ ಜೀವಿತ್ವ (Survival) ಈ ಪದಗಳ ಅರ್ಥ ಮತ್ತು ಅದರಿಂದ ಸೂಚಿತವಾಗುವ ಕಾರ್ಯ ಮತ್ತು ಅದರ ವ್ಯಾಪ್ತಿ ಈ ಸಂಗತಿಯನ್ನು ಗಮನಿಸಬೇಕಾದ ಅಗತ್ಯವಿದೆ.

'ಜನ' ಎಂಬ ಪದವು ತೀರ ವಂಚನೆಯದು. ಅದರ ಖಚಿತ ವ್ಯಾಪ್ತಿಯನ್ನು ಹೇಳುವುದು ಕಷ್ಟ. ಆದರೂ 'ಜನ' ಈ ಪದವು ಸಮಾನ ಸಂಸ್ಕೃತಿಯಿರುವ

---

2 (Farnscis Lee Utley) American Folklorist (Onomastics).

ಮಾನವ ಸಮೂಹ ಎನ್ನುವದು ಸೂಚಿತವಾಗುತ್ತದೆ. ಈ ಸಮೂಹವು ಚಿಕ್ಕದೂ ಆಗಿರುತ್ತದೆ. ಇಲ್ಲವೇ ರಾಷ್ಟ್ರದಷ್ಟು ದೊಡ್ಡದೂ ಆಗಿರುತ್ತದೆ.

ಪರಂಪರೆಯಲ್ಲಿ ಮಾನವನಿರ್ಮಿತ ಕಲ್ಪನೆ ಮತ್ತು ಕೃತಿ ಇವುಗಳ ತಲೆಮಾರುಗಳಿಂದಾದ ಸಂಕ್ರಮಣ ಸೂಚಿತವಾಗುತ್ತದೆ. ಇದೇ ಸಂಸ್ಕೃತಿಯ ಸಂಕ್ರಮಣ ಜಾನಪದದ ವ್ಯಾಖ್ಯೆ ನಿರ್ಮಿಸುವಾಗ ಸಾಕಷ್ಟು ವಿದ್ವಾಂಸರು ಮೌಖಿಕ ಪರಂಪರೆಗೆ ಮಹತ್ವ ನೀಡುತ್ತಾರೆ. ಆದರೆ ಅಲಿಖಿತವಾದುದೆಲ್ಲವೂ ಜಾನಪದವಲ್ಲ. ಹಾಗೆಯೇ ಕೆಲವು ಲಿಖಿತವೂ ಜಾನಪದ ಎನಿಸಿಕೊಳ್ಳುತ್ತದೆ. ಹಲವು ಲಿಖಿತ ದೈವ ಕಥೆಗಳು ಜಾನಪದದಲ್ಲಿ ಸಮಾವೇಶಗೊಂಡಿರುವುದು ಕಾಣಬರುತ್ತದೆ.

ಜಾನಪದದಲ್ಲಿ ಏನೇನು ಸಮಾವೇಶಗೊಳಿಸಬಹುದು? ಈ ಪ್ರಶ್ನೆಯ ಉತ್ತರ ಹೀಗಿದೆ–ದೈವಕಥೆ, ದಂತಕಥೆ, ಜಾನಪದ ಕಥೆ, ಒಗಟು, ನಾಣ್ಣುಡಿ, ಒಡಪು, ಮಂತ್ರ, ಆಶೀರ್ವಾದ, ಶಾಪ, ಪ್ರತಿಜ್ಞೆ, ಅಪಮಾನದ ಮಾತು, ವ್ಯಂಗ್ಯ ಮಾತು–ಮುಂತಾದವುಗಳು ಸಮಾವೇಶಗೊಳ್ಳುತ್ತವೆ. ಇವೆಲ್ಲವೂ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳಾದವು. ಇದೂ ಅಲ್ಲದೆ ಪೋಷಾಕು, ನೃತ್ಯ, ನಾಟ್ಯ, ಕಲೆ, ನಂಬಿಕೆ, ವೈದ್ಯಕೀಯ ಉಪಚಾರ, ಸಂಗೀತ, ಜಾನಪದ ಹಾಡು, ರೂಪಕ, ಉಪಮೆ, ಹೆಸರು, ರೂಢನಾಮ, ಹಾಸ್ಯ, ಜೋಗುಳ, ಶಿಶುಗೀತೆ, ವ್ಯುತ್ಪತ್ತಿ, ಸಂಕೇತ, ಪ್ರತೀಕ, ಪ್ರಾರ್ಥನೆ, ಪಾಕಕಲೆ, ಹೋಲಿಗೆ ಕಲೆ, ಹೆಣಿಕೆ ಕಲೆ, ಮನೆ–ಕೊಟ್ಟಿಗೆ, ಪರಿಸರಗಳ ನಮೂನೆ, ಉತ್ಸವ, ಹಬ್ಬ, ವ್ರತ ಮತ್ತು ಎಲ್ಲ ಬಗೆಯ ಕರಕುಶಲಗಳು ಸಮಾವೇಶಗೊಂಡಿರುತ್ತವೆ.

ಇವುಗಳಲ್ಲಿ ಹಲವು ಪ್ರಕಾರಗಳ ಉದಾಹರಣೆಗಾಗಿ ದೈವಕಥೆ, ಜಾನಪದ ಕಥೆ, ಜಾನಪದ ನೃತ್ಯ ಮತ್ತು ನಾಟ್ಯಗಳ ಬಗೆಗೆ ಸ್ವತಂತ್ರವಾದ ವ್ಯಾಖ್ಯೆ ಮಾಡಬೇಕಾದ ಅಗತ್ಯವಿದೆ. ಹೀಗೆ ಅತ್ಯಂತ ಸಿಕ್ಕುಸಿಕ್ಕಾದ ಮತ್ತು ಮಾನವನ ಸಾಂಸ್ಕೃತಿಕ ಜೀವನವನ್ನು ಸ್ಥಾನಿಕ ಪಂಥದಿಂದ ಬದ್ಧಗೊಳಿಸುವ ವಿಷಯಗಳು ಜಾನಪದದಲ್ಲಿವೆ.

ಹಲವು ಜಾನಪದ ವಿದ್ವಾಂಸರ ಅಭಿಪ್ರಾಯವೇನೆಂದರೆ 'ಜಾನಪದವೆಂದರೆ ಪರಂಪರೆಯ ಜೀವಂತ ಪಾಷಾಣಭೂತ ಅವಶೇಷವಾಗಿದೆ. ಅಂದರೆ ಅದು ಉತ್ತರಜೀವಿ ಸಾಂಸ್ಕೃತಿಕ ಘಟಕವಾಗಿದೆ' ಇಂಥ ಟೈಲರ್ ಮುಂತಾದವರ ಅಭಿಪ್ರಾಯವನ್ನು ಅನುಸರಿಸುವ ಜಾನಪದ ವಿದ್ವಾಂಸರ ಮಾತು ಸತ್ಯವಲ್ಲ. ಜಾನಪದವು ಎಲ್ಲ ಕಾಲಕ್ಕೂ ನಿರ್ಮಾಣವಾಗುತ್ತಲೇ ಇರುತ್ತದೆ. ಶಾಲೆ, ವಿದ್ಯಾಲಯ, ಆಫೀಸುಗಳಲ್ಲಿ ನಿತ್ಯ ಹೊಸದಾದ ದಂತಕಥೆ, ಚೇಷ್ಟೆ, ಹಾಡುಗಳು ರಚನೆಯಾಗುತ್ತಿರುತ್ತವೆ. ಇದೆಲ್ಲವೂ ಜಾನಪದದಲ್ಲಿ ಸಮಾವೇಶವಾಗುತ್ತದೆ. ಆದರೆ ಈ ವಿಷಯ ವಿವಾದಾತ್ಮಕವಾಗಿದೆ. ಇದರ ಮಥಿತಾರ್ಥ ಇಷ್ಟೇ: ಈ ಅಮೇರಿಕನ್ ವಿದ್ವಾಂಸರಿಗೆ ಬ್ರಿಟಿಷರ ಸಿದ್ಧಾಂತವು ಒಪ್ಪಿಗೆಯಿಲ್ಲ–ಉತ್ತರ ಜೀವಿತ್ವ ಸಿದ್ಧಾಂತವನ್ನು

ಈಗವರು ಮೂಲೆಗುಂಪು ಮಾಡಿದ್ದಾರೆ.

ಎರಡನೆಯದೆಂದರೆ ಆಂಗ್ಲ ಪರಂಪರೆಯನ್ನು ಸದೆಬಡಿಯುವಾಗ ಅವರು ಮ್ಯಾಕ್ಸ್‌ಮುಲ್ಲರ್‌ನ ಸೂರ್ಯಸಿದ್ಧಾಂತವನ್ನು ಮೂಲೆಗುಂಪು ಮಾಡಿದ್ದಾರೆ. ಲಾಂಗಲ್‌ನನ್ನೂ ಸಂಪೂರ್ಣ ನಿರುಪಯುಕ್ತವೆಂದು ನಿರ್ಧರಿಸಿದ್ದಾರೆ. ಬೆಬಫೆಯ ಭಾರತವಾದಿ ಸಿದ್ಧಾಂತವು (ಇಂಡಿಯಾನಿಸ್ಟ್ ಥಿಯನ್) (Indologist) ಅವರಿಗೆ ಒಪ್ಪಿಗೆಯಿಲ್ಲ. ಪಂಚತಂತ್ರವು ನಾವು ಭಾವಿಸಿದಂತೆ ಪ್ರಾಚೀನ ಗ್ರಂಥವಲ್ಲ. ಯೂರೋಪದ ಪ್ರಾಚೀನ ಪರಂಪರೆಯು ತೀರ ಜಟಿಲ ಮತ್ತು ಪ್ರಾಚೀನವಾಗಿದೆ ಎಂದವರು ಭಾವಿಸಿದ್ದಾರೆ.

ಈಜಿಪ್ಟ್ ಪರಂಪರೆಗೆ ಹೋಲುವ ಎಷ್ಟೋ ಕಥಾವಿಶೇಷವನ್ನು ಸ್ಟಿಥ್ ಥಾಮ್ಸನ್ ಮತ್ತು ಆರ್ನೆ ಇವರು ತಮ್ಮ Tale-type ಎಂಬ ಗ್ರಂಥದಲ್ಲಿ ನೀಡಿದ್ದಾರೆ. 'ಕಥೆಗಳ ಉಗಮದ ವಿಷಯದಲ್ಲಿ ಭಾರತದ ಮಹತ್ವವು ಅಧ್ಯಯನಶೀಲವಾದುದು ಎಂದವರು ಹೇಳುತ್ತಾರೆ'[೩]. ಬೆನ್‌ಫೆಯ ಸಿದ್ಧಾಂತವು ಇಂದಿಗೆ ಯಥಾವತ್ತಾಗಿ ಪ್ರಸ್ತುತವಾಗಿರದಿದ್ದರೂ ಜಾನಪದ, ಸಂಸ್ಕೃತಿ ಮತ್ತು ಪರಂಪರೆಯ ವಿಷಯದಲ್ಲಿ ಉಳಿದ ಯಾವುದೇ ದೇಶಕ್ಕಿಂತ ಭಾರತದ ಮಹತ್ವ ಅನನ್ಯವಾಗಿದೆ ಎಂಬುದನ್ನು ನಿರಾಕರಿಸುವಂತಿಲ್ಲ.

ಭಾರತವಾದಿ ಸಂಪ್ರದಾಯದ ಕುರಿತು ಮಾತಾಡುವಾಗ ಸಿ. ಡಬ್ಲ್ಯು. ಸಿಡಾನ್ ಅವರು ಹೇಳಿದ್ದೇನೆಂದರೆ ಈ ಸಂಪ್ರದಾಯದ ಪ್ರವರ್ತಕರ ದೃಷ್ಟಿಯೂ ಆ ಸಾಹಿತ್ಯ ಸಾಮಗ್ರಿಯ ಬಗೆಗೆ ಮೂಲದಲ್ಲೇ ಸಂಕುಚಿತವಾಗಿದ್ದು, ಆ ಪರಿಸ್ಥಿತಿಯಲ್ಲಿ ಅವರು ಸಿದ್ಧಾಂತವನ್ನು ರಚಿಸಿದರು. ಅವರ ಕಾರ್ಯ ಪದ್ಧತಿಯು ಅಪೂರ್ಣವಾಗಿತ್ತು. ಆದರೂ ಅವರು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮಹತ್ವದ್ದಾಗಿದೆ. ಅವರು ದೈವಕಥೆ ಮತ್ತು ಜಾನಪದ ಕಥೆ ಇವುಗಳ ನಡುವಣ ವ್ಯತ್ಯಾಸವನ್ನು ವಿಶದಪಡಿಸಿದರು. ಅದರಿಂದಾಗಿ ಮುಂದೆ ಗ್ರೀಮ್ ಬಂಧು ಮತ್ತು ಬೆನ್‌ಫೆ ಇವರ ನಡುವಿನ ಕಾಲದಲ್ಲಿ ದೈವಕಥೆಗಳ ಬಗ್ಗೆ ಪ್ರಸ್ತುತಗೊಂಡ ಭ್ರಾಂತ ಕಲ್ಪನೆಯನ್ನು ನಿರ್ನಾಮ ಮಾಡಲು ಈ ಸಂಪ್ರದಾಯದ ಉಪಯೋಗವಾಯಿತು. ರಾಯಿನ್ ಹೋಲ್ಡ್ ಕೋಯಿಡೆಲರ್ ಎಂಬ ವಿದ್ವಾಂಸನು ಮೊದಲು ಬೆನ್‌ಫೆಯ ಸಿದ್ಧಾಂತಕ್ಕೆ ಬೆಂಬಲ ನೀಡಿದನು. ಆದರೆ ಮುಂದೆ ಅವನಿಗೆ ಈ ಸಂಪ್ರದಾಯದಲ್ಲಿ ಕೊರತೆ ಕಂಡುಬಂತು. ಅನ್ಯ ಹಲವು ವಿದ್ವಾಂಸರು ಹೇಗಿದ್ದಾರೆಂದರೆ ಅವರ ಯುರೋಪಿಯನ್ ಕಥಾ ವಿಶೇಷದ ಭಾಂಡಾರದ ಬಗೆಗಿನ ಅಜ್ಞಾನವು ಬಹಿರಂಗವಾಗಿರುವುದರಿಂದ ಅವರ ಹಠದಿಂದ ಕಥೆಯ ಪೌರಾತ್ಯ ಉಗಮದ ಬಗೆಗಿನ ಸಿದ್ಧಾಂತಕ್ಕೆ ಅಂಟಿಕೊಳ್ಳುತ್ತಾರೆ.

ತನ್ನ ನಿಲುವಿನ ಸಮರ್ಥನೆಗಾಗಿ ಸಿಡಾನ್ ಅವರು ಕಾರ್ಲ್ ಕ್ರೋಹನನು

ಕೈಕೊಂಡ ಕರಡಿ ಮತ್ತು ತೋಳ ಮತ್ತು ನರಿಗಳ ಕಥೆಗಳ ವಿಶೇಷದ ವಿಶ್ಲೇಷಣೆಯನ್ನು ಪ್ರಸ್ತುತಪಡಿಸಿದ. ಕ್ರೋಹನನ ಹೇಳಿಕೆ ಏನೆಂದರೆ ಈ ಕಥೆಯು ಅದರ ಎಲ್ಲ ಪರ್ಯಾಯವನ್ನು ಪರೀಕ್ಷಿಸಿದಾಗ ಬೆನ್‌ಫೆ ಹೇಳುವಂತೆ ಭಾರತದಲ್ಲಾಗಲಿ, ಗ್ರೀಸ್‌ದಲ್ಲಾಗಲಿ ಉಗಮ ಹೊಂದಿರದೆ, ಉತ್ತರ ಯುರೋಪವೇ ಅದರ ಜನ್ಮಸ್ಥಾನವಾಗಿದೆ.

ಕರಡಿಯ ಸರ್ವ ಸಾಂಸ್ಕೃತಿಕ ಆವಿಷ್ಕಾರವನ್ನು ಗಮನಕ್ಕೆ ತಂದುಕೊಂಡರೆ, ಉತ್ತರ ಯೂರೋಪದಲ್ಲಿ ಕರಡಿಯ ಮಹತ್ವವು ಭಾರತಕ್ಕಿಂತ ಹೆಚ್ಚಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಕರಡಿಗಳು ಮೂಲತಃ ಉತ್ತರದ ಕಡೆಯವು ಎಂಬ ಉಲ್ಲೇಖವು ವೇದದಲ್ಲೂ ಲಭಿಸುತ್ತದೆ. ಹೀಗಾಗಿ ಕರಡಿಯ ಕಥೆಯ ಮಟ್ಟಿಗಾದರೂ ಈ ಪುರಾವೆಯು ಸಾಕಷ್ಟು ನಂಬಿಕೆಗೆ ಅರ್ಹವಾಗಿದೆ ಎಂದೆನಿಸಲು ಅಡ್ಡಿಯಿಲ್ಲ. ಆದರೆ ಸಾಕಷ್ಟು ಎನ್ನುವ ಕಾರಣವೇನೆಂದರೆ ಕರಡಿಗಳ ಕುರಿತು ಯೂರೋಪ ಮತ್ತು ಅಮೆರಿಕೆಯಲ್ಲಿ ಉಪಲಬ್ಧವಿರುವ ಸಾಹಿತ್ಯವೆಲ್ಲದರಲ್ಲೂ ಏಶಿಯಾದ ಉತ್ತರತಮ ವಿಭಾಗ, ಅಂದರೆ ಸೈಬೇರಿಯಾದ ಉತ್ತರ ಧ್ರುವಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಕರಡಿ ಸಂಸ್ಕೃತಿಯು ಉಗಮಗೊಂಡಿದೆ ಎನ್ನಲಡ್ಡಿಯಿಲ್ಲ. ಕರಡಿಯ ಒಂದು ಜಾತಿಗೆ Ursus Arctos ಎಂಬ ಹೆಸರಿದೆ. ಅದು ಅಮೆರಿಕೆಯ ಮತ್ತು ಉತ್ತರಧ್ರುವದ ಕರಡಿಯದಾಗಿದೆ. ಆರ್ಕ್‌ಟಾಪ್ ಎಂದರೆ ಉತ್ತರ ಎಂದೇ ಅರ್ಥ ಎನ್ನುವುದು ಗಮನಾರ್ಹ.

ಕರಡಿಗೆ ಸಂಬಂಧಿಸಿದ ಅಧ್ಯಯನದಲ್ಲಿ ಪಾಶ್ಚಾತ್ಯ ಪ್ರಣಾಲಿಯಲ್ಲಿ ಉಳಿದುಕೊಂಡ ಒಂದು ದೋಷವನ್ನು ಸಿಡಾನ್‌ನಂತಹ ಲೇಖಕನು ನಮೂದಿಸಿದ್ದಾನೆ. 'ಅಮೆರಿಕನ್ ಮತ್ತು ಯೂರೋಪಿಯನ್' ವಿದ್ವಾಂಸರ ದೊಡ್ಡ ದೋಷವೆಂದರೆ ಅವರು ತಮ್ಮ ಸಾಹಿತ್ಯವನ್ನು ಚಿಕ್ಕ ತುಣುಕಿನಿಂದ ಆರಂಭಿಸುತ್ತಾರೆ. ಅದರಲ್ಲಿ ಸಮಗ್ರತೆಯಿರುವುದಿಲ್ಲ. ಆದ್ದರಿಂದ ಅವರ ವಿಶ್ಲೇಷಣೆಯಲ್ಲಿ ಪರಿಪೂರ್ಣತೆಯಿರುವುದಿಲ್ಲ.

(ನವೀ ಕ್ಷಿತಿಜೇ, ಅಕ್ಟೋಬರ್ ೧೯೬೯)

ಟಿಪ್ಪಣಿ :

೧. Allan Dundes, Waht is Folklore? Study of Folklore: Engle wood Cliffe, N.J. 1965, pg. 1-3.

೨. Francis Lee Utley, Folk Lileratur e : An Operational Definitaion, op. cit pg 7-14.

೩. Richard M. Dorson: The Eclipse of solar Mythology op. Cit pg. 57-84.

* ಸೂರ್ಯ ಸಿದ್ಧಾಂತದ ಪ್ರಣೀತ ಮಾಕ್ಸ್ ಮುಲ್ಲರ್‌ನಾಗಿದ್ದ. ಅವನ ಹೇಳಿಕೆಯೇನೆಂದರೆ ದೈವಶಾಸ್ತ್ರದ ಆತ್ಮವೆಂದರೆ ಸೂರ್ಯಕಥೆ. ಅವನಿಗೆ ಋಗ್ವೇದದಲ್ಲಿ ಸೂರ್ಯೋಪಾಸನೆಯು ಮುಖ್ಯವಾಗಿ ಕಂಡುಬಂತು. ಇದೇ ಉಪಾಸನೆಯು ಅವೆಸ್ತಾ ಸಾಹಿತ್ಯದ ಪ್ರಾಣ. ಈಜಿಪ್ಟದಲ್ಲೂ ಸೂರ್ಯನೇ ಎಲ್ಲಕ್ಕಿಂತಲೂ ಪ್ರಭಾವಿ ದೇವರು. ಈ ಬಗೆಯಲ್ಲಿ ತೌಲನಿಕ ದೈವಶಾಸ್ತ್ರದ ಮೂಲಾಧಾರವು ದೈವ ಕಥೆಯೇ ಆಗಿದೆ ಎಂದವನು Science of Mythology (1895) ಎಂಬ ಎರಡು ಸಂಪುಟ ಪುಸ್ತಕದಲ್ಲಿ ನಮೂದಿಸಿದ್ದಾನೆ. ಆದರೆ ಈ ಪುಸ್ತಕದಿಂದಾಗಿಯೇ ಅವನ ಜನಪ್ರಿಯತೆ ಕ್ಷೀಣಿಸಿತು.

* ಇಂಡಿಯನಿಸ್ಟ ಥಿಯರಿ ಇಲ್ಲವೇ ಭಾರತೀಯ ಸಿದ್ಧಾಂತವನ್ನು ಮ್ಯಾಕ್ಸ್ ಮೂಲರನು ಪ್ರಸಾರ ಮಾಡಿದರೂ, ಅದರ ಪ್ರಣೀತಾ ಮಾತ್ರ ಬೆನ್‌ಫೆನಾ ಆಗಿದ್ದ. ಚಾರಿತ್ರಿಕ ಕಾಲದಲ್ಲಿ ಪಂಚತಂತ್ರದ ಕಥೆಗಳು ಭಾರತದಿಂದ ಯೂರೋಪಿಗೆ ಹೋದವು. ಅವುಗಳನ್ನು ಅಲೆಮಾರಿ ಮತ್ತು ವ್ಯಾಪಾರಿ ಜ್ಯೂ ಜನರು, ಸ್ಪೇನದ ಮೂರರು, ಪೌರ್ವಾತ್ಯ ದೇಶಗಳೊಂದಿಗೆ ಯೂರೋಪಿಗೆ ಕೊಂಡೊಯ್ದರು ಎಂದು ಬೆನ್‌ಫೆ ಹೇಳುತ್ತಾನೆ. ಫ್ರೆಂಚ್ ಲೇಖಕನಾದ ಇಮ್ಯೂನವಲ್ ಕಾಸಾಕನ್‌ನು ಭಾರತೀಯ ಸಿದ್ಧಾಂತವನ್ನು ಎತ್ತಿಹಿಡಿದನು ಮತ್ತು ಟೀಕೆಯ ಬಿರುಗಾಳಿಯನ್ನು ಎದುರಿಸಿದನು. ಜಾನಪದ ಕಥೆಯನ್ನು ಅವನು ಭಾರತದಿಂದ ಪಶ್ಚಿಮಕ್ಕೆ ಒಯ್ಯುವ ಶ್ರೇಯಸನ್ನು ಜಿಪ್ಸಿ ಜನರಿಗೆ ನೀಡಿದ್ದಾನೆ. ಅವನು ಬೌದ್ಧಕಥೆಗಳಿಗೆ ಜಾಗತಿಕ ಮೂಲಕಥೆ ಎಂದಿದ್ದಾನೆ. ಅದಕ್ಕೆ ಹಲವು ಅಪವಾದಗಳು ತಲೆದೋರಿದವು. ಪ್ರೊ. ಹ್ರೀಸ್ ಡೆವಿಡ್ಸ ಅವರೂ ಬೌದ್ಧಕತೆಯನ್ನು ಪಾಶ್ಚಾತ್ಯ ಕಥೆಗಳ ಆಧಾರಭೂತ ಕಥೆಯೆಂಬ ಹೇಳಿಕೆಯನ್ನು ನೀಡಿದ್ದಾರೆ. ಸರ್ ಜಾರ್ಜ್ ಕಾಕ್ಸ ಅವರು Introdution of the Science of Comparative Mythology ಈ ಕೃತಿಯಲ್ಲೂ ಮ್ಯಾಕ್ಸ್ ಮೂಲರನ ವಿಚಾರವನ್ನೇ ಎತ್ತಿಹಿಡಿದಿದ್ದಾರೆ.

* * * *

೫. ಗಣಿಕೆ ಕೋಶಾ

ಮಗಧ ದೇಶವನ್ನು ಆಳುತ್ತಿದ್ದ ೯ನೇ ಮತ್ತು ಕೊನೆಯ ನಂದರಾಜನು ಚಾಣಕ್ಯನ ಕಪಟತನದಿಂದ ಕೊಲ್ಲಲ್ಪಟ್ಟ. ಅನಂತರ ಚಂದ್ರಗುಪ್ತ ಮೌರ್ಯನು ರಾಜನಾದ. ಈ ನಂದನ ಪಾಟಲಿಪುತ್ರ ನಗರದಲ್ಲಿ ಕೋಶಾ ಎಂಬ ಗಣಿಕೆಯಿದ್ದಳು. ನಂದನಿಗೆ ಶಕಟಾಲ ಎಂಬ ಮಂತ್ರಿಯಿದ್ದ. ಅವನ ಮಗ ಸ್ಥೂಲಭದ್ರನು ಅಪ್ಪನ ಬಳಿಕ ಕೆಲಕಾಲ ಮಂತ್ರಿಯಾಗಿದ್ದ. ಆದರೆ ಕೆಲವೇ ದಿನಗಳಲ್ಲಿ ಅವನಿಗೆ ವೈರಾಗ್ಯ ಬಂತು. ಶಕಟಾಲನು ಜೈನ ಧರ್ಮೀಯನಾಗಿದ್ದ. ಅವನ ಸಾವು ಕಪಟತನದಿಂದ, ತೀರ ಹೃದಯ ವಿದ್ರಾವಕ ರೀತಿಯಲ್ಲಾಗಿತ್ತು. ಸ್ಥೂಲಭದ್ರನ ಮನದ ಮೇಲೆ ಇದರ ಪರಿಣಾಮವಾಗಿ ಅವನು ಜೈನ ಮುನಿಯಿಂದ ದೀಕ್ಷೆ ಪಡೆದ. ಅವನು ಶ್ರಮಣನಾದ. ಮಂತ್ರಿಪದವನ್ನು ಕಿರಿಯ ಸೋದರನಾದ ಶ್ರೀಯಕನಿಗೆ ನೀಡಿ ಅವನು ಏಕಾಏಕಿ ನಗರದಿಂದ ಹೊರಟುಹೋದ. ಸಂಭೂತ ವಿಜಯನು ಗಣಧರನ ಶಿಷ್ಯನಾದ. ಅವನು ಸನ್ಯಾಸಿಯಾಗುವ ನಿರ್ಣಯ ತೆಗೆದುಕೊಂಡಿದ್ದು ಕೇಳಿ ನಿಜಕ್ಕೂ ಯಾರಿಗಾದರೂ ದುಃಖವಾಗಿದ್ದರೆ ಅದು ಕೋಶಾಳಿಗೆ. ಅವಳು ಹನ್ನೆರಡು ವರ್ಷಗಳ ಕಾಲ ತನ್ನ ರೂಪ, ನೃತ್ಯ, ಹಾಡು ಮತ್ತು ಮಧುರ ಸ್ವಭಾವದಿಂದಾಗಿ ಸ್ಥೂಲಭದ್ರನನ್ನು ಮರುಳು ಮಾಡಿದ್ದಳು. ಆದರೆ ವೇಶ್ಯೆಯಾಗಿದ್ದರೂ, ವ್ಯವಹಾರ ಚತುರೆಯಾಗಿದ್ದರೂ, ಅವಳು ನಿಜಕ್ಕೂ ಮನದುಂಬಿ ಸ್ಥೂಲಭದ್ರನನ್ನು ಪ್ರೀತಿಸುತ್ತಿದ್ದಳು. ತನ್ನ ಧನಿಕ, ಜಾಣ ಆಶ್ರಯದಾತ ಹೊರಟುಹೋದನೆಂದು ಅವಳು ಹಳಹಳಿಸಲಿಲ್ಲ. ಆದರೆ ತನ್ನ ಪ್ರಿಯಕರ ಶಾಶ್ವತವಾಗಿ ತನ್ನನ್ನು ತೊರೆದು ಹೋದನಲ್ಲ ಎಂದವಳು ವ್ಯಾಕುಲಗೊಂಡಳು. ಅವಳು ಶ್ರೀಯಕನ ಬಳಿಗೆ ಹೋಗಿ ಆಗಾಗ ಅಳುತ್ತಿದ್ದಳು. ಸ್ಥೂಲಭದ್ರ ಎಂದಾದರೂ ತನ್ನ ನಿರ್ಣಯವನ್ನು ಬದಲಾಯಿಸಬಹುದೇ ಎಂದು ಕೇಳುತ್ತಿದ್ದಳು. ವೇಶ್ಯಾ ಜೀವನವನ್ನು ಸಾಗಿಸುತ್ತಿದ್ದರೂ, ಈ ಗಣಿಕೆಯು ಹಗಲು ರಾತ್ರಿ ಸ್ಥೂಲಭದ್ರನ ಬಗೆಗೇ ಯೋಚಿಸುತ್ತಿದ್ದಳು.

ಕೋಶಾಳ ಈ ಸ್ಥಿತಿಯನ್ನು ಕಂಡು ವ್ಯವಹಾರ ಚತುರನಾದ ಶ್ರೀಯಕನು ಯಾವ ವರರುಚಿ ಪಂಡಿತನು ಕಪಟತನದಿಂದ ವಧೆ ಮಾಡಿಸಿದ್ದನೋ ಅವನ ಕಪಟತನದ ಸೇಡು ತೀರಿಸಿಕೊಳ್ಳಲು ಮತ್ತು ರಾಜಸಭೆಯಲ್ಲಿರುವ ಅವನ ಸ್ಥಾನವನ್ನು ಬೇರುಸಹಿತ ಕಿತ್ತೊಗೆಯಲು ಒಂದು ಯುಕ್ತಿಯನ್ನು ಯೋಚಿಸಿ, ಆ ಕಾಮಿ

ಕೋಶಾಳನ್ನು ಮಸಲತ್ತಿನಲ್ಲಿ ಸೇರಿಸಿಕೊಂಡನು. ಕೋಶಾಳ ತಂಗಿಯಾದ ಉಪಕೋಶಾ ಸಹ ಅಕ್ಕನಂತೆ ರೂಪವತಿ ಚತುರೆ ಮತ್ತು ಕಲಾಭಿಜ್ಞೆಯಾಗಿದ್ದಳು. ಪಂಡಿತರಿಗೆ, ದೊಡ್ಡ ದೊಡ್ಡ ಯೋಧರಿಗೆ ರಾಜ ಒಡ್ಡೋಲಗದ ನಿಷ್ಣಾತ ಮುತ್ಸದ್ದಿಗಳಿಗೆ ಇಂಥ ಗಣಿಕೆಯರು ಲಭಿಸಿದರೆ, ರಾಜರಿಗೂ ಅವರಿಗೂ ಗಾಢ ಪರಿಚಯವಾಗುತ್ತದೆ. ಅವರ ಬಳಿಗೆ ಯಾವ ಗಿರಾಕಿಗಳು ಹೋಗುತ್ತಾರೆ ಎಂಬ ಕಡೆಗೆ ರಾಜನ ಸಂಪೂರ್ಣ ಲಕ್ಷ್ಯವಿರುತ್ತದೆ. ಅಷ್ಟೇ ಅಲ್ಲ, ಗಣಿಕೆಯು ಒಬ್ಬ ವಾರಾಂಗನೆ, ಕಲಾವತಿಯಾಗಿದ್ದರೂ ರಾಜಸೇವಕಿ ಎಂದೇ ಭಾವಿಸಲಾಗುತ್ತಿತ್ತು. ಹಲವು ಸಲ ರಾಜನೇ ಅವಳ ಆಶ್ರಯದಾತರನ್ನು ಆಯ್ಕೆ ಮಾಡುತ್ತಾನೆ. ಅವಳದನ್ನು ನಿರಾಕರಿಸುವಂತಿಲ್ಲ. ಈ ರೀತಿ ಅವರು ಧನಮಾನಿನಿ ಭಗಿನಿ ವೇಶ್ಯೆಯರಾಗಿದ್ದರು. ಕವಿಯೂ ಪಂಡಿತರೂ ಆದ ವರರುಚಿಯು ಉಪಕೋಶೆಯ ಮನೆಗೆ ಹೋಗಿಬರುತ್ತಲಿದ್ದ. ಅವನು ಉಪಕೋಶಾಳನ್ನು ಅಪಾರವಾಗಿ ಪ್ರೀತಿಸುತ್ತಿದ್ದ. ಆದರೆ ಉಪಕೋಶಾ ಅವನನ್ನು ತೃಪ್ತಿಪಡಿಸುತ್ತಿದ್ದರೂ ಕೋಶೆಯು ಸ್ಥೂಲಭದ್ರನಿಗೆ ತನ್ನ ಹೃದಯವನ್ನು ಅರ್ಪಿಸಿದಂತೆ ಉಪಕೋಶೆಯು– ವರರುಚಿಗೆ ಅರ್ಪಿಸಿರಲಿಲ್ಲ. ಗೌರವವಿರುವವರೆಗೆ ಸಂತೋಷಪಡಿಸುವುದು, ದರಬಾರಿನ ಮುಖ್ಯಸ್ಥರು ಅವರ ಮೇಲೆ ಮುನಿದರೆ, ಅಂಥವರನ್ನು ಕಪಟತನದಿಂದ ದೂರ ಸರಿಸುವ ಪದ್ಧತಿಯು ಗಣಿಕಿಯರ ಪರಿವಾರದಲ್ಲಿ ಅನೂಚಾನವಾಗಿ ನಡೆದು ಬಂದಿರುವಂತಹದು. ರಾಜಕಾರಣದ ಕಪಟ ಸೂತ್ರಗಳು ಸದಾಕಾಲ ಗಣಿಕೆಯರ ಮೂಲಕವೇ ಮುತ್ಸದ್ದಿತನದಿಂದ ಕಾರ್ಯನಿರ್ವಹಿಸುತ್ತಿದ್ದವು. ಇಲ್ಲೂ ಅದೇ ರೀತಿಯಾಯಿತು. ಕೋಶಾ ತನ್ನ ಅಣ್ಣನ ಮೇಲೆ ಸಂಪೂರ್ಣ ಅನುರಕ್ತಳಾಗಿದ್ದಾಳೆ. ನಮ್ಮ ಮನೆತನದ ಜನರಿಗಾಗಿ ಅವಳು ಏನುಬೇಕಾದರೂ ಮಾಡಲು ಸಿದ್ಧ ಎಂಬುದನ್ನು ಶ್ರೀಯಕ ಮೊದಲೇ ಕಂಡುಹಿಡಿದಿದ್ದ. ಈ ಹಿಂದೆ ವರರುಚಿಯ ಬಗ್ಗೆ ಅಣ್ಣ ಅವಳ ಮನವನ್ನು ಕಲುಷಿತಗೊಳಿಸಿದ್ದ. ಈಗ ಶ್ರೀಯಕನು ಮತ್ತಷ್ಟು ಹೆಚ್ಚಿಸಿದ. ಶ್ರೀಯಕನ ಮಸಲತ್ತಿನ ಬಗೆಗೆ ಕೋಶಾ ಉಪಕೋಶಾಳಿಗೆ ಹೇಳಿದಳು. ಶ್ರೀಯಕ ಸಚಿವನಾಗಿದ್ದ. ಅವನ ವಿರುದ್ಧ ಹೋಗುವುದು ಉಪಕೋಶಾಳಿಗೆ ಸಾಧ್ಯವೇ? ಅವಳನ್ನು ಸಂಪೂರ್ಣವಾಗಿ ಮಸಲತ್ತಿನಲ್ಲಿ ಸೇರಿಸಿಕೊಳ್ಳದೆ ಕೋಶಾ ಒಂದು ದಿನ ವರರುಚಿ ಭಟ್ಟನಿಗೆ ಮದ್ಯ ಕುಡಿಸುವಂತೆ ತಿಳಿಸಿದಳು. ಅದರಂತೆ ಉಪಕೋಶಾ ವರರುಚಿಯನ್ನು ಪ್ರೇಮದ ಮೋಹದಲ್ಲಿ ಸಿಲುಕಿಸಿ ಸವಿಯಾದ ಮದ್ಯವನ್ನು ಸೇವಿಸುವಂತೆ ಒತ್ತಾಯ ಮಾಡಿದಳು. ವರರುಚಿ ಬ್ರಾಹ್ಮಣ, ಅವನು ಮದ್ಯವನ್ನು ಹೇಗೆ ಕುಡಿದಾನು? ಆದರೆ ಉಪಕೋಶಾ ಹಠ ಹಿಡಿದಳು, ವಿನಂತಿಸಿಕೊಂಡಳು, ನೃತ್ಯ ಸಂಗೀತದಿಂದ ಅವನನ್ನು ಸಂತೋಷಪಡಿಸಿದಳು. ಬೇರೆ ಮಾರ್ಗವಿಲ್ಲದೆ ವರರುಚಿ ಮದ್ಯವನ್ನು ಸೇವಿಸಿದ. ಸ್ವಲ್ಪ ಕುಡಿದರೂ ಅವನು ನಶೆ ಏರಿದ್ದು ಕಂಡು, ಮಿತಿ ಮೀರಿ

ಮದ್ಯವನ್ನು ಕುಡಿಸಿದಳು. ಬೆಳಗ್ಗೆ ವರರುಚಿ ಭಟ್ಟ ಮನದುಂಬಿ ಮದ್ಯ ಸೇವಿಸಿದರು ಎಂಬ ಸಂದೇಶವನ್ನು ಅಕ್ಕನಿಗೆ ಕಳಿಸಿದಳು. ಕೋಶಾ ಇದನ್ನು ಶ್ರೀಯಕನಿಗೆ ಹೇಳಿದಳು. ಬೆಳಗ್ಗೆ ಒಡ್ಡೋಲಗ ಶುರುವಾಯಿತು. ಎಲ್ಲ ಪಂಡಿತರು, ಮಂತ್ರಿಗಳು ಆಗಮಿಸಿದರು. ವರರುಚಿ ಸಹ ಎಂದಿನಂತೆ ಸ್ನಾನವನ್ನು ಮುಗಿಸಿ ಕವಿತೆಯನ್ನು ಓದಿ ಹೇಳಲು ಅಲ್ಲಿಗೆ ಬಂದ. ಶ್ರೀಯಕನು ರಾಜಸಭೆಯಲ್ಲಿರುವವರಿಗೆಲ್ಲ ಸುಂದರವಾದ ಕಮಲವನ್ನು ಹಂಚಿದನು. ವರರುಚಿಯ ಕಮಲದ ಮೇಲೆ ಎಂಥ ಗಂಧವನ್ನು ಸಿಂಪಡಿಸಿದನೆಂದರೆ ಅದನ್ನು ಮೂಸಿದರೆ ಸಾಕು ವಾಂತಿಯಾಗಿ ಬಿಡುತ್ತಿತ್ತು. ಹಾಗೇ ಆಯಿತು. ವರರುಚಿ ಬ್ರಾಹ್ಮಣನಾಗಿ ಮದ್ಯ ಸೇವಿಸುತ್ತಾನಲ್ಲ ಎಂದು ರಾಜನಾದಿಯಾಗಿ ಎಲ್ಲರೂ ಅವನಿಗೆ ಛೀಮಾರಿ ಹಾಕಿದರು. ಆಗಿನ ಕಾಲದ ಕಾನೂನಿನಂತೆ ಬಿಸಿ ಸುರೆಯನ್ನು ಗಂಟಲಿಗೆ ಸುರಿದು ವರರುಚಿಗೆ ದೇಹಾಂತ ಪ್ರಾಯಶ್ಚಿತ್ತ ನೀಡಲಾಯಿತು.

ಪ್ರಿಯಕರನ ಪಿತನ ಸಾವಿನ ಸೇಡನ್ನು ತೀರಿಸಿಕೊಂಡ ಬಳಿಕವಾದರೂ ಅವನು ಸಂತೋಷಪಡಬಹುದು, ಯಾವ ಕಾರಣದಿಂದ ವೈರಾಗ್ಯ ಬಂದಿತ್ತೋ, ಅದೇ ಹೋದ ಬಳಿಕ ಅವನು ಸಮಾಜದಲ್ಲಿರುತ್ತಾನೆ. ತನ್ನ ಬಳಿಗೂ ಬರಬಹುದು ಎಂದವಳು ಭಾವಿಸಿದ್ದಳು. ಏಕೆಂದರೆ ಹಿಂದೆ ಎರಡು ಸಲ ಅವಳಿಂದ ದೂರವಾಗಲು ಬಯಸದೆ ಸ್ಥೂಲಭದ್ರನು ಮಂತ್ರಿ ಪದವಿಯನ್ನೂ ಸಹ ನಿರಾಕರಿಸಿದ್ದ. ಆದರೆ ದಿನಗಳು ಉರುಳಿದವು. ತಿಂಗಳುಗಳು ಹೋದವು.ಆದರೆ ಸ್ಥೂಲಭದ್ರನು ತನ್ನ ವರ್ತನೆಯನ್ನು ಬದಲಾಯಿಸಲಿಲ್ಲ. ಮುಂದೇನಾಯಿತು? ವರ್ಷಋತು ಶುರುವಾಯಿತು. ಚಾತುರ್ಮಾಸದಲ್ಲಿ ಶ್ರಮಣರು ಆಹಾರಕ್ಕಾಗಿ ಪ್ರತಿ ಬಾಗಿಲಿಗೂ ತಿರುಗಾಡುವದು ಸಾಧ್ಯವಾಗುತ್ತಿರಲಿಲ್ಲ. ನಾಲ್ಕು ತಿಂಗಳು ಅವರು ಎಲ್ಲಾದರೂ ವಾಸವಾಗುತ್ತಿದ್ದರು. ಆಗ ಸಂಭೂತವಿಜಯ ಗಣಧರನ ಶಿಷ್ಯರು ತಾವು ಚಾತುರ್ಮಾಸದಲ್ಲಿ ತಾವು ಎಲ್ಲೆಲ್ಲಿ ಇರುತ್ತೇವೆ ಎಂಬುದನ್ನು ಅವರಿಗೆ ಹೇಳಲಾರಂಭಿಸಿದರು. ಒಬ್ಬಾತ 'ನಾನು ಸಿಂಹದ ಗುಹೆಯೊಳಗೆ ಕೂತು ತಪ ಮಾಡುವೆನು' ಎಂದ. ಮತ್ತೊಬ್ಬ 'ನಾನು ಸರ್ಪ ಬಿಲದ ಬಳಿ ಕೂತು ತಪ ಮಾಡುವೆ'. ಸ್ಥೂಲಭದ್ರ ಗುರುವಿಗೆ ಎಂದು– 'ನಾನು ಗಣಿಕಾ ಕೋಶಾಳ ಮನೆಯಲ್ಲಿದ್ದೇ ಉಗ್ರತಪ ಮಾಡುವೆ.' ಬಳಿಕ ಸ್ಥೂಲಭದ್ರ ಕೋಶಾಳ ಮನೆಗೆ ಹೋದ. 'ನಿನ್ನ ಚಿತ್ರಶಾಲೆಯನ್ನು ನನಗಾಗಿ ನಾಲ್ಕು ತಿಂಗಳು ಕೊಡು' ಎಂದ. ಕೋಶಾಳಿಗೆ ಸ್ಥೂಲಭದ್ರ ಮರಳಿ ಬಂದಿರುವುದು ಅತ್ಯಾನಂದವಾಯಿತು.

ನನ್ನ ಪ್ರೇಮ ಸಫಲವಾಯಿತು. ಅವನು ತಪ ಮಾಡಿ ಬೇಸತ್ತುಹೋಗಿರಬೇಕು ಎಂದವಳಿಗನಿಸಿತು. ಅವಳು ಹರುಷದಿಂದ ಅವನನ್ನು ಸ್ವಾಗತಿಸಿದಳು. ಅವನೊಂದಿಗೆ ಮಧುರ ಸಲ್ಲಾಪ ಆರಂಭಿಸಿದಳು. ಕೋಶಾಳ ವಾಡೆಯಲ್ಲೇ ಅವಳ ಚಿತ್ರಶಾಲೆಯಿತ್ತು.

ಅದನ್ನು ಹೇಗೆ ಬಣ್ಣಿಸಲಿ? ಅದರ ಗೋಡೆಯ ಮೇಲೆ ಪ್ರೇಮಿಗಳ ನಾನಾ ಬಗೆಯ ಚಿತ್ರಗಳನ್ನು ಬಿಡಿಸಲಾಗಿತ್ತು. ಹೂವುಗಳ ಅಲಂಕಾರವಿತ್ತು. ಸುಂದರವಾದ ಬೆಳಕಿನಿಂದ ಅವು ಸದಾ ಶೋಭಿಸುತ್ತಿದ್ದವು. ನಾನಾ ಬಗೆಯ ವಾದ್ಯಗಳು ಅಲ್ಲಿದ್ದವು. ವಿಲಾಸದ ಎಲ್ಲ ಸಾಧನಗಳು ಅಲ್ಲಿದ್ದವು. ಬಗೆಬಗೆಯ ಆಸನ, ಶಯ್ಯೆ, ಪರಿಮಳವು ಆ ಜಾಗದಲ್ಲಿ ತುಂಬಿಕೊಂಡಿತ್ತು. ಅಲ್ಲಿ ಒಂದು ಆಸನದ ಮೇಲೆ ಕುಳಿತು ಸ್ಥೂಲಭದ್ರನು ಧ್ಯಾನದಲ್ಲಿ ಮಗ್ನನಾದನು. ಹಿಂದೆ ಅದೇ ಸ್ಥಳದಲ್ಲಿ ಅವರಿಬ್ಬರೂ ಪ್ರೇಮಸಲ್ಲಾಪ ನಡೆಸುತ್ತಿದ್ದರು. ಪರಸ್ಪರರ ಸಹವಾಸದಲ್ಲಿ ಸಂತೋಷಪಡುತ್ತಿದ್ದರು. ಕೋಶಾ ಸುಂದರವಾಗಿ ವೇಷಭೂಷಣವನ್ನು ಧರಿಸಿ ಅಲ್ಲೇ ಕೂತಿರುತ್ತಿದ್ದಳು. ಆ ವೇಷಭೂಷಣದಿಂದ ಅಲಂಕಾರದಿಂದ ಅವಳ ಸೌಂದರ್ಯ ಮತ್ತಷ್ಟು ಬೆಳಗುತ್ತಿತ್ತು. ಕೂದಲಲ್ಲಿ ಹೂವು, ಕಾಲಲ್ಲಿ ಗೆಜ್ಜೆ, ಸೊಂಟದಲ್ಲಿ ಮುತ್ತಿನ ಮೇಖಲೆ, ಕೊರಳಲ್ಲಿ ರತ್ನಹಾರ, ಕೈಗೆ ಮುತ್ತಿನ ಬಳೆ, ಕಿವಿಯಲ್ಲಿ ಪಚ್ಚೆಯ ಓಲೆ, ಪ್ರಿಯಕರನ ಆಗಮನದಿಂದ ಮುಖ ಅರಳಿತ್ತು. ದೇಹದೊಳಗೆ ಉತ್ಸಾಹ ತುಂಬಿಕೊಂಡಿತ್ತು. ಪ್ರೀತಿಯ ಭಾವನೆಯು ಉಕ್ಕಿ ಬರುತ್ತಿತ್ತು. ಕಂಗಳಲ್ಲಿ ಹರ್ಷದ ಕಂಬನಿ ತುಂಬಿಕೊಂಡಿತ್ತು. ಕಂಠದಲ್ಲಿ ಹಾಡಿನ ತಾನ ಕುಣಿಯಲಾರಂಭಿಸಿತು. ಪ್ರಕೃತಿಯಿಂದ ಸಂಗೀತದ ಸ್ವರ ಹೊರ ಬರಲಾರಂಭಿಸಿತು. ಕಾಲು ಸಹಜವಾಗಿ ನಾಜೂಕಾಗಿ ನರ್ತಿಸತೊಡಗಿತು. ಕೋಶಾ ಒಮ್ಮೆ ಹಾಡುತ್ತ ಕುಣಿಯುತ್ತಿದ್ದಳು. ಮಗದೊಮ್ಮೆ ಸ್ಥೂಲಭದ್ರನ ಗಂಭೀರ ಧಾನ್ಯಮಗ್ನ ಮುದ್ರೆಯನ್ನು ನೋಡುತ್ತ ನಿಂತುಬಿಡುತ್ತಿದ್ದಳು. ಬಳಿಕ ನಿಟ್ಟುಸಿರುಬಿಡುತ್ತ ಅಡುಗೆ ಮನೆ ಸೇರುತ್ತಿದ್ದಳು. ಸ್ವಂತ ಕೈಯಿಂದಲೇ ಸುಗ್ರಾಸ ಭೋಜನವನ್ನು ಸಿದ್ಧಪಡಿಸಿ, ಊಟದ ತಟ್ಟೆಯನ್ನು ಸ್ಥೂಲಭದ್ರನ ಎದುರಿಗಿಡುತ್ತಿದ್ದಳು. ಸ್ಥೂಲಭದ್ರ ಆಹಾರವನ್ನು ಸೇವಿಸಿ ಅವನು ಮರಳಿ ಧ್ಯಾನಮಗ್ನನಾಗುವನು. ಆಗ ಕೋಶಾ ಅವನ ಮನವನ್ನು ತಪದಿಂದ ಬದಲಾಯಿಸುವ ಪ್ರಯತ್ನ ಮಾಡುತ್ತಿದ್ದಳು. ಆದರೂ ಸ್ಥೂಲಭದ್ರನ ನಿಶ್ಚಯ ಬದಲಾಗಲಿಲ್ಲ. ರಾತ್ರಿಯಾದ ಕೂಡಲೇ ಅವನು ಅದೇ ಆಸನದ ಮೇಲೆ ಉರುಳಿ ಗಾಢವಾದ ನಿದ್ದೆಯಲ್ಲಿ ಮುಳುಗುತ್ತಿದ್ದ. ಕೋಶಾ ಅವನ ಕಾಲು ಒತ್ತುತ್ತ ಕೂತಿರುತ್ತಿದ್ದಳು. ಆದರವನು ಅದನ್ನು ಗಮನಿಸುತ್ತಲೂ ಇರುತ್ತಿರಲಿಲ್ಲ. ಅಂದಾಗ ಅವಳೊಂದಿಗೆ ಮಾತುಕತೆಯಂತೂ ದೂರವೇ ಸರಿ!

ಕ್ರಮೇಣ ಕೋಶಾ ನಿರಾಶೆಗೊಂಡಳು. ಸ್ಥೂಲಭದ್ರನ ವೈರಾಗ್ಯ ಕ್ಷಣಭಂಗುರವಲ್ಲ ಎಂದವಳಿಗನಿಸಿತು. ಆದರೂ ಅವನ ಮೇಲಿನ ಪ್ರೇಮ ಮಾತ್ರ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಈಗ ಅವನ ಮನಸೆಳೆಯುವ ಪ್ರಯತ್ನವನ್ನು ಅವಳು ಬಿಟ್ಟಳು. ಅದೇ ಪ್ರೇಮವೇ ಈಗ ಭಕ್ತಿಯಲ್ಲಿ ಪರಿವರ್ತನೆಗೊಂಡಿತು. ಮನಸ್ಸು ಕೊಟ್ಟು ಅವನ ಸೇವೆ ಮಾಡಲಾರಂಭಿಸಿದಳು. ಈಗ ಅವಳಿಗೆ ತನ್ನ

ಉಡುಗೆ-ತೊಡುಗೆಯ ಕಡೆಗೆ ಗಮನವಿರಲಿಲ್ಲ. ಹಾಡು ನಿಂತಿತು. ನೃತ್ಯ ನಿಂತಿತು. ಸ್ಥೂಲಭದ್ರ ಅಲ್ಲಿರುವವರೆಗೆ ಅವಳ ಚಿತ್ರಶಾಲೆಯಿಂದ ದೂರ ಬರಲಿಲ್ಲ. ಪ್ರೇಮಿ ಸ್ಥೂಲಭದ್ರ ಅವಳಿಗೆ ಎಷ್ಟು ಇಷ್ಟವಾಗಿದ್ದನೋ ಅದಕ್ಕಿಂತಲೂ ಹೆಚ್ಚು ವಿರಾಗಿ ಸ್ಥೂಲ ಭದ್ರ ಅವಳಿಗೆ ಇಷ್ಟವಾಗತೊಡಗಿದ. ಅವಳಿಗೂ ಪರಮಾರ್ಥದ ರುಚಿ ಹತ್ತಿತು. ಅಷ್ಟೇ ಅಲ್ಲ, ಮಳೆಗಾಲ ಮುಗಿದಾಗ ಸ್ಥೂಲಭದ್ರನು ಹೊರಡಲು ಸಿದ್ಧನಾದಾಗ ಅವನ ಪಾದಕ್ಕೆ ಉರುಳಿ ಬಿಕ್ಕಿಬಿಕ್ಕಿ ಅಳುತ್ತ ಕೋಶಾ ಹೇಳಿದಳು. 'ನಿಮ್ಮ ತಪದಲ್ಲಿ ವಿಘ್ನವನ್ನು ತಂದು ವಿಲಾಸ ಮಾಡುವ ಬಯಕೆಯನ್ನು ವ್ಯಕ್ತಮಾಡಿದ್ದು ನನ್ನ ಮೂರ್ಖತನ, ನನಗೆ ಧಿಕ್ಕಾರವಿರಲಿ.' ಸ್ಥೂಲಭದ್ರ ಅವಳನ್ನು ಎಬ್ಬಿಸಿ ಉಪದೇಶ ಮಾಡಿದ. ಅವಳನ್ನು ಶಿಷ್ಯೆಯಾಗಿ ಸ್ವೀಕರಿಸಿದ. ಕೋಶಾ ಅಂದಳು-'ನಾವಂತೂ ರಾಜನ ಸ್ವಾಧೀನ. ರಾಜನೇ ಯಾರನ್ನಾದರೂ ಕಳಿಸಿದರೆ ನಾನವನ ಜೊತೆಯಲ್ಲಿರಬೇಕಾಗುವದು. ಇಲ್ಲದಿದ್ದರೆ ನಾನು ನಿಮ್ಮದೇ ಚಿಂತನೆ ಮಾಡುತ್ತೇನೆ. ನಿಮ್ಮ ಉಪದೇಶವನ್ನು ನೆನಪಿಸಿಕೊಳ್ಳುತ್ತೇನೆ. ಧರ್ಮಾಚರಣೆಯನ್ನು ಮಾಡುತ್ತೇನೆ.' ಕೋಶಾಳ ಮನೆಯಲ್ಲಿದ್ದು ಯಾವ ಮೋಹಕ್ಕೂ ಬಲಿ ಬೀಳದೆ ಇರುವುದರಿಂದ ಆಶ್ರಮವಾಸಿಗಳೆಲ್ಲ ಸ್ಥೂಲಭದ್ರನನ್ನು ಕೊಂಡಾಡಿದರು.

ಮುಂದೆ ಈ ಕೀರ್ತಿಯನ್ನು ಕೇಳಿ ಬೇರೊಬ್ಬ ಮುನಿಗೆ ತಾನೂ ಸ್ಥೂಲಭದ್ರನಂತೆ ವರ್ತಿಸಿ ತೋರಿಸಬೇಕೆಂದು ಅನಿಸಿತು. ಅದರಲ್ಲೇನಿದೆ? ಹೀಗಾಗಿ ಅವನು ಮುಂದಿನ ಮಳೆಗಾಲದಲ್ಲಿ ಕೋಶಾಳ ಚಿತ್ರಶಾಲೆಗೆ ಹೋದ. ಕೋಶಾ ಅವನನ್ನು ಸ್ವಾಗತಿಸಿದಳು. ಅವನನ್ನು ಪರೀಕ್ಷಿಸುವ ಸಲುವಾಗಿ ಮತ್ತೆ ಉಡುಗೆ-ತೊಡುಗೆ ಧರಿಸಿ ಸಿಂಗರಿಸಿಕೊಂಡಳು. ಆ ಮುನಿಯ ಸುತ್ತಲೂ ಕುಣಿಯುತ್ತ ಹಾಡಲಾರಂಭಿಸಿದಳು. ಅವಳು ನೀಡಿದ ಸುಗ್ರಾಸ ಭೋಜನವನ್ನು ಮುನಿ ಸೇವಿಸಿದ. ಅವಳ ವೈಯಾರಕ್ಕೆ ಮುನಿ ಮರುಳಾದ. ಇದೇ ಮುನಿ ಈ ಹಿಂದೆ ಸಿಂಹದ ಗುಹೆಯಲ್ಲಿ ತಪ ಮಾಡುತ್ತಿದ್ದ. ಸ್ಥೂಲಭದ್ರನಂತೆ ನಿನಗೆ ಕೋಶಾಳ ಮನೆಯಲ್ಲಿರುವುದು ಸಾಧ್ಯವಿಲ್ಲ ಎಂದು ಗುರು ಮೊದಲೇ ಹೇಳಿದರೂ ಲೆಕ್ಕಿಸದೆ ಅವನು ಬಂದಿದ್ದ. ಈಗ ನಿಜವಾಗಿಯೂ ಸೋತ. ಅದನ್ನು ಕಂಡು ಕೋಶಾಳಿಗೆ ಕೆಡುಕೆನಿಸಿತು. ತನ್ನ ಮನೆಯಲ್ಲಿ ಧರ್ಮಾಚರಣೆ ಮಾಡುವವನ ಅಧಃಪತನವಾಗಬಾರದೆಂದು ಈ ನಡವಳಿಕೆಯಿಂದ ಅಂತ್ಯದಲ್ಲಿ ಅವನಿಗೇ ಹೇಸಿಗೆ ಎನಿಸಬೇಕೆಂದು ಒಂದು ಯುಕ್ತಿ ಮಾಡಿದಳು. ಅವಳು ಮುನಿಗೆ ಕೇಳಿದಳು: 'ನಿಮಗೆ ನಾನು ಬೇಕೆ?' ಮುನಿ, ಹೌದೆಂದ. ಆಗ ಕೋಶಾ ಅಂದಳು. 'ನಾನಂತೂ ವೇಶ್ಯೆ, ನಾವು ಹಣವಿಲ್ಲದಿದ್ದರೆ ಯಾರ ಸೇವೆಯನ್ನೂ ಮಾಡುವುದಿಲ್ಲ. ಆದ್ದರಿಂದ ನೀವು ನನಗೇನು ಕೊಡುತ್ತೀರಿ ಎನ್ನುವುದನ್ನು ಮೊದಲು ಹೇಳಿ.'

ಮುನಿ ಉತ್ತರಿಸಿದ : 'ನಾವು ಮುನಿಗಳು. ದ್ರವ್ಯ ಮತ್ತು ಮರಳು ಎರಡೂ

ಒಂದೇ ಎಂದು ಭಾವಿಸುತ್ತೇವೆ. ಹಿಂದೆ ನೇಪಾಳದ ರಾಜನು ರತ್ನಖಚಿತವಾದ ಶಾಲು ನೀಡಿದ್ದ, ಬೇಕಾದರೆ ನಿನಗದನ್ನು ನೀಡುತ್ತೇನೆ.' 'ಕೊಡಿ ಹಾಗಾದರೆ.'

ಬಳಿಕ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರೂ ಆ ಮುನಿ ಪಾದಯಾತ್ರೆಯನ್ನು ಕೊಂಡು ನೇಪಾಳಿಗೆ ಹೋದ. ಆ ಶಾಲನ್ನು ತಂದ. ಆ ರತ್ನಖಚಿತ ಶಾಲು ಅದೆಷ್ಟು ಮೆತ್ತಗಿತ್ತೆಂದರೆ ಅವನದನ್ನು ಒಂದು ಪೊಳ್ಳು ಕೋಲಿನಲ್ಲಿ ತುಂಬಿದ. ಅಲ್ಲಿಂದ ಪಾಟಲಿ ಪುತ್ರದ ಗಾಡಿ ಹಿಡಿದು ಹೊರಟ. ನಾನು ಈ ಶಾಲು ಕೋಶಾಳಿಗೆ ನೀಡಿದರೆ ಅವಳು ತುಂಬ ಸಂತೋಷಪಡುತ್ತಾಳೆ ಎಂದುಕೊಂಡ. ಅವಳ ಬಗೆಗೇ ಯೋಚಿಸುತ್ತ ಅವನು ನಡೆಯಲಾರಂಭಿಸಿದ. ದಾರಿಯಲ್ಲಿ ಕಳ್ಳರ ಒಂದು ತಾಣವಿತ್ತು. ಆ ಕಳ್ಳರು ಒಂದು ಶಕುನದ ಹಕ್ಕಿಯನ್ನು ಸಾಕಿದ್ದರು. ಈ ಮುನಿ ಅಲ್ಲಿಂದ ಹೊರಟಾಗ ಹಕ್ಕಿಯು 'ಲಕ್ಷ ಬಂತು' ಎಂದು ಕೂಗಿತು. ಕಳ್ಳರು ಮುನಿಯನ್ನು ಬಂಧಿಸಿದರು. ಅವನ ಬಳಿ ಏನೂ ಇರದೇ ಇರುವುದನ್ನು ಕಂಡು ಅವನನ್ನು ಬಿಟ್ಟರು. ಹಕ್ಕಿ ಮತ್ತೆ ಕಿರಿಚಿತು. 'ಲಕ್ಷ ಹೋಯಿತು' ಆಗ ಕಳ್ಳರ ಮುಖಂಡನು ಮುನಿಯನ್ನು ಕೆದಕಿ ಕೆದಕಿ ಕೇಳಿದಾಗ. ತಾನು ಈ ಶಾಲನ್ನು ಕೋಶಾ ಎಂಬ ಗಣಿಕೆಗೆ ನೀಡಲು ಒಯ್ಯುತ್ತಿರುವುದಾಗಿ ಹೇಳಿದ. ಮುಖಂಡ ಹೇಳಿದ: 'ಭೇಷ್ ಮುನಿ! ಕೋಶಾ ವೇಶ್ಯೆಗೆ ಕೊಡುವ ಆ ವಸ್ತು ನಮಗೆ ಬೇಡ. ಬಿಟ್ಟುಬಿಡಿ ಅವನನ್ನು' ಎಂದ. ಮುನಿ ತಲೆ ತಗ್ಗಿಸಿ ಕೋಶಾಳ ಬಳಿಗೆ ಬಂದ. ಆ ಶಾಲನ್ನು ಅವಳಿಗೆ ಅರ್ಪಿಸಿದ. ಕೋಶಾ ಅದನ್ನು ತಿಪ್ಪೆಗೆ ಒಗೆದಳು. 'ಎಂಥ ಹುಚ್ಚರು ನೀವು? ನನ್ನಂಥವಳ ಪ್ರೇಮಕ್ಕಾಗಿ ಈವರೆಗೆ ಮಾಡಿದ ತಪವನ್ನು ಹಾಳು ಮಾಡಿಕೊಂಡಿರಲ್ಲ? ನನಗೂ ಈ ಶಾಲಿಗೂ ಎಲ್ಲಿಯ ಬೆಲೆ?' ಈ ಮಾತು ಕೇಳಿ ಮುನಿ ನಾಚಿ ಮುದುಡಿದ. ಬಳಿಕ ತಪಸ್ಸು ಮಾಡಲು ಅಲ್ಲಿಂದ ತೆರಳಿದ.

ಮುಂದೆ ಒಬ್ಬ ಸಾರಥಿಯು ಒಂದು ಯುದ್ಧದಲ್ಲಿ ಪರಾಕ್ರಮವನ್ನು ಮೆರೆದ. ಬಿಲ್ವಿದ್ಯೆಯಲ್ಲೂ ನೈಪುಣ್ಯ ತೋರಿಸಿದ. ಆಗ ಖುಷಿಯಿಂದ ರಾಜನು ಅವನಿಗೆ ಗಣಿಕೆ ಕೋಶಾಳನ್ನು ಅರ್ಪಿಸಿದ. ಆ ಯೋಧನು ಅವಳ ಮನೆಯಲ್ಲಿರಲಾರಂಭಿಸಿದ. ರಾಜಾಜ್ಞೆಯಂತೆ ಕೋಶಾ ಸಹ ಅವನನ್ನು ತೃಪ್ತಿಪಡಿಸುವ ಪ್ರಯತ್ನ ಮಾಡಿದಳು. ಆದರೆ ಮಾತಿನ ನಡುವೆ ಅವಳು ಸ್ಥೂಲಭದ್ರನನ್ನು ಸತತವಾಗಿ ಸ್ತುತಿ ಮಾಡುತ್ತಿದ್ದಳು. ಒಂದು ದಿನ ಅವರಿಬ್ಬರೂ ಒಂದು ಮಾವಿನ ತೋಪಿಗೆ ಹೋದರು. ಆಗ ತನ್ನ ನೈಪುಣ್ಯವನ್ನು ಅವಳಿಗೆ ತೋರಿಸಬೇಕೆಂದು ಅವನು ಒಂದು ಬಾಣವನ್ನು ಬಿಟ್ಟ. ಅದು ಮಾವಿಗೆ ನಾಟಿತು. ಬಳಿಕ ಒಂದೊಂದಾಗಿ ಬಾಣವನ್ನು ಹೇಗೆ ಬಿಟ್ಟನೆಂದರೆ ಅದು ಒಂದಕ್ಕೊಂಡು ಸ್ಪರ್ಶಿಸಿ, ಬಾಣ ತಿರುಗಿದಾಗ ಹಣ್ಣಿನ ಜೊತೆ ಬಂದು ಅವನ ಕೈಗೆ ಬಿತ್ತು. ಆಗ ಕೋಶಾ ಸಹ ತನ್ನ ನೈಪುಣ್ಯತೆ ತೋರಿಸಲು ಮುಂದಾದಳು.

ಅವಳು ಸಾಸಿವೆಯ ರಾಶಿಯನ್ನು ನೆಲಕ್ಕೆ ಸುರಿದು, ಅಲ್ಲೊಂದು ಸೂಜಿಯನ್ನು ನೆಟ್ಟಳು. ಆ ಸೂಜಿಯ ಸುತ್ತಲೂ ಹೂವಿನ ಪಕಳೆಯನ್ನು ಪಸರಿಸಿದಳು. ಆ ಪಕಳೆಯ ಮೇಲೆ ಅವಳು ನರ್ತಿಸಲಾರಂಭಿಸಿದಳು. ಅವಳ ಹೆಜ್ಜೆ ಎಷ್ಟು ತೀವ್ರಗತಿ ಹಾಗೂ ನಾಜೂಕಾಗಿ ಬೀಳುತ್ತಿತ್ತೆಂದರೆ ಆ ರಾಶಿಯಲ್ಲಿದ್ದ ಪಕಳೆಯೂ ಹಾಳಾಗಲಿಲ್ಲ. ಸಾಸಿವೆಯೂ ಅಲುಗಾಡಲಿಲ್ಲ, ಸೂಜಿಯ ತುದಿಯೂ ಕೋಶಾಳ ಕಾಲಿಗೆ ತಾಗಲಿಲ್ಲ. ಅವಳ ಅಪೂರ್ವ ನೃತ್ಯವನ್ನು ಕಂಡು ಯೋಧ ಖುಷಿಯಿಂದ ನುಡಿದ: 'ನಿನಗೇನು ಬೇಕೋ ಬೇಡು.' ಕೋಶಾ ಎಂದಳು : 'ಉಡುಗೊರೆ ಪಡೆಯುವಂತಹದು ಅದರಲ್ಲೇನಿದೆ. ಸ್ವಲ್ಪ ಶ್ರಮಪಟ್ಟರೆ ಸಾಕು ಯಾರೂ ನರ್ತಿಸಬಹುದು. ಸ್ಥೂಲಭದ್ರನಂಥ ಕಾರ್ಯ ಮಾಡಿದ್ದರೆ ಮಾತು ಬೇರೆ.' 'ಸ್ಥೂಲಭದ್ರ ಯಾರು?'

ಕೋಶಾ ಎಲ್ಲ ಸಂಗತಿಯನ್ನು ಅರುಹಿದಳು : ಯೋಧ ಕೋಶಾಳನ್ನು ಮರೆತ. ಅವನು ಸ್ಥೂಲಭದ್ರನ ದರ್ಶನ ಪಡೆಯಲು ಹೊರಟ. ಕೋಶಾಳಿಗೆ ಸಂತೋಷವಾಯಿತು. ಸ್ಥೂಲಭದ್ರನ ಹೊರತು ಯಾರೂ ಅವಳನ್ನು ಗೆಲ್ಲುವುದು ಸಾಧ್ಯವಿರಲಿಲ್ಲ. ಅವಳು ಕೇವಲ ಸ್ಥೂಲಭದ್ರನಿಗೆ ಮಾತ್ರ ಸೇರಿದವಳು. ಅದೇ ಸುಮಾರಿಗೆ ರಾಜ್ಯದಲ್ಲಿ ಬರ ಬಿತ್ತು. ರಾಜ ಮತ್ತು ಪ್ರಜೆಗಳು ಬೇರೆ ಬೇರೆಯಾದರು. ಈಗ ರಾಜನ ಆಜ್ಞೆಯನ್ನು ಮುರಿದು ಧರ್ಮದ ಉಲ್ಲಂಘನೆ ಮಾಡುವ ಭೀತಿ ಅವಳಿಗುಳಿಯಲಿಲ್ಲ. ಈ ಅವಕಾಶದ ಲಾಭ ಪಡೆದ ಕೋಶಾ ಮನೆಯಿಂದ ಹೊರಬಿದ್ದು ಸನ್ಯಾಸಿನಿಯಾದಳು.

* * * *

೬. ತುಳಸಿಯ ಕಥೆ

ಜಾನಪದ ಸಾಹಿತ್ಯದ ಸಂಗ್ರಹ ಮಾಡುವಾಗ ಒಮ್ಮೊಮ್ಮೆ ಮನೋರಂಜಕ ಮತ್ತು ಕಲ್ಪನಾ ರಮ್ಯವಾಧ ಕಥೆ ಲಭಿಸುತ್ತದೆ. ಒಂದೇ ಕಾಲಕ್ಕೆ ಒಂದೇ ವಸ್ತುವಿನ ಬಗೆಗೆ ಮಾಡಿದ ಪರಸ್ಪರ ವಿರೋಧ ಕಲ್ಪನೆಯ ಪಾರಂಪಾರಿಕ ಸಂರಕ್ಷಣೆಯಂತೂ ನಿಜಕ್ಕೂ ಸಾಮಾಜಿಕ ಇತಿಹಾಸದಲ್ಲಿಯ ಒಗಟಾಗುತ್ತದೆ. ಅದು ಸಂಸ್ಕೃತಿಯ ಅಧ್ಯಯನದಲ್ಲಿಯ ಒಂದು ದೊಡ್ಡ ಒಗಟೇ ಆಗುತ್ತದೆ. ಉದಾರಹಣೆಗಾಗಿ ತುಳಸಿಯ ಕಲ್ಪನೆಯನ್ನೇ ನೋಡೋಣ. ಭಾರತದ ತುಂಬ ಬೆಳೆಯುವ, ಎಲೆ ಎಲೆಗಳಲ್ಲೂ ಉಗ್ರ ಪರಿಮಳವಿರುವ ಹೂ ಬೀಜಗಳಿಂದ ಅಲಂಕಾರಗೊಂಡ ಈ ಗಿಡದ ಸೌಂದರ್ಯವು ವಿಶೇಷ ನಿರೀಕ್ಷೆಯ ಹೊರತು ನೋಟಕರ ಕಣ್ಣಿಗೆ ಎಂದೂ ತುಂಬದ ಗಿಡವಿದು. ಈ ಗಿಡದ ನೈಸರ್ಗಿಕ ಗುಣವೆಂದರೆ ಅದು ತೀರ ನಾಜೂಕಾದ ಗಿಡ. ಹೂ ಬೀಜಗಳ ಬಗೆಗೆ ಕೇಳಲೇ ಬೇಡಿ. ನೀಲಿ-ನೇರಳೆ ಬಣ್ಣವಿರುವ ಅವು ಅರ್ಧ ನೇಟಿನ ಸಂಪುಟದಲ್ಲೇ ಅಡಗಿದ ಹೂವುಗಳು. ಅವುಗಳ ಗಂಧ ಸಹ ಪಾರಿಜಾತದಂತೆ ಗಾಳಿಗೆ ಪಸರಿಸುವುದಿಲ್ಲ. ಗಿಡದಲ್ಲಿ ಮರ್ಮರ ಸದ್ದೂ ಸಹವಿಲ್ಲ. ಈ ಗಿಡದ ಮೇಲೆ ಭ್ರಮರ ಎರಗುವದಿಲ್ಲ. ಹಕ್ಕಿಗಳು ಗೂಡು ಕಟ್ಟುವುದಿಲ್ಲ. ಹಾಗಾದರೆ ಅಂಥ ಯಾವ ವಿಶೇಷ ಈ ತುಳಸಿಯ ಸಸಿಯಲ್ಲಿದೆ? ಬೆರಳಿನಿಂದ ಕಿತ್ತಾಗ ಮಾತ್ರ ಇದರ ಗಂಧ-ಸುವಾಸನೆ ಅಡರುತ್ತದೆ. ಈ ಗಂಧ ಒಂದೇ ಕಡೆ ಇದ್ದರೂ ಹೃದ್ಯವಾಗಿರುತ್ತದೆ. ಮಾದಕವಾಗಿರುವುದಿಲ್ಲ. ಹೂ ಬೀಜದ ಪ್ರತಿಯೊಂದು ಹೂವುಗಳನ್ನು ಗಮನಿಸಿ. ಅರಳುವಾಗಲೂ ಕಂಪಿಸುತ್ತಿರುವಂತೆ ಭಾಸವಾಗುತ್ತದೆ. ನಾಚಿ ಮುದುಡಿಕೊಂಡಂತೆನಿಸುತ್ತದೆ. ಆದರೆ ಪ್ರತಿಯೊಂದು ಅರಳಿದ ಹೂವು ತೀರ ನಾಜೂಕು ಮತ್ತು ಖಚಿತ ಬಣ್ಣದಿಂದ ಅಲಂಕಾರಗೊಂಡಿರುತ್ತದೆ. ಮನೆಯಲ್ಲಿರುವ ವೃಂದಾವನದ ಮಾತಂತೂ ಬಿಡಿ, ಸಸಿಯೂ ಸಹ ಒಂಟಿ ಏಕಾಕಿಯಾಗಿ ಎಂದೂ ಇರುವುದಿಲ್ಲ. ಅದರ ಬೀಜ ಕಡುಕಪ್ಪು ಹಾಗೂ ಸುಂದರವಾಗಿ ಇರುತ್ತದೆ. ಗಾಳಿಯ ಅಲೆಯೊಂದಿಗೆ ಅದು ಸಹಜವಾಗಿ ಹಾರಿ ಹೋಗುತ್ತದೆ. ಮೊದಲ ಮಳೆಗೆ ಅಂಕುರಿಸುತ್ತದೆ. ಬಳಿಕ ತುಳಸಿ ಬನದ ಕಾಡೇ ಬೆಳೆಯುತ್ತದೆ. ಸರಳತನ, ಸೌಕುಮಾರ್ಯ, ಅಂತರ್ಯಾಮಿ ಮಾಧುರ್ಯದ ನಿಜವಾದ ರಸಾಪಾನವನ್ನು ಸೂಕ್ಷ್ಮತೆಯ ದೊಡ್ಡ ಅರ್ಥ ಮತ್ತು ಸೌಂದರ್ಯದ ಶತಬಣ್ಣದ ಕಲೆ, ನಿಶ್ಶಬ್ದ ಕಲೆಯನ್ನು ಕಾಣಬಲ್ಲ ಮರ್ಮಜ್ಞನೇ ಮಾಡಬಲ್ಲನೆಂದು

ನನಗನಿಸುತ್ತದೆ. ಈ ಕಲೆಯನ್ನು ಭಾರತದಲ್ಲಿಯ ತತ್ವಜ್ಞಾನಿಗಳು ಕಾವ್ಯಮಯವಾಗಿ ನಿಸರ್ಗದ ಎಲ್ಲ ಬಗೆಯ ಕಲಾಕುಸುರಿಯನ್ನು ಪರೀಕ್ಷಿಸುವ ಆ ಹಿರಿಕಿರಿಯ ಮಾನವತೆಯ ನಾಯಕರು, ಸಂಸ್ಕೃತಿಯ ನಿರ್ಮಾಪಕರು– ಎಂದೋ ತಮ್ಮದನ್ನಾಗಿ ಮಾಡಿಕೊಂಡಿದ್ದರು. ಕಠೋರತೆಯಲ್ಲಿ ಕಠೋರವಾದ, ಉಗ್ರತೆಯಲ್ಲಿ ಉಗ್ರವಾದ, ಭವ್ಯತೆಯಲ್ಲಿರುವ ಭವ್ಯವಾದುದೆಲ್ಲವೂ ನಿಜವಾದ ಅಕೃತ್ರಿಮ ಕಲಾಪ್ರೇಮದಿಂದ, ರಸಮಯ ಆಕೃತಿಯಲ್ಲಿ ಚಿತ್ರಿಸುವುದು ಸಾಧ್ಯವಾಯಿತು. ಈ ಸಿದ್ಧಿಯು ಲಭಿಸಿದ ಬಳಿಕ ಸೂಕ್ಷ್ಮತೆಯಲ್ಲಿಯ ಸೂಕ್ಷ್ಮ, ಕೋಮಲದಲ್ಲಿಯ ಮಾರ್ದವ, ಪರಮರುಚಿಕ ನಿಶ್ಶಬ್ದದಲ್ಲೂ ಅವುಗಳನ್ನು ಕಲೆಯಿಂದ ಕೂಡಿದ ವಾಣಿಯಿಂದ ಅಕ್ಷಯ ಮಾಡುವದು ಸಾಧ್ಯವಾದರೆ ಬೆರಗುಪಡಬೇಕಿಲ್ಲ. ಅಷ್ಟೇ ಅಲ್ಲ, ಆ ಎಲ್ಲ ಭಿನ್ನ ವಸ್ತುಗಳ, ಭಿನ್ನ ಭಾವಗಳ ಹಿಂದೆ ಒಂದೇ ಅವಿಚ್ಛಿನ್ನ ರೂಪದ ಎಳೆಯು ಹುದುಗಿದೆ. ಒಂದೇ ತೇಜೋಮಯ ನಿರ್ಮತಿಯ ಸೂತ್ರವು ಚರಾಚರವನ್ನು ಕಟ್ಟಿಹಾಕುತ್ತದೆ. ಜನನ ಮರಣದ ತೆಳುವಾದ ತೊಗಲಿನಿಂದ ದೈವದ ಲಾವಣ್ಯವು ಸಾವಿರ ಧಾರೆಯಲ್ಲಿ ಸತತ ತೊಟಿಕ್ಕುತ್ತವೆ. ಒಮ್ಮೆ ಅದು ವಿರಾಟ ದೃಶ್ಯದಿಂದ ಮಾನವನನ್ನು ಆಕರ್ಷಿಸಿದರೆ, ಮತ್ತೊಮ್ಮೆ ಚಿಕ್ಕ ರೂಪದಲ್ಲಿ. ಕಿರಿಯದನ್ನು ಮಾನವ ಪ್ರತಿಭೆಯು ವಾತ್ಸಲ್ಯದಿಂದ ನೇವರಿಸುತ್ತದೆ. ವಿರಾಟಕ್ಕೆ ಭಕ್ತಿಭಾವದಿಂದ ಶರಣುಹೋಗುತ್ತದೆ. ಈ ತುಳಸಿಯ ಕಿರಿರೂಪದ ಬಗೆಗೆ ಇದೇ ವತ್ಸಲ ಭಾವನೆಯು ಪ್ರಾಂತ ಪ್ರಾಂತದ ಭಾರತೀಯ ಮನದಲ್ಲಿ ಸ್ಮರಸಿರುವುದನ್ನು ಕಾಣುತ್ತೇನೆ. ವಿಷ್ಣುವಿನ ಪ್ರಣಯಿನಿಯರಲ್ಲಿ ಈ ನಾಯಿಕೆಯು, ಸದಾ ಭಯಭೀತೆಯಾಗಿ, ನಾಚುಬುರುಕಿಯಾಗಿ ಸದಾಕಾಲ ವರ್ಣರೂಪದಲ್ಲೇ ಅವನ ಕೊರಳನ್ನು ತಬ್ಬಿಕೊಂಡಿರುತ್ತಾಳೆ. ಈ ಭಾವನೆಯು ಎಲ್ಲ ಜಾತಿಗಳಲ್ಲಿ ಒಂದೇ ಆಗಿದೆ. ಆದರೆ ಈ ತುಳಸಿ ರಕ್ತಮಾಂಸದ ಸ್ತ್ರೀಯಲ್ಲ, ಗಿಡವಾಗಿದ್ದಾಳೆ. ಈ ದೇಹ ಹೇಗಿದೆ ಎಂದರೆ ಅದರ ಕಾಮದ ಸಂಪರ್ಕ ಯಾವ ಪುರುಷನೊಂದಿಗೂ ಸಾಧ್ಯವಿಲ್ಲ. ಹನ್ನೆರಡೂ ತಿಂಗಳು ಅರಳುವ ಅವಳ ಪುಷ್ಪಮಯ ಹೃದಯ ಮಾತ್ರ ಸತತ ಪ್ರಿಯಕರನ ಸಾನಿಧ್ಯವನ್ನು ಹುಡುಕುತ್ತಲೇ ಇರುತ್ತದೆ. ತುಳಸಿಯ ಲಗ್ನ ಸಹ ಬಾಳಕೃಷ್ಣನೊಂದಿಗೆ ಜರುಗುತ್ತದೆ. ಇವಳೂ ಸಹ ಅವಳ ಭೋಗ ರಹಿತ ಸೌಭಾಗ್ಯದ ಮತ್ತು ಅಖಂಡ ಕೌಮಾರ್ಯದ್ದೇ ಗುರುತು. ಮದುವೆಯಿಲ್ಲದೆ ಹೆಣ್ಣು ಬದುಕಬಾರದು. ಹಾಗಿದ್ದವಳು ಪತಿವ್ರತೆಯಾಗಿರಲಾರಳು ಎಂಬ ಮತವನ್ನು ಪುರಾಣದಲ್ಲಿ ಸ್ಪಷ್ಟವಾಗಿ ನೀಡಿದ್ದು ಕಂಡುಬರುತ್ತದೆ. ಆದ್ದರಿಂದಲೇ ತುಳಸಿಯ ಲಗ್ನದ ಈ ವಿವರವನ್ನು ಇಲ್ಲಿ ನೀಡಲಾಗಿದೆ. ತುಳಸಿಯು ಉತ್ಕಂಠಿತ ಪ್ರೇಮಲೆಯಾಗಿದ್ದರೂ ಅವಳು ಚಿರಕುಮಾರಿಯಾಗಿದ್ದಾಳೆ ಎನ್ನುವುದೇ ಈ ರಿವಾಜಿನ ಅಂತಿಮ ಸಾರವಾಗಿದೆ. ಈ ಕಲ್ಪನೆಯು ಮಹಾರಾಷ್ಟ್ರದಲ್ಲಿ ಮೊದಲಿನಿಂದಲೂ

ರೂಢಿಯಲ್ಲಿದೆ. ಉದಾ : ಕುಮಾರಿ ರವಿಕೆಯ ಮೇಲೆ ತುಳಸಿಯ ಹೊರತು ಬೇರೆ ಯಾವುದೇ ಕಸೂತಿಯನ್ನು ಹೆಣೆಯಬಾರದು ಎಂಬ ನಿಯಮವೇ ಮಹಾರಾಷ್ಟ್ರದ ನಾಗಪುರದ ಕಡೆಯಲ್ಲಿ ಇವತ್ತಿಗೂ ರೂಢಿಯಲ್ಲಿದೆ.

ತುಳಸಿಯ ಬಗೆಗಿನ ಎಲ್ಲ ಕಥೆಗಳ ಏಕಮೇವ ವೈಶಿಷ್ಟ್ಯವೇನೆಂದರೆ ಅದೆಲ್ಲ ಭೀಷಣ ಕಾರುಣ್ಯದಿಂದ ತುಂಬಿದ ಕಥೆಗಳಾಗಿವೆ. ತುಳಸಿಯ ಬಗೆಗಿನ ಜಾನಪದ ಗೀತೆಗಳಲ್ಲೂ ಇಂಥದೇ ಕರುಣರಸ ತುಂಬಿ ಹರಿಯುತ್ತಿದೆ.

ಪೌರಾಣಿಕ ಪರ್ಯಾಯ : ತುಳಸಿಯ ಕಥೆಯ ಆರು ಪರ್ಯಾಯಗಳು ಪುರಾಣದಲ್ಲಿವೆ. ಅವುಗಳಲ್ಲಿ ಬ್ರಹ್ಮವೈವರ್ತ ಮತ್ತು ದೇವಿ ಭಾಗವತದಲ್ಲಿಯ ನಾಲ್ಕು ಕಥೆಗಳು ಒಂದೇ ರೀತಿಯಾಗಿವೆ. ಸ್ಕಂದ ಪುರಾಣದಲ್ಲಿ ತುಳಸಿ ಮತ್ತು ವೃಂದಾ ಈ ಎರಡು ಹೆಸರಿನಲ್ಲಿ ಮೂರು ಬೇರೆ ಕಥೆಗಳಿವೆ. ಆದರೆ ಅವರಿಬ್ಬರನ್ನು ಒಂದೇ ಎಂದು ಭಾವಿಸಲಾಗಿದ್ದು ವಿಶೇಷ.

೧. ತುಳಸಿಗೆ ಹರಿಪ್ರಿಯಾ ಎಂಬ ಹೆಸರಿದೆ. ಆ ಹೆಸರು ಬರಲು ಕಾರಣವೇನು? ಎಂಬ ಬಗೆಗಿನ ವಿವರ ಹೀಗಿದೆ: ಸಮುದ್ರ ಮಂಥನದ ಕಾಲಕ್ಕೆ ಸ್ವರ್ಗದಿಂದ ಅಮೃತ ಹೊರಬಂತು. ಆಗ ಆ ಅಮೃತ ಕಲಶವನ್ನು ವಿಷ್ಣು ಮೊದಲಿಗೆ ಎತ್ತಿಕೊಂಡ. ಆಗ ಅಮೃತದ ಹನಿ ತುಳುಕಾಡಿ ಕೆಳಗೆ ಬಿತ್ತು. ಅದರಿಂದ ತುಳಸಿ ಹೊರಬಂದಳು. ಈ ತುಳಸಿ ಮರ ಮತ್ತು ಹೆಣ್ಣು ಹೀಗೆ ಎರಡು ರೂಪವನ್ನು ಪಡೆಯಿತು. ಬ್ರಹ್ಮದೇವನು ಲಕ್ಷ್ಮಿಯ ಜೊತೆಗೆ ಅವಳನ್ನೂ ವಿಷ್ಣುವಿಗೆ ಅರ್ಪಿಸಿದನು. ಈ ಕಾರಣಕ್ಕಾಗಿ ಅವಳಿಗೆ ಹರಿಪ್ರಿಯಾ ಎಂಬ ಹೆಸರು ನೀಡಲಾಯಿತು. ಈ ಕಥೆಯಲ್ಲಿ ತುಳಸಿ ಹಾಗೂ ಲಕ್ಷ್ಮಿಯನ್ನು ಸೋದರಿಯರೆಂದು ಬಣ್ಣಿಸಲಾಗಿದೆ.[೧]

೨. ಎರಡನೇ ಕಥೆಯಲ್ಲಿ ಮಾತ್ರ ಬೇರೆಯದನ್ನೇ ಹೇಳಲಾಗಿದೆ. ಅದು ಜಲಂಧರನಿಗೆ ಸಂಬಂಧಿಸಿದ ಕಥೆ. ರುದ್ರನ ಮೂರನೇ ಕಣ್ಣಿನಿಂದ ಹೊರಬರುವ ಅಗ್ನಿಯಿಂದ ಜಗತ್ತಿಗೆ ಸಂಕಟವಾಗಲಾರಂಭಿಸಿತು. ಆಗ ರುದ್ರನು ಅಗ್ನಿಯನ್ನು ಸಮುದ್ರದಲ್ಲಿ ವಿಸರ್ಜನೆ ಮಾಡಿದನು. ಆ ಅಗ್ನಿಯಿಂದ ಜಲಂಧರನು ಜನಿಸಿದನು. ಆ ಜಲಂಧರನು ಲಕ್ಷ್ಮಿಯ ಸೋದರ. ಅವನು ಮಹಾಪರಾಕ್ರಮಶಾಲಿ. ದೇವರು ಅಮೃತ ಮಂಥನದ ಕಾಲದಲ್ಲಿ ಕಪಟತನದಿಂದ ರಾಹುವಿನ ಗೋಣು ಕತ್ತರಿಸಿದ್ದು ಕೇಳಿ, ಅವನು ದೇವರ ವೈರಿಯಾದ. ಬಳಿಕ ದೇವರನ್ನು ಪೀಡಿಸಲಾರಂಭಿಸಿದ. ಅದರ ಪಾರುಪತ್ಯ ವಿಷ್ಣು ವಹಿಸಿಕೊಳ್ಳುವನಿದ್ದ. ಆದರೆ ಲಕ್ಷ್ಮಿ ಕೇಳಿದಳು – ನನ್ನ ಸೋದರನಿಗೆ ಸಂರಕ್ಷಣೆ ನೀಡುವ ಬದಲು ಕೊಲ್ಲುತ್ತೀರಾ? ಆಗ ವಿಷ್ಣು ಜಲಂಧರನ ಜೊತೆಗೆ ಸಖ್ಯ ಬೆಳೆಸಿದ. ನೀನು ಲಕ್ಷ್ಮಿಯ ಜೊತೆಗೆ ಬಂದು ನನ್ನ ಮನೆಯಲ್ಲಿ ವಾಸ ಮಾಡು ಎಂದು ಜಲಂಧರ ಹೇಳಿದ. ವಿಷ್ಣು ಒಪ್ಪಿ ಅಲ್ಲೇ ವಾಸ

ಮಾಡಲಾರಂಭಿಸಿದ. ಆಗ ಜಲಂಧರನ ಏಳ್ಗೆ ಹೇಗಾಯಿತು ಅಂತೀರಾ? ಅವನು ದೇವರಿಂದ ಪರಾಭವಗೊಳ್ಳಲಿಲ್ಲ. ದೈತ್ಯರ ಸೇನಾನಿಯಾದ. ಶಿವನ ಶೂಲವೂ ಅವನನ್ನು ಕೊಲ್ಲದಾಯಿತು. ಏಕೆಂದರೆ ವಿಷ್ಣುವಿನ ಸಾನಿಧ್ಯ ಮತ್ತು ವೃಂದಾಳ ಸತಿತ್ವ ಇವೆರಡರ ಸಂರಕ್ಷಣೆ ಜಲಂಧರನಿಗಿತ್ತು. ವೃಂದಾಳ ರೂಪ ಮನೋಹರವಾಗಿತ್ತು. ಅವಳ ಪಾತಿವ್ರತ್ಯವಂತೂ ಅಲೌಕಿಕವಾಗಿತ್ತು. ವಿಷ್ಣುವಿನ ಗಮನ ಅವಳತ್ತ ಹರಿಯಿತು. ವೃಂದಾಳ ಶೀಲವನ್ನು ಭಂಗ ಮಾಡಿದರೆ ಮಾತ್ರ ಜಲಂಧರನ ವಧೆ ಸಾಧ್ಯ, ಇಲ್ಲದೆ ಹೋದರೆ ಅಸಾಧ್ಯ ಎನ್ನುವುದು ದೇವರಿಗೆ ಗೊತ್ತಿತ್ತು. ಇದನ್ನು ವಿಷ್ಣುವಿನ ಹೊರತು ಬೇರೆ ಯಾರು ಮಾಡುವುದು ಸಾಧ್ಯ? ಆದರೆ ವೃಂದಾಳ ಸತೀತ್ವವನ್ನು ಭಂಗ ಮಾಡುವುದು ಅಷ್ಟೊಂದು ಸುಲಭವಲ್ಲ. ದೈವವಶಾತ್ ಒಮ್ಮೆ ಆ ಅವಕಾಶ ತಾನಾಗಿಯೇ ಬಂತು. ಜಲಂಧರನು ಪಾರ್ವತಿಯ ರೂಪಕ್ಕೆ ಮರುಳಾಗಿ ಶಂಕರನ ರೂಪವನ್ನು ಧರಿಸಿ ಅವಳ ಶೀಲಭಂಗ ಮಾಡಲು ಹೋದ. ಆದರೆ ಪಾರ್ವತಿ ಚತುರೆ. ಅವಳಿಗೆ ವಂಚನೆ ಗೊತ್ತಾಯಿತು. ಜಲಂಧರನನ್ನು ನಿರ್ಲಕ್ಷಿಸಿ ಅವಳು ಈ ಸುದ್ದಿಯನ್ನು ವಿಷ್ಣುವಿನ ಕಿವಿಗೆ ಹಾಕಿದಳು. ಜಲಂಧರನ ದುಷ್ಟತನವನ್ನು ಅವನದೇ ಯುಕ್ತಿಯಿಂದ ಪಾಠ ಕಲಿಸುವ ಕಲ್ಪನೆಯನ್ನು ವಿಷ್ಣು ಅಮಲಿಗೆ ತಂದನು. ಜಲಂಧರನು ಯುದ್ಧದಲ್ಲಿ ನಿರತನಾಗಿದ್ದಾಗ ವಿಷ್ಣು ಅವನ ರೂಪವನ್ನು ಧರಿಸಿ ವೃಂದಾಳ ಬಳಿಗೆ ಹೋದ. ಮೊದಲಿಗೆ ವೃಂದೆಗೆ ಗೊತ್ತಾಗಲಿಲ್ಲ. ಆದರೆ ಶೃಂಗಾರ ಮುಗಿದಾಗ ತನ್ನ ಘಾತವಾಯಿತು ಎನ್ನುವುದು ಅವಳ ಅರಿವಿಗೆ ಬಂತು. ಅವನು ವಿಷ್ಣು ಎನ್ನುವುದು ಅವಳಿಗೆ ಗೊತ್ತಾಯಿತು. ವಿಷ್ಣುವಿನ ಸಾನಿಧ್ಯದಲ್ಲಿ ಅವಳು ಉಪಭೋಗಿಸಿದ ಸುಖ, ಅರಿಯದೆ ಪತಿಗೆ ಮಾಡಿದ ವಂಚನೆ, ಅದರಿಂದ ವೃಂದೆಯ ಅಂತರಂಗ ಭಗ್ನಗೊಂಡಿತು. ಅವಳು ಸಿಟ್ಟಿಗೆದ್ದಳು. ಅಳಲಾರಂಭಿಸಿದಳು. ಅವಳು ವಿಷ್ಣುವಿಗೆ ಶಾಪ ನೀಡಿದಳು. ಈ ಜನ್ಮದಲ್ಲಿ ಕಪಟತನದಿಂದ ನನ್ನನ್ನು ವಂಚಿಸಿದೆ. ಇಂಥದೇ ದುಃಖವನ್ನು ನೀನು ಮುಂದಿನ ಜನ್ಮದಲ್ಲಿ ರಾಮನಾಗಿ ಭೋಗಿಸಬೇಕಾಗುವುದು. ರಾವಣ ಸೀತೆಯ ಅಪಹರಣ ಮಾಡುವನು. ಸ್ತ್ರೀ ವಿರಹದ ದುಃಖವನ್ನು ನೀನು ಸತತ ಭೋಗಿಸಬೇಕಾಗುತ್ತದೆ. ಬಳಿಕ ವಿಷ್ಣು ಬೇಡ ಬೇಡವೆಂದು ಹೇಳುತ್ತಿದ್ದರೂ ಅವಳು ಅಗ್ನಿಪ್ರವೇಶ ಮಾಡಿ ದೇಹವನ್ನು ತ್ಯಾಗ ಮಾಡಿದಳು. ವಿಷ್ಣು ತೀರ ಖಿನ್ನನಾದನು. ವೃಂದ ಅವನ ಅಂತಃಕರಣವನ್ನು ಮೋಹಿಸಿದ್ದಳು. ಅವಳ ಲಾವಣ್ಯದಿಂದ ಅವನು ಹುಚ್ಚನಾಗಿ ಅಲ್ಲೇ ಕೂತು ಉಳಿದ. ವೃಂದೆಯ ತೇಜವು ಅಂತರಿಕ್ಷಕ್ಕೆ ಹೋಗಿ ಗೌರಿಯನ್ನು ಸೇರಿಕೊಂಡಿತು.

ವಿಷ್ಣುವಿನ ಆ ಪ್ರೇಮ ಮೋಹಿತ ಅವಸ್ಥೆಯನ್ನು ಕಂಡು ದೇವರು ಭಯಗ್ರಸ್ತರಾದರು. ವಿಷ್ಣು ಪೂರ್ವಸ್ಥಿತಿಗೆ ಬರದ ಹೊರತು ಜಲಂಧರ ಸಾಯುವದು

ಸಾಧ್ಯವಿಲ್ಲ. ಹೀಗಾಗಿ ಅವರು ಗೌರಿಯಿಂದ ವೃಂದೆಯ ತೇಜೋಬೀಜವನ್ನು ತಂದು ಎಲ್ಲಿ ವಿಷ್ಣು ವೃಂದೆಯ ಜೊತೆಗೆ ವಿಲಾಸ ಮಾಡಿದನೋ ಅಲ್ಲಿ ತಂದು ಬಿತ್ತಿದರು. ಅಲ್ಲಿ ಹೆಣ್ಣಿನ ರೂಪದ ವನಸ್ಪತಿ ತುಳಸಿ ಹೊರಬಂದಳು. ಅವಳು ಪ್ರೇಮನೋಟವನ್ನು ವಿಷ್ಣುವಿನ ಕಡೆಗೆ ಬೀರಿದಳು. ಆಗ ವಿಷ್ಣುವಿನ ತಲ್ಲೀನತೆ ಭಗ್ನಗೊಂಡಿತು. ಅವನು ಅವಳತ್ತ ನೋಟ ಬೀರಿ ಅವಳನ್ನು ಅಪ್ಪಿಕೊಂಡನು.[೨]

ಅನಂತರ ವಿಷ್ಣು ಜಲಂಧರನ ವಧೆ ಮಾಡಿದನು. ತುಲಸಿಯ ಜನನದ ಈ ಎರಡನೇ ಕಥೆ ಕೃತ್ರಿಮವೆನಿಸುತ್ತದೆ. ವೃಂದಾಳ ಹಳೆಯ ಆಖ್ಯಾನಕ್ಕೆ ಜೋಡಿಸಿದ ತೇಪೆಯಿದು. ತುಲಸಿಯ ಸೌಭಾಗ್ಯದ ಮಹಿಮೆಯನ್ನು ಪುರಾಣಿಕರು ಬೇಕೆಂದೇ ಕೆಲವು ಪಾರಂಪಾರಿಕ ಜಾನಪದ ಕಥೆಯಿಂದ ಎತ್ತಿಕೊಂಡಿದ್ದಾರೆ. ಆ ಕಥೆ ಲುಪ್ತಗೊಂಡಿದ್ದರಿಂದ ಪೌರಾಣಿಕ ಕಥೆಗಳ ಕೃತ್ರಿಮತೆಯನ್ನು ಪ್ರತಿಯೊಂದು ಕಥಾಬೀಜವನ್ನು ಅನಾವರಣಗೊಳಿಸಿ ಸಿದ್ಧ ಮಾಡಲು ಬರುವುದಿಲ್ಲ. ಆದರೂ ವೃಂದೆಯು ತುಲಸಿಯ ಸಸಿಯಲ್ಲಿ ರೂಪಾಂತರ ಏಕೆ ಮತ್ತು ಹೇಗೆ ಆಯಿತು ಎನ್ನುವುದು ಪುರಾಣದ ಕಥೆಯ ಮರವಣಿಯಿಂದ ಅನಾವರಣಗೊಳ್ಳುವುದಿಲ್ಲ. ನೂರಾರು ಜಾನಪದ ಕಥೆಯಲ್ಲಿ ಅದನ್ನು ಸ್ಪಷ್ಟಗೊಳಿಸಿದ ಹಾಗಿದೆ.

೩. ತುಲಸಿಯ ಕಥೆಯಲ್ಲಿ ಮೂರರಿಂದ ಆರರವರೆಗೆ ಪರ್ಯಾಯವಿದೆ. ತುಲಸಿಯ ಗಿಡಗಳು ಗುಂಪುಗುಂಪಾಗಿ ಬೆಳೆಯುವುದರಿಂದ ವೃಂದಾ ಹೆಸರಿಗೆ ಮಹತ್ವವಿದೆ, ಇಷ್ಟೇ. ವೃಂದಾ ಎಂಬ ಹೆಸರು ವರ್ಣನಾತ್ಮಕ ಮತ್ತು ಶ್ಲೇಷರೂಪವೇ ಆಗಿದೆ. ವೃಂದಾ ತುಲಸಿ, ಸ್ತ್ರೀ ಮತ್ತು ಮರ ಇವುಗಳಲ್ಲಿಯ ಅವಿಭಾಜ್ಯತೆಯು ಪೌರಾಣಿಕ ಕಥೆಯ ರೂಪಕದಲ್ಲಿ ಯಶಸ್ವಿಯಾಗಲಿಲ್ಲ. ಪತಿವ್ರತೆಯ ಕಲ್ಪನೆಗೆ ಅವಾಸ್ತವ ಮಹತ್ವ ನೀಡಿ ರಚಿಸಿದ ಇದು ತೇಪೆಯಾಗಿದ್ದು, ಮೂಲಕಥೆಯನ್ನು ವಿಪರ್ಯಾಸಗೊಳಿಸಿದ್ದು ಕಾಣಬರುತ್ತದೆ. ಈ ಮೂರು ಪರ್ಯಾಯದಲ್ಲಿ ತುಲಸಿ ಎಂಬ ಹೆಸರೇ ಇದೆ.

ತುಲಸಿಯ ಉತ್ಪತ್ತಿಯ ಸ್ಕಂದ ಪುರಾಣದಲ್ಲಿಯ ಕಥೆಯು ಪರಸ್ಪರ ವಿಸಂಗತಿಯಾಗಿದ್ದರೂ ತುಲಸಿ ಮತ್ತು ವಿಷ್ಣುವಿನ ಸಂಗಮದ ಕಥಾಬೀಜ ಮಾತ್ರ ಅನುಸರಣೀಯವಾಗಿರುವಂತೆ ಈ ಮೂರು ಪರ್ಯಾಯವೂ ಆಗಿದೆ. ಕಥೆ ಮಾತ್ರ ಕೆಲವು ಸಮಾನ ಮತ್ತೆ ಕೆಲವು ವಿರುದ್ಧವೂ ಆಗಿವೆ. ಸ್ಕಂದ ಪುರಾಣಕ್ಕಿಂತ ಈ ಕಥೆಯು ನಡುವಿನದು ಬಿಟ್ಟು, ಅಧಿಕ ಕೃತ್ರಿಮವಾಗಿದೆ.

ತುಲಸಿಯ ಉತ್ಪತ್ತಿಯ ಕಥೆ ಹೇಗಿದೆ ಎಂದರೆ, ವಿಷ್ಣುವಿಗೆ ಮೂವರು ಪತ್ನಿಯರಿದ್ದರು. ಲಕ್ಷ್ಮಿ–ಗಂಗಾ–ಸರಸ್ವತಿ. ಒಮ್ಮೆ ಗಂಗೆ ಇಬ್ಬರು ಸವತಿಯರ ಎದುರೇ ವಿಷ್ಣುವಿನ ಕಡೆಗೆ ನೋಡಿ ನಕ್ಕಳು. ವಿಷ್ಣು ಸಹ ಪ್ರೇಮದಿಂದ ಮಾರು ನಗೆಯನ್ನು ಬೀರಿದ. ಅವರ ಈ ಪ್ರೇಮ ಸಂಕೇತವನ್ನು ನೋಡಿ ಲಕ್ಷ್ಮಿಗೆ ಏನೂ

ಅನಿಸಲಿಲ್ಲ. ಆದರೆ ಸರಸ್ವತಿಗೆ ಅವರ ಬಹಿರಂಗ ಪ್ರಣಯದ ಮತ್ತು ವಿಷ್ಣುವಿನ ಪಕ್ಷಪಾತದ ಬಗೆಗೆ ಸಿಟ್ಟು ಬಂತು. ಅವಳು ಜಗಳಾಡಲಾರಂಭಿಸಿದಳು. ವಿಷ್ಣು ಗಂಗೆ ಮತ್ತು ಲಕ್ಷ್ಮಿಯನ್ನು ಸಮಾನವಾಗಿ ಪ್ರೀತಿಸುತ್ತಾನೆ. ನನ್ನ ಮೇಲೆ ಎಲ್ಲಿದೆ? ಯಾರಿಗೆ ಗಂಡನ ಪ್ರೀತಿ ಸಿಗುವುದಿಲ್ಲವೋ ಅವಳು ಬದುಕಿಯಾದರೂ ಏನು ಉಪಯೋಗ? ಗಂಗೆ ಮತ್ತು ಲಕ್ಷ್ಮಿ ಪರಸ್ಪರರು ಪ್ರೀತಿಸುತ್ತಾರೆ. ಒಬ್ಬರಿಗೊಬ್ಬರು ಅನುಕೂಲವು ಆಗಿದ್ದಾರೆ. ಈ ಕಾರಣಕ್ಕಾಗೆ ಅವಳು ಈ ತುಂಟತನವನ್ನು ಸಹಿಸಿದ್ದಾಳೆ. ಅವಳ ಈ ಮಾತಿಗೆ ವಿಷ್ಣು ಎದ್ದು ಮೌನವಾಗಿ ಹೊರನಡೆದ. ಅವನು ಹೋದ ಬಳಿಕ ಸರಸ್ವತಿಗೆ ಮತ್ತಷ್ಟು ಹುರುಪು ಬಂತು. ಅವಳು ಗಂಗೆಗೆ ಹೇಳಿದಳು. 'ಎಲೈ ನಿರ್ಲಜ್ಜೆ, ಕಾಮುಕಳೆ, ನಿನಗೆ ದೊಡ್ಡಸ್ತಿಕೆಯ ಗರ್ವ ಬಂದಿದೆ. ಗಂಡನಿಂದ ಹೆಚ್ಚು ಪ್ರೇಮವನ್ನು ಪಡೆಯಲು ನೀನು ಹವಣಿಸುತ್ತಿದ್ದೀಯೆ. ನೀನು ಅವನ ಎದುರಿಗೆ ಮಾನಹಾನಿ ಮಾಡುತ್ತಿದ್ದೀಯೆ. ನಿನ್ನ ಪ್ರಿಯಕರ ಏನು ಮಾಡುತ್ತಾನೋ ನಾನು ನೋಡೇಬಿಡುತ್ತೇನೆ' ಎಂದವಳು ಗಂಗೆಯ ಕೂದಲು ಹಿಡಿದು ಎಳೆಯಬೇಕೆನ್ನುವಷ್ಟರಲ್ಲಿ ಲಕ್ಷ್ಮಿ ಮುಂದೆ ಬಂದು, ಅವಳನ್ನು ಹಿಂದೆ ತಳ್ಳಿದಳು. ಅದನ್ನು ಕಂಡ ಸರಸ್ವತಿ ಅವಳಿಗೆ ಶಾಪ ನೀಡಿದಳು. ನೀನು ಹೊಳೆಯಾಗು, ಗಿಡವಾಗು. ಅದನ್ನು ಕಂಡು ಗಂಗೆಗೂ ಕೋಪ ಬಂತು. ಅವಳೆಂದಳು: 'ಈ ದುಷ್ಟ ವಾಣಿಯೂ ಕಲಹಪ್ರಿಯಳು. ಸೊಕ್ಕು ಬಂದಿದೆ ಅವಳಿಗೆ. ಅವಳಿಗೆ ಸರಿಯಾಗಿ ಪಾಠ ಕಲಿಸುತ್ತೇನೆ. ಅಲ್ಲವೇ, ನೀನೆ ಹೊಳೆಯಾಗುತ್ತೀಯೆ, ಪಾಪಿಗಳ ದೇಶದಲ್ಲೇ ಹರಿಯುತ್ತ ಹೋಗುತ್ತೀಯೆ. ವನದಲ್ಲಿ ಮನುಷ್ಯನ ಪಾಪದ ಪಾಲು ನಿನಗೂ ಬರಲಿ.'

ಸರಸ್ವತಿ ಕೆರಳಿ : 'ನೀನೂ ನದಿಯಾಗು' ಎಂದು ಶಪಿಸಿದಳು

ಈ ಜಗಳ ಕೇಳಿ ವಿಷ್ಣು ಒಳಗೆ ಬಂದ. ಸರಸ್ವತಿಯನ್ನು ಬಳಿಗೆ ಕರೆದು ಅಪ್ಪಿಕೊಂಡ. ಅವಳಿಗೆ ಬೋಧಿಸಿದ. ಸರಸ್ವತಿಯ ಸಿಟ್ಟು ಅಳಿದು ಪಶ್ಚಾತ್ತಾಪ ಪಟ್ಟಳು. ಗಂಗೆಗೂ ಖೇದವಾಯಿತು. ಆದರೆ ಶಾಪ ಮಾತ್ರ ಹುಸಿಯಾಗಲಿಲ್ಲ. ಲಕ್ಷ್ಮಿಯು ಪದ್ಮಾವತಿ (ಗಂಡಕಿ) ನದಿಯಾದಳು ಮತ್ತು ತುಲಸಿ ರಾಜಕನ್ಯೆಯಾದಳು.[೩]

೪. ತುಲಸಿಯ ಉತ್ಪತ್ತಿ ಕಥೆಯ ಮತ್ತೂ ಒಂದು ಪರ್ಯಾಯವಿದೆ. ಇದಂತೂ ತೀರ ವಿಪರ್ಯಾಸ ಮತ್ತು ಕೃತಕತೆಯಿಂದ ಕೂಡಿದೆ. ಅದು ಹೀಗಿದೆ: ಗೋವಿನ ಲೋಕದಲ್ಲಿ ಒಮ್ಮೆ ರಾಸೇಶ್ವರಿ ರಾಧಾ ಮತ್ತು ಸುಧಾಮ ಗೋಪನ ಜಗಳವಾಯಿತು. ಆಗ ರಾಸೇಶ್ವರಿಯು ಸುಧಾಮನಿಗೆ ಶಾಪ ನೀಡಿದಳು: 'ನೀನು ಶಂಖಚೂಡ ದೈತ್ಯನಾಗು.' ಅದೇ ರೀತಿ ಕೃಷ್ಣನು ವಿರಜೆ ಎಂಬ ಗೋಪಿಕೆಯ ಕೈ ಹಿಡಿದು ಹೊರಟನು. ಇದನ್ನು ಯಾರೋ ರಾಧೆಯ ಕಿವಿಗೆ ಹಾಕಿದರು. ಅವಳು ವಿರಜೆಗೆ ನೀನು ಮರ್ತ್ಯಲೋಕದಲ್ಲಿ ತುಲಸಿಯಾಗಿ ಜನಿಸುವೆ ಎಂದು ಶಾಪ

ನೀಡಿದಳು: ಒಮ್ಮೆ ಸುಧಾಮನು ನಿನ್ನನ್ನು ಬಯಸಿದ್ದರಿಂದ ಸೀತೆ ಅವನ ಪತ್ನಿಯಾಗುವಿ ಮುಂದೆ ಶಾಪ ವಿಮೋಚನೆಯಾಗಿ ಅವಳು ಶಂಖಚೂಡನಿಗೆ ವಿಷ್ಣುವಿನಿಂದ ಸಾವು ಮತ್ತು ತುಲಸಿಗೆ ವಿಷ್ಣುವಿನೊಂದಿಗೆ ಶೃಂಗಾರ ಮಾಡುವ ವರವನ್ನು ನೀಡಿದಳು.

೫. ತುಲಸಿ ವೃಷಧ್ವಜ ರಾಜನ ಸುಂದರ ಮಗಳು. ಅತುಲ[೪] ಸೌಂದರ್ಯದಿಂದಾಗಿ ಅವಳಿಗೆ ತುಲಸಿ ಹೆಸರು ನೀಡಲಾಯಿತು. ನಾರಾಯಣನು ಪತಿಯಾಗಿ ಸಿಗಲಿ ಎಂದವಳು ಕಾಡಿನಲ್ಲಿ ತಪ ಮಾಡಿದಳು. ಅಲ್ಲಿ ರೂಪಸುಂದರಿಯಾದ ಈ ಯುವತಿಯು ಶಂಖಚೂಡನ ಕಣ್ಣಿಗೆ ಬಿದ್ದಳು. ಅವರಿಬ್ಬರು ಪರಸ್ಪರರಲ್ಲಿ ಅನುರಕ್ತರಾದರು. ಅವರು ಗಂಧರ್ವ ವಿವಾಹ ಮಾಡಿದರು. ಮುಂದೆ ಶಂಖಚೂಡನು ಯುದ್ಧದಲ್ಲಿ ದೇವರನ್ನು ಪರಾಭವಗೊಳಿಸಿದನು. ಶಂಕರನ ತ್ರಿಶೂಲವೂ ಅವನನ್ನು ಕೊಲ್ಲಲಾರದು. ಇದು ತುಲಸಿಯ ಪತಿವ್ರತೆಯ ಪ್ರಭಾವವಾಗಿತ್ತು. ಅವಳ ಶೀಲವನ್ನು ಭ್ರಷ್ಟ ಮಾಡದ ಹೊರತು ಅವನು ಸಾಯಲಾರ. ಇದನ್ನು ಕಂಡು ವಿಷ್ಣು ಮುದುಕ ಯಾಚಕನ ರೂಪವನ್ನು ಧರಿಸಿದನು. ಅವನು ರಣಾಂಗಣದಲ್ಲಿ ಶಂಖಚೂಡನಿಗೆ ನನಗೆ ನಿನ್ನ ಕವಚವನ್ನು ಕೊಡು ಎಂದು ಬೇಡಿದನು. ಶಂಖಚೂಡನು ಕವಚವನ್ನು ನೀಡಿದನು. ಮುಂದೆ ವಿಷ್ಣು ಶಂಖಚೂಡನ ರೂಪ ಧರಿಸಿ ತುಲಸಿಯ ಬಳಿಗೆ ಹೋಗಿ ಪ್ರೇಮಯಾಚನೆ ಮಾಡಿದನು. ಪತಿ ರಣಾಂಗಣದಿಂದ ಆಕಸ್ಮಿಕವಾಗಿ ಮರಳಿರುವುದನ್ನು ಕಂಡು ಅವಳಿಗೆ ಅಚ್ಚರಿಯಾಯಿತು. ಆದರೆ ತಾನು ದೇವರ ಪರಾಭವ ಮಾಡಿ ಬಂದಿದ್ದೇನೆ. ಕೆಲ ಕಾಲವಾದರೂ ಅವರಿಂದ ಯಾವ ಭಯವೂ ಇಲ್ಲ ಎಂದು ಸುಳ್ಳು ಹೇಳಿದನು. ತುಲಸಿ ಅವನ ಸ್ವಾಧೀನಳಾದಳು. ಆದರೆ ಕೆಲ ಸಮಯದ ಬಳಿಕ ಅವನು ತನ್ನ ಪತಿಯಲ್ಲ ಎನ್ನುವುದು ಅವಳ ಗಮನಕ್ಕೆ ಬಂತು. ಅವಳು ಈ ಮಾತನ್ನು ವಿಷ್ಣುವಿಗೂ ಹೇಳಿದಳು. ವಿಷ್ಣು ತನ್ನ ನಿಜರೂಪವನ್ನು ಧರಿಸಿ, ನಡೆದ ಘಟನೆಯನ್ನು ಒಪ್ಪಿಕೊಂಡನು. ಕೂಡಲೇ 'ನೀನು ಕಲ್ಲಾಗು' ಎಂದು ತುಲಸಿ ವಿಷ್ಣುವಿಗೆ ಶಾಪ ನೀಡಿ ದೇಹವನ್ನು ತ್ಯಾಗ ಮಾಡಿದಳು. ಅವಳ ದೇಹವು ಗಂಡಕಿ ನದಿಯಾಯಿತು. ಅವಳ ಕೂದಲು ತುಲಸಿಯ ಸಸಿಯಾಯಿತು. ವಿಷ್ಣು ಸಾಲಿಗ್ರಾಮನಾದ.[೫]

೬. ಲಕ್ಷ್ಮಿ, ಗಂಗೆ, ಸರಸ್ವತಿ ಮತ್ತು ತುಲಸಿ – ಹೀಗೆ ವಿಷ್ಣುವಿಗೆ ನಾಲ್ವರು ಮಡದಿಯರು.[೬] ಹರಿ ತುಲಸಿಯ ಜೊತೆಗೆ ಹೆಚ್ಚು ಪ್ರಣಯ ಕ್ರೀಡೆ ಮಾಡುತ್ತಿದ್ದ. ಲಕ್ಷ್ಮಿ ಮತ್ತು ಗಂಗೆ ಅದನ್ನು ಸಹಿಸಿದರು. ಆದರೆ ಸರಸ್ವತಿಗೆ ಸಹಿಸುವುದಾಗಲಿಲ್ಲ. ಅವಳು ಜಗಳ ಆರಂಭಿಸಿದಳು. ತುಲಸಿಗೆ ಹೊಡೆದಳು. ಆಗ ಮಾನಿನಿಯಾದ ತುಲಸಿ ನಾಚಿಕೆಯಿಂದ ಮುದುಡಿದಳು, ದುಃಖಿತಳಾದಳು, ಅಂತರ್ಧಾನಗೊಂಡಳು. ಸರಸ್ವತಿಗೆ ಬುದ್ಧಿ ಮಾತು ಹೇಳಿ, ಅವಳ ಅನುಮತಿಯನ್ನು ಪಡೆದು ವಿಷ್ಣು

ವೃಂದಾವನಕ್ಕೆ ಬಂದ. ಅವನು ತುಲಸಿಯ ಪೂಜೆ ಮಾಡಿದ. ಆರಾಧನೆ ಮಾಡಿದ. ಆಗ ತುಲಸಿ ಪ್ರತ್ಯಕ್ಷಳಾದಳು. 'ನಾನು ನಿನ್ನನ್ನು ಕೊರಳಲ್ಲಿ, ಮಸ್ತಕದಲ್ಲಿ ಧರಿಸುವೆ. ನೀನು ವಿಶ್ವವಂದ್ಯಳಾಗುವೆ' ಎಂದು ವಿಷ್ಣು ಅವಳಿಗೆ ವರದಾನವನ್ನು ನೀಡಿದನು. ಸರಸ್ವತಿಯೂ ಅವಳನ್ನು ಆಲಂಗಿಸಿಕೊಂಡಳು. ಇದು ತುಲಸಿಯ ಜನ್ಮ ಮಂಗಲದ ಕಥೆ. ತುಲಸಿ ಗಿಡದ ರೂಪದಲ್ಲಿ ಹೇಗೆ ಪ್ರತ್ಯಕ್ಷಳಾದಳು ಎಂಬ ಕಥೆ. ಈ ಘಟನೆಯು ಕಾರ್ತಿಕ ಹುಣ್ಣಿಮೆಯಂದು ಜರುಗಿತು.[೭] ತುಳಸಿಯ ಪಾತಿವ್ರತ್ಯದ ಮಹಿಮೆಯ ಅಡಿಪಾಯವು ಈ ಕಥೆಯಲ್ಲಿ ಭದ್ರವಾಗಿ ನೆಲೆಸಿದಂತೆ ಉಳಿದ ಕಥೆಗಳಲ್ಲಿ ಇಲ್ಲ ಎನ್ನುವುದು ಸತ್ಯ. ಅದೇ ರೀತಿ ಲಕ್ಷ್ಮಿ, ಗಂಗೆ, ಸರಸ್ವತಿಯ ಆಖ್ಯಾನವನ್ನು ವಿಷ್ಣುವಿನ ವರ್ತನೆ ಮತ್ತು ಕಾಮುಕತನದ ಮೇಲೆ ಹೊದಿಕೆ ಹಾಕಲು ಅನಂತರ ಸೂತಕಾದಿಗಳು ಜೋಡಿಸಿದ ತೇಪೆ ಎನ್ನುವುದೂ ಸತ್ಯವೇ ಆಗಿದೆ. ಸವತಿ ಮತ್ಸರ ಇದೊಂದೇ ಬೀಜ ಆ ಕಥೆಯಲ್ಲಿರುವುದರಿಂದ ಅನೃತ, ಸಾಹಸ, ಮಾಯೆ, ಅವಿವೇಕ ಮುಂತಾದ ಪೌರಾಣಿಕರ ಸ್ತ್ರೀ ಚಾರಿತ್ರ್ಯದ ಮುದ್ದಿನ ಕಲ್ಪನೆಯನ್ನೇ ಈ ಬೀಜ ಆಧರಿಸಿದ್ದು ಎಂಬ ಪುರಾವೆಯ ('ಅನೃತ, ಸಾಹಸ, ಮಾಯಾ' ಎಂಬ ಶ್ಲೋಕವನ್ನು ಈ ಆಖ್ಯಾನದಲ್ಲಿ ನೀಡಿದ್ದರಿಂದ) ಲಭಿಸುತ್ತದೆ. ಆದರೂ ಅದರಲ್ಲಿಯ ಕಥಾಬೀಜವು ಮಹತ್ವದ್ದು.

ಜಲಂಧರಾಖ್ಯಾನ ಮತ್ತು ಶಂಖಚೂಡಾಖ್ಯಾನ ಎಂಬ ಎರಡೇ ಮುಖ್ಯ ಆಖ್ಯಾನ ಇಲ್ಲಿದೆ. ಅದರಲ್ಲಿಯ ಮುಖ್ಯ ಕಥಾಬೀಜ ಹೀಗಿದೆ – (೧) ಪತಿ-ಪತ್ನಿಯರ ಪರಸ್ಪರ ಅತೀವ ಪ್ರೇಮ (ತುಲಸಿಯ ನಾರಾಯಣನೇ ಪತಿಯಾಗಿ ಸಿಗಲೆಂದು ತಪ ಮಾಡಿದ ಕಥಾಭಾಗವು ವಿಷ್ಣುವಿನ ಸ್ವಭಾವದ ಸಮರ್ಥನೆ ಮಾಡಲೆಂದು ಸೇರಿಸಲಾಗಿದೆ.) (೨) ಈ ಹೆಣ್ಣು ವಿಷ್ಣುವಿಗೆ ವಶವಾಗುವುದಿಲ್ಲ ಎನ್ನುವುದು ಗೊತ್ತಿದ್ದರಿಂದ ಅವನು ಕಪಟತನದಿಂದ ಮಾಡಿದ ಶೀಲಹರಣ. (೩) ಅವಳ ಪಶ್ಚಾತ್ತಾಪ ಮತ್ತು ದೇಹತ್ಯಾಗ. (೪) ದೇಹದಿಂದ ಹೊರಬರುವ ಗಿಡ. (೫) ಕೊನೆಗೆ ಅವಳಿಗೆ ಬಲತ್ಕಾರ ಮಾಡುವ ನಾಯಕನ ಬಗೆಗೆ ಉಂಟಾದ ಅತೀವ ಪ್ರೇಮ.

ಮರಾಠಿ ಜಾನಪದ ಸಾಹಿತ್ಯ : ಮರಾಠಿಯ ಜಾನಪದದಲ್ಲಿ ತುಲಸಿ ಕಥೆಯ ಎರಡು ಪರ್ಯಾಯ ನನಗೆ ಸಿಕ್ಕಿವೆ. ಒಂದು ಪರ್ಯಾಯ ನಾಶಿಕ ಕಡೆಯ ಒಬ್ಬ ವಣಜಾರಿ ಮಹಿಳೆಯು ನೀಡಿದ್ದು (ಪರ್ಯಾಯವಾಗಿ ಮಹಾರರಾದಿಯಾಗಿ ಬ್ರಾಹ್ಮಣದವರೆಗೆ ಎಲ್ಲೆಡೆ ಲಭಿಸುವಂತಹದು) ಓವ್ಹಿಯಲ್ಲಿ ಅರೆಬರೆ ಆಖ್ಯಾನದಲ್ಲಿ ಹರಡಿಕೊಂಡಿದೆ. ಹೀಗಾಗಿ ಊಹೆ ಮಾಡಬೇಕಾಗುತ್ತದೆ. ಅದರಲ್ಲಿ ತುಲಸಿಯು ವಿಷ್ಣುವಿನ ನಾದಿನಿಯಾಗಿದ್ದು, ಅವನು ಅವಳನ್ನು ಬಲವಂತದಿಂದ ವಶ ಪಡಿಸಿಕೊಂಡನು ಎಂದು ಹೇಳಲಾಗಿದೆ. ಎರಡನೆಯದು ತುಲಸಿಯ ಬಗ್ಗೆ ಕರುಣೆ

ಉಕ್ಕಿ ಹರಿದಿರುವುದನ್ನು ಓವ್ಹಿಯಲ್ಲಿ ಹೇಳಲಾಗಿದೆ. ತುಲಸಿ ಪತಿವ್ರತೆಯಾಗಿದ್ದರೂ ಸುಖಿಯಾಗಿಲ್ಲ. ಅವಳು ಬಡವೆ. ಬಟಾಬಯಲಿನಲ್ಲೇ ವಾಸ ಮಾಡುವವಳು. ಆಸರೆ ಇಲ್ಲ. ಮಹಾರಾಷ್ಟ್ರದ ತುಂಬೆಲ್ಲ ಪಸರಿಸಿದ ತುಲಸಿಯ ಓವ್ಹಿಯಲ್ಲಿ ಹೇಳಲಾಗಿದೆ. (ಇದು ಬೀಸುವ ಕಲ್ಲಿನ ಹಾಡಿನಲ್ಲಿದೆ)...

ಈ ಸ್ಫುಟ ಓವ್ಹಿಯಲ್ಲಿ ತುಲಸಿಯು ಕಾಶಿ ಖಂಡದಿಂದ ಬಂದ ಒಬ್ಬ ಅನಾಥ ಹುಡುಗಿ. ವಿಠ್ಠಲ ಅವಳನ್ನು ನಾದಿನಿ ಅನ್ನುತ್ತಾನೆ. ಆದರೆ ಅವಳನ್ನು ಪ್ರೀತಿಸಿ ವಶಪಡಿಸಿಕೊಳ್ಳುತ್ತಾನೆ. ರುಕ್ಮಿಣಿಗೆ ಅವಳ ಬಗೆಗೆ ಮತ್ಸರ – ಇದಿಷ್ಟೇ ಕಥೆಯ ಭಾಗ ಕೈಗೆ ಸಿಗುತ್ತದೆ. ಆದರೆ ಕಾಶಿ ಖಂಡದಲ್ಲಿಯ ಆ ಹಕ್ಕಿಗಳು ಗಿಡಗಳಲ್ಲಿ ಬದಲಾಗಿದ್ದು ಹೇಗೆ ಎನ್ನುವುದರ ಬಗೆಗಿನ ಕಥೆ ಮಾತ್ರ ಸಿಗುವುದಿಲ್ಲ. ಈ ಘಟನೆಯು ಪೌರಾಣಿಕ ಕಥೆಯಿಂದ ನಿರ್ಮಾಣವಾಗಿದೆ. ಸ್ವತಂತ್ರವಾಗಿ ನಿರ್ಮಾಣವಾಗಿದೆ ಎನ್ನುವುದು ಮಾತ್ರ ಸತ್ಯ. ಸವತಿ ಮತ್ಸರದ ಬೀಜ ಮಾತ್ರ ಪೌರಾಣಿಕ ಕಥೆಯಲ್ಲಿಯದು ಮತ್ತು ಇಲ್ಲಿಯದು ಒಂದೇ ಬದಲಾವಣೆಯ ಬೀಜ ಮತ್ತು ವಿಠ್ಠಲನು ಪರಕೀಯ ನಾರಿಯನ್ನು ವಶಪಡಿಸಿಕೊಂಡ ಬೀಜವು ಒಂದೇ ಎನ್ನುವುದು ಗಮನಿಸಬೇಕಾದ ಸಂಗತಿ.

ಆದರೆ ತುಲಸಿಯ ಕೌಮಾರ್ಯಭಾವ ಮತ್ತು ಗಿಡವಾದ ಬಳಿಕವೇ ಅವಳ ಚಿರಮಿಲನವು ವಿಷ್ಣುವಿನೊಂದಿಗೆ ಆಗುವ ಕಥೆಯು ಕೊಂಕಣದಲ್ಲಿಯ ಒಂದು ಕೃಷಿ ಜಾನಪದ ಕಥೆಯಲ್ಲಿ ನನಗೆ ಲಭಿಸಿತು. ತುಲಸಿಯ ಬದಲಾವಣೆಯ ಬಗೆಗಿನ ಇಂಥ ಸುಂದರ ರೂಪಕ ವಿರಳವಾಗಿ ಕಾಣಲು ಸಿಗುತ್ತದೆ. ಈ ಕಥೆಯ ಮೇಲೆ ನೀಡಿದ ಎಲ್ಲ ಕಥೆಗಿಂತಲೂ ತೀರ ಭಿನ್ನವಾಗಿದೆ. ಆದರೆ ತುಲಸಿ ಮಾತ್ರ ಅನಾಥ ಹುಡುಗಿ. ಈ ಕಥಾ ಬೀಜಕ್ಕೆ ನೀಡಿದ ಶ್ರೇಷ್ಠ ಸ್ವರೂಪವನ್ನು ಈ ಕಥೆಯಲ್ಲಿ ನೀಡಲಾಗಿದೆ. ಸವತಿ ಮತ್ಸರದ ಬೀಜವು ಪ್ರಾಮುಖ್ಯವಾಗಿ ಬಂದಿದೆ. ಗಮನಿಸಬೇಕಾದ ಮತ್ತೂ ಒಂದು ಸಂಗತಿ ಎಂದರೆ ಈ ಕೊಂಕಣದ ಕಥೆಗೂ ಗ್ರೀಕ್ ಅಪೋಲೋ ಮತ್ತು ಡಫ್ನೆ, ಈ ಕಥೆಗೂ (ಮತ್ತು ಪರ್ಯಾಯವಾಗಿ ರೋಮನ್ ಸಿರೀಸ್ ಎಂಬ ಧಾನ್ಯದೇವತೆಯ, ಪ್ರಾಸೆರ್‌ಪೈನ್ ಇಲ್ಲವೇ ವಸಂತಶ್ರೀ ಎಂಬ ಹುಡುಗಿಯು ದಾಳಿಂಬೆಯ ಗಿಡದಲ್ಲಿ ಹೇಗೆ ರೂಪಾಂತರಗೊಳ್ಳುತ್ತಾಳೆ ಎಂಬ ಕಥೆಯೊಂದಿಗೆ) ವಿಚಿತ್ರವಾದ ಸಾಮ್ಯವಿದೆ. ಕೊಂಕಣದಲ್ಲಿಯ ರೈತರ ಕಥೆಗಳಿಗೂ ಒಟ್ಟೂ ಗ್ರೀಕ್ ಕಥೆಗಳಿಗೂ ತುಂಬ ಸಾಮ್ಯವಿದೆ. ಅವುಗಳಲ್ಲಿ ತುಳಸಿಯ ಕಥೆಯೂ ಒಂದು. ಹೀಗಾಗಿ ಮೊದಲಿಗೆ ತುಳಸಿಯ ಕಥೆಯನ್ನು ನೀಡಿ, ಬಳಿಕ ಗ್ರೀಕ್ ಕಥೆಯನ್ನು ಸ್ವಲ್ಪದರಲ್ಲಿ ನೀಡಲಾಗಿದೆ. ಕೊಂಕಣದ ಜಾನಪದ ಕಥೆಗೂ, ಗ್ರೀಕ್ ಕಥೆಗೂ ಇರುವ ಸಾಮ್ಯವೇನೆಂದರೆ ಗ್ರೀಕ್ ಕಥೆಗಳ ಮೇಲೆ ಹೋಮರ್‌ನಂತಹ ಅದ್ವಿತೀಯ ಕವಿಯ ಮತ್ತು ಇತರ ಗ್ರೀಕ್ ಕವಿಗಳು ಅನಂತರ ಕೈಯಾಡಿಸಿದರು.

ಅದರಿಂದ ಅದಕ್ಕೆ ಕಲಾಕೃತಿಯ ಸ್ವರೂಪ ಬಂತು. ಆದರೆ ಇದೇ ಕಲಾನೈಪುಣ್ಯತೆ ಮತ್ತು ಅದೇ ಕೊನೆಯ ಸೌಂದರ್ಯಪೂರ್ಣವಾದ ತಿರುವು ಕೊಂಕಣದ ಜಾನಪದ ಕಥೆಯಲ್ಲಿ ಸ್ವಾಭಾವಿಕವಾಗೇ ಮೂಡಿ ಬಂದಿದೆ. ಇಂಥ ಬಗೆಯ ಜಾನಪದ ಕಥೆಯನ್ನು ನೋಡಿದಾಗ, ಜಾನಪದ ಕಥೆ ವಿಶೇಷವಾಗಿ ಅದ್ಭುತ ಕಥೆಯು ಇತರ ಸಾಹಿತ್ಯದ ಕಥೆಯಂತೆ ಯಾವುದಾದರೂ ಒಬ್ಬನದೇ ಪ್ರತಿಭೆಯಿಂದ ನಿರ್ಮಾಣಗೊಂಡು, ಬಳಿಕ ಅಲ್ಲಿ ಇಲ್ಲಿ ಒಂದಿಷ್ಟು ಬದಲಾವಣೆ ಹೊಂದಿ, ವಿಸ್ಮರಣೆಯಿಂದ ಒಮ್ಮೆ ಕುಗ್ಗಿ, ಮತ್ತೊಮ್ಮೆ ಹಿಗ್ಗಿ, ರೂಪಾಂತರಗೊಂಡು ಅಲೆದಾಡುತ್ತ ಇರುತ್ತದೆ ಎಂಬ ಅಲೆಕ್ಸಾಂಡರ ಕ್ರಾಪ್‌ನಂತಹ ಜಾನಪದ ವಿಶಾರದನ ಮಾತು ಒಪ್ಪಿಗೆಯಾಗುತ್ತದೆ. ಆದರೆ ಈ ಉದಾಹರಣೆಯಿಂದ ಯಾರು ಯಾರಿಂದ ಪ್ರಭಾವಿತರಾದರು ಎಂದು ಹೇಳುವುದು ಕಷ್ಟ.[೮]

ತುಳಸಿಯ ಕಥೆ : ಒಬ್ಬ ಬ್ರಾಹ್ಮಣನಿದ್ದ. ಅವನಿಗೆ ಮಕ್ಕಳಿರಲಿಲ್ಲ. ಅವನು ಮತ್ತು ಅವನ ಹೆಂಡತಿ ಒಂದು ಹರಕು ಮುರುಕು ಜೋಪಡಿಯಲ್ಲಿ ವಾಸವಾಗಿದ್ದರು. ಬ್ರಾಹ್ಮಣ ತೀರ ಬಡವನಾಗಿದ್ದ, ಅವನ ದೈವವೇ ಕೆಟ್ಟದ್ದಾಗಿತ್ತು. ಅವನು ಮೂರ್‍ನಾಲ್ಕು ಊರು ಸುತ್ತಾಡಿ ಭಿಕ್ಷೆ ಬೇಡುತ್ತಿದ್ದ. ಒಂದೆರಡು ಬೊಗಸೆಯಷ್ಟು ಕಾಳು ಅವನ ಜೋಳಿಗೆಯಲ್ಲಿ ಸಂಗ್ರಹವಾಗುತ್ತಿತ್ತು. ದುಡ್ಡು ದುಗ್ಗಾಣಿ ಮಾತ್ರ ಎಂದೂ ಸಿಗುತ್ತಿರಲಿಲ್ಲ. ಅವನು ಏಳೆಂಟು ಊರೂ ಸುತ್ತಾಡಿದ. ಆದರೂ ಎರಡೇ ಬೊಗಸೆಯಷ್ಟು ಕಾಳು ಸಿಗುತ್ತಿತ್ತು. ಹೆಂಡತಿ ಆ ಕಾಳನ್ನು ಬೀಸಿ ಎರಡು ರೊಟ್ಟಿ ಮಾಡುತ್ತಿದ್ದಳು. ಹಿತ್ತಲಲ್ಲಿರುವ ಪಲ್ಲೆಯನ್ನು ತಂದು ಬೇಯಿಸುತ್ತಿದ್ದಳು. ಒಂದು ರೊಟ್ಟಿ ಗಂಡನಿಗೆ, ಮತ್ತೊಂದು ತನಗೆ. ಹೀಗೆ ಕೆಲವು ವರ್ಷ ಕಳೆದವು. ಬ್ರಾಹ್ಮಣನ ಹೆಂಡತಿ ಗರ್ಭವತಿಯಾದಳು. ಈಗ ಮತ್ತೂ ಒಂದು ಜೀವ ಬಂದಳು. ಏನು ತಿನ್ನಿಸುವುದು ಎಂಬ ಯೋಚನೆ ಅವರನ್ನು ಕಾಡಿತು. ಹೆರಿಗೆಗೆ ಎಣ್ಣೆಯಿಲ್ಲ. ಬಟ್ಟೆ ಇಲ್ಲ. ಬ್ರಾಹ್ಮಣನ ಹೆಂಡತಿಯು ಮಗ ಹುಟ್ಟುತ್ತಾನೆ. ಬೆಳೆದು ದೊಡ್ಡವನಾಗಿ ತಮ್ಮ ಋಣ ತೀರಿಸುತ್ತಾನೆ. ದೈನ್ಯ ದೂರವಾಗುತ್ತದೆ ಎಂಬ ಆಸೆಯನ್ನು ಹೊತ್ತಿದ್ದಳು. ಬ್ರಾಹ್ಮಣನಿಗೂ ಇದೇ ವಿಚಾರದಿಂದ ಸುಖ ಲಭಿಸುತ್ತಿತ್ತು. ಆದರೆ ಬ್ರಾಹ್ಮಣನ ಹೆಂಡತಿಯ ಹೆರಿಗೆಯಾಗಿ ಮಗಳು ಜನಿಸಿದಳು. ಅವಳಿಗೆ ತುಳಸಿ ಎಂದು ಹೆಸರಿಟ್ಟರು. ಎಂಥ ವಿಚಿತ್ರ ನಡೆಯಿತು ಅಂತೀರಿ! ತುಲಸಿ ಜನಿಸಿದಾಗಿನಿಂದ ಬ್ರಾಹ್ಮಣನಿಗೆ ಮೂರು ಬೊಗಸೆಯಷ್ಟು ಕಾಳು ಸಿಗಲಾರಂಭಿಸಿತು. ಮಗಳು ದೊಡ್ಡವಳಾದಳು. ಆಡಲಾರಂಭಿಸಿದಳು. ಅವಳಿಗೆ ತುಂಬ ಹಸಿವು ಆಗುತ್ತಿತ್ತು. ಅವಳು ತಾಯಿಯ ಹತ್ತಿರ ತಿನ್ನಲು ಬೇಡುತ್ತಿದ್ದಳು. ಒಂದು ರೊಟ್ಟಿಯಿಂದ ಹೊಟ್ಟೆ ತುಂಬದಾಯಿತು. ತಾಯಿ ತನ್ನ ಅರ್ಧರೊಟ್ಟಿಯನ್ನು ಅವಳಿಗೆ ನೀಡುತ್ತಿದ್ದಳು. ಉಳಿದರ್ಧ ತಾನು ತಿನ್ನುತ್ತಿದ್ದಳು. ಹೀಗೆ ಮಾಡಿದ್ದರಿಂದ ದಿನೇ ದಿನೇ ಬ್ರಾಹ್ಮಣ ಹೆಂಡತಿ

ಕೊರಗಲಾರಂಭಿಸಿದಳು. ಇದು ಬ್ರಾಹ್ಮಣನ ಗಮನಕ್ಕೆ ಬಂತು. ಅವನು ಹೆಂಡತಿಗೆ ಕೇಳಿದ: 'ನೀನು ಹಿಗೆ ದಿನೇ ದಿನೇ ಸೊರಗಲು ಏನು ಕಾರಣ?' 'ಏನು ಮಾಡಲಿ, ಮಗಳಿಗೆ ಹಸಿವು ಬಹಳ. ಅವಳು ಒಂದೂವರೆ ತಿನ್ನುತ್ತಾಳೆ. ಉಳಿದ ಅರ್ಧ ನಾನು ತಿನ್ನುತ್ತೇನೆ' ಎಂದಳು.

ಬ್ರಾಹ್ಮಣನಿಗೆ ಕೋಪ ಬಂತು. ಮೊದಲೇ ಹೆಣ್ಣು ಹುಡುಗಿ ಜನಿಸಿದ್ದಾಳೆ. ಮೇಲಾಗಿ ಹೊಟ್ಟೆಬಾಕಳು. ಅವಳ ಲಗ್ನಕ್ಕೆ ಹಣವೂ ಬೇಕು. ಎಲ್ಲಿಂದ ತರಲಿ? ಹೆಂಡತಿಗಿಂತ ಅವಳ ಬೆಲೆ ಹೆಚ್ಚೋ? ಅವಳು ನಾಳೆ ಗಂಡನ ಮನೆಗೆ ಹೋಗುತ್ತಾಳೆ. ಹೆಂಡತಿ ಸತ್ತರೆ ನನ್ನ ಸಂಸಾರ ಮುಳುಗಿದ ಹಾಗೇ. ಅದರ ಬದಲು ಅವಳನ್ನು ಕಾಡಿಗೊಯ್ದು ಬಿಟ್ಟು ಈ ಕಿರಿಕಿರಿಯಿಂದ ಶಾಶ್ವತವಾಗಿ ಪಾರಾಗಬೇಕು ಎಂದುಕೊಂಡ. ಎಂದಿನಂತೆ ಕೊಡಲಿಯನ್ನು ಹೆಗಲಿಗೇರಿಸಿ ತುಳಸಿಗೆ ಹೇಳಿದ. 'ಬಾ ತುಳಸಿ, ಕಾಡಿಗೆ ಹೋಗೋಣ ಬಾ. ನನ್ನ ಜೊತೆ ಕಟ್ಟಿಗೆಯನ್ನು ತರುವಿಯಂತೆ.' ತುಳಸಿ ಸಂತೋಷದಿಂದ ಹೊರಟಳು. ೧೦–೧೨ ವರುಷದ ಆ ಪೋರಿ ಕಾಡು ನೋಡಿ ಆನಂದಗೊಂಡಳು. ದಟ್ಟವಾದ ಗಿಡಮರಗಳ ಹತ್ತಿರದ ಹೊಳೆದಡದಲ್ಲಿ ಅವಳನ್ನು ಕೂರಿಸಿ ಬ್ರಾಹ್ಮಣ ಹೇಳಿದ: 'ನಾನು ಆಚೆ ಊರಿಗೆ ಹೋಗಿ ಭಿಕ್ಷೆಯನ್ನು ಬೇಡಿ ತರುವೆ. ಬಳಿಕ ಮರ ಕಡಿಯುವೆ. ನನ್ನ ಕೊಡಲಿಯ ಸದ್ದು ಕೇಳಿದ ಬಳಿಕ ನೀನು ಬಾ' ಎಂದು ಹೇಳಿ ಬ್ರಾಹ್ಮಣ ಹೊರಟುಹೋದನು. ಮಧ್ಯಾಹ್ನ ಕಳೆಯಿತು. ಸಂಜೆಯಾಯಿತು. ತುಳಸಿಯ ಕಿವಿಗೆ ಕೊಡಲಿಯ ಸದ್ದು ಬೀಳಲಿಲ್ಲ. ಹೆಜ್ಜೆಯ ಸದ್ದೂ ಕೇಳಲಿಲ್ಲ. ಹಸಿದ ತುಳಸಿ ಅಳುತ್ತ ಆಕ್ರೋಶ ಮಾಡುತ್ತ ಕಾಡಿನ ತುಂಬೆಲ್ಲ ಅಲೆದಾಡಿದಳು. ಅಪ್ಪ ತನ್ನನ್ನು ಬೇಕೆಂದೇ ಬಿಟ್ಟು ಹೋದನೆಂಬುದು ಅವಳ ಗಮನಕ್ಕೆ ಬಂತು. ನಡೆಯುತ್ತ ನಡೆಯುತ್ತ ಅವಳು ಕಾಡಿನಂಚಿಗೆ ಬಂದಳು. ಅಲ್ಲೊಬ್ಬ ಮುದುಕಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಳು. ತುಳಸಿಯ ಅಳು ಕೇಳಿ ಮುದುಕಿ ತಲೆ ಎತ್ತಿದಳು. ತುಳಸಿ ಕಕ್ಕುಲತೆಯಿಂದ ಹೇಳಿದಳು: 'ಅಜ್ಜಿ, ನನ್ನನ್ನು ಅಪ್ಪ ಬಿಟ್ಟು ಹೋಗಿದ್ದಾನೆ. ಒಂದು ರಾತ್ರಿಗಾಗಿ ಆಸರೆ ನೀಡುತ್ತೀಯಾ? ನೀನು ಹೇಳಿದ ಕೆಲಸ ಮಾಡುತ್ತೇನೆ. ಬೆಳಗ್ಗೆ ಎದ್ದು ಹೋಗುತ್ತೇನೆ.'

'ನೀನು ಬ್ರಾಹ್ಮಣರ ಹುಡುಗಿ. ನನ್ನಂತಹ ರೈತರಿಗೆ ಏನು ಉಪಯೋಗ? ಬ್ರಾಹ್ಮಣರ ಹುಡುಗೆಗೆ ಏನೂ ಬರುವದಿಲ್ಲ' ಎಂದು ಮುದುಕಿ ಓಡಿಸಿದಳು. ಗುಟುಕು ನೀರು ಸಹ ನೀಡಲಿಲ್ಲ. ತುಳಸಿ ದೂರದಲ್ಲಿ ಬಂಡೆಯ ಮೇಲೆ ಹೋಗಿ ಕುಳಿತು ಅಳಲಾರಂಭಿಸಿದಳು. ವಿಠ್ಠಲ ಅಲ್ಲಿಂದ ಹೊರಟಿದ್ದ. ಅಳುವ ಧ್ವನಿ ಕೇಳಿ ವಿಠ್ಠಲ ಮುದುಕಿಗೆ ಕೇಳಿದ: 'ಅದು ಯಾರು ಅಳುತ್ತಿರುವವರೂ'? ಮುದುಕಿ ಅಂದಳು: 'ಅವಳೊಬ್ಬ ಬ್ರಾಹ್ಮಣರ ಪೋರಿ. ಅಪ್ಪ ಕಾಡಿಗೆ ತಂದು ಬಿಟ್ಟು ಹೋದ. ನನಗೆ ಆಸರೆ ಕೊಡು' ಎಂದಳು. ನಾನು ಹೊರಗೆ ಅಟ್ಟಿದೆ. ಹೀಗಾಗಿ ಅಳುತ್ತ

ಕೂತಿದ್ದಾಳೆ.' ವಿಠ್ಠಲ ಕಂಗಳನ್ನು ಹಿಗ್ಗಿಸಿ ಮುದುಕಿಗೆ ಬೆದರಿಸಿದ. ಲಗುಬಗೆಯಿಂದ ತುಳಸಿಯ ಬಳಿಗೆ ಹೋದ. ತುಳಸಿ ಮೊಣಕಾಲ ಮೇಲೆ ತಲೆಯಿಟ್ಟು ಅಳುತ್ತಲೇ ಇದ್ದಳು. ವಿಠ್ಠಲ ಬೆನ್ನು ನೇವರಿಸಿ ಕೇಳಿದ: 'ಪೋರಿ ನೀನಾರು? ಏಕೆ ಅಳುತ್ತಿದ್ದೀಯಾ?'

ತುಳಸಿ ಹೆದರಿ ಉತ್ತರಿಸಿದಳು : 'ರಾಯರೆ, ನಾನು ಒಬ್ಬ ಬಡ ಹುಡುಗಿ. ನನ್ನ ಹೆಸರು ತುಳಸಿ. ನಾವು ಕಡು ಬಡವರು. ನನ್ನ ಅಪ್ಪನಿಗೆ ಮೂರು ಬೊಗಸೆ ಕಾಳು ಸಿಗುತ್ತದೆ. ಅದರಿಂದ ನನ್ನನ್ನು ಸಾಕುವುದು ಕಷ್ಟ. ಹೀಗಾಗಿ ಅವನು ನನ್ನನ್ನು ಕಾಡಿಗೆ ತಂದು ಬಿಟ್ಟ. ನನಗೆ ಮನೆ–ಮಠ ಏನೂ ಇಲ್ಲ.'

'ತುಳಸಿ, ಹೆದರಬೇಡ. ನಾನು ನಿನಗೆ ಮನೆ ಕೊಡುತ್ತೇನೆ. ಬರುತ್ತಿಯಾ ನನ್ನ ಜೊತೆಗೆ?' ವಿಠ್ಠಲ ಕೇಳಿದ. ತುಳಸಿ ಕಂಬನಿ ಒರೆಸಿಕೊಂಡಳು. ಹೋಗಲು ಸಿದ್ಧಳಾದಳು. ಕತ್ತಲೆಯ ರಾತ್ರಿ, ಕಾಡಿನ ಹಾದಿಯಲ್ಲಿ ತುಳಸಿ ವಿಠ್ಠಲನ ಕೈ ಹಿಡಿದು ನಡೆಯಲಾರಂಭಿಸಿದಳು. ಕಾಡಿನ ಅಂಚಿನಲ್ಲಿರುವ ಒಂದು ಚಿಕ್ಕ ಮನೆಗೆ ವಿಠ್ಠಲ ಅವಳನ್ನು ಕರೆದೊಯ್ದ. ಆ ಮನೆಗೆ ನಾಲ್ಕು ಬಾಗಿಲುಗಳಿದ್ದವು. ಮನೆಯಲ್ಲಿ ಕಾಳು ಕಡ್ಡಿಯಿತ್ತು. ಒಂದು ಪುಟ್ಟ ಬೆಕ್ಕುಯಿತ್ತು. ಬಟ್ಟೆ–ಬರೆಯಿತ್ತು. ವಿಠ್ಠಲ ತುಳಸಿಯೊಂದಿಗೆ ಆ ಮನೆಯಲ್ಲಿರಲಾರಂಭಿಸಿದ. ತುಳಸಿ ಅಡುಗೆ ಮಾಡುತ್ತಿದ್ದಳು. ವಿಠ್ಠಲ ಅವಳಿಗೆ ಮೋಜಿನ ಕಥೆ ಹೇಳುತ್ತಿದ್ದ. ಉಳಿದ ಸಮಯದಲ್ಲಿ ತುಳಸಿ ಬೆಕ್ಕು ನೇವರಿಸುತ್ತ ಕೂತಿರುತ್ತಿದ್ದಳು. ಅಂತೂ ಅವಳು ಸುಖವಾಗಿ ದಿನ ಕಳೆಯಲಾರಂಭಿಸಿದಳು. ಒಂದು ದಿನ ವಿಠ್ಠಲ ತುಳಸಿಗೆ ಹೇಳಿದ 'ತುಳಸಿ, ನಾನೀಗ ಮನೆಗೆ ಹೋಗಬೇಕು. ರುಕ್ಮಿಣಿಯು ನೆನಪಾಗುತ್ತಿದೆ. ಕೆಲ ದಿನಗಳು ಪಂಢರಾಪುರದಿಂದ ಮತ್ತೆ ಮರಳಿ ಬರುತ್ತೇನೆ. ಆದರೆ ಎಚ್ಚರಿಕೆಯಿಂದ ಇರು. ಮನೆಯ ಬಾಗಿಲು ತೆರೆಯಬೇಡ. ಹಿತ್ತಲ ಬಾಗಿಲಂತೂ ತೆರೆಯಲೇಬಾರದು. ರಾತ್ರಿ ಯಾರಿಗೂ ಆಸರೆ ನೀಡಬೇಡ.'

ತುಳಸಿ 'ಸರಿ' ಎಂದಳು. ಹೋಗುವಾಗ ವಿಠ್ಠಲನು 'ಬರುವಾಗ ನಿನಗೆ ಏನು ತರಲಿ?' ಎಂದು ಕೇಳಿದನು.

'ನಿಮಗೆ ಯಾವುದು ಇಷ್ಟವೋ ಅದನ್ನು ತನ್ನಿ' ಎಂದಳು. ಬಳಿಕ ವಿಠ್ಠಲ ಪಂಢರಾಪುರಕ್ಕೆ ಹೋದ.

ಅತ್ತ ರುಕ್ಮಿಣಿ ಮುನಿದು ಕೂತಿದ್ದಳು. 'ಇಷ್ಟು ದಿನ ಎಲ್ಲಿದ್ದಿರಿ?' ಎಂದು ಕೇಳಿದಳು. 'ಒಬ್ಬ ಬಡ ಬ್ರಾಹ್ಮಣನು ಮಗಳನ್ನು ಸಾಕಲಾಗದೆ ಅರಣ್ಯಕ್ಕೆ ತಂದುಬಿಟ್ಟಿದ್ದ. ಅವಳಿಗೆ ಆಸರೆ ನೀಡಿದೆ' ಎಂದನು. ಆದರೆ ರುಕ್ಮಿಣಿಯ ಮನದಲ್ಲಿ ಶಂಕೆಯ ಹಲ್ಲಿ ಲೊಚಗುಟ್ಟಿತು. 'ಮಗಳೆ? ಗೊತ್ತಾಯಿತು ಬಿಡಿ ನಿಮ್ಮ ಕಪಟತನ' ಎಂದಳು. ತುಳಸಿಯ ಹೆಸರು ಕೇಳಿದಾಕ್ಷಣ ಅವಳ ಪಿತ್ತ ನೆತ್ತಿಗೇರುತ್ತಿತ್ತು. ವಿಠ್ಠಲ ಸತತ

ಅವಳ ಗುಣಗಾನ ಮಾಡುತ್ತಿದ್ದ. ಒಂದು ದಿನ ವಿಠ್ಠಲನು ಹಣ್ಣು ಹಂಪಲ ಬುಟ್ಟಿಯೊಂದಿಗೆ ಅವಳ ಮನೆಗೆ ಹೋಗಲು ಸಿದ್ಧನಾದ. 'ನೀವು ಹೋಗಬೇಡಿ. ನಾನೇ ಹೋಗಿ ಹಣ್ಣು ಹಂಪಲು ಕೊಟ್ಟು ಬರುತ್ತೇನೆ. ನೀವು ಮನೆಯಲ್ಲೇ ಇರಿ' ಎಂದು ರುಕ್ಮಿಣಿ ಹೊರಟಳು. ಅರ್ಧ ದಾರಿಯಲ್ಲಿ ಅವಳು ಹಣ್ಣುಗಳನ್ನೆಲ್ಲ ನೆಲಕ್ಕೆ ಚೆಲ್ಲಿದಳು. ಮಣ್ಣಿನಲ್ಲಿ ತುಳಿದು ಹಾಕಿದಳು. ಕಾಡಿನಲ್ಲಿರುವ ವಿಷದ ಹಾವು ಹಿಡಿದು ಬುಟ್ಟಿಯೊಳಗಿಟ್ಟಳು. ಬಳಿಕ ತುಳಸಿಯ ಮನೆಗೆ ಬಂದಳು. ಮಧ್ಯರಾತ್ರಿಯ ಸಮಯವಾಗಿತ್ತು. ಬಾಗಿಲ ಚಿಲಕ ಬಡಿದಳು.

'ತುಳಸಿ ತುಳಸಿ, ಬಾಗಿಲು ತೆರೆ.'

'ಇಲ್ಲ, ತೆರೆಯುವುದಿಲ್ಲ ನೀನಾರು?'

'ನಾನು ವಿಠ್ಠಲ' ಎಂದಳು ರುಕ್ಮಿಣಿ.

'ಇದು ವಿಠ್ಠಲನ ಧ್ವನಿಯಲ್ಲ. ಬಾಗಿಲು ತೆರೆಯುವುದಿಲ್ಲ. ಇದಂತೂ ಹೆಣ್ಣಿನ ಧ್ವನಿ, ನೀನಾರು?'

'ನಾನು ರುಕ್ಮಿಣಿ, ವಿಠ್ಠಲನ ಹೆಂಡತಿ. ಬಾಗಿಲು ತೆರೆ. ವಿಠ್ಠಲ ನಿನಗೆ ಉಡುಗೊರೆ ಕಳಿಸಿದ್ದಾನೆ.'

'ಬಾಗಿಲು ತೆರೆಯುವುದಿಲ್ಲ. ಉಡುಗೊರೆಯನ್ನು ಗೂಟಕ್ಕೆ ತೂಗುಹಾಕು.' ರುಕ್ಮಿಣಿ ಜೋಳಿಗೆಯನ್ನು ತೂಗುಹಾಕಿ ಹೊರಟುಹೋದಳು.

ತುಳಸಿ ಬೆಳಗ್ಗೆ ಎದ್ದಳು. ಬಾಗಿಲು ತೆರೆಯುವ ಧೈರ್ಯವಾಗಲಿಲ್ಲ. ನಾಲ್ಕು ದಿನಗಳ ಬಳಿಕ ಹೆದರುತ್ತಲೇ ತುಕ್ಕು ಹಿಡಿದ ಬಾಗಿಲು ಹಾಗೂ ಹೀಗೂ ತೆರೆದಳು. ಗೂಟಕ್ಕೆ ಜೋಳಿಗೆಯನ್ನು ತೂಗು ಹಾಕಲಾಗಿತ್ತು. ವಿಠ್ಠಲ ಮನೆಯ ಏನೇನೋ ವಿಷಯವನ್ನು ಹೇಳುತ್ತಿದ್ದ. ರುಕ್ಮಿಣಿಯ ಬಗ್ಗೆ, ಮುತ್ತು ರತ್ನಗಳ ಬಗ್ಗೆ. ಹೀಗೆ ಏನೇನೋ. ತುಳಸಿ ಗಂಟು ಬಿಚ್ಚಿದಳು. ನೋಡಿದರೆ ಹಾವು. ಹಾವು ಹೊರಬಂದು ಮನೆ ತುಂಬ ಓಡಾಡಲಾರಂಭಿಸಿತು. ತುಳಸಿ ಹೆದರಿ ಕಂಗಾಲಾದಳು. ಬೊಬ್ಬೆ ಹೊಡೆದಳು. ನೆರೆಯವರನ್ನು ಕೂಗಿ ಕರೆದಳು. ಅವರು ಬಂದು ಹಾವನ್ನು ಕೊಂದುಹಾಕಿದರು. ಆದರೂ ತುಳಸಿ ಅಳುತ್ತ ಕೂತಳು. ವಿಠ್ಠಲ ಮೋಸ ಮಾಡಿದನೆಂದು ಅವಳಿಗೆ ಕೋಪ ಬಂತು. ನನ್ನ ಜೀವ ತೆಗೆಯಲು ನಾನೇನು ತಪ್ಪು ಮಾಡಿದ್ದೇನೆ? ಎಂದು ಮುನಿದಳು. ದಿನಗಳು ಉರುಳತೊಡಗಿದವು. ಆದರೆ ತುಳಸಿ ಒಣಗಲಾರಂಭಿಸಿದಳು. ತನಗೆ ಯಾರ ಆಸರೆಯೂ ಇಲ್ಲವೆಂದು ಅಳಲಾರಂಭಿಸಿದಳು.

ರುಕ್ಮಿಣಿ ನಗು-ನಗುತ್ತ ಮನೆಗೆ ಮರಳಿದಳು. ಕೂಡಲೇ ಮರಳಿ ಬಂದಿರುವುದನ್ನು ಕಂಡು ವಿಠ್ಠಲ ಯೋಚನೆಯಲ್ಲಿ ಮುಳುಗಿದ. ಇವಳೇಕೆ ನನ್ನ ತುಳಸಿಯ ಮನೆಯಲ್ಲಿ ಎರಡು ದಿನ ಕಳೆಯಲಿಲ್ಲ? ಆದರೂ ರುಕ್ಮಿಣಿ ಸವಿಯಾಗೇ

ಮಾತಾಡುತ್ತಿದ್ದಳು. ತುಳಸಿಯನ್ನು ಕೊಂಡಾಡುತ್ತಿದ್ದಳು. ಅವಳೂ ಸುಖವಾಗಿದ್ದಾಳೆ ಎಂದೆನ್ನುತ್ತಿದ್ದಳು. ತನಗೆ ವಿಠ್ಠಲನನ್ನು ಬಿಟ್ಟಿರುವುದು ಸಾಧ್ಯವಿಲ್ಲವೆಂಬ ಕಾರಣಕ್ಕೆ ಬೇಗ ಬಂದೆಯೆಂದು ಜನರಿಗೆ ಹೇಳುತ್ತಿದ್ದಳು. ಆದರೆ ವಿಠ್ಠಲನ ಮನಸು ಮಾತ್ರ ಸತತ ತುಳಸಿಯ ಕಡೆಗೆ ಹರಿಯುತ್ತಿತ್ತು. ಅವನು ಮತ್ತೆ ಮನೆಯಿಂದ ಹೊರಬಿದ್ದ. ತುಳಸಿಯ ಬಳಿಗೆ ಬಂದು ಕೂಗಿ ಕರೆದ. ಅವಳು ಬಾಗಿಲು ತೆರೆದಳು. ಕಾಲು ತೊಳೆಯಲು ನೀರು ಕೊಟ್ಟಳು. ಸ್ನಾನದ ಸಿದ್ಧತೆ ಮಾಡಿದಳು. ಅಡುಗೆ ಮಾಡಿದಳು. ಆದರೆ ಅವಳ ಮುಖ ಮಾತ್ರ ಮುದುಡಿತ್ತು. ಮಾತಿಲ್ಲ ಕತೆಯಿಲ್ಲ. ವಿಠ್ಠಲನು ಕೇಳಿದನು : 'ಏನಾಯ್ತು ತುಳಸಿ? ನನಗಾದರೂ ಹೇಳು.' ಆದರೆ ತುಳಸಿ ಏನೂ ಉತ್ತರಿಸಲಿಲ್ಲ. ವಿಠ್ಠಲನು ಒಂದೇ ಸವನೆ ಅವಳ ಮನ ಒಲಿಸುತ್ತಿದ್ದ. ಚೇಷ್ಟೆ ಮಾಡುತ್ತಿದ್ದ. ಅವಳಿಗೆ ಸೀರೆ ರವಿಕೆ, ಆಭರಣವನ್ನು ನೀಡಿದನು. ಆದರೂ ತುಳಸಿ ಬಾಯಿ ಬಿಡಲಿಲ್ಲ. ವಂಚಿಸಿದವರು ಯಾರು? ವಿಠ್ಠಲನೋ ರುಕ್ಮಿಣಿಯೋ? ಅಥವಾ ಇಬ್ಬರು? ಈ ಸಂಗತಿಯನ್ನು ವಿಠ್ಠಲನಿಗೆ ಹೇಳಿದರೆ ಅವನ ಸಂಸಾರ ಹಾಳಾಗುವುದು. ಅಥವಾ ಇವನೇ ವಂಚಕನೇ? ಹೇಳುವದಕ್ಕಿಂತ ಹೇಳದೇ ಇರುವುದೇ ಲೇಸು ಎಂದವಳು ಮೌನವನ್ನು ಧರಿಸಿದಳು. ಕೊನೆಗೊಂದು ದಿನ ವಿಠ್ಠಲ ಅವಳಿಗೆ ಹೇಳಿದ. 'ತುಳಸಿ, ನಡೆ ದೇಗುಲದಲ್ಲಿ ನಾಟಕವಿದೆ. ನೋಡಿ ಬರೋಣ.' ಉತ್ಸವವನ್ನು ನೋಡಿ ಅವಳು ಮೌನ ಮುರಿಯಬಹುದೆಂಬ ಲೆಕ್ಕಾಚಾರ ಅವನದು. ಮಾತಾಡಬಹುದು. ನಗಬಹುದು, ಸಂಜೆಗೆ ವಿಠ್ಠಲನು ತುಳಸಿಯ ಜೊತೆಗೆ ಅವಳ ಅಪ್ಪನ ಜೋಪಡಿಗೆ ಬಂದನು.

'ಭಟ್ಟರೆ, ನಾವು ಹಾದಿಹೋಕರು. ನಮಗೆ ಆಸರೆ ನೀಡಿ.'

'ಮನೆಯಲ್ಲಿ ನನಗೆ ತಿನ್ನಲು ಉಣ್ಣಲು ಇಲ್ಲ. ನಿಮಗೆಲ್ಲಿ ಹಾಕಲಿ? ಬೇರೆ ಕಡೆ ಹೋಗಿ.' ಬ್ರಾಹ್ಮಣ ಹೇಳಿದ.

'ನಾನು ಎಲ್ಲ ಕಾಳುಕಡ್ಡಿ ತಂದಿದ್ದೇನೆ. ಬರೇ ನೆರೆಯವರಿಂದ ಪಾತ್ರೆ ತಂದರೆ ಸಾಕು.' ಬ್ರಾಹ್ಮಣನಿಗೆ ಸಂತಸವಾಯಿತು. ಅವನು ನೆರೆಯ ಸಾಹುಕಾರರಿಂದ ಪಾತ್ರೆಯನ್ನು ತಂದನು. ತುಳಸಿ ಅಡುಗೆ ಮಾಡಿದಳು. ತಾಯಿ ತಂದೆಗೆ ಅವಳ ಗುರುತು ಸಿಗಲಿಲ್ಲ. ಅವಳೂ ಗುರುತು ಹೇಳಲಿಲ್ಲ. ಊಟ ಮುಗಿಯಿತು. ತುಳಸಿ ಪಾತ್ರೆಗಳನ್ನು ಅಂಗಳಕ್ಕೆ ತಂದಿಟ್ಟು ದೇಗುಲಕ್ಕೆ ಹೋಗಲು ಸಿದ್ಧಳಾದಳು. ಆಗ ಬ್ರಾಹ್ಮಣ ದಂಪತಿಗಳೆಂದರು. 'ನಿಮ್ಮ ಜೊತೆ ನಾವೂ ಬರುತ್ತೇವೆ. ಇವಳು ಪಾತ್ರೆಗಳನ್ನು ಕಾಯಲಿ.'

ಆದರೂ ತುಳಸಿ ಏನೂ ಹೇಳಲಿಲ್ಲ. ವಿಠ್ಠಲನು ಕೇಳಿದರೂ ಹೇಳಲಿಲ್ಲ. ಬಳಿಕ ವಿಠ್ಠಲ ಮತ್ತು ದಂಪತಿಗಳಿಬ್ಬರು ನಾಟಕ ನೋಡಲು ಹೋದರು. ತುಳಸಿ ಹೊಸ್ತಿಲ ಬಳಿ ಕುಳಿತು ಪಾತ್ರೆಗಳ ಪಹರೆ ಮಾಡಲಾರಂಭಿಸಿದಳು. ಆದರೆ ಅವಳ

ಮನಸ್ಸು ಸ್ಥಿರವಾಗಿರಲಿಲ್ಲ. ವಿಠ್ಠಲನಿಗೂ ದೇಗುಲದಲ್ಲಿ ಸಮಾಧಾನವಿರಲಿಲ್ಲ. ಹೇಗಾದರೂ ಮಾಡಿ ತುಳಸಿಯನ್ನು ಮಾತಾಡುವಂತೆ ಮಾಡಬೇಕೆಂದು ಅವನು ನಾಯಿಯ ರೂಪವನ್ನು ಧರಿಸಿ ಒಂದೊಂದೇ ಪಾತ್ರೆಯನ್ನು ಕಚ್ಚಿ ಹಿಡಿದು ಓಡಲಾರಂಭಿಸಿದ. ಆದರೂ ತುಳಸಿ ಹಚಾ ಎನ್ನಲಿಲ್ಲ. ಹಾಗೇ ಕೂತಿದ್ದಳು. ನಾಯಿ ಎಲ್ಲ ಪಾತ್ರೆಗಳನ್ನು ಕಾಡಿಗೆ ಒಯ್ದು ಚೆಲ್ಲಿತು.

ಈ ಯುಕ್ತಿ ಸಫಲಗೊಳ್ಳದಿರುವುದನ್ನು ಕಂಡು ವಿಠ್ಠಲನು ಬೆಕ್ಕಿನ ರೂಪವನ್ನು ಧರಿಸಿದ. ಬೆಕ್ಕು ತುಳಸಿಯ ಬಳಿಗೆ ಬಂದು ಮಿಯಾವ್ ಮಿಂಯಾವ್ ಎನ್ನಲಾರಂಭಿಸಿತು. ಆದರೆ ತುಳಸಿ ಎಂದಿನಂತೆ ಅದರ ಮೈ ನೇವರಿಸಲಿಲ್ಲ. ಅವಳ ಬಾಯಿಂದ ಯಾವ ಮಾತೂ ಹೊರಬರಲಿಲ್ಲ.

ಬ್ರಾಹ್ಮಣ ಬೆಳಗ್ಗೆ ಬಂದು ನೋಡಿದರೆ ಪಾತ್ರೆಗಳೆಲ್ಲ ಮಾಯೆ. ಆ ಹುಡುಗಿ ಕದ್ದಿರಬಹುದೆಂದು ಅವಳನ್ನು ಥಳಿಸಲಾರಂಭಿಸಿದನು. ಆದರೂ ತುಳಸಿಯ ಬಾಯಿಂದ ಚಕಾರ ಶಬ್ದ ಹೊರಬರಲಿಲ್ಲ. ವಿಠ್ಠಲನು ಗುಪ್ತರೂಪದಿಂದ ಒಂದೊಂದೇ ಪಾತ್ರೆಗಳನ್ನು ಮತ್ತೆ ಅಂಗಳದಲ್ಲಿ ತಂದಿಟ್ಟನು. ಹೊಡೆತ ತಿನ್ನುವಾಗಲು ತುಳಸಿ ಅವನತ್ತ ನೋಡಲಿಲ್ಲ. ವಿಠ್ಠಲ ತುಳಸಿಯ ಜೊತೆಗೆ ಹೊರಬಿದ್ದ. ಅವರಿಬ್ಬರೂ ತುಳಸಿಯ ಮನೆಗೆ ಬಂದರು.

'ತುಳಸಿ ಮಾತಾಡು, ಏನಾದರೂ ಹೇಳು.'

ತುಳಸಿ ಕಂಬನಿ ಸುರಿಸುತ್ತ ಅಂಗಳಕ್ಕೆ ಬಂದಳು. ಅಪ್ಪ ಹೀಗೆ, ವಿಠ್ಠಲ ಹಾಗೆ. ಈ ಗಂಡಸರು ಹೀಗೇಕೆ? ವಿಠ್ಠಲನು ಒಳ್ಳೆಯವನನೋ ಕೆಟ್ಟವನೋ? ಅವನ ಜೊತೆಗೆ ಇರಲೋ ಬೇಡವೊ?

ತುಳಸಿ ಕೈ ಜೋಡಿಸಿ ಬೇಡಿಕೊಂಡಳು: 'ಧರಣಿ ಮಾತೆ. ಬಾಯಿ ತೆರೆದು ನನ್ನನ್ನು ಉದರದಲ್ಲಿ ಆಸರೆ ನೀಡು.' ಭೂಮಿ ಇಬ್ಭಾಗವಾಯಿತು. ತುಳಸಿ ಅದರ ಉದರ ಸೇರಿದಳು.

ವಿಠ್ಠಲನು ತುಳಸಿಯ ತಲೆಗೂದಲು ಹಿಡಿದು ಹೊರಗೆ ಎಳೆದನು. ಆದರೆ ಹೊರಗೆ ಬಂದಾಗ ಕಂಡಿದ್ದೇನು. ಅವಳು ತುಳಸಿಯಾಗಿರಲಿಲ್ಲ ಗಿಡವಾಗಿದ್ದಳು. ವಿಠ್ಠಲ ಕೈಯಲ್ಲಿ ಹಿಡಿದ ಕೂದಲು ಹೂ ಬೀಜವಾಗಿದ್ದವು. ವಿಠ್ಠಲ ತುಳಸಿಯ ಆ ಗಿಡವನ್ನು ಎದೆಗೆ ಅಪ್ಪಿ ಹಿಡಿದನು. ಅಂದಿನಿಂದ ವಿಠ್ಠಲನ ಕೊರಳಲ್ಲಿ ಸದಾ ತುಳಸಿಯ ಮಾಲೆ ಇರುತ್ತದೆ.

ಗ್ರೀಕ್ ಕಥೆ : ಸೂರ್ಯದೇವ ಅಪೋಲೋ ಮತ್ತು ಅಪ್ಸರಾ ಡಾಫ್ ಇವರಿಗೆ ಸಂಬಂಧಿಸಿದ ಕಥೆಯಿದು. ನೈಸರ್ಗಿಕವಾದ ರೀತಿಯಲ್ಲಿ ಅಪೋಲೋ ಡಾಫ್‌ಳನ್ನು ಪ್ರೀತಿಸುವುದಿಲ್ಲ. ಪ್ರೇಮ ದೇವನಾದ ಕ್ಯುಪಿಡ್‌ನು ಒಮ್ಮೆ ಬಿಲ್ಲುಬಾಣದೊಂದಿಗೆ ಆಡುತ್ತಿದ್ದಾಗ ಬಲಶಾಲಿಯಾದ ಅಪೋಲೋ ನೋಡಿದನು.

ಅವನಿಗೆ ಆ ಬಾಲಮೂರ್ತಿಯನ್ನು ಕಂಡು ನಗು ಬಂತು. ಅವನು ಕೇಳಿದನು. 'ಏ ಪೋರಾ, ನಿನಗೇಕೆ ಬೇಕೋ ವೀರರ ಈ ಶಸ್ತ್ರಾಸ್ತ್ರ? ನನ್ನಂಥ ಭಯಂಕರ ಸರ್ಪದ ವಧೆಯನ್ನು ಮಾಡುವ ವೀರರ ಶಸ್ತ್ರಗಳನ್ನು ನೀನೇಕೆ ಬಳಸುತ್ತೀಯಾ? ಕೆಳಗಿಡು ಅದನ್ನು. ಅದು ಮಕ್ಕಳ ಆಟಿಕೆಯಲ್ಲ.' ಈ ಮಾತಿನಿಂದ ಕ್ಯುಪಿಡ್‌ನಿಗೆ ಕೋಪ ಬಂತು. ಅವನು ಉತ್ತರಿಸಿದ : 'ಅಪೊಲೋ ನಿನ್ನ ಬಾಣ ಬೇರೆಯವರಿಗೆ ನಾಟಬಹುದು. ಆದರೆ ನನ್ನ ಬಾಣ ಮಾತ್ರ ನಿನಗೆ ನಾಟುತ್ತದೆ' ಎಂದವನು ಎರಡು ಬಾಣಗಳನ್ನು ಕೈಗೆತ್ತಿಕೊಂಡನು. ಚಿನ್ನದ ಬಾಣಗಳನ್ನು ಅವನು ಅಪೊಲೋ ಮೇಲೆ ಪ್ರಯೋಗಿಸಿದನು. ಅದು ನೇರವಾಗಿ ಅಪೊಲೋನ ಹೃದಯಕ್ಕೆ ನಾಟಿ ಅವನು ಪ್ರೇಮ ಬಾಧೆಯಿಂದ ಬಳಲಿದನು. ಮೊದಲ ಸಲ ಕಣ್ಣಿಗೆ ಬಿದ್ದ ಹೆಣ್ಣನ್ನು ಅವನು ಪ್ರೀತಿಸುವಂತೆ ಮಾಡುವುದು ಆ ಬಾಣದ ಗುಣವಾಗಿತ್ತು. ಕ್ಯುಪಿಡ್‌ನು ಎರಡನೆಯ ಸೀಸ್‌ದ ಬಾಣವನ್ನು ಥಾಫ್‌ಳ ಮೇಲೆ ಪ್ರಯೋಗಿಸಿದನು. ಆ ಬಾಣದಿಂದಾಗಿ ಅವಳಿಗೆ ವಿರಹವನ್ನು ಸಹಿಸುವದೂ ಅಸಾಧ್ಯವಾಗಲಾರಂಭಿಸಿತು. ಅವಳ ಪಿತನಾದ ನದಿದೇವ ಪೆನುವಸನು ಅವಳಿಗೆ ಹೇಳುತ್ತಿರುತ್ತಿದ್ದ : 'ಮಗಳೆ ನೀನು ಲಗ್ನ ಮಾಡಿಕೋ. ನನಗೆ ಅಳಿಯನನ್ನು ಕಾಣಬೇಕೆಂಬ ಬಯಕೆಯಾಗಿದೆ. ಮೊಮ್ಮಕ್ಕಳೊಂದಿಗೆ ಆಡಬೇಕೆನಿಸಿದೆ.'

ಆಗ ಥಾಫ್ ಉತ್ತರಿಸುತ್ತಿದ್ದಳು : 'ಹಾಗೆ ಹೇಳಬೇಡ ಅಪ್ಪ, ಮೃಗಯಾರಾಜ್ಞಿ ಡಯನಾಳಂತೆ ನಾನೂ ಸದಾಕಾಲ ಕುಮಾರಿಯಾಗಿರಬಯಸುತ್ತೇನೆ. ಆಶೀರ್ವದಿಸು.'

ಒಂದು ದಿನ ಅವಳು ಅಪೊಲೋನ ಕಣ್ಣಿಗೆ ಬಿದ್ದಳು. ಮೋಹಿತನಾದ ಅಪೊಲೋ ಅವಳ ಪ್ರಾಪ್ತಿಗಾಗಿ ಚಡಪಡಿಸಲಾರಂಭಿಸಿದ. ದೇಹದಲ್ಲಿ ತುಂಬಿಕೊಂಡ ಅವಳ ಲಾವಣ್ಯವನ್ನು ಕಂಡು ಅವನು ಮುಗ್ಧನಾದ. ಅವಳ ತಲೆಗೂದಲು ಬೆನ್ನ ಮೇಲೆ ಹರಡಿಕೊಂಡಿತ್ತು. ಅವಳು ಕಿಂಚಿತ್ತೂ ಅಲಂಕಾರ ಮಾಡಿಕೊಂಡಿರಲಿಲ್ಲ. ಅವಳಂತೂ ತುಂಬ ಮೋಹಕಳಾಗಿ ಕಾಣಿಸುತ್ತಿದ್ದಳು. ಒಂದು ವೇಳೆ ಅಲಂಕಾರ ಮಾಡಿಕೊಂಡರೆ ಅವಳು ಮತ್ತೆಷ್ಟು ಸುಂದರಿಯಾಗಿ ಕಾಣಬಹುದೆಂಬ ಕಲ್ಪನೆಯಿಂದ ರೋಮಾಂಚನಗೊಂಡನು. ಅವನು ಅವಳನ್ನು ಸಮೀಪಿಸಿದನು. ಆಗವಳು ದೂರ ಓಡಿದಳು. ಜಿಂಕೆಯಂತೆ ಓಡಲಾರಂಭಿಸಿದಳು. ಅವಳ ಕೂದಲು ಗಾಳಿಗೆ ಹಾರಾಡುತ್ತಿದ್ದವು. ನೆಲಕ್ಕೆ ಕಾಲು ಊರುತ್ತಿರಲಿಲ್ಲ. ಅವಳ ಪ್ರತಿಯೊಂದು ಹಾವಭಾವದಲ್ಲಿ ವ್ಯಕ್ತವಾಗುವ ಚಾಪಲ್ಯ ಮತ್ತು ಸೌಂದರ್ಯವನ್ನು ಕಂಡು ಅಪೊಲೋ ಮತ್ತಷ್ಟು ಉನ್ಮತ್ತಗೊಂಡ. ಅವನು ಅವಳ ಬೆನ್ನು ಹತ್ತಿದ. ನಿಲ್ಲು ಓಡಬೇಡ, ನಾನೇನು ವೈರಿಯಲ್ಲ. ಅಪೋಲೋ ನಿನ್ನನ್ನು ಪ್ರೀತಿಸುವ ಅಪೋಲೋ. ನೀನು ಕಲ್ಲು ಮುಳ್ಳುಗಳಲ್ಲಿ ಓಡುತ್ತಿದ್ದೀಯೇ. ಅದರಿಂದ ಗಾಯವಾಗಬಹುದು.

ಮುಗ್ಗರಿಸಿ ಬೀಳಬಹುದು. ನನ್ನ ಜೀವ ಚಡಪಡಿಸುತ್ತಿದೆ. ನಿಲ್ಲು' ಎಂದವನು ಅವಳ ಬೆನ್ನುಹತ್ತಿದ. ಆದರೂ ಥಾಫ್ ಹಿಂದಿರುಗಿ ನೋಡಲಿಲ್ಲ. ಜೀವದ ಹಂಗು ತೊರೆದು ಅವಳು ಮತ್ತಷ್ಟು ವೇಗದಿಂದ ಓಡಲಾರಂಭಿಸಿದಳು. ಅಪೋಲೋ ಸಹ ತನ್ನ ವೇಗವನ್ನು ಹೆಚ್ಚಿಸಿದ. ತ್ವರಿತವಾಗಿ ಅವಳನ್ನು ಸಮೀಪಿಸಿದ. ಅವನ ವೇಗದ ಉಸಿರು ಅವಳ ತಲೆಗೂದಲನ್ನು ಸ್ಪರ್ಶಿಸುತ್ತಿತ್ತು. ಅವನು ಅವಳನ್ನು ಅಪ್ಪಿಕೊಂಡಾಗ ಥಾಫ್‌ಳ ಧೈರ್ಯ ಕುಸಿಯಿತು. ಅವಳು ಚಡಿಪಡಿಸಿ ಹೇಳಿದಳು. 'ಪೆನುಸುವಾ ಅಪ್ಪ, ಭೂಮಿ ಇಬ್ಭಾಗಗೊಂಡು ನಾನು ಭೂಗರ್ಭ ಸೇರಲಿ, ಇಲ್ಲವೇ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸುವ ನನ್ನ ರೂಪವನ್ನಾದರೂ ಬದಲಾಯಿಸು.' ತಕ್ಷಣ ಥಾಫ್‌ಳ ರೂಪ ಬದಲಾಗಿ ಗಿಡವಾಯಿತು. ಸುಂದರವಾದ ಲಾರೆಲ್ ಗಿಡ. ಅಪೋಲೋ ಆ ಗಿಡವನ್ನೇ ತಬ್ಬಿಕೊಂಡ. ರೆಂಬೆಗಳಿಗೆ ಮುತ್ತು ನೀಡಿದ: ಆ ಗಿಡವೂ ಕಂಪಿಸಲಾರಂಭಿಸುತ್ತಿದೆ ಎಂದವನಿಗೆ ಅನಿಸಿತು. ಅಪೋಲೋ ನುಡಿದ: 'ನಿನಗೆ ನನ್ನ ಹೆಂಡತಿಯಾಗುವ ಇಚ್ಛೆಯಿಲ್ಲದಿದ್ದರೆ ನನ್ನದೇ ಗಿಡವಾಗು. ನಿನ್ನನ್ನು ನಾನು ಮುಕುಟವೆಂದು ಧರಿಸುವೆ. ನನ್ನ ವೀಣೆ ಮತ್ತು ಬಿಲ್ಲನ್ನು ನಿನ್ನದೇ ಗಿಡದಿಂದ ಅಲಂಕರಿಸುವೆ. ನನ್ನ ತಾರುಣ್ಯದ ಗುರುತಾಗಿ ನೀನೂ ಸದಾ ಹಸಿರೆಲೆಯಿಂದ ಶೋಭಿಸುವೆ.' ಗಿಡವಾದ ಥಾಫ್ ಈಗ ತುಂಬ ಖುಷಿಯಿಂದ ಒಪ್ಪಿಗೆ ಸೂಚಿಸಿದಳು. ಅಪೋಲೋನ ಬಯಕೆಗೆ ಒಪ್ಪಿಗೆ ನೀಡಿದಳು.

ಸಮಾರೋಪ : ಮಹಾಭಾರತದಲ್ಲಾಗಲಿ, ಜಾತಕದಲ್ಲಾಗಲಿ, ಕಥಾ ಸರಿತ್ಸಾಗರದಲ್ಲಾಗಲಿ ತುಳಸಿ ಅಥವಾ ವೃಂದೆಯ ಸಮಾಂತರವಾದ ಕಥೆಯು ಕಾಣಬರುವುದಿಲ್ಲ. ರಾಮಾಯಣದಲ್ಲಿ ಇಂದ್ರನು ಗೌತಮನ ರೂಪವನ್ನು ಧರಿಸಿ ಅಹಲ್ಯೆಯನ್ನು ವಂಚಿಸುವ ಕಥೆ ಏಕೈಕ ಸಮಾಂತರವಾಗಿದೆ. ಆದರೆ ಆ ಕಥೆಯ ಯಾವುದೇ ಪರ್ಯಾಯ ಇಲ್ಲವೇ ಅಹಲ್ಯೆಯ ಪ್ರತೀಕವು ಜಾನಪದದಲ್ಲಿ ಬಂದಿರುವುದು ಕಂಡುಬಂದಿರುವುದಿಲ್ಲ. ಪುರಾಣದ ರಚನೆಯ ಸ್ಥೂಲ ಕಾಲ ಕ್ರೈಸ್ತೋತ್ತರ ೭೦೦ ವರ್ಷಗಳ ನಂತರದ್ದು. ಇದರ ಮೇಲಿಂದ ಸ್ಕಂದ ಮತ್ತು ದೇವಿ ಭಾಗವತ ಇಲ್ಲವೇ ಬ್ರಹ್ಮವೈವರ್ತ ಇದಂತೂ ೧೮ ಪುರಾಣಗಳಲ್ಲೇ ತೀರ ಹಳೆಯದಲ್ಲ. ಆದ್ದರಿಂದ ಆಯಾ ಆಯಾ ಪುರಾಣದ ಕಾಲದಲ್ಲಿ ಉಪಲಭ್ಯವಿರುವ ಜಾನಪದ ಕಥೆಯನ್ನೇ ವೈಷ್ಣವ ಸಂಪ್ರದಾಯದಲ್ಲಿ ಪೋಣಿಸಿದಂತೆ ಕಾಣುತ್ತದೆ. ಇಂಥ ಪದ್ಧತಿಯ ಅಲಿಖಿತ ಪರ್ಯಾಯವೇ ಕೊಂಕಣದ ಕೃಷಿಯ ಕಥೆಯಲ್ಲಿ ಗೋಚರಿಸುತ್ತದೆ. ಭೂಮಿ ಇಬ್ಭಾಗವಾಗುವುದು ಸೀತೆಯ ಕಥೆಯಲ್ಲೂ ಇದೆ. ಆದರೆ ಪ್ರತೀಕ ಗಿಡವು ಭೂಮಿಯಿಂದ ಹೊರ ಬರುವುದು ಗ್ರೀಕ್ ಮತ್ತು ರೋಮನ್ ಕಥೆಯಲ್ಲೇ ಲಭಿಸುತ್ತದೆ. ಜಾನಪದ ಸಾಹಿತ್ಯದ ಪರಿಭ್ರಮಣೆಗೂ ಈ ಕಥೆಯು ಒಂದು ಶ್ರೇಷ್ಠ ಉದಾಹರಣೆಯೆನ್ನುವುದರಲ್ಲಿ ಸಂಶಯವಿಲ್ಲ.

ಪ್ರಕಟಿತ ಬುಡಕಟ್ಟು ಜಾನಪದ ಸಾಹಿತ್ಯದಲ್ಲೂ ನನಗೆ ಈ ಕಥೆಯು ಎಲ್ಲೂ ಕಾಣಬರಲಿಲ್ಲ. ಆದ್ದರಿಂದಲೇ ಈ ಪ್ರಾದೇಶಿಕ ಕೃಷಿ ಕಥೆಯು ಪೌರಾಣಿಕ ಕಥೆಯೊಂದಿಗೆ ಹೊಂದಿದ ವಿಸಂಗತಿಯು ಅವಳು ವಿಷ್ಣುವಿನೊಂದಿಗೆ ಹೊಂದಿರುವ ಸಂಬಂಧದ ಹೊರತು ಮತ್ತು ಕುಮಾರಿಕೆಯ ಬಗೆಗೆ ದೇವರು ಮಾಡಿದ ವಿಫಲ ಮನವರಿಕೆ ಗ್ರೀಕ್ ಕಥೆಯಲ್ಲಿರುವ ಈ ಸಾಮ್ಯವು ಸಂಸ್ಕೃತಿಯ ಅಧ್ಯಯನಕಾರರಿಗೆ ಒಗಟಿನಂತೆ ಅನಿಸುತ್ತದೆ.

ಸತ್ಯಕಥೆ, ಏಪ್ರಿಲ್ ೧೯೫೨

ಅಡಿ ಟಿಪ್ಪಣಿಗಳು

೧. ಸ್ಕಂದ ಪುರಾಣ, ವೈಷ್ಣವ ಖಂಡ ೪, ತುಲಸಿ ಮಹಾತ್ಮೆ, V–೮.

೨. ಸ್ಕಂದ ಪುರಾಣ, ವೈಷ್ಣವ ಖಂಡ ೪, V–೧೪, ೨೨.

೩. ಬ್ರಹ್ಮವರ್ತ ಪುರಾಣ, ಪ್ರವೃತಿ ಖಂಡ, V–೫೪, ದೇವಿಭಾಗವತ ಸ್ಕಂದ ೯, V–೮–೧೬.

೪. ತುಲಸಿಯ ಹೆಸರಿನಲ್ಲಿಯ 'ತುಲಾ' ಎಂಬ ಪದದ ಯುಕ್ತಿಯು ರುಕ್ಮಿಣಿಯ ಹರದಾಸಿ ಕಥೆಯಲ್ಲೂ ಲಭಿಸುತ್ತದೆ. ಕೃಷ್ಣನ ಮಹಿಳೆಯಲ್ಲಿ ಯಾರು ಶ್ರೇಷ್ಠರು ಎಂಬ ಸ್ಪರ್ಧೆಯು ಸದಾ ನಡೆದಿರುತ್ತದೆ. ಕೃಷ್ಣನ ತುಲಾಭಾರವನ್ನು ಉಳಿದ ಮಹಿಳೆಯರು ಮುತ್ತು ರತ್ನಗಳಿಂದ ನಡೆಸುತ್ತಾರೆ. ಆದರೂ ತಕ್ಕಡಿ ಮೇಲೆಯೇ ಇರುತ್ತದೆ. ರುಕ್ಮಿಣಿ ತುಲಸಿದಳ ಹಾಕಿದಾಕ್ಷಣ ತಕ್ಕಡಿ ಕೆಳಗೆ ಬರುತ್ತದೆ ಎಂದೆನ್ನಲಾಗಿದೆ.

೫. ದೇವಿ ಭಾಗವತ, ಸ್ಕಂದ ೯, ಅಧ್ಯಾಯ ೧೮–೨೪.

೬. ದೇವಿ ಭಾಗವತ ಸ್ಕಂದ ೯, V–೧೬.

೭. ಬ್ರಹ್ಮವೈವರ್ತ, ಪ್ರಕೃತಿ ಖಂಡ, V–೮–೨೨, ಇಲ್ಲಿ ವಿಷ್ಣುವಿಗೆ ನಾಲ್ವರು ಹೆಂಡಂದಿರು ಎಂದಿದೆ (ಮೇಲೆ ಮೂರಿದೆ). ಪೌರಾಣಿಕ ವಿಸಂಗತಿಯ ಉತ್ತಮ ಉದಾಹರಣೆ. ತುಳಸಿಯು ವಿಷ್ಣುವಿನ ಪತ್ನಿ ಎಂಬ ಕಥೆಯು ಅಮೃತ ಮಂಥನದೊಂದಿಗೆ ಜೋಡಿಸಲಾಗಿದೆ. ತುಲಸಿ ಉತ್ಪತ್ತಿಯ ಕಥೆಯ ತುಣುಕು ಎನಿಸುತ್ತದೆ. ಈ ಬಗೆಯ ಕಥೆಯನ್ನು ಬೇರೆ ಎಂದು ಭಾವಿಸದೆ ಮೇಲಿನ ಕಥೆಯ ಪುರವಣಿ ಎಂದುಕೊಂಡರೆ, ವ್ಯಭಿಚಾರದ ಕಥಾಬೀಜವು ಈ ಕಥೆಯಿಂದ ಇಲ್ಲವಾಗಿ, ಅದೊಂದು ಮುಗ್ಧ ಮತ್ತು ಪವಿತ್ರ ಪುರಾಣ ಕಥೆಯಾಗುತ್ತದೆ.

೮. Alexander Krappe. *The Science of Folklore, P. 4*

* * * *

೭. ದೈವಕಥೆ

ಧರ್ಮ ಮತ್ತು ದೈವಕಥೆಗಳ ಸಂಬಂಧವು ಗಾಢವಾದುದು ಎಂಬ ಸತ್ಯವನ್ನು ಮರೆಯುವಂತಿಲ್ಲ. ಆಯಾ ದೇಶ ಇಲ್ಲವೇ ಪಂಥಕ್ಕೆ ಅನುಗುಣವಾಗಿರುವ ದೈವಕಥೆಯನ್ನು ಆ ಧರ್ಮದ ಅನುಯಾಯಿಗಳು ಒಪ್ಪುತ್ತಾರೆ. ಅದರಲ್ಲಿಯ ಕೆಲವು ಕಥೆಗಳು ಧಾರ್ಮಿಕ ಗ್ರಂಥದೊಂದಿಗೆ ನಿಕಟ ಇಲ್ಲವೇ ದೂರದ ಸಂಬಂಧವನ್ನು ಹೊಂದಿರುತ್ತವೆ. ಮತ್ತೆ ಕೆಲವು ಲೌಕಿಕ ಪರಂಪರೆಯಿಂದಾಗಿ ಧಾರ್ಮಿಕ ಪಂಥದಲ್ಲಿ ಸೇರಿ ಪೂಜ್ಯ ಸ್ಥಾನವನ್ನು ಪಡೆಯುತ್ತವೆ. ಎಲ್ಲ ಪುರಾತನ ಕಥೆಗಳು ದೈವ ಕಥೆಗಳಾಗಿರುವುದಿಲ್ಲ. ಹಲವು ಶಿಶುಗೀತೆಗಳ ಕಥೆಯ ಸಂದರ್ಭವು ತೀರ ಪ್ರಾಚೀನವಾಗಿರುತ್ತವೆ. ಈ ಪುರಾತನ ಕಥೆಗಳ ಮಧ್ಯವರ್ತಿ ಅಂಶವನ್ನು ಒರೆಗಲ್ಲಿಗೆ ಹಚ್ಚಿ ನೋಡಿದಾಗ ಅದು ಯಾವುದಾದರೂ ದೇಶದ ದೈವ ಕಥೆಯ ಮಧ್ಯಬಿಂದುವಾಗಿರುತ್ತದೆ. ಉದಾಹರಣೆಗಾಗಿ ಮಿಸರಿ ದೈವ ಕಥೆಯಲ್ಲಿ ಇಬ್ಬರು ಸೋದರರ ಕಥೆ ಬರುತ್ತದೆ. ದುರ್ದೈವದಿಂದ ಅವರು ಬೇರ್ಪಡುತ್ತಾರೆ. ಅನಂತರ ಎಷ್ಟೋ ಕಾಲ ಕಳೆಯುತ್ತದೆ. ಒಬ್ಬ ಸೋದರನ ವಧೆ ಮತ್ತೊಬ್ಬ ಸೋದರನಿಂದ ನಡೆಯುತ್ತದೆ – ಈ ಕಲ್ಪನಾ ಬಂಧವು ಪ್ರಪಂಚದ ಹಲವು ಕಥೆಗಳಲ್ಲಿ ಪರಿವರ್ತಿತವಾಗಿರುವುದನ್ನು ಕಾಣುತ್ತೇವೆ. ಜೇಸನ್‌ನ ಗ್ರೀಕ್ ಕಥೆಗೆ ಹೋಲುವಂತಹ ಕಥೆಯು ನನಗೆ ಕೊಂಕಣದ ಕುಣಬಿಗಳಲ್ಲಿ ಸಿಕ್ಕಿತು. ಅದೇ ಕಳೆದುಹೋದ ಪಾದರಕ್ಷೆಯ ಗುರುತು, ಎರಡು ಇಕ್ಕಟ್ಟಾದ ಬಂಡೆಗಳ ನಡುವಿಂದ ನಾವೆಯನ್ನು ದಾಟಿಸುವಾಗ ನಡೆದ ಅಂಬಿಗರ ಸಾವು, ನಾಯಕನು ಬಳಿಕ ಪಾರಿವಾಳವನ್ನು ಹಾರಿಬಿಟ್ಟು ಸುಖ ರೂಪದಿಂದ ನಾವೆಯನ್ನು ಮುನ್ನಡೆಸುವದು, ನಾಯಕನ ಕೃತಘ್ನ ತಾಯಿ, ಕೃತಘ್ನ ಚಿಗಪ್ಪ–ಇಂಥ ಹಲವು ಸಂಗತಿಗಳು ಪರಸ್ಪರ ಹೋಲುತ್ತವೆ. ಆದರೆ ಕೊಂಕಣದ ಕಥೆಯಲ್ಲಿ ಬಂಗಾರದ ಉಣ್ಣೆಯು ಬಂಗಾರದ ಮರವಾಗಿ ರೂಪಾಂತರಗೊಂಡಿದೆ. ಮೆಡಿಟರೇನಿಯನ್ ಸಂಸ್ಕೃತಿಯ ಹಲವು ದೈವಕಥೆಗಳು ಭಾರತದ ಪಶ್ಚಿಮ ಕಿನಾರೆಯ ಬಳಿ ಲಭಿಸುತ್ತದೆ. ಹಾಗೆಯೇ ಮಿಸರಿ ದೈವಕಥೆಗಳೂ ಸಹ ಆಂಶಿಕವಾಗಿ ಪರಿವರ್ತನೆಗೊಂಡಿವುದು ಕಾಣಬರುತ್ತವೆ. ನಮ್ಮ ಸಟನಿಯ ಎಲ್ಲ ಕಲ್ಪನೆ ಹಾಗೂ ಕಥೆಗಳು ಇದೇ ಮಾದರಿಯದಾಗಿವೆ.

ದೈವ ಕಥೆಗಳು ಧರ್ಮದೊಂದಿಗೆ ಹೊಂದಿರುವ ಸಂಬಂಧವನ್ನು ವರ್ಣಿಸಬೇಕಾದರೆ ಧಾರ್ಮಿಕ ಸಂಬಂಧದ ವಿಸ್ತೃತ ಚರ್ಚೆ ಮಾಡಬೇಕಾಗುತ್ತದೆ. ಆದರೆ ಅದನ್ನು ಮಾಡುವುದು ಇಲ್ಲಿ ಸಾಧ್ಯವಿಲ್ಲದಿರುವುದರಿಂದ ಒಂದೆರಡು ಮುಖ್ಯ ಸಂಗತಿಗಳನ್ನು ಗಮನಿಸಬೇಕಾಗುವುದು. (೧) ಧರ್ಮ ಸ್ವಾಭಾವಿಕ ಘಟನೆಯಾಗಿರದೆ, ಸಾಮಾಜಿಕ ಸಂಘಟನೆಯಾಗಿದೆ. (೨) ಹಲವು ಸಾಮಾಜಿಕ ಸಂಸ್ಥೆಯಂತೆ (ಸರಕಾರ, ಯುದ್ಧ, ಮುಂ.) ಧರ್ಮ ಸಂಸ್ಥೆಯೂ ಸುಸಂಘಟಿತ ಸಮಾಜದಲ್ಲೇ ಸಂಭವಿಸುತ್ತದೆ. (೩) ಧರ್ಮ ಯಾವುದೇ ಸ್ವರೂಪದಲ್ಲಿರಲಿ ಅದು ಮೂಲತಃ ಪ್ರತೀಕಾತ್ಮಕವಾಗಿರುತ್ತದೆ. (೪) ಶ್ರದ್ಧೆಯು ಸದಾಕಾಲ ಮೂರ್ತದಿಂದ ಅಮೂರ್ತದ ಕಡೆಗೆ ಸಾಗುತ್ತದೆ. ಅಂದರೆ ಮಾನವ ದೇವರು ಮತ್ತು ಪಿಶಾಚಿಗಳ ಪೂಜೆಯಿಂದಲೇ ಅಮೂರ್ತ ದೇವರ ಪೂಜೆಯ ಕಲ್ಪನೆಯು ಮೂಡಿರಬೇಕು. ಹುಟ್ಟು ಮತ್ತು ಸಾವು ಇದರ ಅರಿವು, ಅದಕ್ಕೆ ಸತತ ಆಹ್ವಾನ ನೀಡುವ ಮಹಾಭೂತಗಳ ಪ್ರಯತ್ನಕಾರಿ ಆವಿಷ್ಕಾರದ ಸುತ್ತಲೇ ಪ್ರಮುಖ ಧಾರ್ಮಿಕ ಕಲ್ಪನೆಯು ವ್ಯವಹರಿಸುತ್ತ ಇರುತ್ತದೆ. ನಿಸರ್ಗ ಶಕ್ತಿ ಅಧಿಷ್ಠಿತ ಬಹುದೈವದ ಧರ್ಮವು ಏಕ ದೇವತೆಯ ಧರ್ಮಕ್ಕಿಂತ ಪುರಾತನವಾಗಿರುತ್ತವೆ. ವೈದಿಕ, ಗ್ರೀಕ್ ಮತ್ತು ಮಿಸರಿ ಧರ್ಮಗಳು ಪುರಾತನ ಧರ್ಮಗಳಾಗಿವೆ. ಏಕದೇವೋಪಾಸನೆಯ ಧರ್ಮವೆಂದರೆ ಕ್ರೈಸ್ತ ಮತ್ತು ಇಸ್ಲಾಂ. ಆದರೆ ಈ ಏಕದೇವ ಧರ್ಮವು ಪ್ರಾಯಃ ದೇವದೂತ ಧರ್ಮವೂ ಆಗಿದೆ. ಅಪವಾದವೆಂದರೆ ಜೈನ ಮತ್ತು ಬೌದ್ಧ ಧರ್ಮದ್ದು. ಇವು ನಿರೀಶ್ವರವಾದಿ ಧರ್ಮ. ಈ ಧರ್ಮವನ್ನು ಐತಿಹಾಸಿಕ ಕಾಲದ ಧರ್ಮವೆನ್ನಬಹುದು. ದೈವ ಕಥೆಗಳ ಮಟ್ಟಿಗೆ ನೋಡುವದಾದರೆ, ಪುರಾತನ ಧರ್ಮದಲ್ಲಿ ದೈವಕಥೆಗಳ ಸ್ಥಾನ ಅತ್ಯಂತ ಮಹತ್ವದ್ದಾಗಿದ್ದು, ಅವುಗಳಲ್ಲೇ ಆಯಾ ದೇಶದ ಉತ್ಕೃಷ್ಟ ವಾಙ್ಮಯದ ಆದರ್ಶವೂ ಲಭಿಸುತ್ತದೆ ಎಂದೆನ್ನಬಹುದು. ದೇವದೂತ ಧರ್ಮಗಳಲ್ಲಿ ದೈವಕಥೆಗಳ ಸ್ಥಾನ ಎರಡನೆಯದು. ಧರ್ಮಗ್ರಂಥಗಳಿಗೆ ದೇವದೂತದ ವಚನಗಳ ಆಧಾರವಿರುತ್ತದೆ. ದೇವದೂತರ ಧರ್ಮಗಳಲ್ಲಿ ದೈವ ಕಥೆಗಳಿರುತ್ತವೆ. ಇಲ್ಲವೆಂದೇನಲ್ಲ. ಆದರೆ ಒಂದೋ ಪಾರಂಪಾರಿಕ ಧರ್ಮಕಥೆಗಳ ಹೆಗ್ಗಳಿಕೆ ಅಥವಾ ವಿಡಂಬನೆ ಅದರಲ್ಲಿರುತ್ತದೆ. ಕೆಲವು ಕಲ್ಪನೆಗಳು ಸ್ವತಂತ್ರ ಇಲ್ಲವೇ ಯಾವುದರ ಮೂಲ ಇಂದು ಅಜ್ಞಾತವಾಗಿದೆಯೋ ಅಂಥ ಪರಂಪರೆಯಿಂದ ತೆಗೆದುಕೊಳ್ಳಲಾಗುತ್ತದೆ. ಉದಾ: ಮಾರಕಥೆಯು ಬೌದ್ಧ ಕಥೆಗಳಲ್ಲಿ ಕಾಣಬರುತ್ತವೆ. ಮಾರನು ಸೈತಾನದ್ದೇ ಬೇರೊಂದು ಮುಖವಾಡ. ಆದರೆ ಗ್ರಾಂಥಿಕವಾದ ಭಾರತೀಯ ಕಥೆಗಳಲ್ಲಿ ಅಥವಾ ಜಾನಪದ ಕಥೆಗಳ ಅಪಾರ ಮೌಖಿಕ ಸಮೃದ್ಧಿಯಲ್ಲಿ ಮಾರಕಥೆಗೆ ಸಮಾಂತರವಾದ ಬೇರೊಂದು ಕಥೆ ಗೋಚರಿಸುವದಿಲ್ಲ.

೧೮ನೇ ಶತಮಾನದ ಕೊನೆಗೆ ಜರ್ಮನಿಯಲ್ಲಿ ದೈವಕಥೆಗಳ ಅಧ್ಯಯನ ಆರಂಭಗೊಂಡಿತು. ಪೌರಾತ್ಯ ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿ ದೈವಕಥೆಗಳ ಸ್ಥಾನ ಅತ್ಯಂತ ಮಹತ್ವದ್ದಾಗಿತ್ತು. ಪಾಶ್ಚಾತ್ಯರಿಗೆ ಕರಗತವಾಗಿದ್ದ ಗ್ರೀಕ್ ಮತ್ತು ಕ್ರೈಸ್ತ ಕಥೆಗಳ ಹೋಲಿಕೆಯಿಂದಲೇ ಈ ಅಧ್ಯಯನ ಫಲಕಾರಿಯಾಯಿತು. ಭಾಷಿಕ ಮತ್ತು ದೈವದ ಸಾದೃಶದ ಮೇಲಿಂದಲೇ ಆರಂಭದ ಮ್ಯಾಕ್ಸ್‌ಮುಲರ್‌ನಂತಹ ವಿದ್ವಾಂಸರಿಗೆ ಯೂರೋ-ಭಾರತೀಯ ಮೂಲಾಧಾರ ಸಂಸ್ಕೃತಿಯನ್ನು ಗುರುತಿಸುವದು ಸಾಧ್ಯವಾಯಿತು. ವೇದದಲ್ಲಿಯ ದೈವಗಳು ನಿಸರ್ಗ ಶಕ್ತಿಯ ಪ್ರತೀಕಗಳಾಗಿವೆ. ಹೀಗಾಗಿ ದೈವ ಕಥೆಗಳು ಸಂಪೂರ್ಣವಾಗಿ ಎಲ್ಲೆಡೆ ಇದೇ ಬಗೆಯ ಪ್ರತೀಕವಾಗಿರುತ್ತವೆ- ಎಂಬ ಒಂದು ಗ್ರಹಿಕೆ ಮತ್ತು ತಪ್ಪು ಗ್ರಹಿಕೆಯು ಬಲಗೊಂಡಿತು. ಈ ಭಾಷಿಕ ವಿದ್ವಾಂಸರನ್ನು ಟೀಕಿಸುವ ಎರಡನೇ ಪೀಳಿಗೆಯ ವಿದ್ವಾಂಸರು ಎಂದರೆ ಮಾನವವಂಶ ಶಾಸ್ತ್ರಜ್ಞರು. ಡಾರ್ವಿನ್‌ನಿಂದ ಸ್ಫೂರ್ತಿ ಪಡೆದ ಟಾಯಲರನು ಆಸ್ಟ್ರೇಲಿಯನ್ ಬುಡಕಟ್ಟಿನವರ ಅಧ್ಯಯನವನ್ನು ಕೈಕೊಂಡನು. ಆ 'ಕಾಡು' ಸಮಾಜವನ್ನು ಸುಸಂಸ್ಕೃತ ಮನುಷ್ಯ ಸಮುದಾಯದ ಆದ್ಯ ಸ್ಥಾನವೆಂದು ಭಾವಿಸಿ ಅವನ ಧರ್ಮವೇ ಧರ್ಮದ ಮೂಲ ಸ್ವರೂಪವಾಗಿದೆ ಎಂದು ಟೈಲರನು ಸಿದ್ಧಮಾಡಿದನು. ಅದರಿಂದಾಗಿ ಗ್ರೀಕ್, ಆರ್ಯ ಮುಂತಾದ ಸಂಸ್ಕೃತಿಯ ಅಧ್ಯಯನವು ಸೀಮಿತಗೊಂಡಿತು ಮತ್ತು ಪ್ರತ್ಯಕ್ಷ ಮಾನವ ಜೀವನದ ಮಹತ್ವ ಸಾಕಷ್ಟು ಬೆಳೆಯಿತು. ಇಂಡೋ-ಭಾರತೀಯ ಸಂಸ್ಕೃತಿಯು ಒಂದೇ ವಂಶದ ದ್ಯೋತಕವಾಗಿತ್ತು. ಟೈಲರ್ ಹೇಳಿದ ಸಂಸ್ಕೃತಿಯು ಸಂಪೂರ್ಣವಾಗಿ ಜಾಗತಿಕವಾಗಿತ್ತು. ಧರ್ಮದ ಸಂಕ್ಷಿಪ್ತ ರೂಪವು ಟೈಮಾನಿಯನ್‌ದಂತಹ ಕಾಡುಜನರಲ್ಲಿ ಕಾಣುತ್ತದೆ. ಎಲ್ಲೆಲ್ಲಿ ಆದಿಮ ಜಾತಿಗಳಿವೆಯೋ ಅಲ್ಲೆಲ್ಲ ಈ ಬಗೆಯ ಧರ್ಮ ಗೋಚರಿಸುತ್ತದೆ ಎನ್ನುವದು ಟೈಲರ್‌ನ ಮುಖ್ಯ ಪ್ರಮೇಯ. ಅದಕ್ಕೆ ಅವನು ಭೂತವಾದ (animism) ಎಂದು ಹೆಸರಿಸಿದ. ವೃಕ್ಷ-ಪಾಷಾಣಾದಿ ವಸ್ತುಗಳಲ್ಲೂ ಪೈಶಾಚಿಕ ಶಕ್ತಿಯಿರುವ ಶ್ರದ್ಧೆಯು ಗೋಚರಿಸುತ್ತದೆ. ಅದಕ್ಕೆ ಈ ಹೆಸರನ್ನು ಟೈಲರ್ ನೀಡಿದ. ಇದೇ ಶಕ್ತಿಯ ಬೇರೆ ಹೆಸರು ಆತ್ಮ. ಆತ್ಮದ ಕಲ್ಪನೆಯೇ, ಧರ್ಮದ ಮೂಲಸ್ಥಾನವಾಗಿದೆ ಎಂದು ಟೈಲರ್ ಹೇಳುತ್ತಾನೆ.[೧] ಈ ಭೂತವಾದದಿಂದಲೇ ದೈವದ ಕಲ್ಪನೆಯ ಜನ್ಮವಾಯಿತು. ದೈವಕಥೆಗಳ ಉಗಮವೂ ಆಯಿತು. ಟೈಲರ್‌ನಿಗೆ ಅತೀ ದೊಡ್ಡ ಅನುಯಾಯಿಗಳ ಗುಂಪು ಸಿಕ್ಕಿತು. ಆಡ್ರ್ಯೂಲಾಂಗ್ ಅವರಲ್ಲೊಬ್ಬ; ಎರಡನೆಯವನು ಫ್ರೇಜರ್. ಇವನನ್ನಂತೂ ಜಾನಪದ ಸಾಹಿತ್ಯದ ಡಾರ್ವಿನ್ ಎಂದೇ ಕರೆಯುತ್ತಾರೆ. ಫ್ರೇಜರನು ದೈವ (totems) ಈ ವಿಷಯದ ಧಾರ್ಮಿಕ ಮಹತ್ವವನ್ನು ವಿಶದಪಡಿಸಿದನು. ಆದಿಮ ಜಾತಿಯಲ್ಲಿ ದೈವದ ಹೊರೆ ತುಂಬ ಇರುತ್ತದೆ. ಅಷ್ಟೇ ಅಲ್ಲ, ಅವರ ಶ್ರದ್ಧೆ ಮತ್ತು ಕಥೆಗಳು

ದೈವವಾದದಿಂದಲೇ ನಿಯಮಿತಗೊಳಿಸಲಾಗಿದೆ ಎಂಬ ಸಿದ್ಧಾಂತವನ್ನು ಫ್ರೆಜರ್‌ನು ಮಂಡಿಸಿದನು. ಆದರೆ ಟೈಲರ್ ಮತ್ತು ಅವನ ಅನುಯಾಯಿಗಳ ವಿಚಾರಗಳು ಸಂಶೋಧನೆಗೆ ಗತಿ ಮತ್ತು ದಿಕ್ಕು ತೋರಿಸಲು ಅತ್ಯಂತ ಉಪಯುಕ್ತವಾಗಿದ್ದರೂ ಅವರು ಬಣ್ಣಿಸಿದ ಸತ್ಯವು ಸಂಪೂರ್ಣ ಸತ್ಯವಾಗಿರದೆ, ಸಂಸ್ಕೃತಿಯ ಕೆಲವು ವೈಶಿಷ್ಟ್ಯಗಳು ಮಾತ್ರ ಅದರಿಂದ ಅನಾವರಣಗೊಳ್ಳುವಷ್ಟು ಮಹತ್ವ ಮಾತ್ರ ಅದಕ್ಕೆ ಉಳಿದಿದೆ. ಟೈಲರ್‌ನಿಂದ ಫ್ರೆಜರ್ ವರೆಗೆ ಮತ್ತು ಅನಂತರವೂ ಮಾನವವಂಶ ಶಾಸ್ತ್ರಜ್ಞರ ಹಾಗೂ ಡುರಖಾಯಿಮ್ ನಂತಹ ಸಮಾಜಶಾಸ್ತ್ರಜ್ಞರ ವರ್ಗದವರೆಲ್ಲ ದೈವಕಥೆಗಳ ಕಕ್ಷೆಯು ಧರ್ಮವೆಂದೇ ಒಪ್ಪಿಕೊಂಡರು. ದೈವಕಥೆಯ ಭಾಷಿಕ ಆವಿಷ್ಕಾರ ಹಿಂದೆ ಬಿತ್ತು. ಮಾನವವಂಶ ಶಾಸ್ತ್ರಜ್ಞರ ಬಳಿಕ ದೈವಕಥೆಗಳನ್ನು ಮಾನಶ್ಶಾಸ್ತ್ರೀಯ ದೃಷ್ಟಿಯಿಂದ ಮೊದಲಿಗೆ ಯೋಚಿಸಿದವರೆಂದರೆ ಫ್ರೈಡ್, ಸೈಕೋ ಎನಾಲಿಸಿಸ್‌ನ ಈ ಪ್ರಣೀತನು ಈಡಿಪಸ್ಸಿನ ಕಥೆಯನ್ನು ಲೈಂಗಿಕ ಪ್ರತೀಕವೆಂದು ಬಳಸಿದನು. ಅನಂತರ ಕೆಲಕಾಲ ಮಾನಶ್ಶಾಸ್ತ್ರದ ಹೊರೆ ಈ ಕ್ಷೇತ್ರದ ಮೇಲೆ ಉಳಿಯಿತು. ಆದರೆ ಅನಂತರ ಫ್ರೆಂಚ್ ಸಮಾಜಶಾಸ್ತ್ರಜ್ಞನಾದ ಡುರ್‌ಖಾಯಿಮನು ಧರ್ಮ ಮತ್ತು ಮಾನಶ್ಶಾಸ್ತ್ರದ ಸಮನ್ವಯವನ್ನು ಸಾಧಿಸಿ ದೈವಕಥೆಯು ತರ್ಕಪೂರ್ವಕಾಲದಲ್ಲಿ (Prelogical) ಮಾನವ ಪ್ರಕ್ರಿಯೆಯಿಂದ ನಿರ್ಮಾಣವಾಗಿದೆ ಎಂಬ ಸಿದ್ಧಾಂತವನ್ನು ಮಂಡಿಸಿದನು. ಮೆಲಿನೆಸ್ಕಿ ಎಂಬ ಮಾನವವಂಶ ಶಾಸ್ತ್ರಜ್ಞನು ಭೂತವಾದದ ಸಿದ್ಧಾಂತದ ಬಗೆಗೆ ಪ್ರಖರ ಟೀಕೆಯನ್ನು ಮಾಡಿದನು. ಭೂತವಾದವು ಧರ್ಮದ ಮೂಲಸ್ವರೂಪವಲ್ಲ. ಅದರ ಮೊದಲಿನ ಧರ್ಮವು ಮಾನಾ ಎಂಬ ಆಸ್ಟ್ರೇಲಿಯನ್ ಕಾಡುಜನರಲ್ಲಿ ಪ್ರಚಲಿತವಾಗಿರುವ ಕಲ್ಪನೆಯಲ್ಲಿ ಗೋಚರಿಸುತ್ತದೆ ಎಂದು ಕಂಡುಹಿಡಿದನು. ಮಾನಾ ಎಂದರೆ ಪ್ರತ್ಯೇಕ ಜೀವತತ್ವ, ಈ ಸೂಕ್ಷ್ಮ ಜೀವಶಕ್ತಿಯು ಎಲ್ಲ ಸೃಷ್ಟಿ ವ್ಯಾಪಾರದ ಆದಿಕಾರಣವಾಗಿದೆ, ಸಚೇತನ ಅಚೇತನದಲ್ಲೂ ಇದೆ. ದೈವದ ರೂಪದಲ್ಲಿ ಅದರ ಆವಿಷ್ಕಾರವು ಉತ್ಕಟವಾಗಿ ವ್ಯಕ್ತವಾಗುತ್ತದೆ ಎಂಬ ಸಿದ್ಧಾಂತವನ್ನು ಅವನು ಮಂಡಿಸಿದನು. ಅಂದಿನಿಂದ ಟೈಲರ್‌ನ ಸಿದ್ಧಾಂತ ಭ್ರಷ್ಟಗೊಂಡಿತು.

ಇದು ದೈವ ಕಥೆಗಳ ಅಧ್ಯಯನದ ಹಿನ್ನೆಲೆ, ಇದರ ಆಧಾರದಿಂದಲೇ ಟೈಲರ್ ನಂತರದ ಯಾವ ವಿವಿಧ ಮತಗಳ ಅಧ್ಯಯನ ನಡೆಯಿತೋ ಅವುಗಳ ಕಿರುಪರಿಚಯವನ್ನು ಮಾಡಿಕೊಡಲಿದ್ದೇನೆ.

ಮಾನಶ್ಶಾಸ್ತ್ರದ ನಿಷ್ಕರ್ಷೆ : ಫ್ರೈಡ್ ಸಿದ್ಧಾಂತವನ್ನು ಆಧರಿಸಿ ಮಾನಶ್ಶಾಸ್ತ್ರಜ್ಞರು ದೈವಕಥೆಗಳ ಕುರಿತು ಕೈಕೊಂಡ ನಿಷ್ಕರ್ಷವನ್ನು ಮೊದಲಿಗೆ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಎಲ್ಲ ಅಧ್ಯಯನಕಾರರು ದೈವಕಥೆಯ ಉಗಮಕ್ಕೆ ಮಹತ್ವ ನೀಡಿದರು. ಈ ಬಗೆಗೆ ಸ್ವಲ್ಪ ಚರ್ಚೆ ಈಗಾಗಲೇ ಆಗಿದೆ. ಆದರೆ ಮಾನಶ್ಶಾಸ್ತ್ರಜ್ಞರ

ನಿಲುವು 'ವ್ಯಕ್ತಿಯಿಂದ ಸಮಷ್ಟಿಯ ಕಡೆಗೆ' ಇರುವುದರಿಂದ ಮಾನವನ ಸ್ವಭಾವ ಮತ್ತು ಸಾಮಾಜಿಕ ಪ್ರಜ್ಞೆಯ ಸಮನ್ವಯ ಹಾಗೂ ಸಂಘರ್ಷದ ಪ್ರತಿಬಿಂಬವು ಇವರ ವಿವೇಚನೆಯಲ್ಲಿ ಕಾಣಿಸುತ್ತದೆ. ಫ್ರೈಡ್‌ನ ಹೇಳಿಕೆ ಏನೆಂದರೆ 'ಸಮೂಹದಿಂದ ಹೊರಗೆ ಬೀಳಲು ವ್ಯಕ್ತಿಯು ಇಟ್ಟ ಮೊದಲ ಹೆಜ್ಜೆ. ದೈವ ಕಥೆಯ ಮೊದಲ ಆವಿಷ್ಕಾರವು ವೀರಕಥೆಯಲ್ಲಿದೆ. ನಿಸರ್ಗ ಕಥೆಯು ತೀರಾ ಅನಂತರದ್ದು. ಯಾವ ಕವಿಯು ಯಾವ ಬಗೆಯಲ್ಲಿ ಮೊದಲ ಹೆಜ್ಜೆಯಿರಿಸಿದನೋ, ಸಮೂಹದಿಂದ ತನ್ನನ್ನು ಮುಕ್ತ ಮಾಡಿಕೊಂಡನೋ ಅವನೇ ಹಾಗೆ ನೋಡಿದರೆ, ಆ ಸಮೂಹದ ಕಡೆಗೆ ಪುನರಾಗಮನವನ್ನು ಮಾಡಿಬಿಡಬಹುದಾಗಿತ್ತು. ಕಾರಣವೇನೆಂದರೆ ಸ್ವತಃ ನಿರ್ಮಿಸಿದ ಆ ವೀರಗಾಥೆಯನ್ನು ಅವನೇ ತನ್ನ ಸಮಾಜಕ್ಕೆ ಹೇಳುತ್ತಿರುತ್ತಾನೆ. ಆ ಕಥೆಯ ನಾಯಕನು ಬೇರೆ ಯಾರೂ ಆಗಿರದೇ ಆ ಕವಿಯೇ ಆಗಿರುತ್ತಾನೆ. ಅವನ ಈ ಆತ್ಮಪ್ರೇಮವು ವಾಸ್ತವದ ಪಾತಳಿಗೆ ತಲುಪಿಸುತ್ತದೆ. ಅವನ ಕೇಳುಗರೂ ಸಹ ಕಲ್ಪನೆಯ ಆ ಸೀಮೆಗೆ ಬಂದು ತಲುಪುತ್ತಾರೆ. ಅವರು ಕವಿಯ ಆಶಯವನ್ನು ಅರಿತಿರುತ್ತಾರೆ. ಅವರಲ್ಲಿಯ ಜಗದ ಆದಿಪಿತನ ಬಗೆಗಿರುವ ಉತ್ಕಟ ಇಚ್ಛೆಗೆ ಚಾಲನೆ ಸಿಗುತ್ತದೆ. ಕವಿಯಂತೆ ಆ ಕೇಳುಗರೂ ಕಥೆಯ ನಾಯಕನೊಂದಿಗೆ ತದ್ರೂಪ ಹೊಂದುತ್ತಾರೆ.' ಕಥೆಯಲ್ಲಿಯ ವೀರಪುರುಷ ಮತ್ತು ಸಮಾಜ ಅವರಲ್ಲಿಯ ದೃಢ ಬಂಧನದ ಪರಿವರ್ತನೆಯು ಆ ವೀರಪುರುಷರು ದೇವರಲ್ಲಿ ರೂಪಾಂತರವಾಗುವುದನ್ನು ಕಾಣುತ್ತೇವೆ. ಈ ಅವಸ್ಥೆಯು 'ಪಿತೃ ದೇವರು' ಈ ಕಲ್ಪನೆಗಿಂತಲೂ ಹಳೆಯದಿರಬೇಕು. ಇದೇ ಕಲ್ಪನೆಯಿಂದ ಬೇರೆ ಬೇರೆ ದೈವಗಳು ನಿರ್ಮಾಣಗೊಂಡಿರಬೇಕು.[೨] ಮಾನವವಂಶ ಶಾಸ್ತ್ರಜ್ಞನಾದ ಮೆಲಿನೆಸ್ಕಿಯ ಮನಶ್ಶಾಸ್ತ್ರದ ಚೌಕಟ್ಟಿನಲ್ಲೇ ಕಾಡು ಸಮಾಜದ ದೈವ ಕಥೆಗಳಿಗೆ ಸ್ಪಷ್ಟೀಕರಣ ನೀಡಿದ್ದಾನೆ. 'ಮಿಥ್ ಇನ್ ಪ್ರಿಮಿಟಿವ್ ಸೈಕಾಲಾಜಿ' (೧೯೨೩) ಎಂಬ ತನ್ನ ಕೃತಿಯಲ್ಲಿ ಅವನು ಫ್ರೈಡ್‌ಗಿಂತ ಕಿಂಚಿತ್ ಬದಿಗೆ ಸರಿದು 'ದೈವ ಕಥೆಯನ್ನು ಬರೇ ಕಥೆ– ಎಂದು ಕಾಡು ಜನರು ಭಾವಿಸುವುದಿಲ್ಲ, ಅವರ ದೃಷ್ಟಿಯಲ್ಲಿ ಅದೊಂದು ವಾಸ್ತವ ಘಟನೆ. ದೈವಕಥೆಯು ಕೇವಲ ಪ್ರತೀಕಾತ್ಮಕವಾಗಿರದೆ ವರ್ಣಿತ ವಿಷಯದ ಪ್ರತ್ಯಕ್ಷ ಆವಿಷ್ಕಾರವೂ ಆಗಿರುತ್ತದೆ' ಎನ್ನುತ್ತಾನೆ.

ದೈವಕಥೆಯು ವಿಧಿಯೊಂದಿಗೆ ಸಂಲಗ್ನವಾಗಿರುತ್ತದೆ. ವಿಧಿಯು ಜೀವನದ ಯಾವುದಾದರೂ ತುರ್ತು ಪರಿಸ್ಥಿತಿಯ ಪ್ರಸಂಗದ ಪ್ರತೀಕವಾಗಿರುತ್ತದೆ. ಆ ಪ್ರಸಂಗಗಳು ಹುಟ್ಟು, ಸಾವು, ಯುದ್ಧ, ಮುಂತಾದ ವಿವಿಧ ಪ್ರಕಾರದ್ದಾಗಿರುತ್ತದೆ. ದೈವ ಕಥೆಗಲ್ಲಿ ರಾಜಕೀಯ, ಆರ್ಥಿಕ, ಇಲ್ಲವೇ ಸಾಮಾಜಿಕ ಉತ್ಪಾತಗಳ ಪ್ರತೀಕವೂ ಕಾಣಬರುತ್ತದೆ. ದೈವಕಥೆಯಲ್ಲಿ ವಿಧಿಯ ತಾರ್ಕಿಕ ಸ್ವರೂಪ ಗೋಚರಿಸುತ್ತದೆ. ದೈವಕಥೆಯಿಂದಾಗಿ ವಿಧಿಗೆ ಪುಷ್ಟಿ ಸಿಗುತ್ತದೆ. ಅದರ ಕ್ಷೇತ್ರ ವ್ಯಾಪಕವಾಗುತ್ತದೆ.

ಕಿಬಾಲ್ ಯಂಗ್‌ನ ಮಾತಿನಲ್ಲಿ ಹೇಳುವದಾದರೆ 'ದೈವಕಥೆಗಳಲ್ಲಿ ಆರ್ಥಿಕ ಅಗತ್ಯ, ಯುದ್ಧ, ಧಾಡಸಿ ಕೃತಿಗಳು, ಯಶಾಪಯಶ, ಹುಟ್ಟು, ಯೌವ್ವನ ಪ್ರಾಪ್ತಿ, ವಿವಾಹ, ಮೃತ್ಯು, ಮರಣೋತ್ತರ ಜೀವನ ಮುಂತಾದ ಸಂಗತಿಗಳಿರುತ್ತವೆ. ಇವು ಸಮಾಜದ ಸಂಪೂರ್ಣ ವಿಚಾರಧಾರೆಯ ಮಹತ್ವದ ವಿಭಾಗವಾಗಿರುತ್ತದೆ. ಅದರಿಂದಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನಕ್ಕೆ ಮೂಲಭೂತ ಚಾಲನೆ ಸಿಗುತ್ತದೆ.'[೩]

ಮಾನವವಂಶ ಶಾಸ್ತ್ರೀಯ ಸಿದ್ಧಾಂತ : ಮಾನವವಂಶ ಶಾಸ್ತ್ರದ ಸಿದ್ಧಾಂತದ ಮೂಲಪೀಠಿಕೆಯನ್ನು ಮೇಲೆ ಈಗಾಗಲೇ ನೀಡಲಾಗಿದೆ. ಹೊಸ ಮಾನವನ ಸಾಮಾಜಿಕ ಜೀವನ ಮತ್ತು ಅವನ ಆದಿಭೌತಿಕ ಜೀವನದ ಬಗೆಗಿನ ಕಲ್ಪನೆಯು ಈ ವಿದ್ವಾಂಸರ ಸಿದ್ಧಾಂತದ ಕೇಂದ್ರವಾಗಿದೆ. ಉತ್ಕ್ರಾಂತಿವಾದದ ತೀರ ಪ್ರಾಥಮಿಕ ರೂಪದ ಪರಿವರ್ತನೆಯು ಹೆಚ್ಚೆಚ್ಚು ಗೋಜಲಿನ ರೂಪದಲ್ಲಿತ್ತು ಎಂಬ ಪ್ರಾಣಿ-ವನಸ್ಪತಿ ಸೃಷ್ಟಿಯ ಪುರಾವೆಯನ್ನು ವಿದ್ವಾಂಸರು ಸಾಮಾಜಿಕ ಜೀವನಕ್ಕೂ ಅನ್ವಯಿಸಿದರು. ಅದರಿಂದಾಗಿ ಜಗದಲ್ಲಿರುವ ಕಾಡು ಸಮಾಜದ ವಿವಿಧ ತರಹದ ವಿಚಾರಸರಣಿಗೆ ಪ್ರಗತಿಶೀಲ ಸಮಾಜದ ವಿಚಾರ ಸರಣಿಯಷ್ಟೇ ಮಹತ್ವ ಬಂದಿದ್ದರೂ ಅದರಿಂದ ಸುಲಭೀಕರಣದ ತಂತ್ರದ ಅತಿರೇಕವಾಯಿತು. ಉದಾಹರಣೆಗಾಗಿ : ಟೈಲರ್‌ನು ಸ್ವತಃ ಕಾಡು ಸಮುದಾಯದವರ ಅವಲೋಕನ ಮಾಡಿ ಅವರ ಜೀವನದ ವೈವಿಧ್ಯವನ್ನು ಮೊದಲ ಬಾರಿಗೆ ಅಧ್ಯಯನಕಾರರ ಗಮನಕ್ಕೆ ತಂದನು. ಆದರೆ ಸ್ಪೆನ್ಸರನು ಡಾರ್ವಿನನ ಮತ್ತು ಅವನ ನಿಲುವಿಗೆ ಬೆಂಬಲ ನೀಡುವಾಗ ತನ್ನದೇ ಆದ ಒಂದು ಬೃಹತ್ ಜಗತ್ತನ್ನು ನಿರ್ಮಿಸಿದ. ಸ್ಪೆನ್ಸರನ ದೈವಕಥೆಗಳ ಹಚ್ಚಿದ ಅನ್ವಯಾರ್ಥವು ಹೀಗಿದೆ. ನಿಸರ್ಗ ಕಥೆಯು ನಿಸರ್ಗ ಪೂಜೆಯಿಂದ ನಿರ್ಮಾಣಗೊಂಡಿತು. ಮತ್ತು ನಿಸರ್ಗ ಪೂಜೆಯು ಪಿತೃಪೂಜೆಯಿಂದ ಆರಂಭಗೊಂಡಿತು. ಪಿತೃಪೂಜೆಯು ನಿಸರ್ಗ ಪೂಜೆಯಲ್ಲಿ ರೂಪಾಂತರಗೊಳ್ಳುವ ಕಾರಣ 'ಭಾಷಿಕ ಪ್ರಮಾಣ'ವಾಗಿತ್ತು. ಮನುಷ್ಯರಿಗೆ ಶ್ವಪದದ, ವನಸ್ಪತಿಯ ಮತ್ತು ಇತರ ನೈಸರ್ಗಿಕ ವಸ್ತುವಿನ ಹೆಸರು ಕೊಡಲಾಗುತ್ತದೆ. ಇದರ ಮೇಲಿಂದ ಸ್ಪೆನ್ಸರನು ಕೈಕೊಂಡ ನಿರ್ಣಯವೇನೆಂದರೆ ಒಬ್ಬ ಮನುಷ್ಯನು ಅಸುನೀಗಿದರೆ ಕಾಲಾಂತರದಲ್ಲಿ ಅವನ ಹೆಸರಿನಲ್ಲಿ ಗಿಡ, ಪ್ರಾಣಿ ಇಲ್ಲವೇ ಯಾವ ವಸ್ತು ಸೂಚಿತಗೊಳ್ಳುವದೋ ಅದೇ ನಮ್ಮ ಪೂರ್ವಜರೆಂದು ಭಾವಿಸುವ ಪ್ರವೃತ್ತಿಯು ಭಾಷೆಯ ಸಂಕೇತದ ಜ್ಞಾನವು ಅಪೂರ್ಣವಾಗಿದ್ದರಿಂದ ಬಲಿಷ್ಠಗೊಂಡಿತು. ನೈಸರ್ಗಿಕ ವಸ್ತುವಿನ ರೂಪಾಂತರವು ಪ್ರತ್ಯಕ್ಷವಾಗಿ ಪೂರ್ವಜರಲ್ಲಿ ಬಂತು. ಹೀಗೆ ನಿಸರ್ಗ ಪೂಜೆ-ಪಿತೃಪೂಜೆ ಜೋಡಿಯಾಯಿತು.[೪]

ಟೈಲರ್‌ನ ನಿಲುವು ಇದಕ್ಕಿಂತ ಭಿನ್ನವಾಗಿತ್ತು. ಪಿತೃಪೂಜೆ ಮತ್ತು ನಿಸರ್ಗಪೂಜೆಯ ಪ್ರಬಂಧವನ್ನು ತೋರಿಸುವಾಗ ಅವನು ಭಾಷಿಕ ಪ್ರಮಾದದ

ಬದಲು ಕಾಡು ಜನರ ವಿಶಿಷ್ಟ ಪ್ರಮಾದಶೀಲ ಬುದ್ಧಿಯ ಕಡೆಗೆ ಬೆರಳು ಮಾಡಿ ತೋರಿಸಿ, ಆ ತೀರ ಪುರಾಣ ಕಾಲದ ಕಾಡುಜನರ ಬುದ್ಧಿಯು ಬಾಲಕರಂತಿತ್ತು ಎಂದೆನ್ನುತ್ತಾನೆ. ಸಚೇತನ ಹಾಗೂ ಅಚೇತನದಲ್ಲಿಯ ಭೇದವನ್ನು ಗ್ರಹಿಸುವ ಸಾಮರ್ಥ್ಯವು ಅದರಲ್ಲಿರಲಿಲ್ಲ. ನೈಸರ್ಗಿಕ ವೈಭವವನ್ನು ಅನಾವರಣಗೊಳಿಸುವಾಗ ಅವನಿಗೆ ನಿಸರ್ಗಶಕ್ತಿಯೊಂದಿಗೆ ಮಾನವನದೇ ಸಾಧರ್ಮ್ಯ ಅವನಿಗೆ ಗೋಚರಿಸಿತು. ಪೂರ್ವಜರ ಆತ್ಮ ಮತ್ತು ನಿಸರ್ಗ ಶಕ್ತಿಯ ಸಂಕಿರಣವನ್ನು ಮಾಡಿದ. ದೈವ ಪದ್ಧತಿಯಿಂದಾಗಿ ಈ ಸಂಯೋಗ ಜರುಗಿತು. ಫ್ರೇಜರನು ನಿಸರ್ಗ ದೃಶ್ಯದ ವಿವರಣೆಯನ್ನು ಸ್ವಲ್ಪ ಬೇರೆ ರೀತಿಯಿಂದ ಕೈಕೊಂಡ. ದೈವಕಥೆಯನ್ನು ರಚಿಸುವ ಪೂರ್ವಕಾಲದ ಮಾನವನು ಕಾಡು ಮಾನವನು. ಅದೆಷ್ಟು ಮುಗ್ಧವಾಗಿ ಜಗತ್ತನ್ನು ನೋಡಿ ತನ್ನ ಧರ್ಮವನ್ನು ನಿರ್ಮಿಸಿದ ಎನ್ನುವುದು ಅವನಿಗೆ ಒಪ್ಪಿಗೆಯಾಗಲಿಲ್ಲ. ದೈವಗಳು ಏಕೆ ಅಸ್ತಿತ್ವಕ್ಕೆ ಬಂದವು ಎಂಬ ಪ್ರಶ್ನೆಗೆ ಅವನು ನೀಡಿದ ಉತ್ತರವೇನೆಂದರೆ ನಿಸರ್ಗದ ಮೇಲೆ ನಿಯಂತ್ರಣವಿರುವ ಶಕ್ತಿಯ ಜ್ಞಾನವು ಮಾನವನಿಗಾಯಿತು. ಆ ನಿಯಮದ ತೀವ್ರ ಇಚ್ಛೆಯಿಂದ ಅವನಿಗೆ ಚಿಂತನೆಯ ಪ್ರೇರಣೆಯು ಲಭಿಸಿತು. ಆ ಪ್ರೇರಣೆಯ ಎರಡು ಸ್ವರೂಪಗಳಿವೆ. ಮೊದಲನೆಯ ಪರಿಪಕ್ವ ಫಲ ಜಾದೂ ವಿದ್ಯೆಯದು ಮತ್ತು ಎರಡನೆಯ ಪರಿಪಕ್ವಫಲ ಧರ್ಮದ್ದು. ಫ್ರೇಜರನ ಸಿದ್ಧಾಂತದ ಎಲ್ಲಕ್ಕಿಂತ ದೊಡ್ಡ ದೋಷವೆಂದರೆ ಅವನದು ಜಾದೂ ವಿದ್ಯೆಯನ್ನು ಧರ್ಮಕ್ಕಿಂತ ಪ್ರಾಚೀನವೆಂದು ಭಾವಿಸುತ್ತಾನೆ. ಜಾದೂವಿದ್ಯೆಯು ಪ್ರಮಾದವನ್ನು ಆಧರಿಸಿದ್ದು ಪ್ರಮಾದದಿಂದ ಬಳಸಿದ ಈ ತಂತ್ರವು ನಂತರ ತಿದ್ದುಪಡಿಗೊಂಡಿತು. ಅದರದೇ ಹೆಸರು ಧರ್ಮ. ಹೀಗವನು ಜಾದೂ ಮತ್ತು ಧರ್ಮವನ್ನು ವಿಭಾಗಿಸಿದ. ಈ ಎರಡು ಪ್ರಕಾರದಲ್ಲಿಯ ಕಾಲ ವಿಸಂಗತಿಯು– ಹಿಂದು ಮುಂದಿನ ಪರಸ್ಪರ ಸಂಬಂಧ– ವಿವಾದಕ್ಕೊಳಗಾಗಿದೆ.

ಹೀಗಾಗಿ ಫ್ರೇಜರ್‌ನ ಸಿದ್ಧಾಂತವನ್ನು ಈಗ ಯಾರೂ ಒಪ್ಪುವುದಿಲ್ಲ. ಟೈಲರ್‌ನಂತೆ ಫ್ರೇಜರನೂ ದೈವವಾದವನ್ನು ಪುರಸ್ಕರಿಸುತ್ತಾನೆ. ಫ್ರೈಢನೂ ಒಪ್ಪುತ್ತಾನೆ. ಅವನಿಗೆ ಅದರಲ್ಲಿ ನಿಸರ್ಗ ಮತ್ತು ಮಾನವನ ಮಾನಸಿಕ ಸಮನ್ವಯದ ಕೊಂಡಿ ಕಾಣಿಸುತ್ತದೆ. ಆಂಡ್ರೂಲೆಂಗನು ಮಾಕ್ಸ್ ಮ್ಯುಲರ್‌ನನ್ನು (ಅವನು ನಿಸರ್ಗ ಶಕ್ತಿಯನ್ನು ಮಾನವ ಸ್ವರೂಪದ ಪರಿವರ್ತನೆ ಎನ್ನುತ್ತಾನೆ ಮತ್ತು ಸೂರ್ಯ ಕಥೆಯನ್ನು ಎಲ್ಲಕ್ಕಿಂತ ಮಹತ್ವದ ಆದಿಕಥೆ ಎಂದೊಪ್ಪುತ್ತಾನೆ) ಸಾಕಷ್ಟು ತರಾಟೆಗೆ ತೆಗೆದುಕೊಂಡಿದ್ದಾನೆ. ಹಾಗೆಯೇ ಅವನು ಟೈಲರ್ ಮತ್ತು ಫ್ರೇಜರ್‌ನ ತರ್ಕದ ವಿರುದ್ಧ ಚಾಬೂಕು ಝಳಪಿಸಿದ್ದಾನೆ. ಅವರ ವಿವೇಚನೆಯು ಅತ್ಯಂತ ಸುಸೂತ್ರ ಮತ್ತು ಸರಳ ಸಿದ್ಧಾಂತವಾಗಿದೆ. ಭೂತವಾದದಿಂದ ದೈವವಾದ ಇಲ್ಲವೇ ದೇವವಾದ. ಈ ದೈವವಾದವು ಹಲವು ದೇವರ ಶ್ರದ್ಧೆಯಿಂದ ನಿರ್ಮಾಣಗೊಂಡಿದೆ, ಈ

ಬಹುದೈವವಾದದಿಂದ ಏಕದೇವೋಪಾಸನೆಯ ವಾದ ರೂಪಗೊಂಡಿತು. ಈ ರೀತಿಯಲ್ಲಿ ಉತ್ಕ್ರಾಂತದ ಏರುಶ್ರೇಣಿಯು ಅವರ ಸಿದ್ಧಾಂತದಲ್ಲಿದೆ. ಈ ತರ್ಕದ ಶಿಥಿಲತೆಯೇ ಅವರ ಮುಖ್ಯ ದೋಷವಾಗಿದೆ. ಉದಾಹರಣೆಗಾಗಿ ಆಸ್ಟ್ರೇಲಿಯನ್ ಮುಖ್ಯದೇವರು, ಭೂತನಾಗಲಿ ಪಿಶಾಚಿಯಾಗಲಿ ಅಲ್ಲ. ಅವರಿಗೆ ಕಡಲು, ಕಾಡು, ಮೃತ್ಯು ಮುಂತಾದ ಯಾವ ವಿಭಾಗವನ್ನು ನೀಡಲಾಗಿಲ್ಲ. ಈ ದೇವರು ಮಾನವ ವ್ಯವಹಾರದಿಂದ ನಿರ್ಲಿಪ್ತವಾಗಿದ್ದು, ಆ ಕಾಡು ಸಮುದಾಯದವರ ನೀತಿಯ ಸಂರಕ್ಷಕನಾಗಿದ್ದಾನೆ. ಅವರ ಆ ನೀತಿಯ ಸಮೂರ್ತ ಪ್ರತೀಕವಾಗಿದ್ದಾನೆ.

ಆಂಡ್ರ್ಯೂಲೆಂಗ್‌ನ ಈ ಹಲ್ಲೆಗೆ ಟೈಲರ್ ಮತ್ತು ಅವನ ಶಿಷ್ಯರು ಎದುರುತ್ತರ ನೀಡಿದರು ಮತ್ತು ಈ ಹೇಳಿಕೆಯು ಸತ್ಯವಾಗಿರದೆ ಕ್ರೈಸ್ತ ಮಿಶನರಿಯ ನಿಲುವಿನಿಂದ ಅದು ನಿರ್ಮಾಣಗೊಂಡಿದೆ ಎಂಬ ನಿರ್ಣಯಕ್ಕೆ ಅವರು ಬಂದರು.

ಅನಂತರ ಲೆಂಗ್‌ನ ಸಿದ್ಧಾಂತ ನಾಮಾವಶೇಷಗೊಂಡಂತಾಗಿತ್ತು. ಆದರೆ ಫಾದರ್ ಶ್ಮಿಡಟ್‌ನು ಅದನ್ನು ಪುನರುಜ್ಜೀವಗೊಳಿಸಿದ. ಈಗ ದೈವ ಹಾಗೂ ಅವುಗಳ ಕಥೆಗಳಿಗೆ ಕಾಡು ಸಮುದಾಯದಲ್ಲಷ್ಟೇ ಅಲ್ಲ ಪ್ರಾಗೈತಿಹಾಸದ ಅಂಗಳವೂ ಲಭಿಸಿದಂತಾಯಿತು. ಇ. ಓ. ಜೇಮ್ಸ್ ಎಂಬವನೂ ಶ್ಮಿಡಟ್‌ನನ್ನೇ ಬೆಂಬಲಿಸಿದ. ಈ ಸಂಪ್ರದಾಯದವರ ಹೇಳಿಕೆ ಏನೆಂದರೆ ಪ್ರಾಗೈತಿಹಾಸಿಕತೆಯು ಧರ್ಮವನ್ನು ನಾಲ್ಕು ರೀತಿಯಲ್ಲಿ ವಿಭಾಗ ಮಾಡುತ್ತದೆ. (೧) ಮೃತರ ವಿಧಿಕಲ್ಪ (Cute), (೨) ಜನ್ಮರಹಸ್ಯ, (೩) ಮೃಗಯಾದ ವಿಧಿಕಲ್ಪ, (೪) ಆಕಾಶ ದೇವರು. ಈ ನಾಲ್ಕು ಕಲ್ಪನೆಯನ್ನು ಆಧರಿಸಿಯೆ, ದೈವ ವಿಷಯದ ಹಾಗೂ ಧರ್ಮದ ಕಲ್ಪನೆಯು ರೂಪುಗೊಂಡಿದೆ. ಅದರ ದ್ಯೋತಕವೇ ದೈವ ಕಥೆಯಾಗಿದೆ.[೫] ಮೆಲಿನಾಡ್ಕಿ ಎಂಬವನು ಈ ವಿದ್ವಾಂಸರಿಗಿಂತಲೂ ಭಿನ್ನವಾದ ನಿಲುವನ್ನು ತಾಳಿದನು. ಅವನು ದೈವ ಕಥೆಯು ಪ್ರತೀಕಾತ್ಮಕವಾಗಿರುತ್ತದೆ ಎಂಬುದನ್ನು ನಿರಾಕರಿಸಿದನು. ಜೀವಂತ ದೈವ ಕಥೆಯು ಎಂದೂ ಪ್ರತೀಕಾತ್ಮಕವಾಗಿರುವುದಿಲ್ಲ. (ಮೃತ ಕಥೆಯು ಹಾಗಿರಬಲ್ಲದು). ಅದರಲ್ಲಿ ಬಣ್ಣಿಸಲಾದ ವಿಷಯವು ಪ್ರತ್ಯಕ್ಷ ಅಭಿವ್ಯಕ್ತಿಯಾಗಿರುತ್ತದೆ ಅದು. ಆ ದೈವಕಥೆ ಎಂದರೆ (ಬಣ್ಣಿಸಿದ ವಿಷಯ) ವೈಜ್ಞಾನಿಕ ಸ್ಪಷ್ಟೀಕರಣವಲ್ಲ. ಒಂದು ಆದಿತಮ ವಾಸ್ತವದ ಕಥಾತ್ಮಕ ಪುನರುಜ್ಜೀವನವಾಗಿರುತ್ತದೆ. ಈ ಕಥನ ಮಾಡುವಾಗ ಧಾರ್ಮಿಕ ಕುತೂಹಲ, ನೈತಿಕ ತೃಷೆ, ಸಾಮಾಜಿಕ ವಿನಯ ಮತ್ತು ಪ್ರಭುತ್ವ ಹಾಗೆಯೇ ವ್ಯವಹಾರಿಕ ಅಗತ್ಯ ಇದೆಲ್ಲವೂ ತೃಪ್ತಿಗೊಂಡ ಅನುಭವ ಬರುತ್ತದೆ. ಕಾಡು ಸಂಸ್ಕೃತಿಯಲ್ಲಿ ವಿಧಿಯಂತೆಯೆ, ದೈವ ಕಥೆಗಳ ಕಾರ್ಯವೂ ಮಹತ್ವದ್ದಾಗಿರುತ್ತದೆ. ಅದೆಂದರೆ ದೈವಕಥೆಯಿಂದಾಗಿ ಶ್ರದ್ಧೆಗೆ ಅಭಿವ್ಯಕ್ತಿ ಸಿಗುತ್ತದೆ. ಅದರ ಸಂವರ್ಧನೆಯಾಗುತ್ತದೆ. ಅದು ನಿಯಮ ಬದ್ಧವಾಗುತ್ತದೆ. ಯಾವ ಕಾರ್ಯವನ್ನು ಪವಿತ್ರವೆಂದು ಭಾವಿಸಲಾಗಿದೆಯೋ ಅವುಗಳ ಫಲಸಾಮರ್ಥ್ಯದ ಸಾಕ್ಷಿ ದೈವಕಥೆಯಲ್ಲಿ ಸಿಗುತ್ತದೆ.

ಡುರ್‌ಖಾಯಿಮನ ಸಿದ್ಧಾಂತ : ಕಾಡು ಧರ್ಮದ ಚಿಕಿತ್ಸೆ ಕೈಕೊಳ್ಳುವಾಗ ಡುರ್ ಖಾಯಿಮನು ಟೈಲರ್, ಸ್ಪೆನ್ಸರ್, ಫ್ರೇಜರ್ ಮುಂತಾದ ವಿದ್ವಾಂಸರಿಗಿಂತ ಭಿನ್ನವಾದ ನಿಲುವನ್ನು ರೂಪಿಸಿದನು. ಈ ವಿದ್ವಾಂಸರೆಲ್ಲರ ನೋಟ ಗತಕಾಲದ ಕಡೆಗಿತ್ತು. ಅದನ್ನು ಡುರ್‌ಖಾಯಿಮನು ವರ್ತಮಾನಕ್ಕೆ ಹೊರಳಿಸಿದ. ಡುರ್‌ಖಾಯಿಮನು ಮೇಲಿನ ಎಲ್ಲ ಸಿದ್ಧಾಂತಗಳ ಬಗೆಗೆ ಆಕ್ಷೇಪವನ್ನೆತ್ತಿದಾಗ, ಇವರೆಲ್ಲರಿಗೆ ಧರ್ಮವು ಯಾವುದೋ ಆದ್ಯ ಪ್ರಮಾದದಿಂದ ರೂಪಗೊಂಡಿದೆ ಎಂದೆನಿಸುತ್ತದೆ ಎಂಬ ನಿಲುವು ತಾಳಿದನು. ಯಾವುದೋ ತಪ್ಪು ಆದಿಮ ವಿಚಾರ ಸರಣಿಯ ಫಲವೆಂದೆನಿಸುತ್ತದೆ. ಧರ್ಮ ಒಂದು ವೇಳೆ ಇಂಥದೇ ಪ್ರಮಾದದಿಂದ ನಿರ್ಮಾಣಗೊಂಡಿದ್ದೇ ಆದರೆ ಅದಕ್ಕೆ ಸನಾತನತ್ವ ಹೇಗೆ ಬಂತು? ಎಂಬ ಮೂಲಭೂತ ಪ್ರಶ್ನೆಯು ಡುರ್‌ಖಾಯಿಮನನ್ನು ಕಾಡಿತು. ಈ ಪ್ರಶ್ನೆಯಿಂದಲೇ ಅವನಿಗೆ ಧರ್ಮದ ಸ್ಥಾಯಿ ಸ್ವರೂಪದ ಉತ್ತರವು ಹೊಳೆಯಿತು. ಅದು ಹೀಗಿದೆ: ಯಾವ ವಾಸ್ತವದ ಮೇಲೆ ಧರ್ಮವು ನಿಂತಿದೆಯೋ ಆ ವಾಸ್ತವವು ಎಂದರೇನೆ ತನ್ನ ಸಮುದಾಯ ಬಾಂಧವರ ಬಗೆಗೆ ಯಾವ ಆಧ್ಯಾತ್ಮಿಕ ಏಕರೂಪತೆ ಅನಿಸುವುದೋ ಅದು ಯಾವ ಆಧಾರದ ಇಲ್ಲವೇ ದೃಢತೆಯ ಭಾವನೆ ಮೂಡುವುದೋ ಅದು. ಡುರ್ ಖಾಯಿಮನೂ ಸಹ ಆಧಾರಕ್ಕಾಗಿ ಆಸ್ಟ್ರೇಲಿಯದ ಕಾಡು ದೈವಪದ್ಧತಿಯನ್ನೇ ಬಳಸಿದ್ದಾನೆ.

ಡುರ್‌ಖಾಯಿಮನ ಪದ್ಧತಿಯಲ್ಲಿರುವ ದೋಷವೆಂದರೆ ಸಾಮಾಜಿಕ ದೃಢತೆಯ ವ್ಯಾಖ್ಯೆಯನ್ನು ಅವನೆಲ್ಲೂ ಕೊಡಲಿಲ್ಲ. ಈ ದೈವವಾದದಿಂದ ಫಲಕಾರಿಯಾದ ದೃಢತ್ವದ ಭಾವನೆಯು ಆಸ್ಟ್ರೇಲಿಯನ್ ಕಾಡು ಜೀವನದ ಇತರ ಅಂಶಗಳ ಪರಿಚಯವನ್ನು ಹೇಗೆ ಮಾಡಿಸುತ್ತದೆ ಎಂಬುದನ್ನು ಅವನು ಎತ್ತಿ ತೋರಿಸಲಿಲ್ಲ. ದೈವವಾದಕ್ಕೆ ಅಂಟಿಸಿದ ದೈವ ಕಥೆಯಲ್ಲಿ ಕೌಟುಂಬಿಕ ಜೀವನ ಗೋಚರಿಸುತ್ತದೆ. ದೈವ ಪದ್ಧತಿಯಿಂದ ನಿಯಮಿತಗೊಂಡ ಪ್ರಜೋತ್ಪತ್ತಿಯ ಕಲ್ಪನೆಗೆ ಅನುಗುಣವಾಗಿ ಸೀಮಿತಗೊಂಡ ಕುಟುಂಬ ಜೀವನ ಧರ್ಮದ ಉತ್ಪತ್ತಿಯ ನಿಸರ್ಗ ಶಕ್ತಿಯಲ್ಲಿರದೆ ಸಾಮಾಜಿಕ ದೃಢೀಕರಣದ ಪ್ರಜ್ಞೆಯಲ್ಲಿದೆ ಮತ್ತು ದೈವಕಥೆಯ ಅನ್ವಯವೂ ಇದೇ ಆಗಿದೆ. ಇದೇ ಡುರ್‌ಖಾಯಿಮನ ಸಿದ್ಧಾಂತದ ಸಾರ.

ದೈವಕಥೆಯನ್ನು ವಿಶೇಷಿಸುವಾಗ ಮಾನವನ ಮನದೊಳಗೆ 'ವಿರೋಧಿತತ್ವ'ವು ಅಬಾಧಿತವಾಗಿ ಗೋಚರಿಸುತ್ತದೆ ಎಂದವನು ಅನ್ನುತ್ತಾನೆ. ಇದೇ ವಿರೋಧಿ ಕಾನೂನು ದೈವ ಕಥೆಯಲ್ಲಿ ಚರಮ ಸೀಮೆಗೆ ಹೋಗಿ ತಲುಪಿದ್ದು ಕಂಡುಬರುತ್ತದೆ. ಸಾಮಾಜಿಕ ಜೀವನವು ಎಷ್ಟು ಪ್ರಗಲ್ಭವೊ, ಅಷ್ಟೇ ವಿರೋಧ ಕಡಿಮೆ. ಒಂದೇ ದೈವದಲ್ಲಿ ಪರಸ್ಪರ ವಿರೋಧಿ ಗುಣವಿರುತ್ತದೆ. ಅದು ಮಾನವೀಯವೂ ದೈವವೂ ಆಗಿರುತ್ತದೆ. ಈ ರೀತಿಯ ಅಸ್ತಿತ್ವವು ತರ್ಕಪೂರ್ವ ಮಾನಸಿಕ ಪ್ರವೃತ್ತಿಯಲ್ಲೇ ಗೋಚರಿಸುತ್ತದೆ.[೭]

ಮನಶ್ಶಾಸ್ತ್ರೀಯ ಸಿದ್ಧಾಂತದ ಮೇಲೆ ಡುರ್‌ಖಾಯಿಮ್ ಸಿದ್ಧಾಂತವು ಎಂಥ ಪರಿಣಾಮ ಬೀರಿತೆಂದರೆ, ಸಾಮಾಜಿಕ ಸಂಸ್ಥೆಗೆ ಅನುಗುಣವಾಗಿ ದೈವಕಥೆಗಳ ಚರ್ಚೆ ಹೆಚ್ಚೆಚ್ಚು ನಡೆಯಿತು. ಜಾದೂ ಮತ್ತು ಧರ್ಮದ ಕ್ಷೇತ್ರಗಳು ಪರಸ್ಪರ ಮಿಶ್ರಣಗೊಂಡಿರುವುದನ್ನು ದೈವಕಥೆಗಳ ಪ್ರಾಂತದಲ್ಲೇ ಕಾಣಬಹುದಾಗಿದೆ. ಆದರೆ ದೈವಕಥೆಯ ಕ್ಷೇತ್ರವು ಮಾತ್ರ ಜಾದೂ ಸಂಲಗ್ನ ಧರ್ಮಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಅದರ ವ್ಯಾಪ್ತಿಯು ಸಾಮಾಜಿಕ ಸಂಸ್ಥೆಯವರೆಗೂ ಚಾಚಿಕೊಂಡಿರುತ್ತದೆ. ಪ್ರತಿಯೊಂದು ವನ್ಯ ಸಮಾಜದಲ್ಲಿ ಜಗತ್ತು ಮತ್ತು ಸಾಮಾಜಿಕ ಸಂಸ್ಥೆಯು ಹೇಗೆ ನಿರ್ಮಾಣಗೊಂಡಿತು ಎಂಬ ಬಗೆಗೆ ಕಥೆ ಇದ್ದೇ ಇರುತ್ತದೆ. ಅದರಲ್ಲಿ ವರ್ಣಿಸಲಾದ ಶ್ರದ್ಧೆಯು ಆದಿಭೌತಿಕ ಶಕ್ತಿಯ ತತ್ಕಾಲದ ವ್ಯಾಪಾರದೊಂದಿಗೆ ಸಂಬಂಧ ಹೊಂದಿರುತ್ತದೆ. ಆದ್ದರಿಂದಲೇ ದೈವಕಥೆಗಳ ಸಂಬಂಧವು ವರ್ತಮಾನದ ಸಾಮಾಜಿಕ ಸಂಸ್ಥೆಯೊಂದಿಗೆ ಉದಾಹರಣೆಗಾಗಿ ವಿವಾಹ, ಅಂತ್ಯಸಂಸ್ಕಾರ, ಜನ್ಮಸಂಸ್ಕಾರ ಸುಸೂತ್ರವಾಗಿರುವ ಸಾಮಾಜಿಕ ಘಟನೆಯನ್ನು ಸ್ಥಾಪಿಸುವುದೇ ದೈವಕಥೆಯ ಕಾರ್ಯವಾಗಿದೆ.[೮] ಮಾನವವಂಶ ಶಾಸ್ತ್ರಜ್ಞರಲ್ಲಿ ಮೆಲಿನಾಸ್ಕಿಯ ದೈವಕಥೆಯ ಬಗೆಗಿನ ವಿಶ್ಲೇಷಣೆಯು ಹೆಚ್ಚು ಮಾನ್ಯತೆಯನ್ನು ಪಡೆದಿದೆ. ಅದು ಹೀಗಿದೆ: (೧) ದೈವ ಕಥೆಗಳು ಕಥೆಗಳೇ ಆಗಿದ್ದು, ಆ ಕಥೆಯಲ್ಲಿ ಯಾವುದಾದರೂ ಅಮೂರ್ತ ಕಲ್ಪನೆಯ (ದೇವರು, ಧರ್ಮ ಇತ್ಯಾದಿ) ಇಲ್ಲವೆ ದುರ್ಘಟನೆಯ (ಜನ್ಮ, ಮೃತ್ಯು ಇ.) ಸ್ಪಷ್ಟೀಕರಣವಿರುತ್ತದೆ. (೨) ದೈವಕಥೆಗಳು ಧಾರ್ಮಿಕ ವಿಧಿಯೊಂದಿಗೆ ಸಂಲಗ್ನವಾಗಿರುತ್ತವೆ. ಅದರಲ್ಲಿ ಆ ವಿಧಿಯ ಅಥವಾ ದೈವದ ಸ್ಪಷ್ಟೀಕರಣ ಕಾಣಬರುತ್ತದೆ.

ಹೋಕಾರ್ಟನು ದೈವಕಥೆಯಲ್ಲಿ ಎರಡು ವರ್ಗ ಮಾಡಿದ್ದಾನೆ. ಮೊದಲನೆಯದು ಜೀವಂತ ದೈವಕಥೆ, ಎರಡನೆಯದು ಮೃತ ದೈವಕಥೆ. ಜೀವಂತ ದೈವಕಥೆಯಲ್ಲಿ ವಿಧಿಯೊಂದಿಗೆ ಗಾಢ ಸಂಬಂಧವಿರುತ್ತದೆ. ಆ ಕಥೆಯಲ್ಲಿ ದೈವದ ಹಾಗೂ ವಿಧಿಯ ಬಗೆಗೆ ಜನರ ಶ್ರದ್ಧೆಯು ಜೀವಂತವಾಗಿರುತ್ತದೆ. ಮೃತಕಥೆಯಲ್ಲಿ ವಿಧಿಯೊಂದಿಗಿನ ಸಂಬಂಧ ಕಡಿದುಹೋಗಿರುತ್ತದೆ.

ಲಾರ್ಡ್ ರಾಗ್ಲನ್ ಎಂಬವನು ದೈವಕಥೆಯ ಮೇಲೆ ಸಾಕಷ್ಟು ಯೋಚಿಸಿದ್ದಾನೆ. ಅವನ ಪ್ರಕಾರ ದೈವಕಥೆಯಲ್ಲಿ ನಿಸರ್ಗ, ದೈವ ಇಲ್ಲವೇ ವಿಧಿಯ ಸ್ಪಷ್ಟೀಕರಣವಿರಬೇಕೆಂಬ ನಿಲುವು ತಪ್ಪು. ಹೇಗೆ ದೈವಕಥೆಯಲ್ಲಿ 'ಚರಿತ್ರೆ' ಇರುವದಿಲ್ಲವೋ ಹಾಗೆಯೇ ಸ್ಪಷ್ಟೀಕರಣ ಸಹ ಇರುವದಿಲ್ಲ. ಹಾಗಾದರೆ ದೈವಕಥೆಯಲ್ಲಿ ಏನಿರುತ್ತದೆ? ರಾಗ್ಲಾನನ ಪ್ರಕಾರ ದೈವಕಥೆಯು ಒಂದು ಶಾಬ್ದಿಕ ಆಕಾರವಾಗಿದ್ದು ವಿಧಿಯೊಂದಿಗೆ ಸಂಲಗ್ನವಾಗಿದೆ. ವಿಧಿ ಹಾಗೂ ದೈವಕಥೆಗಳ ಸಂಬಂಧವು ದೃಢವಾಗಿದೆ ಎಂದೊಪ್ಪಿಕೊಳ್ಳುವುದು ಅಯುಕ್ತವಾಗುತ್ತದೆ. ಏಕೆಂದರೆ

ವಿಧಿಯ ಉದ್ದೇಶ ಫಲಪ್ರಾಪ್ತಿಯಾಗಿರುತ್ತದೆ. ಸಂಕಟ ನಿವಾರಣೆ ಮತ್ತು ಐಹಿಕ ಸುಖಪ್ರಾಪ್ತಿ ಇದರಲ್ಲಿ ಫಲ ಸಮಾವೇಶಗೊಂಡಿರುತ್ತದೆ. ಕೇವಲ ವಿಧಿಯಿಂದ ಅಂದರೆ ಕ್ರಿಯೆಯಿಂದಲೇ ಸರಿಹೋಗುವ ಹಾಗಿದ್ದರೆ ಅದನ್ನು ಶಾಬ್ದಿಕ ಕ್ರಿಯೆಯ ಕಥಾ ಸ್ವರೂಪದಲ್ಲೇ ಏಕೆ ಜೋಡಿಸಲಾಗುತ್ತದೆ? ವೇದದಲ್ಲಿಯ ಹಲವು ಮಂತ್ರಗಳು ಕಥಾತ್ಮಕವಾಗಿಯೇ ಇವೆ. ಸಾಮಾನ್ಯವಾಗಿ ಮಂತ್ರ ವಾಙ್ಮಯವನ್ನು ವೇದದಿಂದ ಆದಿವಾಸಿವರೆಗೆ ನಿರೀಕ್ಷಿಸಿದಿರಿ ಎಂದರೆ ಅದರಲ್ಲಿ ಕೆಲವು ಸಂಬಂಧ, ಕೆಲವು ಕಥಾಂಶ, ಪೂರ್ವ ಘಟನೆಗಳ ಸ್ಮೃತಿಚಿಹ್ನೆಂಯಾಗಿ ಬರುವುದು ಅನಿವಾರ್ಯವಾಗಿರುತ್ತದೆ. ಹೀಗಾಗಿ ಸ್ಪಷ್ಟೀಕರಣದ ಕ್ರಿಯೆಗೆ ಮಿತಿಯಿದ್ದಾಗ ಸಹ ದೈವಕಥೆಯಲ್ಲಿ ಸ್ಪಷ್ಟೀಕರಣವಿರಬೇಕೆಂದು ಅಪೇಕ್ಷೆಯಿರುವುದಿಲ್ಲ ಎಂಬ ಹೇಳಿಕೆಯು ಒಪ್ಪಿಗೆಯಾಗುವಂತಿಲ್ಲ.

ಅರ್ನ್‌ಸ್ಟ್ ಕಾಸಿರರನ ವಿವೇಚನೆ : ಜರ್ಮನಿಯ ವಿದ್ವಾಂಸನಾದ ಕಾಸಿರರನು ಭಾಷಿಕತೆಯ ಮೂಲಕ ದೈವಕಥೆಯನ್ನು ಅಧ್ಯಯನ ಮಾಡಿದನು. ಅವನು Language and Myth: Translated by Susanne K. Linger, New York, 1946 and An Essay on Man New Hearven 1956 ಈ ಎರಡು ಗ್ರಂಥಗಳಲ್ಲಿ (ಮೂಲ ಲೇಖನ ೧೯೨೦-೨೫ ಕಾಲದ್ದು) ತನ್ನ ವಿಚಾರವನ್ನು ಮಂಡಿಸಿದ್ದಾರೆ. ಭಾಷೆಯ ಮತ್ತು ದೈವಕಥೆಗಳ ಸಂಬಂಧವನ್ನು ಮ್ಯಾಕ್ಸ್‌ಮುಲ್ಲರ್ ನಂತರ ಯೋಚಿಸಿದವನೆಂದರೆ ಕಾಸಿರರ್ ಮಾತ್ರ. ಆದರೆ ಅವನ ಮತ್ತು ಮುಲ್ಲರ್‌ನ ನಿಲುವಿನಲ್ಲಿ ಭೂಮಿ ಆಕಾಶದಷ್ಟು ಅಂತರವಿದೆ. ಮುಲ್ಲರ್‌ನ ಪ್ರಕಾರ ದೈವಕಥೆ ಆರಂಭಗೊಂಡಿದ್ದು ಭಾಷೆಯಿಂದ, ಭಾಷೆಯ ಅಶುದ್ಧತ್ವದಿಂದ. ಕಾಸಿರರ್ ಹೇಳುವುದೇನೆಂದರೆ, ಭಾಷೆ ಮತ್ತು ದೈವಕಥೆಗಳು ಪ್ರತೀಕವಾಗಿವೆ ಮತ್ತು ಮೂಲತಃ ಸ್ವತಂತ್ರವಾಗಿವೆ. ಒಂದರಿಂದ ಮತ್ತೊಂದು ಜನಿಸಿತು ಎನ್ನುವುದು ಸತ್ಯವಲ್ಲ. ಆದರೆ ಅವುಗಳ ಪರಸ್ಪರ ಸಂಬಂಧ ಸನಿಹದ್ದು ಮತ್ತು ಗಾಢವಾದದ್ದು. ಡುರ್ ಖಾಯಿಮನ ಪೂರ್ವ ತಾರ್ಕಿಕತೆಯ ಸಿದ್ಧಾಂತದ ಬಗೆಗೆ ಕಾಸಿರರ್‌ನ ಆಕ್ಷೇಪವೇನೆಂದರೆ ಜಾದೂ ಮೊದಲು, ಅನಂತರ ಧರ್ಮ ಎಂಬ ಸಮೀಕರಣವನ್ನು ನಿರಾಕರಿಸಿದ ಬಳಿಕ ಜಾದೂ, ಧರ್ಮ ಮತ್ತು ಭಾಷೆ ಈ ಮೂರರೊಂದಿಗೆ ಸಂಲಗ್ನವಾಗಿರುವ ದೈವಕಥೆಯನ್ನು 'ಪೂರ್ವತಾರ್ಕಿಕ' ನಿರ್ಧರಿಸುವುದು ತಪ್ಪು. ಮಾನವನ ಪ್ರಾಗೈತಿಹಾಸಿಕ ಕಾಲದಲ್ಲಿಯ ಒಂದು ಕಲ್ಪಿತ ಮಾನಸಿಕ ಅವಸ್ಥೆಯೊಂದಿಗೆ ಅದರ ಸಂಬಂಧವನ್ನು ಜೋಡಿಸುವುದು ಯುಕ್ತವಲ್ಲ. ಮಾನವನ ಯಾವ ಮಾನಸಿಕ ಅವಸ್ಥೆಯಿಂದ ದೈವಕಥೆ ಮೂಡಿತೋ ಅಥವಾ ಮೂಡಬಹುದೋ ಆ ಅವಸ್ಥೆಯು ಪುರಾಣಕಾಲದಲ್ಲಿ ಅಧಿಕ ಸುಲಭವಾಗಿತ್ತು. ಆದರೆ ಆ ಅವಸ್ಥೆಯು ಯಾವುದೇ ಕಾಲದಲ್ಲಿ ಯಾವುದೇ ಸಮಾಜದಲ್ಲಿ ಇರುತ್ತದೆ.

ಅದನ್ನು ಕಾಸಿರರ್‌ನು 'ದೈವಕಥೆಯ ಧಾರ್ಮಿಕ' ಅವಸ್ಥೆ ಎಂದೆನ್ನುತ್ತಾನೆ. ಈ ಅವಸ್ಥೆಯು ವ್ಯಕ್ತಿಗತ ಅನುಭವದಿಂದ ಸಾಕಾರಗೊಳ್ಳುತ್ತದೆ. ಈ ಅನುಭವವು ಸನಾತನವಾಗಿರುತ್ತದೆ. ಈ ವ್ಯಕ್ತಿಗತ ಅನುಭವವು ಸಮಾಜನಿಷ್ಠಗೊಂಡಾಗಲೇ ದೈವಕಥೆ ರೂಪಗೊಳ್ಳುತ್ತದೆ. ಏಕೆಂದರೆ ಆ ವಿಶಿಷ್ಟ ಆದಿಭೌತಿಕ ಪಾತಳಿಯ ಮೂಲಕ ಪಡೆದ ಅನುಭವ ಪ್ರತೀಕವೆಂದರೇನೆ ದೈವಕಥೆ. ಆದ್ದರಿಂದ ದೈವಕಥೆ ಎಂದರೆ ಯಾವುದಾದರೂ ಮುಗ್ಧ, ಅಜ್ಞಾನ ಲೋಕ ಭ್ರಮೆಯ ಮೊತ್ತವಲ್ಲ. ದೈವಕಥೆಗೆ ವಿಶಿಷ್ಟ ಆಕಾರವಿರುತ್ತದೆ. ಈ ಆಕಾರವು ಅದರಲ್ಲಿಯ ಕಲ್ಪನೆಯನ್ನು ಆಧರಿಸಿರುತ್ತದೆ. ಆದಾಗ್ಯೂ ದೈವಕಥೆಯನ್ನು ತರ್ಕನಿಷ್ಠ ಎನ್ನುವಂತಿಲ್ಲ. ಮುಲ್ಲರ್ ಮತ್ತು ಡುರ್‌ಖಾಯಿಮರಂತೆ ಫ್ರೈಡ್‌ನನ್ನೂ ಸಹ ಅವನು ದೈವಕಥೆಯನ್ನು ಲೈಂಗಿಕ ಸ್ಥಿತಿಯ ಸ್ಪಷ್ಟೀಕರಣಕ್ಕಾಗಿ ಬಳಸಿದನೆಂದು ಕಾಸಿರರ್ ತರಾಟೆಗೆ ತೆಗೆದುಕೊಂಡಿದ್ದ.

ದೈವಕಥೆಯು ಧರ್ಮದೊಂದಿಗೆ ಸನಿಹದ ಸಂಬಂಧವನ್ನು ಹೊಂದಿದೆ. ಏಕೆಂದರೆ ವಿಶಿಷ್ಟ ಧರ್ಮಾನುಭವದಿಂದ ಅದು ರೂಪಗೊಂಡಿದೆ. ಕಾಸಿರರ್‌ನ ಪ್ರಕಾರ ಅದು ಭಾಷೆಯೊಂದಿಗೆ ಹೊಂದಿರುವ ಸಂಬಂಧ ಕಾವ್ಯದ್ದು. ಹಳೆಯ ದೈವಕಥೆಯು ಆಧುನಿಕ ಕವಿತೆಯ ತೊಟ್ಟಿಲು. ಆದರೆ ದೈವಕಥೆಯ ಪ್ರವೃತ್ತಿಯು ಕವಿತೆಗಿಂತ ಸ್ವಲ್ಪ ಭಿನ್ನವಾಗಿದೆ. ದೈವಕಥೆಗೆ ಶ್ರದ್ಧೆ ಬೇಕು. ವರ್ಣಿಸಲಾದ ವಿಷಯದ ಬಗೆಗಿನ ಶ್ರದ್ಧೆಯು ದೈವಕಥೆಯ ಅಧಿಷ್ಠಾನವಾಗಿರುತ್ತದೆ. 'ದೈವಕಥೆಯು ಸಾಮಾಜಿಕ ಜೀವನದ ಚಿತ್ರಣವಾಗಿದೆ, ವಿನಾ ನಿಸರ್ಗ ದೃಶ್ಯದ್ದಲ್ಲ' ಎಂಬ ಡುರ್‌ಖಾಯಿಯ ಮನ ನಿಲುವಿಗೆ ಕಾಸಿರರ್ ಬೆಂಬಲ ನೀಡುತ್ತಾನೆ. ಆದರೆ ಅವನ ಪೂರ್ವ ತಾರ್ಕಿಕತೆಯ ನಿಲುವಿಗೆ ಅವನು ಆಕ್ಷೇಪವನ್ನು ಒಡ್ಡಿದ್ದಾನೆ. ಕಾಡು ಸಮುದಾಯದವರ ಹಲವು ಸಾಂಸ್ಕೃತಿಕ ಸಂಗತಿಗಳು 'ಪ್ರಜ್ಞಾ ಸಮಾಜದಲ್ಲೂ ಯಥಾವತ್ತಾಗಿ ವ್ಯವಹರಿಸುವುದನ್ನು ಕಾಣಬಹುದು. ಹೀಗಂತ ಅವರ ಮಾನಸಿಕ ಪ್ರಕ್ರಿಯೆಗೆ ಪೂರ್ವತಾರ್ಕಿಕ ಎಂದು ಕರೆಯುವಂತಿಲ್ಲ.'

ಕಾಸಿರರ್‌ನು ಭಾಷೆ ಮತ್ತು ದೈವಕಥೆಯನ್ನು ಸಮತೋಲ ಹಾಗೂ ಸಾಂಸ್ಕೃತಿಕ ಘಟಕವೆಂದೊಪ್ಪಿಕೊಂಡಿದ್ದಾನೆ. ಅದರ ಬಗೆಗೆ ಯಾರೂ ಹೆಚ್ಚು ಯೋಚಿಸಲಿಲ್ಲ. ಒಂದು ಮಾತ್ರ ಸತ್ಯ, ದೈವಕಥೆ ಮತ್ತು ಭಾಷೆಯ ಪ್ರತೀಕಾತ್ಮಕತೆಯು ಭಿನ್ನ ಬಗೆಯದು ಮತ್ತು ಈ ಪ್ರತೀಕಗಳಲ್ಲಿ ಸತತ ಕೊಡುಕೊಳ್ಳುವಿಕೆ ನಡೆಯುತ್ತದೆ ಎನ್ನುವುದು ಸುಳ್ಳಲ್ಲ.

೧೯೬೦, ಕೇಸರಿ, ದೀಪಾವಳಿ ಸಂಚಿಕೆ.

ಸಂದರ್ಭ ಗ್ರಂಥಗಳು

1. Ralph Piddington, Introduction to Social Anthropology, Vol. I, London, 1950, P. 357.
2. Siegmund Freud, Group Psychology and the Analysis of the Ego: Translated by Jamer Streachey, London, 1949, Pp. 114-5.
3. Hand book of Social Phsychology, London, 1946, Pp. 198-9.
4. Principles of Sociology, Vol. I, XVII-XXIV.
5. E.O. James, Prehistoric Religion, London, 1957.
6. Piddingeton, Vol-I, P. 361.
7. Durkheim: Elementray Forms of Religion, Translated by J. Wardswain, London, 1915, Pp. 12-15.
8. Piddington, Pp. 370-2.
9. Lord Raglon, the Hero, London, 1936, Pp. 121-132.

* * * *

೮. ಭಾರತೀಯ ಸಾಹಿತ್ಯದಲ್ಲಿಯ ಕಥಾಸಾಹಿತ್ಯದ ಕೆಲವು ಬೀಜಗಳು

ಜಗತ್ತು ಮಿಥ್ಯೆ, ಬ್ರಹ್ಮಸತ್ಯ, ಆತ್ಮ ಅವಿನಾಶಿ, ದೇಹ ನಾಶವಾಗುವಂತಹದು. ಸಂಸಾರವು ಕ್ಷಣಭಂಗುರವಾಗಿದೆ. ಸಾವು ಕೈಯಲ್ಲಿ ಕೆಲವು ಕೂದಲು ಹಿಡಿದು ಕೊಂಡಿದೆಯೋ ಎಂದು ಭಾವಿಸಿಯೇ ಅವಿರತವಾಗಿ ಧಾರ್ಮಿಕ ಆಚರಣೆ ಮಾಡಬೇಕು. ಹೀಗೆ ಶ್ರಮಣ ಧರ್ಮದ ಸಾಧಾರಣ ಪರಿಣಾಮವು ಜನರ ಮನದ ಮೇಲಾಗಿರುವುದನ್ನು ಭಾರತದಲ್ಲಿ ಉಪನಿಷತ್ ಕಾಲದಿಂದಲೂ ಕಾಣಬಹುದಾಗಿದೆ.

ಭಾರತೀಯ ಸಾಹಿತ್ಯದಲ್ಲಿ ಶೃಂಗಾರಕ್ಕೆ ಮಹತ್ವ ನೀಡಲಾಗಿದೆ. ಸ್ಮೃತಿಯು ಗೃಹಸ್ಥಾಶ್ರಮವನ್ನು ಸರ್ವಧರ್ಮದ ಆಧಾರವೆಂದು ಗೌರವಿಸಿದೆ. ಕವಿಗಳು 'ಧನ್ಯೋ ಗೃಹಸ್ಥಾಶ್ರಮ' ಎಂದಿದ್ದಾರೆ. ಶೃಂಗಾರ ಕಾವ್ಯವು ಸಂಸ್ಕೃತ ಸಾಹಿತ್ಯದಲ್ಲಿ ಅಪಾರವಾಗಿ ಮತ್ತು ನಿರ್ಬಂಧವಿಲ್ಲದೆ ಬೆಳೆದಿರುವುದು ಕಂಡುಬರುತ್ತದೆ. ಆದರೂ ಸಹ ಕವಿಗಳ ಸಾಹಿತ್ಯದ ಹೊರತು, ಹೊರಗಿನ ಸಂಸ್ಕೃತಿ ಪ್ರಧಾನ ಸಾಹಿತ್ಯ, ಮಹಾಭಾರತ–ರಾಮಾಯಣದಂತಹ ಕೃತಿಗಳಿವೆಯೋ ಅದರಲ್ಲಿ ಶೃಂಗಾರವನ್ನು ಗೌಣವಾಗಿಸಿ ಮಾನವನ ಸತ್ ಪ್ರೇರಣೆಗೇ ಹೆಚ್ಚು ಮಹತ್ವ ನೀಡಲಾಗಿದೆ. ಭೀಷ್ಮ ಮತ್ತು ಕರ್ಣನಿರದಿದ್ದರೆ, ಯುಧಿಷ್ಠಿರನು ಸತ್ಯಪ್ರಿಯನಾಗಿರದಿದ್ದರೆ 'ಮಹಾಭಾರತ' ಮಹಾಕಾವ್ಯವಾಗುತ್ತಿರಲಿಲ್ಲ. ರಾಮನ ಆದರ್ಶ 'ರಾಮಾಯಣ'ದಲ್ಲಿರದಿದ್ದರೆ ಅದು ಮಹಾಕಾವ್ಯವೆಂಬ ಸಂಜ್ಞೆಗೆ ಪಾತ್ರವಾಗುತ್ತಿರಲಿಲ್ಲ. ಈ ತ್ಯಾಗದ ಆದರ್ಶವನ್ನು ಉಪನಿಷತ್ ಸಿದ್ಧಮಾಡಿರುವುದನ್ನು ನಾವು ಕಾಣಬಹುದಾಗಿದೆ. ಶ್ರಮಣ ಸಂಸ್ಕೃತಿಯೇ ರೂಪಾಂತರಗೊಂಡಿರುವ ಆ ಅವಶೇಷವನ್ನು ಸಹಜವಾಗಿ ಕಾಣಬಹುದಾಗಿದೆ. ಕಾವ್ಯದಲ್ಲೂ 'ಮಹಾಭಾರತ–ರಾಮಾಯಣ'ವೇ ಮಹಾಕಾವ್ಯದ ಎಂಥ ಆದರ್ಶವನ್ನು ನಿರ್ಮಾಣ ಮಾಡಿತೆಂದರೆ ಅನಂತರದ ಎಲ್ಲ ಮಹಾಕಾವ್ಯಗಳು ಈ ಆದರ್ಶದಂತೆ ರಚಿತಗೊಂಡವು. ಇದನ್ನು ಕಂಡಾಗ 'ವ್ಯಾಸೋಚ್ಛಿಷ್ಟಂ ಜಗತ್ ಸರ್ವಮ್' ಎಂಬ ಮಾತಿನ ಸಾರ್ಥಕತೆ ಒಪ್ಪಿಗೆಯಾಗುತ್ತದೆ. ವಾಲ್ಮೀಕಿಗೆ ಆದಿಕವಿ ಎಂದೇಕೆ ಅನ್ನುತ್ತಾರೆ ಎನ್ನುವುದು ಅರಿವಾಗುತ್ತದೆ.

ಭಾರತೀಯ ಕಥಾಸಾಹಿತ್ಯದ ಮೇಲೆ 'ಮಹಾಭಾರತ-ರಾಮಾಯಣ' ಬೀರಿದ ಪರಿಣಾಮ ಎಂಥದು ಎನ್ನುವುದು ಬೇರೆ ಹೇಳಬೇಕಿಲ್ಲ. ಶ್ರಮಣ ಸಂಸ್ಕೃತಿಯು ತಪಕ್ಕೆ ಮಹತ್ವ ನೀಡಿದೆ. ಪ್ರಜಾಪತಿಯೂ ಸಹ ತಪ ಮಾಡಿಯೇ ಜಗತ್ತನ್ನು ನಿರ್ಮಿಸಿದನೆಂದು ಬ್ರಾಹ್ಮಣ ಗ್ರಂಥಗಳು ಹೇಳುತ್ತವೆ. ತಪವು ಸದಾ ಬ್ರಹ್ಮಚರ್ಯೆಯೊಂದಿಗೆ ಸಂಲಗ್ನವಾಗಿರುತ್ತದೆ. ನೈಷ್ಠಿಕ ಬ್ರಹ್ಮಚರ್ಯೆಯನ್ನು ಪಾಲಿಸಿ ಆಜನ್ಮ ತಾಪಸ ವೃತ್ತಿಯಿಂದ ಜೀವಿಸುವ ಮುನಿಗಳ ಒಂದು ವರ್ಗ ಮತ್ತು ಅಪರೂಪಕ್ಕೆ ಶೃಂಗಾರ ಸುಖಕ್ಕೆ ಮಾರುಹೋಗಿ ಆದರೆ ಅತ್ಯಂತ ಸಂಯಮದಿಂದ ಜೀವನವನ್ನು ಕಳೆಯುವಂತಹ ಗೃಹಸ್ಥ ಋಷಿಗಳೂ ಉಪನಿಷತ್ ಮಹಾಭಾರತ ರಾಮಾಯಣದಲ್ಲಿ ಕಾಣಲು ಸಿಗುತ್ತಾರೆ. ಯಾಜ್ಞವಲ್ಕ್ಯ, ವಶಿಷ್ಠ, ಭಾರದ್ವಾಜ ಮುಂತಾದ ಋಷಿಗಳು ಹೀಗಿದ್ದರು. ತಪವು ಸನ್ಯಾಸಿಗಳದ್ದೇ ಆಗಿರಲಿ ಇಲ್ಲವೇ ಗೃಹಸ್ಥರದ್ದೇ ಆಗಿರಲಿ, ಭಾರತದಲ್ಲಿ ಶಾಶ್ವತವಾಗಿ ಮಾನ್ಯತೆಯನ್ನು ಪಡೆಯಿತು.

ತಪದ, ಬ್ರಹ್ಮಚರ್ಯೆಯ ಕಲ್ಪನೆಯು ಬೌದ್ಧ ಕಥಾ ಸಾಹಿತ್ಯದಲ್ಲಿ, ಜೈನ ಕಥಾಸಾಹಿತ್ಯದಲ್ಲಿ ವಿಪುಲವಾಗಿರುವುದಕ್ಕೆ ಅಚ್ಚರಿಪಡಬೇಕಿಲ್ಲ. ಏಕೆಂದರೆ ಈ ಸಂಪ್ರದಾಯವು ಬಹಿರಂಗವಾಗಿ ಶ್ರಮಣದ್ದೇ ಆಗಿತ್ತು. ಬ್ರಹ್ಮಚರ್ಯೆಯು ಅವರ ಶೀಲವಾಗಿತ್ತು. ಉಪನಿಷತ್ತು ಮೋಕ್ಷ ಮತ್ತು ನಿರ್ವಾಣವನ್ನು ಹೇಗೆ ಜೀವಿತದವರ ಧ್ಯೇಯವೆಂದು ಒಪ್ಪಲಾಗಿತ್ತೋ ಅವರೂ ಸಹ ಅದನ್ನೇ ಒಪ್ಪಿದರು. ಅದರ ಮುದ್ರೆಯು ಬೌದ್ಧ, ಜೈನ ಕಥೆಗಳಷ್ಟೇ ಅಲ್ಲ, ಕಥಾಸರಿತ್ಸಾಗರದಲ್ಲೂ ಮೂಡಿದ್ದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ತಾಪಸಿಗಳ ಗೌರವ ಮತ್ತು ಸಾಧೂಗಳ ಮೈಯಲ್ಲಿ ತಪದಿಂದ ಬಂದ ಅಮಾನುಷ ಶಕ್ತಿಯನ್ನು ಕಂಡು ಭಾರತೀಯ ಕಥಾಸಾಹಿತ್ಯವು ಅದು ಬೇಕಾದರೆ ಪ್ರಾಚೀನವೇ ಆಗಿರಲಿ ಅಥವಾ ಜಾನದಪವೇ ಆಗಿರಲಿ, ಮೈಮರೆತು ಹೋಗಿತ್ತು ವ್ರತಗಳ ಕಲ್ಪನೆಯು ಅದರಿಂದಲೇ ಮೂಡಿ ಬಂದದ್ದು. ವ್ರತಗಳೊಂದಿಗೆ ಸಂಲಗ್ನವಾಗಿರುವ ಕಥೆಗಳ ಅಪಾರ ಸಂಗ್ರಹವು ಭಾರತದಲ್ಲಿದೆಯೋ, ಅದು ತಪಶ್ಚರ್ಯೆಯಿಂದ ರೂಪಾಂತರಗೊಂಡ ಕಥಾಸಾಹಿತ್ಯವೇ ಆಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ತಪೋಮಯ ಸಂಸ್ಕೃತಿಯಿಂದ ಹೊರಟ ಒಂದು ವಿಶಿಷ್ಟ ಕಥೆಗಳ ವರ್ಗವು ತುಂಬ ಮನೋರಂಜಕವಾಗಿದೆ. ಉದಾಹರಣೆಗಾಗಿ ನಾವು ಬಹುಳೆಯ ಕಥೆಯನ್ನೇ ನೋಡಬಹುದಾಗಿದೆ. ಪದ್ಮಪುರಾಣದ ನಂದಾಗೋವಿನ ಆಖ್ಯಾನದಲ್ಲಿ ಈ ಕಥೆಯು ಮೊದಲಿಗೆ ಕಣ್ಣಿಗೆ ಬೀಳುತ್ತದೆ. ಶ್ರೇಷ್ಠ ಋಷಿ ಮುನಿಗಳ ಆಶ್ರಮದಲ್ಲಿ ಎಲ್ಲಿಯೂ ವೈರವೇ ಇರುವುದಿಲ್ಲ. ಎಲ್ಲ ಪ್ರಾಣಿಗಳೂ ತಮ್ಮ ಹಿಂಸೆಯನ್ನು ಮರೆತು ಸಂತೋಷದಿಂದ ಕಾಲ ಕಳೆಯುತ್ತ ಇರುತ್ತವೆ. ಇಂಥ ವರ್ಣನೆಯು 'ಮಹಾಭಾರತ'ದಲ್ಲಿ ಅಲ್ಲಲ್ಲಿ ಕಾಣಸಿಗುತ್ತದೆ. ಇದು ಮುಂದೆ ಪುರಾಣದಲ್ಲಿ,

ಕಾವ್ಯದಲ್ಲಿ ಅತ್ಯಂತ ಜನಪ್ರಿಯವಾಯಿತು. ಅದರದ್ದೇ ಕಥಾತ್ಮಕ ಪರಿವರ್ತನೆ ಎಂದರೆ ಹುಲಿ-ಗೋವಿನಲ್ಲಿ ಅವೈರವನ್ನು ತೋರಿಸುವದು.

ಬಿಳಿಗೂದಲು : ಶ್ರಮಣಸಂಸ್ಕೃತಿಯ ಪ್ರಭಾವದಿಂದ 'ಬಿಳಿಗೂದಲಿನ' ಕಥಾಬೀಜವು ಭಾರತೀಯ ಕಥಾಸಾಹಿತ್ಯದಲ್ಲಿ ಪ್ರವೇಶ ಮಾಡಿತು. 'ಕೃತಾಂತಕಟಕಾಮಲ ಧ್ವಜ ಜರೆ ಕಾಣಲಾರಂಭಿಸಿತು. ರಾಜನು ವೈರಾಗ್ಯದಿಂದ ವಾನಪ್ರಸ್ಥದ ಅಥವಾ ಸನ್ಯಾಸದ ಆಶ್ರಯವನ್ನು ಪಡೆದ.' ಈ ಬಗೆಯ ಕಥಾಂಶವು ಸಾಕಷ್ಟು ಪ್ರಾಚೀನ ಕಥೆಯಲ್ಲಿದೆ. ಈ ಕಥಾ ಬೀಜದ ಉಲ್ಲೇಖ ಮೊದಲಿಗೆ ಜಾತಕ ಕಥೆಯಲ್ಲಿ ಕಾಣಸಿಗುತ್ತದೆ.[೧] ಜೈನ ಸಾಹಿತ್ಯದಲ್ಲಿ ಪ್ರಾಚೀನ ಪರಂಪರೆಯಿಂದ ಅದು ನಡೆದು ಬಂದಂತೆ ಕಾಣುತ್ತದೆ. ಉದಾಹರಣೆಗಾಗಿ: ರಾಜಗೃಹದ ರಾಜನಾದ ಶ್ರೇಣಿಕನ ತಲೆಯಲ್ಲಿ ಬಿಳಿಗೂದಲು ಕಾಣಿಸಿತು. ಧಾರಿಣಿ ರಾಣಿಯು ಅವನಿಗೆ ಈ ಯಮದೂತನ ಸುಳುವು ನೀಡಿದಳು. ಬಳಿಕ ಅವರಿಬ್ಬರೂ ಕಾಡಿಗೆ ತೆರಳಿದರು.[೨] ರಘುವಂಶ ಮತ್ತು ಕಥಾಸರಿತ್ಸಾಗರದಲ್ಲೂ ಈ ಬೀಜವಿದೆ.[೩] ಅಮರದತ್ತನ ಕಥಾಕೋಶದಲ್ಲೂ ಅಮರದತ್ತ ಮತ್ತು ಮಿಶ್ರಾನಂದರ ಈ ಕಥೆಯಲ್ಲಿ ರಾಣಿಯು ರಾಜನ ಬಿಳಿಗೂದಲು ಕಂಡು 'ಮಹಾರಾಜ, ಧರ್ಮದೂತ ಬಂದಿದ್ದಾನೆ' ಎಂದೆನ್ನುತ್ತಾಳೆ.

ಬಿಳಿಗೂದಲಿನ ಈ ಕಥಾಬೀಜವು ಮಧ್ಯಯುಗೀನ ಕಥೆಯಲ್ಲೇ ವಿರಾಮ ಪಡೆಯಿತು. ಬಹುಳೆಯ ಕಥೆಯಂತೆ ಅದು ಪ್ರಚಲಿತ ಜಾನಪದದ ಅಂಗಳದಲ್ಲಿ ಕಾಲಿಟ್ಟಂತೆ ಕಾಣುವುದಿಲ್ಲ.

ಋಷ್ಯಶೃಂಗನ ಕಥೆ : ತಾಪಸ ಸಂಸ್ಕೃತಿಯ ಮತ್ತು ಒಂದು ಶ್ರೇಷ್ಠ ಕಥಾಬೀಜವೆಂದರೆ ತನ್ನ ಮಗನನ್ನು ಸಂಪೂರ್ಣ ಬ್ರಹ್ಮಚರ್ಯೆ ವೃತ್ತಿಯಿಂದ ಮತ್ತು ವನೌಕದ ವೃತ್ತಿಯಿಂದ ಬೆಳೆಸುವದು. ಹೆಣ್ಣಿನ ದರ್ಶನವೂ ಅವನಿಗಾಗದಂತೆ ನೋಡಿಕೊಳ್ಳುವದು. ಹೆಣ್ಣಿನ ಅಸ್ತಿತ್ವವೇ ಅವನಿಗೆ ಅಜ್ಞಾತವಾಗಿರುವದು. ಕೊನೆಗೊಂದು ದಿನ ಆ ಕುಮಾರನಿಗೆ ಹೆಣ್ಣಿನ ದರ್ಶನವಾದ ಕೂಡಲೇ ಅವನು ಅವಳೆಡೆಗೆ ಆಕರ್ಷಿತಗೊಂಡು ಕಾಡು ಬಿಟ್ಟು ನಗರಕ್ಕೆ ಹೋಗುವದು, ವಿವಾಹ ಮಾಡಿಕೊಳ್ಳುವದು.

ಇದರ ಉದಾಹರಣೆಯೆಂದರೆ, ವಿಭಾಂಡಕ ಮುನಿಯು ಹರಿಣಿಯಿಂದ ಪಡೆದ ಮಗ ಋಷ್ಯಶೃಂಗನ ಕಥೆ. ಇವನನ್ನು ಮೋಡಿ ಮಾಡಲು ರಾಜನು ಗಣಿಕೆಯನ್ನು ಕಳಿಸುತ್ತಾನೆ. ಋಷ್ಯಶೃಂಗನಿಗೆ ಅವರು ಮುನಿಯಾಗೇ ಕಾಣಿಸುತ್ತಾರೆ. ಆ ಗಣಿಕೆಯ ಗೋಲಾಕಾರ ಸ್ತನವು ಚೆಂಡಿನಂತೆ ಭಾಸವಾಗುತ್ತದೆ. ಅವರ ಮಧುರ ಮಾತಿನ ಬಗ್ಗೆ ಗಡ್ಡ-ಮೀಸೆರಹಿತ ನುಣುಪಾದ ಚಹರೆಯ ಬಗ್ಗೆ ಆಕರ್ಷಣೆಯೆನಿಸುತ್ತದೆ. ಕೊನೆಗೆ ಅವನು ಪಿತನಿಗೆ ಹೇಳದೆ ಚಂಪಾನಗರಿಗೆ ಹೋಗುತ್ತಾನೆ. ಆ ದೇಶದಲ್ಲಿ ಬರಗಾಲ ಬಿದ್ದಿರುತ್ತದೆ. ಅಲ್ಲಿ ಅವನು ಮಳೆ

ತರಿಸುತ್ತಾನೆ. ಅವನ ನಿರ್ಮಲವಾದ ಬ್ರಹ್ಮಚರ್ಯೆ ತುಂಬ ಪ್ರಭಾವಿಯಾಗಿರುತ್ತದೆ. ಮುಂದೆ ದಶರಥನು ಸಹ ಪುತ್ರಕಾಮೇಷ್ಠಿ ಯಜ್ಞಕ್ಕಾಗಿ ಅವನನ್ನು ಕರೆದೊಯ್ಯುತ್ತಾನೆ. ಶಾಂತಿಯೊಂದಿಗೆ ಅವನ ಲಗ್ನವಾಗುತ್ತದೆ. ಈ ಕಥೆ ಇಸಿಸಿಂಗ್ ಜಾತಕದಲ್ಲೂ ಇದೆ. ಕೇವಲ ದಶರಥ ಮುಂತಾದ ಪಾತ್ರಗಳು ಅಲ್ಲಿ ಇಲ್ಲ. ಮುನಿಕುಮಾರನ ಭ್ರಾಂತಿಯನ್ನು ಅದರಲ್ಲಿ ವರ್ಣಿಸಲಾಗಿದೆ. ಈ ಕಥೆಯು ಜೈನ ಸಾಹಿತ್ಯದಲ್ಲಿ ಪರ್ಯಾಯವಾಗಿ ಬಂದಿದೆ.

ಹೇಮಚಂದ್ರನ ಪರಿಶಿಷ್ಟ ಪರ್ವದಲ್ಲಿ ವಾಲ್ಕಲ ಚೀರಿ ಎಂಬ ಮಾತಾಪಿತರು ವಾನಪ್ರಸ್ತದಲ್ಲಿದ್ದಾಗ ಜನಿಸಿದ ರಾಜಕುಮಾರನ ಕಥೆಯಿದೆ. ತಾಯಿ ಹುಟ್ಟಿದಾರಭ್ಯ ಅಸು ನೀಗಿದಳು. ರಾಜಗೃಹದ ಹಿಂದಿನ ರಾಜನಾದ ಸೋಮಚಂದ್ರನು ಪತ್ನಿ ಧರಣಿಯ ಸಾವಿನ ಬಳಿಕ ಅವನನ್ನು ಬೆಳೆಸಿದಳು. ಮುಂದೆ ಅವನ ಸೋದರನಾದ ಪ್ರಸನ್ನಚಂದ್ರ ಗದ್ದುಗೆ ಏರಿದ. ತನಗೊಬ್ಬ ಸೋದರನಿದ್ದು ಅವನು ತಾಪಸನಾಗಿದ್ದಾನೆ ಎನ್ನುವುದು ಅವನಿಗೆ ಗೊತ್ತಾಯಿತು. ಆಗ ಅವನನ್ನು ಕರೆತರಲು ಅವನು ಸಾರಥಿಯನ್ನು ಕಳಿಸಿ ನಗರದ ಗಣಿಕಾ ಗೃಹದಲ್ಲಿ ತಂದಿಟ್ಟನು. ಋಷ್ಯಶೃಂಗನಂತೆ ಇವನೂ ಗಣಿಕೆಯರನ್ನು ಮುನಿಯೆಂದೇ ಭಾವಿಸಿದನು ಮತ್ತು ಗಲಿಬಿಲಿಗೊಂಡನು. ನಗರಕ್ಕೆ ಬಂದ ಬಳಿಕ ಅವನ ಲಗ್ನವೂ ಆಯಿತು.[೪]

ಗಮನಿಸಬೇಕಾದ ಸಂಗತಿಯೆಂದರೆ, ಈ ಕಥಾಬೀಜವು ಮೇಲೆ ರಾಮಾಯಣದ ಅನುಷಂಗೆಯಿಂದ ಪುರಾಣದಲ್ಲಿ ಉಲ್ಲೇಖಿತವಾಗಿದೆ. ಮತ್ತು ಬೌದ್ಧ ಮತ್ತು ಜೈನ ಸಾಹಿತ್ಯದಲ್ಲಿ ಅತ್ಯಂತ ಜನಪ್ರಿಯನಾಗಿದ್ದರೂ ಅನಂತರದ ಕಥಾಸಾಹಿತ್ಯದಲ್ಲಿ ಕಾಣಸಿಗುವುದಿಲ್ಲ. ಏನೇ ಉದ್ಧರಿಸಿದರೂ ಋಷ್ಯಶೃಂಗನ ಕಥೆಯನ್ನೇ ಹೇಳಲಾಗುತ್ತದೆ. ಜಾನಪದದಲ್ಲೂ ನನಗೆ ಈ ಬೀಜ ಈಗಲೂ ಕಾಣಬರಲಿಲ್ಲ. ಈ ಬೀಜದ ಜನಪ್ರಿಯತೆಯನ್ನು ಅನಂತರದ ಕಥಾಸಾಹಿತ್ಯದಲ್ಲಿ ಬಳಸಿಕೊಂಡಿಲ್ಲ. ಈ ಬೀಜ ಲೋಪಗೊಂಡಿತು. ಪಯಣವು ಬರಲಿಲ್ಲ. ಋಷ್ಯಶೃಂಗನ ಕಥೆಯನ್ನೇ ಹೇಳಬೇಕಾದಾಗ ಇದನ್ನೇ ಹೇಳಲಾಯಿತು ಎಂದು ಊಹಿಸಬಹುದಾಗಿದೆ.

ಹುತ್ತ : ತಾಪಸಿ ಸಂಸ್ಕೃತಿಯ ಮತ್ತೂ ಒಂದು ಬೀಜವೆಂದರೆ ತಪಸ್ಸು ಮಾಡುವ ಮುನಿಯ ದೇಹದ ಮೇಲೆ ಹುತ್ತ ಬೆಳೆಯುವದು. ವೇದಸಾಹಿತ್ಯದಲ್ಲಿಯ ಚ್ಯವನಭಾರ್ಗವನ ಕಥೆಯು ಈ ಬೀಜವನ್ನು ಆಧರಿಸಿದ ಎಲ್ಲಕ್ಕಿಂತ ಹಳೆಯ ಕಥೆ. ಶರ್ಯಾತಿ ಕನ್ಯೆಯಾದ ಸುಕನ್ಯೆಯು ಹುತ್ತದೊಳಗೆ ಹೊಳೆವ ಮುನಿಯ ಕಂಗಳನ್ನು ಕಂಡು, ಅದಕ್ಕೆ ಕಡ್ಡಿಯನ್ನು ಚುಚ್ಚುತ್ತಾಳೆ. ಚ್ಯವನ ಕುರುಡನಾಗುತ್ತಾನೆ. ಅವನಿಗೆ ಸಿಟ್ಟು ಬರುತ್ತದೆ. ಬಳಿಕ ಶರ್ಯಾತಿಯು ಸುಕನ್ಯೆಯ ಮದುವೆಯನ್ನು ಚ್ಯವನನೊಂದಿಗೆ ಮಾಡುತ್ತಾಳೆ. ಸುಕನ್ಯೆಯು ಮುದಿ ಪತಿಯಿಂದ ಓಡಿ ಹೋಗಲು ಪ್ರಯತ್ನಿಸುತ್ತಾಳೆ. ಆದರವನು ಸರ್ಪರೂಪವನ್ನು ಧರಿಸಿ ಅವಳನ್ನು ಅಡ್ಡಗಟ್ಟುತ್ತಾನೆ.

ಮುಂದೆ ಅಶ್ವಿನೀ ಕುಮಾರರು ಸುಕನ್ಯೆಯ ಬಗೆಗೆ ಆಸಕ್ತರಾಗುತ್ತಾಳೆ. ಅವಳು ಅವರಿಂದ ಪತಿಗೆ ನವಯೌವ್ವನ ಪ್ರಾಪ್ತವಾಗುವಂತೆ ವರ ಬೇಡುತ್ತಾರೆ. ಬದಲಿಗೆ ಅವರಿಗೆ ಯಾಗದಲ್ಲಿರದ ಸೋಮನ ಭಾಗವನ್ನು ದೊರಕಿಸಿ ಕೊಡುತ್ತಾಳೆ.

ರಾಮಾಯಣದಲ್ಲಿ ವಾಲ್ಮೀಕಿಗೆ ವಲ್ಮೀಕದ ಮೇಲಿಂದ ಆ ಹೆಸರು ಬಂದಿದೆ ಎಂದು ಹೇಳಲಾಗಿದೆ. ಬೌದ್ಧ ಮತ್ತು ಜೈನ ಶ್ರಮಣರಿಗೆ ತಪದ ಈ ಮಾರ್ಗವು ಒಪ್ಪಿಗೆಯಿರದ್ದರಿಂದ ಅವರು ಈ ಕಥಾಬೀಜವನ್ನು ಎತ್ತಿಕೊಂಡಂತೆ ಕಾಣಿಸುವುದಿಲ್ಲ. ವೈದಿಕ ಪರಂಪರೆಯ ಗ್ರಂಥಗಳಲ್ಲೇ ಅದು ಕಾಣಬರುತ್ತದೆ.

ಅಧ್ಯಾತ್ಮ ರಾಮಾಯಣದಲ್ಲಿ ಶೂರ್ಪನಖಿಯ ಮಗ ಶಸ್ತ್ರಪ್ರಾಪ್ತಿಗಾಗಿ ಉಗ್ರತಪವನ್ನು ಮಾಡುವಾಗ ಅವನ ದೇಹದ ಮೇಲೆ ಹುತ್ತ ಬೆಳೆಯಿತು. ಬಳಿಕ ಲಕ್ಷ್ಮಣನು ತನ್ನ ಖಡ್ಗದಿಂದ ಪೊದೆಯನ್ನು ಹೇಗೆ ಕತ್ತರಿಸಬಹುದು ಎಂದು ಪರೀಕ್ಷಿಸಲು ಹೋಗಿ ಖಡ್ಗವನ್ನು ಪೊದೆಯೊಳಗೆ ಚುಚ್ಚಿದಾಗ ಆ ತಾಪಸಿಯ ರುಂಡ ವಿಚ್ಛೇದನೆಗೊಂಡು ಸಾಂತವಾಗುತ್ತದೆ.

ದುಷ್ಟ ತಾಪಸಿಗಳ ಕಥೆ : ತಾಪಸ ಸಂಸ್ಕೃತಿಯು ಕಥಾ ಸಾಹಿತ್ಯಕ್ಕೆ ನೀಡಿದ ಹಲವು ಸಂಕೇತಗಳನ್ನು ನಾವು ನೋಡಿದೆವು. ಶಮೆ ದಮೆ ವೃತ್ತಿಯಿಂದ ಬಲಗೊಂಡ ಸಂಸ್ಕಾರ ಯಾವುದು ಮತ್ತು ಅದು ಮೌಖಿಕ ಹಾಗೂ ಲಿಖಿತ ಸಾಹಿತ್ಯದಲ್ಲಿ ಹೇಗೆ ಸ್ಥಿರಗೊಂಡಿತು ಎಂಬ ಕಲ್ಪನೆಯೂ ನಮಗೆ ಬಂತು. ಆದರೆ ಯಾವಾಗ ತಪದ ಉಪಯೋಗವನ್ನು ತಾಪಸಿ ಸಿದ್ಧಿಗಾಗಿ ಮಾಡಲಾಗುತ್ತದೆಯೋ ಆಗ ತಪವು ಕೇವಲ ಜಾರಣ ಮರಣದ ಮಾಯೆಯ ಶಕ್ತಿಗಾಗಿ ಇದೆ ಎಂದು ಭಾವಿಸಲಾಗುತ್ತದೆ. ಕ್ರೌರ್ಯ ಮತ್ತು ರಕ್ತಪಾತಗಳ ವಿಧಿನಿಷೇಧವನ್ನು ಪಾಲಿಸುವುದಿಲ್ಲ. ಆಗ ಇಂಥ ಸ್ವಾರ್ಥಿ ತಾಪಸಿಯು ಇತರ ಜನರ ಉಪಹಾಸಕ್ಕೆ ಕಾರಣವಾಗುತ್ತಾನೆ. ದೂರ್ವಾಸ ಮತ್ತು ಅಂಬರೀಶನ ಕಥೆಯಲ್ಲಿ ಇದನ್ನು ತೋರಿಸಲಾಗಿದೆ. ಆದರೆ ಈ ಉಪವಾಸವು ಶಾಕ್ತ ಕಾಪಾಲಿಕರ ಪ್ರತಿಷ್ಠೆಯು ಸಮಾಜದಲ್ಲಿ ಬೆಳೆದಾಗ ಕ್ರಮೇಣ ಹೆಚ್ಚಾಯಿತು. ಕೊರಳಲ್ಲಿ ನರರುಂಡಮಾಲೆಯನ್ನು ಧರಿಸುವ, ಪಂಚ ಮಕರಗಳ ಉಪಾಸಕರೆಂದು ಅವರನ್ನು ಶಾಕ್ತ ಕಥಾಸಾಹಿತ್ಯದಲ್ಲಿ ಕ್ಷುದ್ರರೆಂದು ಪರಿಗಣಿಸಲ್ಪಟ್ಟಿದ್ದಾರೆ. ಅವರು ಕೇವಲ ಜಾದೂಗಾರರು, ದುಷ್ಟ, ಯೋಗಿನಿಯರೂ ಇದೇ ಗುಂಪಿನವರು. ವೇತಾಳ ಪಂಚವಿಂಶತಿಯ ಜಾತಿಶೀಲ ಯೋಗಿಯು ಇದೇ ಮಾಲಿಕೆಯವರು. ಪಾರ್ಶ್ವನಾಥ ಚರಿತ್ರೆಯಲ್ಲಿ[೨೦] ಮತ್ತು ಕಥಾ ಸರಿತ್ಸಾಗರದಲ್ಲಿ[೨೧] ಇಂಥ ಯೋಗಿಗಳ ಉಲ್ಲೇಖ ಬರುತ್ತದೆ. ಜಾನಪದ ಕಥೆಯಲ್ಲಂತೂ ಹೇರಳವಾಗಿದ್ದಾರೆ.[೨]

(ಚಿತ್ರಮಯ ಜಗತ್, ಜುಲೈ ೧೯೬೧)

ಟಿಪ್ಪಣಿ:

೧. Faustoll - Jataka I, P. 137.

೨. Herman Jacobi, ಸ್ಥವಿರಪಿಚರಿತ ಇಲ್ಲವೇ ಹೇಮಚಂದ್ರನ ಪರಿಶಿಷ್ಟ ಪರ್ವ (ಕಲಪಕತ್ತಾ ೧೮೮೩) P. 14.

೩. ರಘುವಂಶ ೧೨:೨, ಕಥಾಸರಿತ್ಸಾಗರ ೧–೬೭, ೨–೬೨೮.

೪. ಪರಿಶಿಷ್ಟ ಪರ್ವ ಸರ್ಗ ೧, ೧೬೭–೧೯೬.

೫. Bloomfield, The Life of Parshwanathi, P. 47, 191.

೬. ಕಥಾಸರಿಸತ್ಸಾಗರ, ೨೪–೮೨, ೩೮–೪೭, ೧೨೧–೬.

೭. Bloomfield - The Life of Phrshwanathi, P. 192.

* * * *

೯. ಪವನದೇವನ ಪ್ರೇಮಕಥೆ

ದೇವರ ರಾಜ ಮತ್ತು ಗುರು-ದೌಗನ್ ಗುರು-ಇವನ ಮಹಿಮೆಯನ್ನು ಏನೆಂದು ಬಣ್ಣಿಸಲಿ? ದೌಗನ ಗುರುವಿನ ಸಂಕಲ್ಪವೂ ದೊಡ್ಡದೇ. ಇಡೀ ಜಗತ್ತನ್ನೇ ನಿರ್ಮಿಸುವ ಇಚ್ಛೆ ಅವನದು. ಮೇಲೆ ಆಕಾಶ ಮತ್ತು ಕೆಳಗೆ ಅಪರಂಪಾರ ಕಡಲು ಪಸರಿಸಿದೆ. ದೌಗನ ಗುರು ಕಡಲ ಮೇಲೆ ಕೂತು ಮುಂದೇನು ಮಾಡಬೇಕು ಎಂಬ ಬಗೆಗೆ ಯೋಚಿಸುತ್ತಿದ್ದ. ಅವನು ತನಗೆ ವಾಸಿಸಲು ಕಡಲಿನಲ್ಲಿ ಒಂದು ದೊಡ್ಡ ಕಲ್ಲಿನ ಗೋಡೆಯನ್ನು ನಿರ್ಮಿಸಿದ. ಅನಂತರ ಅವನು ಇತರ ದೇವರನ್ನು ತೊರೆದು ಆ ಜಲದುರ್ಗದಲ್ಲಿ ವಾಸಿಸಲಾರಂಭಿಸಿದ. ಎಷ್ಟೋ ದಿನ ಸಮಾಧಿಯಲ್ಲೇ ಕಳೆಯಲಾರಂಭಿಸಿದ. ದೇವರ ಮೇಲೆ ಸ್ವಾಮಿತ್ವವನ್ನು ಉಳಿಸಿಕೊಳ್ಳಲು ಅಮೃತ ಸಿದ್ಧಿಯ ವಿದ್ಯೆಯನ್ನು ಕರಗತ ಮಾಡಿಕೊಳ್ಳಬೇಕು. ಸಂಜೀವನಿಯನ್ನು ಕೈವಶ ಮಾಡಿಕೊಳ್ಳಬೇಕು. ಘೋರ ತಪವನ್ನು ಮಾಡುತ್ತ ದೌಗನ ಗುರು ತನ್ನ ಕೈಯನ್ನು ಉಜ್ಜಿಕೊಂಡನು. ಎರಡೂ ಕೈಗಳಿಗೂ ದೊಡ್ಡ ಗುಳ್ಳೆ ಎದ್ದಿತು. ದೌಗನ ಗುರು ಅದನ್ನು ಒಡೆದನು. ಆ ಒಂದು ಗುಳ್ಳೆಯಿಂದ ನಾಲ್ವರು ಮಕ್ಕಳು ಹೊರಬಿದ್ದರು. ಒಬ್ಬವನು ಕುರುಡ. ಎರಡನೆಯವನು ಮೂಕ, ಮೂರನೆಯವನು ಕುಂಟ ಮತ್ತು ನಾಲ್ಕನೆಯವನು ಕಿವುಡ. ಆ ಅಂಗವಿಕಲ ಮಕ್ಕಳನ್ನು ಕಂಡು ದೌಗನ ಗುರುವಿಗೆ ತುಂಬ ಕೋಪ ಬಂತು. ಅವನು ಎರಡನೇ ಗುಳ್ಳೆಯನ್ನು ದಿಟ್ಟಿಸಿದ. ಅದರಿಂದ ಏಳು ಸುಂದರ ಅಪ್ಸರೆಯರು ಹೊರ ಬಂದರು. ಅವರನ್ನು ಕಂಡು ದೌಗನ ಗುರುವಿಗೆ ತುಂಬ ಸಂತೋಷವಾಯಿತು. ಹೆಣ್ಣುಮಕ್ಕಳಿಗೆ ಅವನು ಕಡಲ ಸುಂದರಿ ಎಂದು ನಾಮಕರಣ ಮಾಡಿದ. ಅವನು ಅವರನ್ನು ಕಡಲಿನಲ್ಲಿ ಆಡಲು ಕಳಿಸಿದ. ಗಂಡುಮಕ್ಕಳನ್ನು ಓಡಿಸಿದ. 'ಮತ್ತೊಮ್ಮೆ ನನ್ನೆದುರಿಗೆ ಏನಾದರೂ ಬಂದರೆ ಕೊಂದೇ ಹಾಕುತ್ತೇನೆ. ದರಿದ್ರದವರೆ, ಹೋಗಿ ಇಲ್ಲಿಂದ' ಎಂದ.

* * *

ಆ ದುರ್ದೈವಿ ಗಂಡು ಮಕ್ಕಳು ಸಪ್ತ ಸಮುದ್ರದಾಚೆಗಿರುವ ವಿಂಧ್ಯ ಪರ್ವತದ ಕಾಡಿನಲ್ಲಿ ಒಂದು ಗುಹೆಯಲ್ಲಿ ವಾಸಿಸಲಾರಂಭಿಸಿದರು. ದೌಗನ ಗುರುವಿಗೆ ತನ್ನ ಏಳೂ ಹೆಣ್ಣು ಮಕ್ಕಳ ಮೇಲೆ ಅದೆಂಥ ಪ್ರೀತಿಯಿತ್ತೆಂದರೆ ಅವರು ಒಂದು ಕ್ಷಣವು ಕಣ್ಣ ಎದುರಿನಿಂದ ಮರೆಯಾಗದಂತೆ ನೋಡಿಕೊಳ್ಳುತ್ತಿದ್ದ. ಸಪ್ತ

ಸಮುದ್ರದಾಚೆಗಿನ ಎತ್ತರವಾದ ಕರಿಬೆಟ್ಟದ ಮೇಲೆ ಕುಳಿತಿರುತ್ತಿದ್ದ. ಹೆಣ್ಣು ಮಕ್ಕಳು ಅವನ ತೊಡೆಯ ಮೇಲೆ ಆಡುತ್ತಿದ್ದವು. ಆಗ ದೌಗನ ಗುರೂ ಸಹ ನಕ್ಕು ನಲಿದು ಅವರನ್ನು ಹೊಗಳುತ್ತಿದ್ದ. ಅವರ ಆಟದಲ್ಲಿ ಶಾಮೀಲಾಗುತ್ತಿದ್ದ. ಹೆಣ್ಣುಮಕ್ಕಳು ಯಾರ ಕಣ್ಣಿಗೂ ಬೀಳಬಾರದೆಂದು ಅವನು ತನ್ನ ಜಲದುರ್ಗವನ್ನು ತೊರೆದು, ಈ ನಿರ್ಜನ ಸ್ಥಳಕ್ಕೆ ಬಂದಿದ್ದ. ಇಲ್ಲೆಂದೂ ಸೂರ್ಯನ ಕಿರಣವೂ ಬೀಳುತ್ತಿರಲಿಲ್ಲ. ಚಂದ್ರ ಎಂದೂ ಇಣುಕಿ ನೋಡುತ್ತಿರಲಿಲ್ಲ. ಹೀಗಿರುವಾಗ ದೇವ-ದಾನವರಂತೂ ದೂರದ ಮಾತು.

ಅದರೆ ಒಮ್ಮೆ ಪವನದೇವನ ದಾರಿ ತಪ್ಪಿತು. ಕಸಿವಿಸಿಗೊಂಡು ಆಗಸದಲ್ಲಿ ಅಲೆದಾಡುತ್ತಿದ್ದರೂ, ಆಸರೆಗೆ ಒಂದು ತಾಣವೂ ಸಿಗಲಿಲ್ಲ. ಯಾರೂ ಎಂದೂ ಕಾಣದ ದೌಗನ ಗುರುವಿನ ಪರ್ವತ ಅವನ ಕಣ್ಣಿಗೆ ಬಿತ್ತು. ಕ್ಷಣಕಾಲ ವಿರಮಿಸಿ, ದೌಗನ ಗುರುವಿಗೆ ವಂದಿಸಬೇಕೆಂದು ಅವನು ಆ ಪರ್ವತದ ನೆತ್ತಿಗೆ ಹೋಗಿ ಕುಳಿತ. ಆಗ ಏನಾಯಿತು ಅಂತೀರಿ? ದೌಗನ ಗುರುವಿನ ಆ ಏಳೂ ಕಡಲಿನ ಅಪ್ಸರೆಯರು ಅವನ ಕಣ್ಣಿಗೆ ಬಿದ್ದರು. ಅವರ ಲಾವಣ್ಯವನ್ನು ಕಂಡು ಮೈಮರೆತ ತ್ರೈಲೋಕದಲ್ಲಿ ಅಲೆದಾಡುವ ಆ ಪವನದೇವ. ಆದರೆ ಇಂಥ ಹುಡುಗಾಟ, ನಗು ಮತ್ತು ಅಂಥ ರೂಪವನ್ನು ಬೇರೆ ಯಾವ ಸ್ತ್ರೀಯರಲ್ಲೂ ಅವನು ಕಂಡಿರಲಿಲ್ಲ. ಅವನು ತನ್ಮಯದಿಂದ ನೋಡುತ್ತಲೇ ನಿಂತ. ಆದರೆ ಅಷ್ಟರಲ್ಲಿ ದೌಗನ ಗುರುವಿನ ಕಣ್ಣು ಅವನ ಮೇಲೆ ಬಿತ್ತು. ಪವನದೇವನ ರೂಪ ದೌಗನ ಗುರುವಿನ ಹೊರತು ಬೇರೆ ಯಾರಿಗೂ ಕಾಣುತ್ತಿರಲಿಲ್ಲ. ಹೆಣ್ಣು ಹುಡುಗಿಯರಿಗೂ ಅವನು ಕಾಣಲಿಲ್ಲ. ಆದರೆ ಪವನದೇವನ ಆಗಮನದ ಜೊತೆಗೆ, ಆ ನಿಶ್ಚಲ ಸ್ಥಳದಲ್ಲಿ ಗಾಳಿಯ ಅಲೆ ಬಂತು. ಹುಡುಗಿಯರ ಸುಂದರ ತಲೆಗೂದಲು ಗಾಳಿಗೆ ಹಾರಾಡಲಾರಂಭಿಸಿತು. ಗಾಳಿಯ ಲಹರಿಯದಷ್ಟೇ ಅಲ್ಲ, ಅಪ್ಪನ ಹೊರತು ಬೇರೆ ಯಾವುದರ ಸ್ಪರ್ಶವೂ ಆ ಹುಡುಗಿಯರಿಗೆ ಗೊತ್ತಿರಲಿಲ್ಲ. ಹೀಗಾಗಿ ಇಂದು ಈ ಗಾಳಿಯ ಸುಖಕರ, ನವಿರಾದ ಸ್ಪರ್ಶವನ್ನು ಅನುಭವಿಸಿ ಆ ಹುಡುಗಿಯರು ಅತಿಶಯ ಹರ್ಷಿತರಾದರು.

* * *

'ಇಂದು ತುಂಬ ಮಜಾ ಎನಿಸುತ್ತಿದೆ ಅಪ್ಪಾ!' ಎಂದವರು ನಗಲಾರಂಭಿಸಿದರು. ಸದಾ ಕಾಲ ಅಪ್ಪನ ವಿಶಾಲ ತೊಡೆಯ ಮೇಲೆಯೇ ಕೂತು ಓಡಾಡುವ, ಆಟವಾಡುವ, ಹಾಡುವ ಆ ಹುಡುಗಿಯರು ಈಗ ಠಣ್ಣನೆ ಜಿಗಿದು ಕೆಳಗಿಳಿದರು. ಪರ್ವತದ ಕರಿಕಲ್ಲಿನ ಮೇಲೆ ಗೋಲಾಕಾರವಾಗಿ ನರ್ತಿಸುತ್ತ ಹಾಡಲಾರಂಭಿಸಿದರು. ನರ್ತಿಸುವಾಗ ಅವರ ತಲೆಗೂದಲು ಸೊಗಸಾಗಿ ಹಾರಾಡುತ್ತಿದ್ದವು. ಮುಖದ ಮೇಲೆ ಹರಡಿದ ಕೂದಲನ್ನು ಬದಿಗೆ ಸರಿಸಿ ಸರಿಸಿ

ಸಾಕಾಗುತ್ತಿತ್ತು. ಕ್ಷಣಹೊತ್ತು ಆ ದೃಶ್ಯವನ್ನು ಕಂಡು ದೌಗನ ಗುರು ಸಹ ಮರುಳಾದರು. ಅವನಿಗೆ ಧನ್ಯ ಧನ್ಯವೆನಿಸಿತು. ಆದರೆ ಕೂಡಲೇ ಅವನು ಜಾಗರೂಕನಾದ.

* * *

ಪವನದೇವ ಎದ್ದು ನಿಂತುಕೊಂಡ. ಹುಡುಗಿಯರ ಆಟದಲ್ಲಿ ತನ್ಮಯನಾಗಿದ್ದ. ಹುಡುಗಿಯರ ಮೈ ಹರ್ಷದಿಂದ ನವಿರೆದ್ದಿತು. ಮೈಮರೆತು ಕಣ್ಮುಚ್ಚಿ ಅವರು ನರ್ತಿಸುತ್ತಿದ್ದರು, ಹಾಡುತ್ತಿದ್ದರು. ಈವರೆಗೆ ಎಂದೂ ಕುಣಿದಿರಲಿಲ್ಲ ಹಾಗವರು ನರ್ತಿಸುತ್ತಿದ್ದರು. ಈವರೆಗೆ ಗೊತ್ತಿಲ್ಲದ ಹಾಡು, ಸಹಜವಾಗಿಯೇ ಅವರ ಕಂಠದಿಂದ ಹೊರಹೊಮ್ಮುತ್ತಿತ್ತು. ಮುತ್ತಿನಂಥ ಬೆವರ ಹನಿ ಅವರ ಹಣೆಯ ಮೇಲೆ ಸಂಗ್ರಹಗೊಳ್ಳಲಾರಂಭಿಸಿತು. ಆಗ ಪವನದೇವನು ಬೆರಳಿನಿಂದ ಒರೆಸುತ್ತಿದ್ದ. ಪವನದೇವನ ಈ ದಿಟ್ಟತನವನ್ನು ಕಂಡು ಸಿಟ್ಟಿನಿಂದ ದೌಗನ ಗುರು ಗಂಟಲು ಹರಿದುಹೋಗುವಂತೆ ಕಿರುಚಿದ. 'ಹುಡುಗಿಯರೆ ಇಲ್ಲಿಗೆ ಬನ್ನಿ.'

ಆದರಿಂದು ಅವನ ಮಾತು ಹುಡುಗಿಯರ ಕಿವಿಗೆ ಬೀಳಲಿಲ್ಲ. ಅವರು ನರ್ತಿಸುತ್ತಲೇ ಇದ್ದರು. ಆದರವನ ಸಿಟ್ಟಿನ ಧ್ವನಿ ಕೇಳಿ ಪವನದೇವ ಎಚ್ಚೆತ್ತುಕೊಂಡ. ಆ ಹುಡುಗಿಯರ ಗುಂಪಿನಿಂದ ದೂರ ಸರಿದ. ಅವನ ಎದೆ ಭೀತಿಯಿಂದ ಮರಗಟ್ಟಿತು. ಗಾಳಿಯಲ್ಲೆ ನಿಂತಿತು. ಅವನ ಬಿಸಿಯುಸಿರು ತಟ್ಟಿದಾಗ ಅವರು ಎಚ್ಚರಗೊಂಡರು. ಏನಾಯಿತು ಎನ್ನುವದು ತಿಳಿಯದೇ ತೇಕುತ್ತ ಅಪ್ಪನ ಎದುರಿಗೆ ಹೋಗಿ ನಿಂತರು.

* * *

ನೃತ್ಯ ನಿಂತಿತು ಮತ್ತು ಆ ಆತ್ಯಂತಿಕ ಹರ್ಷದ ಆಘಾತ ಇಳಿದು ಆ ಹುಡುಗಿಯರ ಕಂಠ ತಾನಾಗಿಯೇ ಬಿಗಿದು ಬಂತು. ಅವರ ಕಣ್ಣಿಂದ ಕಂಬನಿಯುರುಳಿತು. ಈವರೆಗೆ ಎಂದೂ ಆ ಆನಂದದ ಜೀವಗಳಿಗೆ ಅಳುವಿನ ಸ್ಪರ್ಶವಿರಲಿಲ್ಲ. ಇಂದು ಬೇಡ ಬೇಡವಾದುದೆಲ್ಲ ಜರುಗುತ್ತಿತ್ತು. ಹೀಗೇಕೆ? ಬಳಿಕ ಕಂಠ ಬಿಗಿದ ಆ ಸ್ಥಿತಿಯು ಅವರಿಗೆ ಮುದ ನೀಡಿತು. ಅವರು ಬಿಕ್ಕಳಿಸಿ ಅಳಲಾರಂಭಿಸಿದರು. ಪವನದೇವ ಕಂಪಿಸುತ್ತ, ಕಂಪಿಸುತ್ತ ದೌಗನ ಗುರುವಿನ ಪಾದಕ್ಕುರುಳಿದ. ನನ್ನನ್ನು ಕ್ಷಮಿಸಿ, ದಾರಿತಪ್ಪಿ ನಾನಿತ್ತ ಬಂದೆ. ಆದರೀಗ ನಾನು ಮರಳುವದು ಸಾಧ್ಯವಿಲ್ಲ. ನನಗಿಲ್ಲೇ ಇರಲು ಅವಕಾಶ ಕೊಡಿ. ನಾನು ನಿಮ್ಮ ಮಗಳನ್ನು ಪ್ರೀತಿಸುತ್ತೇನೆ. ಅವರಿಗೂ ನಾನು ಇಷ್ಟವಾಗಬಹುದು. ಅವರನ್ನು ಸುಖವಾಗಿರಿಸುತ್ತೇನೆ. ನಿಮ್ಮ ಸೇವೆ ಮಾಡುತ್ತೇನೆ. ನಿಮ್ಮ ಗಂಡುಮಕ್ಕಳ ಕೊರತೆಯನ್ನು ಹೋಗಲಾಡಿಸುತ್ತೇನೆ.

* * *

ದೌಗನ ಗುರು ಯಾವುದರಿಂದ ತಪ್ಪಿಸಿಕೊಳ್ಳಬೇಕೆಂದಿದ್ದರೋ ಇಂದು ಅದೇ ಜರುಗುತ್ತಿತ್ತು. ಅವನ ಮತ್ಸರ ಸ್ವಭಾವ ಉಲ್ಬಣಿಸಿತು. ಹೆಣ್ಣು ಹುಡುಗಿಯರು ತನ್ನವರು. ಕೇವಲ ತನ್ನವರಾಗಿರಬೇಕೆಂದು ಸೂರ್ಯ ಚಂದ್ರರಿಂದಲೂ ಅವನು ಮುಚ್ಚಿಟ್ಟಿದ್ದ. ನಾಲ್ವರೂ ಗಂಡು ಹುಡುಗರನ್ನು ಅಂಗವೈಕಲ್ಯದ ನೆಪದಿಂದ ಹೊರಗೆ ದಬ್ಬಿದ್ದ. ಆದರಿಂದ ಜಗತ್ತಿನ ತುಂಬೆಲ್ಲ ಭರಭರ ಅಲೆದಾಡುವ, ಉಂಡಾಡಿ ಪೋರ, ಈ ಅಪ್ಸರೆಯರ ಬೇಡಿಕೆಯನ್ನು ಇಡುತ್ತಿದ್ದಾನೆ. ಕೇವಲ ಅವನ ಸ್ಪರ್ಶ ಮಾತ್ರದಿಂದಲೇ ಹುಡುಗಿಯರು ಮೋಹಿತರಾಗಿದ್ದರು. 'ನನಗೆ ಹೆಣ್ಣು ಹುಡುಗಿಯರ ಮದುವೆ ಮಾಡುವ ಇಚ್ಛೆಯಿಲ್ಲ. ರೂಪ–ಬಣ್ಣ–ಗುಣದಿಂದ ಯುಕ್ತನಾದ ಒಬ್ಬ ದೇವನೂ ಇಲ್ಲ. ಸೂರ್ಯ ಕುದಿಯುತ್ತಾನೆ. ಚಂದ್ರನಿಗೆ ಕಪ್ಪುಚುಕ್ಕೆ, ನಿನಗೆ ರೂಪವಿಲ್ಲ, ಆಕಾರವಿಲ್ಲ, ನಾನು ಯಾವ ವೈಕಲ್ಯವನ್ನು ಬಯಸುವುದಿಲ್ಲ. ಸ್ವಂತ ಮಕ್ಕಳಲ್ಲೂ ವ್ಯಂಗ್ಯವಿತ್ತು. ಅವರನ್ನು ಹೊರದಬ್ಬಿದೆ. ಹಾಗಿರುವಾಗ ನಿನ್ನನ್ನು ಯಾರೂ ಕೇಳುತ್ತಾರೆ. ನನಗೆ ಅಳಿಯಂದಿರು ಬೇಡ. ನಾನು ಮತ್ತು ನನ್ನ ಹೆಣ್ಣುಮಕ್ಕಳು. ನೀನು ಇಲ್ಲಿಂದ ಹೊರಟು ಹೋಗು. ಮತ್ತೆಂದಾದರೂ ಮುಖ ತೋರಿಸಿದರೆ ಹುಶಾರ್.'

* * *

ಆದರೂ ಇಂದೇಕೋ ಪವನದೇವನ ಮೈಯಲ್ಲಿ ಅಧಿಕ ಬಲ ಬಂದಂತಾಗಿತ್ತು. ಇಲ್ಲದಿದ್ದರೆ ದೌಗನ ಗುರುವಿನೊಂದಿಗೆ ಮಾತಾಡುವುದು ಹೋಗಲಿ, ಕಣ್ಣೆತ್ತಿ ನೋಡುವ ಧೈರ್ಯವೂ ಇರಲಿಲ್ಲ. ಅಂಥ ಪರಿಸ್ಥಿತಿಯಲ್ಲೂ ಒಂದು ತುಂಟ ಯೋಚನೆಯು ಅವನ ಮನದಲ್ಲಿ ಮೂಡಿತು. ನಗೆಯುಕ್ಕಿತು. ಓಹೋ ಹಾಗಾದರೆ ಪವನಗುರು ಈ ಕಾರಣಕ್ಕಾಗೇ ನಮ್ಮೆಲ್ಲರಲ್ಲಿ ಏನಾದರೂ ಒಂದು ವೈಗುಣ್ಯವನ್ನು ಇರಿಸಿದ್ದಾನೋ ಹೇಗೆ? ಆ ನಗು ಹೊರಗೆ ಉಕ್ಕಿ ಬಂತು. ಅದರ ಪಾರದರ್ಶಕ ಆಕೃತಿಯು ಸುಳಿದಾಡುವ ಬಿರುಗಾಳಿಯಂತೆ ಕ್ಷಣದೊಳಗೆ ಒಂದು ಮುದ್ದೆಯ ರೂಪದಲ್ಲಿ ಸಾಕಾರಗೊಂಡಿತು. ಅವನ ಆ ಚಪಲ, ಸುಂದರ, ಪಾರದರ್ಶಕ ಮತ್ತು ಯೌವನ ಹಾಗೂ ಪುರುಷತನದಿಂದ ಪರಿಪೂರ್ಣವಾಗಿರುವ ದೇಹವನ್ನು ಆ ಹುಡುಗಿಯರು ದಿಟ್ಟಿಸಲಾರಂಭಿಸಿದರು.

ದೌಗನ ಗುರು ಜೋರಾಗಿ ಕಾಲಿನಿಂದ ಒದ್ದು ಅವನನ್ನು ದೂರ ಕಳಿಸಿದ. ಹೆಣ್ಣು ಹುಡುಗಿಯರನ್ನು ಕಡಲಿನ ತಳದಲ್ಲಿರುವ ಒಂದು ಗುಹೆಯೊಳಗೆ ಬಂಧಿಸಿ ಇಟ್ಟ. ಅವನು ಮನೆಯಲ್ಲಿದ್ದಾಗಲೇ ಆ ಹುಡುಗಿಯರಿಗೆ ಹೊರಗೆ ಬಿಡುತ್ತಿದ್ದ, ತೊಡೆಯ ಮೇಲೆ ಮೊದಲಿನಂತೆ ಆಡಲು ಅವಕಾಶ ಕೊಡುತ್ತಿದ್ದ. ಕೆಲಸದ ನಿಮಿತ್ತ ಹೊರಗೆ ಹೋಗುವಾಗಲೆಲ್ಲ ಅವರನ್ನು ಸಾಗರ ತಳದ ಬಂದಿಖಾನೆಯಲ್ಲಿ ಕೂಡಿಹಾಕಿ ಹೊರಗೆ ಹೋಗುತ್ತಿದ್ದ. ಆದರೆ ಏನಾಯಿತೋ ಏನೊ? ಮೊದಲಿನಂತೆ

ಹೆಣ್ಣು ಹುಡುಗಿಯರು ಆಟವಾಡುತ್ತಿರಲಿಲ್ಲ. ನಗೆಗಿಂತ ಅವರಿಗೆ ಅಳುವುದರಲ್ಲೇ ಸುಖ ಸಿಗುತ್ತಿತ್ತು. ಅವರು ಅಪ್ಪನಿಗೆ ಬೇಡಿಕೊಳ್ಳುತ್ತಿದ್ದರೂ ಅವನ ನಿರ್ಧಾರ ಮಾತ್ರ ಬದಲಾಗಲಿಲ್ಲ. ಪವನದೇವನು ಸಪ್ತಸಮುದ್ರದ ದಡದಲ್ಲೇ ಅಲೆದಾಡಲಾರಂಭಿಸಿದ.

-೨-

ಒಂದು ದಿನ ಶಿವನು ಕಾಡಿಗೆ ಹೋಗಿದ್ದ. ಮನೆಯಲ್ಲಿ ಪಾರ್ವತಿ ಒಬ್ಬಳೇ ಉಳಿದಳು. ಮನೆಯಲ್ಲಿದ್ದ ಏಳೂ ಕೋಣೆಗೆ ಶಿವನು ಕೀಲಿ ಹಾಕಿದ್ದ. 'ನಿನಗೆ ಬೇಕೆನಿಸಿದರೆ ಆರೂ ಕೋಣೆಗಳನ್ನು ತೆರೆಯಬಹುದು. ಆದರೆ ಏಳನೆಯದನ್ನು ಮಾತ್ರ ತೆರೆಯಬೇಡ. ಘಾತವಾದೀತು' ಎಂದು ಶಿವನು ಹೋಗುವಾಗ ಪಾರ್ವತಿಗೆ ಎಚ್ಚರಿಕೆಯನ್ನು ನೀಡಿದ್ದ. ಆದರೆ ಪಾರ್ವತಿ ಆರು ಕೋಣೆಯಲ್ಲಿರುವ ಮುತ್ತು-ರತ್ನಗಳ ಸಂಪತ್ತು ನೋಡಿದಳು. ಗಿಡಮರಗಳ, ಪಶು ಪಕ್ಷಿಗಳ ಬೀಜಗಳನ್ನು ನೋಡಿದಳು. ಆದರೂ ಅವಳಿಗೆ ಸಮಾಧಾನವಾಗಲಿಲ್ಲ. ಅವಳಿಗೆ ತಡೆಯುವದಾಗದೆ ಏಳನೇ ಕೋಣೆಯನ್ನು ತೆರೆದಳು. ಅದರಲ್ಲಿ ಶಿವನು ಕೋಟಿಗಟ್ಟಲೆ ಮಾನವರ ಆತ್ಮವನ್ನು ತುಂಬಿಟ್ಟಿದ್ದ. ಮಾನವನ ಜನ್ಮದ ಅವನ ಕಲ್ಪನೆಯು ಸಾಕಾರಗೊಳ್ಳಲು ತುಂಬ ದೊಡ್ಡ ತಪಸ್ಸಿನ ಅಗತ್ಯವಿತ್ತು. ಮನುಷ್ಯ ದೇವ ಸದೃಶವಾಗಲು ಕೆಲ ಕಾಲ ಕಾಯುವ ಅಗತ್ಯವಿತ್ತು. ಆದರೆ ಪಾರ್ವತಿಯು ಆ ಕೋಣೆಯನ್ನು ತೆರೆದಳು. ವಟವೃಕ್ಷದ ಬೀಜಗಳಂತೆ ಆಕಾರವಿರುವ ಆ ಆತ್ಮಗಳೆಲ್ಲ ಅವಳ ಗರ್ಭವನ್ನು ಸೇರಿದವು. 'ಅಮ್ಮಾ ನಮಗೆ ಜನ್ಮ ನೀಡು' ಎಂದು ಅವು ಕೂಗಲಾರಂಭಿಸಿದವು. ಪಾರ್ವತಿಗೆ ವೇದನೆ ಶುರುವಾಯಿತು. ಅವಳು ಪ್ರಜ್ಞೆತಪ್ಪಿ ಬಿದ್ದಳು.

* * *

ಹುಲಿಗಳು, ಹಕ್ಕಿಗಳು, ಬೇಟೆನಾಯಿಗಳು ಈ ವಾರ್ತೆಯನ್ನು ಶಿವನಿಗೆ ತಲುಪಿಸಿದವು. ಪಾರ್ವತಿಯು ಮೂರ್ಖತನದಿಂದ ಸಂಪೂರ್ಣ ಹೆಣ್ಣು ಜಾತಿಗೆಲ್ಲ ಶಾಶ್ವತ ಕ್ಲೇಶವನ್ನು ಭೋಗಿಸಬೇಕಾದ ಪ್ರಸಂಗ ತಂದ ಬಗ್ಗೆ ಶಿವನು ಅವಳಿಗೆ ಜರಿದ. ಆದರೆ ಅವಳ ಗುರುವಿನ ಹೊರತು ಬೇರಾರಿಗೂ ಗೊತ್ತಿರಲಿಲ್ಲ. ಶಿವನು ಮಣ್ಣಿನ ಎತ್ತು ನಿರ್ಮಿಸಿದ. ಅದಕ್ಕೆ ಗಾಳಿ ಹಾಕಿದ. ಅದು ಸಜೀವಗೊಂಡಿತು. ಅವನು ಅದಕ್ಕೆ ನಂದಿ ಎಂದು ಹೆಸರಿಟ್ಟ. ದೌಗನ ಗುರುವನ್ನು ಗುರುವನ್ನಾಗಿ ಮಾಡಿಕೊಳ್ಳಲು ಅವನು ಮದಿರೆಯನ್ನು ಸಿದ್ಧಪಡಿಸಿದ. ಅದನ್ನು ತಂಬಿಗೆಯಲ್ಲಿ ತುಂಬಿಕೊಂಡು ಅವನು ಸಪ್ತಸಮುದ್ರದ ತೀರಕ್ಕೆ ಬಂದ. ತೀರದ ಒಂದು ಮರದ ಮೇಲೆ ಹದ್ದುಗಳ ಗೂಡಿತ್ತು. ಗೂಡಿನಲ್ಲಿರುವ ಹದ್ದುಗಳು ಕಿರಿಚುತ್ತಿದ್ದವು. 'ನೀವೇಕೆ ಅಳುತ್ತಿದ್ದೀರಿ?' ಎಂದು ಶಿವ ಕೇಳಿದ.

'ನೂರು ವರ್ಷಗಳಿಂದ ನಾವು ಈ ಮೊಟ್ಟೆಗಳಿಗೆ ಕಾವು ನೀಡುತ್ತಿದ್ದೇವೆ.

ಆದರದು ಒಡೆದು ಮರಿಗಳು ಹೊರಬರುತ್ತಿಲ್ಲ. ನಮಗೆ ನಮ್ಮ ಮರಿಗಳನ್ನು ನೋಡಬೇಕೆಂಬ ತವಕ. ಆದರೆ ನೀವೆಲ್ಲಿ ಹೊರಟಿದ್ದೀರಿ?'

'ನಾನು ಪಾರ್ವತಿಯ ವೇದನೆಯ ನಿವಾರಣೆಗಾಗಿ ದೌಗನ ಗುರುವನ್ನು ಭೇಟಿಯಾಗಲು ಹೊರಟಿದ್ದೇನೆ' ಶಿವ ಉತ್ತರಿಸಿದ.

'ಹಾಗಾದರೆ ನಮ್ಮ ದುಃಖವನ್ನು ನಿವಾರಣೆ ಮಾಡುವಂತೆ ಗುರುವಿಗೆ ಹೇಳಿ.'

'ಸರಿ.' ಶಿವ ಹೇಳಿದ.

ಬಳಿಕ ಆ ಹಕ್ಕಿಗಳು ಹೇಳಿದವು : 'ದೌಗನ ಗುರುವಿನ ನಾಲ್ವರೂ ಮಕ್ಕಳು ಆಚೆಬದಿಯ ಗುಹೆಯಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ಭೇಟಿಯಾದರೆ ಅವರು ನಿಮಗೆ ದೌಗನ ಗುರುವಿನ ಮನೆಯ ಮಾರ್ಗವನ್ನು ತೋರಿಸುತ್ತಾರೆ.'

ಶಿವ ಆ ಗುಹೆಯ ಬಳಿಗೆ ಹೋದ. ಆ ಮಕ್ಕಳಿಗೆ ಹೇಳಿದ: 'ಪಾರ್ವತಿಯು ಮೂರ್ಖತನ ಮಾಡಲು ಹೋಗಿ ತೊಂದರೆಗೆ ಸಿಲುಕಿದ್ದಾಳೆ. ಅವಳೀಗ ವೇದನೆಯಿಂದ ತೊಳಲಾಡುತ್ತಿದ್ದಾಳೆ. ದೌಗನ ಗುರುವಿನ ಹೊರತು ಯಾರಿಂದಲೂ ಅವಳನ್ನು ಗುಣಪಡಿಸುವದು ಸಾಧ್ಯವಿಲ್ಲ. ನೀವಂತೂ ಅವರ ಮಕ್ಕಳು. ಅವರ ಮನವನ್ನು ಒಲಿಸಿಕೊಳ್ಳಿ.'

'ನಾನು ಏನು ಸಹಾಯ ಮಾಡಲಿ? ನಾನಂತೂ ಕುರುಡ' ಎಂದ ಕುರುಡ.

'ನಾನೇನು ಸಹಾಯ ಮಾಡಲಿ? ನಾನಂತೂ ಮೂಕ.' ಮೂಕ ಸನ್ನೆಯಿಂದ ಹೇಳಿದ.

'ನಾನೇನು ಸಹಾಯ ಮಾಡಲಿ? ನಾನಂತೂ ಕುಂಟ' ಎಂದ ಕುಂಟ. ಕಿವುಡ ಮಾತ್ರ ಏನೂ ಕೇಳಿ ಬರದೇ ಇದ್ದುದರಿಂದ ಬರೇ ನೋಡುತ್ತ ಕೂತ.

'ಸರಿ ಹಾಗಾದರೆ' ಎಂದು ಶಿವನು ಮಂತ್ರವಿದ್ಯೆಯಿಂದ ಕುರುಡನಿಗೆ ಕಣ್ಣು, ಮೂಕನಿಗೆ ಬಾಯಿ, ಕುಂಟನಿಗೆ ಕಾಲು ಮತ್ತು ಕಿವುಡನಿಗೆ ಶ್ರವಣಶಕ್ತಿಯನ್ನು ನೀಡಿದ. ಗಂಡು ಹುಡುಗರಿಗೆ ಸಂತೋಷವಾಯಿತು. ಅವರು ಶಿವನನ್ನು ಕಡಲಿನಲ್ಲಿರುವ ಪರ್ವತಕ್ಕೆ ಕರೆದೊಯ್ದರು. ಸುತ್ತಲೂ ಕಡಲು, ನಟ್ಟನಡುವೆ ಪರ್ವತವಿತ್ತು. ದೌಗನಗುರು ಪರ್ವತದ ಮೇಲೆ ಕೂತಿದ್ದ. ಗಂಡುಮಕ್ಕಳು ಜೋರು ಜೋರಾಗಿ ಅಪ್ಪನನ್ನು ಕರೆದರು. ಆದರೆ ಅಷ್ಟು ಎತ್ತರಕ್ಕೆ ಅವರ ಧ್ವನಿ ಕೇಳಿ ಹೋಗಲಿಲ್ಲ. ಪವನದೇವನು ತೀರದಲ್ಲಿ ಅಲೆದಾಡುತ್ತಲಿದ್ದ. ಅವನು ಈ ಹಾದಿಹೋಕರಿಗೆ ಕೇಳಿದ. ಅವನಿಗೂ ಸಂತೋಷವಾಯಿತು. 'ನಾನು ನಿಮಗೆ ಸಹಾಯ ಮಾಡುತ್ತೇನೆ. ಆದರೆ ದೌಗನ ಗುರುವಿನ ಹೆಣ್ಣುಮಕ್ಕಳನ್ನು ನನಗೆ ಕೊಟ್ಟು ಮದುವೆ ಮಾಡಿಸಬೇಕು.'

'ಒಪ್ಪಿಗೆ' ಎಂದರು ಎಲ್ಲರೂ. ಬಳಿಕ ಪವನದೇವನು ಆ ಧ್ವನಿಯನ್ನು

ದೌಗನ ಗುರುವಿನ ಕಿವಿಗೆ ತಲುಪಿಸಿದ. 'ಇದಂತೂ ನನ್ನ ಗಂಡುಮಕ್ಕಳ ಧ್ವನಿಯಂತಿದೆ. ಅವರಂತೂ ಅಂಗವಿಕಲರು, ಅವರು ಇಲ್ಲಿಗೆ ಹೇಗೆ ಬಂದರು?' ಅವನು ಹೊರಗೆ ಬಂದ. ತೀರಕ್ಕೆ ಇಳಿದ. ನೋಡಿದರೆ ಮಕ್ಕಳ ವೈಕಲ್ಯವೆಲ್ಲ ಹೊರಟುಹೋಗಿದೆ. ಅವನು ಹರುಷದಿಂದ ಮಕ್ಕಳನ್ನು ತಬ್ಬಿಕೊಂಡ. 'ಇದೆಲ್ಲ ಶಿವನ ಕೃಪೆ' ಎಂದರು ಮಕ್ಕಳು.

ದೌಗನ ಗುರು ಶಿವನಿಂದ ಪಾರ್ವತಿಯ ವೇದನೆಯ ಕಥೆಯನ್ನು ಅರಿತು ಕೂಡಲೇ ಹೊರಡುವ ನಿರ್ಧಾರ ಮಾಡಿದ. ಹೆಣ್ಣು ಹುಡುಗಿಯರನ್ನು ಕೂಡಿಹಾಕಿ 'ನಾನು ಬರುವವರೆಗೆ ಹೊರಗೆ ಬರಕೂಡದು' ಎಂದು ಹೇಳಿದ.

ಅವರಿಬ್ಬರೂ ಹೊರಟುಹೋದರು. ಪವನದೇವ ಮತ್ತು ಆ ನಾಲ್ವರೂ ಮಕ್ಕಳು, ಕಡಲ ತಳದಲ್ಲಿರುವ ಬಂದಿಖಾನೆಯ ಬಳಿಗೆ ಬಂದರು. ಅಣ್ಣಂದಿರು ಬಾಗಿಲು ಒಡೆದರು, ತಂಗಿಯರು ಹೊರಗೆ ಬಂದರು. ತಕ್ಷಣ ಅವರ ಮದುವೆಯನ್ನು ಮಾಡಿ ಮುಗಿಸಿದರು. ಹುಡುಗಿಯರು ತಂದೆಯ ಮನೆಯನ್ನು ತೊರೆದರು. ಪವನದೇವನ ಕೈ ಹಿಡಿದು ನರ್ತಿಸಲಾರಂಭಿಸಿದರು. ಅಂದಿನಿಂದ ಆ ಸಮುದ್ರ ಅಪ್ಸರೆಯರು ಪವನದೇವನೊಂದಿಗೆ ನರ್ತಿಸುತ್ತಲೇ ಇದ್ದಾರೆ. ನೀವು ಕಡಲತೀರಕ್ಕೆ ಹೋದರೆ ನಿಮಗೂ ಈ ನೃತ್ಯ ಕಣ್ತುಂಬ ನೋಡಲು ಸಿಗುತ್ತದೆ.

(ಗೋಂಡರ ಜಾನಪದ ಕಥೆಯನ್ನು ಆಧರಿಸಿ)

* * * *

೧೦. ಶಿವನ ಮದುವೆ ಮತ್ತು ಸಂಸಾರ

ಭೂಮಿಯು ಮರಗಿಡಬಳ್ಳಿಯಿಂದ, ಹೂವು ಹಣ್ಣುಗಳಿಂದ, ಪಶುಪಕ್ಷಿ, ಜೀವ ಜಂತುಗಳಿಂದ ತುಂಬಿಕೊಂಡಿತ್ತು. ಹಲವು ಬಗೆಯ ಪ್ರಾಣಿಗಳು ಹಲವು ಬಗೆಯಿಂದ ಬದುಕಲಾರಂಭಿಸಿದವು. ಕೂಸುಗಳು ತಮ್ಮ ತಾಯಂದಿರ ಜೊತೆ ಆಡಲಾರಂಭಿಸಿದವು. ಅದನ್ನು ಕಂಡು ಶಿವನಿಗೆ ಧನ್ಯ ಧನ್ಯವೆನಿಸಿತು. ಎಲ್ಲ-ಎಲ್ಲ ಮನಸಿನಂತಾಯಿತು. ಆದರೆ ಒಂದೇ ಸಂಗತಿ ಮಾತ್ರ ಉಳಿದಿತ್ತು. ತನ್ನ ಹಾಗಿರುವ ಮಕ್ಕಳು ತನಗೂ ಇರಬೇಕೆಂದು ಇಚ್ಛೆ ಶಿವನಿಗೂ ಆಯಿತು. ಶಿವನದೋ ಒಂಟಿ ಜೀವ. ಈಗಂತೂ ಮದುವೆ ಮಾಡಿಕೊಳ್ಳಲೇಬೇಕು. ಯಾರೊಂದಿಗೆ ಮಾಡಿಕೊಳ್ಳಲಿ? ಅವನಿಗೆ ನೆನಪಾಯಿತು. ಹಿಮರಾಜನ ಮಗಳು ಪಾರ್ವತಿ ಬಹಳ ಸುಂದರಿಯಾಗಿರುವಳಂತೆ, ಅವಳನ್ನೇ ಮದುವೆ ಮಾಡಿಕೊಂಡರೆ ಆಯಿತು.

ಶಿವನು ದೇಹಕ್ಕೆ ಭಸ್ಮವನ್ನು ಬಳಿದುಕೊಂಡನು. ಜೋಳಿಗೆ ಹೆಗಲಿಗೆ ಹಾಕಿದನು. ಕೈಯಲ್ಲಿ ತ್ರಿಶೂಲ ಹಿಡಿದುಕೊಂಡು ಹಿಮರಾಜನ ಮನೆಬಾಗಿಲಿಗೆ ಬಂದನು.

"ಯಾರು ನೀನು?" ಹಿಮರಾಜ ಕೇಳಿದ.

"ನಾನು ಶಿವ. ಒಬ್ಬ ಜೋಗಿ. ಭಿಕ್ಷೆ ಬೇಕು ನನಗೆ."

"ಸರಿ. ಭಿಕ್ಷೆ ನೀಡುತ್ತೇನೆ." ಹಿಮರಾಜನು ಬೊಗಸೆ ತುಂಬ ಮುತ್ತು ಒಂದು ಮಣ ಅಕ್ಕಿ ತಂದನು. ಆದರೆ ಭಿಕ್ಷಾಪಾತ್ರೆಯನ್ನು ಬುಡಮೇಲಾಗಿ ಹಿಡಿದು ಶಿವ ಹೇಳಿದ: "ಈ ಭಿಕ್ಷೆ ನನಗೆ ಬೇಡ, ನನ್ನ ಮನೆಯಲ್ಲಿ-ಮುತ್ತುರತ್ನಗಳ ರಾಶಿಯೇ ಇದೆ."

"ಹಾಗಾದರೆ ಏನು ಕೊಡಲಿ?"

"ಪಾರ್ವತಿಯನ್ನು ಕೊಡು. ನಾನು ಮದುವೆ ಮಾಡಿಕೊಳ್ಳಬೇಕೆಂದಿದ್ದೇನೆ."

"ಪಾರ್ವತಿಯೇ? ನಿರ್ಗತಿಕನೆ, ನನ್ನ ಮಗಳನ್ನು ಬೇಡಲು ನಿನಗೆ ನಾಚಿಕೆವೆನಿಸುವುದಿಲ್ಲವೆ?"

"ಏನೇ ಆಗಲಿ, ನಾನು ಪಾರ್ವತಿಯನ್ನು ಪಡೆಯದೆ ಬಿಡುವುದಿಲ್ಲ."

"ಹೌದೇ? ನೋಡೇ ಬಿಡುತ್ತೇನೆ ನಿನ್ನಲ್ಲಿ ಎಷ್ಟು ಶಕ್ತಿಯಿದೆಯಂತ?"

"ನೋಡಿಯೇ ಬಿಡು. ನೋಡಿ ಬೆರಗಾಗುತ್ತಿಯೇ" ಎಂದು ಶಿವನು

ಅಗ್ನಿಯನ್ನು ಸೃಷ್ಟಿಸಿದನು. ಧಗಧಗ ಉರಿಯುವ ಬೆಂಕಿಯಲ್ಲಿ ದೊಡ್ಡ ದೊಡ್ಡ ಗಿಡಮರಗಳನ್ನು ಹಾಕಿದನು. ಬೆಟ್ಟದಷ್ಟು ಬೆಂಕಿ ಹೊತ್ತಿತು. ಪಾರ್ವತಿಯ ಹೆಸರು ಹೇಳಿ ಶಿವನು ಆ ಬೆಂಕಿಗೆ ಹಾರಿದನು. ಅಗ್ನಿ ಹೊತ್ತಿತು. ಬಳಿಕ ಆರಿತು. ಆ ಧಗಧಗಿಸುವ ಕೆಂಡದ ಮೇಲೆ ಹೂವಿನ ಹಾಸಿಗೆಯ ಮೇಲೆ ಕೂತವರಂತೆ ಶಿವನು ಕೂತು ನಗುತ್ತಿದ್ದನು. ಕಿಂಚಿತ್ತೂ ಗಾಯವಾಗಿರಲಿಲ್ಲ.

"ಈಗಾದರೂ ನಂಬಿಕೆ ಬಂತೆ; ಇಷ್ಟು ತಪ ಸಾಕೋ ಅಥವಾ ಮತ್ತೆ ಮಾಡಿ ತೋರಿಸಲೇ?"

"ಬೇಡ ಶಿವನೆ. ಕ್ಷಮಿಸು ನನ್ನನ್ನು. ನಿನಗೆ ಪಾರ್ವತಿಯನ್ನು ನೀಡುತ್ತೇನೆ." ಅಚ್ಚರಿಯಿಂದ ಬೆಚ್ಚಿದ ಹಿಮರಾಜ ಹೇಳಿದ.

* * *

ಈ ಬಗೆಯಲ್ಲಿ ದೊಡ್ಡ ಅಗ್ನಿದಿವ್ಯವನ್ನು ಮಾಡಿ ಪಡೆದ ಪಾರ್ವತಿಯೊಂದಿಗೆ ಶಿವನು ಮರಳಿ ವಿಂಧ್ಯ ಪರ್ವತದ ತನ್ನ ಮನೆಗೆ ಮರಳಿದನು. ಅವನು ಆರು ತೋಟಗಳನ್ನು ನಿರ್ಮಿಸಿದ. ಆರು ತೋಟದಲ್ಲಿ ಆರು ಬಗೆಯ ಮನುಷ್ಯರ ಬೀಜಗಳನ್ನು ಬಿತ್ತಿದ. ಏಳನೇ ತೋಟದಲ್ಲಿ ಕಾಮದೇವನ (ಪ್ರೇಮದೇವ) ವಿಶೇಷ ತೋಟವಿತ್ತು. ಶಿವನ ತೋಟ ಅರಳುವ ಮೊದಲೇ ಭೂಮಿಗೆ ಬಡಿದ ಶಂಖದ ಗೂಟ ಮುರಿಯಿತು. ಭೂಮಿ ಕಂಪಿಸಲಾರಂಭಿಸಿತು. ಪ್ರಾಣಿಗಳೆಲ್ಲ ಬೆದರಿದವು. ಆಗ ಶಿವನು ಶ್ರೀಗಂಧದಮರ ಕಡಿದ. ಅದರ ಗೂಟವನ್ನು ಬಡಿಯಲು ಅವನು ಭೂಮಿಯ ಅಂಚಿಗೆ ಹೋಗಲು ಸಿದ್ಧನಾದ. ಹೋಗುವಾಗ ಪಾರ್ವತಿಗೆ ಹೇಳಿದ: "ಆರು ತೋಟದಲ್ಲಿರುವ ತರಕಾರಿಯನ್ನು ನೀನು ಬೇಕಾದರೆ ತಿನ್ನು, ಆದರೆ ಏಳನೇ ತೋಟದಲ್ಲಿರುವ ಕೆಂಪು ಪಲ್ಲೆ ತಿನ್ನಬೇಡ. ಅನರ್ಥವಾದೀತು."

ಆದರೆ ಪಾರ್ವತಿ ಮಾತು ಕೇಳಲಿಲ್ಲ. ಆರೂ ತೋಟದ ತರಕಾರಿ ತಿಂದು ಮುಗಿಯಿತು. ತುಂಬ ರುಚಿಯಾಗಿತ್ತದು. ಬಳಿಕ ಅವಳು ಏಳನೇ ತೋಟದ ಬಳಿಗೆ ಹೋಗಿ ಇಣುಕಿ ನೋಡಿದಳು. ಕೆಂಪು ತುರಾಯಿಯಿದ್ದ ಸುಂದರ ತರಕಾರಿಯನ್ನು ಕಂಡು ಬಾಯಿ ನೀರೂರಿತು. ಒಂದೇ ತುರಾಯಿ ತಿಂದರೆ ಏನಾಗುತ್ತದೆ? ಎಂದವಳು ತುರಾಯಿ ಮುರಿದು ಬಾಯಿಗಿಟ್ಟಳು. ಅದರಿಂದ ಪ್ರೇಮದೇವನಿಗೆ ಸಿಟ್ಟು ಬಂತು. ಅವನು ಅವಳ ಹೊಟ್ಟೆಯಲ್ಲಿ ರೋಗವನ್ನು ಹುಟ್ಟಿಸಿದ. ಪಾರ್ವತಿ ವೇದನೆಯಿಂದ ಹೊರಳಾಡಲಾರಂಭಿಸಿದಳು. "ಅಳು. ಹೀಗೇ ಅಳು, ನಿನ್ನ ಮಕ್ಕಳೂ ಹೀಗೆ ಅಳುತ್ತಾರೆ. ಎಲ್ಲ ಜನರು ಜಗಳಾಡುತ್ತಾರೆ. ಅರಚುತ್ತಾರೆ. ಕಿರಿಚುತ್ತಾರೆ. ಹೊಟ್ಟೆಗಾಗಿ ಅಲೆದಾಡುತ್ತಾರೆ. ಉದರ ಶೂಲೆಯಿಂದ ಬಳಲಿ ಬೆಂಡಾಗುತ್ತಾರೆ. ದುಃಖದ ಹೊರತು ಮನುಷ್ಯನಿಗೆ ಜನ್ಮವಿಲ್ಲ. ದುಃಖದಲ್ಲೇ ಮನುಷ್ಯ ಸಾಯುತ್ತಾನೆ" ಎಂದು ಶಾಪನೀಡಿ ಪ್ರೇಮದೇವ ಹೊರಟುಹೋದ.

ಪಾರ್ವತಿ ಭಯದಿಂದ ಕಂಪಿಸಿದಳು. ಉದರಶೂಲೆ ಏನು ಮಾಡಿದರೂ ನಿಲ್ಲಲಿಲ್ಲ. ಆಗವಳು ತನ್ನ ದೇಹದ ಕಲ್ಮಷವನ್ನು ತೆಗೆದು ಒಂದು ಹುಲಿ ತಯಾರಿಸಿದಳು. ಅದನ್ನು ಶಿವನ ಬಳಿಗೆ ಕಳಿಸಿದಳು. ಆದರೆ ಶಿವನು ಗಿಡದ ಅಂಟು ರಸದಿಂದ ಬೇಟೆ ನಾಯಿಯನ್ನು ನಿರ್ಮಿಸಿ, ಹುಲಿಯನ್ನು ಓಡಿಸಿದ.

ಮುಂದೆ ಹುಲಿ, ಹಿಂದೆ ನಾಯಿ ಓಡಲಾರಂಭಿಸಿದವು. ಹುಲಿ ಪ್ರಾಣ ಒತ್ತೆಯಿಟ್ಟು ಓಡಿ ಬಂದು ಪಾರ್ವತಿಯ ಎದುರಿಗೆ ನಿಂತಿತು. ಪಾರ್ವತಿಗೆ ಆ ನಾಯಿಯ ಬಗ್ಗೆ ಅಪಾರ ಸಿಟ್ಟು ಬಂತು. ಅವಳು ಬಲೆಯಲ್ಲಿದ್ದ ಕೊಳ್ಳಿ ತೆಗೆದು ಅದರ ಮುಸುಡಿಗೆ ಹೊಡೆದಳು. ಅದರಿಂದ ಆ ನಾಯಿಯ ಮೋರೆ ಸುಟ್ಟಿತು. ಈಗಲೂ ಆ ಕರಿಕಲೆ ನಾಯಿಯ ಮುಖದ ಮೇಲೆ ಕಾಣಿಸುತ್ತದೆ!

"ದರಿದ್ರ ನಾಯಿಗಳೇ, ನನ್ನ ಹುಲಿಯನ್ನು ಸತಾಯಿಸಿದರಲ್ಲ. ನನ್ನ ಉದರ ಶೂಲೆಯ ವಾರ್ತೆಯನ್ನು ಶಿವನ ಕಿವಿಗೆ ಹಾಕಲೂ ಬಿಡಲಿಲ್ಲ. ದರಿದ್ರ ನಾಯಿಗಳೇ, ಈಗ ನೀವೆಲ್ಲಿ ಹೊದರೂ ಕರಿಕೊಳ್ಳಿಯ ಪ್ರಸಾದವೇ ನಿಮಗೆ ಸಿಗುವುದು!"

ಆ ನಾಯಿಗಳು ಕಿರಿಚುತ್ತ ಕುಂಯ್ಗುಡುತ್ತ ಶಿವನ ಬಳಿಗೆ ಬಂದವು. ಅವು ಎಲ್ಲ ಸಂಗತಿಯನ್ನು ಶಿವನಿಗೆ ಅರುಹಿದವು. ಅದನ್ನು ಆಲಿಸಿ ಶಿವನೆಂದ 'ಹೆಂಗಸರ ಬುದ್ಧಿಗೆ ಏನು ಹೇಳಲಿ? ಯಾವುದು ಬೇಡ ಅಂತೇವೋ ಅದನ್ನೇ ಮಾಡುತ್ತಾರೆ. ಆದರೆ ಈಗಂತೂ ಮದುವೆ ಮಾಡಿಕೊಂಡಿದ್ದೇನೆ. ಮನೆಗಂತೂ ಹೋಗಿ ಎಲ್ಲ ಸರಿಪಡಿಸಲೇಬೇಕಲ್ಲ.'

ಬಳಿಕ ಅವನು ಮನೆಗೆ ಬಂದ, ಪಾರ್ವತಿಗೆ ಬಾಯಿಗೆ ಬಂದಂತೆ ಮಾತಾಡಿದ. ನಾಲ್ಕಾರು ಹೊಡೆತವನ್ನು ಹಾಕಿದ. ಕೊನೆಗೆ ಅವನಿಗೇ ಕೆಡಕೆನಿಸಿತು. 'ನಾನು ಈಗ ಹೋಗಿ ಔಷಧಿಯನ್ನು ತರುತ್ತೇನೆ' ಎಂದು ಹೇಳಿದ. ಶಿವನು ಹೊರಬಿದ್ದದ್ದೇ ತಡ. ಪ್ರೇಮದೇವನು ಬಾಗಿಲ ಮರೆಯಿಂದ ಇಣುಕಿ ಹಂಗಿಸಿದ. 'ತರಕಾರಿ ಕೆಂಪು ಪಲ್ಲೆ ರುಚಿಯಾಗಿತ್ತಲ್ಲವೇ? ತುಂಬ ಚೆನ್ನಾಗಿದೆ ಸಂಸಾರ! ಮೋಜೇ ಮೋಜು. ಹಾ! ಹಾ! ಹಾ!' ಎಂದು ಗಹಗಹಿಸಿ ನಕ್ಕು ಹೊರಟು ಹೋದ.

ಶಿವ ಔಷಧಿಗಾಗಿ ತನ್ನ ಗುರು ಜತಿಂಧರನ ಬಳಿಗೆ ಹೋದ. 'ಈ ಮೊದಲೆಂದೂ ಇಂಥ ರೋಗದ ಬಗ್ಗೆ ನಾನು ಕೇಳಲಿಲ್ಲ. ನನ್ನ ಗುರು ನಿಂಧನನ ಬಳಿಗೆ ಹೋಗು' ಎಂದು ಜತಿಂಧರ ಹೇಳಿದ. ಶಿವ ನಿಂಧನ ಗುರುವಿನ ಬಳಿಗೆ ಹೋದ. ಅವನು ಮಂತ್ರಿಸಿ ಔಷಧಿಯನ್ನು ನೀಡಿದ. ಶಿವನು ಅದನ್ನು ಸ್ವೀಕರಿಸಿ ಕೇಳಿದ 'ಗುರುಗಳೇ, ಪಾರ್ವತಿಗೆ ಜನಿಸುವ ಮಕ್ಕಳು ಹೇಗಿರುತ್ತವೆ?' ನಿಂಧನ ಗುರು ಹೇಳಿದ. ಮೊದಲನೇ ಮಗು ಹುಟ್ಟಿದ ಕೂಡಲೇ ಅವನನ್ನು ಒಯ್ದು ನದಿಯ ಬಳಿಯ ಜೋಪಡಿಯಲ್ಲಿಡಿ. ಅವನ ಬಳಿಯಲ್ಲೊಂದು ಶಂಖವಿರಿಸಿ.

ಸನಿಹದಲ್ಲೇ ಬೆಂಕಿ ಉರಿಯುತ್ತಿರಲಿ. ಅವನು ಬ್ರಾಹ್ಮಣನಾಗುತ್ತಾನೆ. ಎರಡನೇ ಮಗುವನ್ನು ಕಾಡಿನಲ್ಲಿರಿಸಿ, ಸನಿಹದಲ್ಲಿ ಕಟ್ಟಿಗೆಯ ಕಂಬವನ್ನು ಹುಗಿಯಿರಿ. ಸನಿಹದಲ್ಲಿ ಶಸ್ತ್ರವೂ ಇರಲಿ. ಅವನು ಕ್ಷತ್ರಿಯನಾಗುತ್ತಾನೆ. ಮೂರನೇ ಮಗುವನ್ನು ಮಣ್ಣಿನ ಜಗಲಿಯ ಮೇಲೆ ಇರಿಸಿ. ಸನಿಹದಲ್ಲಿ ತೆಂಗಿನಕಾಯಿ ಇರಲಿ, ಅವನು ವೈಶ್ಯನಾಗುತ್ತಾನೆ. ಉಳಿದ ಮಕ್ಕಳು ಜನಿಸಿದರೆ ಅವುಗಳನ್ನೂ ತೊರೆಯಿರಿ. ಕೇವಲ ಗೋಂಡ ಮಕ್ಕಳಿಗೆ ಮಾತ್ರ ಪಾರ್ವತಿ ಹಾಲು ಕುಡಿಸಿ ಬೆಳೆಸಲಿ.'

ಶಿವ ಔಷಧಿಯೊಂದಿಗೆ ಮರಳಿದ. ಔಷಧಿ ನೀಡಲಾಯಿತು. ಪಾರ್ವತಿ ಗುಣಮುಖಳಾದಳು. ಅವಳಿಗೆ ಹಲವು ಮಕ್ಕಳು ಜನಿಸಿದವು. ಮೊದಲಿನ ಮೂವರು ಮಕ್ಕಳನ್ನು ನಿಂಥನ ಗುರು ಹೇಳಿದಂತೆ ಮಾಡಿದರು. ಉಳಿದ ಅಗಣಿತ ಮಕ್ಕಳನ್ನು ಕಂಡು ಪಾರ್ವತಿ ನುಡಿದಳು. 'ರಾಮ ರಾಮಾ, ಈ ಸಾವಿರಾರು ಮಕ್ಕಳನ್ನು ನಾನೊಬ್ಬಳೇ ಹೇಗೆ ಸಾಕಲಿ?' ಬಳಿಕ ಶಿವನು ಎಷ್ಟೋ ಮಕ್ಕಳನ್ನು ಮಣ್ಣಿನಲ್ಲಿ ಹೂತುಹಾಕಿದನು. ಅವುಗಳೇ ಮುಂದೆ ವನದೇವರು ವನದೇವತೆಯರಾದವು.

* * *

ಒಮ್ಮೆ ಪಾರ್ವತಿಯ ಮಕ್ಕಳು ಕಾಡಿಗೆ ಹೋದರು. ಕಾಡಿನಲ್ಲಿ ಹೂತು ಹಾಕಿದ ಮಕ್ಕಳು ಕಿರುಚಲಾರಂಭಿಸಿದವು. ಉಳಿದ ಮಕ್ಕಳು ಹೆದರಿದುವು. ಅವು ಮನೆಗೆ ಧಾವಿಸಿ ಬಂದು ಕೇಳಿದವು 'ಅವರಾರು?'

'ಅವರೆಲ್ಲ ನಿಮ್ಮ ಬಂಧುಗಳು. ದೇವತೆಯರು, ಅವುಗಳಿಗೆ ಹಂದಿ, ಕುರಿ, ಕೋಳಿಯನ್ನು ಬಲಿನೀಡಿ ಅಂದರೆ ನಿಮಗೆ ಉಪದ್ರವ ಕೊಡಲಿಕ್ಕಿಲ್ಲ. ಇಲ್ಲದೆ ಹೋದರೆ ಅವು ನಿಮ್ಮನ್ನು ಕೊಂದೇಬಿಡುತ್ತವೆ.' ಆದರೆ ಅಷ್ಟರಲ್ಲಿ ಪಾರ್ವತಿಯ ಎಲ್ಲರಿಗಿಂತ ಕಿರಿಯ ಮಗಳು ಇದ್ದಳು. ಮೋಹಿನಿ. ಅವಳ ಮನದಲ್ಲಿ ಮೂಡಿದ್ದೇನೆಂದರೆ ದೇವತೆಗಳೂ ನನ್ನ ಬಂಧುಗಳು ಮತ್ತು ಗೋಂಡರೂ ನನ್ನ ಬಂಧುಗಳು, ಇವರ ನಡುವೆ ನಾನು ಸೌಹಾರ್ದತೆಯನ್ನು ತರುತ್ತೇನೆ. ಅನಂತರ ಅವಳು ಮೋಹದ ಹೂವುಗಳನ್ನು ಸಂಗ್ರಹಿಸಿ ಮದ್ಯವನ್ನು ತಯಾರು ಮಾಡಿದಳು. ಅದನ್ನು ತೆಗೆದುಕೊಂಡು ಕಾಡಿಗೆ ಹೋದಳು. ಒಂದೊಂದೇ ದೇವರ, ದೇವತೆಯರ ಹೆಸರು ಹೇಳಿ ಮದ್ಯವನ್ನು ಸಿಂಪಡಿಸಿದಳು. ಆ ಮದ್ಯದ ವಾಸನೆ ಹಾಗೂ ರುಚಿಯಿಂದ ಸಕಲ ದೇವತೆಗಳು ತೃಪ್ತರಾದವು. 'ನಾವು ಕಾಡಿನಲ್ಲಿರುತ್ತೇವೆ. ಗೋಂಡರು ಹಳ್ಳಿಯಲ್ಲಿರುತ್ತಾರೆ. ಅವರಿಲ್ಲಿಗೆ ಬಂದು ನಮಗೆ ಮದ್ಯ, ಕೋಳಿ, ಹಂದಿ ವಗೈರೆ ನೀಡಿದರೆ ನಾವು ಅವರ ಸಂರಕ್ಷಣೆ ಮಾಡುತ್ತೇವೆ. ಅವರ ಬಲವನ್ನು ಹೆಚ್ಚಿಸುತ್ತೇವೆ' ಎಂದವು.

ಅಂದಿನಿಂದ ಗೋಂಡರು ದೇವತೆಗಳಿಗೆ ಮದ್ಯ, ಬಲಿ ನೀಡುವ ಪದ್ಧತಿ ಶುರುವಾಯಿತು. ಆದರೆ ಇಲ್ಲಿಗೇ ಕಥೆ ಮುಗಿಯಲಿಲ್ಲ. ಒಮ್ಮೆ ಪಾರ್ವತಿ ಕಾಡಿನಂಚಿಗೆ

ಹೋದಳು. ಅವಳಿಗಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಅವಳ ಮೂವರು ಜಾಣ, ಬೆಳ್ಳಗಿನ ಮಕ್ಕಳು ಕಾಣಿಸಿದರು. ಅದನ್ನು ಕಂಡು ಕಪ್ಪು ಅನಾಗರಿಕ ಕಾಡು ಮಕ್ಕಳ ಪಾರ್ವತಿಗೆ ಕೋಪ ಬಂತು. ಬಿಳಿಯ ಮಕ್ಕಳನ್ನು ಅವಳು ಮುದ್ದಿಸುತ್ತಿದ್ದಳು. ಕಪ್ಪು ಮಕ್ಕಳಿಗೆ ಹೊಟ್ಟೆಗೆ ಹಾಕುತ್ತಿರಲಿಲ್ಲ. ಉಳಿದ ಮಕ್ಕಳು ಶಿವನ ಬಳಿಗೆ ಹೋದವು. 'ಮಕ್ಕಳೆ, ನೀವೇಕೆ ಮುನಿದಿದ್ದೀರಿ? ಏಕೆ ಅಳುತ್ತಿದ್ದೀರಿ?'

'ಅಪ್ಪ, ಅಮ್ಮ ಬಿಳಿಯ ಮಕ್ಕಳನ್ನು ಮಾತ್ರ ಪ್ರೀತಿಸುತ್ತಾಳೆ, ಮುದ್ದಾಡುತ್ತಾಳೆ, ಊಟ ನೀಡುತ್ತಾಳೆ, ಹಾಲು ಕುಡಿಸುತ್ತಾಳೆ, ನಮ್ಮನ್ನು ಹೊಡೆಯುತ್ತಾಳೆ. ಊಟ ಸಹ ಕೊಡುವುದಿಲ್ಲ. ಆ ಮಕ್ಕಳು ನಮ್ಮನ್ನು ಪ್ರತಿದಿನ ಬಯ್ಯುತ್ತಾರೆ, ಹೊಡೆಯುತ್ತಾರೆ.'

ಶಿವನಿಗೆ ಸಿಟ್ಟು ಬಂತು. ಏನು ಮಾಡಲಿ ಇವಳಿಗೆ? ಆ ಮಕ್ಕಳನ್ನು ನೋಡಬೇಡವೆಂದು ನಿಂಧನ ಗುರು ಹೇಳಿದರೂ ಕೇಳುತ್ತಿಲ್ಲವಲ್ಲ. ನನಗೊಂದು ಮಾತೂ ಹೇಳದೆ ಏಕಾಕಿ ಅಲೆದಾಡುತ್ತಾಳೆ. ಏನು ಮಾಡಲಿ? ಇವಳನ್ನು ಬಿಟ್ಟು ಬಿಡಲೇ? ಹೆಂಡತಿಯನ್ನು ತೊರೆದರೆ ಮಕ್ಕಳ ಗತಿಯೇನು? ಸಂಸಾರ ಸಾಗಿಸುವುದು ಹೇಗೆ? ಶಿವ ಯೋಚನೆಯಲ್ಲಿ ಮುಳುಗಿದ. ಅವನು ಪಾರ್ವತಿಯನ್ನು ಕರೆದು ಹೇಳಿದ: 'ಇಂದಿನಿಂದ ವಿಂಧ್ಯ ಪರ್ವತ ದಾಟಿ ಹೋದರೆ ಎಚ್ಚರ. ಕಪ್ಪು ಮಕ್ಕಳನ್ನು ನೀನೆ ಸಾಕಿ ಸಲಹಬೇಕು.'

ಬಳಿಕ ಕಪ್ಪು ಮಕ್ಕಳಿಗೂ ಹೇಳಿದ: 'ಮಕ್ಕಳೆ, ಇಂದಿನಿಂದ ನೀವೆ ಕಾಡಿನ ರಾಜರು. ಸುಖವಾಗಿ ಬಾಳಿ ಬದುಕಿ. ಎಂದೂ ಕಾಡು ತೊರೆಯದಿರಿ. ನೀವು ನಿಪುಣ ಬಿಲ್ಲುಗಾರರಾಗಿರುತ್ತೀರಿ.' ಅಂದಿನಿಂದ ಗೋಂಡರು, ಭಿಲ್ಲರು, ಕಾತಕರಿ ಮುಂತಾದವರು ಕಾಡಿನ ರಾಜರಾದರು.

(ಗೋಂಡಾ ಜಾನಪದ ಕಥೆಯನ್ನು ಆಧರಿಸಿ)
ಸಾಧನಾ, ೨೨ ಅಕ್ಟೋಬರ್ ೧೯೭೭

* * * *

೧೧. ಬೀಜಮಂತ್ರದ ಕಥೆ

ಶಿವ–ಪಾರ್ವತಿ ಇಬ್ಬರೂ ಮಾತಾಡುತ್ತ ಕೂತಿದ್ದರು. ಪಾರ್ವತಿ ಕೇಳಿದಳು: 'ನಾನು ಈವರೆಗೆ ಎಷ್ಟು ಬಾರಿ ಜನಿಸಿದೆ?'

'ಹತ್ತು.'

'ಮತ್ತೆ ನೀವು?'

'ಒಂದೇ ಒಂದು ಮುಂದುವರಿದೆ. ನನಗೆ ಸಾವಿಲ್ಲ. ನಾನು ಅಮರ.'

'ಹಾಗಾದರೆ ನಾನೇ ಏಕೆ ಹತ್ತು ಬಾರಿ ಸಾಯಬೇಕು? ನೀವು ಅಮರ ಮತ್ತು ನಾನು ಮರಣ ಇರುವವಳು. ಹೀಗಿದ್ದು ನಮ್ಮ ಜೋಡಿ ಹೇಗೆ ಕೂಡಿತು?'

'ನೀನು ಹೇಳಿದ್ದು ಸತ್ಯ. ಹತ್ತೂ ಜನ್ಮದಲ್ಲಿ ನೀನೆ ನನ್ನ ಸತಿಯಾದೆ. ನಮ್ಮಿಬ್ಬರ ಜೋಡಿ ಏನು ಮಾಡಿದರೂ ಬೇರೆಯಾಗಲಾರದು.'

ಆದರೆ ಪಾರ್ವತಿಗೆ ಸಮಾಧಾನವಾಗಲಿಲ್ಲ. 'ನೀವಷ್ಟೇ ಅಮರ, ನಾನು ಮಾತ್ರ ಸಾಯುವುದು ಇದೆಂಥ ನ್ಯಾಯ? ನೀವು ಅಮರರಾಗಿದ್ದು ಹೇಗೆ?'

'ನನಗೆ ಬೀಜಮಂತ್ರ ಬರುವುದರಿಂದ ನಾನು ಅಮರನಾದೆ.'

'ಹಾಗಾದರೆ ನನಗೂ ಬೀಜಮಂತ್ರವನ್ನು ಕಲಿಸಿ ನಾನೂ ಅಮರಳಾಗುತ್ತೇನೆ ನಿಮ್ಮಂತೆ.'

* * *

ಶಿವ ಬುದ್ಧಿ ಮಾತು ಹೇಳಿನೋಡಿದ. ಆದರೆ ಪಾರ್ವತಿ ಹಠ ಬಿಡಲಿಲ್ಲ. ಪ್ರತಿನಿತ್ಯ ಕಿರಿಕಿರಿ, ಪ್ರತಿನಿತ್ಯ ಜಗಳ, ಪ್ರತಿನಿತ್ಯ ಪಾತ್ರೆಯ ಸದ್ದು ಮತ್ತು ಅಳು. ಕೊನೆಗೆ ಶಿವ ಸೋಲಬೇಕಾಯಿತು. 'ಸರಿ ಹಾಗಾದರೆ. ಆದರೆ ಯಾರ ಕಿವಿಗೂ ಇದರ ಒಂದಕ್ಷರವೂ ಬೀಳಬಾರದು ತಿಳಿಯಿತೆ? ಇಲ್ಲದೆ ಹೋದರೆ ಅವನೇ ಅಮರನಾಗಿಬಿಡುತ್ತಾನೆ.'

'ಹಾಗಾದರೆ ನೀವು ಜೋರಾಗಿ ಗರ್ಜಿಸಿ, ಅದನ್ನು ಕೇಳಿ ಜೀವ ಜಂತು, ಪಶು ಪಕ್ಷಿ, ಮನುಷ್ಯರೆಲ್ಲರೂ ಕಾಡು ಬಿಟ್ಟು ಓಡಿ ಹೋಗಲಿ.' ಪಾರ್ವತಿ ಸೂಚಿಸಿದಳು.

ಶಿವನಿಗೆ ಈ ಮಾತು ಒಪ್ಪಿಗೆಯಾಯಿತು. ಅವನು ಜೋರಾಗಿ ಸಿಂಹನಾದ ಮಾಡಿದ. ಅದನ್ನು ಕೇಳಿ ಹುಲಿ, ಸಿಂಹ, ತೋಳ, ನರಿ, ಮೊಲ, ಗರುಡ,

ಗಿಡುಗ, ಹದ್ದು, ಕಾಗೆ, ಗುಬ್ಬಿ, ಗಿಳಿ, ಹಾವು, ಕ್ರಿಮಿ–ಕೀಟಗಳು– ಎಲ್ಲವೂ ನಿಜಕ್ಕೂ ದೂರ ದೂರ ಓಡಿಹೋದವು. ಬಳಿಕ ಒಂದು ಗುಹೆಯ ತೀರ ಆಳದಲ್ಲಿ ಕೂತ ಶಿವನು ಮೆಲುದನಿಯಲ್ಲಿ ಪಾರ್ವತಿಗೆ ಬೀಜಮಂತ್ರದ ಕಥೆ ಹಾಗೂ ಆ ಮಂತ್ರವನ್ನು ಹೇಳಲಾರಂಭಿಸಿದ.

* * *

ಮೊದಲಿಗೆ ಕಥೆ ಶುರುವಾಯಿತು. ದಿನಗಳು ಉರುಳಿದವು, ತಿಂಗಳುಗಳು ಉರುಳಿದವು. ಆದರೂ ಕಥೆ ಮುಂದುವರಿದಿತ್ತು. ಹಸಿವೆಯಿಲ್ಲ, ನೀರಡಿಕೆಯಿಲ್ಲ, ನಿದ್ದೆಯಿಲ್ಲ. ಪಾರ್ವತಿ ಎದುರಿಗೆ ಕೂತು ಹುಂ ಹುಂ ಎಂದು ಆಲಿಸುತ್ತಿದ್ದಳು. ಆದರೆ ಕೊನೆಗೆ ಕಥೆ ಕೇಳುತ್ತ ಕೇಳುತ್ತ ಪಾರ್ವತಿಗೆ ನಿದ್ದೆ ಬಂತು.

ಅವಳಿಗೆ ನಿದ್ದೆ ಹತ್ತಿದ ಸರಿಯಾಗಿ ಅದೇ ವೇಳೆಗೆ ಗಿಳಿಯ ಮರಿ ಮೊಟ್ಟೆಯಿಂದ ಹೊರಗೆ ಬಿದ್ದಿತ್ತು. ಅದರ ಕಿವಿಗೆ ಈ ಕಥೆ ಬಿತ್ತು. ಅದು 'ಹುಂ'ಕಾರ ಹಾಕಲಾರಂಭಿಸಿತು. ಯಥಾವತ್ತಾಗಿ ಪಾರ್ವತಿಯಂತೆಯೇ ಕಥೆ ಮುಗಿದಾಗ ಪಾರ್ವತಿ ಗಾಢವಾಗಿ ಮಲಗಿದ್ದು ಶಿವನ ಗಮನಕ್ಕೆ ಬಂತು; ಹಾಗಾದರೆ ಹುಂಕಾರ ಹಾಕುತ್ತಿರುವುದು ಯಾರು? ಶಿವನು ಮರಳಿ ಸಿಂಹನಾದ ಹಾಕಿದ. ಅದೇ ಕಾಲಕ್ಕೆ ಆ ಮರಿ ಹಾಗೂ ಕಣಜಿರಿಗೆ ಹುಳದ ಮರಿಗಳು ಹೊರಬಿದ್ದವು.

ಶಿವನು ಸಿಟ್ಟಿನಿಂದ ಆ ಮರಿಯ ಕೊಕ್ಕು ಮುರಿದನು. ಗೋಣು ಕತ್ತರಿಸಿದನು. ಆದರೆ ಸತ್ತ ಅದು ಮತ್ತೆ ಜೀವಂತವಾಯಿತು. ಆದರೆ ಕೊಕ್ಕು ತಿರುಚಿದ್ದರಿಂದ ಕೆಂಪಾಯಿತು. ಕೊರಳ ಸುತ್ತ ಕೆಂಪುರೇಖೆ ಮೂಡಿತು. ಕಣಜಿರಿಗೆ ಹುಳ ಮತ್ತೆ ಜೀವಂತವಾಯಿತು. ಆದರೆ ಅದರ ಸೊಂಟ ಕೊಯ್ದ ಭಾಗ ನುಣುಪಾಯಿತು. ಕಣಜಿರಿಗೆ ಹುಳದ ತಲೆ ಮತ್ತು ಬಾಲ ಕಠಿಣವಾಗಿರುತ್ತದೆ. ನಡುವಿನ ಭಾಗ ಮಾತ್ರ ನಾಜೂಕಾಗಿರುತ್ತದೆ. ಅದೂ ಶಿವ ಮೊರೆಯಿಟ್ಟಿದ್ದರಿಂದ! ಅಂದಿನಿಂದ ಬೀಜಮಂತ್ರದ ಕಥೆಯನ್ನು ಅಪೂರ್ಣವಾದರೂ ಸರಿಯೇ ಕೇಳಿದ್ದರಿಂದ ಈ ಎರಡು ಜೀವಗಳು ಬೇಗ ಸಾಯುವುದಿಲ್ಲ.

* * *

ಶಿವನ ಭೀತಿಯಿಂದ ಗಿಳಿಯು ಹಾರಿ ಹೋಗಲು ಪ್ರಯತ್ನಿಸಿತು. ಶಿವ ಅದರ ಬೆನ್ನು ಹತ್ತಿದ. ಕಾಡಿನ ಅಂಚಿಗೆ ಪುರಪುರಿ ಎಂಬ ಹೊಳೆ ಹರಿಯುತ್ತಿತ್ತು. ಅದರ ದಡದ ಮೇಲೆ ವ್ಯಾಸ ಮಹರ್ಷಿಯ ಆಶ್ರಮವಿತ್ತು. ವ್ಯಾಸಮುನಿ ಹೊಳೆಯಲ್ಲಿ ಸ್ನಾನ ಮಾಡುತ್ತಿದ್ದ. ಆಶ್ರಮದ ಅಂಗಳದ ಕಸವನ್ನು ಅವನ ಹೆಂಡತಿಯು ಹೊಡೆಯುತ್ತಿದ್ದಳು. ಕಸ ಹೊಡೆಯುತ್ತಿರುವಾಗ ಅವಳಿಗೆ ಆಕಳಿಕೆ ಬಂತು. ಅದೇ ಕಾಲಕ್ಕೆ ಅವಳ ತೆರೆದ ಬಾಯಿಯ ಮೂಲಕ ಗಿಳಿಯು ಒಳಗೆ ಸೇರಿತು. ಅವಳ ಉದರವನ್ನು ಸೇರಿ ಒಳಗೆ ಕೂತಿತು.

ಶಿವನು ವ್ಯಾಸನಿಗೆ ಹೇಳಿದ : 'ನಿಮ್ಮ ಆಶ್ರಮದಲ್ಲಿ ಒಬ್ಬ ಕಳ್ಳ ಅವಿತಿದ್ದಾನೆ. ಅವನನ್ನು ನನಗೆ ಒಪ್ಪಿಸಿ, ಇಲ್ಲದಿದ್ದರೆ ನಾನು ನಿಮ್ಮನ್ನು ಕೊಲ್ಲುತ್ತೇನೆ.'

ವ್ಯಾಸಮುನಿ ನೀರಿನಿಂದ ಹೊರಗೆ ಬಂದ. ಅವನು ಶಿವನನ್ನು ಮನದುಂಬಿ ಪೂಜಿಸಿದ. ಅವನ ಎದುರಿಗೆ ಸುಗ್ರಾಸ ಭೋಜನವನ್ನಿಟ್ಟ. ಶಿವನು ಅದನ್ನು ಸೇವಿಸಿದ ಬಳಿಕ ವ್ಯಾಸನು ಅವನ ಪಾದಕ್ಕೆ ಎರಗಿದ. 'ಶಿವನೆ, ಆ ಕಳ್ಳನನ್ನು ನಿಮಗೆ ಹೇಗೆ ಹಿಂದಿರುಗಿಸಲಿ? ನನ್ನ ಪತ್ನಿ ಅದಕ್ಕೆ ಅಭಯ ನೀಡಿದ್ದಾಳೆ. ನನ್ನನ್ನು ಪೊರೆಯಿರಿ ಇಲ್ಲವೇ ತೊರೆಯಿರಿ. ಬೇಕಾದರೆ ನನ್ನ ರುಂಡವನ್ನೇ ಚೆಂಡಾಡಿ.'

ವ್ಯಾಸನ ಈ ಭಕ್ತಿಯನ್ನು ಕಂಡು ಶಿವ ಕರಗಿದ. 'ಸರಿ ಈ ಗಿಳಿಯು ನಿಮ್ಮ ಮಗನಾಗಿ ಜನಿಸುವನು. ಅವನಿಗೆ ಶುಕಮುನಿ ಎಂದು ಹೆಸರಿಸಿ. ಅವನು ಚಿರಂಜೀವಿಯಾಗುವನು. ಯೋಗಿಗಳಲ್ಲೇ ಅಗ್ರಗಣ್ಯನಾಗುವನು.'

ವ್ಯಾಸನಿಗೆ ಮಕ್ಕಳಿರಲಿಲ್ಲ. ಈ ಆಶೀರ್ವಾದದಿಂದ ಅವನು ಸಂತೋಷದಿಂದ ಕುಣಿಯಲಾರಂಭಿಸಿದನು.

* * *

ಇತ್ತ ಶಿವ ಮರಳಿದ. ಪಾರ್ವತಿ ಮುಖ ಮುದುಡಿಕೊಂಡು ಬಾಗಿಲಲ್ಲಿ ಕೂತಿದ್ದಳು. ಅವಳಿಗೆ ಹೇಳಿದ. 'ಮೂರ್ಖಳೆ, ನಿನ್ನ ಅಪರಾಧ ಎಷ್ಟಂತ ಸಹಿಸಲಿ? ಅಮರ ಪದ ಬೇಕೆಂದು ನನಗೆ ಬೀಜಮಂತ್ರ ಹೇಳಲು ಬಲವಂತ ಮಾಡಿದೆ. ಕೊನೆಗೆ ಅಮರಪದ ಶುಕಮುನಿ ಗಿಟ್ಟಿಸಿದ. ಈಗ ನಿನಗೂ ನನಗೂ ಯಾವ ಸಂಬಂಧವೂ ಇಲ್ಲ. ಹೋಗು. ನನ್ನ ಮನೆಯಿಂದ ಹೊರಟುಹೋಗು.'

'ನಾನೆಲ್ಲಿಗೆ ಹೋಗಲಿ?' ಪಾರ್ವತಿ ಕಕ್ಕುಲತೆಯಿಂದ ಕೇಳಿದಳು.

'ನಿನ್ನ ಅಪ್ಪನ ಮನೆಗೆ ಹೋಗು.'

ಪಾರ್ವತಿ ಅಪ್ಪನ ಬಳಿಗೆ ಹೋದಳು. ಆದರೆ ಹಿಮರಾಜನು ಅವಳಿಗೆ ಆಸರೆಯನ್ನು ನೀಡಲಿಲ್ಲ. 'ಗಂಡನ ಮನ ಒಲಿಸಲು ಬರದವಳು ಎಂಥ ಹೆಂಡತಿ? ಇಂಥ ಮೂರ್ಖ ಮಗಳಿಗೆ ನನ್ನ ಮನೆಯಲ್ಲಿ ಆಶ್ರಯವಿಲ್ಲ' ಎಂದನು.

ಬಳಿಕ ಪಾರ್ವತಿ ತನ್ನ ಜ್ಯೇಷ್ಠ ಪುತ್ರನಾದ ಖರಮುಖ ಉರ್ಫ್ ಕಾರ್ತಿಕೇಯನ ಬಳಿಗೆ ಹೋದಳು. ಆದರೆ ಅವನೂ ಹೇಳಿದ : 'ನನಗೆ ಮಹಿಳೆಯರು ಇಷ್ಟವೇ ಇಲ್ಲ. ನನ್ನ ಅಪ್ಪನಂಥ ಪತಿ ಸಿಕ್ಕರೂ ಅಭಾಗ್ಯಳಾದ ಮೇಲೆ, ಅವಳು ತಾಯಿಯಾಗಿದ್ದರೂ ಅವಳಿಗೆ ನನ್ನ ಮನೆಯಲ್ಲಿ ಅವಕಾಶವಿಲ್ಲ. ನೀನು ನಿನಗೆ ಇಷ್ಟವಾದ ಕಡೆಗೆ ಹೋಗು.'

* * *

ಬಳಿಕ ಪಾರ್ವತಿ ವಿಂಧ್ಯ ಪರ್ವತಕ್ಕೆ ಬಂದು ಒಂದು ಗುಡಿಸಲು ಕಟ್ಟಿಕೊಂಡು

ಅಲ್ಲಿ ವಾಸಿಸಲಾರಂಭಿಸಿದಳು. ರಾತ್ರಿ ಹುಲಿ ಸಿಂಹಗಳು ಗರ್ಜಿಸುತ್ತಿದ್ದವು. ಅವಳು ಹೆದರುತ್ತಿದ್ದಳು. ಜೊತೆಗೊಬ್ಬ ಗಂಡಸು ಇರಲಿ ಎಂಬ ಕಾರಣಕ್ಕೆ ಅವಳು ದೇಹದ ಕಲ್ಮಶವನ್ನು ಸಂಗ್ರಹಿಸಿ ಒಬ್ಬ ಬಾಲಕನನ್ನು ನಿರ್ಮಿಸಿದಳು. ಅವನ ಹೆಸರು ಗಣಪತಿ. ಅನಂತರ ಅವನನ್ನು ಬಾಗಿಲಲ್ಲಿ ಕೂರಿಸಿ ಗುಡಿಸಲಿನಲ್ಲಿ ಕೂತು ತಪ ಮಾಡಲಾರಂಭಿಸಿದಳು. ಪತಿಯ ಪ್ರೀತಿ ಮರಳಿ ಸಿಗಲೆಂದು ಪ್ರಾರ್ಥನೆ ಮಾಡಲಾರಂಭಿಸಿದಳು.

ಪಾರ್ವತಿ ಮನೆಯಿಂದ ಹೊರಬಿದ್ದ ಬಳಿಕ ಶಿವನ ಕೋಪ ಕ್ರಮೇಣ ಕಡಿಮೆಯಾಗಲಾರಂಭಿಸಿತು. ಅವನಿಗೆ ಏಕಾಕಿ ಎನಿಸತೊಡಗಿತು. ತಾನು ಮಾಡಿದ ಕಾರ್ಯದ ಬಗ್ಗೆ ಪಶ್ಚಾತ್ತಾಪವೆನಿಸಿತು. ಹಣೆ ಹಣೆ ಬಡಿದುಕೊಂಡು ಅವನು ಅಳಲಾರಂಭಿಸಿದ. ಅತ್ತು ಅತ್ತು ಪ್ರಜ್ಞೆ ತಪ್ಪಿ ಬಿದ್ದ. ಅವನು ಹನ್ನೆರಡು ವರ್ಷಗಳ ಕಾಲ ಕೊರಡಿನಂತೆ ಅಂಗಾತ ಬಿದ್ದುಕೊಂಡೇ ಇದ್ದ. ಹನ್ನೆರಡು ವರ್ಷಗಳ ಬಳಿಕ ಅವನು ಎಚ್ಚರಗೊಂಡ. ಪಾರ್ವತಿ ಪಾರ್ವತಿ ಎಂದು ಕೂಗಿ ಕರೆಯಲಾರಂಭಿಸಿದ. ಆದರೆ ಅವನಿಗೆ ಉತ್ತರ ಕೊಡಲು ಒಳಗೆ ಯಾರಿದ್ದಾರೆ? ಅವನು ಸಿಟ್ಟಿನಿಂದ ತನ್ನ ಡಮರುಗವನ್ನು ನೆಲಕ್ಕೆ ಅಪ್ಪಳಿಸಿದ. ಆಗ ಭೂಮಾತೆ ಗೋವಿನ ರೂಪವನ್ನು ಧರಿಸಿ ಬಂದಳು. 'ಶಿವನೆ ಇಷ್ಟೇಕೆ ಕೋಪಿಸಿಕೊಂಡಿದ್ದಿಯೆ.'

'ಪಾರ್ವತಿ ಎಲ್ಲಿ ಹೋದಳು?'

'ಅವಳು ವಿಂಧ್ಯದ ಒಂದು ಗುಹೆಯಲ್ಲಿದ್ದಾಳೆ.'

'ಹೌದೇ? ಹಾಗಾದರೆ ಅಲ್ಲಿಗೇ ಹೋಗುತ್ತೇನೆ.' ಶಿವ ಕೂಡಲೇ ಎದ್ದು ಹೊರಟ. ಗೋವು ಗುಡಿಸಲನ್ನು ತೋರಿಸಿತು. ಬಳಿಕ ಅದೃಶ್ಯವಾಯಿತು. ಶಿವ ಒಳಗೆ ಹೋಗಲು ಮುಂದಾದ ಆದರೆ ಗಣಪತಿ ಅಡ್ಡಗಟ್ಟಿದ. 'ನನ್ನ ಅಮ್ಮ ತಪಸ್ಸು ಮಾಡುತ್ತಿದ್ದಾಳೆ. ಅವಳಿಗೆ ತೊಂದರೆ ಕೊಟ್ಟರೆ ನೋಡು.'

'ಹೋಗೋ ಹೋಗು, ನೀನಾರು ನನಗೆ ಹೇಳುವವನು?' ಎಂದು ಶಿವನು ಶಸ್ತ್ರದಿಂದ ಅವನ ರುಂಡವನ್ನು ಕತ್ತರಿಸಿದನು.

ಬಳಿಕ ಶಿವ ಗುಡಿಸಲಿನೊಳಗೆ ಹೋದನು 'ಪಾರ್ವತಿ' ಎಂದು ಕರೆದನು. ಪಾರ್ವತಿ ಕಣ್ಣು ತೆರೆದಳು. ಅವಳಿಗೆ ನಂಬುವುದೇ ಆಗಲಿಲ್ಲ. 'ನನ್ನನ್ನು ಮನೆಯಿಂದ ಹೊರಗೆ ದಬ್ಬಿದಿರಿ. ಈಗೇಕೆ ಇಲ್ಲಿ ಬಂದು ನಿಂತಿದ್ದೀರಿ?' ಎಂದು ಕೇಳಿದಳು.

'ಛೆ, ನಾನೆಲ್ಲಿ ನಿನ್ನನ್ನು ಹೊರದಬ್ಬಿದೆ?'

'ನೀನೆ ಹೊರದಬ್ಬಿದ್ದು; ಆದರೆ ಗಣಪತಿ ಎಲ್ಲಿ ಕಾಣಿಸುತ್ತಿಲ್ಲವಲ್ಲ?'

'ನಾನವನನ್ನು ಕೊಂದುಹಾಕಿದೆ.'

'ಅಯ್ಯೋ ದೇವರೆ!' ಎಂದು ಪಾರ್ವತಿ ಗೋಗರೆದು ಅಳಲಾರಂಭಿಸಿದಳು.

'ಪಾರ್ವತಿ, ಅಳಬೇಡ' ಎಂದು ಶಿವನು ಜಟೆಯ ಒಂದು ಕೂದಲು

ಕಿತ್ತನು. ಅದರಿಂದ ಒಬ್ಬ ರಾಕ್ಷಸ ಪ್ರತ್ಯಕ್ಷನಾದ. ಅವನಿಗೆ ಶಿವ ಹೇಳಿದ, 'ಹೋಗು ಅದೇ ತಾನೇ ಜನಿಸಿದ ಒಂದು ಮಗುವಿನ ತಲೆಯನ್ನು ತೆಗೆದುಕೊಂಡು ಬಾ. ಆದರೆ ಯಾವ ತಾಯಿ ತನ್ನ ಮಗುವಿನ ಕಡೆಗೆ ಬೆನ್ನು ಮಾಡಿ ಮಲಗಿರುತ್ತಾಳೆ. ಅಂಥ ಮಗುವಿನ ತಲೆಯೇ ಬೇಕು, ತಿಳಿಯಿತೆ?'

* * *

ರಾಕ್ಷಸ ಹುಡುಕುತ್ತ ಹೊರಟ. ಹಲವಾರು ಮಕ್ಕಳು ಬಾಣಂತಿ ತಾಯಂದಿರನ್ನು ನೋಡಿದ. ಎಲ್ಲರೂ ಮಕ್ಕಳನ್ನು ಅಪ್ಪಿಕೊಂಡೇ ಮಲಗಿದ್ದರು. ಆದರೆ ಒಂದು ಹೆಣ್ಣು ಆನೆ ಮಾತ್ರ ಮರಿಯ ಕಡೆಗೆ ಬೆನ್ನು ಮಾಡಿ ಮಲಗಿತ್ತು. ರಾಕ್ಷಸ ಆ ಆನೆ ಮರಿಯ ತಲೆಯನ್ನು ಕತ್ತರಿಸಿದ. ಮತ್ತು ಶಿವನಿಗೆ ತಂದು ಒಪ್ಪಿಸಿದ. ಶಿವನು ಅದನ್ನು ದೇಹಕ್ಕೆ ಜೋಡಿಸಿದ. ಗಣಪತಿ ಜೀವಂತನಾದ.

'ನಡೆಯಿರಿ ಈಗ ಹೋಗೋಣ ಮನೆಗೆ' ಎಂದ ಶಿವ.

'ನಾನು ಬರಲಾರೆ ಬೇಕಾದರೆ ನೀವೇ ಅಲ್ಲಿ ಹೋಗಿ ನಿಲ್ಲಿ.'

'ನಿಲ್ಲುತ್ತೇನೆ. ಮತ್ತೇನು ಮಾಡುವದು?' ಶಿವ ನುಡಿದ.

(ಗೋಂಡರ ಜಾನಪದ ಕಥೆಯನ್ನು ಆಧರಿಸಿ)
ಸಾಧನಾ, ೨೮, ಜನವರಿ ೧೯೫೬

* * * *

೧೨. ಅನ್ನವೇ ಪೂರ್ಣ ಬ್ರಹ್ಮ

ಇದು ಲೇಖನವಲ್ಲ. ಏಕೆಂದರೆ ನನ್ನ ಎದುರಿಗೆ ಅನ್ನಬ್ರಹ್ಮನ ವಿಶಾಲ ಮತ್ತು ಸೂಕ್ಷ್ಮ, ಸುಂದರ ಮತ್ತು ವಿಕಟ, ವಿವಿಧಾಕಾರದ, ವಿವಿಧ ರುಚಿಯ, ಮಧುರದಿಂದ ಹಿಡಿದು ಉಪ್ಪು, ಒಗರು, ಹುಳಿ, ಕಹಿ–ಇಂಥ ರಸಭರಿತವಾದ ಮತ್ತು ಬಿಳಿ, ಕರಿ, ಕಂದು, ಕೆಂಪು, ಹಸಿರು ಬಣ್ಣದಿಂದ ಕೂಡಿದ ರೂಪ ತೇಲುತ್ತಿದೆಯೋ ಅದನ್ನು ಬಣ್ಣಿಸಲು ಶಬ್ದಗಳೇ ಸಾಲುವದಿಲ್ಲ. ಹಾಡಿನಲ್ಲೂ ವ್ಯಕ್ತಮಾಡಲು ಬರುವದಿಲ್ಲ. ನಿತ್ಯದ ರೂಢಿಯಲ್ಲಿರುವದು ಅದನ್ನು ಬಿಟ್ಟರೆ ಬೇರೊಂದಿಲ್ಲ. ತಿನ್ನುವವನಿಗೂ ಸಹ. ಅಂದಾಗ ಅನ್ನ ಬೇಯಿಸುವವನಿಗೆ ಅದು ಹೇಗೆ ಹಠಮಾರಿ ಮಗುವಿನಂತೆ ಮುನಿದು ಕೂತಿರುತ್ತದೆ ಅನ್ನುವದು ಬೇರೆ ಹೇಳಬೇಕೆ? ಅಡುಗೆ ಮಾಡುವದು ಮಗುವಿನಂತೆ ಎಷ್ಟು ಮೋಹಕವೋ ಅಷ್ಟೇ ದಣಿಸುವಂತಹುದು. ಆದರೆ ಇದರ ಹವ್ಯಾಸ ಇರುವವರಿಗೆ ಇದರಂತಹ ಮನರಂಜನೆ ಬೇರೊಂದಿಲ್ಲ. ಆದರೆ ಜಗತ್ತಿಗೆ ಅನ್ನದಂತಹ ಭೀತಿ ಬೇರೊಂದಿಲ್ಲ. ಭಾರತೀಯರು ಈ ಭೀತಿಯನ್ನು ಸಂಪೂರ್ಣವಾಗಿ ಅರಿತಿದ್ದಾರೆ. 'ಅನ್ನ'ದ ಅರ್ಥ 'ಯಾವುದನ್ನು ನಾವು ತಿನ್ನುತ್ತೇವೋ ಅದು ಮತ್ತು ಯಾವುದು ನಮ್ಮನ್ನು ತಿನ್ನುತ್ತದೆಯೋ ಅದು' ಎಂದೇ ವೇದಕಾಲದಿಂದ ಮಾಡಲಾಗಿದೆ. ಅದರ ಮುಂದೆ ಫುಡ್ (Food) ಎಂಬ ಶಬ್ದ ತೀರ ಪೇಲವ ಅನಿಸುತ್ತದೆ. ಅನ್ನವಿದು ಜೀವನವೂ ಹೌದು, ಸಾವೂ ಹೌದು. ಈ ಸಂಕೇತವನ್ನು ಒಮ್ಮೆ ಅರಿತ ಬಳಿಕ ಅನ್ನದ ಸುತ್ತಲೂ ಇರುವ ಅಪಾರ ಭ್ರಮೆ ಚಾಲ, ಕಲಾಕುಸುರಿ, ಭಯಗಂಡ, ಸಮರ್ಪಣೆ ಭಾವ, ರಸಯುಕ್ತ, ನಾನಾ ವನಸ್ಪತಿ ಹಾಗೂ ಪ್ರಾಣಿಗಳಿಂದ ತುಂಬಿದ ರೂಪಸೃಷ್ಟಿಯನ್ನು ಎಂದಿನ ಸ್ವರೂಪದಲ್ಲಿ ಅನಾವರಣಗೊಳಿಸುವುದು ಸಾಧ್ಯವೇ ಇಲ್ಲ. ನೋಡುನೋಡುವಷ್ಟರಲ್ಲಿ ಸಂಪೂರ್ಣ ಕಾರ್ಯಪಲ್ಲಟವಾಗುತ್ತದೆ. ಬಳಿಕ ನಮ್ಮನ್ನು ನಾವೇ ತಿನ್ನಲು ಹೊರಟಂತೆ ಅನಿಸುತ್ತದೆ. ಜಗತ್ತು ಜಗತ್ತನ್ನೇ ನುಂಗುತ್ತಿದೆ. ನಮ್ಮನ್ನು ಕಬಳಿಸಲು ಆಗಸ ಸಿದ್ಧವಾಗಿದೆ. ಓಡಬೇಕು. ಆದರೆ ಎಲ್ಲಿಗೆ? ಆಕಾಶದ ಪೊಳ್ಳಿನಲ್ಲಿ ನಮ್ಮ ಇಡೀ ದೇಹವನ್ನು ಕಚ್ಚಿ ಕಚ್ಚಿ ಉಗುಳಿದ ನಮ್ಮ ಹತಬಲ ಆತ್ಮಗಳೇ ತುಂಬಿಕೊಂಡಿವೆ. ಸುತ್ತಲೂ ರಸ ಹರಿಯುತ್ತಲಿದೆ. ನಮ್ಮದೇ ನಮಗಿಂತ ಬೇರೆಯಾಗಿಯೂ. ಅದಕ್ಕೆ ಉಗ್ರ ಮಧುರ ಪರಿಮಳವಿದೆ. ಅದು ಕುದಿಯುತ್ತಲಿದೆ.

ನಮ್ಮನ್ನು ಕೂಗಿ ಕರೆಯುತ್ತಲಿದೆ. 'ನೀನಾದರೂ ತಿನ್ನು, ಇಲ್ಲದಿರೆ ನಾನೇ ನಿನ್ನನ್ನು ತಿನ್ನುತ್ತೇನೆ' ಎಂದೆನ್ನುತ್ತಲಿದೆ. ದೊಡ್ಡ ಮೀನು ಚಿಕ್ಕ ಮೀನಿಗೆ ಹೇಳುವಂತೆ. ಹಾಗೆ ನಾವು ಗಟ್ಟಿಯೇ. ಬಳಿಕ ಕೇಳುತ್ತದೆ ನೀನು ಹೇಗೆ ತಿನ್ನಬೇಕಂತಿದ್ದಿಯಾ? ಅದರ ಉತ್ತರ

'ಯಜ್ಞ ಮಾಡಿ.'

'ಅಂದರೆ?'

'ಬೆಂಕಿಯಲ್ಲಿ ಬೆಂದು, ನೀರಿನಲ್ಲಿ ಕುದಿದು, ಬಂಡೆಯ ಮೇಲೆ ಕಾದು, ಬಿಸಿ ಮಾಡಿ ಕುಟ್ಟಿದರೆ ನನ್ನ ರೂಪ ಬಣ್ಣವೇ ಬದಲಾಗುತ್ತದೆ. ಬಳಿಕ ಯಾವುದಾದರೂ ದೇವರಿಗೆ ಅರ್ಪಿಸಿ. ಕುಡಿಯುವದು, ತಿನ್ನುವದು ಮತ್ತು ಜಠರಾಗ್ನಿಯು ನನ್ನನ್ನು ಮರಳಿ ಬೇಯಿಸುವದು.'

'ಆದರೆ ಮೂಲದಲ್ಲಿ ಬೇಯಿಸುವದೇನು? ಸುಡುವದು ಏನು? ಕುಡಿಯುವುದು ಏನು? ಹೇಗೆ?' ಪ್ರಾಣಿಗಳ ಮಾಂಸ, ನರ, ವಾನರ, ಅಶ್ವ, ಕರಡಿ, ಎತ್ತು, ಮೀನು, ಚಿಗರೆ, ಹಕ್ಕಿ ಎಲ್ಲವೂ ಕೇವಲ ಹುಲಿ, ಸಿಂಹ ಮಾತ್ರವಿಲ್ಲ. ಆನೆಯೂ ಬೇಡ. ಧಾನ್ಯದ ಕಲಗಚ್ಚಿನಿಂದ ತಯಾರಿಸಿದ ಮದ್ಯವನ್ನು ಸೇವಿಸುವುದು. ಇದೇ ಉತ್ತಮ, ಪವಿತ್ರ ಜೀವನದ ರಹಸ್ಯ.

ನರನು ನರನನ್ನು ತಿನ್ನುವದೇ? ವಿಧಿಪೂರ್ವಕ? ವೇದಕಾಲದಲ್ಲಿ ಶುನಃಶ್ಯೇಪನನ್ನು ಕೊಲ್ಲುವ ನಿರ್ಧಾರ ಮಾಡಲಾಗಿತ್ತಲ್ಲ ಹಾಗೆ? ಇಂಥ ಯೋಚನೆ ಬಂದಾಗ ನಾವು ಕಂಪಿಸುತ್ತೇನೆ. ಆದರೆ ಆ ಕಂಪನ ತನ್ನನ್ನು ಬೇರೆ ಯಾರಾದರೂ ತಿನ್ನಬಹುದೇ ಎಂಬ ಆದಿಮ ಭೀತಿಯದಾಗಿರುತ್ತದೆ. ಹೀಗಾಗಿ ತಾನಾದರೂ ಕೊನೆಪಕ್ಷ ಬೇರೆಯವರನ್ನು ತಿನ್ನಬಾರದು ಎಂಬ ವ್ಯವಹಾರಿಕತನವನ್ನು ಕಲಿಯುತ್ತೇವೆ. ಬೇರೆಯವರು ಅನ್ಯರನ್ನು ಯಾರನ್ನಾದರೂ ತಿಂದರೆ, ತಮ್ಮ ಸನಾತನ ಕಾಲದಲ್ಲಿ ರೂಪಗೊಂಡ ಮನಕ್ಕೆ ಮೊದಲಿನಂತೆ ಆಘಾತವಾಗುವುದಿಲ್ಲ. ತಾಂತ್ರಿಕ ವಿದ್ಯೆಯಲ್ಲಿಯ ಮದ್ಯ ಮಾಂಸದ ಮೂಲಕ ನಾವು ಕೇವಲ ಈ ಭಕ್ಷಣಕಾಂಡ, ಈ ಅನ್ನಪರ್ವದಲ್ಲಿ ಸ್ವಲ್ಪ ಕಾಡಿನಾಚೆಗೆ ಒಯ್ದುಬಿಟ್ಟಿದ್ದೇನೆ ಇಷ್ಟೇ. ವೇದವಾಙ್ಮಯದಲ್ಲಿ ಬಲಿಪದ್ಧತಿಯ ಪಟ್ಟಿಯಿದೆ. ಅದರಲ್ಲಿ ನರ ವಾನರದಿಂದ ನವಿಲು ಹಂಸ, ಕೊಕ್ಕರೆ, ಕೋಳೀ ಹೀಗೆ ಎಲ್ಲ ಪಕ್ಷಿಗಳಿವೆ. ಆ ಪಟ್ಟಿಯಲ್ಲಿ ಇಲಿಯಿಲ್ಲ. ಅದು ಯಮನ ದೂತ ಮತ್ತು ಸತ್ತ ವ್ಯಕ್ತಿಯ ಆತ್ಮದ ಪ್ರತೀಕವೂ ಆಗಿ ಎಲ್ಲ ಮೃತಾತ್ಮಗಳ ಪಿಂಡವನ್ನು ಹಕ್ಕಿನಿಂದ ತಿನ್ನಲು ಮುಕ್ತವಾಗಿದೆ. ರಾಜನನ್ನು, ಅಧಿಕಾರಿಯನ್ನು ಭೇಟಿಯಾಗಬೇಕಾದರೆ, ಚಪರಾಸಿಗೆ ಏನಾದರೂ ಕಾಸು ಕವಡೆ ಕೊಡದ ವಿನಾ ಅವನು ಒಳಗೆ ಹೋಗಲು ಬಿಡಲಾರ ಎಂಬ ಮೊದಲ ಪಾಠವನ್ನು ಈ ಜಗತ್ತಿನಲ್ಲಿ ಕಾಗೆಯೇ ಕಲಿಸಿರಬೇಕೆಂದೆನಿಸುತ್ತದೆ. ಏಕೆಂದರೆ ಅದು ಪಿಂಡವನ್ನು

ಸ್ಪರ್ಶಿಸಿದರೆ ಸಾಕು, ಮುಕ್ತಿಯ ಮೊದಲ ಬಾಗಿಲು ತೆರೆದು ಮೃತನ ಆತ್ಮವು ಹಾಯಾಗಿ ಯಮಪುರಿಗೆ ಹೋಗಿ ತಲುಪುತ್ತದೆ ಎನ್ನುವುದು ನಮ್ಮ ಎಂದಿನ ಭೋಳೆ ಅನುಭವವಾಗಿದೆ. ಗರುಡಕ್ಕೆ, ಸಿಂಹಕ್ಕೆ ಬಲಿ ನೀಡಬಾರದು ಎಂಬ ನಿಯಮವಿದೆ. ಏಕೆಂದರೆ ಅವುಗಳೋ ರಾಜರು. ಪಕ್ಷಿ ಹಾಗೂ ಪಶು ಜಗತ್ತಿನವು. ಅವುಗಳನ್ನು ಉಳಿಸಿದರೆ ಉಳಿದ ರಾಜರನ್ನು ಉಳಿಸಬೇಕಾಗುತ್ತದೆ. ನವಿಲು ಹಂಸಗಳು ಸರಸ್ವತಿ, ಬ್ರಹ್ಮದೇವ ಮತ್ತು ಕಾರ್ತಿಕೇಯನ ವಾಹನ. ಆದರೆ ಅವುಗಳನ್ನು ಕೊಲ್ಲುವುದರಲ್ಲಿ ಯಾವ ಅಪಾಯವೂ ಇಲ್ಲ. ಸಿಂಹವನ್ನು ಕೊಲ್ಲುವುದು ಸುಲಭವಲ್ಲ. ಸಿಂಹ ಹುಲಿ ಏಕರೂಪದ್ದಾಗಿರುವವರಿಂದ ಸಿಂಹದ ಶ್ರೇಷ್ಠತ್ವ ಹುಲಿಗೂ ಅಂಟಿಕೊಂಡಿತು. ಅದನ್ನೂ ಬಿಡಲಾಯಿತು. ಇವೆರಡೂ ದೇವಿಯ ವಾಹನಗಳು. ಮಹಿಷಾಸುರ ಮರ್ದಿನಿಯ ಹೊಡೆತವೇ ಜಬರ್ದಸ್ತ. ಯಜ್ಞಕ್ಕಾಗಿ ಅವಳ ವಾಹನಕ್ಕೆ ಕೈ ಹಚ್ಚುವ ಧೈರ್ಯ ಯಾರಿಗಿದೆ? ಆದರೆ ಅವಳ ಮಹಿಷ, ಕೋಣವನ್ನಂತೂ ಅವಳೇ ಸ್ವತಃ ಕೊಂದಿದ್ದಳು. ಕೋಣವನ್ನೇ ಕೊಂದ ಬಳಿಕ ಶಂಕರನ ಎತ್ತನ್ನು ಯಾರು ಕೇಳುತ್ತಾರೆ? ಎತ್ತು, ಆಕಳು, ಕುರಿ, ಟಗರು, ಒಂಟೆ ಇವೆಲ್ಲವೂ ಯಜ್ಞಕ್ಕೆ ನೀಡುವ ಪಶುಗಳ ಪಟ್ಟಿ ಸೇರಿದವು. ಭೂಮಿಯನ್ನು ತನ್ನ ಕೋರೆ ಹಲ್ಲಿನಲ್ಲಿ ಎತ್ತಿ ಹಿಡಿದು ಉದ್ಧಾರ ಮಾಡಿದ ವರಾಹವೇ ಸ್ವತಃ ಯಜ್ಞದ ಬಲಿಪಶುವಾಯಿತು. ಮತ್ಸ್ಯ ಮತ್ತು ಕೂರ್ಮ ಇವೆರಡು ಮೊದಲ ಅವತಾರ. ಮೂರನೆಯ ವರಾಹದ ಅವತಾರದಂತೆ ಯಜ್ಞವಿಲ್ಲದೆಯೇ ಮಾನವನ ರಸವರ್ಧಕ, ಬಲವರ್ಧಕ ಅನ್ನವಾದವು. ಚಿಗರೆ ಬಂದವು, ಮೊಲಗಳು ಬಂದವು. ಇವೆಲ್ಲ ಚಪಲ, ಮಾಂಸದಿಂದ ಕೊಬ್ಬಿದ, ಸೊಪ್ಪು ಸದೆಯನ್ನು ತಿಂದು ಬದುಕುವ ಮುಗ್ಧ ಪ್ರಾಣಿಗಳು ಬಂದವು. ಫಸಲನ್ನು ಹಾಳು ಮಾಡುತ್ತದೆ ಎಂದು ನಾವು ಅವುಗಳನ್ನು ಕೊಂದು ತಿನ್ನುತ್ತೇವೆ ಎಂದು ಕೃಷಿ ವ್ಯವಸಾಯ ಆರಂಭಗೊಂಡಾಗಿನಿಂದಲೂ ಮಾನವನು ಮಾಡಿದ ದಾವೆ. ಇದಕ್ಕಿಂತ ಮೊದಲಿನಿಂದಲೂ ಮೃಗಯಾ ಜೀವಿ ಆದಿಮ ಮಾನವನು ಅವುಗಳನ್ನೇ ಹತ್ಯೆ ಮಾಡಿ ಬದುಕುತ್ತಿದ್ದ. ಯುರೋಪದಲ್ಲಂತೂ ಕರಡಿಯನ್ನು ಕೊಲ್ಲುವುದು ಪರಾಕಾಷ್ಠೆಯ ಪುರುಷಾರ್ಥವೆಂದು ಭಾವಿಸಲಾಗುತ್ತಿತ್ತು. ಜಗದೊಳಗಿನ ಕರಡಿಗಳಿಗೆಲ್ಲ ದೇವತ್ವವನ್ನು ನೀಡಲಾಯಿತು. ಅದನ್ನು ಕೊಲ್ಲಲು, ತಿನ್ನಲು ಆಗ ಮನುಷ್ಯ ದೇವರಿಗೂ ವಂದಿಸಿ ತಿನ್ನಲಾರಂಭಿಸಿದ. ಆದರೆ ದೇವರು ಮಾತ್ರ ವಂದಿಸಿ ತನ್ನನ್ನೇ ಹತ್ಯೆ ಮಾಡುವವರನ್ನು ಧಿಕ್ಕರಿಸಲು ಕಲಿತಿಲ್ಲ. ಕೊಲ್ಲುವವನ ತಲೆ ಕೆಳಗಿದ್ದರೂ ಕೈ ಮೇಲಿರುತ್ತದೆ. ಅದರಲ್ಲಿ ಶಸ್ತ್ರ ಅಡಗಿರುತ್ತದೆ. ಈ ವಿಷಯವನ್ನು ಬರೆಯಲು ಈಸೋಪನಾದರೂ ಹೇಗೆ ಮರೆತನೋ ಏನೋ! ಚಿಕ್ಕ ಪ್ರಾಣಿಗಳೂ ಸಹ ಪಾರಾಗಲಿಲ್ಲ. ಮುಳ್ಳುಹಂದಿಯೂ ಸಹ ಯಜ್ಞದ ಪಶುವಿನಲ್ಲಿ ಬರುತ್ತದೆ. ನಿತ್ಯ ಭಕ್ಷಣೆ ಮಾಡುವ ಪಶುಗಳಲ್ಲಿ ಬರುತ್ತದೆ. ಅದಕ್ಕೆಲ್ಲೂ ದೈವದ ಆಧಾರವಿಲ್ಲ.

ಆದರೆ ಒಂದು ಚತುರ ಪ್ರಾಣಿ ಮಾತ್ರ ಪಾರಾಯಿತು. ಅದೆಂದರೆ ಇಲಿ. ಮನುಷ್ಯನ ಮೊದಲ ದರ್ಜೆಯ ಪ್ರತಿಸ್ಪರ್ಧಿ, ಅದು ಗಣಪತಿಯ ವಾಹನವಾಯಿತು. ಮೂಲದಲ್ಲೇ ಜನಗಣದ ನಾಯಕನ ರಕ್ಷಣೆ ಪಡೆದುಬಿಟ್ಟ, ಫಸಲು ಬೆಳೆಯನ್ನು ಹಾಳು ಮಾಡುತ್ತದೆ. ಅದನ್ನು ನಾವು ಕೊಂದರೂ ತಿನ್ನುವದಿಲ್ಲ. ಭಕ್ಷಿಸುವವರು ಇಬ್ಬರೇ– ಚೀನದ ಕೆಲವು ರಹವಾಸಿಗಳು ಮತ್ತು ಭಾರತದ ಬುಡಕಟ್ಟು ಜನಾಂಗದವರು. ಅವರದನ್ನು ದೇವರು ಗೀವರು ಎಂದೆಲ್ಲ ಭಾವಿಸುವುದಿಲ್ಲ. ಚಿಗರೆ, ಕುರಿಯ ಮಾಂಸ ತಿನ್ನುವವರು ಈ ಮಾಂಸಭಕ್ಷರ ಬಗೆಗೆ ಮೂಗು ಮುರಿಯುತ್ತಾರೆ. ಆದರೆ ಇಲಿಯ ಮಾಂಸ ರುಚಿಕರ, ಪಚನಕ್ಕೆ ಹಗುರ ಮತ್ತು ಪೌಷ್ಟಿಕ. ಠಾಣೆ ಜಿಲ್ಲೆಯ ಆದಿವಾಸಿಗಳೂ ಸಹ ನಮ್ಮ ಮಕ್ಕಳು ಮೊದಲಿಗೆ ಬೇಟೆಯಾಡುವುದೇ ಇಲಿಯದು; ಎಂದು ಹೇಳುವ ಅವರು, ಈಗ ನಮ್ಮ ಮಹಾನಗರದ ವೈಯಾರ ಅವರನ್ನು ಕಾಡುತ್ತಿರುವುದರಿಂದ ಹೇಳುವುದಿಲ್ಲ. ಗೋಂಡ ಜನರಂತೂ ಎಲ್ಲರೂ ಇಲಿ ತಿನ್ನುತ್ತಾರೆ. ಈ ಆಹಾರವನ್ನು ಮಾಂಸಾಹಾರಿಗಳಂತೂ ನಿಷೇಧವೆಂದು ಭಾವಿಸಬಾರದು. ಇಲಿಗಳ ಸಂತತಿ ಬೇಗ ಬೆಳೆಯುತ್ತದೆ. ಇಲಿಗಳನ್ನು ಸಾಕಿ, ಸ್ವಚ್ಛ ವಾತಾವರಣದಲ್ಲಿ ಅದರ ಸಂಗೋಪನೆ ಮಾಡಿದ್ದಾದರೆ ಮತ್ತು ತಿನ್ನುವವರಿಗೆ ಅದನ್ನು ಉಪಲಬ್ಧ ಮಾಡಿಕೊಟ್ಟರೆ, ಅನ್ನದ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗಬಹುದು. ಅವುಗಳನ್ನು ಭಾರತದಿಂದ ಚೀನದೇಶಕ್ಕೆ ಕಳಿಸಿದರೆ ನಮ್ಮ ಅಂತರ್ ರಾಷ್ಟ್ರೀಯ ಸಮಸ್ಯೆಯು ಸುಧಾರಿಸಬಹುದು. ಸ್ವಲ್ಪ ಆದಾಯವನ್ನು ಗಳಿಸಬಹುದಾಗಿದೆ.

ವೇದಕಾಲದ ಪ್ರತಿಷ್ಠಿತರು ಜೀವನ ಕಲಹ ತೀವ್ರವಾಗಿರುತ್ತದೆ ಎಂಬುದನ್ನು ಅರಿತಿದ್ದರಿಂದ ಅವರು 'ಜೀವೋ ಜೀವಸ್ಯ ಜೀವನಂ', 'ಜೀವವೇ ಜೀವಿಗಳ ಜೀವನವಾಗಿದೆ' ಎಂಬ ಪ್ರಾಣಸೂತ್ರವನ್ನು ಎತ್ತಿ ಹಿಡಿದಿದ್ದರು. ನರಹತ್ಯೆಗೆ ಯಜ್ಞದಲ್ಲಿ ಸ್ಥಾನವಿದ್ದರೂ ಅದನ್ನು ಪ್ರತಿಯೊಂದು ಯಜ್ಞದಲ್ಲಿ ಉಳಿಸಿಕೊಳ್ಳದೆ, ಅಶ್ವಮೇಧದಲ್ಲಷ್ಟೇ ಉಳಿಸಿಕೊಂಡರು. ಏಕೆಂದರೆ ಅಶ್ವಮೇಧ ವಿರಳವಾಗಿ, ಶತಮಾನದಲ್ಲಿ ಎಂದಾದರೊಮ್ಮೆ ನಡೆಯುವ ಯಜ್ಞ. ಕಥೆಯಲ್ಲಿ ಶುನಃಶ್ಯೇಪನಿಗೆ ಸಾಯಲು ಅವಕಾಶ ಕೊಡಲಿಲ್ಲ. ವಿಶ್ವಾಮಿತ್ರನು ಅವನನ್ನು ಬದುಕಿ ಉಳಿಸಿದ. ಕ್ಷತ್ರಿಯರು ಹಿಂಸೆಗೆ ವಿರೋಧ ಮಾಡಿದಾಗ ಅಹಿಂಸೆ ಶುರುವಾಗುತ್ತದೆ. ಬುದ್ಧ ಮತ್ತು ಮಹಾವೀರ ಇಬ್ಬರೂ ಕ್ಷತ್ರಿಯರೇ. ಅವರು ಅಹಿಂಸೆಯನ್ನು ಬೆಂಬಲಿಸಿದರು. ಅದನ್ನು ಯಜ್ಞದಲ್ಲಿ ಪಾಲಿಸಲಾಯಿತು. ಬುದ್ಧ ಯಜ್ಞದಲ್ಲಿಯ ಪ್ರಾಣಿವಧೆಯನ್ನು ನಿಲ್ಲಿಸಿದ. ಆದರೆ ಭಿಕ್ಷಾನ್ನವಾಗಿ ನೀಡಿದ ಮಾಂಸವನ್ನು ನಿಷೇಧಿಸಲಿಲ್ಲ. ಮಹಾವೀರನು ಮಾಂಸಾಹಾರವನ್ನೇ ನಿಷೇಧಿಸಿದ. ಅವನನ್ನು ವೈದಿಕ ಬ್ರಾಹ್ಮಣರು ಅನುಕರಣೆ ಮಾಡಿದರು. ಅಂದಿನಿಂದ ಶಾಕಾಹಾರ ಶುದ್ಧ ಮತ್ತು ಮಾಂಸಾಹಾರ

ತ್ಯಾಜ್ಯವೆಂಬ ಭಾವನೆಯು ಬೆಳೆಯಿತು. ಮಾಂಸ ತಿನ್ನದವರು ಶ್ರೇಷ್ಠರು, ತಿನ್ನುವವರು ಕೆಳ ದರ್ಜೆಯವರು ಎಂದು ನಿರ್ಧರಿಸಲಾಯಿತು. ವೈದ್ಯನು ಎಲ್ಲ ಬಗೆಯ ಔಷಧಿ ಸಿದ್ಧಪಡಿಸಬೇಕಾಗುತ್ತದೆ. ಹೀಗಾಗಿ ಅವನನ್ನು ಪಂಕ್ತಿಬಾಹ್ಯವೆಂದು ನಿರ್ಧರಿಸಲಾಯಿತು. ಒಂದು ಮಾತು ಗಮನದಲ್ಲಿಡಬೇಕು. ಅವನು ನೀಡಿದ ಔಷಧಿ ಮಾತ್ರ 'ಔಷಧಂ ಜಾಹ್ನವಿ ತೋಯಂ ವೈದ್ಯೋ ನಾರಾಯಣೋ ಹರಿ' ಎಂದು ಭಾವಿಸಿ ಸೇವನೆ ಮಾಡುವ ಪದ್ಧತಿ ಶಾಶ್ವತವಾಗಿ ಉಳಿಯಿತು.

ಮನು ತುಂಬ ಜಾಣ, ಸಂಕಲನ ವೃತ್ತಿಯವನು. ಅವನು ನೇರವಾಗಿ ಹೇಳಿದ 'ನ ಮಾಂಸ ಭಕ್ಷಣೇ ದೋಷಃ ನಚ್ ಮಧ್ಯಾಶನೇ ತಥಾ/ ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತು ಮಹಾಫಲಾ' – ಮಾಂಸ ಸೇವಿಸುವುದರಲ್ಲಿ ಯಾವ ದೋಷವೂ ಇಲ್ಲ. ಇದಂತೂ ಪ್ರಾಣಿ ಮಾತ್ರದವರ ಪ್ರವೃತ್ತಿಯೇ ಆಗಿದೆ. ಆದರೆ ಅವರಿಂದ ನಿವೃತ್ತಿ ಪಡೆದರೆ, ದೂರವಿರಬೇಕೆಂದು ನಿರ್ಧರಿಸಿದರೆ ಅದು ಮಾತ್ರ ಮಹಾಫಲದಾಯಕ– ಎಂದನು. ಮಾಂಸ ತಿನ್ನಿ, ಮದ್ಯ ಸೇವಿಸಿ, ಆದರೆ ಅದರ ಚಟಕ್ಕೆ ಮಾತ್ರ ಬಲಿಯಾಗದಿರಿ. ಇಷ್ಟು ಸಮರ್ಥವಾದ ರೀತಿಯಲ್ಲಿ ಬೇರೆ ಯಾರಾದರೂ ಹೇಳಿದ್ದಾರೆಯೇ? ಆಹಾರದ ಸಮತೋಲವೆಂದರೆ ಇದೇ. ರಸದ ರಸತ್ವವನ್ನು ಸಂರಕ್ಷಿಸುವ ಮಹಾಕಲೆಯಿದು. ಅದಕ್ಕೆ ಬಲಿಯಾಗಿ ರಸತ್ವಕ್ಕೆ ದುರ್ಗುಣವನ್ನು ಮುಟ್ಟಿಸುವ ಆಸಕ್ತಿಯಲ್ಲವಿದು. ಮಾನವೀಯತೆಯ ಧೂಳಿಕಣವಲ್ಲ. ಇದನ್ನು ಅರಿತಿದ್ದ ಬಾಣಭಟ್ಟನಂತೂ ಗುಪ್ತರ ಕಾಲದಲ್ಲಿ ಉತ್ಕೃಷ್ಟವೆಂದು ಪರಿಗಣಿಸಲಾದ ಮದಿರೆಯ, ಕಾದಂಬರಿ ಎಂಬ ಹೆಸರನ್ನು ಗಂಧರ್ವ ರಾಜ ಪುತ್ರಿಗೆ ನೀಡಿ ರಸತ್ವದ ಒಂದು ಸುಂದರ ನೋಟವನ್ನು ಅಮರಗೊಳಿಸಿದನು. ಈ ಉದಾಹರಣೆಯು ಅನನ್ಯವಾದುದು.

ಇತ್ತ ಶಾಕಾಹಾರಕ್ಕೆ ಸುಕಾಲ ಬಂತು. ಅಂಥದರಲ್ಲಿ ಬುದ್ಧ ಮಹಾವೀರರೂ ಹಾಲು, ತುಪ್ಪ, ಜೇನುತುಪ್ಪವನ್ನು ಶಾಕಾಹಾರ ಎಂದೊಪ್ಪಿದರು. ವಾಸ್ತವಿಕವಾಗಿ ಇವು ಪಶುಜನ್ಯ. ಪುರಾಣದಲ್ಲಿ ಕ್ಷೀರಸಾಗರವಿದೆ. ಹಾಲು–ಜೇನಿನ ಹೊಳೆಗಳಿವೆ. ಜಾನಪದ ಕಥೆಯಲ್ಲಂತೂ ಮಜ್ಜಿಗೆಯ ಹಳ್ಳವೇ ಹರಿಯುತ್ತದೆ. ಯಜ್ಞನಿಷೇಧದಿಂದ ಪಶು ಹಿಂಸೆ ಹೋದರೂ ಸಹ ಹಾಲು, ತುಪ್ಪ, ಜೇನು, ಹವಿಷಾನ್ನ ಮತ್ತು ಎಲ್ಲೆಡೆ ಪವಿತ್ರ ಅನ್ನವೇ ಉಳಿಯಿತು. ೨೦ನೇ ಶತಕದ ಪರಿಪೂರ್ಣ ಶಾಕಾಹಾರಿಗಳಿಗೆ ಇದು ಒಪ್ಪಿಗೆಯಿಲ್ಲ. ಈ ವಸ್ತುಗಳನ್ನು ವನಸ್ಪತಿ ಜನ್ಯವೆಂದು ಭಾವಿಸುವದಿಲ್ಲ. ಆದರೆ ಭಾರತೀಯ ಶುದ್ಧಾಹಾರಿ ಮನುಷ್ಯ ಇಂದಿಗೂ ಈ ವಿಚಾರವನ್ನು ತರ್ಕಸಮ್ಮತವಾದುದು ಎಂದೊಪ್ಪುವುದಿಲ್ಲ. ಪ್ರಾಚೀನ ಪರಂಪರೆಗೆ ಇವನು ಅಂಟಿಕೊಳ್ಳುತ್ತಾನೆ. ಇತ್ತ ಮಾಂಸಾಹಾರಿಯೂ ಇಲಿಯ ಭಕ್ಷಣೆಗೆ ಬೆಚ್ಚಿಬೀಳುತ್ತಾನೆ, ಹೇಸಿಗೆ ಎಂದು ಭಾವಿಸುತ್ತಾನೆ. ನಾವೆಲ್ಲ ಈ ಇಬ್ಬಗೆಯ ಭ್ರಮೆಯಲ್ಲಿ ಸಿಲುಕಿದ್ದೇವೆ!

ಈ ವನಸ್ಪತಿ ಆಹಾರದ ಬೆನ್ನು ಹತ್ತಿದ ಮಾನವನು ಈ ವನಸ್ಪತಿಗಳನ್ನು ಹೇಗೆ ಸಂಹಾರ ಮಾಡಿದ್ದಾನೆ ಕೇಳಬೇಡಿ. ವನಸ್ಪತಿಗಳು ಚಂದ್ರನಿಗೆ ಶರಣು ಹೋದವು. ಅದು ವನಸ್ಪತಿಗೆ ಅಭಯ ನೀಡಿತು ಎಂಬ ಕಥೆಯು ಪುರಾಣದಲ್ಲಿ ಬರುತ್ತದೆ. ಇದೇ ರೀತಿ ಮಹಾಭಾರತದಲ್ಲಿ ಚಿಗರೆಯನ್ನು ಕೊಲ್ಲುವ ವಿಷಯದಲ್ಲಿ ನಡೆಯಿತು. ಬ್ರಾಹ್ಮಣರಿಗೆ ಭೋಜನ ಹಾಕುವದು ರಾಜರ ಕರ್ತವ್ಯವೆಂದುಕೊಂಡು ಯುಧಿಷ್ಠಿರನು–ಧರ್ಮರಾಜನು ತಿಳಿಯಿತಲ್ಲ– ಎಷ್ಟೆಲ್ಲ ಹರಿಣವನ್ನು ಕೊಂದನೆಂದರೆ, ಕಾಡಿನಲ್ಲಿ ಒಂದೂ ಹರಿಣ ಉಳಿಯಲಿಲ್ಲ. ಇಂದು ಕೇಳಿಬರುವ ಕೂಗೂ ಸಹ ಅನವರತ ತಿನ್ನುವ ಚಪಲದಿಂದಾಗಿ ಸನಾತನ ಕಾಲದಿಂದಲೂ ಆಗಾಗ ಕೇಳಿಬರುತ್ತದೆ. ಹರಿಣಗಳಿಗೆ ಮತ್ತು ಪರ್ಯಾಯವಾಗಿ ಎಲ್ಲ ಪ್ರಾಣಿಗಳಿಗೆ ರಾಜನು ಅಭಯ ನೀಡಿದ ಕಥೆಯು ಜಾತಕದಲ್ಲಿ ಕಾಣಸಿಗುತ್ತದೆ. ಆದರೆ ಬೌದ್ಧ ಧರ್ಮದ ಹ್ರಾಸ ಕಾಲದಲ್ಲಿ ಹರಿಣವು ತನ್ನ ಮಾಂಸದಿಂದಾಗಿಯೇ ಜಗತ್ತಿನ ವೈರಿಯಾಗುತ್ತದೆ ಮತ್ತು ಅದು ಬೇಟೆಗೆ ಬಲಿಯಾಗುತ್ತದೆ ಎಂಬ ನಾಣ್ಣುಡಿಯು ಪ್ರಾಚೀನ ಬಂಗಾಲದಲ್ಲಿತ್ತಂತೆ.

ಫಸಲಿನ ಬೆಳೆ ಅದರ ಉಪಯೋಗದಿಂದಾಗಿ ಬೆಳೆಯಿತು. ಭಾರತದ ಮೊದಲ ದರ್ಜೆಯ ಧಾನ್ಯವೆಂದರೆ ಅಕ್ಕಿ. ಅನಂತರ ಗೋಧಿ, ವೇದಕಾಲದ ಅಕ್ಕಿಹಿಟ್ಟಿನ ಹಾಲು ಅಥವಾ ನೀರು ಹಾಕಿ ಹಂಚಿನ ಮೇಲೆ ಸುಟ್ಟ ರೊಟ್ಟಿ. ಎರಡನೆಯದು ಅಕ್ಕಿಯ ಪ್ರಸಾದದ ಸಿಹಿ ಪದಾರ್ಥವೆಂದರೆ ಚರೂ. ಅಕ್ಕಿ, ಜೇನುತುಪ್ಪ ಮತ್ತು ಹಾಲು–ತುಪ್ಪ ಹಾಕಿ ಬೇಯಿಸಿದ್ದಕ್ಕೆ ಚರೂ ಎಂಬ ಹೆಸರು ನೀಡಲಾಗಿತ್ತು. ಹಂಚಿನ ಮೇಲೆ ಸುಟ್ಟ ರೊಟ್ಟಿ. ಬೇಕಾದರೆ ಖಾದ್ಯವೆನ್ನಿ. ಅದನ್ನು ಆದಿಮ ಸಂಸಾರದ ಕೊಡುಗೆ ಎನ್ನಬೇಕು. ಈಗಲೂ ಕೆಲವು ಆದಿವಾಸಿಗಳು ಧಾನ್ಯವನ್ನು ಕಲ್ಲಿನ ಮೇಲೆ ಕುಟ್ಟಿ, ಅದಕ್ಕೆ ನೀರು ಸೇರಿಸಿ, ಕಲಿಸಿ ನಾದಿ, ಕಲ್ಲನ್ನು ಕೆಂಡದಿಂದ ಬಿಸಿಮಾಡಿ ಅದರ ಮೇಲೆ ರೊಟ್ಟಿ ಸುಡುತ್ತಾರೆ. ಕಲ್ಲಿನ ತಗ್ಗನ್ನು ಕೆಂಡ ಹಾಕಿ ಕೆಂಪು ಮಾಡುತ್ತಾರೆ. ಚಿಕ್ಕ ಚಿಕ್ಕ ಕಲ್ಲನ್ನೂ ಬಿಸಿ ಮಾಡುತ್ತಾರೆ. ಬಳಿಕ ಆ ತಗ್ಗಿನಲ್ಲಿ ನೀರು ಸುರಿದು, ಅದರಲ್ಲಿ ಅಕ್ಕಿಯನ್ನು ಹಾಕಿ ಕುಟ್ಟುತ್ತಾರೆ. ಕಾದು ಬಿಸಿಯಾದ ಕಲ್ಲು ಹಾಕಿ ಗಂಜಿ ಮಾಡುತ್ತಾರೆ. ಇದಾಯಿತು ಪಾತ್ರೆಯಿಲ್ಲದ ಅಡುಗೆ. ಅಕಾಲ ಪ್ರವಾಸದಲ್ಲಿ ಮಧ್ಯಪ್ರದೇಶದ ಕಾಡಿನಲ್ಲಿ ಯಾರೋ ಪಾತ್ರೆ ರಹಿತ ಅಡುಗೆ ಕಲಿಸಿದರು. ನಾನದನ್ನು ಮಾಡಿದೆ. ಎರಡುಮೂರು ಬದನೇಕಾಯಿ ಮತ್ತು ಅಕ್ಕಿಹಿಟ್ಟಿನ ಕಣಕದ ನೀರು ಹಾಕಿ ಮುದ್ದೆ ಮಾಡಿ ಸುಟ್ಟೆ. ಬದನೆಯಲ್ಲಿ ಸ್ವಲ್ಪ ಉದ್ದು ಬೆರೆಸಿ ಗೊಜ್ಜು ಮಾಡಿದೆ. ಇದಾಯಿತು ಹೊಟ್ಟೆ ತುಂಬುವ ಅಡುಗೆ. ಈಗ ನಾನು ಉಪ್ಪು ಬೆರೆಸಿದೆ. ಇದು ನಗರವಾಸಿಗಳ ಶ್ರೀಮಂತಿಕೆಯ ದೌಲು. ಉಪ್ಪು ಎಂಥ ವಸ್ತುವೆಂದರೆ ಅದು ಕಡಲು ತೀರದ ಜನರಿಗಷ್ಟೇ ಉಚಿತವಾಗಿ

ಸಿಗುವದು. ಕಾಡಿನ ಜನರಿಗೆ ದುಡ್ಡು ನೀಡಿ ಕೊಂಡುಕೊಳ್ಳುವ ವಸ್ತು ಅದಲ್ಲ. ಹೀಗಾಗಿ ಬಹುಸಂಖ್ಯಾತ ಆದಿವಾಸಿಗಳ ಊಟದಲ್ಲಿ ಉಪ್ಪೇ ಇರುವುದಿಲ್ಲ. ಈಗೇನೋ ಬದಲಾವಣೆಯಾಗುತ್ತಿದೆ. ಏಕೆಂದರೆ ಕಾಡು ಮತ್ತು ನಗರಗಳ ನಡುವಿನ ಸಾರಿಗೆ ಬೆಳೆಯುತ್ತಿದೆ. ಆದರೆ ಉಪ್ಪು ಎಂಥ ಪದಾರ್ಥವೆಂದರೆ ಒಮ್ಮೆ ತಿಂದರೆ ಸಾಕು ಮತ್ತೆ ತಿನ್ನದೇ ಇರುವದು ಸಾಧ್ಯವೇ ಇಲ್ಲ. ಒರಿಸಾದ ಬಡಗಿರಿಜನರು ಗಂಜಿ ಅನ್ನ ತಿನ್ನುವಾಗ ಎಡಗೈ ಹೆಬ್ಬೆರಳು ಚೀಪುತ್ತಾರೆ. ಶ್ರೀಕೃಷ್ಣ ಸುಮ್ಮ ಸುಮ್ಮನೆ ಸತ್ಯಭಾಮೆಗೆ, ನೀನು ನನಗೆ ಹೆಬ್ಬೆರಳಿನಂತೆ ಪ್ರಿಯ ಎಂದೆನ್ನಲಿಲ್ಲ.[೧]

ಪುರಾಣದಲ್ಲಿ ಭೋಜನದ ಬಗೆಗೆ ಸಾಕಷ್ಟು ವರ್ಣನೆಗಳಿವೆ. ಬಾಳೆಯ ಎಲೆಯ ಮೇಲೆ ಮೂರು ಸಾಲುಗಳಾಗುವಷ್ಟು ಚಟ್ನಿ, ಕೋಸಂಬರಿ, ಉಪ್ಪಿನಕಾಯಿ, ಪಲ್ಲೆ, ವಡೆ, ಪುರಿ – ಮುಂತಾದ ಪ್ರಕಾರಗಳು. ಎಲೆಯ ಸುತ್ತಲೂ ಹತ್ತಾರು ಬಗೆಯ ತೊವ್ವೆ, ತುಪ್ಪ, ಪಾಯಸ, ತಿಳಿಸಾರು, ಮಜ್ಜಿಗೆ ಮುಂತಾದ ಪದಾರ್ಥಗಳಿಂದ ತುಂಬಿರುವಂತಹದು. ಈ ಎಲ್ಲ ಪದಾರ್ಥಗಳನ್ನು ತುಪ್ಪ ಸಕ್ಕರೆಯಿಂದ ತಯಾರಿಸಿರುತ್ತಾರೆ. ಯಾವುದೇ ಆಹಾರತಜ್ಞ ಈ ಆಹಾರವನ್ನು ಆಹಾರಶಾಸ್ತ್ರದ ದೃಷ್ಟಿಯಿಂದ ಉತ್ತಮವಾಗಿದೆ ಎಂದು ಹೇಳಲಾರ. ನಾಲಗೆಯ ರುಚಿಗೆ ಮತ್ತು ಶ್ರೀಮಂತಿಕೆಯ ಡೌಲಿನ ಪ್ರದರ್ಶನಕ್ಕೆ ಅವುಗಳಿಗೆ ಸ್ಥಾನವಿದೆ ಎಂಬುದು ಸತ್ಯ. ಆದರೆ ಚತುರ ಸುಶ್ರುತನು ಅದನ್ನು ಗುರುತಿಸಿದ್ದ. ಪಕ್ವಾನ್ನದ ಹೆಸರನ್ನು ಅವನು ಹೇಳುವುದಿಲ್ಲ. ಆದರೆ ಧಾನ್ಯ, ತರಕಾರಿಯ ಗುಣಧರ್ಮವನ್ನು ಹೇಳಿ ಅವನು ಪದಾರ್ಥದ ಬಗ್ಗೆ ಹೇಳುತ್ತಾನೆ. ಇಂಥ ತರಕಾರಿಯಲ್ಲಿ ಇಂತಿಂಥ ಗುಣವಿದೆ; ದೋಷವಿದೆ ವಗೈರೆ. ಆದರೆ ಪ್ರಕರಣದ ಕೊನೆಗೆ ಅವನು ಹೇಳುವುದೇನೆಂದರೆ, ಇದೆಲ್ಲವನ್ನು ನಾವು ನೀಡಿದರೂ ಯಾವ ಮನುಷ್ಯನು ಕಡಿಮೆ ತಿನ್ನುವನೋ ಮತ್ತು ಸಾಕಷ್ಟು ಶ್ರಮಪಡುತ್ತಾನೋ ಅವನಿಗೆ ಅದರಿಂದ ಏನೂ ಉಪಯೋಗವಿಲ್ಲ. ಕಡಿಮೆ ಶ್ರಮ ಮಾಡಿ ಹೆಚ್ಚು ತಿನ್ನುವವರ ಬಗೆಗೇ ಈ ಉಪದೇಶ.

ಭಾರತೀಯ ಪರಂಪರೆಯಂತೆ ನಾಲ್ವರು ಪಾಕಕಲಾ ವಿಶಾರದರು. ಸೂಪ್ ಶಾಸ್ತ್ರ ಪ್ರವೀಣರು ಆಗಿಹೋದರು. ನಳ, ಭೀಮ, ಪಾರ್ವತಿ ಮತ್ತು ಸೀತೆ. ಇವರಲ್ಲಿ ಪುಣ್ಯಶ್ಲೋಕ ನಳರಾಜನು ಬಾಹುಕನ ರೂಪದಲ್ಲಿ ಅಗ್ನಿಯನ್ನು ವಶಮಾಡಿಕೊಂಡಿದ್ದರಿಂದ ಅವನಿಂದ ಲಭಿಸಿದ ಪಾಕವಿದ್ಯೆಯನ್ನು ಋತುಪರ್ಣ ರಾಜನ ಮುಂದೆ ಪಾಕಶಾಲೆಯಲ್ಲಿ ಬಳಸಿದ. ಅವನ ಹೆಸರಿನ 'ನಳಪಾಕ ರಹಸ್ಯ' ಎಂಬ ಚಿಕ್ಕ ಹೊತ್ತಿಗೆಯು ಸಂಸ್ಕೃತದಲ್ಲಿ ಉಪಲಬ್ಧವಿದೆ. ಹಾಗೆ ಪುಸ್ತಿಕೆ ಪ್ರಾಚೀನವಲ್ಲ, ಮಧ್ಯಯುಗೀನ, ಆದರೆ ನಳನ ಈ ವಿದ್ಯೆಯು ಖ್ಯಾತಿಯು ತೀರ ಪ್ರಾಚೀನವಾಗಿದ್ದರಿಂದ ಅವನ ಹೆಸರಿನಿಂದಾಗಿ ಈ ಪುಸ್ತಿಕೆ ಮಾರಾಟವಾಗುತ್ತದೆ. ನನ್ನ ಬಳಿ ಈ ಪುಸ್ತಕದ ನಕಲು ಪ್ರತಿಯಿದೆ. ಅದರ ಒಂದು ಪರ್ಯಾಯವೂ

ಗ್ರಂಥಾಲಯದಲ್ಲಿ ಸಿಗುತ್ತದೆ. ಅದರ ಸಹಾಯದಿಂದ ಇದರಲ್ಲಿಯ ಕಲ್ಪನೆಯ ಬಗೆಗೆ, ಕೃತಿಯ ಬಗೆಗೆ ಒಮ್ಮೆ ಬರೆಯಬೇಕೆಂಬ ಇಚ್ಛೆಯಿದೆ. ಅದರಲ್ಲಿ ಮಾಂಸದ ಹಾಗೂ ಮಾಂಸರಹಿತ ಎಂಬೆರಡೂ ಪಾಕಕೃತಿಯಿದೆ. ಮಂಜುಗಡ್ಡೆಯನ್ನು ಹೇಗೆ ಸಂರಕ್ಷಿಸಬೇಕೆಂದೂ ಹೇಳಲಾಗಿದೆ. ತೆಂಗಿನ ರಸ ಹಾಗೂ ಬೆಲ್ಲ ಹಾಕಿ ತಯಾರಿಸಿದ ಫ್ರುಟ್ ಸಾಲಾಡ್ ಸಹ ಇದೆ. ಅದಕ್ಕೆ ಕರ್ಪೂರದ ವಾಸನೆಯಿದೆ. ಅಪರೂಪಕ್ಕೆ ಏಲಕ್ಕಿಯದು ಇದೆ. ಮಸಾಲೆಯಲ್ಲಿ ಕೋತಂಬರಿ, ಲವಂಗ, ಜೀರಿಗೆ, ಇಂಗು ಇವುಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ.

ಭೀಮ ಬಲಿಷ್ಠ ಮನುಷ್ಯ. ಅವನೂ ವಿರಾಟರಾಜನ ಮನೆಯಲ್ಲಿ ಅಡುಗೆ ಭಟ್ಟನೇ ಆಗಿದ್ದ. ಆದರವನು ಮಾಡಿದ ಯಾವುದೇ ಖಾಸಾ ಅಡುಗೆಯ ಉಲ್ಲೇಖ ಎಲ್ಲೂ ಉಪಲಬ್ಧವಿಲ್ಲ. ಪಾಂಡವರು ವನವಾಸದಲ್ಲಿದ್ದಾಗಲೂ ಅವನು ಏನೂ ಮಾಡಿದ್ದು ಕಂಡುಬರುವುದಿಲ್ಲ. ವನವಾಸದಲ್ಲಿ ಕೇವಲ ದ್ರೌಪದಿಯ ಅಕ್ಷಯ ಪಾತ್ರೆಯ ಉಲ್ಲೇಖ ಬರುತ್ತದೆ. ಆದರೆ ಅಕ್ಷಯ ಪಾತ್ರದಲ್ಲಿ ದೈವ ಶಕ್ತಿಯಿರುತ್ತದೆ. ಇಚ್ಛೆಯಂತೆ ಅದರಲ್ಲಿ ವಿವಿಧ ಭಕ್ಷ್ಯ ಸಾಕಷ್ಟು ಸಿದ್ಧವಾಗುತ್ತಿತ್ತು. ಅದರಲ್ಲಿ ದ್ರೌಪದಿಯದೇನೂ ತಪ್ಪಿಲ್ಲ. ದೂರ್ವಾಸ ಮಧ್ಯರಾತ್ರಿಗೆ ಬಂದವನೇ 'ಬೇಗ ಅನ್ನವನ್ನು ನೀಡು, ಇಲ್ಲದಿದ್ದರೆ ಶಾಪ ಕೊಡುತ್ತೇನೆ' ಎಂದ. ಕೊಡಬೇಕೆಂದರೆ ಏನು ಇರಲಿಲ್ಲ. ಪಾತ್ರೆಗೆ ಕೇವಲ ಒಂದು ಎಲೆ ಅಂಟಿಕೊಂಡಿತ್ತು. ಕೃಷ್ಣನಿಗೂ ಹಸಿವೆಯಾಗಿತ್ತು. ಅವನು ಆ ಎಲೆಯನ್ನು ತಿಂದ. ಅಕಾಲದಲ್ಲಿ ಅನ್ನ ನೀಡದ ತಟ್ಟೆಯನ್ನು ಲೆಕ್ಕಿಸದೆ, ಅವನು ದೂರ್ವಾಸನಿಗೆ ಹೊಟ್ಟೆ ತುಂಬ ಊಟ ಹಾಕಿದ. ಇಲ್ಲಿ ಒಂದು ಸಂದಿಗ್ಧತೆಯಿದೆ. ದ್ರೌಪದಿಯ ಮೂಲ ಪಾತ್ರೆಯಲ್ಲಿ ತರಕಾರಿ ಬೇಯಿಸಲಾಗಿತ್ತೋ, ಅಥವಾ ಅದು ತಟ್ಟೆಯಲ್ಲೇ ಇತ್ತೋ ಹೇಳಲು ಬರುವುದಿಲ್ಲ. ಆದರೆ ತರಕಾರಿಯ ಪ್ರಶಸ್ತಿ ಪತ್ರವನ್ನು ದ್ರೌಪದಿಗೆ ನೀಡಿದರೂ ಅಡ್ಡಿಯಿಲ್ಲ.

ಸೀತೆಯೂ ಸಹ ಗ್ರಂಥ ರಚಿಸದಿದ್ದರೂ ಅನ್ನ ಬೇಯಿಸುತ್ತಿದ್ದಳು. ಸೀತೆಯು ಅಡುಗೆ ಮಾಡುತ್ತಿರುವಾಗ ಅದು ಕೆಳಗೆ ಚೆಲ್ಲಿತ್ತು. ಆದ್ದರಿಂದ ಅಕ್ಕಿಯಂಥ ಚಿಕ್ಕ ಚಿಕ್ಕ ಕಲ್ಲುಗಳು ರಾಮೇಶ್ವರದಲ್ಲಿ ಸಿಗುತ್ತದೆ ಎಂದು ಹೇಳುವ ಆಖ್ಯಾಯಿಕೆಯಿದೆ. ಕೇಣಿಯ ಪಲ್ಲೆಯ ವಿಷಯ ಶನಿಯ ಕಥೆಯಲ್ಲಿ ಬರುತ್ತದೆ. ಕೇಣಿಯ ಹೂವಿಗೆ ಸೀತೆಯ ಕಣ್ಣೀರು ಎನ್ನುತ್ತಾರೆ. ಯಾಚಕ ಶನಿದೇವನಿಗೆ ಬ್ರಾಹ್ಮಣನ ಸೊಸೆಯು ಕೇಣಿಯ ಮತ್ತು ಕುರ್ಡುವಿನ ಪಲ್ಲೆ ಮಾಡಿ ಹಾಕಿದಳು. ಕೇಣಿಯ ಎಲೆಯ ಪಕೋಡಾ ಬಲೂನಿನಂತೆ ಉಬ್ಬುತ್ತದೆ. ತುಂಬ ರುಚಿಯಾಗಿರುತ್ತದೆ. ಸೀತೆ ಭೂಮಿಯಲ್ಲಿ ಅದೃಶ್ಯಳಾದಳು: ಪಲ್ಲೆ ಮಾಡುವ ಗೃಹಿಣಿಯು ತರಕಾರಿಯಲ್ಲಿ ರೂಪಾಂತರಗೊಂಡಳು ಇಂಥ ಹಲವು ಜಾನದಪ ಕಥೆಗಳು ಪ್ರಚಲಿತವಾಗಿವೆ. ಸೀತೆಯ ಹೆಸರಿಗೂ ಒಂದು ಮದ್ಯಕ್ಕೂ ಸಂಬಂಧವಿದೆ. ಸೀತೆಗೆ ಮಾಂಸ

ಬೇಯಿಸುವದರಲ್ಲಿ ಆಸಕ್ತಿ-ಮದ್ಯದ ಬಗೆಗೂ ಗೊತ್ತಿತ್ತು. ಅವಳು ದೇವಿಗೆ ಹರಕೆ ಹೊತ್ತಳು- 'ನಾವು ವನವಾಸದಿಂದ ಸುಖವಾಗಿ ಮರಳಿ ಬಂದಲ್ಲಿ, ನಿನಗೆ ಮದ್ಯ-ಮಾಂಸದ ನೈವೇದ್ಯ ನೀಡುತ್ತೇನೆ' ಎನ್ನುವದು ರಾಮಾಯಣದ ಸಂದರ್ಭದಲ್ಲಿ ಹೇಳಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸೀತೆಗೆ ಮೈರೆಯ ಎಂಬ ಮದ್ಯ ಪ್ರಿಯವಾಗಿತ್ತಂತೆ ಎಂದು ಹೇಳಿ ಅದರ ಕೃತಿಯ ಬಗೆಗೂ ಹೇಳಲಾಗಿದೆ. ಈ ಬಗೆಗೆ ಮತ್ತೊಮ್ಮೆ ಎಂದಾದರು!

(ಅಬಕಡಯಿ, ದೀಪಾವಳಿ ಸಂಚಿಕೆ-೮೩)

ಸಂದರ್ಭ:

೧. ಹಿಂದೆ ಜೀವನಾವಶ್ಯಕವಾದ ಉಪ್ಪು ಬುಡಕಟ್ಟು ಜನರಲ್ಲಿ ವಿರಳವಾಗಿತ್ತು. ಚಿಟಿಕೆ ಉಪ್ಪಿಗೂ ಒದ್ದಾಡಬೇಕಾಗುತ್ತಿತ್ತು. ಉಪ್ಪು ಸಿಗದಿದ್ದಾಗ ಎಡಗೈ ಹೆಬ್ಬೆರಳು ಚೀಪಿ ಊಟಕ್ಕೆ ರುಚಿ ತರುವ ಪ್ರಯತ್ನ ಮಾಡುತ್ತಿದ್ದರು.
'ನೀನು ನನಗೆ ಹೆಬ್ಬೆರಳಿನಂತೆ ಪ್ರಿಯೆ' ಎಂದು ಶ್ರೀಕೃಷ್ಣನು ಸತ್ಯಭಾಮೆಗೆ ನುಡಿದದ್ದು ಉಪ್ಪಿನಷ್ಟೇ ಅವಶ್ಯಕ ಹಾಗೂ ಹೆಬ್ಬೆರಳಿನಷ್ಟೇ ಮಹತ್ವದವಳು ಎಂಬರ್ಥದಲ್ಲಿ.

* * * *

ವಿಚಾರ ಸಂಚಯ

ಭಾಗ – ೨

ಪ್ರಸ್ತಾವನೆ

ದುರ್ಗಾ ಭಾಗವತರು ಒಬ್ಬ ಗಂಭೀರ ಪ್ರವೃತ್ತಿಯ ಚಿಂತನಶೀಲ ಲೇಖಕಿ. ಅವರ ಬರೆಹಗಳು ಓದುಗರನ್ನು ಯೋಚಿಸುವಂತೆ ಮಾಡುತ್ತವೆ. ಬೇರೆ ದಿಕ್ಕನ್ನು ತೋರಿಸುತ್ತವೆ. ಸಾಹಿತ್ಯದ ಬೇರೆ, ಬೇರೆ ಪ್ರಕಾರಗಳಲ್ಲಿ ಅವರು ಬರವಣಿಗೆಯನ್ನು ಕೈಕೊಂಡರು. ಅವರೊಬ್ಬ ಸಂವೇದನಶೀಲ, ಅಂತರ್ಮುಖ ಸ್ವಭಾವದ, ಮುಕ್ತ ಹಾಗೂ ವಿಚಾರ ಸಮ್ಮುಖ ದೃಷ್ಟಿಕೋನ ಹೊಂದಿದ ಲೇಖಕಿ ಎಂದೇ ಖ್ಯಾತಿಯನ್ನು ಪಡೆದಿದ್ದಾರೆ. ಅವರು ವಿಪುಲ ಲೇಖನವನ್ನು ಕೈಕೊಂಡಿದ್ದಾರೆ. ಎಷ್ಟು ಪ್ರಕಟಿತಗೊಂಡಿವೆಯೋ ಅಷ್ಟೇ ಅಪ್ರಕಟಿತ ಲೇಖನಗಳ ಸಂಖ್ಯೆಯೂ ಅಪಾರವಾಗಿದೆ. ಅವುಗಳಲ್ಲಿ ಹೆಚ್ಚು ಹೆಚ್ಚು ಲೇಖನಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಸಂಸ್ಕೃತಿ ಸಂಚಯ ಮತ್ತು ವಿಚಾರ ಸಂಚಯ ಗ್ರಂಥಗಳಲ್ಲಿ ಅವುಗಳನ್ನು ಸಮಾವೇಶ ಮಾಡಲಾಗಿದೆ. ತಮ್ಮ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತ ಮಾಡಲು ಅವರು ನಿಯತಕಾಲಿಕ ಪತ್ರಿಕೆಗಳನ್ನು ಬಳಸಿಕೊಂಡಂತೆ ಕಾಣುತ್ತದೆ.

ಮಾನವನ ಒಂಟಿತನ ಹಾಗೂ ಸಮೂಹ ಜೀವನ ದುರ್ಗಾ ಭಾಗವತರನ್ನು ಹಲವು ಬಗೆಯಲ್ಲಿ ಕಾಡಿದ್ದುಂಟು. ಮಾನವಶಾಸ್ತ್ರ ಅವರ ಕುತೂಹಲದ, ಸಂಶೋಧನೆಯ ವಿಷಯ. ಖ್ಯಾತ ಮಾನವಶಾಸ್ತ್ರಜ್ಞರಾದ ಕ್ಲಾಡ್ ಲೇವ್ಹಿ ಹಾಗೂ ಡಾರ್ವಿನ್‌ನ ಬಗೆಗೆ ಬರೆದಿದ್ದಾರೆ. ಹಲವು ವಿಷಯಗಳು ಪತ್ರಿಕೆಗಳ ಮಿತಿಯಿಂದಾಗಿ ಪೂರ್ಣಗೊಳಿಸುವದು ಸಾಧ್ಯವಾಗದೇ ಹೋದ ಹಳಹಳಿಕೆ ಅವರದಾಗಿದೆ. ಹೀಗಾಗಿ ಅವರ ಸಂಶೋಧನೆಯ ಲಾಭ ಓದುಗರಿಗೆ ಸರಿಯಾಗಿ ಸಿಗದೇ ಹೋಯಿತು. ಇಂದು ಉಪಲಬ್ಧವಿರುವ ಇಂಥ ಅಪೂರ್ಣ ಲೇಖನಗಳಿಂದ ದುರ್ಗಾ ಭಾಗವತರ ಭಿನ್ನವಾದ ದೃಷ್ಟಿಕೋನವನ್ನು ಅರಿಯಬಹುದಾಗಿದೆ.

ದುರ್ಗಾ ಭಾಗವತರಿಗೆ ಬೌದ್ಧಧರ್ಮ ಹಾಗೂ ಸಾಹಿತ್ಯದ ಬಗೆಗೆ ಅಪಾರ ಕುತೂಹಲವಿತ್ತು. ಡಾ. ಅಂಬೇಡ್ಕರ್‌ರು ತಮ್ಮ ಅನುಯಾಯಿಗಳ ಜೊತೆಗೆ ಬೌದ್ಧಧರ್ಮ ಸ್ವೀಕರಿಸಿದ್ದರಿಂದ ದೇಶದಲ್ಲಿ ದೊಡ್ಡ ಕೋಲಾಹಲವೇ ಎದ್ದಿತು. ವಿಚಾರಕ್ಕೆ ಒಂದಿಷ್ಟು ಚಾಲನೆ ಸಿಕ್ಕರೂ ಬೌದ್ಧ ಧರ್ಮದ ಬಗೆಗೆ ಆಳವಾದ ಚರ್ಚೆ ನಡೆಯಲಿಲ್ಲವೆಂದೇ ದುರ್ಗಾಬಾಯಿಗೆ ಅನಿಸಿತು. ಅದರ ಬಗೆಗೆ ಒಂದು ಲೇಖನವನ್ನು ಇಲ್ಲಿ ನೀಡಲಾಗಿದೆ. ಬೌದ್ಧ ಧರ್ಮದ ಬಗ್ಗೆ, ಗೌತಮ ಬುದ್ಧನ ಬಗೆಗೆ ಅಪಾರ ಪ್ರೇಮ ಗೌರವವಿದ್ದರೂ,

ಸಂಶೋಧಕರಾಗಿ ಬರೆಯುವಾಗ ಬೌದ್ಧಧರ್ಮದ ತತ್ವ ಹಾಗೂ ಸಾಮೂಹಿಕ ಮತಾಂತರದ ಚರ್ಚೆ ಮಾಡುತ್ತಾರೆ. ಮಾರ್ಮಿಕ ಸಮೀಕ್ಷೆ ಮಾಡುತ್ತಾರೆ. ಇದು ತತ್ಕಾಲದ, ವೈಯಕ್ತಿಕ ಅಭಿಪ್ರಾಯವಾಗಿದ್ದು, ಅದರ ಬಗೆಗೆ ವಿರಳವಾಗಿ ಭಿನ್ನಾಭಿಪ್ರಾಯ ಏರ್ಪಡುವ ಸಾಧ್ಯತೆಯಿದೆ. ಅವರ ದೃಷ್ಟಿಕೋನವನ್ನು ಅರಿಯಲು ಇದು ಉಪಯುಕ್ತವಾಗಿದೆ. ಇಂಥ ಹಲವು ಲೇಖನಗಳ ಬಗೆಗೆ ಮತಭಿನ್ನತೆ ಕಾಣಿಸಿಕೊಳ್ಳುವ ಸಾಧ್ಯತೆಯಿದ್ದರೂ ಅವರ ಅಭಿಪ್ರಾಯವನ್ನು ಗಮನಿಸದೇ ಇರುವದು ಸಾಧ್ಯವಿಲ್ಲವೆಂದೆನಿಸುತ್ತದೆ.

ತುರ್ತು ಪರಿಸ್ಥಿತಿಯ ಕಾಲದಲ್ಲಿ ಅವರು ವಿರೋಧ ವ್ಯಕ್ತಪಡಿಸಿ, ಭಾಷಣ ಮಾಡಿ, ಲೇಖನ ಬರೆದು ಸೆರೆವಾಸವನ್ನು ಅನುಭವಿಸಿದರು. ತದನಂತರದ ಕಾಲದಲ್ಲೂ ದೇಶದ ರಾಜಕೀಯ ಚಟುವಟಿಕೆಯ ಬಗೆಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ರಾಜಕಾರಣದ ಹೊರತು ಸಾಮಾನ್ಯ ಮನುಷ್ಯ ಬದುಕುವುದೇ ಸಾಧ್ಯವಿಲ್ಲೆಂದು ಅವರಿಗೆ ಅನಿಸುತ್ತದೆ. ಈ ಕಾರಣಕ್ಕಾಗಿ ಲೇಖಕನ ಸ್ವಾತಂತ್ರ್ಯ ಸಾಮಾಜಿಕ ಬದ್ಧತೆಯ ಬಗೆಗೂ ಬರೆದರು...

ಸಮಾಜದ ಜೊತೆಗೆ ಬೆರೆತು, ಜನಮಾನಸವನ್ನು ಅರಿಯುವ ಪ್ರಯತ್ನ ಅವರು ಮಾಡಿದರು. ಹೀಗಾಗಿ ಅವರು ಬುಡಕಟ್ಟು ಜನರೊಂದಿಗೆ ವಾಸಿಸಿದರು. ಸಭೆ-ಸಮಾರಂಭ, ಸಮ್ಮೇಳನಗಳಲ್ಲೂ ಭಾಗವಹಿಸಿದರು. ಆದರೆ ಎಲ್ಲೂ ಅವರು ತಮ್ಮ ವಿದ್ವತ್ತನ್ನು ಮೆರೆಯಲಿಲ್ಲ. ಪಾಂಡಿತ್ಯದ ಪ್ರದರ್ಶನ ಮಾಡಲಿಲ್ಲ. ಅವರಿಗೆ ಹಲವು ವಿಷಯಗಳ ಬಗೆಗೆ ಕುತೂಹಲವಿರುವುದರಿಂದ ಅಡುಗೆಯಿಂದ ಹಿಡಿದು ಸಂಶೋಧನೆಯವರೆಗೆ ಯಾವುದೇ ವಿಷಯದ ಬಗೆಗೆ ಅವರು ಮಾತಾಡಬಲ್ಲವರಾಗಿದ್ದರು. ಆದರೆ ಅವರ ನಿರೀಕ್ಷಣೆಯ ದೃಷ್ಟಿ, ಭಿನ್ನತೆಯನ್ನು ಗುರುತಿಸುವ ದೃಷ್ಟಿ ಸತತ ಜಾಗೃತವಾಗಿರುತ್ತಿತ್ತು. ಇಂಥ ಕಾಲಕ್ಕೆ ಯಾರದೇ ರಾಗ-ಲೋಭವನ್ನು ಲೆಕ್ಕಿಸುತ್ತಿರಲಿಲ್ಲ. ಯಾವುದೇ ಸೌಲಭ್ಯವನ್ನು ಮಹಿಳೆಯರಿಗಾಗೇ ಎಂದು ಮಾಡುವುದು ಅವರಿಗೆ ಇಷ್ಟವಿದ್ದಂತಿಲ್ಲ. ಕಲೆ, ಸಾಹಿತ್ಯ ಕ್ಷೇತ್ರದಲ್ಲಿ ಯಾವುದೇ ಭೇದ-ಭಾವವಿರಬಾರದು ಎನ್ನುವುದು ಅವರ ಅಭಿಪ್ರಾಯವಾಗಿದೆ.

ಸಮಾಜ, ಸಾಹಿತ್ಯ ವ್ಯವಹಾರದಲ್ಲಿ ಗೋಚರಿಸುವ ಅಪಪ್ರವೃತ್ತಿಯನ್ನು ಅವರು ಸದಾ ವಿರೋಧಿಸುತ್ತಲೇ ಬಂದಿದ್ದಾರೆ. ಅವರ ನೇರ, ನಿರ್ಭಯ, ದಿಟ್ಟ ವರ್ತನೆಯಿಂದಾಗಿ ಮಾತು ಬರವಣಿಗೆಯಿಂದಾಗಿ ಆಗಾಗ ವಿರೋಧ ವ್ಯಕ್ತವಾಗಿದ್ದುಂಟು. ಇದರಿಂದಾಗಿ ಕೆಲವರ ಮನಸಿಗೆ ನೋವಾಯಿತು, ಕೆಲವರಿಗೆ ಅವರು ಅಪ್ರಿಯರೂ ಆದರು. ಅವರನ್ನು ದುಷ್ಟ ವಿದೂಷಿ ಎಂದೂ ಜರೆಯಲಾಯಿತು. ಆದರೆ ಅವರು ಮಾತ್ರ ಇದಾವುದನ್ನು ಲೆಕ್ಕಿಸಲಿಲ್ಲ. ನಮ್ಮ ಸಾಂಸ್ಕೃತಿಕ, ವಿಶ್ವವಿದ್ಯಾಲಯದ, ಶೈಕ್ಷಣಿಕ, ರಾಜಕೀಯ ಹಾಗೂ ಸಾಹಿತ್ಯಕ ಕ್ಷೇತ್ರದಲ್ಲಿ ಪರಿಶುದ್ಧತೆ, ನೀತಿ-ವಿವೇಕ ಇರಬೇಕೆನ್ನುವ ಬಯಕೆ ಅವರದ್ದಾಗಿತ್ತು. ಅಂಥ ಸ್ಪಷ್ಟ, ಖಚಿತ ಅಭಿಪ್ರಾಯದ ಲೇಖನಗಳು ಇಲ್ಲಿವೆ. ಇಂಥ ನಿರ್ಭೀತ ಟೀಕೆಯ ಬಗೆಗೆ ಅವರು ಭಾರೀ ಬೆಲೆಯನ್ನೂ ತೆತ್ತಿದ್ದಾರೆ. ಈ ಸ್ವಭಾವ ವಿಶೇಷತೆಯು ಅವರ ಮನೆತನದ ಬಳುವಳಿಯಾಗಿ ಬಂದಿದೆ.

ಜಾಗತಿಕ ಭಾರತೀಯ ಮತ್ತು ಜಾನಪದ ಸಾಹಿತ್ಯದ ಬಗೆಗೆ ವ್ಯಾಸಂಗ ಮಾಡುವಾಗ ಅವರಿಗೆ ಸಾಹಿತ್ಯದ ಒಳಿತು-ಕೆಡಕುಗಳ ಖಚಿತ ಅರಿವು ಇತ್ತು. ಹಾಗೆಯೇ ಆಕೃತಿ ಬಂಧ, ಹಳೆ-ಹೊಸ ಪ್ರವಾಹದಲ್ಲಿ ತಿಳುವಳಿಕೆಯೂ ಇತ್ತು. ಹೀಗಾಗಿ ಮರಾಠಿ ದಿಗ್ಗಜ ಲೇಖಕರ ಬಗೆಗೆ ಬರೆಯುವಾಗ ಯಾವ ಮೂಲಾಜೂ ಇಲ್ಲದೆ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡುತ್ತಾರೆ. ಆದರೂ ಅವರು ಸಾಹಿತ್ಯದಲ್ಲಿ ಬರುವ ಹೊಸ ಪ್ರಯೋಗಶೀಲತೆಯನ್ನು ಸ್ವಾಗತಿಸುತ್ತಾರೆ. ಹೊಸ ಲೇಖಕರಿಗೆ ಬೆಂಬಲವನ್ನು ನೀಡುತ್ತಾರೆ. ತಾವೇ ಬರೆದ ಹಳೆಯ ಲೇಖನಗಳನ್ನು ಮರುಪರೀಕ್ಷೆಗೆ ಒಡ್ಡುತ್ತಾರೆ. ನಿರ್ಭಯವೇ ಅವರ ಸ್ವಭಾವ ಧರ್ಮವಾಗಿದೆ. ಅವರ ನಡೆ-ನುಡಿಗಳಲ್ಲಿ ಅದು ವ್ಯಕ್ತವಾಗುತ್ತದೆ. ಯಾವುದೇ ಲೇಖಕರ ಗುಂಪಾಗಲಿ, ರಾಜಕೀಯ ಗುಂಪಾಗಲು ಬೆಂಬಲಿಸಿದವರಲ್ಲ. ಇದರಿಂದಾಗಿ ಅವರಿಗೆ ಅನುಯಾಯಿಗಳಾಗಲಿ ಇಲ್ಲವೇ ಇಲ್ಲ ಎಂದರೂ ಅಡ್ಡಿಯಿಲ್ಲ. ಒಂಟಿ ಸಲಗದಂತೆ ಅವರು ನಡೆದದ್ದೇ ದಾರಿ. ಇದರಿಂದಾಗಿ ಸರ್ಕಾರದ ಪ್ರಶಸ್ತಿ ಬಗೆಗಿನ ನಿಲುವು ತಾಳಿದಾಗ, ಲೇಖಕರ ಬದ್ಧತೆ ಬಗೆಗಿನ ನಿಲುವಿನಲ್ಲಾಗಲಿ, ತುರ್ತು ಪರಿಸ್ಥಿತಿಯ ನಂತರ ಸರಕಾರದ ಧೋರಣೆಯನ್ನು ಟೀಕಿಸಿ ಬಹಿಷ್ಕಾರ ಹಾಕಿದ ಪ್ರಸಂಗದಲ್ಲೆಲ್ಲ ಅವರು ಒಂಟಿಯಾಗಿಯೇ ಹೋರಾಡಬೇಕಾಯಿತು. ಆದರೂ ಜನಸಮಾನ್ಯರು ಮಾತ್ರ ಈ ಲೇಖಕಿಯ ಬೆನ್ನಾಗಿದ್ದಾರೆ. ಅವರು ಸಮಾಜದ ವಿವೇಕ ಬುದ್ಧಿಯ ಮೂರ್ತ ಪ್ರತೀಕವಾಗಿದ್ದರು. ಪ್ರಾಸಂಗಿಕವಾಗಿ ಬರೆದ ಲೇಖನಗಳು ಇಂದಿಗೂ ಪ್ರಸ್ತುತವಾಗಿವೆ. ಇಂದಿಗೂ ಆ ಪ್ರಶ್ನೆಗಳು ಹಾಗೆಯೇ ಉಳಿದುಕೊಂಡಿವೆ.

ಬೌದ್ಧ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ಅನುವಾದ ಮಾಡಿದ್ದರಿಂದ ಅನುವಾದಕಲೆಯ ಬಗೆಗೂ ಹೇಳುತ್ತ ಜಾಗತಿಕ ಸ್ತರದಲ್ಲಿ ನಡೆದ ಅನುವಾದ ಕಲೆಯ ಮರ್ಮವನ್ನು ಹೇಳುತ್ತಾರೆ. ಯಾವುದೇ ವಿಷಯದ ಬಗೆಯ ದ್ವಂದ್ವವಿರುವುದಿಲ್ಲ. ಎಲ್ಲೆಡೆ ಏಕತೆಯನ್ನು ಗಮನಿಸುವ ಅವರ ದೃಷ್ಟಿಯು ಆ ವಿಷಯಕ್ಕೆ ಬೇರೆಯೇ ಪರಿಮಾಣ ನೀಡುತ್ತದೆ. ಅವರು ಸ್ತ್ರೀ ಮುಕ್ತಿ ಚಳವಳಿಯನ್ನು ಎಂದೂ ಬೆಂಬಲಸಲಿಲ್ಲ. ಮಹಿಳೆಯರು ತಮ್ಮ ಕರ್ತೃತ್ವ ಶಕ್ತಿಯಿಂದ ಗೌರವ ಸ್ಥಾನವನ್ನು ಪಡೆಯಬೇಕೆಂದು ಬಯಸುತ್ತಾರೆ. ತಮ್ಮ ಹಕ್ಕಿನದು ಏನಿದೆಯೋ ಅದನ್ನು ಪಡೆಯಬೇಕೆನ್ನುವದು ಅವರ ನಿಲುವು. ಹೀಗಾಗಿ ರಾಜಕಾರಣದಲ್ಲಿ ಮಹಿಳಾ ಮೀಸಲಾತಿಯನ್ನು ವಿರೋಧಿಸುತ್ತಾರೆ. ಮಹಿಳೆಯರಿಗಾಗಿ ಸ್ವತಂತ್ರ ವಿಶ್ವವಿದ್ಯಾಲಯ ಏಕೆ ಬೇಕು? ಎನ್ನುತ್ತಾರೆ. ಗತ ಪೀಳಿಗೆಯ ಮಹಿಳೆಯ ತೋರಿಸಿದ ಕರ್ತೃತ್ವ ಶಕ್ತಿಯ, ಜೊತೆಗೆ ಮಹಿಳೆಯರ ಜೀವನದಲ್ಲಿರುವ ಅಪಾಯದ ಅರಿವೂ ಅವರಿಗಿದೆ. ಮಹಿಳೆಯ ಸ್ವಂತ ವ್ಯಕ್ತಿತ್ವ ವಿಕಸನ ಮಹತ್ವದ್ದೆಂದು ಹೇಳುತ್ತಾರೆ.

ಮುಕ್ತ ಮಹಿಳೆಯ ಪರಿಕಲ್ಪನೆಯನ್ನು ಅವರು ಅರಿವಿಲ್ಲದೆಯೇ ತಮ್ಮ ಸ್ವಂತ ಉದಾಹರಣೆಯನ್ನೇ ಜನರೆದುರಿಗಿಟ್ಟರು. ಅದು ಅಪರೂಪದ, ಆದರ್ಶದ ಉದಾಹರಣೆಯಾಗಿತ್ತು. ಏಕೆಂದರೆ ಮನೆಯ ಸಂಸ್ಕಾರ, ನಿರ್ಭಯ – ನಿಸ್ಪೃಹ ವ್ಯಕ್ತಿತ್ವ,

ಮೌಲ್ಯನಿಷ್ಠೆ, ಈ ಎಲ್ಲ ಗುಣಗಳು ಅವರ ಪ್ರಜ್ಞೆ–ಪ್ರತಿಭೆಯ ಶಕ್ತಿಯನ್ನು ಹೆಚ್ಚಿಸುವಂತಹದೇ ಆಗಿತ್ತು. ಹೀಗಾಗಿ ಅವರ ಹೆಸರಿಗೆ ಏಕಮೇವ ಎಂಬ ವಿಶೇಷಣ ಅಂಟಿಕೊಂಡಿತು.

ದುರ್ಗಾ ಭಾಗವತರು ಸುಮಾರು ಆರು ದಶಕಗಳ ಕಾಲ ಬರೆದರು. ಅವರಿಗಿರುವ ಅನುಭವ ಅಪಾರ. ಆ ಕಾಲದ ಸಾಮಾಜಿಕ ರಾಜಕೀಯ ಪಲ್ಲಟಗಳಿಗೆ ಅವರು ಸಾಕ್ಷಿಯಾದರು. ಇಂಥ ಕಾಲದಲ್ಲೂ ಅವರ ಲೇಖನದ ಸತ್ವ ಮಾತ್ರ ಅಬಾಧಿತವಾಗುಳಿಯಿತು. ಅವರ ಬರವಣಿಗೆ ವಿಸ್ತರಿಸಿತು. ನಾಗರಿಕನಾಗಿ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುವ ಕಾರಣಕ್ಕಾಗಿ ಬರೆಯುತ್ತಲೇ ಇದ್ದರು. ಅವರು ಹೇಳಿದ ಮಾತು ಯಾರೇ ಆಗಲಿ ನಿರ್ಲಕ್ಷಿಸುವಂತಿರಲಿಲ್ಲ. ಅದರ ಹಿಂದೆ ವ್ಯಾಪಕ ಆಳವಾದ ಅಧ್ಯಯನವಿರುತ್ತಿತ್ತು. ವ್ಯಾಪಕ ಸಂಸ್ಕೃತಿಯ, ಸನಾತನ ಕಾನ್ವಾಸವಿರುತ್ತಿತ್ತು. ವಿಷಯ ವರ್ತಮಾನದ್ದಾಗಿದ್ದರೂ ಸನಾತನತೆ ಇರುತ್ತಿತ್ತು. ಅವರ ಬರವಣಿಗೆಯ ಬಗೆಗೆ ಸಾಕಷ್ಟು ವಾದವಿವಾದಗಳು ನಡೆದವು. ಆದರೆ ಅವರೆಂದೂ ಅನುಚಿತ ಭಾಷೆಯನ್ನು ಬಳಸಲಿಲ್ಲ. ಅವರು ಬರೆದ ಮ. ಫುಲೆ, ಅಂಬೇಡ್ಕರ್ ಬಗೆಗೆ ಸಾಕಷ್ಟು ಪ್ರತಿಕ್ರಿಯೆಗಳು ಬಂದವು.

ಸಾವಿನ ಬಳಿಕ ವ್ಯಕ್ತಿಯ ಕರ್ತೃತ್ವ ಶಕ್ತಿಯನ್ನು ಹೆಚ್ಚು ವಸ್ತುನಿಷ್ಠವಾಗಿ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ದುರ್ಗಾ ಭಾಗವತರ ಲೇಖನಗಳ ಬಗೆಗೆ ಯೋಚಿಸುವಾಗ ಅದರಲ್ಲಿಯ ಕೊರತೆ, ವಿಸಂಗತಿ, ಗಮನಕ್ಕೆ ಬರುತ್ತದೆ. ಅತ್ಯಂತ ಭಾವ ಕೋಮಲವಾಗಿದ್ದರೂ ವೈಚಾರಿಕತೆಯಿಂದ ಕೂಡಿದ, ಲಯಬದ್ಧವಾಗಿದ್ದರೂ ಮಾರ್ಮಿಕ ಶಾಬ್ದಿಕ ಚಮತ್ಕಾರದಿಂದ ಕೂಡಿದ, ದಟ್ಟ ಸಂವೇದನಾನುಭವಕ್ಕೆ ಮರಾಠಿ ಸಾಹಿತ್ಯದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಕಲ್ಪಿಸಿದೆ.

– ಮೀನಾ ವೈಶಂಪಾಯನ

೧೩. ಸಾಮುದಾಯಿಕ ಜೀವನ : ಮಾನವೀಯ – ಅಮಾನವೀಯ

ನಿಸರ್ಗದಲ್ಲಿ ಒಂಟಿತನ ಇದೆಯೆ? ಮನುಷ್ಯನಿಗೆ ಮಾತ್ರ ಒಂಟಿತನ ಕಾಡುತ್ತದೆಯೋ ಅಥವಾ ಪ್ರಾಣಿ ಸೃಷ್ಟಿಯಲ್ಲೂ ಅದು ಒಳಗೊಂಡಿದೆಯೆ? ಒಂಟಿತನವು ಸಾಂಸ್ಕೃತಿಕ ಶಾಪವೇ? ಎಂಬ ಪ್ರಶ್ನೆಗಳು ಸದಾಕಾಲ ನಮ್ಮ ಮನದಲ್ಲಿ ತಲೆದೋರುತ್ತದೆ. ಒಂಟಿಯಾಗಿ ಕೂತ ಬೆಕ್ಕು ಕಣ್ಣು ಮುಚ್ಚಿ, ಸುಖದಿಂದ ಗುರುಗುಡುತ್ತದೆ. ಒಂಟಿ ಕೊಕ್ಕರೆ ಧ್ಯಾನ ಮಾಡುತ್ತ ಮೀನು ನುಂಗುತ್ತದೆ. ಹದ್ದುಗಳು ಆಕಾಶದಲ್ಲಿ ಒಂಟಿಯಾಗಿ ಹಾರಾಡುವುದನ್ನು ಕಂಡು ಮನುಷ್ಯ ಖಿನ್ನನಾಗುತ್ತಾನೆ. ತನ್ನ ಸಾಮಾಜಿಕ ಬದ್ಧತೆಯು ಅವನಿಗೆ ಉಪಭೋಗಿಸುವದು ಸಾಧ್ಯವಾಗದಿದ್ದರೆ ಅವನು ರೋಸಿಹೋಗುತ್ತಾನೆ. ಈ ಕಡೆಯಂತೂ ಅದೇ ಸಾಮಾಜಿಕ ಬದ್ಧತೆಯನ್ನು ಹೀನವೆಂದು ಭಾವಿಸಿ ಅದನ್ನು ತ್ಯಾಗ ಮಾಡಿ ವಿರಾಗಿ ಪುರುಷರು ಕಾಡುವಾಸವನ್ನು ಸುಖದಿಂದ ಸ್ವೀಕರಿಸುತ್ತಾರೆ. ಸದ್ಯಕ್ಕೆ ವಿರಾಗಿ ವೃತ್ತಿಯನ್ನು ನಿರ್ಲಕ್ಷಿಸಿ ವೈಜ್ಞಾನಿಕ ದೃಷ್ಟಿಯಿಂದ ಮತ್ತು ಮಾನವಶಾಸ್ತ್ರದ ಸಹಾಯದಿಂದ ಈ ಒಂಟಿತನ ಮತ್ತು ಸಾಮುದಾಯಿಕತನವನ್ನು ನಿರೀಕ್ಷಣೆ ಮಾಡುವದು ಸ್ವಾರಸ್ಯದ ಸಂಗತಿ.

ಸಾಮುದಾಯಿಕತೆಯು ಉತ್ಕ್ರಾಂತಿಯಿಂದ ನಿರ್ಮಾಣಗೊಂಡಿರುವ ಸಂಗತಿ ಎಂದರೆ ಹಲವರಿಗೆ ಅಚ್ಚರಿಯಾಗಬಹುದು. ಸಾಮಾನ್ಯವಾಗಿ ಉತ್ಕ್ರಾಂತಿಯ ಬಗೆಗೆ ನಮ್ಮ ನಿಲುವು ಏನೆಂದರೆ, ಡಾರ್ವಿನ್ ಎಂಬ ಮನುಷ್ಯನು ೧೧೬ ವರ್ಷಗಳ ಹಿಂದೆ ಮಾನವನ ಅವತಾರದ ಬಗೆಗೆ (ಡಿಸೆಂಟ್ ಆಫ್ ಮ್ಯಾನ್) ಬರೆದನು. ಆಗಲಿವನು ಪ್ರಗತಿಶೀಲ ವಾನರದಿಂದ ಮಾನವನ ಜಾತಿಯು ನಿರ್ಮಾಣಗೊಂಡಿತು ಎಂದು ಹೇಳಿದನು. ಈ ಉತ್ಕ್ರಾಂತಿಯ ಒಂದು ಕೊಂಡಿ ಕಳಚಿದೆ ಎಂದು ಹೇಳಿದನು. ಮುಂದೆ ವಿಜ್ಞಾನಿಗಳಿಗೆ ಉತ್ಖನನದಲ್ಲಿ ಚೀನಿ ಮನುಷ್ಯನ ಪ್ರಾಗೈತಿಹಾಸಿಕ ಕಾಲದ ತಲೆ ಬುರುಡೆ ಸಿಕ್ಕಿತು. ಅವರು ಕಳೆದುಹೋದ ಕೊಂಡಿಯು ಇದೇ ಆಗಿದೆ ಎಂದು ಹೇಳಿದರು. ಶತಕಗಳು ಉರುಳಿದವು. ಪ್ರಾಣಿಶಾಸ್ತ್ರ, ವನಸ್ಪತಿ ಶಾಸ್ತ್ರ, ಮಾನವಶಾಸ್ತ್ರ, ಪುರಾತತ್ವಶಾಸ್ತ್ರ ಇವುಗಳೆಲ್ಲ ತೀರ ಬದಲಾಗಿದ್ದು, ಉತ್ಕ್ರಾಂತಿಯ ಬಗೆಗಿನ ಕಲ್ಪನೆಯ ಡಾರ್ವಿನ್‌ಗಿಂತ ಸಾಕಷ್ಟು ಬದಲಾಗಿದೆ. ಈ ಸತ್ಯವನ್ನು ವಿದ್ಯಾಕ್ಷೇತ್ರವು ಈಗಲೂ ಯಥಾರ್ಥತೆಯಿಂದ ಸ್ವೀಕಾರ ಮಾಡಿದಂತೆ ಕಾಣುವುದಿಲ್ಲ. – ಅಂದಾಗ ಉಳಿದವರ ಮಾತೆಲ್ಲಿ?

ಉತ್ಕ್ರಾಂತಿವಾದವನ್ನು ಬೆಂಬಲಿಸಿದ ಬಳಿಕ ಮಾನವನ ಆನುಷಂಗಿಕ ಜೀವನದ ಬಗೆಗೆ ತುಂಬ ದೊಡ್ಡ ವಿಚಾರ ಪ್ರಣಾಲಿಯು ಅಸ್ತಿತ್ವಕ್ಕೆ ಬಂತು. ಮೊದಲ ಆಘಾತ ದೇವರ ಅಸ್ತಿತ್ವಕ್ಕೆ ಬಿತ್ತು, ನಿಸರ್ಗನಿಯಮ ಮತ್ತು ಧಾರ್ಮಿಕ ಸೃಷ್ಟಿಯ ದೇವರ ನಿಯಮ ಇವುಗಳ ಹೊಂದಾಣಿಕೆಯು ತುಂಡಾಯಿತು. ಹೀಗಾಗಿ ಭೌತಿಕವಾದವು ಅಸ್ತಿತ್ವಕ್ಕೆ ಬಂತು. ಎರಡನೆಯದೆಂದರೆ ಎಲ್ಲೆಡೆ ಮಾನವನು ಒಂದೇ ರೀತಿಯಾಗಿದ್ದಾನೆ. ಸಮತೆಯ ಬಗೆಗಿನ ಈ ನಂಬಿಕೆಯನ್ನು ಡಾರ್ವಿನ್‌ನ ಕಾಲದಲ್ಲೇ ಸ್ಪೆನ್ಸರ್‌ನಂಥವರು ಘೋಷಿಸಿದರು. ಈವರೆಗೂ ಅದನ್ನು ಮಾನವ ಶಾಸ್ತ್ರಜ್ಞರು ಶೀಲವೆಂದು ಸಂರಕ್ಷಿಸುತ್ತಿದ್ದಾರೆ. ಮೂರನೇ ವಿಚಾರವನ್ನು ಫ್ರೈಡನು ಮಂಡಿಸಿದ. ಅವನಿಂದಾಗಿ ಅಪ್ಪ-ಮಗ ಇವರ ನಡುವಣ ಸುಪ್ತ ವೈರ ಮತ್ತು ಈಡಿಪಸ್ ಕಾಂಪ್ಲೆಕ್ಸ್ ಕಲ್ಪನೆಯು ಹುಟ್ಟಿಕೊಂಡಿತು. ನಾಲ್ಕನೇ ತತ್ತ್ವವನ್ನು ಮಾರ್ಕ್ಸ್‌ನು ಮಂಡಿಸಿದನು. ಉತ್ಕ್ರಾಂತಿಯಲ್ಲೇ ಪ್ರಗತಿಯ ತತ್ತ್ವವಿದೆ ಎಂದ.ು. ಅದಕ್ಕನುಗುಣವಾಗಿ ಹೊಸ ಸಮಾಜ ಪದ್ಧತಿಯು ಹೊಸ ಬಗೆಯ ಮನುಷ್ಯನನ್ನು ನಿರ್ಮಿಸಬಹುದು.

ಈ ನಾಲ್ಕೂ ವಿಚಾರಗಳ ಮೇಲೆ ಪ್ರತಿಕ್ರಿಯೆ ಕಂಡುಬಂದಿದೆ. ನಿಸರ್ಗ ನಿಯಮ ಮತ್ತು ದೇವರ ಅಸ್ತಿತ್ವವನ್ನು ಉತ್ಕ್ರಾಂತಿಗೆ ಪೋಷಕವಾಗಿದೆ ಎಂದು ತಾಯ್ ಹಾರ್ಡ್ ಶಾರದೇ ಎಂಬ ಫ್ರೆಂಚ್ ಧರ್ಮೋಪದೇಶಕ ಮಾನವಶಾಸ್ತ್ರಜ್ಞನು ಕಳೆದ ದಶಕದಲ್ಲೇ ಪ್ರತಿಪಾದಿಸಿದ್ದಾನೆ. ಫ್ರೈಡ್‌ನ ವಿಚಾರಗಳ ಬಗೆಗೆ ಅವನ ಶಿಷ್ಯನಾದ ಡಾ. ಯುಂಗ್‌ನ ಪ್ರತಿಕ್ರಿಯೆಯಂತೂ ಎಲ್ಲರಿಗೂ ಗೊತ್ತಿದೆ. ಅವನು ಲೈಂಗಿಕತೆಯ ಬದಲಿಗೆ ಸತ್ತೆಯನ್ನೇ ಚಾಲಕ ಶಕ್ತಿ ಎಂದು ಭಾವಿಸುತ್ತಾರೆ. ಈಗ ಮಾರ್ಕ್ಸ್‌ವಾದದ ಬಗೆಗಿನ ಪ್ರತಿಕ್ರಿಯೆ ಸಹ ಅಜ್ಞಾತವಾಗಿ ಉಳಿದಿಲ್ಲ. ಆದರೆ ಈ ಎಲ್ಲ ಪ್ರತಿಕ್ರಿಯೆಯನ್ನು ಗಮನಕ್ಕೆ ತಂದುಕೊಂಡರೂ ಮತ್ತು ಮಂಗ ಹಾಗೂ ಮಾನವರ ಕುರಿತಾದ ಡಾರ್ವಿನ್‌ಪ್ರಣೀತ ಪೂರ್ವಾಪರವು ಈಗ ಮಾನ್ಯವಾಗದಿದ್ದರೂ ಉತ್ಕ್ರಾಂತಿಯ ತತ್ತ್ವವು ಹುಸಿಯಾಗಲಿಲ್ಲ. ಜೀವಶಾಸ್ತ್ರಜ್ಞರು ಅದನ್ನು ವಿವಿಧ ಬಗೆಯಲ್ಲಿ ನಿರೀಕ್ಷಣೆಯನ್ನು ಕೈಕೊಂಡಿದ್ದಾರೆ. ಅವರ ಶೋಧದ ಸಹಾಯದಿಂದಲೇ ಪುರಾತತ್ತ್ವಶಾಸ್ತ್ರಜ್ಞರು ಹೊಸ ಹೊಸ ಉತ್ಖನನ ಕೈಕೊಂಡು, ಭೂಗರ್ಭಶಾಸ್ತ್ರದ ಉಪಯೋಗ ಮಾಡಿಕೊಂಡು ಪ್ರಾಗೈತಿಕ ಮಾನವನ ದೇಹ ಮತ್ತು ಸಾಮಾಜಿಕ ಜೀವನದ ಬಗೆಗಿನ ಅಸಂಖ್ಯಾತ ಪುರಾವೆಯನ್ನು ಸಂಗ್ರಹ ಮಾಡುತ್ತಲಿದೆ. ಆದರೆ ಈ ಪುರಾವೆಗಳ ಸಂಖ್ಯೆಯು ಸಾಕಷ್ಟು ದೊಡ್ಡ ಪ್ರಮಾಣದಲ್ಲಿದ್ದರೂ ಹೊಸ ನಿಯಮವೇನಾದರೂ ರೂಪಗೊಳ್ಳಬಹುದಾದ ಹೊಸ ದ್ರವ್ಯ ಅವರ ಕಣ್ಣಿಗಂತೂ ಗೋಚರಿಸಲಿಲ್ಲ.

ಸಮತೆಯ ಸೃಷ್ಟಿಗೆ ಒಪ್ಪಿಗೆಯಿಲ್ಲ : ಸೃಷ್ಟಿಯಲ್ಲಿ ಸಮತೆ ಇದೆ ಎನ್ನುವುದು ಪ್ರಜನನಶಾಸ್ತ್ರದಲ್ಲಿ ಕಂಡುಬರುತ್ತಿಲ್ಲ. ಮಾನವನು ಸೃಷ್ಟಿ ಪ್ರಾಣಿಯಾಗಿದ್ದು ಅವನೂ

ನಿಸರ್ಗದ ನಿಯಮದಿಂದಲೇ ಕಟ್ಟಲ್ಪಟ್ಟಿರುವುದರಿಂದ ವಿಷಮತೆಯೇ ನಿಸರ್ಗದಂತೆ ಮಾನವೀಯತೆಯ ನಿಯಮವಾಗಿದೆ. ಪ್ರಜನನಶಾಸ್ತ್ರದಂತೆ ಅಗಣಿತ ಪುರುಷ ಬೀಜಾಣು ಮತ್ತು ಒಂದೇ ಸ್ತ್ರೀ ಅಂಡಾಣುವಿನೊಂದಿಗೆ ಸಂಯೋಗಗೊಂಡಾಗ ಫಲಿತವಾಗುವುದು ನಿಸರ್ಗದಲ್ಲಿಯ ಸಾರ್ವತ್ರಿಕವಾಗಿದ್ದರೂ ಕಷ್ಟಕರ ಘಟನೆಯಾಗಿದೆ. ಈ ಪುರುಷ ಬೀಜಾಣುವಿನಲ್ಲಿ ಆಕಸ್ಮಿಕವಾಗಿ ಯಾವುದಾದರೂ ಒಂದು ಆ ಅಂಡಾಣುವಿನೊಂದಿಗೆ ಸಂಯೋಗವಾಗುವುದು ಒಂದು ಅಪಘಾತವೇ ಆಗಿದೆ. ಸ್ತ್ರೀ ಅಂಡಾಣು ಸಹ ಪ್ರತಿ ಸಲ ವಿವಿಧ ಸ್ವಭಾವವನ್ನು ಧಾರಣ ಮಾಡುತ್ತದೆ. ಹೀಗಾಗಿ ಅವುಗಳ ಸಂಯೋಗವು ಒಂದು ಪವಾಡವೇ ಆಗಿದ್ದು, ಯಾವುದೇ ಇಬ್ಬರು ವ್ಯಕ್ತಿಗಳು ಮಾನವ ಸೃಷ್ಟಿಯಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಅವಳಿಗಳದ್ದು ಮಾತ್ರ ಅಪವಾದ. ಇಬ್ಬರು ಅಣ್ಣತಮ್ಮಂದಿರು ಸಹ ಒಂದೇ ರೀತಿಯಾಗಿರುವುದಿಲ್ಲವೆಂದು ಪ್ರಜನನಶಾಸ್ತ್ರ ಹೇಳುತ್ತದೆ. ಈ ಮೂಲಭೂತ ವಿಷಮತೆಯು ಮಾನವನ ಉತ್ಪತ್ತಿಯಲ್ಲೇ ಒಳಗೊಂಡಿದೆ. ಹೀಗಿರುವಾಗ ಮಾನವ ಜಾತಿ ಒಂದು ಮತ್ತು ಸಮವಾಗಿದೆ ಎಂದು ಬೆಂಬಲಿಸುವಾಗ ಅದರಲ್ಲಿಯ ಮೂಲಭೂತ ಭೌತಿಕ, ಮಾನಸಿಕ ಮತ್ತು ದೈಹಿಕ ವೈವಿಧ್ಯವನ್ನು ಇಂದಿನ ಮಾನವ ಶಾಸ್ತ್ರಜ್ಞರು ಏಕೆ ಗಮನಿಸುವುದಿಲ್ಲ ಎಂಬ ಪ್ರಶ್ನೆಯನ್ನು ಪ್ರೊ. ರಾಬರ್ಟ್ ಆರಡ್ರೆ ಅವರು ತಮ್ಮ ದಿ ಸೋಷಿಯಲ್ ಕಾಂಟ್ರಾಕ್ಟ್ (ಲಂಡನ್ ೧೯೭೦) ಎಂಬ ಕೃತಿಯಲ್ಲಿ ಕೃತಿಯಲ್ಲಿ ಎತ್ತಿದ್ದಾನೆ. ವಿಶೇಷವಾಗಿ ಮಾನವನ ಏಕತೆ ಮತ್ತು ಸಮತೆಯು ಶಾಸ್ತ್ರಬದ್ಧವೆಂದಲ್ಲ. ಭಾವುಕವೆಂದು ಮಾನವಶಾಸ್ತ್ರಜ್ಞರು ಏಕೆ ಸ್ವೀಕರಿಸಬೇಕು ಎಂಬ ಪ್ರಶ್ನೆಯು ಅವರನ್ನು ಕಾಡಿದೆ. ಮಾನವಶಾಸ್ತ್ರವು ವಿಜ್ಞಾನವೇ ಆಗಿದ್ದರೆ ಭೂತದಯೆಗಿಂತ ಪದ್ಧತಿ ಪ್ರಣಾಲಿಯ ಮತ್ತು ನಿಯಮವನ್ನು ಒಳಗೊಂಡಿರಬೇಕು.

ಮಾನವನು ಪ್ರಾಣಿ ಸೃಷ್ಟಿಗಳಲ್ಲಿ ಒಂದಾಗಿದ್ದು, ಅದರದೇ ನಿಯಮಕ್ಕೆ ಬದ್ಧನಾಗಿದ್ದಾನೆ. ಮನುಷ್ಯ ಕೂಡ ಒಂದು ಪ್ರಜಾತಿಯೇ. ಉಳಿದ ಪ್ರಜಾತಿಯಂತೆ ಅವನೂ ಉತ್ಕ್ರಾಂತಿ ಹೊಂದಿದ. ಪ್ರಾಯಃ ಅದರ ಅಂತ್ಯ ಸಹ ಒಂದು ದಿನ ಉಳಿದ ಪ್ರಜಾತಿಗಳಂತೆ ಆಗಬಹುದು. ಉತ್ಕ್ರಾಂತಿಯು ಏನು ನಿರ್ಮಾಣ ಮಾಡಿದೆಯೋ ಅದು ಅದರದ್ದೇ ನಿಯಮದಂತೆ ಅದರದ್ದೇ ಪ್ರೇರಣೆಯಿಂದಲೇ ನಾಶವಾಗುತ್ತದೆ. ಪ್ರಾಕೃತಿಕ ಆಯ್ಕೆಯ ನಿಯಮದಿಂದಲೇ ಮಾನವನು ಈ ನಿಸರ್ಗದಲ್ಲಿ ಬಂದ. ಆ ನಿಯಮದಂತೆ ಶಾಶ್ವತವಾಗಿ ಗಡಿಪಾರಾಗುವ ಸಂಭವವಿದೆ. ಹಾಗೇನಾದರೂ ಆಗದಿದ್ದರೆ ಇತರ ಪ್ರಾಣಿಸೃಷ್ಟಿಯಂತೆಯೇ ಮನುಷ್ಯನಿಗೂ ರಕ್ತ ಮಾಂಸದ ಜೀವನವನ್ನು ಸ್ವೀಕರಿಸಲು ದೈವ ಒತ್ತಾಯಿಸುತ್ತದೆ. ಕ್ಲಾಡ್ ಲೆವ್ಹಿ-ಸ್ಟ್ರಾಸ್ ಇವನ ಅಭಿಪ್ರಾಯದಂತೆ ಮಾನವನು ಸರ್ವಶ್ರೇಷ್ಠ ಪ್ರಾಣಿಯಾಗಿರದೆ, ಅವನ ಭೌತಿಕ ದೈವವು ನಿಸರ್ಗಕ್ಕೆ ಅಧೀನವಾಗಿದೆ, ಹಾಗೆಯೇ ಇದೆ ಮತ್ತು ಅವನ ಅಸ್ತವೂ ಅವನಿಗೆ ಒಪ್ಪಿಗೆಯಿದೆ.

ಉತ್ಕ್ರಾಂತಿಯ ನಿಯಮದಂತೆ ಮನುಷ್ಯನ ಸಾಮುದಾಯಿಕ ಜೀವನವು ಅಸ್ತಿತ್ವಕ್ಕೆ ಬಂತು ಎಂಬ ವಿಚಾರ ಹಲವರಿಗೆ ಒಪ್ಪಿಗೆಯಾಗಲಿಕ್ಕಿಲ್ಲ. ಪಶುಗಳ ಹಿಂಡು ಇರುತ್ತದೆ. ಮನುಷ್ಯನ ಸಮಾಜವಿರುತ್ತದೆ. ಸಂಸ್ಕೃತದಲ್ಲಿ ಪಶು ಸಮುದಾಯಕ್ಕೆ ಸಮಜ ಎಂಬ ಹೆಸರು ನೀಡಿ ಮಾನವ ಸಮಾಜಕ್ಕೆ ಒಂದು ಕಾಗುಣಿತದ ಬಡ್ತಿ ನೀಡಲಾಗಿದೆ. ಈ ವರೆಗಿನ ವೈಜ್ಞಾನಿಕ ನಿಲುವು ಏನೆಂದರೆ ಪಶುಗಳ ಸಮುದಾಯವು ಅವುಗಳ ಸಾಮೂಹಿಕ ಜನ್ಮಜಾತ್ ಬುದ್ಧಿಯ ಗ್ರೆಗೆರಿಯಸ್ ಇನ್‌ಸ್ಟಿಂಕ್ಟ್‌ನ ಫಲಿತವಾಗಿದ್ದು, ಮಾನವ ಸಮಾಜ ಮಾತ್ರ ಸಂಸ್ಕೃತಿಯ ಫಲಿತವಾಗಿದ್ದು, ಸಂಘಟನೆಯ ನಿಯಮಕ್ಕೆ ಬದ್ಧವಾಗಿದೆ.

ಪ್ರಾಣಿಸೃಷ್ಟಿಗಳಲ್ಲಿ ಸಾಮಾಜಿಕ ಜೀವನದ ಸ್ತರವು ಗಮನಕ್ಕೆ ಬಂದಿರುವುದು ಇರುವೆ, ಜೇನ್ನೊಣ, ಆನೆ, ಚಿಗರೆ, ಸಿಂಹ ಮುಂತಾದವುಗಳ ಜೀವನದಿಂದ ಸ್ಪಷ್ಟವಾಗಿದೆ. ಅವುಗಳ ಸಾಮುದಾಯಿಕ ಜೀವನಕ್ಕೂ ಮತ್ತು ಮನುಷ್ಯ ಸಮಾಜ ಜೀವನಕ್ಕೂ ಇರುವ ವ್ಯತ್ಯಾಸವೇನೆಂದರೆ ಆಯಾ ಪ್ರಜಾತಿಯ ಸಾಮುದಾಯಿಕ ಜೀವನವು ಎಲ್ಲೇ ಇರಲಿ, ಯಾವುದೇ ಕಾಲವಿರಲಿ ಒಂದೇ ರೀತಿಯದ್ದಾಗಿರುತ್ತದೆ. ಮಾನವನ ಜೀವನ ಮಾತ್ರ ಬದಲಾಗುತ್ತ ಇರುತ್ತದೆ. ಉತ್ಕ್ರಾಂತಿಯ ಮೇಲೆಯೇ ಸಂಕ್ರಾಂತಿಯ ಕಲಮು ಕಟ್ಟಲಾಗುತ್ತದೆ.

ಸಮುದಾಯ ಇದು ಪ್ರಾಣಿ ಜೀವನದ ಮುಖ್ಯ ಅಂಗ. ಏಕೆಂದರೆ ಪರಸ್ಪರರ ಹೊರತು ಪ್ರಾಣಿಗಳು ಬದುಕುವುದೇ ಸಾಧ್ಯವಿಲ್ಲ. ಪಶು ಒಂಟಿಯಾಗಿ ಇರಲಾರದು. ಮಾನವನಿಗೂ ಒಂಟಿತನ ಅಸಹನೀಯವಾಗಲು ಕಾರಣವೇನೆಂದರೆ ಅವನು ಸಾಮಾಜಿಕ ಬದ್ಧ ಅಂದರೆ ಸ್ವಜಾತಿಯ ಮೇಲೆ ಅವಲಂಬಿಸಿರುವ ಪ್ರಾಣಿಯೇ ಆಗಿದ್ದಾನೆ. ಲೈಂಗಿಕ ವಾಸನೆಯ ಬಲವಾದ ಕಾರಣವು ಸಾಮುದಾಯಿಕ ಜೀವನದ ಪ್ರೇರಣೆಯ ಮೂಲದಲ್ಲಿದೆ. ಬೇಕಾದರೆ ಈ ಸಾಮುದಾಯಿಕತೆಯು ಕ್ಷಣಿಕವಾಗಿರಲಿ ಅಥವಾ ಚಿರಕಾಲಿಕವಾಗಿರಲಿ. ಅದೂ ಅಲ್ಲದೆ, ಅಲೈಂಗಿಕತೆಯನ್ನು ಆಧರಿಸಿದ ಪ್ರಾಣಿ ಜೀವನದಲ್ಲೂ ಸಾಮುದಾಯಿಕತೆಯೇ ಮೂಲಾಧಾರವಾಗಿರುವದು ಕಂಡುಬರುತ್ತದೆ. ಉದಾಹರಣೆಯನ್ನಾಗಿ ಪ್ರೋಟೋಝುವಾವನ್ನು ನೋಡಬಹುದು. ಅವುಗಳ ಹಿಂಡಿಗೆ ಹಿಂಡೇ ಒಂದೇ ಕಡೆ ಇರುವುದು ಕಂಡುಬರುತ್ತದೆ. ಪರಸ್ಪರಾವಲಂಬನೆಯ ತತ್ವದ ನಿಸರ್ಗದಲ್ಲಿ ತುಂಬ ಗೂಢ ಮತ್ತು ಸೂಕ್ಷ್ಮವಾದ ಆವಿಷ್ಕಾರವು ಗೋಚರಿಸುತ್ತದೆ. ಲೈಂಗಿಕತೆ ಮತ್ತು ಅಲೈಂಗಿಕತೆ, ಈ ಎರಡೂ ಕಕ್ಷೆಯನ್ನು ಆವರಿಸಿಯೇ ಪ್ರಾಣಿ ಜೀವನವು ಸಮುದಾಯಾಧೀನವಾಗುತ್ತ ಇರುತ್ತದೆ. ನೊಣಗಳ ಗುಂಪು ಇರುತ್ತವೆ. ಹಕ್ಕಿಗಳು ಹಿಂಡೇ ಹಾರುತ್ತವೆ. ಪಶುಗಳ ಗುಂಪು ಇರುತ್ತದೆ. ಮನುಷ್ಯರ ತಂಡಗಳಿರುತ್ತವೆ. ಪ್ರಜನನ ತತ್ವದಂತೆ ಪ್ರಾಣಿಗಳು ವಿವಿಧ ಪ್ರಜಾತಿಗಳಲ್ಲಿ ಜನಿಸುತ್ತವೆ. ಆದರೆ ಜನಿಸಿದ ಬಳಿಕ ಅವು ಆಯಾ

ವಾತಾವರಣದೊಂದಿಗೆ ಸಮರೂಪಗೊಂಡು ಇಲ್ಲವೆ ಎದುರಿಸಿ ಬದುಕಬೇಕಾಗುತ್ತದೆ. ಈ ಕಾರಣಕ್ಕಾಗಿ ಸಮುಷ್ಟಿಯ ಅಗತ್ಯವಿರುತ್ತದೆ. ಈ ಅಗತ್ಯವನ್ನು ಉತ್ಕ್ರಾಂತಿಯೇ ಪೂರ್ಣ ಮಾಡಿದೆ. ಪ್ರಾಣಿಗಳಲ್ಲಿ ಹೇಗೋ ಹಾಗೆ ಮನುಷ್ಯರಲ್ಲೂ. ಏಕೆಂದರೆ ಪ್ರಾದೇಶಿಕತೆಯು ಪ್ರಾಣಿಗಳಂತೆ ಮನುಷ್ಯರ ವಿಷಯದಲ್ಲೂ ತೀರ ಪ್ರಭಾವಿಯಾಗಿರುತ್ತದೆ. ಬಣ್ಣ, ಆಕಾರ ಮತ್ತು ಚಲನವಲನೆ ಇದು ಪ್ರಾದೇಶಿಕತೆಯೊಂದಿಗೆ ಸಂಲಗ್ನ ಹೊಂದಿರುತ್ತದೆ.

ಮಾನವನ ಉತ್ಕ್ರಾಂತಿಯಲ್ಲಿ ಅವನ ಮೆದುಳಿನಲ್ಲಿ ಭಾಷೆಯನ್ನು ನಿರ್ಮಿಸುವ ಕ್ರಿಯೆಯನ್ನು ಉತ್ಕ್ರಾಂತಿಯು ರೂಪಿಸಿತು. ಬಬೂನ ಮಂಗದ ಗಂಟಲಲ್ಲಿ ಉಚ್ಚರಿಸಲು ಅನುಕೂಲವಾಗುವ ಸ್ನಾಯುಗಳಿದ್ದರೂ ಮಂಗಗಳಿಗೆ ಭಾಷೆಯನ್ನು ರೂಪಿಸುವುದು ಸಾಧ್ಯವಾಗಲಿಲ್ಲ. ಸ್ವರ, ಶಬ್ದ ಮತ್ತು ಅರ್ಥವಂತಿಕೆಯು ಭಾಷೆಯ ಗುಣ. ಉತ್ಕ್ರಾಂತಿಯಲ್ಲಿ ಮನುಷ್ಯನಿಗೆ ಇದೇ ವರದಾನ ಅಧಿಕವಾಗಿ ಲಭಿಸಿತು. ಮನುಷ್ಯರಿಗೆ ಪರಸ್ಪರರೊಂದಿಗೆ ಸಂವಾದ ಸೂತ್ರ ಜೋಡಿಸುವದು ಸಾಧ್ಯವಾಯಿತು. ಸಂವಾದ ಸೂತ್ರದಿಂದಾಗಿ ಯಾಂತ್ರಿಕ ಸಾಧನೆಗಳ ನಿರ್ಮಾಣವೂ ಅವನಿಗೆ ಸುಲಭವಾಯಿತು. ಮಾನವನ ಸಮಾಜವು ಪ್ರಕೃತಿಯ ನಿಯಮದಂತೆ ರೂಪಗೊಂಡರೂ ಸಂಸ್ಕೃತಿಯೂ ಆ ರಚನೆಗೆ ಆಕಾರ ನೀಡಿತು. ರಚನೆ ಸಂರಚನೆಯಾಯಿತು.

(ಮಹಾರಾಷ್ಟ್ರ ಟೈಮ್ಸ್, ೧೨ ಮಾರ್ಚ್ ೧೯೭೨)

* * * *

೧೪. ಬೌದ್ಧಧರ್ಮದ ಪ್ರೇರಣೆ ಮತ್ತು ಆಚಾರ

ನವಬೌದ್ಧರಿಂದಾಗಿ ಬೌದ್ಧಧರ್ಮದ ಮೌಲ್ಯದ ಬಗೆಗೆ ಕೇವಲ ಕುತೂಹಲವಷ್ಟೇ ನಿರ್ಮಾಣವಾಗಿದೆ ಎಂದೇನಲ್ಲ. ಯಾವ ಧರ್ಮ ಒಂದು ಕಾಲದಲ್ಲಿ ಭಾರತದಿಂದ ಬೇರುಸಹಿತ ನಿರ್ಮೂಲನೆಗೊಂಡಿತ್ತೋ, ಅದನ್ನು ಅಸ್ಪೃಶ್ಯರು ಸ್ವೀಕರಿಸಿದ್ದರಿಂದ ಬಹುಸಂಖ್ಯ ಸ್ಪೃಶ್ಯದ ಸಮಾಜಕ್ಕೆ ಎಲ್ಲಕ್ಕಿಂತ ದೊಡ್ಡ ಸವಾಲು ಎದುರಾಗಿದೆ. ಆ ಆಹ್ವಾನ ಪ್ರತಿಕ್ರಿಯೆ ವಿಚಿತ್ರವಾಗಿದೆ. ಬಹುಸಂಖ್ಯಾತ ಹಿಂದುಗಳು ಈ ಮತಾಂತರವನ್ನು ತಟಸ್ಥವಾಗಿ ಗಮನಿಸಿದ್ದಾರೆ, ವಿಶೇಷವಾಗಿ ಶಿಕ್ಷಿತರು ಆದರೆ ಬಹುಜನ ಸಮಾಜದ ಜನರನ್ನು ಈ ಪ್ರತಿಕ್ರಿಯೆ ಹೆಚ್ಚು ಅಸ್ವಸ್ಥಗೊಳಿಸಿದೆ. ವಿಶೇಷವಾಗಿ ಸತ್ಯನಾರಾಯಣ ವ್ರತವು ಯಾವ ಸಮುದಾಯದವರಲ್ಲಿ ಹೆಚ್ಚು ಜನಪ್ರಿಯವಾಗಿದೆಯೋ ಅವರಿಗೆ ಈ ಮತಾಂತರದ ಬಗ್ಗೆ ಸಿಟ್ಟು ತಲೆದೋರಿದ್ದನ್ನು ನಾನು ಕಂಡಿದ್ದೇನೆ. ಮಹಾರಾಷ್ಟ್ರದ ಮಟ್ಟಿಗೆ ಹೇಳುವುದಾದರೆ ಬೌದ್ಧರಾದ ಅಸ್ಪೃಶ್ಯರು ಮಹಾರರು. ಮಾದಿಗ, ಸಮಗಾರ ಮುಂತಾದ ಅಸ್ಪೃಶ್ಯ ಸಮುದಾಯವು ಇಂದು ಭಯಭೀತ ಸ್ಥಿತಿಯಲ್ಲಿದ್ದಾರೆ. ನವಬೌದ್ಧರ ವೃತ್ತಿಯು ಆಶಾದಾಯಕವಾಗಿದ್ದರೂ ಅಸಮಾಧಾನಿಯೂ ಆಗಿದ್ದಾರೆ. ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಉನ್ನತಿಯನ್ನು ಮಾಡಲು ಅವರು ಟೊಂಕಕಟ್ಟಿ ನಿಂತಿದ್ದಾರೆ. ಮತಾಂತರದ ಹಿಂದೆ ಸಾಮಾನ್ಯವಾಗಿ ಒಂದು ಬಗೆಯ ಕಹಿತನವಿರುತ್ತದೆ. ನವಧರ್ಮದ ಸ್ತೋಮವನ್ನು ಹೇಗೆ ನವದೀಕ್ಷಿತರು ಮೆರೆಯುತ್ತಾರೋ ಹಾಗೆ, ಆ ಧರ್ಮದಲ್ಲಿಯ ಹಲವು ಪೀಳಿಗೆಗಳಿಂದ ಪಳಗಿದ ಧರ್ಮ ಮತಾಂಧರು ಮೆರೆಯುತ್ತಿರುತ್ತಾರೆ.

ಮತಾಂತರದ ಪ್ರೇರಣೆ ಯಾವುದು?

ಇಂದಿನ ನವಬೌದ್ಧರ ಸಾಮಾಜಿಕ ನಾಯಕತ್ವವು ಧರ್ಮ ಗುರುವಿನ ಕಡೆಗೆ ಹೋಗಲು ಬಯಸುತ್ತಿದೆ. ಈವರೆಗೆ ಲಗ್ನ, ಅಂತ್ಯಕ್ರಿಯೆಗಾಗಿಯೂ ಬ್ರಾಹ್ಮಣರಂಥ ಪೂಜಾರಿ ಬೇಕಾಗುತ್ತಿರಲಿಲ್ಲ. ಇಲ್ಲಿಯವರೆಗೆ ಅವರ ರಾಜಕೀಯ ಹಾಗೂ ಸಾಮಾಜಿಕ ನಾಯಕತ್ವದ ಡಾ. ಅಂಬೇಡ್ಕರ್‌ರ ಕಡೆಗೂ ಕೆಲವು ಪ್ರಮಾಣದಲ್ಲಿ ಗಾಂಧೀಜಿಯವರ ಕಡೆಗಿತ್ತು. ಮತಾಂತರದ ಆರಂಭದಲ್ಲೇ ಡಾ.

ಅಂಬೇಡ್ಕರ್ ತೀರಿಕೊಂಡರು. ಅನಂತರ ಅವರ ಪ್ರೇರಣೆಯಿಂದಲೇ ಬಹುದೊಡ್ಡ ಪ್ರಮಾಣದಲ್ಲಿ ಮತಾಂತರದ ಅಲೆಯು ಹರಡಿತು. ಈ ಮತಾಂತರದ ಮೂಲವು ಧಾರ್ಮಿಕ ಭಾವನೆಯಲ್ಲಿರದೆ, ಸಾಮಾಜಿಕ-ಆರ್ಥಿಕ, ಅಸಂತೋಷದಲ್ಲಿದೆ ಎನ್ನುವುದರಲ್ಲಿ ತಿಲ ಮಾತ್ರವೂ ಸಂದೇಹವಿಲ್ಲ. ಆದರೆ ರೋಗ ಒಂದು, ಔಷಧಿ ಮತ್ತೊಂದು ಎಂಬ ಬಗೆಯನ್ನು ಬೌದ್ಧಧರ್ಮದ ಸ್ವೀಕಾರದ ಬಗೆಗೆ ಡಾ. ಅಂಬೇಡ್ಕರ್‌ರರೇ ಮಾಡಿದರು. ಅವರ ಅನುಯಾಯಿಗಳು ತಮ್ಮ ನಾಯಕನ ಬಗೆಗಿನ ನಿಷ್ಠೆಯನ್ನು ಉಳಿಸಿಕೊಳ್ಳಲು ಆ ಮಾರ್ಗವನ್ನು ಅವಲಂಬಿಸಬೇಕಾಯಿತು. ಆದರೆ ಮತಾಂತರವೆಂದರೆ ರೊಟ್ಟಿಯ ಬದಲು ಬ್ರೆಡ್ ತಿಂದಷ್ಟು ಸುಲಭವಲ್ಲ!

ವಿಧಿ-ವಿಧಾನಗಳ ಸ್ತೋಮ

ಧರ್ಮವೆಂದರೆ ಆಚಾರ ಬಂಧನ. ಅದರ ಸುತ್ತಲೂ ತತ್ವಜ್ಞಾನಕ್ಕಿಂತ ಕರ್ಮಕಾಂಡ ತಕ್ಷಣ ಮುಚ್ಚಿಕೊಳ್ಳುತ್ತದೆ. ಸಂಸ್ಕಾರದ ಪ್ರಶ್ನೆ ಬರುತ್ತದೆ. ಪೂಜೆಯ ಮೂರ್ತಿ ಬದಲಾದರೆ ಪೂಜೆಯ ವಿಧಿ, ಉಪಕರಣ ಎಲ್ಲವೂ ಬದಲಾಗುತ್ತದೆ. ಹಳೆಯ ಶ್ರದ್ಧೆಯನ್ನು ಕೈಬಿಡುವುದು ಅಷ್ಟೊಂದು ಸುಲಭವಾಗಿರುವುದಿಲ್ಲ. ಎಷ್ಟೇ ಶತಕಗಳು ಉರುಳಿದರೂ, ಎಷ್ಟೋ ಭಾರತೀಯ ಕ್ರೈಸ್ತ-ಮುಸಲ್ಮಾನರಲ್ಲಿ ಹಳೆಯ ಹಿಂದೂ ಶ್ರದ್ಧೆ ಇಂದಿಗೂ ಉಳಿದುಕೊಂಡಿದೆ. ಹೀಗಿರುವಾಗ ನಿನ್ನೆ ಬೌದ್ಧರಾದ ಇವರಲ್ಲಿಯ ಹಳೆಯ ಸಂಸ್ಕಾರವು ಇಲ್ಲವಾಗುವುದು ಸಾಧ್ಯವೇ? ಊದುಬತ್ತಿಯ ಮೋಂಬತ್ತಿ ತಂದರೆ, ದೇಗುಲದಲ್ಲಿಯ ರಾಮನ ಮೂರ್ತಿ ತೆಗೆದು ಹಾಗೆ ಬುದ್ಧನ ಮೂರ್ತಿ ಕೂರಿಸಿದ ಮಾತ್ರಕ್ಕೆ ಹಳೆಯ ಭಕ್ತಿ ಕಡಿಮೆಯಾಗುವುದು ಸಾಧ್ಯವೇ? ಆ ಭಜನೆಯ ಹಾಡು, ಹರಕೆ ಹೊರುವ ಪದ್ಧತಿ, ಇದೆಲ್ಲವೂ ಬಹುಜನ ಸಮುದಾಯದ ನರನಾಡಿಗಳಲ್ಲಿ ನೆಲೆಸಿದೆ. ಅದು ಬದಲಾಗುವುದು ಅಸಾಧ್ಯವಲ್ಲದಿದ್ದರೆ ಜಟಿಲವಾಗಿದೆ. ಹಿಂದೂ ಸಮುದಾಯದವರಲ್ಲಿ ಹಲವು ವೈಗುಣಗಳಿದ್ದರೂ ಪರಧರ್ಮ ಸಹಿಷ್ಣುತೆಯ ಏಕೈಕ ಗುಣವನ್ನು ಅದು ಇಂದಿಗೂ ಪ್ರಾಮಾಣಿಕವಾಗಿ ಉಳಿಸಿಕೊಂಡಿದೆ. ನವಬೌದ್ಧರು ಮಾತ್ರ ಕೆಲವೆಡೆ ಇದೇ ಪೂರ್ವಾಪರ ಉಜ್ವಲ ಪರಂಪರೆಯನ್ನು ತಿರಸ್ಕರಿಸುವುದನ್ನು ಕಾಣಬಹುದು. ಮೂರ್ತಿಭಗ್ನದಿಂದ ಏನು ಸಾಧಿಸಿದಂತಾಗುವುದಿಲ್ಲ. ಕೇವಲ ಅದರಿಂದ ಅವರ ಬಲ ಬೆಳೆಯುವುದು ಮಾತ್ರ ಕಠಿಣವಾಗಬಹುದು. ಬಲವೆಂದರೆ ಆತ್ಮಬಲ. ಆತ್ಮಬಲವಿಲ್ಲದೆ ಹೊಸಶ್ರದ್ಧೆಯ ಮಾರ್ಗವನ್ನು ಅವಲಂಬಿಸುವುದು ಈ ಮೊದಲೇ ಪರಿತ್ಯಾಗ, ಅಜ್ಞಾನ ಮತ್ತು ದಾರಿದ್ರ್ಯದಿಂದ ತುಕ್ಕು ಹಿಡಿದ ಈ ಸಮಾಜಕ್ಕೆ ತುಂಬ ತುಂಬ ಕಠಿಣವಾಗುವುದು ಎಂಬ ಸಂಗತಿಯು ಪ್ರತಿಯೊಬ್ಬ ಪ್ರಬುದ್ಧ ಭಾರತೀಯರಿಗೆ ಅಸ್ಪೃಶ್ಯ ಸಮಾಜದ ಸದ್ಗುಣಿ ವರ್ಗಕ್ಕೆ ತೀರ ದುಃಖವನ್ನು ತಂದುಕೊಡುವಂತಹದು.

ಧಾರ್ಮಿಕ ಗುರು ಸಂಸ್ಥೆಯ ಪುನರ್ ಸ್ಥಾಪನೆ

ಮತ್ತೊಂದು ಸಂಗತಿಯೇನೆಂದರೆ ಪ್ರತ್ಯಕ್ಷವಾಗಿ ಬ್ರಾಹ್ಮಣ ವರ್ಗದ ವರ್ಚಸ್ಸಿನ ಅಡಿಯಲ್ಲಿ ಎಂದೂ ಇರದ ಈ ಸಮುದಾಯವು ಬೌದ್ಧಧರ್ಮದ ವಿಶಿಷ್ಟ ತಂತ್ರದಿಂದಾಗಿ ಇಲ್ಲಿಂದ ಮುಂದೆ ಭಿಕ್ಷುಶಾಸಿತಗೊಳ್ಳುತ್ತ ಹೋಗುತ್ತದೆ. ಧರ್ಮಗುರುವಿಲ್ಲದೆ ಅವರ ಯಾವ ಧಾರ್ಮಿಕ ಕಾರ್ಯವು ಆಗಲಾರದು. ಮತ್ತು ಈ ಭಿಕ್ಷುಗಳು ಪೂರ್ವಾಶ್ರಮದ ಅಸ್ಪೃಶ್ಯರಂತೂ ಅಲ್ಲವೇ ಅಲ್ಲ, ಹಲವರು ಭಾರತೀಯರೂ ಅಲ್ಲ. ಕ್ರೈಸ್ತ ಮಿಶನರಿಗಳು ಎಂಥವರೇ ಆಗಿರಲಿ, ಅವರು ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ದೀನ–ದಲಿತರ ಅಪೂರ್ವ ಸೇವೆ ಮಾಡಿದ್ದಾರೆ. ಈ ಕೆಲವೇ ಕೆಲವು ಬೌದ್ಧ ದೀಕ್ಷಿತರಿಗೆ ಮೊದಲೇ ವೈದಿಕ ಧರ್ಮದ ಬಗೆಗೆ ಅಪೂರ್ಣ ಮಾಹಿತಿ ಹಾಗೂ ಸಾಕಷ್ಟು ಪೂರ್ವಗ್ರಹದ ಅಭಿಪ್ರಾಯಗಳು ಅವರಲ್ಲಿವೆ ಎಂಬುದನ್ನು ನಾನು ನನ್ನ ಸ್ವ ಅನುಭವದಿಂದ ಹೇಳಬಲ್ಲೆ. ನವಬೌದ್ಧರಿಗೆ ಹಿಂದೂ ಸಮಾಜದ ಬಗೆಗೆ ಇರುವ ತಿರಸ್ಕಾರದ ಕಿಡಿ ಹೊತ್ತಿಸಲು ಅವರ ಕರ್ತೃತ್ವ ಕಾರಣವಾಗುತ್ತಿದೆ. ಭಾರತೀಯ ರಾಷ್ಟ್ರೀಯತೆಯ ಹಾಗೂ ಸಂಸ್ಕೃತಿಯ ಒಂದು ಅವಿಭಾಜ್ಯ ಘಟಕ ಈ ಅಸ್ಪೃಶ್ಯ ಸಮಾಜವಾಗಿದೆ. ನವ ಅದೆ, ಘಟಕವೆಂದು ಸಿದ್ಧ. ಅದರ ಹಕ್ಕು ಸ್ವಯಂಸಿದ್ಧವಾಗಿದೆ. ಆದರೆ ಇತರ ನಾಗರಿಕತೆಯ ಈ ಸಮಾಜ ಸಹ ಭಾರತದೊಂದಿಗೆ ಕರ್ತವ್ಯಬದ್ಧವಾಗಿರುವುದನ್ನು ಮರೆಯುವಂತಿಲ್ಲ. ಈ ಸಂಗತಿಯು ಈ ಧಾರ್ಮಿಕ ನಾಯಕತ್ವದಿಂದ ಅದೆಷ್ಟು ಸಾಧ್ಯವಾಗಬಹುದು ಎಂಬ ಬಗೆಗೆ ಸಂಶಯಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಸಹಾನುಭೂತಿಯ ಅಗತ್ಯ

ಈಗ ನನಗನಿಸುವುದೇನೆಂದರೆ, ನವಬೌದ್ಧರ ಮತಾಂತರದ ಬಗೆಗೆ ನಾವು ಅತ್ಯಂತ ಸಹಾನುಭೂತಿಯಿಂದ ಯೋಚಿಸಬೇಕಾಗಿದೆ. ಬೌದ್ಧಧರ್ಮದ ಪ್ರೇರಣೆಯನ್ನು ಸುಶಿಕ್ಷಿತರಾದವರು ಹೆಚ್ಚು ನಿಚ್ಚಳ ದೃಷ್ಟಿಯಿಂದ ಪರೀಕ್ಷಿಸಬೇಕು. ಬುದ್ಧ ಭಾರತೀಯನಾಗಿದ್ದ. ಬೌದ್ಧಧರ್ಮವು ಭಾರತೀಯ ಅಧ್ಯಾತ್ಮಧಾರೆಯದ್ದೇ ಒಂದು ಅವಿಭಾಜ್ಯ ಪ್ರವಾಹವಾಗಿದೆ. ಆ ಪ್ರವಾಹವನ್ನು ಸ್ವೀಕರಿಸುವವರಿಗೆ ಹಾಗೂ ಇತರರಿಗೂ ಅದೇನು ಹೊಸದಲ್ಲ ಎಂಬ ಅರಿವು ಅಗತ್ಯವಾಗಿ ಇರಬೇಕು. ಭಾರತೀಯ ಸಂಸ್ಕೃತಿಯು ಅದೆಷ್ಟು ವಿಶಾಲ ಮತ್ತು ಬಹು ವರ್ಣೀಯವಾಗಿದೆ ಎಂದರೆ ಯಾವುದೇ ಪರಂಪರಾಗತ ಪಂಥ ಮತ್ತು ಧರ್ಮವನ್ನು ಸ್ವೀಕರಿಸಿದ ಮಾತ್ರಕ್ಕೆ ಆ ಸಮುದಾಯವು ಅದರಿಂದ ಬೇರ್ಪಡುವುದು ಸಾಧ್ಯವಿಲ್ಲ. ಈ ಪ್ರತ್ಯೇಕತೆಯು ಬುದ್ಧನ ಕಾಲದಲ್ಲೇ ಇರಲಿಲ್ಲವೆಂದಾಗ ಈಗೆಲ್ಲಿಂದ ಬರಬೇಕು?

ಬುದ್ಧನ ಬೋಧನೆ

ಬುದ್ಧ ತನ್ನನ್ನು ಆರ್ಯ ಮತ್ತು ಕ್ಷತ್ರಿಯ ಎಂದು ಕರೆದುಕೊಳ್ಳುತ್ತಿದ್ದ. ಅವನ ಸತ್ಯವು ಆರ್ಯಸತ್ಯವಾಗಿತ್ತು. ಬುದ್ಧನ ಧರ್ಮಚಕ್ರ ಪ್ರವರ್ತನೆಯ ಯಶವು ಹೊಸ ಪ್ರಮೇಯವನ್ನು ಶೋಧಿಸುವಂತಹದೇನೂ ಆಗಿರಲಿಲ್ಲ. ಅವನ ಉದ್ದೇಶವು ಮುಖ್ಯವಾಗಿ ಯಜ್ಞ-ಯಾಗಗಳಲ್ಲಿ ನಡೆಯುವ ಹಿಂಸೆಯನ್ನು ನಿಲ್ಲಿಸುವುದೇ ಆಗಿತ್ತು. ಅವನ ಮಾರ್ಗವು ಗೃಹಸ್ಥಾಶ್ರಮದ ಸುಧಾರಕರದ್ದಾಗಿರಲಿಲ್ಲ. ಸನ್ಯಾಸದ್ದಾಗಿದ್ದು ಯಜ್ಞಯಾಗದ ಮೇಲಿನ ಟೀಕೆಯು ಉಪನಿಷತ್ತಿನಲ್ಲೂ ಸಿಗುತ್ತದೆ. ಅಧ್ಯಾತ್ಮ ವಿದ್ಯೆಯು ಕರ್ಮಕಾಂಡವನ್ನು ಜಯಿಸಬಲ್ಲದು ಎಂಬುದನ್ನು ಅವನು ತೋರಿಸಿದನು. ವಿರಕ್ತಿಯೇ ಅಂತಿಮ ಶ್ರೇಯದ ಮಾರ್ಗವಾಗಿದೆ ಎಂಬ ಶ್ರದ್ಧೆಯು ಉಪನಿಷತ್ತಿನಲ್ಲೂ ಕಾಣಸಿಗುತ್ತದೆ. ಬುದ್ಧನು ಇದಕ್ಕಿಂತ ಭಿನ್ನವಾದುದೇನು ಮಾಡಿದ? ಪಶುಯಾಗವನ್ನು ನಿಲ್ಲಿಸಿ ಮತ್ತು ವಾಸನಾರಹಿತರಾಗಿ ಸಂಸಾರದ ತ್ಯಾಗವನ್ನು ಮಾಡಿ. ಸಂಸಾರ ದುಃಖದಿಂದ ಕೂಡಿದೆ. ಅದರಲ್ಲಿ ಉಳಿದರೆ ಜನ್ಮ ಜನ್ಮಾಂತರದ ವರೆಗೂ ದುಃಖವನ್ನೇ ಭೋಗಿಸುವಿರಿ. ಅದನ್ನು ತೊರೆದು, ಪರಿವ್ರಾಜಕರಾಗಿ ಆತ್ಮ ಶರಣರಾಗಿ, ನಿಜವಾದ ಧರ್ಮವನ್ನು ಕಲಿಯಿರಿ. ಕರುಣಾಳುಗಳಾಗಿ ಜಗತ್ತನ್ನೂ ನೋಡಿ ದ್ವೇಷದಿಂದ ದ್ವೇಷ ಶಮನವಾಗದು, ಅದು ದಯೆಯಿಂದ ಆಗುವುದು. ಈ ಬಗೆಯ ಜೀವನ ಸಾಗಿಸುವವನು ಚರಾಚರದ ಗೆಳೆಯನಾಗುವನು. ದೇವರಿಗಿಂತ ಶ್ರೇಷ್ಠನಾಗುವನು, ಜನ್ಮ-ಮರಣದ ಚಕ್ರದಿಂದ ಬಿಡುಗಡೆ ಹೊಂದುವನು, ಅವನು ನಿರ್ವಾಣ ಹೊಂದುವನು. ಲೋಕಕಲ್ಯಾಣಕ್ಕಾಗಿ ನಮ್ಮ ನಾಮವನ್ನು ನಮ್ಮ ಇದೇ ನಿರ್ವಾಣದ ಅರ್ಥ ಈ ತತ್ವಜ್ಞಾನ ಮತ್ತು ಸನ್ಯಾಸಿ ಜೀವನ ಇವೆರಡು ಆರ್ಯ ಮಾನ್ಯ ಮತ್ತು ಪರಂಪರಾಗತವೇ ಆಗಿತ್ತು. ಹಾಗಾದರೆ ಬುದ್ಧನ ಮಹತ್ವವೆಲ್ಲಿದೆ? ಜಾತಿಭೇದವನ್ನು ತೊಡೆದುಹಾಕಲು, ಅಹಿಂಸೆಯ ಆಹಾರಕ್ಕಾಗಿ ಸ್ತ್ರೀಯರ ಉದ್ಧಾರಕ್ಕಾಗಿ ಅವನು ಯಾವ ಮಾರ್ಗವನ್ನು ತೋರಿಸಿದನೋ ಅದರಲ್ಲೇ ಅವನ ವೈಶಿಷ್ಟ್ಯವಿದೆ ಎಂದು ಬುದ್ಧನ ಮಹತಿಯನ್ನು ಹಾಡುವವರು, ಸ್ವರ್ಗ ಪ್ರಾಪ್ತಿಯ ವ್ಯವಹಾರ ಮಾಡಬಯಸುವವರು, ಆಧುನಿಕ ಸುಧಾರಣೆಯ ಒಲುಮೆಯನ್ನು ಕಂಡು ಜನರ ಮನದ ಮೇಲೆ ಬಲವಂತದಿಂದ ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಬುದ್ಧನ ಬುದ್ಧತ್ವ ಅವನ ಧರ್ಮದ ಪ್ರೇರಣೆ ಅವನ ಧರ್ಮದ ಮೂಲ ತತ್ವವು ಇದಕ್ಕಿಂತ ಎಷ್ಟೋ ಭಿನ್ನವಾದ ಮೌಲ್ಯವನ್ನು ಆಧರಿಸಿತ್ತು.

ಬುದ್ಧ ಧರ್ಮದ ರಹಸ್ಯ

ಗೌತಮ ಬುದ್ಧನು ಜಾತೀಯತೆಯ ಮೇಲೆ ಪ್ರಹಾರ ಮಾಡಿದ ಎಂದು

ಖಚಿತವಾಗಿ ಹೇಳಲಾಗುತ್ತದೆ. ಹಿಂದೂ ಚಾತುರ್ವರ್ಣ ಪದ್ಧತಿಯ ಮೊದಲ ಭಂಜಕ ಎಂದೂ ನಂಬಿಸಲಾಗುತ್ತಿದೆ. ಸಂತನು, ಅವನು ಯಾವುದೇ ಕಾಲದವನಾಗಿರಲಿ ವರ್ಣಭೇದವನ್ನು ಎಂದಿಗೂ ಪುರಸ್ಕರಿಸುವುದಿಲ್ಲ. ಆದರೂ ಪ್ರತಿಯೊಬ್ಬ ಸಂತನ ಮೇಲೆ ಅವನ ಯುಗದ ಸಂಸ್ಕಾರವು ಮೂಡಿರುತ್ತದೆ. ಕೆಲವು ಸಂಸ್ಕಾರವನ್ನು ಅವನು ಬದಲಾಯಿಸುತ್ತಾನೆ. ಹೀಗಾಗಿಯೇ ಸಂತನೆನಿಸಿ ಕೊಳ್ಳುತ್ತಾನೆ. ಕೆಲವು ಸಂಸ್ಕಾರ, ವಿಶೇಷವಾಗಿ ಶಿಷ್ಟಾಚಾರ, ಸಮಾಜ ಸುಧಾರಣೆಗೆ ಅಗತ್ಯವೆಂದು ಭಾವಿಸಿರುವ ಸಂಸ್ಕಾರವು, ಅವನ ಆ ಕಾಲದ ಇತರ ಯಾವುದೇ ಕುಲೀನದಂತೇ ಇರುತ್ತದೆ. ಗೌತಮ ಬುದ್ಧನೂ ಇದಕ್ಕೆ ಹೊರತಲ್ಲ. ನಿರ್ವಾಣದ ಮಾರ್ಗವನ್ನು ಅವನೇ ಹುಡುಕಿದ. ಅಷ್ಟಾಂಗ ಮಾರ್ಗವು ಅವನ ಧ್ಯೇಯದ ಸಾಧನ. ಯೋಗಮಾರ್ಗದ ದೇಹದಂಡನೆಯು ತಪ್ಪಾದುದು. ಅದರಿಂದ ಮನಸು ಶುದ್ಧವಾಗುವುದಿಲ್ಲ. ವಾಸನಾಮೂರ್ತಿಯ ಬಳಿಕವೂ ಅದು ಮಲಿನವಾಗಿಯೇ ಇರುತ್ತದೆ. ದೇಹಧಾರಣೆಗೆ ಅಗತ್ಯವಿದ್ದ ಆಹಾರ ವಿಹಾರವು ದೇಹಕ್ಕೆ ಬೇಕೇ ಬೇಕು. ಬ್ರಹ್ಮಚರ್ಯೆ ಬೇಕು, ಆದರೆ ಕ್ಷುದ್ರವಾದ ತಪ ಬೇಡ. ವೈರಾಗ್ಯ ಬೇಕು. ಆದರದು ಕರುಣಾಭಾವ ರಹಿತವಾಗಿರಬಾರದು. ಸನ್ಯಾಸಿ ಜೀವನ ಬೇಕು, ಆದರೆ ಜನರಿಂದ ದೂರದ ವಾಸಬೇಡ, ಏಕಾಂತ ಬೇಕು, ಆದರೆ ನಿರ್ಜನ ಬೇಡ. ಸಂಗ ಬೇಕು ಆದರೆ ಸಂದಣಿ ಬೇಡ. ಎಲ್ಲವೂ ನಶ್ವರ. ಅನಿತ್ಯ–ಅನಾತ್ಮವಾಗಿದೆ. ವಸ್ತು ವಸ್ತುವಿನ, ಪ್ರಾಣಿ ಮಾತ್ರಗಳ ಅಸ್ತಿತ್ವದ ಸಾರ್ಥಕವು ಕೊನೆಗೆ ಸಂಕಲ್ಪದ ಬಿಡುಗಡೆ ಹೊಂದುವುದರಲ್ಲಿದೆ. ತನ್ನ ಹಿತವೇ ಸಮಾಜದ ಹಿತ. ಅದೇ ಬಹುಜನ ಸಮಾಜದ ಸುಖ. ಬಹುಜನರ ಹಿತ. ಇದು ಒಂದೇ ಜನ್ಮದಲ್ಲಿ ಸಾಧ್ಯವಿಲ್ಲ. ಜನ್ಮ ಜನ್ಮಾಂತರಗಳ ಕೊನೆಗೆ ಅದು ಫಲಿಸುತ್ತದೆ. ಇದಕ್ಕಾಗಿ ಸಂಕಲ್ಪ. ವಾಸನಾ ತೊರೆಯಬೇಕಾದ ಅಗತ್ಯವಿದೆ. ಜಗತ್ತನ್ನು ದ್ವೇಷಿಸುವುದರಿಂದ ಈ ಹಂಗು ಹರಿಯಲಾರದು. ಕರುಣೆಯ ಭಾವನೆಯಿಂದಲೇ ಅದು ಹರಿಯುವುದು ಸಾಧ್ಯ. ಇದೇ ಅವನ ಧರ್ಮದ ರಹಸ್ಯ. ರತಿ ಮತ್ತು ನಿವೃತ್ತಿಯ ನಡುವಣ ಮಧ್ಯಮ ಮಾರ್ಗವು ನೋಡಲು ಸುಲಭವಾಗಿದ್ದರೂ ಅದನ್ನು ಆಚರಿಸಲು ಪರಮ ಕೌಶಲ್ಯ ಬೇಕು. ಕುಶಲದ ಉಪಸಂಸದ, ಪ್ರಾಪ್ತಿ ಇದೇ ಭಿಕ್ಷುವಿನ ಧ್ಯೇಯ, ಕುಶಲತೆಯೆಂದರೆ ಸ್ವಾಸ್ಥ್ಯ ಮತ್ತು ಕೌಶಲ್ಯ. ಯೋಗ ಕರ್ಮಸು ಕೌಶಲಮ್ ಇದಕ್ಕಿಂತ ಈ ಮಾರ್ಗವು ತಾತ್ವಿಕವಾಗಿ ಭಿನ್ನವಾಗಿದೆ.

ಸಮತೆಯ ವ್ಯಾಪ್ತಿ

ಬುದ್ಧನು ದೇವರು ಮತ್ತು ಆತ್ಮ ಈ ಎರಡನ್ನು ತೊರೆದ. ಉಪನಿಷತ್ತಿಗಿಂತ ಭಿನ್ನವಾದ ವಿಚಾರ ಸರಣಿಯನ್ನು ಆರಂಭಿಸಿದ. ಮನಸ್ಸಿನ ಮನಸು ಸಂಕಲ್ಪದಿಂದ

ಕೂಡಿರುತ್ತದೆ. ಆ ಸಂಕಲ್ಪವು ಕುಶಲ, ಅಕುಶಲ ಕರ್ಮದಿಂದ ಬಿಡುಗಡೆಯಿಲ್ಲ. ಆದರೆ ಕರ್ಮದ ಬೀಜ ಸಂಕಲ್ಪವು ನಿರ್ವಾಣವನ್ನು ಮುಕ್ತ ಮಾಡುತ್ತದೆ. ಈ ಕಾರಣಕ್ಕಾಗಿ ಮನುಷ್ಯ ಮನವನ್ನು ಒಂದು ಸ್ವಯಂಕೇಂದ್ರಿತ ವಸ್ತುವೆಂದು ಬುದ್ಧನು ಒಪ್ಪಿಕೊಂಡನು. ಈ ಮನವು ಪ್ರತಿಯೊಬ್ಬರ ಕೊಡುಗೆಯಾಗಿದೆ. ಇದು ಸಕಲರಿಗೆ ಸಮಾನ. ಈ ವಿಚಾರದ ಇಂದ್ರಿಯವನ್ನು ಪ್ರತಿಯೊಬ್ಬರೂ ಬಳಸಬೇಕು. ಇಲ್ಲಿಯವರೆಗೆ ಮನುಷ್ಯ ಸಮಾಜದಲ್ಲಿಯ ಸಮತೆಯನ್ನು ಬುದ್ಧನು ಒಪ್ಪಿದನು. ಆದರೆ ವರ್ಣ ಧರ್ಮದ ಚೌಕಟ್ಟಿನ ಹೊರಗೆ ಅವನು ಸನ್ಯಾಸಿ ಎಂದು ಹೋದರೂ ಈ ಬಗೆಗಿನ ಪೂರ್ವಗ್ರಹವು ಅವನನ್ನು ತೊರೆದಿತ್ತು ಎಂದು ಹೇಳುವಂತಿಲ್ಲ.

ವರ್ಣಾಶ್ರಮ ಮತ್ತು ಬುದ್ಧ

ಶೃತಿ ಸ್ಮೃತಿಯಲ್ಲಿ 'ಬ್ರಾಹ್ಮಣ-ಕ್ಷತ್ರಿಯ ವೈಶ್ಯ-ಶೂದ್ರ' ಎಂಬ ವರ್ಣದ ಅಳತೆ ಇರುತ್ತದೆ. ಬೌದ್ಧ ಗ್ರಂಥದಲ್ಲಿದು ಕ್ಷತ್ರಿಯ-ಬ್ರಾಹ್ಮಣ-ವೈಶ್ಯ-ಶೂದ್ರ ಕ್ರಮದಲ್ಲಿದೆ. ಇದಿಷ್ಟೇ ಭೇದ. ನಮ್ಮ ಕ್ಷತ್ರಿಯರ ರಕ್ತವು ಬ್ರಾಹ್ಮಣರಿಗಿಂತ ಶುದ್ಧವಾಗಿದೆ. ಅದು ಹಾಗಿರಲೆಂದು ನಾವು ಸೋದರ-ಸೋದರಿಯರ ನಡುವೆ ಮದುವೆ ಮಾಡುತ್ತೇವೆ. ಆದರೆ ಬೀಜದ ಶುದ್ಧತೆಯನ್ನು ಶಾಶ್ವತವಾಗಿರಿಸುತ್ತೇವೆ ಎಂಬ ಮಾತನ್ನು ಬುದ್ಧನು ಅಂಬಲಿಸುತ್ತದಲ್ಲಿ ಹೇಳಿದ್ದಾನೆ. ಅದೇ ರೀತಿ ಜಾತಕ ಕಥೆಯ ಪ್ರಸ್ತಾವನೆಯಲ್ಲಿ ಬುದ್ಧ ಕೇವಲ ಕ್ಷತ್ರಿಯ ಮತ್ತು ಬ್ರಾಹ್ಮಣ ಕುಲದಲ್ಲಿ ಜನಿಸುತ್ತಾರೆ. ವೈಶ್ಯವಾಗಲಿ ಶೂದ್ರಕುಲದಲ್ಲಾಗಲಿ ಜನಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಜಾತಿಭೇದಾತೀತದ ಕಲ್ಪನೆಯು ಆಂಗ್ಲರ ಆಡಳಿತದಲ್ಲಿ ಮೂಡಿಬಂದ ಆಧುನಿಕ ಮಹಾನ್ ಕಲ್ಪನೆಯಾಗಿದೆ. ಅದರ ಸಂಬಂಧ ಗೌತಮ ಬುದ್ಧನಿಗೆ ಹೇಗೆ ಅನ್ವಯಿಸುತ್ತದೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಬುದ್ಧನ ಯುಗಧರ್ಮವು ಬೇರೆಯಾಗಿರುವುದರಿಂದ. ಅದು ಅವನಲ್ಲಿ ಇರದಿದ್ದರೂ ಅದರಿಂದ ಅವರಿಗೆ ಯಾವುದೇ ಗೌಣತನ ಬರುವುದು ಸಾಧ್ಯವಿಲ್ಲ.

ಮಾಂಸಾಶನದ ಬಗೆಗೆ ಬುದ್ಧಮತ

ಎರಡನೇ ಪ್ರಶ್ನೆಯು ಮಾಂಸಾಹಾರದ್ದು. ಬುದ್ಧನು ಅಹಿಂಸೆಯ ಉದ್ಗಾತನು. ಹೀಗಾಗಿ ಅವನಿಗೆ ಮಾಂಸಾಹಾರ ವರ್ಜ್ಯ ಎಂಬ ಲೆಕ್ಕಾಚಾರ. ಇಂದಿನ ಬಡಪಾಯಿ ಬೌದ್ಧರು ಇದರಿಂದಾಗಿ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಅಸ್ಪೃಶ್ಯ ಸಮಾಜ (ಕೆಲವು ವಾರಕರಿಗಳ ಹೊರತು) ಶಾಕಾಹಾರಿಯಲ್ಲ. ಬಹುಸಂಖ್ಯಾತ ಜನರು ಅರೆ ಹೊಟ್ಟೆಯಲ್ಲಿರುವಾಗ ಶಾಖಾಹಾರದ ಉಗ್ರ ಪರೀಕ್ಷೆಯಿಂದ ಅವರು ಹೇಗೆ ಪಾರಾಗಬಲ್ಲರು ಎನ್ನುವುದೇ ದೊಡ್ಡ ಪ್ರಶ್ನೆ. ಆ ಪರೀಕ್ಷೆಯನ್ನು ದಾಟಿದರೂ,

ಕೇವಲ ಧರ್ಮ ಪಾಲನೆಗಾಗಿ ಅವರನ್ನು ಅವರ ನೈಸರ್ಗಿಕ ಆಹಾರದಿಂದ ಹೊರಗಿಡುವುದೇ ಅನ್ಯಾಯದ್ದಾಗುತ್ತದೆ. ಸ್ವತಃ ಬುದ್ಧನೇ ಹಂದಿಯ ಮಾಂಸ ತಿಂದು ಅನಾರೋಗ್ಯದಿಂದ ಬಳಲಿದ, ಕೊನೆಗೆ ಅದರಿಂದಲೇ ಮಡಿದ ಎಂದು ಬೌದ್ಧ ಗ್ರಂಥಗಳು ಹೇಳುತ್ತವೆ. ಪ್ರಾಣಿ ಹಿಂಸೆಯ ಬಗ್ಗೆ ಅವನಿಗೆ ಆತ್ಯಂತಿಕ ತಿರಸ್ಕಾರವಿದ್ದರೂ ಮಹಾವೀರನಂತೆ ಅವನು ಮಾಂಸಾಹಾರವನ್ನು ಸಂಪೂರ್ಣ ತ್ಯಜಿಸಿ ಅದನ್ನು ತನ್ನ ಪ್ರಚಾರದ ಮುಖ್ಯ ಉದ್ದೇಶವನ್ನಾಗಿ ಬಳಸಿಕೊಳ್ಳಲಿಲ್ಲ. ಭಿಕ್ಷುಗಳು ಎಲ್ಲ ಜಾತಿಯ ಜನರ ಕೈಯಿಂದ ಸ್ವೀಕರಿಸಬೇಕು. ಅದನ್ನೇ ತಿನ್ನಬೇಕು ಎಂಬ ಸೌಜನ್ಯದ ನಿಯಮವನ್ನು ಅವನು ರೂಪಿಸಿದ. ಧಮ್ಮ ಪದ – ಅತ್ಥ ಕಥೆಗಳಲ್ಲೂ ಭಿಕ್ಷು ಅಂಬಿಗರಿಂದ ಮೀನು ಪಡೆದ ಉಲ್ಲೇಖ ಲಭಿಸುತ್ತದೆ. ಸ್ವತಃ ತಿನ್ನಲು ಹತ್ಯೆ ಮಾಡಬಾರದು. ಬೇರೆಯವರಿಂದಲೂ ಮಾಡಿಸಬಾರದು. ಆದರೆ ಬೇರೆಯವರು ತಮಗಾಗಿ ಪ್ರಾಣಿಯನ್ನು ಕೊಂದಿದ್ದರೆ, ಆ ಮಾಂಸವನ್ನು ವರ್ಜ್ಯವೆಂದು ಭಾವಿಸಿ ಆ ಅನ್ನವನ್ನು ಭಿಕ್ಷು ಆದವನು ಅನಾದರ ಮಾಡಕೂಡದು. ಇದು ಬುದ್ಧನ ಆಶಯವಾಗಿದೆ. ಪ್ರಾಯಃ ಶ್ರೀಮಂತರಾದವರು ಉಪಾಸಕ ಭಿಕ್ಷುಗಳಿಗೆ ಪಾಯಸ ನೀಡುತ್ತಿರಬೇಕು. ಚೀನ, ಜಪಾನ್, ಬ್ರಹ್ಮ ದೇಶ ಮುಂತಾದೆಡೆಗಳಲ್ಲಿ ಭಿಕ್ಷುಗಳು ಬಹಿರಂಗವಾಗೇ ಮಾಂಸಾಹಾರ ಸೇವಿಸುತ್ತಾರೆ. ಹಲವರು ಅವರ ಚೇಷ್ಟೆ ಮಾಡುತ್ತಾರೆ. ಆದರೆ ಅದರಲ್ಲೂ ತಪ್ಪೇನಿದೆ? ಶಾಕಾಹಾರದಲ್ಲಿ ಅಹಿಂಸೆಯಿದೆ ಎಂಬ ಕಲ್ಪನೆ ಜೈನರದ್ದು, ಅದು ವೈದಿಕರದ್ದಲ್ಲ, ಬೌದ್ಧರದ್ದೂ ಅಲ್ಲ. ಮುಂದೆ ಇದೇ ಕಲ್ಪನೆಯನ್ನು ಬ್ರಾಹ್ಮಣರು ಸ್ವೀಕರಿಸಿದರು. ಸಮಾಜ ಮಾನ್ಯತೆಯನ್ನು ಪಡೆಯಿತು. ಆದರೆ ನಂತರದ ಮೌಲ್ಯದ ಯೋಚನೆ ಮಾಡಿ ಬುದ್ಧರ ಅಹಿಂಸೆಯನ್ನು ಅಪಹಾಸ್ಯ ಮಾಡುವುದು ಸರಿಯಲ್ಲ. ವನಸ್ಪತಿಗೂ ಪ್ರಾಣವಿದೆ. ಅದರ ಜೀವ ತೆಗೆಯುವುದು ಎಂದರೆ ಹಿಂಸೆಯೇ ಆಗಿದೆ. ಆಗ ಶಾಕಾಹಾರವು ಪ್ರಾಯಶಃ ಕಡಿಮೆ ಪ್ರಮಾಣದಲ್ಲಿ ಹಿಂಸೆಯಾಗಿರಬೇಕು. ಏಕೆಂದರೆ ಧಾನ್ಯ ಬೀಜಗಳು ಪಶುಬೀಜಕ್ಕಿಂತ ಎಷ್ಟೋ ಅನಂತಪಟ್ಟಿನಲ್ಲಿ ಅಧಿಕವಾಗಿಯೂ ಮತ್ತು ವೇಗವಾಗಿಯೂ ಬೆಳೆಯುತ್ತದೆ. ಹೀಗಾಗಿ ಕೆಲವು ಅಹಿಂಸೆಯ ಪ್ರತಿಪಾದಕರು ನವಬೌದ್ಧರ ಮೇಲೆ ಬೇಡವಾದ ಬಂಧನವನ್ನು ಹೇರಿ, ಅವರ ನಿಷ್ಠೆಯ ಬೆಲೆಯನ್ನು ಆಹಾರದಿಂದ ಕಟ್ಟಲು ಬಯಸುವುದು ತಪ್ಪು. ನವಬೌದ್ಧರು ತಮ್ಮ ಆಹಾರ ಸಂಸ್ಕೃತಿಯನ್ನು ಬದಲಾಯಿಸುವ ಅಗತ್ಯ ಖಂಡಿತಕ್ಕೂ ಇಲ್ಲ. ಮದ್ಯ ಮಾತ್ರ ಅವರು ಸಂಪೂರ್ಣ ವ್ಯರ್ಜಿಸಬೇಕು. ಗೃಹಸ್ಥನು ತ್ಯಜಿಸಬೇಕಾದ ಪಂಚಶೀಲ ಎಂದರೆ ಹಿಂಸೆ, ಹುಸಿ ನುಡಿಯುವುದು, ಅಸಭ್ಯಮಾತು, ಮದ್ಯಪಾನ, ಕಳ್ಳತನ ಮತ್ತು ವ್ಯಭಿಚಾರ.

(ಟಿಪ್ಪಣಿ : ಬಹುಸಂಖ್ಯಾತ ದಲಿತರು ಅಂಬೇಡ್ಕರ್‌ರ ಹೇಳಿಕೆಯಿಂದ

ಬೌದ್ಧಧರ್ಮವನ್ನು ಸ್ವೀಕರಿಸಿದರು. ಆಗ ಯೋಚನೆಗೆ ಚಾಲನೆ ಸಿಕ್ಕಿತು. ಆದರೆ ಧರ್ಮ ಪರಿವರ್ತನೆಯ ಬಗ್ಗೆ ಯೋಚಿಸುವಾಗ ಬೌದ್ಧಧರ್ಮದ ಬಗೆಗೆ ಆಳವಾದ ಚರ್ಚೆ ನಡೆಯಲೇ ಇಲ್ಲ. ಈ ಕೊರತೆಯನ್ನು ಹೋಗಲಾಡಿಸಲು ಈ ಲೇಖನ.)

* * * *

೧೫. ಬದ್ಧತೆ ಮತ್ತು ನಾವು

ಕಳೆದ ಎಷ್ಟೋ ವರ್ಷಗಳಿಂದ ನಾವು ಬದ್ಧತೆ ಈ ಪದದ ಬಗೆಗೆ ಕೇಳುತ್ತಿದ್ದೇವೆ. ಲೇಖಕ, ಚಿಂತಕ, ರಾಜಕಾರಣಿ ಮತ್ತು ಸಾರ್ವಜನಿಕ ಕ್ಷೇತ್ರದೊಂದಿಗೆ ನಮ್ಮ ಸಂಬಂಧವಿದೆಯೋ ಅಂಥ ಪ್ರತಿಯೊಬ್ಬರೂ ಬೇರೆಯವರಿಗೆ ಉಪದೇಶ ಮಾಡುವಾಗ ಬದ್ಧತೆಯ ಉಪದೇಶ ಮಾಡುತ್ತಾನೆ. ಆಗ ಶಿಕ್ಷಕನ ಬದ್ಧತೆ, ಲೇಖಕನ ಬದ್ಧತೆ, ನ್ಯಾಯಾಧೀಶನ ಬದ್ಧತೆ ಇಂಥ ಹಲವು ಪ್ರಕಾರ ನಮ್ಮ ಕಿವಿಗೆ ಬೀಳಲಾರಂಭಿಸುತ್ತದೆ. ಹೀಗೆ ನಮ್ಮಲ್ಲಿ ಬದ್ಧತೆ ಶಬ್ದವೂ ತೀರ ಅಗ್ಗವಾಗಿದೆ. ಆದರೆ ಬದ್ಧತೆಯ ನಿಜವಾದ ಅರ್ಥವೇನು ಎಂದು ಅರಿಯುವುದು ಮಾತ್ರ ಜಟಿಲವಾಗಿದೆ.

ನಮ್ಮಲ್ಲಿ ಈ ಬದ್ಧತೆ ಶಬ್ದವು 'ನ್ಯೂರಾಟಿಕ್ ಕ್ಯಾಚ್‌ವರ್ಡ್'ದಂತಾಗಿದೆ. ಪ್ರತಿ ದಶಕದಲ್ಲಿ ಎಂಥ ಒಂದು ಶಬ್ದ ಚಲಾವಣೆಯಲ್ಲಿ ಬರುತ್ತದೆ ಎಂದರೆ, ಅದನ್ನು ಕೇಳಿದಾಕ್ಷಣ ಕೇಳುಗನು ಗದ್ಗದಗೊಂಡು ಅವನ ವೈಚಾರಿಕ ಶಕ್ತಿಯು ಶಿಥಿಲಗೊಳ್ಳುತ್ತದೆ. ವೈಚಾರಿಕ ಶಕ್ತಿ ಶಿಥಿಲಗೊಂಡಿದ್ದರಿಂದ ಅವನು ತನಗರಿವಿಲ್ಲದೆ ಆ ಪದಕ್ಕೆ ಬಲಿಯಾಗುತ್ತಾನೆ. ಕೇಳುಗರಿಗೆ ಸ್ವಂತ ಬಲಿ ಮಾಡುವ ಆ ಶಬ್ದ ನಿಜಕ್ಕೂ ಏನು ಹೇಳಲು ಪ್ರಯತ್ನಿಸುತ್ತಿದೆ ಎನ್ನುವುದರ ಕಡೆಗೆ ಕೇಳುಗರ ಯಾರದೇ ಗಮನ ಹೋಗುವುದಿಲ್ಲ. ಆ ಶಬ್ದ ಕೇಳುಗರ ಮನವನ್ನು ಹೇಗೆ ಮೋಡಿ ಮಾಡುತ್ತವೆ ಎಂದರೆ ಆ ಶಬ್ದ ಖಚಿತವಾದ ಆಶಯವನ್ನು ಶೋಧಿಸಬೇಕೆಂಬ ಇಚ್ಛೆಯೇ ಆಲಿಸುವವನಿಗ ಆಗುವುದಿಲ್ಲ. ತಾನು ಆಲಿಸುತ್ತಿರುವದು ಏನೋ ದಿವ್ಯಭವ್ಯವಾಗಿದೆ, ವೇದವಾಕ್ಯವಾಗಿದೆ ಎಂದೇ ಭಾವಿಸುತ್ತಾರೆ. ತೀರ-ತೀರ ಹಿಂದೆ ಅಂದರೆ ಫ್ರೆಂಚ್ ರಾಜ್ಯ ಕ್ರಾಂತಿಯ ಕಾಲಕ್ಕೆ ಸ್ವಾತಂತ್ರ್ಯ, ಸಮತೆ, ಬಂಧುತ್ವ-ಲಿಬರ್ಟಿ, ಇಕ್ವೆಲಿಟಿ ಮತ್ತು ಫ್ರೆಟರ್ನಿಟಿ ಎಂಬ ಮೂರು ಶಬ್ದಗಳು ಎಲ್ಲರ ಬಾಯಲ್ಲಿ ಮೆಲಕಾಡುತ್ತಿತ್ತು. ಅವು ಕೇಳುಗರ ಭಾವನೆಯನ್ನು ಉತ್ತೇಜಿತಗೊಳಿಸುತ್ತಿದ್ದವು. 'ಸತ್ಯ ಶಿವಂ ಸುಂದರಂ' ಇದೂ ಸಹ ಇಂಥದೇ ಮೋಡಿ ಮಾಡುವ ಘೋಷ ವಾಕ್ಯ. ಭಾರತೀಯ ಸಂಸ್ಕೃತಿಯ ಪ್ರತೀಕವೆನಿಸಿಕೊಂಡ ಈ ವಾಕ್ಯವು ಭಾರತೀಯವಲ್ಲ. ಮೂಲದಲ್ಲಿ ಗ್ರೀಕ್ ಆಗಿದ್ದು, ಬಳಿಕ ಫ್ರೆಂಚ್‌ನಿಂದ ಟಾಗೋರರ ತಂದೆಯವರಿಂದ ದೇವೇಂದ್ರನಾಥರು ಅದನ್ನು ಇಲ್ಲಿಗೆ ತಂದರು ಎಂಬ ಇತಿಹಾಸ ಹೇಳಿದಾಗ

ಹಲವರು ನನ್ನ ಬಗೆಗೆ ಕೆರಳಿದರು. ನಾನು ಭಾರತೀಯ ಸಂಸ್ಕೃತಿಯ ಪಾವಿತ್ರ್ಯದ ಅಪಮಾನ ಮಾಡುತ್ತಿದ್ದೇನೆ ಎಂದುಕೊಂಡರು. ಇಂಥ ತಲೆ ತಿರುಗಿಸುವ ಘೋಷಣೆಯ ಶಬ್ದಗಳ ಬಗ್ಗೆ ತುಂಬಾ ಎಚ್ಚರಿಕೆಯಿಂದ ಯೋಚಿಸಬೇಕಾಗುತ್ತದೆ. ಹಾಗಾದರೇ ಆ ಶಬ್ದಗಳ ಅದೃಶ್ಯ ಹಿಡಿತದಿಂದ ನಮ್ಮ ಮನ ಮುಕ್ತಗೊಳ್ಳುವರು ಸಾಧ್ಯವಾಗುತ್ತದೆ.

ಬದ್ಧತೆಯ ಚರಿತ್ರೆಯ ಇತಿಹಾಸವು ತುಂಬ ವಿಚಿತ್ರವಾಗಿದೆ. ಮೂಲದಲ್ಲಿ ಇಂಗ್ಲೀಷಿನ 'ಕಮಿಟ್‌ಮೆಂಟ್' ಎಂಬ ಕಲ್ಪನೆಗಾಗಿ ಮರಾಠಿಯಲ್ಲಿ ಬಳಸಿದ ಶಬ್ದವಿದು. ತೀರ ನಿನ್ನೆ ಮೊನ್ನೆಯವರೆಗೆ ತಲೆ ತಿರುಗಿದ ಜನರನ್ನು ಹುಚ್ಚರ ಆಸ್ಪತ್ರೆಗೆ ಕಳಿಸುವಾಗ ಡಾಕ್ಟರ್, ಈ ಹುಚ್ಚನನ್ನು ತಾನು ಆಸ್ಪತ್ರೆಗೆ 'ಕಮಿಟ್' ಮಾಡುತ್ತಿದ್ದೇನೆ ಎಂದು ಬರೆದು ಕೊಡುತ್ತಿದ್ದರು. ಅಂದರೆ ಹುಚ್ಚನ ಆರೈಕೆ ಮಾಡಲು ಆ ಹುಚ್ಚನನ್ನು ಯಾರ ಬಳಿಗೆ ಕಳಿಸಲಾಗುತ್ತಿತ್ತೋ ಅದಕ್ಕೆ ತಾನು 'ಕಮಿಟ್' ಮಾಡುತ್ತಿದ್ದೇನೆ ಎಂದು ಡಾಕ್ಟರ್ ಹೇಳುತ್ತಿದ್ದರು. ಈಗ ಇದೇ ಶಬ್ದವನ್ನು ಪ್ರಜ್ಞಾವಂತರೂ ತಮಗೆ ಬಳಸಿಕೊಂಡು ತಾನು ಇಂಥವನಿಗೆ 'ಕಮಿಟ್' ಆಗಿದ್ದೇನೆ. ಅಂಥವನಿಗೆ 'ಕಮಿಟ್' ಆಗಿದ್ದೇನೆ ಎಂದು ಅಭಿಮಾನದಿಂದ ಹೇಳುವುದನ್ನು ಕಾಣುತ್ತೇನೆ. ಹಿಂದೆ ವೈದ್ಯರು ಹುಚ್ಚರನ್ನು ಆಸ್ಪತ್ರೆಗೆ 'ಕಮಿಟ್' ಮಾಡುತ್ತಿದ್ದರು. ಇತ್ತೀಚೆಗೆ ದೊಡ್ಡ ದೊಡ್ಡ ಲೇಖಕರು ಮತ್ತು ರಾಜಕಾರಣಿಗಳು ತಮ್ಮನ್ನು ತಾವೇ 'ಕಮಿಟ್' ಮಾಡುತ್ತಾರೆ. ಇಂದು ಉಳಿದವರು ಯಾರೂ ತಮ್ಮನ್ನು 'ಕಮಿಟ್' ಮಾಡುವ ಹಾದಿಯನ್ನು ಕಾಯದೇ ತಮ್ಮನ್ನು ತಾವೇ 'ಕಮಿಟ್' ಮಾಡುವ ಅಹಮಹಮಿಕಾ ಬೇಕಾಗುತ್ತದೆ. ಯಾರು ಹೀಗೆ ಮಾಡುತ್ತಾರೋ, ಅವನನ್ನೇ ಪುರೋಗಾಮಿ ಜಾಣನೆಂದು ಪರಿಗಣಿಸಲಾಗುತ್ತದೆ.

ವೈಚಾರಿಕ ಕ್ಷಿತಿಜದಲ್ಲಿ ಸಾರ್ತ್ರೆ ಎಂಬ ಫ್ರೆಂಚ್ ತತ್ವ ಚಿಂತಕನ ಉದಯವಾಗುವವರೆಗೆ 'ಕಮಿಟ್' ಶಬ್ದಕ್ಕೆ ಕೆಟ್ಟ ಅಥವಾ ವಿಂದ್ಯ ಸಂದರ್ಭವಿತ್ತು. ಆಗ ಎಲ್ಲರೂ ಈ ಶಬ್ದವನ್ನು ಕೆಟ್ಟದ್ದು ಎಂದು ಭಾವಿಸುತ್ತಿದ್ದರು. ಸಾರ್ತ್ರೆ ಬಂದ ಬಳಿಕ 'ಕಮಿಟ್' ಶಬ್ದದ ಕೆಟ್ಟ ಅರ್ಥ ಗಡಿಪಾರಾಯಿತು. ಒಂದು ಕಾರ್ಯದ ಹೊಣೆಯನ್ನು ಹೊರುವದು ಎಂಬರ್ಥದಲ್ಲಿ ಸಾರ್ತ್ರೆಗೆ ಇದನ್ನು ಬಳಸುವ ಇಚ್ಛೆಯಾಯಿತು. ಅದಕ್ಕಾಗಿ ಅವನು ಎಂಗೇಜ್‌ಮೆಂಟ್ 'ಅಂಗಾಜಮಾ' ಎಂಬ ಪದ ಬಳಸಬೇಕೆಂದುಕೊಂಡ. ಅಂಗಾಜಮಾ ಎಂಬ ಫ್ರೆಂಚ್ ಪದಕ್ಕೆ ಸರಿಯಾದ ಇಂಗ್ಲೀಷಿನ ಪರ್ಯಾಯವಿಲ್ಲದಿದ್ದರಿಂದ ಅಂಥ ಪರ್ಯಾಯವನ್ನು ರೂಪಿಸಲು ಆಂಗ್ಲ ವಿದ್ವಾಂಸರು ಪ್ರಯತ್ನಿಸಿದರು. ಬಳಿಕ ಕೆಲದಿನ 'ಎಂಗೇಜಿಂಗ್ ವನ್‌ಸೆಲ್ಫ್' ಎಂಬ ಪದಪ್ರಯೋಗ ಮಾಡಿದರು. ಆದರೆ ಅದು ಕಿವಿಗೆ ಹಿತವೆನಿಸಲಿಲ್ಲ. ಹೀಗಾಗಿ ಅವರು 'ಎಂಗೇಜ್‌ಮೆಂಟ್' ಆಯ್ಕೆ ಮಾಡಿದರು. ಆದರೆ ಅದೂ ಹೊರೆಯೆನಿಸಿತು.

ಕೊನೆಗೆ ಅವರು 'ಕಮಿಟ್‌ಮೆಂಟ್' ಎಂಬ ಶಬ್ದದ ಬಳಿಗೆ ಬಂದು ನಿಂತರು. ಅವರಲ್ಲಿ ಎಷ್ಟೋ ಜನರು ಒಂದೇ ಉಸುರಿಗೆ 'ಕಮಿಟೆಡ್' ವಿಚಾರವಂತರೂ ಆದರು. ವಿದ್ವಾಂಸರು ಮಾತ್ರ 'ಕಮಿಟ್‌ಮೆಂಟ್' ಶಬ್ದದ ಬಗೆಗೆ ಖುಷಿಯಾಗಿದ್ದರು ಎಂದೇನಲ್ಲ. ಸಾಮಾನ್ಯ ಜನರಿಗೂ ಈ ಶಬ್ದ ಪ್ರಯೋಗ ತುಂಬ ಹಿಡಿಸಿತು. ಅದು ನಮಗೂ ಇಷ್ಟವಾಗಿದೆ ಎಂದೇ ಅನ್ನಬೇಕಾಗಿದೆ. ಏಕೆಂದರೆ 'ಕಮಿಟೆಡ್ ಲೇಖಕ' ಬಂದ ಎಂದ ಕೂಡಲೇ ನಮಗೆ ಒಮ್ಮೆಲೆ ಧೈರ್ಯ ಬಂದಂತೆ ಆಗುತ್ತದೆ. 'ಕಮಿಟೆಡ್' ಲೇಖಕ ನಿಮ್ಮ ನಮ್ಮೊಳಗಿನವಲ್ಲ, ತೀರ ಸನಿಹದ ಲೇಖಕನಾಗಿರುತ್ತಾನೆ ಎಂದು ಜನರು ಅಂದುಕೊಂಡಿದ್ದು ಮಾತ್ರ ಸತ್ಯ!

ಈ ಹೊಸ ಕಲ್ಪನೆಗೆ ಹೆಚ್ಚು ಬೆಲೆ ಬಂದಿರುವುದನ್ನು ಕಂಡು ಧರ್ಮೋಪದೇಶಕ ಹಾಗೂ ಧರ್ಮಪ್ರಸಾರಕರು ತಮ್ಮ ಬಳಿಯ ಹಳೆಯ ಮದ್ಯವನ್ನು ಹೊಸ ಬಾಟಲಿಯಲ್ಲಿ ತುಂಬಿ ಮಾರುವ ಭರಾಟೆಯನ್ನು ಆರಂಭಿಸಿದರು. ರಾಜಕೀಯ ಪುಢಾರಿಗಳೂ ಅವರ ಬಂಧುಗಳೇ. ಯಾವುದೇ ಒಂದು ಶಬ್ದ ಅಥವಾ ಕಲ್ಪನೆಯು ಜನರನ್ನು ಆಕರ್ಷಿಸಲು ಉಪಯೋಗವಾಗುತ್ತದೆ ಎಂದು ಗೊತ್ತಾದ ಕೂಡಲೇ ಅದರ ಲಾಭ ಪಡೆಯದೇ ಸುಮ್ಮನಿರುವುದು ಅವರಿಂದ ಸಾಧ್ಯವೇ? ಅದರಿಂದಾಗಿ ಬದ್ಧತೆ ಶಬ್ದದ ಬಂಡವಾಳ ಮಾಡಲು ಅವರೂ ಮುಂದಾದರು. ಆದರೆ ಈ ಎಲ್ಲ ಅವಸರದಲ್ಲಿ ಬದ್ಧತೆ ಈ ಶಬ್ದವನ್ನು ಏನು ಹೇಳಲು ಶೋಧಿಸಲಾಗಿತ್ತು ಎನ್ನುವುದು ನಿರ್ಲಕ್ಷ್ಯಕ್ಕೊಳಗಾಯಿತು. ಸಕ್ರಿಯ ರಾಜಕಾರಣ, ಸಮಾಜಕಾರಣ ಅಥವಾ ಮತ್ತೆ ಏನೇನೋ ಪ್ರತ್ಯಕ್ಷ ಕಾರ್ಯ ಮಾಡುವ ಹಲವು ಜನರನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ಈ ಎಲ್ಲ ಕೃತಿವೀರರಿಗೆ ಸ್ವಂತದ ಬಗೆಗೆ ಒಂದು ತಪ್ಪು ಗ್ರಹಿಕೆಯಿದೆ. ಅವರು ತಮ್ಮನ್ನು ಪ್ರಾಧ್ಯಾಪಕ, ಬೌದ್ಧಿಕ, ಸಂಶೋಧಕರೊಂದಿಗೆ ತುಲನೆ ಮಾಡಿಕೊಳ್ಳುತ್ತಾರೆ. ಈ ಬುದ್ಧಿವಂತ ಜನರು ತಮ್ಮ ವಿಶಿಷ್ಟ ವ್ಯವಸಾಯದಿಂದಾಗಿ ಬದ್ಧತೆಯಿಂದ ದೂರ ಉಳಿಯುತ್ತಾರೆ ಎಂದವರು ಹೇಳಲು ಹವಣಿಸುತ್ತಾರೆ. ನೀವು ಬುದ್ಧಿಜೀವಿಗಳು ನಿರ್ಲಿಪ್ತವಾಗಿದ್ದು, ಯಾವುದೇ ಮಹತ್ವದ ಪ್ರಶ್ನೆಯ ಬಗೆಗೆ ಯೋಚಿಸಬೇಕೆಂದು ಅವರ ವ್ಯವಸಾಯ ಅವರಿಗೆ ಹೇಳುತ್ತದೆ. ಸ್ವಾಭಾವಿಕವಾಗಿಯೇ ಬುದ್ಧಿಜೀವಿಗಳು ಪ್ರತ್ಯಕ್ಷ ಜೀವನದಿಂದ ಅಥವಾ ಜೀವನದ ಪ್ರಶ್ನೆಯಿಂದ ಸದಾಕಾಲ ದೂರ ಉಳಿಯುತ್ತಾರೆ. ಬದಲು ಸಕ್ರಿಯ ರಾಜಕಾರಣ, ಸಮಾಜ ಕಾರಣ ಮಾಡುವವರು ಪ್ರತ್ಯಕ್ಷ ಜೀವನಕ್ಕೆ ಮುಖಾಮುಖಿಯಾಗುತ್ತಾರೆ. ಆ ಜೀವನದ ಪ್ರಶ್ನೆಯಲ್ಲಿ ಬದುಕುತ್ತಾರೆ. ಮತ್ತು ಜ್ಞಾನಕ್ಕಾಗಿ ಜ್ಞಾನ ಎಂಬ ನಿಲುವು ಅವರದ್ದಾಗಿರದೆ ಇರುವುದರಿಂದ ಅವರಿಗೆ ನಿಜವಾದ ಜೀವನ ಅರ್ಥವಾಗುತ್ತದೆ. ಹೀಗಾಗಿ ಅವರು ಬದ್ಧತೆಯನ್ನು ಸ್ವೀಕರಿಸುತ್ತಾರೆ.

ಈ ಯುಕ್ತಿವಾದವು ಬಾಹ್ಯನೋಟಕ್ಕೆ ಒಪ್ಪಿಗೆಯಾಗುವಂತಿದೆ ಎನ್ನುವುದೇನೋ

ನಿಜ. ಏಕೆಂದರೆ ಜ್ಞಾನಕ್ಕಾಗಿ ಜ್ಞಾನ ಎನ್ನುವದು ವಿಶ್ವವಿದ್ಯಾಲಯದ ಧ್ಯೇಯವಾಕ್ಯ. ಯೋಚಿಸಬಹುದಾದ ಪ್ರತಿಯೊಂದು ಪ್ರಶ್ನೆಯನ್ನು ಶೋಧಿಸಿ, ಅದರ ಕುರಿತು ಆಳವಾದ ಸಂಶೋಧನೆಯನ್ನು ಕೈಕೊಳ್ಳುವುದೂ ವಿಶ್ವವಿದ್ಯಾಲಯದ ಕರ್ತವ್ಯವೇ ಆಗಿದೆ. ಈ ಎರಡೂ ಸಂಗತಿಗಳು ಸತ್ಯವಾಗಿದ್ದರೂ ಅದರ ಮೇಲಿಂದ ಎಲ್ಲ ಬುದ್ಧಿ ಜೀವಿಗಳು ಐಷಾರಾಮಿ ಗೂಡಿನಲ್ಲೇ ಅವರಿಗೂ ವ್ಯವಹಾರಿಕ ಜೀವನಕ್ಕೂ ಏನೂ ಸಂಬಂದವಿಲ್ಲ ಮತ್ತು ಅದರಿಂದಾಗಿ ಅವರು ಬದ್ಧತೆರಹಿತ ಜೀವನವನ್ನು ಸಾಗಿಸುತ್ತಾರೆ ಎಂಬ ಎಲ್ಲ ನಿಕಷ ಸತ್ಯವಾಗುವದಿಲ್ಲ. ಬುದ್ಧಿವಂತರು ತಾತ್ವಿಕ ಪ್ರಶ್ನೆಗಳಲ್ಲಿ ಆಸಕ್ತಿ ತೋರಿಸುತ್ತಾರೆ. ಇಂಥ ಪ್ರಶ್ನೆಗಳ ಬಗೆಗೆ ಚರ್ಚೆ ಮಾಡುತ್ತಾರೆ. ಹೀಗಾಗಿ ಅವರು ಜೀವನದ ಬದ್ಧತೆಯಿಂದ ವಂಚಿತರಾಗಿರುತ್ತಾರೆ. ಅದರಿಂದಾಗಿ ಅವರ ಜೀವನ ವ್ಯರ್ಥವಾಗುತ್ತದೆ ಎಂಬ ಬಗೆಯ ವಿಚಾರಗಳು ಜನಪ್ರಿಯವಾಗಿದ್ದರೂ, ಅದು ತೀರ ಅಡಿಪಾಯವಿಲ್ಲದ್ದಾಗಿದೆ. ಈ ವಿಚಾರ ಹೇಗೆ ಬುನಾದಿರಹಿತವಾಗಿದೆ ಎಂಬುದನ್ನು ಅರಿಯಲು ಬಹಳ ಕಷ್ಟಪಡಬೇಕಿಲ್ಲ. ಅಥವಾ ತೀರ ದೂರವೂ ಹೋಗಬೇಕಿಲ್ಲ. ಬುದ್ಧಿಜೀವಿಗಳು 'ಅನ್‌ಕಮಿಟೆಡ್'ರಾಗಿರುತ್ತಾರೆ ಎನ್ನುವವರಿಗೆ ನೀವು ಕೇವಲ ಒಂದೇ ಪ್ರಶ್ನೆಯನ್ನು ಕೇಳಿ. ಅದೇನೆಂದರೆ 'ಕಮಿಟ್' ಈ ಶಬ್ದಕ್ಕೆ ನಿಮ್ಮ ಅರ್ಥ ಯಾವುದು? ಅವರು ಅದರ ಅರ್ಥ ಹೇಳಿದಾಗ. ಬುದ್ಧಿಜೀವಿಗಳು ನಿಜಕ್ಕೂ ಬದ್ಧತೆರಹಿತರಾಗಿರುತ್ತಾರೆಯೆ ಎಂಬುದು ಬಗೆಹರಿಯುತ್ತದೆ. 'ಕಮಿಟ್'ರಾಗಿರುವದೆಂದರೆ ಯಾವ ಪ್ರಶ್ನೆಯ ಬಗೆಗೆ ಖಚಿತ ನಿಲುವು ಹೊಂದಿರುವದು. ಅಡ್ಡಗೋಡೆಯ ಮೇಲೆ ಕೂರದೆ ಇರುವದು. ಸ್ವಂತ ಖಚಿತವಾದ ಅಭಿಪ್ರಾಯವನ್ನು ವ್ಯಕ್ತ ಮಾಡುವದು. 'ಕಮಿಟ್‌ರಾಗಿರುವದು' ಎಂಬ ಅರ್ಥವನ್ನು ಸ್ವೀಕರಿಸಿದರೂ, ಉಳಿದ ತಥಾಕಥಿತ ಬದ್ಧರಾಜಕಾರಣಿಗಳಿಗಿಂತಲೂ ಪ್ರಾಧ್ಯಾಪಕರು, ಬುದ್ಧಿಜೀವಿಗಳು ಹೆಚ್ಚು ಬದ್ಧರಾಗಿರುವುದನ್ನು ಕಾಣಬಹುದು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಎಷ್ಟು ವ್ಯಾಪಾರಿ ಮನೋವೃತ್ತಿಯ ಇಲ್ಲವೇ ಹವ್ಯಾಸಿ ರಾಜಕಾರಣಿಗಳು ಮತ್ತು ಪತ್ರಕರ್ತರು ತುರ್ತು ಪರಿಸ್ಥಿತಿಯ ಪ್ರಶ್ನೆಯ ಬಗೆಗೆ ಖಚಿತ ನಿಲುವನ್ನು ತಾಳಿದ್ದರು? ಆದರೆ ಶಿವರಾಮ ಕಾರಂತರಂತಹ ಲೇಖಕರು, ಚಿಂತಕರು ಸರಕಾರಿ ಪದವಿಯನ್ನು ನಿರ್ದಾಕ್ಷಿಣ್ಯವಾಗಿ ಮರಳಿಸಿ ಸ್ವಂತ ನಿಲುವನ್ನು ಬಹಿರಂಗವಾಗಿ ವ್ಯಕ್ತಮಾಡುತ್ತಿದ್ದರು.

ಬುದ್ಧಿಜೀವಿಗಳು ಹಲವು ಪ್ರಶ್ನೆಗಳ ಬಗೆಗೆ ಖಚಿತ ನಿಲುವನ್ನು ಹೊಂದುತ್ತಾರೆ. ಅದನ್ನು ಬಹಿರಂಗವಾಗಿಯೂ ವ್ಯಕ್ತ ಮಾಡುತ್ತಾರೆ. ಅದರ ಬದಲು 'ನಾವು ಜೀವನದಲ್ಲಿ ಮುಳುಗಿರುವುದರಿಂದ ಜೀವನಕ್ಕೆ ಬದ್ಧರಾಗಿರುತ್ತೇವೆ' ಎಂದೆಲ್ಲ ಹೇಳುವ ಹಲವರು ಯಾವುದಾದರೂ ಭದ್ರವಾದ ಕರ್ಮಠ ರಾಜಕೀಯ ಪಕ್ಷಕ್ಕೆ ಬದ್ಧರಾಗಿರುತ್ತಾರೆ. ಅವರು ಶಿವಸೇನೆ, ಕಾಂಗ್ರೆಸ್, ಭಾಜಪ, ಜನತಾ, ಕಮ್ಯುನಿಸ್ಟ್

ಮುಂತಾದ ಪಕ್ಷದವರಾಗಿರುತ್ತಾರೆ. ಮತ್ತೆ ಕೆಲವು ಧಾರ್ಮಿಕದಂತಹ ಸಂಸ್ಥೆಗಳಿಗೆ ಬದ್ಧರಾಗಿರುತ್ತಾರೆ.

ಬದ್ಧತೆಯಿರುವವರು ಬುದ್ಧಿಜೀವಿಗಳ ಬಗೆಗೆ ಮತ್ತೂ ಒಂದು ಆಕ್ಷೇಪ ಎತ್ತುತ್ತಾರೆ. ಬುದ್ಧಿಜೀವಿಗಳು ಹೇಡಿಗಳಾಗಿರುತ್ತಾರೆ ಎನ್ನುವುದು ಅವರ ಅಂಬೋಣ. ಅವರು ಜೀವನ ಸಂಗ್ರಾಮದಲ್ಲಿ ಇಳಿಯಲು ಹೆದರುತ್ತಾರೆ. ಹೀಗಾಗಿ ಈ ಜನರು ಹಿಂದೆ ಹಿಂದೆ ಇರುತ್ತಾರೆ. ಬದಲಿಗೆ ನಾವು ಬೌದ್ಧಿಕ ಮುಕ್ತ ವಾತಾವರಣದ ಸ್ವಾತಂತ್ರ್ಯದ ಉಪಭೋಗಿಸುವ ಜನರು, ಆದ್ದರಿಂದ ನಾವು ಬದ್ಧತೆಯನ್ನು ಸ್ವೀಕರಿಸುವುದಿಲ್ಲ ಎಂದೆಲ್ಲ ಸುಳ್ಳು ಗದ್ದಲ ಹಾಕುತ್ತಾರೆ. ಒಟ್ಟಿನಲ್ಲಿ ಸ್ವಂತದಲ್ಲಿಯ ಧೈರ್ಯದ ಕೊರತೆಯನ್ನು ತಾತ್ವಿಕ ನಿಲುವಿನ ಹೆಸರಿನಡಿಯಲ್ಲಿ ಈ ಬುದ್ಧಿ ಜೀವಿಗಳು ಮುಚ್ಚಿಡುತ್ತಾರೆ.

ಬದ್ಧತೆಯುಳ್ಳವರ ಈ ಆರೋಪದಲ್ಲೂ ಹುರುಳಿಲ್ಲ. ಬದ್ಧತೆಯವರು ಸಾಮಾನ್ಯವಾಗಿ ಭದ್ರ ಸಂಸ್ಥೆಯ ಬದ್ಧತೆಯನ್ನು ಇಟ್ಟುಕೊಂಡಿರುತ್ತಾರೆ. ಈಗ ಈ ಬಗೆಯ ಗುಂಪುಗಾರಿಕೆಯ ಬದ್ಧತೆಯ ನಿಜವಾದ ಕಾರಣವೇನಿರಬಹುದು? ಸಂಸ್ಥೆಯ ಬದ್ಧತೆ ಎಂದರೆ, ಸಾಮೂಹಿಕ ಬದ್ಧತೆ. ಇದು ಒಂದು ಬಗೆಯ ಪಲಾಯನವಾದವೇ ಆಗಿರುತ್ತದೆ. ಯಾರು ಸಂಸ್ಥೆಯ ಗಟ್ಟಿ ಘಟಕವೆಂದು ಬದುಕಲು ಹವಣಿಸುತ್ತಾರೋ ಅವರು ಸಂಸ್ಥೆಯ ಸುರಕ್ಷಿತತೆ, ಸಂರಕ್ಷಣೆಯನ್ನು ಹುಡುಕುತ್ತಾರೆ.

ಕೆಲವರು ಕಮ್ಯುನಿಸ್ಟ್ ಪಕ್ಷ ಸೇರಿರುತ್ತಾರೆ. ಮತ್ತೆ ಕೆಲವರು ಶಿವಸೇನೆಯಂತಹ ಆಕ್ರಾಮಕ ಪ್ರಾದೇಶಿಕ ಭದ್ರವಾದ ಪಕ್ಷವನ್ನು ಸೇರಿರುತ್ತಾರೆ. ಈ ಬಗೆಯ ಪಕ್ಷ ಸೇರಿರುವುದರಿಂದ ಅವರಿಗೆ ಏನು ಸಿಕ್ಕಿರುತ್ತದೆ? ಸಂಸ್ಥೆಯ ಘಟಕವೆಂದು ವ್ಯವಹರಿಸುವವರಿಗೆ ಸಿಗುವ ಲಾಭ ಹಲವು. ಮೊದಲನೆಯದು, ಸಂಸ್ಥೆಯು ತೆಗೆದುಕೊಂಡ ನಿರ್ಣಯವು ಸಾಮೂಹಿಕದ್ದಾಗಿರುತ್ತದೆ. ಅದರಲ್ಲಿ ಏನೇ ಗೊಂದಲವಾದರೂ ಸಂಸ್ಥೆ ಹೊಣೆಯಾಗಿರುತ್ತದೆ. ವ್ಯಕ್ತಿಯಲ್ಲ. ಯಾವುದೇ ಸಂಸ್ಥೆ ಅಥವಾ ಪಕ್ಷ ಸೇರಿದಾಗ ಯಾವ ಪ್ರಶ್ನೆಯ ಉತ್ತರವನ್ನು ಸ್ವತಃ ಹುಡುಕಬೇಕಾಗಿಲ್ಲ. ಪಕ್ಷ ಕಲಿಸಿದ ಗಿಳಿಪಾಠ ಒಪ್ಪಿಸಿದರಾಯಿತು.

ಹಠವಾದಿ ನಿಲುವಿನ ಬದ್ಧತೆಯು ಒಂದರ್ಥದಲ್ಲಿ ಪಲಾಯನವಾಗಿರುತ್ತದೆ. ಏಕೆಂದರೆ, ಹಲವರು ಹೇಗಿರುತ್ತಾರೆಂದರೆ, ಜೀವನದಲ್ಲಿ ಒಂಟಿಯಾಗಿ ವ್ಯವಹರಿಸಲು ಹೆದರುತ್ತಾರೆ. ಹೀಗಾಗಿ ಇಂಥವರು ಸಂಗಡಿಗರನ್ನು ಹುಡುಕುತ್ತಾರೆ. ಗುಂಪಿನ ಸಂದಣಿಯ ಸಹವಾಸದಲ್ಲಿ ಅವರ ಭೀತಿ ಕಡಿಮೆಯಾಗುತ್ತದೆ. ಉದಾಹರಣೆಗಾಗಿ ಸಂಸ್ಥೆಯ ಸಂರಕ್ಷಣೆ ಮತ್ತು ಒಂಟಿತನದ ಭಯವನ್ನು ಹೋಗಲಾಡಿಸಲೆಂದೇ ಎಂತೆಂಥವರೂ ಪಕ್ಷ ಜೀವನವನ್ನು ಸ್ವೀಕರಿಸುತ್ತಾರೆ. 'ನೀವು ಈ ಮಾರ್ಗವನ್ನು ಏಕೆ ಆಯ್ಕೆ ಮಾಡಿದಿರಿ?' ಎಂದು ನಾನು ಆರ್.ಎಸ್.ಎಸ್., ಕಮ್ಯೂನಿಸ್ಟ್ ಹಾಗೂ

ಸಮಾಜವಾದಿ ಕಾರ್ಯಕರ್ತರಿಗೆ ಕೇಳಿದೆ. ಏಕೆಂದರೆ ಅವರಲ್ಲಿ ಹಲವರು ನಾನು ಒಂಟಿಯಾಗಿರುತ್ತೇನೆ, ಸಂಸ್ಥೆಗೆ ಮುಡಿಪಾಗಿರುವುದಿಲ್ಲ ಎಂದು ಖೇದವನ್ನು ವ್ಯಕ್ತ ಮಾಡಿದ್ದರು. ನಾನಾಗ ಆಯಾ ವ್ಯಕ್ತಿಗಳಿಗೆ ಮೇಲಿನ ಪ್ರಶ್ನೆಗೆ ಉತ್ತರಿಸುವಂತೆ ಹೇಳಿದಾಗ, ಅವರು ನೀಡಿದ ಏಕಮಾತ್ರ ಉತ್ತರವೇನೆಂದರೆ ಅಲ್ಲಿ ಕೆಲಸ ಮಾಡುವುದರಿಂದ ಸಹಜೀವನ ಸಿಗುತ್ತದೆ. ಮುಂದೆ ಮುದಿತನದಲ್ಲಿ ತೊಂದರೆಯಾಗುವುದಿಲ್ಲ. ಸಂಕಟ ಬಂದಾಗ ಸಹಾಯ ಮಾಡುತ್ತಾರೆ. ಹೀಗೆ ಅಂದಿನಿಂದ ನಾನು ಯಾವುದೇ ಪಕ್ಷವನ್ನು ಸೇರಬಾರದು ಎಂಬ ಖಚಿತ ನಿರ್ಣಯವನ್ನು ಸ್ವೀಕರಿಸಿದೆ. ಪತಿಯ ಆಸರೆಯಲ್ಲಿ ಸುರಕ್ಷಿತ ಜೀವನವನ್ನು ಕಳೆಯುವ ಸಾಮಾನ್ಯ ಮಹಿಳೆಗಿಂತ ಇದೇನು ಬೇರೆಯಾಗಿಲ್ಲ ಎಂದು ನನಗನಿಸಿತು. ಎಲ್ಲೆಡೆ ಕುಂಕುಮ-ಅರಿಶಿಣ ಕುಂಕುಮ ಕಾಣಿಸುತ್ತದೆ, ಇರಲಿ.

ಬದ್ಧತೆಯ ಬೆನ್ನು ಹತ್ತಿದವರು ಒಂಟಿಯಾಗಿರಲಾರರು. ಅವರಿಗೆ ಜನಸಂದಣಿ ಪ್ರಿಯವಾಗಿರುತ್ತದೆ. ಅಷ್ಟೇ ಅಲ್ಲ, ಸಂದಣಿಯಿಂದ ಉತ್ಸಾಹ ಉಕ್ಕೇರುತ್ತದೆ. ಸ್ವಂತ ನಿರ್ಣಯವನ್ನು ಅವರೆಂದೂ ತೆಗೆದುಕೊಳ್ಳಲಾರರು. ಏಕೆಂದರೆ ಸ್ವತಂತ್ರವಾಗಿ ಯೋಚಿಸಲು ಅವರು ಭಯಪಡುತ್ತಾರೆ. ಉಳಿದ ಬೇರೆ ಯಾರೊ ನಿರ್ಣಯ ತೆಗೆದುಕೊಂಡರೆ ಅವರಿಗೆ ಖುಷಿಯಾಗುತ್ತದೆ. ಅಷ್ಟೇ ಅಲ್ಲ, ನಿರ್ಣಯವನ್ನು ಜಾರಿಗೊಳಿಸಲು ಅವರು ಒಂದೇ ಕಾಲಿನಲ್ಲಿ ಸಿದ್ಧರಾಗಿ ನಿಂತಿರುತ್ತಾರೆ. ಅವರಿಗೆ ಅನಿಶ್ಚಿತ ಸತ್ಯ ಬೇಕಿಲ್ಲ. ದಿಟ್ಟ ಸತ್ಯ, ಚಿರಂಜೀವ ಸತ್ಯ, ವೇದವಾಕ್ಯ ಬೇಕಾಗಿರುತ್ತದೆ. ಅವರಿಗೆ ಯೋಚನೆಯ ಸಹಾಯದಿಂದ ಸತ್ಯ ಸಿಗುವುದು ಸಾಧ್ಯವಿಲ್ಲ. ಅದಕ್ಕಾಗಿ ಭಕ್ತಿಭಾವ ಬೇಕಾಗಿರುತ್ತದೆ.

ಪ್ರಪಂಚದ ಪ್ರತಿಯೊಬ್ಬನೂ ಒಂದಲ್ಲ ಒಂದಕ್ಕೆ ಕಟ್ಟಿಕೊಂಡೇ ಬದುಕುತ್ತಿರುತ್ತಾನೆ ಎಂದು ಎಷ್ಟೋ ಸಲ ಹೇಳಲಾಗುತ್ತದೆ. ಏಕೆಂದರೆ ಪ್ರತಿಯೊಬ್ಬನಿಗೂ ಅವರವರ ದೇವರು ಇರುತ್ತಾನೆ. ದೇವರೇ ಬೇಡವೆನ್ನುವ ಮನುಷ್ಯನು ಭೂತಲದಲ್ಲಿ ಸಿಗಲಾರ. ಒಬ್ಬರು ರಾಮನನ್ನು, ಮತ್ತೊಬ್ಬ ಕೃಷ್ಣನನ್ನು, ಮಗುದೊಬ್ಬ ಅಲ್ಲಾನನ್ನೋ ಏಸುವನ್ನೋ ದೇವರೆಂದು ಒಪ್ಪಿಕೊಂಡಿರುತ್ತಾನೆ. ದೇವರು ಒಪ್ಪದವರು ದೇವರಿಲ್ಲ ಎಂಬ ತತ್ವಜ್ಞಾನವನ್ನು ದೇವರೆಂದು ಒಪ್ಪಿಕೊಂಡಿರುತ್ತಾನೆ. ಕೆಲವರು ತಮ್ಮ ವೈಚಾರಿಕ ಪಂಥವನ್ನೇ ದೇವರೆಂದು ಸ್ವೀಕರಿಸುತ್ತಾರೆ. ಮತ್ತೆ ಕೆಲವರು ದೇಶವನ್ನು ದೇವರೆಂದು ಭಾವಿಸುತ್ತಾರೆ. ಏಕೆಂದರೆ ಪ್ರತಿಯೊಬ್ಬನೂ ಅಂತಿಮ ಪ್ರಾಪ್ತಿಗಾಗಿ ಪ್ರಯತ್ನ ಮಾಡುತ್ತಿರುತ್ತಾರೆ. ಈ ಅಂತಿಮ ಪ್ರಾಪ್ತಿಯೆಂದರೆ ಒಬ್ಬೊಬ್ಬ ದೇವರು ಮತ್ತು ಆ ದೇವರ ಬದ್ಧತೆ. ಆದ್ದರಿಂದ 'ನಮಗೆ ಬದ್ಧತೆ ಗೊತ್ತಿಲ್ಲ'ವೆಂದು ಯಾರು ಹೇಳುತ್ತಾರೋ, ಅವರು ತಮ್ಮನ್ನೂ, ಇತರರನ್ನೂ ವಂಚಿಸುತ್ತಿರುತ್ತಾರೆ. ಜಗತ್ತಿನ ಪ್ರತಿಯೊಬ್ಬನಿಗೂ ಒಂದಲ್ಲ ಒಂದು

ದೇವರಿರುವುದರಿಂದ ಬದ್ಧತೆಯಿಲ್ಲದ ಒಬ್ಬವನೂ ಪ್ರಪಂಚದಲ್ಲಿಲ್ಲ ಎನ್ನುವ ಮಾತು ಒಂದೋ ರೂಪಕಾತ್ಮಕವಾಗಿರುತ್ತದೆ ಇಲ್ಲವೇ ಅದು ಭಾವನೆಯ ಭಾಷೆಯಾಗಿರುತ್ತದೆ. ಹೀಗಾಗಿ ಅದು ತೀರಾ ಸಂದಿಗ್ಧವೂ, ಅಸ್ಪಷ್ಟವೂ ಆಗಿದೆ. ಈ ಬಗೆಯ ನಾಟಕೀಯ ಯುಕ್ತವಾದವು ಭಾಷಣ ಬಿಗಿಯಲು ಅಡ್ಡಿಯಿಲ್ಲ. ಆದರೆ ಗಂಭೀರ ಚರ್ಚೆಗಾಗಿ ಇಂಥ ಯುಕ್ತಿವಾದವು ವಿನಾಕಾರಣ ಬೌದ್ಧಿಕ ಗೊಂದಲ ನಿರ್ಮಾಣ ಮಾಡುವಂತಿರುತ್ತದೆ.

'ಆಯುಷ್ಯದ ಬಗೆಗೆ ಗಂಭೀರವಾಗಿ ಯೋಚಿಸುವ ಪ್ರತಿಯೊಬ್ಬ ಮನುಷ್ಯನು ಒಂದಲ್ಲ ಒಂದಕ್ಕಾದರೂ ಬದ್ಧನಾಗಿರುತ್ತಾನೆ' ಎಂದು ಹೇಳುವಾಗ ಬದ್ಧತೆಯ ಉಧೋ ಉಧೋ ಮಾಡುವುದಕ್ಕಾಗಿ ಇವರು ಹೀಗೆ ಪ್ರಯತ್ನಿಸುತ್ತಿದ್ದಾರೋ ಅಥವಾ ಬದ್ಧತೆಯ ಹೊರಗೆ ಇರಲು ಬಯಸುವವರು ಜೀವನದ ಬಗ್ಗೆ ಗಂಭೀರವಾಗಿರುವುದಿಲ್ಲವೆಂದು ಹೀಗೆ ಮಾಡುತ್ತಾರೋ? ಒಟ್ಟಿನಲ್ಲಿ ಅವರು ನಿರ್ಲಕ್ಷ್ಯದಿಂದಿರುತ್ತಾರೆ. ಇಂಥವರು ಬದ್ಧತೆಯನ್ನು ಸ್ವೀಕರಿಸುವುದಿಲ್ಲವೆಂದು ನಾವು ವಾದಕ್ಕಾಗಿ ಒಪ್ಪೋಣ. ಆದರೆ ಎಷ್ಟೋ ವಿಚಾರವಂತರೂ ಸಹ ಬದ್ಧತೆಯನ್ನು ಸ್ವೀಕರಿಸುವುದಿಲ್ಲ. ಹುಮ್ಮಸದಿಂದ ಬೆನ್ನು ಹತ್ತುವ ಯಾವುದೂ ಜೀವನದಲ್ಲಿ ಸಿಗದ ಸಾವಿರಾರು ವಿದ್ಯಾರ್ಥಿಗಳು ನಮ್ಮ ದೇಶದಲ್ಲಿ ಕಾಣಸಿಗುತ್ತಾರೆ.

ಹೀಗಿರುವಾಗ ಅವರು ಬದ್ಧತೆಯನ್ನು ಸ್ವೀಕರಿಸುವುದಿಲ್ಲವೆಂದು ನೀವು ಅವರನ್ನು ಹೊಣೆಗೇಡಿ ಮತ್ತು ಕೀಳೆಂದು ಭಾವಿಸುವಿರಾ? ಅವರನ್ನು ಉಂಡಾಡಿ ಎನ್ನುತ್ತೀರಾ? ಅವರು ಉಂಡಾಡಿಗಳೂ ಅಲ್ಲ, ಹೊಣೆಗೇಡಿಗಳೂ ಅಲ್ಲ. ಅವರಿಗೆ ಹಲವು ಸಂಗತಿಗಳಲ್ಲಿ ಆಸಕ್ತಿಯಿರಬಹುದು. ಜೀವನವೇ ಒಂದು ಮಹಾಪ್ರಯೋಗ ಎನಿಸಲೂಬಹುದು. ಹೀಗಾಗಿ ಒಂದು ಪ್ರಯತ್ನ ವಿಫಲಗೊಂಡರೆ ಮತ್ತೊಂದನ್ನು ಕೈಗೆತ್ತಿಕೊಳ್ಳುವ ಪ್ರಯತ್ನದಲ್ಲಿರಬಹುದು. ಆದ್ದರಿಂದ ಮನುಷ್ಯನು ಗಂಭೀರವಾಗಿದ್ದೂ ಬದ್ಧತೆಯಿಲ್ಲದೆ ಬದುಕಬಹುದು ಎಂಬ ವಸ್ತುಸ್ಥಿತಿಯನ್ನು ನಾವು ಒಪ್ಪಬೇಕು.

ಅದೂ ಅಲ್ಲದೆ, 'ಪ್ರತಿಯೊಬ್ಬನಿಗೂ ಅವನದೇ ಆದ ಒಂದು ವಿಚಾರವಿರುತ್ತದೆ ಇಲ್ಲವೇ ದೇವರು ಇರುತ್ತಾನೆ. ದೇವರು ಒಪ್ಪದವನಿಗೂ ದೇವರಿರುತ್ತಾನೆ' ಈ ರೀತಿಯ ಆಲಂಕಾರಿಕ ಭಾಷೆಯ ಅರ್ಥವೇನು? ನನ್ನ ದೇವರು ಯಾರು? ನಿಮ್ಮ ದೇವರು ಯಾರು? ನಾನು ಗಂಭೀರವಾಗಿ ಜೀವನವನ್ನು ಗಮನಿಸುತ್ತೇನೆ. ನೀವು ಗಮನಿಸುತ್ತೀರಿ. ನಾನು ಸಿನಿಕಳಲ್ಲ. ನನಗೆ ಈ ಪ್ರಪಂಚದಲ್ಲಿ ಯಾವುದೂ ಪವಿತ್ರವೆನಿಸುವುದಿಲ್ಲ ಎಂದೂ ನಾನೆಲ್ಲೂ ಹೇಳುವುದಿಲ್ಲ. ಆದರೆ ನನಗೆ ಖಚಿತವಾಗಿ ಪವಿತ್ರವೆನಿಸಿದ್ದನ್ನು ಹೇಗೆ ಹುಡುಕಲಿ? ಅಂದರೆ ನನ್ನ ಬದ್ಧತೆಯನ್ನು ಹೇಗೆ ನಿರ್ಧರಿಸುವುದು?

ನಾನು ಹೇಳಹೊರಟಿದ್ದು ಇಷ್ಟೇ, ಹಲವರು ಬದ್ಧತೆ ಬದ್ಧತೆ ಎಂದೇನು

ಬೊಬ್ಬೆ ಹಾಕುತ್ತಾರೋ, ಅದರಲ್ಲೇನೂ ತಥ್ಯವಿಲ್ಲ. ಬದ್ಧತೆಯೂ ಒಂದು ಫ್ಯಾಶನೇಬಲ್ ಪದವಾಗಿದ್ದು, ಇದರ ಮೇಲಿಂದ ನಿಮ್ಮದಾಗಲಿ, ಇತರರದಾಗಲಿ ಆಯುಷ್ಯ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ.

ಬದ್ಧತೆ ಶಬ್ದದ ಬಗೆಗೆ ಯಾರೂ ನಿಖರವಾದ ಅರ್ಥವನ್ನು ನಿರ್ಧರಿಸದೇ ಇರುವುದರಿಂದ ಅದರ ಕಲ್ಪನೆಯ ಬಗೆಗೆ ಇಷ್ಟೆಲ್ಲ ಗೊಂದಲ ನಿರ್ಮಾಣವಾಗಿದೆ. ಕೆಲವರು ಧಾರ್ಮಿಕ ಶ್ರದ್ಧೆಯ ದೃಷ್ಟಿಯಿಂದ-ಫೇಥ್- ಈ ಶಬ್ದವನ್ನು ಬಳಸಿದರೆ, ಕೆಲವರು ನಂಬಿಕೆ, ವಿಶ್ವಾಸ ಎಂಬ ಅರ್ಥದಲ್ಲಿ ಇದನ್ನು ಬಳಸುತ್ತಾರೆ. ಮತ್ತೆ ಕೆಲವರು ನಿಷ್ಠೆ ಇಲ್ಲವೇ ಲಾಯಲ್ಟಿ ಅರ್ಥದಲ್ಲಿ ಬಳಸುತ್ತಾರೆ. ಆದರೆ ಈ ಎಲ್ಲ ಶಬ್ದಗಳು ತೀರ ಭಿನ್ನವಾಗಿವೆ. ಬದ್ಧತೆ ಎಂದರೆ ಶ್ರದ್ಧೆಯಲ್ಲ. ನನಗೆ ನಿಮ್ಮ ಮೇಲೆ ನಂಬಿಕೆಯಿರಬಹುದು, ಆದರೆ ನಾನು ನಿಮಗೆ ಬದ್ಧನಲ್ಲ. ಪ್ರಾಯಃ ನಾನು ನಿಮಗೆ ಬದ್ಧನಾಗಿರಬಹುದು. ನನಗೆ ನಿಮ್ಮ ಮೇಲೆ ನಂಬಿಕೆಯಿಲ್ಲ. ಇದೂ ಸಹ ಸಾಧ್ಯವಿದೆ. ಅದೇ ವಿಷಯ ನಿಷ್ಠೆಯದು. ನಿಷ್ಠೆಯಿದ್ದಲ್ಲಿ ಬದ್ಧತೆ ಇದ್ದೇ ಇರುತ್ತದೆ ಎಂದೇನಲ್ಲ, ಅದೇ ರೀತಿ ಬದ್ಧತೆಯಿದ್ದಲ್ಲಿ ನಿಷ್ಠೆಯಿರುತ್ತದೆ ಎಂದೂ ಅಲ್ಲ.

ಬದ್ಧತೆ ಎಂದರೆ ಧಾರ್ಮಿಕ ಅರ್ಥದ ಶ್ರದ್ಧೆಯೂ ಅಲ್ಲ. ಆದ್ದರಿಂದ ಶ್ರದ್ಧೆ, ನಿಷ್ಠೆ, ನಂಬಿಕೆ ಮತ್ತು ಬದ್ಧತೆ ಇದೆಲ್ಲ ಒಂದೇ ಅಲ್ಲ. ಬದ್ಧತೆ ಎಂಬ ಶಬ್ದವನ್ನು ನಾವು ತೀರ ಸಡಿಲಾದ ಅರ್ಥದಲ್ಲಿ ಬಳಸುತ್ತೇವೆ. ಈ ಕಾರಣದಿಂದಾಗಿ ಬದ್ಧತೆ ಎಂದರೆ ಶ್ರದ್ಧೆ, ನಿಷ್ಠೆ, ನಂಬಿಕೆ ಎಂದೆಲ್ಲ ಆಗುತ್ತದೆ ಎಂದು ಹೇಳಲಾರಂಭಿಸುತ್ತೇವೆ. ನಮ್ಮ ಶ್ರದ್ಧೆಯಲ್ಲಿ ಕೆಲವು ಶ್ರದ್ಧೆಯನ್ನು ಯೋಚಿಸಿ, ಎಚ್ಚರಿಕೆ ಮತ್ತು ಹೊಣೆಗಾರಿಕೆಯ ಅರಿವಿನಿಂದ ಆಯ್ಕೆ ಮಾಡಿಕೊಂಡಿರುತ್ತೇವೆ. ಆದರೆ ಹಲವು ಸಲ ಅದರಲ್ಲಿ ಯೋಚನೆ ಮತ್ತು ಹೊಣೆಗಾರಿಕೆಯ ಕೊರತೆ ಹೆಚ್ಚು ಎದ್ದುಕಾಣುತ್ತದೆ. ಹಲವು ಅಭಿಪ್ರಾಯಗಳು ಎಂದಿನ ರೂಢಿಯದ್ದಾಗಿರುವುದರಿಂದ ನಮಗದು ಸತ್ಯವೆನಿಸುತ್ತದೆ. ಅದೇ ಸಂಗತಿಯು ಹಲವು ಶ್ರದ್ಧೆಗಳದ್ದು. ಆದರೆ ಕೇವಲ ರೂಢಿಯಿಂದ ಬಳಸುವ ಶ್ರದ್ಧೆ ಮತ್ತು ಯೋಚನೆಯಿಂದ ಹೊಣೆಗಾರಿಕೆಯಿಂದ ತೆಗೆದುಕೊಂಡ ನಿರ್ಣಯ – ಈ ಎರಡರಲ್ಲಿ ವ್ಯತ್ಯಾಸ ಗುರುತಿಸುವುದನ್ನು ನಾವು ಕಲಿಯಬೇಕು.

ಬದ್ಧತೆಯ ಬಗ್ಗೆ ಬಡಬಡಿಸುವ ಜನರು ಈ ದೇಶದಲ್ಲಿ ಬಹಳ ಇದ್ದಾರೆ. ಅಷ್ಟೇ ಏಕೆ? ಯಾವುದೇ ಪತ್ರಿಕೆ ತೆರೆಯಿರಿ. ಒಂದಲ್ಲ ಒಂದು ಪುಟದಲ್ಲಿ ನಿಮಗೆ ಬದ್ಧತೆಯ ಉಪದೇಶ ಗೋಚರಿಸುತ್ತದೆ. ಕೆಲವರು ಸಾಮಾಜಿಕ ಬದ್ಧತೆಯ ಧ್ವನಿಮುದ್ರಿಕೆ ಶುರುಮಾಡುತ್ತಾರೆ. ಮತ್ತೆ ಕೆಲವರು ಬೇರೆ ಯಾವುದೋ ಬದ್ಧತೆಯದು. ಆದರೆ ಬದ್ಧತೆ ಎಂದರೆ ಏನು? ಬದ್ಧತೆಯನ್ನು ಸ್ವೀಕರಿಸಲು ಏನೇನು ಮಾಡಬೇಕು ಎಂಬ ಬಗೆಗೆ ಯಾರೂ ಸ್ಪಷ್ಟವಾಗಿ ಏನೂ ಹೇಳುವುದಿಲ್ಲ. ಎಲ್ಲ ಬದ್ಧತೆ ಹಿತಕಾರಕವಾಗಿರುವುದಿಲ್ಲ ಎಂಬುದನ್ನು ಮರೆಯಬಾರದು. ಹೀಗಾಗಿ ಸಿಕ್ಕ ಸಿಕ್ಕ

ಧ್ವಜವನ್ನು ಕೈಗೆತ್ತಿಕೊಂಡು ಧ್ವಜದ ಬದ್ಧತೆಯನ್ನು ಹೆಗಲಿಗೆ ಹೊರುವದು ಜಾಣತನವಲ್ಲ. ಪ್ರಾಯಃ ಇದು ಅತೀ ಭಯಂಕರ ಹೊಣೆಗೇಡಿತನವೆನಿಸುವ ಸಾಧ್ಯತೆಯು ಇರುತ್ತದೆ.

ಬದ್ಧತೆಗಾಗಿ ಬದ್ಧತೆಯನ್ನು ಹೊರುವಾಗ ಯೋಚಿಸುವ ಅಗತ್ಯವೇ ಇರುವುದಿಲ್ಲ ಎಂದು ಯಾರಾದರೂ ಹೇಳಲು ಬಯಸಿದರೆ ಅವರು ಮನುಷ್ಯನ ವಿಚಾರಶೀಲತೆ ಮತ್ತು ಬದ್ಧತೆಯ ನಡುವಣ ಸಂಬಂಧವನ್ನೇ ಹಾಳು ಮಾಡಲು ಹವಣಿಸುತ್ತಾರೆ. ಯೋಚಿಸದೇ ಯಾವುದೇ ಕಾರ್ಯವನ್ನು ಕೈಗೆತ್ತಿಕೊಂಡರೆ ಅದರ ಫಲ ಒಳಿತೇ ಆಗುತ್ತದೆಂದು ಹೇಳಲು ಬರುವುದಿಲ್ಲ. ವಿಚಾರಶೀಲತೆ ಇದು ಮಾನವನ ವೈಶಿಷ್ಟ್ಯವಾಗಿದ್ದರೂ, ಪ್ರತಿ ಸಲ ಅವನು ಯೋಚಿಸಿಯೇ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾನೆ ಎಂದೇನಲ್ಲ. ಅವನು ಭಾವನೆಯ ಓಘದಲ್ಲಿ ವರ್ತಿಸುವವನಾಗಿದ್ದರಿಂದ ಯೋಚಿಸದೆಯೂ ಕಾರ್ಯದ, ತತ್ವದ, ಪಂಥದ ಬದ್ಧತೆಯನ್ನು ಹೇರುವಂತೆ ಅವಸರದ ಉಪದೇಶ ಮಾಡುವದೆಂದರೆ ಅವಿಚಾರಕ್ಕೆ ಆಮಂತ್ರಣ ಕೊಟ್ಟಂತೆ.

ನಿಮ್ಮ ಜೀವನ ಸಾರ್ಥಕವಾಗಬೇಕೆಂದಿದ್ದರೆ ಇಂಥದೇ ಪಂಥವನ್ನು ಸೇರಿ, ಅಥವಾ ಇಂಥದೇ ಪಂಥದ ಧ್ವಜವನ್ನು ಹಿಡಿಯಿರಿ, ಶ್ರದ್ಧೆಯಿಲ್ಲದೆ ಮನುಷ್ಯ ಪಾರಾಗಲಾರ. ಶ್ರದ್ಧೆಯ ಹೊರತು ನಿಜವಾದ ಪಂಥ, ನಿಜವಾದ ಧ್ವಜ ಲಭಿಸುವುದಿಲ್ಲ ಎಂದು ಯಾರು ನಿಮಗೆ ಉಪದೇಶ ನೀಡುತ್ತಾರೋ ಅವರು ನಿಮ್ಮ ಬುದ್ಧಿಯನ್ನು ಭ್ರಷ್ಟ ಮಾಡಲು ಬಯಸುತ್ತಾರೆನ್ನುವುದನ್ನು ಸಹಜವಾಗಿ ಹುಡುಕಬಹುದು. ನೀವು ಒಂದು ವೇಳೆ ಬುದ್ಧಿಗೆ ವಿದಾಯ ಹೇಳದಿದ್ದರೆ, ನಿಮ್ಮ ಸುತ್ತಮುತ್ತ ನಡೆಯುತ್ತಿರುವ ನಡೆದ ಘಟನೆಯನ್ನು ನಿರ್ಮಲ ನೋಟದಿಂದ ನೋಡಿದ್ದಾದರೆ ಇಂಥ ಉಪದೇಶದಿಂದ ನಿಮ್ಮದು, ಪರರದ್ದು ಹಾನಿಯಾಗಿರುವುದನ್ನು ದುಃಖಕ್ಕೊಳಗಾಗಿರುವುದನ್ನು ಒಪ್ಪಿಕೊಳ್ಳುತ್ತೇವೆ. ನಮ್ಮ ಧ್ವಜವನ್ನು ಹೆಗಲ ಮೇಲೆ ಹೊರಿ, ಇಲ್ಲವೇ ಹೇಳಿದಂತೆ ನಡೆದುಕೊಳ್ಳಿ ಅಂದಾಗಲೂ ನೀವು ಈ ಭವಸಾಗರವನ್ನು ದಾಟಬಲ್ಲಿರಿ, ಎಲ್ಲ ಸಂಕಟದಿಂದ ಪಾರಾಗಿ ಸುಖಸಾಗರದಲ್ಲಿ ತೇಲಾಡಬಲ್ಲಿರಿ ಎಂದು ಯಾರಾದರೂ ಹೇಳಿ ತಮ್ಮ ಅಭಿಪ್ರಾಯಕ್ಕಾಗಿ ಏನಾದರೂ ಸಮರ್ಥನೆ ನೀಡಿದರೆ ಎಚ್ಚರಿಕೆಯಿಂದ ಇರಿ ಮತ್ತು ಎಚ್ಚರಿಕೆಯಿಂದ ಗಮನಿಸಿದರೆ ನಿಮಗೆ ಹಲವು ಮೋಜಿನ ಸಂಗತಿಗಳು ಗೋಚರಿಸುತ್ತವೆ. ಏಕೆಂದರೆ 'ನಮ್ಮ ಹಿತೋಪದೇಶ ಆಲಿಸಿದರೆ ನಿಮಗೆ ಒಳಿತಾಗುವದು' ಎಂದು ಹೇಳುವ ಜನರೂ ತಮ್ಮ ಸ್ವಂತ ಹಿತೋಪದೇಶದ ಸಮರ್ಥಕರಾಗಿರುತ್ತಾರೆ. ಸ್ವಂತಕ್ಕಿಂತ ಬೇರೆ ಸಮರ್ಥನೆಯ ಅವಶ್ಯಕತೆಯೇ ಇಲ್ಲ. ಅವರು ಉಪದೇಶ ನೀಡುತ್ತಿದ್ದಾರೆಂದರೆ ಅದು ಸತ್ಯವಾಗಿಲೇಬೇಕು. ತಾತ್ಪರ್ಯ, ಅವರು ಸ್ವತಃ ಸತ್ಯಸಂಧರಾಗಿದ್ದರೆ ಅವರ

ಕೈಯಿಂದ ತಪ್ಪಾಗುವದಿಲ್ಲ. ಅವರ ಬುದ್ಧಿ ದೈವಿಯಾದುದು. ಅವರಿಗೆ ಭವಿಷ್ಯ ಗೊತ್ತಾಗುತ್ತದೆ. ಆ ಭವಿಷ್ಯ ಅವರಿಗೆ ಗೊತ್ತಿರುವ ಹಾಗೇ ಇರುತ್ತದೆ. ಆದರೆ ಸತ್ಯಯುಗದ ಗುರುಮಂತ್ರ ತಮಗೆ ಮಾತ್ರ ಗೊತ್ತಿದೆ ಎಂದೆಲ್ಲ ಬೊಗಳೆ ಹೊಡೆಯುವ ಪವಿತ್ರ ಗ್ರಂಥ, ದೈವಿ ಅವತಾರ, ದೇವದೂತ, ದೇವರ ಪಂಥ ಮತ್ತು ಪಕ್ಷ, ಸನ್ಯಾಸಿ ಮತ್ತು ಬೈರಾಗಿ, ಯೋಗಿ-ಭೋಗಿ, ಢೋಂಗಿ, ಹುಚ್ಚರು ಈ ಜಗತ್ತಿನಲ್ಲಿ ಕಡಿಮೆಯೇ? ಅನುಭವದ ಅಂತ್ಯದಲ್ಲಿ ಕೊನೆಗೆ ಇದೆಲ್ಲ ಹುಸಿಯಾಗಿರುವುದನ್ನು, ಮೋಸ, ವಂಚನೆ, ಮೂರ್ಖತನದಿಂದ ಕೂಡಿರುವುದನ್ನು ಚರಿತ್ರೆ ನಮಗೆ ನಿಮಗೆಲ್ಲ ತೋರಿಸಿಕೊಡಲಿಲ್ಲವೇ? ಯಾರು ಸತ್ಯ, ಯಾರು ಸುಳ್ಳು, ಏನು ಸತ್ಯ, ಏನು ಸುಳ್ಳು, ಯಾವುದು ಸತ್ಯ, ಯಾವುದು ಅಸತ್ಯ ಇದರ ಬಗೆಗೆ ನಾವು ನಿಮಗೆ ಹೇಳಬಲ್ಲೆವು. ಆ ಹಾದಿಯಿಂದ ಹೋದರೆ ನಿಮಗೆ ಸ್ವರ್ಗ ನಿಶ್ಚಿತ ಎಂದೆಲ್ಲ ಹೇಳುವವರು ತಮ್ಮನ್ನು ತಾವೇ ಸತ್ಯವಂತರೆಂದು ಭಾವಿಸುತ್ತಾರೆ ಎನ್ನುವುದು ನಿಮ್ಮ ಗಮನಕ್ಕೆ ಬರುತ್ತಿಲ್ಲವೇ? ಸ್ವಂತ ಸತ್ಯವನ್ನು ಒಪ್ಪುವುದಕ್ಕಾಗಿ ಸ್ವಂತ ದೊಡ್ಡಸ್ತಿಕೆಯ ಬಗೆಗೆ ಅವರಿಗಾದ ಸ್ಥಿರ ಭ್ರಮೆಯ ಹೊರತು ಬೇರೆ ಯಾವ ವಸ್ತುನಿಷ್ಠ ಪುರಾವೆಯು ಅಲ್ಲಿ ಇರದೇ ಇರುವದು ನಿಮಗೆ ಕಂಡಿಲ್ಲವೇ. ಪ್ರಾಯಶಃ ಸ್ವಂತ ಸತ್ಯಸಂಧತೆಯನ್ನು ಸಿದ್ಧ ಮಾಡಲು ತಾನು ಸಾಕ್ಷಾತ್ ದೇವರೊಂದಿಗೂ ಸ್ಪರ್ಧೆ ಮಾಡುತ್ತಿದ್ದೇನೆ ಎನ್ನುವದು ಆ ಮಹಾಶಯನ ಗಮನಕ್ಕೆ ಬರುವದಿಲ್ಲ. ಸ್ವಂತ ದೊಡ್ಡಸ್ತಿಕೆಯ ಅವಾಸ್ತವ ಕಲ್ಪನೆಯಿಂದ ಭ್ರಮಿಷ್ಟರಾದ ಸ್ಥಿರಭ್ರಮೆಯ ವಿಕೃತರ ಸಂಖ್ಯೆಯು ಈ ಪ್ರಪಂಚದಲ್ಲೇನು ಕಡಿಮೆಯಿದೆಯೇ? ಹಾಗೆಯೇ ಸುಳ್ಳು ಘೋಷಣೆ ಹಾಕಿ, ಅಮಾಯಕರನ್ನು ಭ್ರಮೆಯಲ್ಲಿ ತೇಲುವಂತೆ ಮಾಡಿ, ಅವರ ಸಹಾಯದಿಂದ ತನ್ನ ಹಾಗೂ ಬಂಧು-ಬಾಂಧವರ ಬೊಕ್ಕಸವನ್ನು ತುಂಬಿಸಿಕೊಂಡು ಮೆರೆಯುವ ರಾಜಕಾರಣಿಗಳ ಸಂಖ್ಯೆ ಕಡಿಮೆಯಿದೆಯೆ? ಇಂಥ ಪರಿಸ್ಥಿತಿಯಲ್ಲಿ ಜೀವನದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವಾಗ ಮತ್ತು ಜವಾಬ್ದಾರಿಯನ್ನು ಹೊರುವಾಗ, ನಮ್ಮಲ್ಲಿದ್ದ ಅಳಿದುಳಿದ ಬುದ್ಧಿಯನ್ನು ಬಳಸದೆ, ಆಯುಷ್ಯದ ಮಹತ್ಕಾರ್ಯವನ್ನು ಆಯ್ಕೆ ಮಾಡುವಾಗ, ಎಲ್ಲ ಭಾರವನ್ನು ಶ್ರದ್ಧೆಯ ಮೇಲೆಯೇ ಹಾಕುವ ನಿರ್ಧಾರ ಮಾಡಿದ್ದಾದರೆ ಮುಂಬರುವ ಸತ್ಯಯುಗ ಮಾರ್ಗದರ್ಶಕರು ಕೇವಲ ನಾವು ಎಂದು ಹೇಳುವ ಡಜನ್‌ಗಟ್ಟಲೆ ಪಂಥ ಪಂಥಗಳಲ್ಲಿ ಮತ್ತು ಪಕ್ಷ ಪಕ್ಷಗಳಲ್ಲಿ ಯಾವ ತತ್ವದ ಆಯ್ಕೆ ಮಾಡಬೇಕು? 'ಬುದ್ಧಿಯ ಬೆನ್ನು ಹತ್ತದಿರಿ. ಶ್ರದ್ಧೆಯನ್ನಿರಿಸಿ ಮುಂದೆ ಬನ್ನಿ, ಆಗ ನಿಮ್ಮ ಜೀವನ ಧ್ಯೇಯದ ಸಕಲ ಪ್ರಶ್ನೆಗಳು ಕ್ಷಣಮಾತ್ರದಲ್ಲಿ ಪರಿಹಾರಗೊಳ್ಳುತ್ತವೆ' ಎಂದು ಉಪದೇಶ ಮಾಡುವ ಎಲ್ಲ ಜನರು 'ನಿಜವಾಗಿಯೂ ನೀವು ನಿಮ್ಮ ದೈವದ ಮೇಲೆ ನಂಬಿಕೆಯಿರಿಸಿ ಬದುಕಿರಿ' ಎಂದೇ ಅವರು ಹೇಳುತ್ತಿರುತ್ತಾರೆ. ಆದರೆ ನಿಮ್ಮ ಜೀವನದ ನಿಜವಾದ ಹಾದಿಯನ್ನು ಹುಡುಕಲು

ನಿಜವಾದ ಸಾರ್ಥಕತೆ ಯಾವುದರಲ್ಲಿದೆ ಎಂದು ಬೋಧಿಸುವಾಗ ದೈವ ಎಂದಿಗೂ ಉಪಯೋಗಕ್ಕೆ ಬರುವುದಿಲ್ಲ ಎನ್ನುವುದನ್ನು ಬುದ್ಧಿವಂತನಾದವನು ಎಂದಿಗೂ ಮರೆಯಬಾರದು. ಇದು ನಾಣ್ಯವನ್ನು ಚಿಮ್ಮಿ ನಿರ್ಣಯ ಕೈಕೊಳ್ಳುವ ವಿಷಯವಲ್ಲ. ಬದ್ಧತೆಯ ಬಗೆಗೆ ಬೊಬ್ಬೆ ಹೊಡೆಯುವ ರಾಜಕಾರಣಿಗಳು ಆಗಾಗ ಲೇಖಕ, ಪತ್ರಕರ್ತ, ಬುದ್ಧಿವಂತ ಮುಂತಾದ ಬುದ್ಧಿಜೀವಿಗಳ ಮೇಲೆ ಲೇಖಕರು ಸದಾ ಕಲ್ಪನಾ ಸಾಮ್ರಾಜ್ಯದಲ್ಲಿ ಓಲಾಡುತ್ತಿರುತ್ತಾರೆ, ಹೀಗಾಗಿ ಅವರ ಕಾಲು ನೆಲದ ಮೇಲಿರುವುದಿಲ್ಲ ಎಂದೆಲ್ಲ ಆರೋಪ ಮಾಡುತ್ತಿರುತ್ತಾರೆ. ಅದರ ಬದಲು ರಾಜಕಾರಣಿಗಳು ನೆಲದೊಂದಿಗೆ ಪ್ರಾಮಾಣಿಕರಾಗಿರುತ್ತಾರೆ, ಹೀಗಾಗಿ ಅವರಿಗೆ ವಾಸ್ತವದ ಸಂಪೂರ್ಣ ಅರಿವಿರುತ್ತದೆ. ಆದ್ದರಿಂದಲೇ ಅವರು ಜೀವನದ ನಿಜವಾದ ಸಮಸ್ಯೆಗಳೊಂದಿಗೆ ಕಾರ್ಯಕ್ರಮಗಳೊಂದಿಗೆ ಬದ್ಧರಾಗಿರುತ್ತಾರೆ ಎಂದೂ ಹೇಳುತ್ತಾರೆ. ಆದರೆ ರಾಜಕಾರಣಿಗಳು ಲೇಖಕ-ಸಾಹಿತಿಗಳ ಮೇಲೆ ಮಾಡಿದ ಆರೋಪ ತೀರ ಸುಳ್ಳು. ಪ್ರಶ್ನೆ ಇರುವದು ಮಹತ್ವದ ಪ್ರಶ್ನೆಗಳಿಗೆ ದಿಟ್ಟವಾದ ನಿಲುವನ್ನು ತಾಳುವದು ಮತ್ತು ಇಂಥ ನಿಲುವು ತಾಳಲು ಎದುರಿನ ಪ್ರಶ್ನೆಗಳ ಬಗೆಗಿನ ಆಕ್ಷೇಪವನ್ನು ಗಮನಿಸಬೇಕಾಗುತ್ತದೆ. ಆ ಪ್ರಶ್ನೆಗಳಿಗೆ ಇರುವ ಹಲವು ಪರ್ಯಾಯಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆ ಬಳಿಕವೇ ನಿರ್ಣಯ ಕೈಕೊಳ್ಳಬೇಕಾಗುತ್ತದೆ. ಇಂಥ ನಿರ್ಣಯ ತೆಗೆದುಕೊಂಡ ಬಳಿಕ ಅದರ ಪರವಾಗಿ ದಿಟ್ಟತನದಿಂದ ನಿಲ್ಲಬೇಕಾಗುತ್ತದೆ. ಇಲ್ಲಿ ಭಾವನೆಯ ವಿವಶಕ್ಕೆ ಕಿಂಚಿತ್ತೂ ಸ್ಥಾನವಿಲ್ಲ. ಭಾವನೆ ಎಂದರೆ ಜನಸಮುದಾಯದ ಭಾವನೆ ಇದಂತೂ ರಾಜಕಾರಣಪಟುಗಳಿಗೆ ಮೇಯಲು ಮತ್ತು ಪರಿಪುಷ್ಟಗೊಳ್ಳಲು ಒಳ್ಳೆಯ ಹುಲ್ಲುಗಾವಲು ಇದ್ದಂತೆ. ಈ ಕಾರಣಕ್ಕಾಗಿ ಅವರು ಜನರು ಬದ್ಧತೆಯನ್ನು ಸ್ವೀಕರಿಸಬೇಕೆಂದು ಕೂಗಿ ಕೂಗಿ ಹೇಳುತ್ತಾರೆ. ಹಾಗೆಯೇ ಬದ್ಧತೆ ಎನ್ನುವದು ಯಾವುದೇ ಪ್ರಶ್ನೆಯ ವಿಷಯದಲ್ಲಿ ಯೋಚಿಸಿ ತೆಗೆದುಕೊಂಡ ಗಟ್ಟಿ ನಿರ್ಣಯವನ್ನು ತಪ್ಪಿಸಲು ಬಳಸುವ ಅನುಕೂಲಕರವಾದ ಗುರಾಣಿಯೂ ಆಗಬಲ್ಲದು. ಅಲ್ಲಲ್ಲ, ಸಾವಿರ ಪಾಲಿನಷ್ಟು ಅದು ಹಾಗೆ ಇರುತ್ತದೆ. ಏಕೆಂದರೆ ಬದ್ಧತೆಯ ಹೆಸರಿನಲ್ಲಿ ಹಲವರು ತಮ್ಮನ್ನು ಮಜಬೂತಾದ ಸಂಸ್ಥೆಯೊಳಗೆ ಸಿಲುಕಿಸಿಕೊಳ್ಳುತ್ತಾರೆ. ಈ ರೀತಿಯಲ್ಲಿ ಖಚಿತ ನಿಲುವನ್ನು ತೆಗೆದುಕೊಳ್ಳುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. ಯಾವುದೇ ಸಂಸ್ಥೆಯಿರಲಿ ಹೊಣೆಗಾರಿಕೆಯು ಸಂಪೂರ್ಣ ಸಂಸ್ಥೆಯದ್ದಾಗಿರುತ್ತದೆ. ಅದರ ವೈಯಕ್ತಿಕ ಘಟಕದ್ದಲ್ಲ.

ಮನುಷ್ಯನು ಬದ್ಧತೆಯನ್ನು ಕಿಂಚಿತ್ತೂ ಸ್ವೀಕರಿಸಬಾರದು ಎಂದೇನೂ ನಾನು ಹೇಳಹೊರಟಿಲ್ಲ. ಆದರೆ ಬದ್ಧತೆಯ ತಪ್ಪಾದ ತ್ಯಾಜ್ಯ ಮತ್ತು ಅಂತಿಮ ಪರಿಣಾಮದ ದೃಷ್ಟಿಯಿಂದ ಮಾನವ ಜಾತಿಗೆ ಹಾನಿಕಾರಕವಾಗುವ

ಪರ್ಯಾಯವನ್ನು ಕೈಬಿಡಬೇಕು. ಬದಲಿಗೆ ಬದ್ಧತೆಯಲ್ಲಿರುವ ಉತ್ತಮ ಮತ್ತು ಉದಾತ್ತವಾದುದು ಸ್ವೀಕಾರಗೊಳ್ಳಲಿ ಎನ್ನುವುದೇ ನನ್ನ ಪ್ರಯತ್ನ. ಬದ್ಧತೆಯಲ್ಲಿ ಖಚಿತ ನಿಲುವು ತಾಳಬೇಕೆಂಬ ಅರ್ಥವೂ ಇದೆ. ಟು ಕಮಿಟ್ ವನ್‌ಸೆಲ್ಫ್ ಅಂದರೆ ಯೋಚನೆಯ ಕೊನೆಗೆ ದೃಢ ನಿರ್ಧಾರವನ್ನು ತಾಳುವುದು ಮತ್ತು ಆ ನಿಲುವಿಗೆ ಪ್ರಾಮಾಣಿಕರಾಗಿ ಇರಲು ಪ್ರಯತ್ನಿಸುವುದು. ಪ್ರಾಮಾಣಿಕ ಸಹಿತ ಬದ್ಧತೆಯು ನನಗೆ ಸ್ವೀಕಾರಾರ್ಹವಾಗಿದೆ. ಮನುಷ್ಯನು ಪ್ರಾಮಾಣಿಕತನದ ಬಳುವಳಿಯನ್ನು ಸ್ವೀಕರಿಸಬೇಕು ಮತ್ತು ಪ್ರಾಮಾಣಿಕತೆಯ ಬೆಳಕಲ್ಲಿ ನಂತರದ ಧ್ಯೇಯವನ್ನು ಆಯ್ಕೆಮಾಡಬೇಕು.

ಬದ್ಧತೆ ಬದ್ಧತೆಯಲ್ಲೂ ವ್ಯತ್ಯಾಸವಿದೆ. ಎಲ್ಲ ಬದ್ಧತೆಯೂ ಒಂದೇ ಅಳತೆಯಲ್ಲಿರಲಾರದು. ಹಾಗೆಯೇ ಅದರ ಪರಿಣಾಮವೂ ಒಂದೇ ಬಗೆಯಾಗಿರುತ್ತದೆ ಎನ್ನುವದೂ ಸತ್ಯವಲ್ಲ.

ನಾನು ಪ್ರಾಮಾಣಿಕತನ ಸಹಿತವಾದ ಬದ್ಧತೆಯ ಬಗೆಗೆ ಹೇಳಿದೆ. ನನಗಂತೂ ಈ ಬದ್ಧತೆ ಪ್ರಿಯ. ಮನುಷ್ಯನು ಸದಾಕಾಲ ತನ್ನ ಮನಸ್ಸು, ತನ್ನ ವಿಚಾರಗಳಿಗೆ ಪ್ರಾಮಾಣಿಕವಾಗಿರಬೇಕು. ನಾನು ಸ್ವಂತ ಪ್ರಾಮಾಣಿಕ ಬದ್ಧತೆಯ ಬಗೆಗೆ ಯೋಚಿಸಿದಾಗಲೆಲ್ಲ ನನ್ನ ಕಣ್ಣೆದುರಿಗೆ ಗೌತಮ ಬುದ್ಧನ ಚಿತ್ರ ಬರುತ್ತದೆ. ಆದರೆ ಈ ಗೌತಮ ಬುದ್ಧನು ಬೌದ್ಧಧರ್ಮದ ಮಠ ಸ್ಥಾಪನೆಗೊಳ್ಳುವ ಹಿಂದಿನ ಗೌತಮ ಬುದ್ಧನಾಗಿದ್ದಾನೆ. ಸತ್ಯದ ಶೋಧಕ್ಕಾಗಿ ಭಣಭಣ ಅಲೆದಾಡುವ ಸಿದ್ಧಾರ್ಥ ಗೌತಮ ಬುದ್ಧ, ಸತ್ಯದ ಪ್ರಯೋಗ ಮಾಡುವ ಗೌತಮ ಬುದ್ಧ!

(ಪುಸ್ತಕ ಪಂಢರಿ, ದೀಪಾವಳಿ ಸಂಚಿಕೆ, ೧೯೮೩)

* * * *

೧೬. ಮಹಾರಾಷ್ಟ್ರ ತಮಾಶಾ ಸಮ್ಮೇಳನ : ಅಧ್ಯಕ್ಷೀಯ ಭಾಷಣ

ಬಂಧು ಭಗಿನಿಯರೆ, ನನ್ನನ್ನಿಂದು ಮರಾಠಿ ತಮಾಶಾ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ತಮಗೆಲ್ಲ ಕೃತಜ್ಞತೆ. ಖರೆಯೆಂದರೆ ನಾಗರಿಕ ಸಮಾಜದ ಸ್ತ್ರೀಯರ ಮತ್ತು ತಮಾಶಾದ ಸಂಬಂಧ ಈಗೀಗ ಬದಲಾಗುತ್ತಿದೆ. ಹಿಂದೆ ಮಹಿಳೆ ವೇದವನ್ನು ಅರಿಯುವುದು ಎಷ್ಟು ಪಾಪವೆಂದು ಭಾವಿಸಲಾಗಿತ್ತೋ, ಅದೇ ಸಂಸ್ಕೃತಿಯಲ್ಲಿ ನಾನು ಬೆಳೆದೆ. ಆದರೆ ಮನೆಯಲ್ಲಿ ಸುಧಾರಣೆಯ ವಾತಾವರಣವಿದ್ದುದರಿಂದ ಎರಡು ಮೂರು ನಿಜವಾದ ತಮಾಶಾವನ್ನು ನಾನು ನೋಡುವುದು ಸಾಧ್ಯವಾಯಿತು. ಸಿಗದೆ ಇದ್ದದ್ದೇ ಬೇಕೆನಿಸುವ ಸ್ವಭಾವ ಮನುಷ್ಯನದು. ತಮಾಶಾ ಪಾರಂಪಾರಿಕ ಮನರಂಜನೆಯ ಒಂದು ಪ್ರಕಾರವಾಗಿದೆ. ಅದು ಹೇಗಿರುತ್ತದೆ ಎನ್ನುವುದು ನಮಗೆ ಹುಡುಗಿಯರಿಗೆ ಗೊತ್ತಿರಲಿ ಎಂಬ ಕಾರಣಕ್ಕೆ ಅಪ್ಪ ನಮ್ಮ ಮನೆಯಲ್ಲಿ ಒಂದು ತಮಾಶಾವನ್ನು ಆಯೋಜಿಸಿದ್ದ. ಮುಂದೆ ನನ್ನ ವ್ಯವಸಾಯವೇ ಹಿಂದುಳಿದ ಜಾತಿಯವರ ಸಾಹಿತ್ಯ, ಕಲಾಕುಸುರಿಯನ್ನು ಸಂಗ್ರಹಿಸುವುದರಿಂದ ಶುರುವಾಯಿತು. ಮಹಾರಾಷ್ಟ್ರದ ಹೊರಗೂ ಹಾಡು ಕುಣಿತದ ವ್ಯವಸಾಯವನ್ನು ಮಾಡುವ ಅಲೆಮಾರಿ ಜನರನ್ನು ನಾನು ಕಂಡೆ. ಅವರ ಹಾಡುಗಳನ್ನು ಸಂಗ್ರಹಿಸಿದೆ. ಕುಣಿತದ ಕೆಲವು ಪ್ರಕಾರಗಳನ್ನು ಕಂಡು ನಾನು ಬೆರಗಾದೆ. ಡೋಲಿನ ಸದ್ದಿಗೆ ಕುಣಿವ ಹೆಂಗಸು, ಪಂಜಿನ ನೃತ್ಯ ಮಾಡುವ ಹೆಂಗಸು, ಎರಡೂ ಕೈಗಳಲ್ಲಿ ಹರಿವಾಣ ಹಿಡಿದು ಗರಗರ ಸುತ್ತುವ ದೇವಾರ ಜಾತಿಯ ಹೆಂಗಸನ್ನು ನಾನು ಕಂಡೆ. ಬುಗುರಿಯಂತೆ ಗಿರ್ರನೆ ತಿರುಗುವ ಅವಳ ಮೂರ್ತಿ ಇಂದಿಗೂ ನನ್ನ ಕಣ್ಣೆದುರಿಗಿದೆ. ಆ ಚುರುಕುತನ, ಆ ಸೌಂದರ್ಯ ನಾನೆಂದೂ ಮರೆಯಲಾರೆ. ಆ ದೃಶ್ಯವನ್ನು ಕಂಡಾಗ ಮರಾಠಿ ಡೊಂಬರ ನೆನಪಾಯಿತು. ಕಂಚಿನ ಕಂಠದಿಂದ ಹಾಡುವ ಡೊಂಬಸ್ತ್ರೀ, ಡೋಲಕಿ ಬಾರಿಸುವ ಅವಳ ಸಂಗಡಿಗ, ಅವಳ ಸಣಕಲು ದೇಹದ ನಾನಾ ಬಗೆಯ ಕುಶಲ ನೃತ್ಯ ಮಾಡುವ ಅವಳ ಮಕ್ಕಳು, ಎಲ್ಲ ಕಣ್ಮುಂದೆ ಬಂತು. ಅಂದಿನಿಂದ ಪರಂಪರೆಯಂತೆ ಜರುಗುವ ಹಾಡು ಕುಣಿತ ಕಂಡು ಅದು ಗೊಂದಲಿಗರದ್ದಿರಲಿ, ದೇವರ ಕಾರ್ಯದ್ದಿರಲಿ, ಇಲ್ಲವೇ ತಮಾಶಾದ್ದೇ ಇರಲಿ ನನ್ನ ಮನ ಸೆಳೆಯತೊಡಗಿತು.

ಈ ಸೆಳೆತದಿಂದಾಗಿ ಶಾಹೀರರ ಲಾವಣಿಗಳನ್ನು ಓದಿದೆ. ಪ್ರಮುಖ ತಮಾಶಾದವರ ಚರಿತ್ರೆಯನ್ನು ಓದಿದೆ. ತಮಾಶಾದಲ್ಲಿ ಕೆಲಸ ಮಾಡುವ ಮಹಿಳೆಯರ ಕರುಣ ಕಥೆಯನ್ನು ಕೇಳಿದೆ. ಮನಸ್ಸು ತುಂಬ ಮರುಗಿತು. ಶೃಂಗಾರದಿಂದ ಕೂಡಿದ ಲಾವಣಿ ಸಾಹಿತ್ಯವು ಅಲ್ಲಲ್ಲಿ ವಿಕಟ ಅಶ್ಲೀಲತೆಯಿಂದ ದೂಷಿತಗೊಂಡಿದೆ. ತಮ್ಮ ಜೀವವನ್ನು ಪಣಕ್ಕೊಡ್ಡಿ ಲಾವಣಿಯನ್ನು ರಚಿಸಿದ ಕವಿಗಳಿಗೆ ಬೆಲೆ ಸಿಗಲಿಲ್ಲ. ಪಟ್ಠೆ ಬಾಪೂರಾವನ ದುಃಖಭರಿತವಾದ ಜೀವನದ ಕಥೆ ನನ್ನನ್ನು ಸದಾ ಘಾಸಿಗೊಳಿಸುತ್ತ ಇರುತ್ತದೆ. ತಮಾಶಾಕಾರರ ಕಲಾಸಕ್ತಿ ಶ್ರೇಷ್ಠವಾಗಿರುವುದರಲ್ಲಿ ನನಗೆ ಕಿಂಚಿತ್ತೂ ಸಂಶಯವಿಲ್ಲ. ತಮ್ಮ ಜೀವನವನ್ನೇ ಧಾರೆ ಎರೆದು ಶ್ರೇಷ್ಠ ಶಾಹೀರರು ಕವಿತೆ ಬರೆದರು. ಕೇಳುಗ ಮನವನ್ನು ಸೂರೆಗೊಳ್ಳುವಂತೆ ಮಾಂತ್ರಿಕತೆ ನಿರ್ಮಾಣ ಮಾಡುವುದು ಸಾಮಾನ್ಯ ಕಾರ್ಯವಲ್ಲ; ತಮಾಶಾ ಪಾತ್ರಧಾರಿಗಳು ತನ್ಮಯತೆಯಿಂದ ಅಭಿನಯಿಸುತ್ತಾರೆ. ಕುಣಿತದವರು ಮೈ ಮರೆತು ಕುಣಿಯುತ್ತಾರೆ. ಹಾಡು ಅವರ ರೋಮ ರೋಮದಿಂದ ಸ್ಫುರಿಸುತ್ತಿರುತ್ತದೆ. ಅವಳ ತೀವ್ರ ಭಾವ, ಜೀವಂತ ಕುಣಿತ, ಹಾಡು ಪ್ರತಿ ಪ್ರಯೋಗದಲ್ಲಿ ಹೊಸದು ಮತ್ತು ತಾಜಾ ಇದೇ ನಿಜವಾದ ಕಲೆ. ಆದರೆ ಈ ಕಲೆಗೆ ಯಾರದೋ ಶಾಪ ಅಂಟಿಕೊಂಡಿದೆ. ತಾಪದಿಂದ ಬಳಲುತ್ತಿದೆ. ಮುಳ್ಳಿನ ಪೊದೆಯಲ್ಲಿ ಅಸಂಖ್ಯಾತ ಕಾಡುಬಳ್ಳಿಗಳು ಅರಳುವುದನ್ನು, ಸೌಂದರ್ಯದಿಂದ ಮೆರೆಯುವುದನ್ನು ಕಾಣುತ್ತೇವೆ. ಹಾಗೆ ನನಗೆ ತಮಾಶಾದವರ ಜೀವನವನ್ನು ಕಂಡಾಗ ಅನಿಸುತ್ತದೆ. ಕೆಲವು ಹೂವುಗಳು ವಿಷಕಾರಿಯಾಗಿರುತ್ತದೆ. ಈ ಕಲಾವಿದರ ಜೀವನವನ್ನು ಕಲೆಯನ್ನು ಅಂಥದೇ ಏನೋ ಮುತ್ತಿಕೊಂಡಿದೆ. ಈ ನಾಶವಂತ ಬೀಜವನ್ನು ನಾವೆಲ್ಲರೂ ಸೇರಿ ಕಿತ್ತೊಗೆಯುವ ಅಗತ್ಯವಿದೆ.

ನನಗೆ ತಮಾಶಾದಲ್ಲಿಯ ಜೀವಂತಿಕೆ ಹಾಗೂ ಅಲ್ಲಿರುವ ಉತ್ಸಾಹ ತುಂಬ ಇಷ್ಟವಾಗುತ್ತದೆ. ನೃತ್ಯ, ವಾದ್ಯ ಮತ್ತು ಹಾಡು ಈ ಮೂರರ ಸಂಗಮಕ್ಕೆ ಸಂಗೀತವೆನ್ನುತ್ತಾರೆ. ಅಂಥ ಗ್ರಾಮೀಣ ಪದ್ಧತಿಯ ಸಂಗೀತ ತಮಾಶಾದಲ್ಲಿರುತ್ತದೆ. ಅದರ ಹಿಂದೆ ಹಳೆಯ ಪರಂಪರೆಯಿದೆ. ಹಾಗೆಯೇ ಅಲ್ಲಿ ನಾಟ್ಯವೂ ಇರುತ್ತದೆ. ಆ ದೃಷ್ಟಿಯಿಂದ ನೋಡಿದರೆ ಸಂಗೀತ ನಾಟಕದಲ್ಲಿರದೇ ಇದ್ದ ನೃತ್ಯವೂ ತಮಾಶಾ ನಾಟ್ಯದ ಒಂದು ಅಂಗವಾಗಿದೆ. ಈ ನಾಟ್ಯವು ಕೇವಲ ರಂಜನೆಗೆ ಮಾತ್ರ ಶರಣುಹೋಗುತ್ತದೆ. ಲೇಖನಿಯ, ಛಾಪಖಾನೆಯ ಮತ್ತು ಅದರಿಂದ ಲಭಿಸುವ ಕೀರ್ತಿಯು ದಾಸ್ಯವೂ ಈ ಗ್ರಾಮೀಣ ಕಲೆಗೆ ಬೇಕಿಲ್ಲ. ತನ್ನ ಪ್ರೇಕ್ಷಕರನ್ನು ರಂಜಿಸುವುದೇ ತಮಾಶಾದ ಮುಖ್ಯ ಉದ್ದೇಶ. ಬೋಧಪರತೆ ಅದರ ಎರಡನೇ ಅಂಗ. ಅದು ಎರಡನೆಯದಾಗಿರುವುದೇ ಒಳಿತು. ಏಕೆಂದರೆ ಬೋಧದ ಹೊರೆ ಹೆಚ್ಚಾಯಿತೆಂದರೆ ಪ್ರಚಾರದ ಡಾಂಭಿಕತೆ ಬೆಳೆಯುತ್ತದೆ. ಹಾಸ್ಯಕ್ಕೆ ಉಸಿರುಗಟ್ಟುತ್ತದೆ. ಜೀವಂತಿಕೆ ಹ್ರಾಸಗೊಳ್ಳುತ್ತದೆ, ಉತ್ಕಂಠತೆ ಕ್ಷೀಣಗೊಂಡು ತಮಾಶಾ ಲೆಕ್ಕಣಿಕೆಯ

ಅಂಕಿತವಾಗುತ್ತದೆ. ಹಾಗೆ ಅಂಕಿತವಾಗುವುದು ಘಾತುಕ. ತಮಾಶಾದಲ್ಲಿಯ ಉತ್ಕಂಠತೆ ಅಳಿಯತೆಂದರೆ ತಮಾಶಾದ ಪ್ರಾಣವೇ ಹೋದಂತೆ. ಶೀಘ್ರ ಕವಿತ್ವವು ಪ್ರತಿಯೊಬ್ಬ ತಮಾಶಾಕಾರರ ದೊಡ್ಡ ಜಹಗೀರು ಇದ್ದಂತೆ. ಮೊದಲೇ ತಮಾಶಾಕಾರರ ವಾಣಿಯು ಕಂಚಿನಂತಹದು. ಚುರುಕಾದ ಸಂವಾದ ಅವರ ವೈಶಿಷ್ಟ್ಯ. ತಕ್ಷಣ ಉತ್ತರಿಸುವ ಚಾಣಾಕ್ಷತನದಿಂದಾಗಿ ತಮಾಶಾದ ಕಲಾವಿದನ ಬುದ್ಧಿಯು ಸದಾ ಹರಿತವಾಗಿರಿಸಬಲ್ಲ ಹೊಸ ಒಡಪು, ಹೊಸ ಹಾಸ್ಯ, ಹೊಸ ಕಾವ್ಯ, ಕಲ್ಪನೆಗೆ ಸಭಿಕನು ಮೈಮರೆತಂತೆ ಅದಕ್ಕೆ ಹೆಚ್ಚು ತೀವ್ರತೆ ಬರುತ್ತದೆ. ನಟ ಮತ್ತು ಪ್ರೇಕ್ಷಕರ ಗಾಢ ಸಂಬಂಧದಿಂದ ಕಲೆ ತಾರಕವಾಗುತ್ತದೆಯೇ ವಿನಾ ಮಾರಕವಲ್ಲ. ಹಾಗೆಯೇ ಶೀಘ್ರ ಕವಿತ್ವದ ಕೊಡುಗೆಯು ಸುಶಿಕ್ಷಿತರಲ್ಲೂ ಅಪರೂಪವಾಗಿದೆ. ಪದ್ಯ ರಚನೆಯು ಅಗ್ಗದ್ದಾಗಿದ್ದರೂ ಹಾಹಾ ಅನ್ನುವುದರೊಳಗೆ ಹಾಡು ಬರೆಯುವುದು ಮತ್ತು ರಚಿಸಿದ ಕೂಡಲೇ ಅದನ್ನು ನಾಟ್ಯ ರೂಪಕ್ಕಿಳಿಸುವುದು ಸಾಮಾನ್ಯ ಸಂಗತಿ ಏನಲ್ಲ. ವಾಣಿಯ ಚಾಪಲ್ಯವು ಅಭಿನಯದೊಂದಿಗೆ ಐಕ್ಯವಾಗುವುದು ಅಪರೂಪವೇ ಎನ್ನಬೇಕು. ತಮಾಶಾದ ಸಾಹಿತ್ಯವನ್ನೆಲ್ಲ ನಾಟಕದಂತೆ ಬರೆದು ಮೊದಲೇ ಸರಕಾರಕ್ಕೆ ನೀಡುವದೆಂದರೆ ತಮಾಶಾದ ಮೂಲದ ಉತ್ಕಂಠತೆಯ ಹ್ರಾಸವಾಗಬಹುದು. ತಮಾಶಾ ಆಧುನಿಕ ನಾಯಕನ ಹರಕು-ಮುರುಕು, ಅರೆ-ಬರೆ ನಕಲಾಗಬಹುದು. ತಮಾಶಾದಲ್ಲಿ ನಾಟ್ಯವಿದ್ದರೂ ಅದು ಪರಂಪರೆಗೆ ಅಧೀನವಾಗಿರುವ ನಾಟ್ಯವಾಗಿದೆ. ಅದರ ಪಥ್ಯ ಅದಕ್ಕಿದ್ದೇ ಇದೆ. ಅದರ ಮಿತಿಯೂ ಅದಕ್ಕಿದೆ. ತಮಾಶಾಕ್ಕೆ ನಾಟಕದ ಶಿಖರ ಸ್ಥಿತಿಯನ್ನು ತಲುಪುವುದು ಸಾಧ್ಯವಿಲ್ಲ. ಏಕೆಂದರೆ ಅದು ಎಷ್ಟೆಂದರೂ ಜಾನಪದ ಕಲೆ. ಆದರೆ ಅದನ್ನು ನಾಟಕದ ತಂತ್ರದೊಂದಿಗೆ ಬಂಧಿಸುವುದೂ ಸರಿಯಾಗಲಿಕ್ಕಿಲ್ಲ. ಏಕೆಂದರೆ ಅದರ ಮೂಲ ಸ್ವಭಾವವೇ ಮುಕ್ತತನದ್ದು. ಆದರೆ ಈ ಮುಕ್ತತೆಗೆ ಹಲವು ಸಲ ಸ್ವೈರತನದ ರೂಪ ಪ್ರಾಪ್ತವಾಗುತ್ತದೆ. ಹಾಗಾಗದಂತೆ ತಮಾಶಾದವರು ತೀರ ಎಚ್ಚರಿಕೆ ವಹಿಸಬೇಕು. ಸ್ವಂತ ಕಲೆಯನ್ನು ಈಗ ಸಂವರ್ಧನೆ ಮಾಡಬೇಕೆಂದಿದ್ದರೆ ಅದಕ್ಕೆ ಹೊರಗಿನ ಘಾಸಿಗೊಳಿಸುವ ಬಂಧನ ಬೇಡ. ಹಾಗೆಯೇ ಒಳಗೆ ಪೊಳ್ಳು ಮಾಡುವ ಇಲಿ-ಹೆಗ್ಗಣಗಳೂ ಬೇಡ. ಈ ಎಲ್ಲ ಬಿಲಗಳನ್ನು ನಾವು ಆತ್ಮಸಂಶೋಧನೆ ಮಾಡಿ ಮುಚ್ಚಬೇಕು.

ತಮಾಶಾದಲ್ಲಿ ಜೀವಂತ ವಾತಾವರಣವನ್ನು ಹುಡುಗಾಟಿಕೆಯನ್ನು ಯಾರಾದರೂ ಅಬಾಧಿತವಾಗಿ ಉಳಿಸಿದ್ದರೆ ಅದು ಸೋಂಗಾಡೆ (ಸೋಗು ಹಾಕುವವನು). ಅವನು ಮರಾಠರ ಹಾಸ್ಯವನ್ನು ಅಳಿಯದಂತೆ ನೋಡಿಕೊಂಡ. ಸಂಸ್ಕೃತ ನಾಟಕದಲ್ಲಿ ವಿದೂಷಕನ ಪಾತ್ರವಿರುತ್ತದೆ. ಸೋಂಗಾಡೆ ವಿದೂಷಕನ ಪ್ರಾಕೃತ ಅವತಾರ ಎನ್ನಲು ಅಡ್ಡಿಯಿಲ್ಲ. ಆದರೆ ಸೋಂಗಾಡೆ ವಿದೂಷಕನಿಗಿಂತ

ಎಷ್ಟೋ ಕಲ್ಪಕ ಮತ್ತು ಎಲ್ಲ ಕೆಲಸ ಮಾಡುವವನಾಗಿರುತ್ತಾನೆ. ವಿದೂಷಕ ನಮ್ಮ ರಾಜ ಮಹಾರಾಜರ ಅಡಿಯಾಳು. ಅವನ ಹಾಸ್ಯವೂ ಹಿತಮಿತ. ಒಟ್ಟಿನಲ್ಲಿ ಸಂಸ್ಕೃತ ನಾಟಕದಲ್ಲಿಯ ಹಾಸ್ಯ ಸಪ್ಪೆ, ಸೋಂಗಾಡೆಯ ಹಾಸ್ಯ ಪ್ರಖರ, ಸ್ವಚ್ಛಂದ. ಏಕೆಂದರೆ ಯಾವುದೋ ಕವಿ ಈಗ ಜನರನ್ನು ಹೇಗೆ ನಗಿಸಲಿ? ಎಂದು ತಲೆಗೆ ಕೈ ಹಚ್ಚಿ ಬರೆದ ಹಾಸ್ಯವಲ್ಲ. ಈ ಸೋಂಗಾಡ್ಯಾ ಪರಂಪರೆಯಲ್ಲಿ ರೂಢಿಯಲ್ಲಿದ್ದ ವ್ಯಂಗ್ಯ ಚಿತ್ರವನ್ನು ಸಮಾಜದಿಂದ, ಜನರ ವರ್ತನೆಯಿಂದಲೇ ಆಯ್ದು ಕೊಂಡಿರುತ್ತಾನೆ. ವಿಡಂಬನೆಯ ಕಲೆಯು ಅವನಿಗೆ ಚೆನ್ನಾಗಿ ಕರಗತವಾಗಿರುತ್ತದೆ. ಸರ್ಕಸ್ಸಿನ ವಿದೂಷಕನಂತೆ ಅವನು ಕಾರ್ಯಕುಶಲನಾಗಿರುತ್ತಾನೆ. ಎಲ್ಲ ಪಾತ್ರಗಳಿಗೆ ಜೋಡಿಸಿ ನಟಿಯರಲ್ಲಿ ಉತ್ಸಾಹ ತುಂಬುವದು ಅವನ ಧ್ಯೇಯ. ಈ ಗಂಭೀರ ಧ್ಯೇಯವನ್ನು ಅವನು ಚಪಲ ಹಾಸ್ಯದಿಂದ ಸಾಧಿಸುತ್ತಾನೆ. ಅವನ ಹಾಸ್ಯ ಇಂಥವರಿಗೆ ಅರ್ಥವಾಗಲಿಲ್ಲ ಎನ್ನುವಂತಿಲ್ಲ. ಒಗಟುಗಳು ಹಲವು ಸಲ ಅದೇ ಅದೇ ಆಗಿರುತ್ತದೆ. ಆದರೆ ಸ್ವಂತದ ಕಲ್ಪಕತೆಯನ್ನು ಬಳಸುವದು ಈ ಉತ್ಕಂಠದ ನಾಟ್ಯಪ್ರಕಾರದಲ್ಲಿ ಸಾಧ್ಯವಿರುವುದರಿಂದ ಸೋಂಗಾಡೆಯ ಹಾಸ್ಯ ತಾಜಾ, ನಳನಳಿಸುವಂತಹದು ಆಗಿರುತ್ತದೆ. ಮಹಾರಾಷ್ಟ್ರವು ಗಂಭೀರ ಹಾಗೂ ತೀವ್ರ ಮನೋವೃತ್ತಿಯ ಪ್ರಾಂತವಾಗಿದೆ ಎಂದು ಭಾವಿಸಲಾಗುತ್ತದೆ. ಹಳ್ಳಿಹಳ್ಳಿಗಳಲ್ಲಿ ಸೋಂಗಾಡೆಯೇ ಹಾಸ್ಯದ ಝುರಿ ಹರಿಯುವಂತೆ ಮಾಡಿದ. ಬಹುಜನ ಸಮಾಜದವರಿಗೆ ಮುಕ್ತ ಹಾಸ್ಯದ ವರದಾನ ತಮಾಶಾದಿಂದಲೇ ಲಭಿಸಿದೆ. ಸುಳ್ಳುಗಾರರಿಗೆ ಹಾಸ್ಯ ಇಷ್ಟ ಎಂಬ ಮಾತೀಗ ತಂಗಳಾಗಿದೆ. ಯಾವ ಸಮಾಜಕ್ಕೆ ಹೊಟ್ಟೆ ತುಂಬ ನಗವು ಬರಲಾರದೋ ಅವರು ಯಾವ ಕಾರ್ಯವನ್ನು ತನ್ಮಯತೆಯಿಂದ ಮಾಡಲಾರರು, ಯಾರಿಗೆ ಹಾಸ್ಯದ ಇಂದ್ರಿಯವಿದೆಯೋ ಅವನ ಬುದ್ಧಿಯೇ ಚುರುಕು ಹಾಗೂ ಜಾಗೃತವಾಗಿರುತ್ತದೆ. ಜಗದ ದುಃಖಕ್ಕೆ ಬಾಯಿ ನೀಡುವವನೇ ಹಾಸ್ಯ ವೃತ್ತಿಯ ಮನುಷ್ಯ. ನಗುನಗುತ್ತಲೇ ಅಳಿಸುವುದು ಅಳು ಅಳುತ್ತಲೇ ನಗಿಸುವುದೇ ಅವನ ಕಲೆ. ಹಾಗೆ ಹಾಸ್ಯದಲ್ಲೂ ಪ್ರಕಾರಗಳಿವೆ. ಘಾಸಿಗೊಳಿಸುವ ದುಷ್ಟ ವಿನೋದ, ಅಸಹ್ಯ ಹಾಸ್ಯ, ಹುಡುಗಾಟಿಕೆ ಸಾಂದರ್ಭಿಕ ಹಾಸ್ಯ, ಅದರಲ್ಲಿ ಪಿತೂರಿಯ ಹಾಸ್ಯ ಅಥವಾ ಕುಚೇಷ್ಟೆ ಮತ್ತು ಅಸಹ್ಯವನ್ನು ಗೌಣವೆಂದು ಭಾವಿಸಿ ತೊರೆಯಲೇಬೇಕು. ಆದರೆ ಶುದ್ಧ ಹಾಸ್ಯದ ಜೋಪಾಸನೆ ಮಾತ್ರ ಅಲ್ಲಲ್ಲಿ ಜರುಗಲೇ ಬೇಕು. ಚೀನದ ಕನ್‌ಪ್ಯೂಷಿಯಸ್ ಎಂಬ ದಾರ್ಶನಿಕನು ಹಾಸ್ಯಕ್ಕೆ ತತ್ವಜ್ಞಾನದ ಸ್ಥಾನವನ್ನು ನೀಡಿದ, ಯಾರಿಗೆ ಹಾಸ್ಯ ಮಾಡಲು ಬರುವುದಿಲ್ಲವೋ ಯಾರಿಗೆ ಬೇರೆಯವರ ಮನವನ್ನು ಅರಳಿಸಿ ಅವರ ದುಃಖವನ್ನು ಕಡಿಮೆ ಮಾಡಲು ಬರುವುದಿಲ್ಲವೋ ಅವನಿಗೆ ಎಂದಿಗೂ ತತ್ವಜ್ಞಾನ ಅರ್ಥವಾಗುವುದಿಲ್ಲ ಎಂದವನು ಹೇಳಿದ್ದಾನೆ. ಸಂತನಾಗಬೇಕೆ ಹಾಗಾದರೆ

ಹಾಸ್ಯಗಾರನಾಗಿ ಎಂದವನು ತನ್ನ ಅನುಯಾಯಿಗಳಿಗೆ ಬೋಧಿಸುತ್ತಿದ್ದ. ಹಾಸ್ಯವು ನಿರ್ಮಲ ಅಂತಃಕರಣ ಗುರುತು. ಹಾಸ್ಯದಿಂದ ಅಂತಃಕರಣದೊಳಗಿನ ಎಲ್ಲ ಕಲ್ಮಷ ತೊಳೆದುಹೋಗುತ್ತದೆ. ಆದ್ದರಿಂದ ಹಾಸ್ಯದ ಉಪಾಸನೆ ಮಾಡುವುದೆಂದರೆ ಮಾನವೀಯತೆ ಸೇವೆ ಮಾಡಿದಂತೆ ಎಂದವನ ಹೇಳಿಕೆಯಾಗಿತ್ತು. ಅದು ಅಯೋಗ್ಯವೆಂದು ಯಾರಾದರೂ ಹೇಳಿಯಾರೆ?

ತಮಾಶಾದ ಒಂದು ಅಂಗವೆಂದರೆ ಶೃಂಗಾರದ ಲಾವಣಿ. ಅದನ್ನು ಅಧ್ಯಾತ್ಮಕ್ಕೆ ಜೋಡಿಸಲಾಗಿದೆ. ಸಾಂಖ್ಯದ ಪುರುಷ ಪ್ರಕೃತಿಯ ತತ್ವವು ಅದರ ಅಡಿಪಾಯದಲ್ಲಿದೆ. ಈ ಪುರಾತನ ತತ್ವಜ್ಞಾನವನ್ನು ಮುಂದೆ ನಾಥ ಪಂಥದವರು ಬಳಸಿಕೊಂಡರು. ಮತ್ತು ಅದರದ್ದೇ ಪ್ರತಿಬಿಂಬವು ಭೇದಕ ಲಾವಣಿಯಲ್ಲಿ ಮೂಡಿದೆ. ಪ್ರಶ್ನೋತ್ತರದ ಲಾವಣಿ ಮತ್ತು ನಾಟ್ಯವನ್ನು ಆಧ್ಯಾತ್ಮಿಕತೆಯೊಂದಿಗೆ ಜೋಡಿಸಲಾಗಿದೆ. ಆದರೆ ಸಂಪ್ರದಾಯವು ಗಂಭೀರವಾಗಿದ್ದರೂ ಆವಿಷ್ಕಾರ ಹಾಸ್ಯವಾಗಿರುತ್ತದೆ. ಪ್ರಕೃತಿಯನ್ನು ಸ್ತ್ರೀರೂಪವೆಂದೊಪ್ಪಿದ್ದರಿಂದ ಸ್ತ್ರೀ–ಪುರುಷ ಸಂಬಂಧದ ಬಗೆಗೆ ಹಲವು ರೂಪಕಗಳನ್ನು ರಚಿಸುತ್ತಾರೆ. ನಿರ್ಮಿತಿಯ ಆವಾಹನೆಯನ್ನು ಮಾಡುವ ಈ ತಂತ್ರವು ಹಲವು ಸಲ ಅಮಂಗಲ ರೂಪವನ್ನು ಧಾರಣ ಮಾಡುತ್ತದೆ. ರಸಬಣ್ಣದಿಂದ ಹುಟ್ಟುವ ರಂಜಕ, ಹುಡುಗಾಟಿಕೆಯ ವಾತಾವರಣ ಮತ್ತು ಕೊಳಕು, ಗ್ರಾಮ್ಯ, ಅಪಶಬ್ದಗಳಿಂದ ಹಾಗೂ ಚೇಷ್ಟೆಯಿಂದ ದೂಷಿತಗೊಂಡ ವಾತಾವರಣ ಇದರಲ್ಲಿ ಅಂತರವಿರುತ್ತದೆ. ತಮಾಶಾದ ಕಲಾವಿದರೂ ಇದನ್ನು ಅರಿತಿದ್ದಾರೆ. ಹೀಗಾಗಿ ಅಮೂಲ್ಯ ಅಧ್ಯಾತ್ಮ ಭಾವನೆಯಿಂದ ಮೊದಲೇ ಏಕರೂಪಗೊಂಡ ಹಾಸ್ಯವು, ಮರಳಿ ಮತ್ತೆ ತಿಕ್ಕಿ ತೊಳೆದು ಜನರೆದುರಿಗೆ ಬರಬೇಕು. ತಮಾಶಾದ ಮತ್ತೊಂದು ಅಂಗವೆಂದರೆ ವಗ್. ಇದರಲ್ಲಿ ಬೇರೆ ಬೇರೆ ಕಥೆಗಳಿರುತ್ತವೆ. ಕಥನಪರ ಲಾವಣಿಯ ಆರಂಭಿಕ ಪ್ರಕಾರವು ನನಗೆ ಒಬ್ಬ ಮಹಾರ ಮಹಿಳೆಯಿಂದ ಲಭಿಸಿತು. ಈ ಲಾವಣಿ ಪ್ರಕಾರದಲ್ಲಿ ಹಲವು ಜಾನಪದ ಕಥೆಯನ್ನು ಅವಳು ನನಗೆ ಹೇಳಿದಳು. ಇವೆಲ್ಲ ಗದ್ಯ–ಪದ್ಯ ಮಿಶ್ರಿತ ಕಥಾನಕಗಳು. ಆದರೆ ಅದರಲ್ಲಿರುವ ಪದ್ಯವು ಆಶುಕವಿತೆಯ ಮಾದರಿಯಲ್ಲಿ ರಚಿತಗೊಂಡಿದೆ. ಕಥೆ ಹೇಳಹೇಳುತ್ತ ಪದ್ಯ ರಚಿಸುವುದು. ಏರು ಸ್ವರದಲ್ಲಿ ಹಾಡುವುದು. ಬಳಿಕ ಗದ್ಯ ಬರುತ್ತದೆ. ಅದೂ ಸಹ ಸಾದಾ ಅಲ್ಲ ತಾಲಬದ್ಧ ಗದ್ಯ. ಆ ಗದ್ಯದಲ್ಲಿ ಎಷ್ಟೋ ವೈಯ್ಯಾರ, ತೋಡಿಯಿತ್ತು. ಸುಂದರ ಹೆಣ್ಣಿನ ವರ್ಣನೆ ಹೀಗಿದೆ–"ಕಾಲಿನಲಿ ಕಮಲ, ಹೊಕ್ಕಳಲಿ ರತುನ ಸೂರ್ಯ ಉದಯಿಸದಿರು, ಚಂದ್ರಾ ಅಸ್ತಮಿಸದಿರು..." ಅಸಲೀ ದೇಸಿ ಮರಾಠಿಯಲ್ಲಿ ರಚಿಸಿದ ಮೋಹಕತೆ. ಅಶಿಕ್ಷಿತರ ಮಧುರ ಕಂಠದ ರಕ್ಷಣೆಯಾಗಬೇಕು. ಈ ಹಿಂದೆ ಈ ಲಾವಣಿ ಹಾಡುಗಳನ್ನು ಹೊಲಗದ್ದೆಯ ಕೃಷಿ ಕೆಲಸವಾದ ನೆಟ್ಟಿ–ಕಟಾವು–ಸುಗ್ಗಿಯ ಕಾಲಕ್ಕೆ ಹಾಡುತ್ತಿದ್ದರು. ಮುಂದೆ ವಗ್ ಬಂತು. ಈ ವಗ್‌ದಲ್ಲಿ

ಹಲವು ಬಗೆಯ ಕಥೆಗಳಿವೆ... ಅದಕ್ಕೆ ಜಾಗತಿಕ ಸಾಹಿತ್ಯದಲ್ಲಿ ಬಹುದೊಡ್ಡ ಸ್ಥಾನ ಪ್ರಾಪ್ತವಾಗಿದೆ. ತಾರಾ ರಾಣಿಯ ವಗ್ ಕಥೆ ಹೀಗಿದೆ- ತಾರಾರಾಣಿಯು ಒಬ್ಬ ಗಣಿಕೆ. ಅವಳಿಗಿಬ್ಬರು ಮಕ್ಕಳು. ಅವಳು ಅವರನ್ನು ದಾರಿಯಲ್ಲಿ ಬಿಟ್ಟಳು. ಅವರಲ್ಲಿ ಒಬ್ಬ ಮಗ, ಮತ್ತೊಬ್ಬಳು ಮಗಳು. ಮಗಳನ್ನು ದಿಲ್ಲಿಯ ವ್ಯಾಪಾರಿ ಒಯ್ದು, ಮಗನನ್ನು ವಿಜಾಪುರದ ವ್ಯಾಪಾರಿ ಒಯ್ದ. ವ್ಯಾಪಾರಿಗಳಿಗೆ ಆ ಮಕ್ಕಳ ಹೆಸರೆಲ್ಲ ಗೊತ್ತು? ಮುಂದೆ ವ್ಯಾಪಾರಿಗಳು ಅವರ ಮದುವೆ ಮಾಡಿದರು. ಆ ಹುಡುಗಿಗೆ ಮಕ್ಕಳಾದವು. ಒಮ್ಮೆ ಆ ಹುಡುಗಿ ಮಗುವಿಗೆ ಮೊಲೆ ಹಾಲು ಕುಡಿಸುವಾಗ ಶಂಕರನು ಗೋಸಾವಿಯ ವೇಷ ಧರಿಸಿ ಬಂದ. ಅವನು ಆ ಮಗು ಪಾಪದಿಂದ ಹುಟ್ಟಿದೆ. ಅದು ಸೋದರನಿಂದ ಹುಟ್ಟಿದೆ ಎಂದ. ಅದನ್ನು ಕೇಳಿ ಅವಳು ಆತ್ಮಹತ್ಯೆ ಮಾಡಿಕೊಂಡಳು. ಮುಂದೆ ಆ ತರುಣ ತಾರಾರಾಣಿ ಇದ್ದಲ್ಲಿಗೆ ಬಂದ. ಇಬ್ಬರ ಗೆಳೆತನವಾಯಿತು.

ತಾರಾರಾಣಿಗೂ ಅವನಿಂಧ ಮಗು ಹುಟ್ಟಿತು. ಅವಳೂ ಹಾಲು ಕುಡಿಸುತ್ತ ಕೂತಾಗ ಗೋಸಾವಿ ಬಂದ. 'ಈ ಮಗು ಪಾಪದ್ದು, ನಿನ್ನ ಮಗನಿಂದ ನಿನಗೆ ಹುಟ್ಟಿದೆ' ಎಂದ. ತಾರಾರಾಣಿಗೆ ದುಃಖವಾಯಿತು. ಅವಳೂ ಮಗುವಿನ ಸಹಿತ ಆತ್ಮಹತ್ಯೆ ಮಾಡಿಕೊಂಡಳು. ಈ ಕಥೆಯು ಭಾರತದಲ್ಲಿ ೨೫೦೦ ವರ್ಷಗಳಿಂದ ರೂಢಿಯಲ್ಲಿದೆ. ಇದೇ ಪಸರಿಸಿದೆ. ಐರ್‍ಲ್ಯಾಂಡಿನಲ್ಲಿ ಉಪಲಬ್ಧವಿದ್ದ ಈ ಕಥೆಯನ್ನು ಆಧರಿಸಿ ಥಾಮಸ್‌ಮಾನ್ ಎಂಬ ಖ್ಯಾತ ಕಾದಂಬರಿಕಾರರು ಪವಿತ್ರ ಪಾಪಿ ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಅದು ತುಂಬ ಪ್ರಸಿದ್ಧವಾಗಿದೆ. ಈ ಕಥೆಯ ಮೂಲ ಜೈನ ಸಾಹಿತ್ಯದಲ್ಲಿ ಸಿಕ್ಕಿದೆ. ಆ ಕಥೆಯು ಅದೆಷ್ಟು ಸೊಗಸಾಗಿದೆ ಎಂದರೆ, ಅದರ ಎದುರಿಗೆ ಮಾನ್‌ನ ಕಥೆ ಕಳಪೆ ಎನಿಸುತ್ತದೆ. ಜೈನಕಥೆಯಲ್ಲಿ ಒಬ್ಬ ಗಣಿಕೆಯು ಗರ್ಭವತಿಯಾಗಿರುತ್ತಾಳೆ. ಗರ್ಭಪಾತ ಮಾಡಿಸಿಕೋ ಎಂದು ತಾಯಿ ಹೇಳುತ್ತಾಳೆ. ಆದರವಳು ಒಪ್ಪುವುದಿಲ್ಲ. 'ನಾನು ಒಬ್ಬ ಹೆಣ್ಣು. ಮಾತೆಯಾಗುವ ಹಕ್ಕು ನನಗಿದೆ. ನಾನು ತಾಯಿ ಆಗುತ್ತೇನೆ. ಮಗು ಹುಟ್ಟಿದ ಬಳಿಕ ಹಾಲು ಕುಡಿಯಲಿ, ಆಟವಾಡಲಿ, ಬಳಿಕ ನೀನು ಏನು ಬೇಕಾದರೂ ಮಾಡು. ನಾನು ಕಲಾವತಿಯ ಧರ್ಮವನ್ನು ಪಾಲಿಸುತ್ತೇನೆ' ಎನ್ನುತ್ತಾಳೆ. ಮುಂದೆ ಅವಳಿಗೆ ಅವಳಿ ಮಕ್ಕಳು ಹುಟ್ಟುತ್ತವೆ. ಅನಂತರದ ಕಥೆಯು ತಾರಾರಾಣಿಯಂತೇ ಇದೆ. ಭಾರತೀಯ ಕಥೆಯಲ್ಲಿಯ ಪಾತ್ರಗಳೆಲ್ಲ ಪಾಪವನ್ನು ಗೊತ್ತಿದ್ದೂ ಮಾಡುವುದಿಲ್ಲ. ಆದರೆ ಐರಿಶ್ ಕಥೆಯಲ್ಲಿ ರಾಜಕನ್ಯೆ-ರಾಜಪುತ್ರರು ಸೋದರಿ-ಸೋದರಿ ಎಂದು ಗೊತ್ತಿದ್ದೂ ಪಾಪ ಮಾಡುತ್ತಾರೆ. ಮುಂದೆ ಪಾಪದ ಫಲ ಕಂಡು ಸನ್ಯಾಸಿಯಾಗಿ ಹೋಗುತ್ತಾನೆ. ಮುಂದೆ ರಾಜಕನ್ಯೆಯೇ ರಾಣಿಯಾಗುತ್ತಾಳೆ. ಅವಳು ತೊರೆದ ಮಗನೇ ಅವಳೊಂದಿಗೆ ಲಗ್ನವಾಗುತ್ತಾನೆ. ಈ ಸಮಯದಲ್ಲೂ

ರಾಣಿಗೆ ಅವನು ಯಾರೆಂದು ಗೊತ್ತಿರುತ್ತದೆ. ಬಳಿಕ ಅವಳಿಗೆ ಮಗು ಹುಟ್ಟಿದ ಸಂಗತಿ ಪತಿಗೆ ತಿಳಿಯುತ್ತದೆ. ಅವನು ಸನ್ಯಾಸಿಯಾಗಿ ಹೊರಟುಹೋಗುತ್ತಾನೆ. ಮುಂದೆ ಅವನೇ ಪೋಪನಾಗುತ್ತಾನೆ. ರಾಣಿಯು ಅವನ ಮುಂದೆ ತನ್ನ ಪಾಪ ಒಪ್ಪಿಕೊಳ್ಳುತ್ತಾಳೆ. ಸರ್ವಸ್ವವನ್ನು ತ್ಯಾಗ ಮಾಡಿ ಅಂಗವಿಕಲರ ಸೇವೆಯಲ್ಲಿ ನಿರತಳಾಗುತ್ತಾಳೆ. ಆದರೆ ಐರಿಶ್ ಕಥೆಗೆ ಮಾನ್‌ನಂತಹ ಶ್ರೇಷ್ಠ ಲೇಖಕ ಲಭಿಸಿದ. ಭಾರತದಲ್ಲಿ ಮಾತ್ರ ಈ ಕಥೆ ಹಳೆಯ ಹಸ್ತಪ್ರತಿಯಲ್ಲಿ ಅಥವಾ ತಮಾಶಾ ಕಲೆಯಲ್ಲೇ ಸಿಲುಕಿಕೊಂಡಿತು.

ಅಂಥದೇ ಎರಡನೆಯದು ಚಂದ್ರಾವಳಿಯ ಕಥೆ. ಚಂದ್ರಗುಜರನ ಹೆಂಡತಿ ಚಂದ್ರಾವಳಿ. ಅವಳನ್ನು ದಿಲ್ಲಿಯ ರಾಜನು ಹಿಡಿದೊಯ್ಯುತ್ತಾನೆ. ಮುಂದೆ ಚಂದ್ರಗುಜರನು ಆ ರಾಜ್ಯದ ಮೇಲೆ ದಂಡೆತ್ತಿ ಹೋಗುತ್ತಾನೆ. ಯುದ್ಧದಲ್ಲಿ ಆ ರಾಜ ಮಡಿಯುತ್ತಾನೆ. ಚಂದ್ರಾವಳಿಯ ಮನ ಅವನ ಮೇಲಿತ್ತು. ಅವನ ಜೊತೆಗೆ ಅವಳು ಸತಿ ಹೋಗುತ್ತಾಳೆ. ಈ ಕಥೆಯು ತಮಾಶಾದ ವಗ್‌ದಲ್ಲಿದ್ದರೂ ಅದೇನು ಮರಾಠಿ ಮೂಲಕಥೆಯಲ್ಲ. ಈ ಕಥೆಯ ಉಗಮ ಬಿಹಾರದಲ್ಲಿದೆ. ಈ ಕಥೆಯ ತೀರ ಪ್ರಾಚೀನ ಹಸ್ತಪ್ರತಿಯು ಮುಸಲ್ಮಾನ ಲೇಖಕನ ಫಾರ್ಸಿ ಲಿಪಿಯಲ್ಲಿ. ಅರಬೀ ಭಾಷೆಯಲ್ಲಿದೆ. ಕಾಲ ೧೩ನೇ ಶತಮಾನ. ಬಂಗಾಲ ಉತ್ತರ ಪ್ರದೇಶದಲ್ಲೂ ಈ ಕಥೆ ಪಸರಿಸಿದೆ. ತಾತ್ಪರ್ಯವೇನೆಂದರೆ ಇಂದು ಯಾವ ಕಥೆಯು ನಮಗೆ ಸಪ್ಪೆಗೆ ಮತ್ತು ಕಳಪೆ ಎನಿಸುವುದೋ ಅದರ ಪರಂಪರೆ ತೀರಾ ಹಳೆಯದಾಗಿದೆ. ಇಂಥ ಕಥೆಗಳ ಶೋಧ ತಮಾಶಾದವರ ಅಲಿಖಿತ ಲಾವಣಿಯಲ್ಲಿ ಎಷ್ಟೋ ಸಿಗುತ್ತದೆ. ತಾರಾರಾಣಿಯ ವಗ್‌ವನ್ನು ಸೌ. ಅನುಸೂಯ ಅಮಯೆ ಅವರು ಪ್ರಕಟಿಸಿದ್ದರಿಂದ ನನಗೆ ಗೊತ್ತಾಯಿತು. ಸದ್ಯ ಇಂಥದೇ ಮತ್ತೊಂದು ಕಳೆದು ಹೋದ ಲಾವಣಿಯನ್ನು ನಾನು ಹುಡುಕುತ್ತಿದ್ದೇನೆ. ಇನ್ನೂರು ವರ್ಷಗಳ ಹಿಂದೆ ಗಾರ್ಸಿಯಾ ಎಂಬ ಒಬ್ಬ ಪೋರ್ತುಗೀಜ ಡಾಕ್ಟರ್ ಭಾರತದ ಔಷಧಿ ವನಸ್ಪತಿಯ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿ ಪುಸ್ತಕ ಬರೆಯುತ್ತಿದ್ದ. ಅವನಿಗೆ ಪಾರಿಜಾತಕ್ಕೆ ಸಂಬಂಧಿಸಿದ ಒಂದು ಮರಾಠಿ ಲಾವಣಿ ಕಿವಿಗೆ ಬಿತ್ತು. ಅವನು ಕಥೆಯ ಸಾರಾಂಶವನ್ನು ಹೀಗೆ ಬರೆದಿರಿಸಿದ್ದಾನೆ. ಒಬ್ಬ ವ್ಯಾಪಾರಿಗೆ ಓರ್ವ ಸುಂದರ ಮಗಳಿದ್ದಳು. ಒಮ್ಮೆ ಸೂರ್ಯದೇವನು ಅವಳನ್ನು ನೋಡಿದ. ಅವಳಿಗೆ ಮರುಳಾದ. ಅವಳಿಗೂ ಅವನು ಇಷ್ಟವಾದ. ಅವರಿಬ್ಬರೂ ಎಷ್ಟೋ ದಿನ ಸಂತೋಷದಲ್ಲಿ ಕಳೆದರು. ಬಳಿಕ ಸೂರ್ಯದೇವನಿಗೆ ಅವಳಿಗಿಂತಲೂ ಸುಂದರವಾದ ಬೇರೊಬ್ಬ ಹುಡುಗಿ ಕಾಣಿಸಿದಳು. ಅವನು ಈ ಹುಡುಗಿಯನ್ನು ತೊರೆದ. ಹೊಸ ಪ್ರೇಯಸಿಯ ಪ್ರೀತಿಯಲ್ಲಿ ಮುಳುಗಿದ. ಆ ದುರ್ದೈವಿ ಹುಡುಗಿ ಮಾತ್ರ ಅವನನ್ನು ಮರೆಯಲಿಲ್ಲ. ನಿರಾಸೆಯ ಆಘಾತವನ್ನು ಸಹಿಸುವುದಾಗಲಿಲ್ಲ. ಅವಳು ಉರಿಯುವ ಚಿತೆಯಲ್ಲಿ

ಹಾರಿದಳು. ಅವಳೇನೋ ಸತ್ತಳು, ಆದರೆ ಅವಳ ಬೂದಿಯಿಂದ ಗಿಡವೊಂದು ಬೆಳೆಯಿತು. ಅದೇ ಆ ಪಾರಿಜಾತದ ಗಿಡ. ರಾತ್ರಿ ಅದು ಅರಳುತ್ತದೆ. ರಕ್ತ ಮತ್ತು ಕಂಬನಿ ಇದರ ಬಣ್ಣ ಮತ್ತು ಆಕಾರವನ್ನು ಧರಿಸುವ ಅದರ ಹೂವುಗಳು ಗಾಳಿಯ ಜೊತೆಗೆ ತನ್ನ ಪ್ರೇಮದ ಕಥೆಯನ್ನು ಹೇಳುತ್ತಿರುತ್ತವೆ. ಆದರೆ ಬೆಳಕು ಹರಿದು, ಸೂರ್ಯ ಉದಯಿಸಿದ ಬಳಿಕ ಗಿಡ ಥರಥರ ಕಂಪಿಸುತ್ತದೆ ಮತ್ತು ಹೂವುಗಳ ಕಂಬನಿ ಉದುರುತ್ತವೆ. ಸಂಪೂರ್ಣ ಶೃಂಗಾರವನ್ನು ಕಳಚಿಬಿಡುತ್ತದೆ. ಉದಾಸಗೊಂಡು ನಿಂತಿರುತ್ತದೆ. ನಮ್ಮ ಮರಾಠಿ ಜನಪದ ಸಾಹಿತ್ಯದಿಂದ ಪ್ರೇಮಕಥೆ ಮತ್ತು ಪ್ರೇಮಗೀತೆಯ ಪಲಾಯನ ಮಾಡಿದೆ. ಹೀಗಾಗಿ ಈ ಹಳೆಯ, ವಿಸ್ಮೃತಿಯ, ಸುಂದರ ಪ್ರೇಮ ಕಥೆಯನ್ನು ಕೇಳಿ ನನಗೆ ತುಂಬ ಸಂತೋಷವಾಯಿತು. ಅದರ ಮೂಲ ಲಾವಣಿಯು ಎಲ್ಲಾದರೂ ಸಿಗಬಹುದೇ ಎಂದು ಹುಡುಕುತ್ತಿದ್ದೇನೆ. ಈ ವಿಷಯದಲ್ಲಿ ನನ್ನ ತಮಾಶಾ ಕಲಾವಿದ ಬಂಧು-ಭಗಿನಿಯರು ಸಹಾಯ ಮಾಡಬಹುದೇ? ಪಾರಿಜಾತದಂತೆ ಉಳಿದ ಅಮೂಲ್ಯ ಸಾಹಿತ್ಯ ಸಂಪತ್ತು ಹೀಗೇ ನಾಶಗೊಂಡಿದೆ. ಅದರ ಸಂಗ್ರಹ ಅಶಿಕ್ಷಿತ ಹಾಗೂ ಬಡಸಮಾಜದವರ ಹತ್ತಿರವೇ ಇರಬಹುದು. ಅದನ್ನು ಹುಡುಕಿ ಆ ಹಳೆಯ ಸುಂದರ ಕಥೆಯ ನಾಟ್ಯವನ್ನು ಸಮಾಜದ ಎದುರಿಗೆ ತರುವುದು ನಮ್ಮ ಕರ್ತವ್ಯವಾಗಿದೆ. ಚೀನವು ಕಮಲಕ್ಕೆ ಸಂಬಂಧಿಸಿದ ಕಥಾನಾಟ್ಯ ಮತ್ತು ನೃತ್ಯವನ್ನು ಅತ್ಯಂತ ಕಲಾಪೂರ್ಣ ರೀತಿಯಲ್ಲಿ ಸಂರಕ್ಷಿಸಿದೆ. ಮೊನ್ನೆ ಒಬ್ಬ ರೈತನನ್ನು ಪ್ರೀತಿಸುವ ಸೂರ್ಯಕುವರಿಯ ಕಥೆಯನ್ನು ಜಪಾನಿ ಸಿನಿಮಾದಲ್ಲಿ ನೋಡಿದೆ. ಕಣ್ಣು ತೃಪ್ತಿಗೊಂಡಿತು. ಈ ಭಾಗ್ಯ ನಮ್ಮ ತಮಾಶಾ ಕಲಾವಿದರಿಗೆ ಎಂದಿಗೆ ಸಿಗುವುದೋ.

ಮರಾಠಾ ಸೈನ್ಯ ಉತ್ತರದ ದಂಡಯಾತ್ರೆಗೆ ಹೋಯಿತು. ಉತ್ತರ ಮತ್ತು ಮಹಾರಾಷ್ಟ್ರದ ಸಂಗೀತದಲ್ಲಿ ಕೊಡುಕೊಳ್ಳುವಿಕೆ ನಡೆಯಿತು. ಮರಾಠರ ಎಷ್ಟೋ ಲಾವಣಿಗಳು ಉತ್ತರದ ಕವನಗಳ ಪ್ರತಿಕೃತಿಯಾಗಿವೆ. 'ಪಿವಳಾಸಾಜ್' ಎಂಬ ಲಾವಣಿಯನ್ನು ಉದಾಹರಣೆಯಾಗಿ ನೋಡಬಹುದು. ಉತ್ತರದ ಕಥೆಯೂ ಹೀಗೇ ಆಯಿತು. ಆದರೆ ಇದರಲ್ಲಿ ಕೆಲವು ಮರಾಠಿ ದಾಟಿಯೂ ಉತ್ತರಕ್ಕೆ ಹೋದ ವಿಷಯ ಕೆಲವರಿಗೆ ಮಾತ್ರ ಗೊತ್ತಿದೆ. ಗುರ್ಜರ್ ರಾಗ, ಮಾಲವ ರಾಗ, ಆಭೀರಿ ರಾಗ ಸಂಗೀತ ಬಲ್ಲವರಿಗೆ ಗೊತ್ತಿದೆ. ಆದರೆ ಮರಾಠಿ ರಾಗವನ್ನು ಎಂದು ಯಾರಾದರೂ ಕೇಳಿದ್ದೀರಾ? ೧೭ನೇ ಶ.ದ ಮಧ್ಯೆ ಮರಾಠರ ಹಾಡು ಕುಣಿತ ಬಿಹಾರದವರಿಗೆ ಗೊತ್ತಾಯಿತು. ದಂಡೆತ್ತಿ ಹೋಗುವ ಮರಾಠಾ ವೀರರು ಅವರ ಬಳಿಯಿರುವ ಹಾಡು ಬಿಹಾರದವರನ್ನು ಮೋಡಿ ಮಾಡಿತು. ಅಂದಿನಿಂದ ಮೈಥಿಲಿ ನಾಟ್ಯದ ಹಾಡಿನ ಮೇಲೆ ಅದರ ಛಾಪು ಬಿತ್ತು. ಇಂದಿಗೂ ಅವರಲ್ಲಿಯ ಒಂದು ಪ್ರಕಾರಕ್ಕೆ ಅವರು 'ಮರಹಠಿ' ರಾಗ ಎನ್ನುತ್ತಾರೆ. ಆದರೆ ನಮ್ಮ ಮರಾಠರಿಗೆ

ಅದು ಲೆಕ್ಕಕಿಲ್ಲ.

ತಮಾಶಾದ ಲಾವಣಿ ಮತ್ತು ಅವುಗಳ ಮೋಡಿ ಮಾಡುವ ದಾಟಿ. ಇವುಗಳ ಸಂರಕ್ಷಣೆ ಮತ್ತು ಸಂವರ್ಧನೆಯಾಗುವ ಅಗತ್ಯವಿದೆ. ತಮಾಶಾ ಕಲಾವಿದೆಯರು ತಾರಕ ಸ್ವರದಲ್ಲಿ ಹಾಡುವ ಆ ಧ್ವನಿ, ಮತ್ತು ಡೌಲಿನಿಂದ ಹಾಡುವ ಆ ಪದ್ಧತಿಯು ಎಂದೂ ನಾಶಗೊಳ್ಳಬಾರದು. ನಾಟಕ ಸಿನಿಮಾ ಸಂಗೀತದ ಪರಿಣಾಮ ಈ ಹಾಡುಗಳ ಮೇಲೂ ಆಗುತ್ತಲಿದೆ. ಇದು ಹಾನಿಕಾರಕ. ಲಾವಣಿಯ ಹಾಡು ಲಾವಣಿಯ ಪದ್ಧತಿಯಲ್ಲೇ ಇರಬೇಕು. ಈ ಹಾಡನ್ನು ಮಹಾರ ಮಾದಿಗರು, ಡೊಂಬರು ಹಳ್ಳಿಹಳ್ಳಿಗಳಲ್ಲಿ ಹಾಡುವಾಗ, ಅದರ ಸೊಗಸಾದ ಬಿಂಕವೇ ಬೇರೆ. ನಾನೊಮ್ಮೆ ಸೊಲ್ಲಾಪುರದಲ್ಲಿ ಮಹಾರ ಸ್ತ್ರೀಯರ ಹಾಡುಗಳನ್ನು ಸಂಗ್ರಹಿಸುತ್ತಿದ್ದೆ. 'ನಿಮ್ಮ ಕಂಠ ಎಷ್ಟು ಇಂಪಾಗಿದೆಯಲ್ಲ?' ಎಂದು ಹಾಡುವ ಮಹಿಳೆಗೆ ಹೇಳಿದೆ. 'ಬಾಯವರ್, ನಮ್ಮ ಎಲ್ಲ ಹೆಂಗಸರ ಕಂಠ ಇಂಪಾಗಿಯೇ ಇರತ್ತದರೀ' ಎಂದವಳು ತಟ್ಟನೆ ಹೇಳಿದಳು–ಹಳ್ಳಿ–ಹಳ್ಳಿಗಳ ಮಹಿಳೆಯರ ಕಂಠದಲ್ಲಿ ಇರುವ ಸ್ವರ ಇಂಥ ಸಂಪೂರ್ಣ ವ್ಯರ್ಥವಾಗುತ್ತಿದೆ. ಹೊಳೆಯ ನೀರು ಹರಿದು ಹೋಗುವಂತೆ ಪೋಲಾಗುತ್ತಿದೆ. ಹಾಡುವ ಕಂಠಗಳ ಈ ಸಂಪತ್ತನ್ನು ತಮಾಶಾದಲ್ಲಿ ಹಾಗೆ ಉಳಿದ ಕಡೆಗಳಲ್ಲೂ ಪ್ರಯತ್ನಪೂರ್ವಕವಾಗಿ ಉಳಿಸಿಕೊಳ್ಳಬೇಕಿದೆ. ಎಲ್ಲ ಬಗೆಯ ದಾಟಿಯ ಸಂರಕ್ಷಣೆಯಾಗಬೇಕಾಗಿದೆ ಪಾರಂಪಾರಿಕ ಹಾಡುಗಳ ಸ್ಪರ್ಧೆ ಏರ್ಪಡಿಸಬೇಕಿದೆ. ಎಲ್ಲ ಪ್ರಕಾರದ ಪಾರಂಪಾರಿಕ ಹಾಡುಗಳ ತರಬೇತಿಯನ್ನು ಹುಡುಗಿಯರಿಗೆ ನೀಡಬೇಕಿದೆ. ಅವುಗಳ ರೇಕಾರ್ಡ್ಸ್ ಸಿದ್ಧವಾಗಬೇಕು. ರೇಕಾರ್ಡ್‌ಗಳ ಮ್ಯೂಜಿಯಂ ಆರಂಭಿಸಬೇಕು ಎಂಬ ಆಕಾಂಕ್ಷೆ ನನ್ನದಾಗಿದೆ. ಅಂದಾಗಲೇ ಈ ಅನಕ್ಷರಸ್ಥದ ವಿದ್ಯೆಯು ಸಂಪೂರ್ಣ ದೇಶದ ಅಭಿಮಾನದ ಸಂಪತ್ತಾಗಬಹುದು. ಅದಕ್ಕೆ ಪ್ರತಿಷ್ಠೆ ಲಭಿಸಬಹುದು. ಅದರಲ್ಲಿರುವ ಜೀವಂತಿಕೆಯಲ್ಲಿ ಬೆಳವಣಿಗೆಯಾಗ ಬಹುದು ಮತ್ತು ಸ್ವಂತದ ಸೀಮಿತ ಕಕ್ಷೆಯಲ್ಲಿ ಜಾನಪದ ಕಲೆಯು ಬೆಳೆದಾಗ, ಹಾಗೆಯೇ ಶೋಧ, ಬೋಧನೆ ಹಾಗೂ ಹಾಸ್ಯ ಈ ಮೂರು ಕಕ್ಷೆಗೆ ನಿಜವಾದ ಕಲೆ ಎಂದು ಪ್ರತಿಷ್ಠೆ ಸಿಗಬಹುದು. ಈ ಕಲೆಯ ಪ್ರತಿಷ್ಠೆಯ ದಿನವು ಬೇಗ ಉದಯಿಸಲಿ ಎಂದು ನಿಮ್ಮೆಲ್ಲರಂತೆ ನಾನೂ ಹಾರೈಸುತ್ತೇನೆ.

ಮಹಾರಾಷ್ಟ್ರ ತಮಾಶಾ ಸಮ್ಮೇಳನ, ಪುಣೆ
೩ನೇ ಅಧಿವೇಶನ, ೧೭ ಆಗಸ್ಟ್ ೧೯೫೭

* * * *

೧೭. ನನ್ನ ನಿಲುವು
(ತುರ್ತು ಪರಿಸ್ಥಿತಿ ಹಾಗೂ ಸಮ್ಮೇಳನದ ಕುರಿತು)

[ಮರಾಠಿ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೆ ಮಂತ್ರಿಗಳಿರಬಾರದು ಎನ್ನುವುದು ದುರ್ಗಾ ಭಾಗವತರ ನಿಲುವು ಆಗಿತ್ತು. ಕರಾಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತಾಡುವಾಗ ಲೇಖಕನ ಆದ್ಯ ಕರ್ತವ್ಯವನ್ನು ನೆರವೇರಿಸಲು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅವಶ್ಯಕತೆ ಬಗೆಗೆ ಹೇಳಲು (ಸ್ವಾಗತಾಧ್ಯಕ್ಷರಾದ ಯಶವಂತ ಚವ್ಹಾಣರನ್ನು ನಿರ್ಲಕ್ಷಿಸಿ) ಮಂತ್ರಿಗಳ ಹಾಜರಾತಿಯನ್ನು ನಿರ್ಲಕ್ಷಿಸಿ ಅವರು ಭಾಷಣ ಮಾಡಲು ಆರಂಭಿಸಿದರು. ಮುಂದಿನ (೧೯೭೭) ಸಾಹಿತ್ಯ ಸಮ್ಮೇಳನಕ್ಕೆ ಮಂತ್ರಿಗಳು ವೇದಿಕೆಯಲ್ಲಿರುವುದಾದರೆ ತಾನು ಬರುವದಿಲ್ಲ ಎಂಬ ನಿಲುವನ್ನು ತಾಳಿಯೂ ಹೊಸ ಅಧ್ಯಕ್ಷನಿಗೆ ಅಧ್ಯಕ್ಷ ಪದದ ಸೂತ್ರವನ್ನು ವಹಿಸಿಕೊಡುವ ಜವಾಬ್ದಾರಿಯನ್ನು ನಿರ್ವಹಿಸಲು ಅವರು ವೇದಿಕೆಗೆ ಬಂದರು. ಈ ಮೊದಲು ದುರ್ಗಾಬಾಯಿಯ ನಿಲುವಿನ ಬಗೆಗೆ ವಾದ ನಡೆಯಿತು. ಅವರು ಬರುವದಿಲ್ಲ ಎಂಬ ಸುದ್ದಿ ಹರಡಿತು. ಆ ಸಂದರ್ಭದಲ್ಲಿ ತಮ್ಮ ನಿಲುವನ್ನು ಪ್ರಸ್ತುತ ನಿವೇದನೆಯ ಮೂಲಕ ಬಹಿರಂಗವಾಗಿ ವ್ಯಕ್ತಮಾಡಿದರು.]

ಸಮ್ಮೇಳನದಲ್ಲಿ ನಾನು ಹಾಜರಿರಬೇಕೆ ಬೇಡವೆ ಎಂಬ ಬಗೆಗೆ ಸ್ವಾಗತ ಸಮಿತಿಯವರು ತಾವೇ ಚರ್ಚಿಸಿ ನಿರ್ಧರಿಸಿದ ಹಾಗಿದೆ. ಏಕೆಂದರೆ ೪ ನವೆಂಬರ್ ಲೋಕಸತ್ತಾ ಪತ್ರಿಕೆಯಲ್ಲಿ ಗ. ಲ. ಠೋಕಳ ಅವರ ಮಾತನ್ನು ಪ್ರಕಟಿಸಲಾಗಿದೆ; ಶ್ರೀಮತಿ ಭಾಗವತರು ಸಮ್ಮೇಳನಕ್ಕೆ ಬರುವ ಭರವಸೆಯಿದೆ. ಅವರು ಬರದಿದ್ದರೆ ಅದು ಅವರಿಚ್ಛೆ.

ಒಂದೆಡೆ ನಾನು ಆಮಂತ್ರಣವನ್ನು ಸ್ವೀಕರಿಸಿದ್ದೇನೆ ಎಂದು ಹೇಳುವುದು ಮತ್ತು ಮತ್ತೊಂದೆಡೆ ನಾನು ಬರದಿದ್ದರೂ ಏನೂ ಹಾನಿಯಿಲ್ಲ ಎಂದು ಸೂಚಿಸುವದು. ಸ್ವಾಗತ ಅಧ್ಯಕ್ಷರ ಸ್ವಾಗತ ಮಾಡುವ ಪದ್ಧತಿಯು ಗಮನಾರ್ಹವಾಗಿದೆ.

ಅಂದರೆ ಧಾರಿಯಾ ಹೋದ ನಂತರ ನಾನು ಸಮ್ಮೇಳನಕ್ಕೆ ಹಾಜರಾದೆ ಮತ್ತು ತುರ್ತು ಪರಿಸ್ಥಿತಿಯಲ್ಲಿ ಇಂದಿರಾಬಾಯಿಯೊಂದಿಗೆ ಹೊಂದಿಕೊಳ್ಳುವ ಶಶಿಕಲಾ ಅವರು ಬಂದರೆ ವಿಪರೀತದಲ್ಲಿ ಹಾಜರಾಗುವ ಪ್ರಸಂಗ ನನಗೆ

ನಿರ್ಮಿಸುವರು ಮತ್ತು ಇನ್ನೊಂದೆಡೆ ತಾವು ಆಮಂತ್ರಣ ನೀಡಿದ್ದೇವೆ ಎಂದು ಬೊಬ್ಬೆ ಹೊಡೆಯುವರು. ವಾಸ್ತವಿಕವಾಗಿ ಇಂಥ ಉದ್ಧಟ ವರ್ತನೆಯನ್ನು ಸ್ವಾಗತ ಅಧ್ಯಕ್ಷರು ನೀಡಿದ ಬಳಿಕ ಯಾವ ಸ್ವಾಭಿಮಾನಿ ವ್ಯಕ್ತಿಯೂ ಅಲ್ಲಿಗೆ ಹೋಗಲಾರ. ಆದರೆ ಕಳೆದ ವರ್ಷ ಸಹ ಯಶವಂತರಾವ ಹಾಜರಿದ್ದು ವಿಪರೀತ ಪರಿಸ್ಥಿತಿಯಲ್ಲಿ ನಾನು ಹೋದೆ. ಏಕೆಂದರೆ ಲೇಖಕನಾಗಿ ನಾನು ಜನರಿಗೆ ಬದ್ಧನಾಗಿದ್ದೇನೆ. ವೈಯಕ್ತಿಕ ಮಾನಾಪಮಾನವನ್ನು ಲೆಕ್ಕಿಸದೆ ನಾನು ನನ್ನ ಕರ್ತವ್ಯ ಮಾಡಿ ಮುಗಿಸಬೇಕಿತ್ತು. ಈ ಸಲವೂ ನಾನಿಲ್ಲಿಗೆ ಬಂದಿರುವುದು ಜನರೆದುರಿಗೆ ಸಾಹಿತಿಯ ಕರ್ತವ್ಯದ ಇಂದಿನ ಸಂದರ್ಭದ ಅರಿವನ್ನು ಮಂಡಿಸಲೆಂದೇ. ಸ್ವಾಗತ ಸಮಿತಿಯ ಯಾವುದೇ ಸನ್ಮಾನವನ್ನು ಸ್ವೀಕರಿಸುವ ಬಯಕೆ ನನಗಿಲ್ಲ. ಲೇಖಕಿಯಾಗಿ ನಾನು ಜನರ ಲೀನ ಸೇವಕಿಯಾಗಿದ್ದೇನೆ. ಈ ಪಾಠವನ್ನು ನಮಗೆ ಮಹಾತ್ಮ ಗಾಂಧಿಯವರು ಕಲಿಸಿದರು.

ಹಾಗಾದರೆ ಯಶವಂತರಾವ ಸ್ವಾಗತಾಧ್ಯಕ್ಷರಾಗಿದ್ದಾಗ ನಾನೇಕೆ ಬಂದೆ? ಎಂಬ ಪ್ರಶ್ನೆಯನ್ನು ಹಲವರು ನನಗೆ ಕೇಳುತ್ತಾರೆ. ಆದರೆ ಆಗಿನ ಪರಿಸ್ಥಿತಿ ಬೇರೆಯಾಗಿತ್ತು. ಜನರು ಒಂದೆಡೆ ಬರುವುದು ಸಾಧ್ಯವಿರಲಿಲ್ಲ. ವಾಕ್ ಸ್ವಾತಂತ್ರ್ಯವಿರಲಿಲ್ಲ. ಎಲ್ಲೂ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಿತ್ತು. ಆ ಅಮಾನುಷ ಸತ್ತೆಯ ಅಹಂಕಾರಕ್ಕೆ ಸವಾಲು ಹಾಕುವ ಅಗತ್ಯವಿತ್ತು. ಅದು ಲೇಖಕನ ಆದ್ಯ ಕರ್ತವ್ಯವಾಗಿತ್ತು. ಮಂತ್ರಿಯ ಹಾಜರಾತಿಯನ್ನು ನಿರ್ಲಕ್ಷಿಸಿ ಮಹಾ ಜನಸಮುದಾಯದ ಸಮ್ಮುಖದಲ್ಲಿ ಮಾನವನ ಹಕ್ಕಿನ ಹಾಗೂ ಲೇಖಕನ ಸ್ವಾಭಿಮಾನದ ಬಗೆಗೆ ಹೇಳುವ ಅಗತ್ಯವಿತ್ತು. ಅದು ಲೇಖಕನ ಕರ್ತವ್ಯವಾಗಿತ್ತು. ನಾನದನ್ನು ಮಾಡಿ ಮುಗಿಸಿದ್ದೇನೋ ಇಲ್ಲವೋ ಎಂಬುದನ್ನು ನೀವೆ ನೋಡಿ.

ಮಂತ್ರಿಯು ಸಾಹಿತ್ಯ ಸಮ್ಮೇಳನದ ಅಧಿಕಾರಿ ವ್ಯಕ್ತಿಯಾಗಿ, ಸ್ವಾಗತಾಧ್ಯಕ್ಷನಾಗಿ ಅಥವಾ ಉದ್ಘಾಟಕನಾಗಿ ಇರಬಾರದು ಎನ್ನುವುದು ನನ್ನ ಅಭಿಪ್ರಾಯವಾಗಿತ್ತು. ಪುಣೆಯ ನಗರವಾಚನ ಮಂದಿರದ ಅಧ್ಯಕ್ಷರು ಈ ಸಮ್ಮೇಳನಕ್ಕೆ ಸಂಬಂಧಿಸಿದಂತೆ ನನ್ನದೇನಾದರೂ ಸೂಚನೆಯಿದ್ದರೆ ತಿಳಿಸಬೇಕೆಂದು ಬಹಿರಂಗ ಸಭೆಯಲ್ಲಿ ಹೇಳಿದಾಗ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದೆ. ಈ ಕಾರಣದಿಂದಾಗಿಯೇ ನಾನು ಧಾರಿಯಾ ಅವರು ಸ್ವಾಗತಾಧ್ಯಕ್ಷರಾಗುವುದನ್ನು ವಿರೋಧಿಸಿದೆ. ಧಾರಿಯಾ ಅವರ ಪ್ರಚಾರ ಸಭೆಯಲ್ಲಿ ನಾನು ಭಾಗವಹಿಸಿದ್ದೇನೆ. ಅವರ ಬಗೆಗೆ ಗೌರವ ಮತ್ತು ಆತ್ಮೀಯತೆಯಿರುವುದರಿಂದಲೇ ನಾನು ಈ ಸೂಚನೆ ಮಾಡಿದ್ದು.

ನಾನು ಸಮ್ಮೇಳನಕ್ಕೆ ಹೋಗಬಾರದೆಂದು ನಾನೆಂದೂ ನಿರ್ಧರಿಸಿರಲಿಲ್ಲ. ಈ ಸಮ್ಮೇಳನದಲ್ಲಿ ನನ್ನ ಕರ್ತವ್ಯವೇನೆಂದರೆ ಹಿಂದಿನ ಅಧ್ಯಕ್ಷರು ನೀಡಿದ ಸೂತ್ರವನ್ನು ಮುಂದಿನ ಅಧ್ಯಕ್ಷರಿಗೆ ಒಪ್ಪಿಸುವುದು. ಹಾಗೆ ಇದು ಔಪಚಾರಿಕವಾದುದು. ಹಾಗೆಯೇ

ಹಿಂದಿನ ಧ್ಯೇಯ ಧೋರಣೆಯು ಹೊಸ ಅಧ್ಯಕ್ಷರು ಮುಂದಕ್ಕೊಯ್ಯುವ ಒಂದು ವ್ಯವಸ್ಥೆಯೂ ಆಗಿದೆ. ಹೊಸ ಅಧ್ಯಕ್ಷನು ಹಳೆಯ ಅಧ್ಯಕ್ಷನು ನೀಡಿದ ಅಧ್ಯಕ್ಷ ಪದದ ಜವಾಬ್ದಾರಿಯನ್ನು ಅವನು ತಾನಾಗಿಯೇ ಸ್ವೀಕರಿಸುತ್ತಾನೆ, ಅದರಲ್ಲಿ ಆಯ್ಕೆಗೆ ಅಥವಾ ಬೇರೆ ಯಾವುದಕ್ಕೂ ಅವಕಾಶವಿರುವುದಿಲ್ಲ.

ಆದ್ದರಿಂದ ನಾನಿಂದು ಹೇಳುವ ಮಾತು ಸಾಹಿತಿಗಳಿಗೆ ಸಂಬಂಧಿಸಿದ್ದು. ನೀವೆಲ್ಲ ನನ್ನ ಬಂಧು-ಭಗಿನಿಯರು ಕಿರಿಯ ಲೇಖಕರು ಮಕ್ಕಳಿದ್ದಂತೆ ಮುಕ್ತ ಮನದಿಂದ ಹೇಳಬೇಕೆಂಬ ಕಾರಣಕ್ಕಾಗೇ ಇಲ್ಲಿಗೆ ಆಗಮಿಸಿದ್ದೇನೆ.

ಕಳೆದ ಎರಡು ವರ್ಷಗಳಿಂದ ನಡೆದ ಘಟನಾವಳಿಗಳನ್ನು ಗಮನಿಸಿದರೆ, ಲೇಖಕನಾದವನು ತನ್ನ ಸಂಸ್ಥೆ ಮತ್ತು ಕಾರ್ಯಕ್ರಮವನ್ನು ರಾಜ್ಯವನ್ನು ಹೊರುವವರಿಂದ ದೂರ ನಿರ್ಲಿಪ್ತವಾಗಿರಿಸುವ ಪರಿಸ್ಥಿತಿಯು ನಿರ್ಮಾಣಗೊಂಡಿದೆ. ನೇರವಾಗಿ ಹೇಳಬೇಕೆಂದರೆ ರಾಜ್ಯ ಆಳುವವರ ಧ್ಯೇಯ ಧೋರಣೆ ಹಾಗೂ ಲೇಖಕನ ಧ್ಯೇಯ ಧೋರಣೆಯು ಬೇರೆ ಬೇರೆಯಾಗಿರುತ್ತದೆ. ವಿರುದ್ಧವೂ ಆಗಿರುವುದು ಸಾಧ್ಯ ಅದು ಹಾಗಿರುವದು ಸಮಾಜ ಹಿತದ್ದಾಗಿರುತ್ತದೆ ಎನ್ನುವುದನ್ನು ತುರ್ತು ಪರಿಸ್ಥಿತಿಯು ನಮಗೆ ಕಲಿಸಿತು. ಸ್ವಲ್ಪದರಲ್ಲಿ ಹೇಳಬೇಕೆಂದರೆ ಸಾಹಿತ್ಯ ಅಕಾಡೆಮಿ, ನ್ಯಾಶನಲ್ ಬುಕ್‌ಟ್ರಸ್ಟ್ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮಂಡಳಿಗಳೆಲ್ಲ ಸ್ವಾಯತ್ತ ಸಂಸ್ಥೆ ಎಂಬ ಭಾವನೆ ನಮ್ಮದಾಗಿತ್ತು. ಆದರೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಸರಕಾರದ ದೌರ್ಜನ್ಯದ ಧೋರಣೆಯನ್ನು ಸ್ವೀಕರಿಸುವ ವೃತ್ತಿಯು ಬುದ್ಧಿಜೀವಿಗಳಲ್ಲಿ ಮತ್ತು ಲೇಖಕರಲ್ಲಿ ಹಾಗೆಯೇ ಶಾಶ್ವತವಾಗುಳಿಯಿತು. ಬರವಣಿಗೆಯ ಮೇಲೆ ಹಾಕಿದ ನಿಯಂತ್ರಣವನ್ನು ನಿಷೇಧಿಸುವ ತ್ರಾಣವೇ ಈ ಸಂಸ್ಥೆಯಲ್ಲಿ ಉಳಿಯಲಿಲ್ಲ. ಸರಕಾರದ ಸತ್ತೆಯ ಮತ್ತು ಅನುದಾನದ ಮೋಹ ಅದೆಷ್ಟು ಭಯಗ್ರಸ್ತವಾಗಿರುತ್ತದೆನ್ನುವುದು ಆಗ ಸ್ಪಷ್ಟವಾಗಿ ಗೋಚರಿಸಿತು. ಆದರೂ ಧ್ವನಿ ಏಳಲಿಲ್ಲ ಎನ್ನುವದೇ ದೊಡ್ಡ ದುರಂತವಾಗಿದೆ.

ಸತ್ತೆ ಮನುಷ್ಯನನ್ನು ಭ್ರಷ್ಟಗೊಳಿಸುತ್ತದೆ. ಸತತ ಸತ್ತೆಯು ನಿಸ್ಸಂಶಯಕ್ಕೂ ಭ್ರಷ್ಟಗೊಳಿಸುತ್ತದೆ ಎಂಬ ಮಾತನ್ನು ನಾನೂ ಕೇಳಿದ್ದೆ. ಆದರೆ ಯಾರು ಎಷ್ಟೇ ಜಾಣನಾಗಿದ್ದರೂ ಪ್ರತಿಯೊಂದು ವಿಷಯದಲ್ಲಿ ಕಾಲನಿಗಿಂತ ಮೊದಲೇ ಜಾಣನಾಗುತ್ತಾನೆ ಎಂದೇನಿಲ್ಲ. ಮನುಷ್ಯ ಅನುಭವದಿಂದಲೇ ಜಾಣನಾಗುತ್ತಾನೆ. ಈ ಮೋಹ ಹೇಗೆ ಬಿತ್ತು ಎನ್ನುವುದನ್ನು ಹೇಳುತ್ತೇನೆ. ಪರಕೀಯ ಸತ್ತಾಧಾರಿಗಳೇ ಭ್ರಷ್ಟರಾಗಿರುತ್ತಾರೆ ಎಂದು ನಾವು ಭಾವಿಸಿದ್ದೆವು. ಆಂಗ್ಲ ಸತ್ತೆಯ ವಿರುದ್ಧ ಹೋರಾಡುವ, ಪ್ರಾಣವನ್ನು ಒತ್ತೆಯಿಟ್ಟು ಕಾರಾಗೃಹದ ಕಿರುಕುಳವನ್ನು ಭೋಗಿಸಿ ಕಾದು-ಹದಗೊಂಡ ಹಾಗೂ ಜನರ ನಿಜವಾದ ಪ್ರತಿನಿಧಿಗಳಾದ ನಮ್ಮ ನಾಯಕರು ಸ್ವಾತಂತ್ರ್ಯದ ಬಳಿಕ ನಮ್ಮ ಭ್ರಷ್ಟತನವನ್ನು ಹೋಗಲಾಡಿಸಬಹುದು ಮತ್ತು ನಾವು

ಲೇಖಕರಾಗಿದ್ದರಿಂದ ಅವರ ಕಾರ್ಯಕ್ರಮದಲ್ಲಿ ಅವರ ಸಾಹಿತ್ಯದಲ್ಲಿ ಸಂತೋಷದಿಂದ ಸಹಾಯ ಮಾಡಲು ಸಿದ್ಧರಾದೆವು. ಈಗ ನಮ್ಮದೇ ಧ್ಯೇಯಧೋರಣೆಯ, ಜಗತ್ತಿನ ಒಂದು ಉತ್ತಮ ಸಂವಿಧಾನವಿರುವ ಸರಕಾರ ಏನಾದರೂ ಉತ್ತಮವಾದುದ್ದನ್ನು ಮಾಡುತ್ತದೆ. ಈ ಪ್ರಯೋಗದಲ್ಲಿ ಸರಕಾರ ಮತ್ತು ಜನರು ಇವರ ಸಹಕಾರ ಸಿಕ್ಕರೆ ಪ್ರಗತಿ ಖಂಡಿತಕ್ಕೂ ಆಗುತ್ತದೆ ಎಂದುಕೊಂಡಿದ್ದೆವು.

ಆದರೆ ದುರಾದೃಷ್ಟಕ್ಕೆ ಸತ್ತೆಯ ಭ್ರಷ್ಟತೆ ಎಲ್ಲೆಡೆ ಗೋಚರಿಸಲಾರಂಭಿಸಿತು. ಒಂದೊಂದು ಸಂಸ್ಥೆಯ ಕೆಲಸ ಹೆಚ್ಚಾಗಲಾರಂಭಿಸಿದರೂ ಸಾಧನ ಶುಚಿತ್ವ ಉಳಿಯಲಿಲ್ಲ ಎಂಬ ದೃಶ್ಯವೇ ಗೋಚರಿಸಲಾರಂಭಿಸಿತು. ಪ್ರತಿಷ್ಠೆ ಬೆಳೆಯಿತು. ಸರಕಾರವು ಈ ಸಂಸ್ಥೆಗಳಿಗೆ ಹಣದ, ಅಧಿಕಾರದ ಮೋಹ ಹಾಕಿತು. ಎಷ್ಟೆಂದರೆ ಸದಸ್ಯರಿಗೆ ತಮ್ಮ ಸ್ವತ್ವಕ್ಕೆ ಬಿರುಕು ಬಿಡುವುದರ ಕಡೆಗೂ ಗಮನ ಹೋಗಲಿಲ್ಲ. ಎಲ್ಲಿ ನೋಡಿದರೂ ಸಚಿವರಿಲ್ಲದೆ ಯಾವ ಕಾರ್ಯವೂ ಆಗದು.

ಸಾಹಿತ್ಯ ಸಮ್ಮೇಳನ ಸಹ ಮಂತ್ರಿಗಳ ಪಾದದ ಧೂಳು ಹೊಡೆಯದೆ ನಡೆಯದು. ಸಾಕಷ್ಟು ಹಣ, ಸಾಕಷ್ಟು ಬಾಜಾ ಭಜಂತ್ರಿ, ಸಾಕಷ್ಟು ವೈಭವ, ಹಲವು ಸಚಿವರ ಆಗಮನ, ಅಪಾರ ಜನಸಂದಣಿ. ವೈಭವೋಪೇತವಾಗಿರುವ ನಗರದ ವಾಸ್ತು, ಪೇಶ್ವೆಯರನ್ನು ಹಿಂದಿಕ್ಕುವ ಭೋಜನ ಸಮಾರಾಧನೆ ಇದೇ ಸಮ್ಮೇಳನದ ಗೌರವದ ಸಂಕೇತವಾಯಿತು. ಹಲವು ವರ್ಷಗಳ ಕಾಲ ಸಮ್ಮೇಳನದಲ್ಲಿ ಇದೇ ಚಿತ್ರ ಗೋಚರಿಸುತ್ತಿತ್ತು. ಇದನ್ನು ಕಂಡು ನನಗೆ ಬೇಸರವಾಯಿತು. ಹೀಗಾಗಿ ನಾನು ಒಂದೆರಡು ಅಪವಾದ ಬಿಟ್ಟರೆ ಎಂದೂ ಸಾಹಿತ್ಯ ಸಮ್ಮೇಳನಕ್ಕೆ ಹೋಗಲಿಲ್ಲ. ಆದರೆ ಕರಾಡದ ಸಮ್ಮೇಳನದ ಪರಿಸ್ಥಿತಿ ಬೇರೆಯಾಗಿತ್ತು. ನಾನು ಅಧ್ಯಕ್ಷಳಾಗಿದ್ದೆ. ನನಗಾಗ ಲೇಖನ ನಿಷೇಧವನ್ನು ವಿರೋಧಿಸುವ ಸಂದೇಶ ಜನರಿಗೆ ನೀಡಬೇಕಾಗಿತ್ತು. ಸರಕಾರದ ಕೃಪೆಯಿಂದ ಸಾಹಿತಿಗಳು ನಾಚಿಕೆಗೇಡಿಗಳಾದರು. ವಿದ್ವಾಂಸರನ್ನು ಖರೀದಿಸಬಹುದೆಂಬ ದರ್ಪದಲ್ಲಿ ರಾಜಕಾರಣಿಗಳು ಮೆರೆಯಲಾರಂಭಿಸಿದರು. ಅನುದಾನ, ಸಮಿತಿಯ ಹುದ್ದೆ, ಪದ್ಮಶ್ರೀ ಮುಂತಾದ ಬಿರುದಿನಿಂದ ಶ್ರೇಷ್ಠರೆನಿಸಿದ ಸಾಹಿತಿಗಳು ನಾಚಿಕೆಗೇಡಿಗಳಾದರು. ಕೆಲವರಿಗಂತು ಇಂದಿಗೂ ತುರ್ತು ಪರಿಸ್ಥಿತಿ ಹೋಗಿ ಹೊಸ ಆಡಳಿತ ಬಂದ ಬಗೆಗೆ ದುಃಖವಾಗುತ್ತಲಿದೆ. ಅವರು ಅಸಭ್ಯ ಕವಿತೆಯನ್ನು ಬರೆಯಲಾರಂಭಿಸಿದ್ದಾರೆ (ಉದಾ: ಗ. ವಿ. ಮಾಡಗಾಳಕರ ಅವರ 'ನನ್ನ ಮೊಮ್ಮಕ್ಕಳು ಕುಣಿಯುತಲಿದ್ದಾರೆ' ಎಂಬ ಕವಿತೆ.)

'ಪಾವರ್ ಕರಪ್ಟ್ಸ್ ಎಂಡ್ ಎಬ್ಸುಲ್ಯೂಟ್ ಪಾವರ್ ಕರಪ್ಟ್ಸ್ ಎಬ್ಸೂಲ್ಯೂಟ್ಲಿ' ಎನ್ನುವದು ಅರ್ಥವಾಗಲು ಎಂತೆಂಥ ಶ್ರೇಷ್ಠರಿಗೂ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಎಷ್ಟು ಸಮಯ ಹಿಡಿಯಿತು ಎಂಬ ಬಗೆಗೆ ಒಂದು ಉದಾಹರಣೆ ನೀಡುತ್ತೇನೆ.

ಆ ಕಾಲದ ಜ್ಯೇಷ್ಠ ಇಬ್ಬರು ಐ.ಪಿ.ಎಸ್. ಅಧಿಕಾರಿಗಳು, ಒಬ್ಬ ಆಂಗ್ಲ ಮತ್ತೊಬ್ಬ ಭಾರತೀಯ ಸರ್ ಹೆನ್ರಿನೈಟ್ ಮತ್ತು ಎ. ಡಿ. ಗೋರವಾಲಾ. ಗೋರವಾಲಾ ಸ್ವಾತಂತ್ರ್ಯ ಚಳುವಳಿಯಲ್ಲಿ ಯಾವ ಭಾಗವನ್ನು ವಹಿಸಿರಲಿಲ್ಲ. ಈಗ ಸ್ವಾತಂತ್ರ್ಯಕ್ಕಾಗಿ ನೀತಿ ಮೌಲ್ಯವನ್ನು ನಿಷ್ಠೆಯಿಂದ ಪಾಲಿಸಿದ ಜನರು ಸತ್ತೆಗೆ ಬರುತ್ತಾರೆ. ಅದರಿಂದ ದೇಶಕ್ಕೆ ಒಳಿತಾಗುತ್ತದೆ ಎಂದವರಿಗನಿಸಿತು. 'ಹಾಗಾಗುವದಿಲ್ಲ. ಸತ್ತೆ ಕೈಗೆ ಬಂದರೆ ಸಾಕು, ಜನರು ಭ್ರಷ್ಟರಾಗುತ್ತಾರೆ' ಎಂದರು ನೈಟ್. ಗೋರವಾಲರು ಮೊದಲಿಗೆ ಒಪ್ಪಲಿಲ್ಲ. ಅನುಭವದ ಬಳಿಕ ಒಪ್ಪಿದರು. ಬಳಿಕ ಅವರು ಸರಕಾರದ ನೌಕರಿಗೆ ರಾಜೀನಾಮೆ ನೀಡಿ, ಪ್ರಖರ ಟೀಕೆಯ ಬರವಣಿಗೆಯನ್ನು ಆರಂಭಿಸಿದರು. ತುರ್ತು ಪರಿಸ್ಥಿತಿ ಕಾಲದಲ್ಲಿ ಒಪಿನಿಯನ್‌ದಂತಹ ಕಿರುಪತ್ರಿಕೆ ಎತ್ತಿದ ಧ್ವನಿಯನ್ನು ದೊಡ್ಡ ದೊಡ್ಡ ಪತ್ರಿಕೆಗಳಿಗೆ ಎತ್ತುವದಾಗಲಿಲ್ಲ ಎನ್ನುವುದು ಎಲ್ಲರಿಗೆ ಗೊತ್ತಿರುವ ಸಂಗತಿ. ಈ ಕಾರಣಕ್ಕಾಗೆ ನಾನು ಸಚಿವರು, ಮಂತ್ರಿಗಳು ನಮ್ಮ ಸಾಹಿತ್ಯ ಸಮ್ಮೇಳನದಲ್ಲಿರಬಾರದು ಎಂದು ಹೇಳುತ್ತಿರುವುದು. ಇಂದಿನ ಕೇಂದ್ರ ಮಂತ್ರಿಗಳನ್ನು ನಾವು ಚುನಾಯಿಸಿದ್ದೇವೆ. ಆದರೆ ಸತ್ತೆಯ ಭರವಸೆ ನೀಡುವದು ಸಾಧ್ಯವಿಲ್ಲ. ಹೀಗಿರುವಾಗ ಉತ್ತಮ ಉಪಾಯವೆಂದರೆ ಯಾರ ಕೈಯಲ್ಲಿ ರಾಜಸತ್ತೆಯಿದೆಯೊ, ಅವರನ್ನು ನಾವು ದೂರವಿರಿಸುವುದೇ ಜಾಣತನ.

ನಾನಿಗ ಸ್ವಲ್ಪ ಪುನರುಕ್ತಿ ಮಾಡಿ ಲೇಖಕನಾಗಿ ನನ್ನ ನಿಲುವನ್ನು ಮಂಡಿಸುತ್ತೇನೆ. ನಾವು ನಮ್ಮನ್ನು ಲೇಖಕರು ಎಂದು ಕರೆದುಕೊಳ್ಳುತ್ತೇವೆ. ಲೇಖಕನ ಮೊದಲ ನಿಷ್ಠೆ ರಕ್ತದೊಂದಿಗೆ ಇರಬೇಕು. ಲೇಖಕನಿಗೆ ಲೇಖಕನೆಂಬ ಗುರುತಿರುತ್ತದೆ. ಅದೊಂದು ಮಾನ್ಯತೆ, ಅದು ಜನರಿಂದ ಸಿಕ್ಕಿರುತ್ತದೆ. ನಾನು ಪುಟಗಟ್ಟಲೆ ಬರೆದರೂ ಅದು ಜನರೆದುರಿಗೆ ಬರದಿದ್ದರೆ, ಜನರು ಅದನ್ನು ಸಾಹಿತ್ಯವೆಂದು ಪರಿಗಣಿಸದಿದ್ದರೆ, ನನ್ನ ಮನಸ್ಸು ಎಷ್ಟೇ ಒಪ್ಪಿಕೊಂಡರೂ ನಾನು ಲೇಖಕನಾಗಲಾರೆ. ಅಂದರೆ ಬರವಣಿಗೆ ಎನ್ನುವುದು ಒಂದು ಬದ್ಧತೆಯಾಗಿರುತ್ತದೆ. ಯಾವ ಜನರು ನನ್ನ ಸುತ್ತಮುತ್ತ ವ್ಯವಹರಿಸುತ್ತ ಇರುತ್ತಾರೋ, ಅವರ ಜೊತೆಗಿನ ಬದ್ಧತೆಯಿದು. ಋಣಾನುಬಂಧವಿದೆ. ಈ ಬದ್ಧತೆಯನ್ನು ನಾನು, ಯೋಗ್ಯವಾದ ರೀತಿಯಲ್ಲಿ ನಿರ್ವಹಿಸಬೇಕಾದರೆ ನಾನು ಸ್ವತಂತ್ರವಾಗಿರಬೇಕಾದುದು ಅವಶ್ಯಕ.

ನನ್ನ ಸ್ವಾತಂತ್ರ್ಯವೆಂದರೆ ನನ್ನ ನಿರ್ಮಾಣಶೀಲ ದೃಷ್ಟಿಯ ಸ್ವಾತಂತ್ರ್ಯ. ನನ್ನ ಜೀವನದೃಷ್ಟಿಯ ಸ್ವಾತಂತ್ರ್ಯ.

ಲೇಖಕ ಬರೆದು ಏನು ಮಾಡುತ್ತಾನೆ? ಅವನು ಮಾಡುವ ಕೆಲಸವೇನೆಂದರೆ ಯಾವ ಸಮಾಜದಲ್ಲಿ ಅವನು ನೆಲೆಸಿರುತ್ತಾನೋ, ಆ ಸಮಾಜದ ನಿನ್ನೆ ಇಂದು ನಾಳೆಯ ನಡುವಣ ಪರಿಣಾಮವನ್ನು ಸಿದ್ಧ ಮಾಡುತ್ತಾನೆ. ಅಂದರೆ ಭೂತ ವರ್ತಮಾನ ಭವಿಷ್ಯದ ನಡುವಿನ ಪರಿಣಾಮದ ಅರಿವು ಅವನಿಗಾಗುತ್ತದೆ. ಆ

ಪರಿಣಾಮದಲ್ಲೇ ಗತಿಶೀಲದ ಸಂವೇದನೆಯಿರುತ್ತದೆ. ಆ ಪರಿಣಾಮಕ್ಕೆ ಲೇಖಕ ಶಾಬ್ದಿಕ ರೂಪ ನೀಡುತ್ತಾನೆ. ಬಳಿಕ ಅದನ್ನು ಜನರೆದುರಿಗೆ ಇಡುತ್ತಾನೆ. ಪರಿಣಾಮದ ಉದ್ವಿಗ್ನತೆಯು ಯಾರಿಗೆ ನೋಡಬೇಕೆಂದಿದೆಯೋ ಅವರದನ್ನು ನೋಡಲಿ ಎನ್ನುವದು ಅವನ ಇಚ್ಛೆ. ಈ ಕಾರ್ಯವನ್ನು ಕೆಲವು ಲೇಖಕರು ಸದ್ಯದ ಪರಿಸ್ಥಿತಿಯ ನಕಾರಾತ್ಮಕ ಚಿತ್ರಣದಿಂದ ಮಾಡಬಹುದು. ಕೆಲವರು ಸುಖೀಸಮಾಜ ಮತ್ತು ಸುಖೀ ಸಮಾಧಾನ ಹೇಗಿರಬಹುದು ಎಂದು ನಾಳೆಯ ಮನುಷ್ಯನ ಚಿತ್ರಣವನ್ನೇ ಮಾಡಬಹುದು. ಆದರೆ ಈ ಉದ್ವಿಗ್ನತೆ, ಕ್ಷೋಭೆಯನ್ನು ಅನಾವರಣಗೊಳಿಸುವುದೇ ಲೇಖಕರಾದ ನಮ್ಮೆಲ್ಲರ ಕರ್ತವ್ಯ. ನಾವದನ್ನು ನಿಷ್ಠೆಯಿಂದ ಮಾಡಬೇಕಾಗುತ್ತದೆ.

ಯಾವ ಲೇಖಕನಲ್ಲಿ ದ್ರಷ್ಟಾರತನ ಅಧಿಕವಾಗಿರುವುದೋ ಅವನದನ್ನು ಉತ್ತಮವಾದ ರೀತಿಯಲ್ಲಿ ಮಾಡಬಲ್ಲ. ಕೆಲವರ ದೃಷ್ಟಿ ಅಷ್ಟು ಸಮರ್ಥವಾಗಲಿ, ದೂರದ ದೃಷ್ಟಿಯಿಂದ ಕೂಡಿದ್ದಾಗಲಿ ಇರಲಾರದು. ಅದೇನೆ ಇದ್ದರೂ ನಿನ್ನೆ ಇಂದು ನಾಳೆಯ ನೈಸಗಿಕ ಉದ್ವಿಗ್ನತೆಯನ್ನು ಶಾಶ್ವತ ಉಳಿಸುವ ಹಾಗೂ ತನ್ನ ಶಕ್ತಿಗೆ ತಕ್ಕಂತೆ ಯಾವುದೇ ರೀತಿಯಲ್ಲಿ ಅದನ್ನು ವ್ಯಕ್ತ ಮಾಡುವದೇ ನಾನು ಲೇಖಕನ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ಲೇಖಕ ವರ್ಗವು ತುರ್ತು ಪರಿಸ್ಥಿತಿ ಕಾಲದಲ್ಲಿ ಕರ್ತವ್ಯ ಭ್ರಷ್ಟವಾಗುವಂತಹದ್ದೇನು ನಡೆಯಿತು? ಕಳೆದ ಮೂವತ್ತು ವರ್ಷಗಳಲ್ಲಿ ನಮ್ಮ ವಿಷಯದ ಬಗೆಗಿನ ಶುಭೇಚ್ಛೆಯನ್ನು ಅವಲಂಬಿಸಿ ಹೆಚ್ಚೆಚ್ಚು ಬದುಕಲು ಹವಣಿಸಿದೆವು ಎಂದು ನನಗನಿಸುತ್ತದೆ. ಇದರಿಂದಾಗಿ ಲೇಖಕನ ಮೊದಲ ಬದ್ಧತೆಯು ಸಮಾಜ ಬಾಂಧವರೊಂದಿಗಿರುತ್ತದೆ ಎಂಬುದನ್ನು ನಾವು ಮರೆತೇಹೋದೆವು. ನಮ್ಮ ಮೊದಲ ಬದ್ಧತೆಯು ನಮ್ಮ ಬೆನ್ನ ಮೇಲೆ ಕೈಯಾಡಿಸುವ ರಾಜಕಾರಣಿಗಳೊಂದಿಗಿದೆ ಎಂಬ ಭಾವನೆ ನಮ್ಮದಾಯಿತು. ಇಲ್ಲಿ ಲೇಖಕನಿಗೆ ಸಿಗುವ ಗೌರವದ ಬಿರುದಾವಳಿಗಳು, ಅಧಿಕಾರ ಗದ್ದುಗೆ, ಬೇರೆ ಬೇರೆ ಬಗೆಯ ಸುಖಸೌಲಭ್ಯವನ್ನು ನಾನಿಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ನಾನು ಕೇವಲ ರಾಜಕಾರಣಿಗಳ ಸಹಾನುಭೂತಿಯ ಬಗೆಗಷ್ಟೇ ಯೋಚಿಸುತ್ತಿದ್ದೇನೆ. ಈ ಹುಸಿ ದಿಟ ಸಹಾನುಭೂತಿಯಿಂದ ನಾವು ಅದೆಷ್ಟು ಮರುಳಾಗಿದ್ದೇವೆ ಎಂದರೆ ನಮ್ಮ ದೃಷ್ಟಿಯಿಂದ ನಾವು ಸ್ವಾತಂತ್ರ್ಯವನ್ನು ಕಳೆದುಕೊಂಡುಬಿಟ್ಟದ್ದೇವೆ. ನಮ್ಮ ದ್ರಷ್ಟಾರ ತನದ ಮೇಲೆ ವ್ಹಿಜನ್ ಮೇಲೆ ನಮ್ಮ ವೈಯಕ್ತಿಕ ಛಾಪು ಮೂಡದೇ ಅಲ್ಲಿ ರಾಜಕಾರಣಿಗಳ ದೃಷ್ಟಿಯ ಮುದ್ರೆಯು ಯಾವಾಗ ಮೂಡಿತು ಎನ್ನುವುದು ನಮಗೇ ಗೊತ್ತಾಗಲಿಲ್ಲ.

(ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನ ೧೯೭೭ಕ್ಕಿಂತ ಹಿಂದಿನ ಸ್ವತಂತ್ರ ನಿವೇದನೆ, ೧೮ ನವೆಂಬರ್, ೧೯೭೭)

೧೮. ಅನುವಾದ ಮತ್ತು ಅನುವಾದಕ

ನಾನು ಬರವಣಿಗೆಯನ್ನು ಆರಂಭಿಸಿದ್ದೇ ಅನುವಾದದಿಂದ. ಹಾಗೆಯೇ ಬರವಣಿಗೆಯ ಅಂತ್ಯ ಯೋಗ್ಯ ಕಾಲಕ್ಕೆ, ಯೋಗ್ಯ ರೀತಿಯಲ್ಲಿ ಮಾಡುವ ಬುದ್ಧಿ ನನಗಾದರೆ ಮತ್ತು ಅವಕಾಶ ಸಿಕ್ಕರೆ, ಆ ಕೊನೆಯನ್ನೂ ಸಹ ಒಂದು ಶ್ರೇಷ್ಠ ಅನುವಾದದಿಂದಲೇ ಮಾಡಿ ಮುಗಿಸಬೇಕೆಂಬ ಇಚ್ಛೆ ನನ್ನದು.

ಕಳೆದ ೨೦ ವರ್ಷಗಳಿಂದ ನಾನಾ ವಿಧದ ಅನುವಾದವನ್ನು ಮಾಡುವ ಪ್ರಯತ್ನ ನಾನು ಮಾಡಬೇಕಾಯಿತು. ಅಂಥದರಲ್ಲೂ ಬೇರೆ ಬೇರೆ ಭಾಷೆಯ ನೂರಾರು ಅನುವಾದವನ್ನು ಓದುವ, ಅಧ್ಯಯನ ಮಾಡುವ ಅವಕಾಶವೂ ನನಗೆ ಲಭಿಸಿತು. ಅನುವಾದದ ಕೃತಿಯ ಮೂಲಕ ನನ್ನ ಗಮನವು ಅನುವಾದದ ಶಾಸ್ತ್ರೀಯ ಹಾಗೂ ಕಲಾತ್ಮಕ ಮಗ್ಗಲಿನತ್ತ ಹೊರಳಿತು. ಮುಂದೆ ಮುಂದೆ ಅದರಲ್ಲಿಯ ನಿಕಷ ಹೆಚ್ಚು ಹೆಚ್ಚು ಸತಾಯಿಸಲಾರಂಭಿಸಿತು. ಅನುವಾದಕನ ವ್ಯಕ್ತಿತ್ವದ ಅರಿವೂ ನನಗಾಗಲಾರಂಭಿಸಿತು. ಯಾವುದೇ ಅನುವಾದ ಸಿಕ್ಕರೂ ಅದನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿ ಅದರಿಂದ ಏನಾದರೂ ಲಾಭವಾಗಬಹುದೇ ಎಂದು ಗಮನಿಸುವ ಹವ್ಯಾಸ ನನಗೆ ಅಂಟಿಕೊಂಡಿದೆ. ಈ ಹವ್ಯಾಸವೇ ನಾನು ಅನುವಾದ ಶಾಸ್ತ್ರವನ್ನು ಅಧ್ಯಯನ ಕೈಕೊಳ್ಳುವಂತೆ ಮಾಡಿತು. ಅಧ್ಯಯನ ಈಗಲೂ ಪ್ರಥಮಾವಸ್ಥೆಯಲ್ಲಿದೆ. ಆದರೂ ಆ ಅವಸ್ಥೆಯಲ್ಲಿಯ ಪ್ರಕ್ರಿಯೆ ಮತ್ತು ಪ್ರತಿಕ್ರಿಯೆಯು ನಮೂದಿಸುವಂತಹದು ಎಂದು ನನಗೆ ಅನಿಸುತ್ತದೆ.

ಪಾಶ್ಚಾತ್ಯ ಜಗತ್ತಿನಲ್ಲಿ ಸಿಸರೋನಿಂದ (Cicero) ಪೆಸ್ಟರ್‌ನಾಕ (Boris Pasternak)ವರೆಗೆ ಬೇರೆ ಬೇರೆ ಕಾಲಕ್ಕೆ ಮತ್ತು ವಿವಿಧ ಸಾಹಿತ್ಯಿಕ ಕ್ಷೇತ್ರದಲ್ಲಿಯ ಮುನ್ನೂರಕ್ಕಿಂತಲೂ ಹೆಚ್ಚು ಅಧಿಕಾರವಿರುವ ವ್ಯಕ್ತಿಗಳು ಅನುವಾದದ ತತ್ವದ, ನಿಕಷದ, ಸ್ವರೂಪದ ಉಪಯುಕ್ತತೆಯ, ಅಡಚಣೆಯ ಮತ್ತು ಹಲವು ವ್ಯವಹಾರಿಕ ಮಗ್ಗಲುಗಳ ತುಲನೆ ಮಾಡಿ ಅದರ ಬಗೆಗೆ ಆಗಾಗ ಬರೆದೂ ಇಟ್ಟಿದ್ದಾರೆ. ಎಷ್ಟೋ ಶತಕಗಳಿಂದ ನಮ್ಮಲ್ಲಿಯೂ ಸಂಸ್ಕೃತ ಗ್ರಂಥಗಳನ್ನು ಪ್ರಾಕೃತಕ್ಕೆ ಅನುವಾದ ಮಾಡುತ್ತಲೇ ಬಂದಿದ್ದಾರೆ. ಆದರೆ ಅಲ್ಲಿ ಅನುವಾದದ ತಂತ್ರದ ಬಗೆಗೆ ಸ್ವತಂತ್ರ ಮತ್ತು ಉದ್ದೇಶಪೂರ್ವಕ ಯೋಚನೆ ಮಾಡಲಿಲ್ಲ. ಈಗಲೂ ಮರಾಠಿಯಲ್ಲಿ ಸಾಹಿತ್ಯದ ಬಗೆಗೆ ಸಾಕಷ್ಟು ಚರ್ಚೆಯಾಗುತ್ತದೆ. ಟೀಕಾಲೇಖನಗಳೂ ಬರುತ್ತವೆ.

ಆದರೆ ಅನುವಾದದ ಬಗ್ಗೆ ಸ್ವತಂತ್ರವಾಗಿ ಪರಾಮರ್ಶೆಯನ್ನು ಕೈಕೊಳ್ಳಲು ಯಾರೂ ಮನಸ್ಸು ಮಾಡಲಿಲ್ಲ. ಅನುವಾದದ ಬಗೆಗೆ ಅಧ್ಯಯನ ಕೈಕೊಂಡು ಸ್ವತಂತ್ರವಾಗಿ ಲೇಖನ ಬರೆದದ್ದೂ ವಿರಳವೇ ಅಂದಾಗ ಗ್ರಂಥ ರಚನೆ ಮಾಡುವವರು ಯಾರು? ಹಾಗೆ ನೋಡಿದರೆ, ಆಧುನಿಕ ಸಾಹಿತ್ಯದ ಮೇಲೆ ಸಂಸ್ಕಾರವಾಗಿದ್ದೆಲ್ಲ ಆಂಗ್ಲ ಅಭಿರುಚಿಯದ್ದು ಮತ್ತು ಅಭಿವ್ಯಕ್ತಿಯದ್ದು. ಬಾಲಮಿತ್ರದಂತಹ ಹಳೆ ಪಠ್ಯಪುಸ್ತಕವೇ ಆಗಿರಲಿ, ಕೃಷ್ಣಶಾಸ್ತ್ರಿಯವರ ಅರಬಿ ಭಾಷೆಯ ರಸಭರಿತ, ಚಮತ್ಕಾರದ ಕಥೆಗಳೇ ಇರಲಿ, ಕೇಶವ ಸುತರ ಕೆಲವು ಕವಿತೆ, ಹ.ನಾ. ಆಪ್ಟೆ, ಸಿರವಾಡಕರ, ಕಾಣೇಕರ್ ಮುಂತಾದವರ ಕೃತಿಗಳೆ ಇರಲಿ ಎಲ್ಲವೂ ಆಂಗ್ಲ ಭಾಷೆಯ ಸಹಾಯವನ್ನು ಪಡೆದಿವೆ. ಶೇಕ್ಸ್‌ಪಿಯರ್, ಬರ್ಟನ್, ವರ್ಡ್ಸ್‌ವರ್ಥ್, ಮೊಲಿಯರ್ (Moliere) (ಆಂಗ್ಲದಲ್ಲಿ ಅನುವಾದಿಸಿದ್ದು), ಇಬ್ಸನ್ (ಆಂಗ್ಲ ಅನುವಾದ) ಅವರ ಕೃತಿಯಿಂದಲೇ ಇವೆಲ್ಲ ರೂಪತಾಳಿವೆ. ಪತ್ತೇದಾರಿ ಕಾದಂಬರಿಯ ಪ್ರಸಪ್ತಂತೂ ಲೆಕ್ಕವೇ ಇಲ್ಲ. ಅದರಲ್ಲಿ ಅಮೆರಿಕನ್ ಪುಸ್ತಕಗಳನ್ನು ಮೌಖಿಕವಾಗಿ ಅನುವಾದಿಸಲಾಗಿರುತ್ತದೆ. ಅದು ಬೇರೆಯೇ ಶಾಬ್ದಿಕ ಭಾಷಾಂತರ. ಅನುವಾದ, ಸ್ವೈರ ಅನುವಾದ, ರೂಪಾಂತರ, ಸ್ವೈರ ರೂಪಾಂತರ, ಈ ಎಲ್ಲ ಮೂಸೆಯಿಂದ ಈ ಸಾಮಗ್ರಿಗಳು ವಿಫುಲವಾಗಿ ಸುರಿಯಲ್ಪಡುತ್ತಿವೆ. ಇದರಿಂದಾಗಿ ಅನುವಾದದ ಅವಶ್ಯಕತೆ ಯಾರಿಗೇ ಆಗಲಿ ಒಪ್ಪಿಗೆಯಿರುವಂತಹದೇ. ಆದರೆ ಈ ಬೆಳೆಯುತ್ತಿರುವ ಅಗತ್ಯಕ್ಕೆ ತಕ್ಕಂತೆ ಅನುವಾದದ ಕಾರ್ಯವು ಕೆಲವು ಧ್ಯೇಯ–ಧೋರಣೆಯನ್ನು ಎದುರಿಗಿಟ್ಟುಕೊಂಡೇ ಮಾಡಬೇಕಾಗುತ್ತದೆ. ಅನುವಾದಕ್ಕೂ ಶಾಸ್ತ್ರೀಯ, ಕಲಾತ್ಮಕ ಹಾಗೂ ಸಾಹಿತ್ಯಕ ಮೌಲ್ಯವಿರುತ್ತದೆ. ಅದರ ಸಂರಕ್ಷಣೆಯಾಗಬೇಕು. ಈ ಅರಿವು ಮಾತ್ರ ಎಂಥೆಂಥ ದಿಗ್ಗಜರಿಗೂ ಸರಿಯಾಗಿ ಆಗಲಿಲ್ಲ. ಒಂದು ವೇಳೆ ಆಗಿದ್ದರೆ ಅವರ ಬರವಣಿಗೆಯಿಂದ ಅದು ವ್ಯಕ್ತಗೊಳ್ಳದಿರುವುದು ವಿಶೇಷ. ಇದರಿಂದಾಗಿ ಹಿಂದಿನ ಅನುವಾದಕನ ಅನುಭವದ ಲಾಭವು ಮುಂದಿನ ಅನುವಾದಕನಿಗೆ ಸಿಗುವುದಿಲ್ಲ. ಜಾಗತಿಕ ಸಾಹಿತ್ಯ, ಶಾಸ್ತ್ರ, ಕಲೆಗಳ ಸ್ವತಂತ್ರ ಸಮಗ್ರ ವಿವೇಚನೆಯನ್ನು ಮಾಡಲು ಎಲ್ಲಿಯವರೆಗೆ ನಮ್ಮ ಭಾಷೆಯು ಸಮರ್ಥವಾಗಿರುವುದಿಲ್ಲವೋ ಎಲ್ಲಿವರೆಗೆ ಸ್ವತಂತ್ರ ಯೋಚನೆಯ ಪಂಡಿತರು ಮತ್ತು ಸಾಹಿತ್ಯ ಪ್ರಭುಗಳು ವಿರಳವಾಗಿ ಸಿಗುವ ಸ್ಥಿತಿಯಿರುವುದೋ ಅಲ್ಲಿಯವರೆಗೆ ಉತ್ತಮ ಹಾಗೂ ತ್ವರಿತ ಅನುವಾದದ ಅಗತ್ಯ ನಮಗೆ ತೀರ ತೀರ ಇದೆ ಎಂಬುದನ್ನು ಮರೆಯುವಂತಿಲ್ಲ. ಯೋಗ್ಯವಾದ ರೀತಿಯ ಯೋಜನೆಯನ್ನು ಹಮ್ಮಿಕೊಂಡರೆ ಸಾಕಷ್ಟು ಅನುವಾದದ ಕಾರ್ಯವನ್ನು ಮಾಡಿ ಮುಗಿಸಬಹುದು ಎನ್ನುವುದು ಅಮೆರಿಕೆಯ ಧೋರಣೆಯಿಂದ ಸಿದ್ಧವಾಗಿದೆ.

ಶ್ರೇಷ್ಠ ಅನುವಾದ ಒಂದು ಅಪರೂಪದ ಚಮತ್ಕಾರವೆನ್ನಬಹುದು. ಕಲಾತ್ಮಕ ಸಾಧನೆಯಲ್ಲೇ ಇದು ಜನಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ. ಅಭಿಜಾತ

ಕಲಾವಿದನಂತೆ ಅಭಿಜಾತ ಅನುವಾದಕನೂ ಹುಟ್ಟಿ ಬರಬೇಕಾಗುತ್ತದೆ. ಅನುವಾದದ ಮಹತ್ವ ಓದುಗನಿಗೆ ಗೊತ್ತಿರುತ್ತದೆ. ಅದಕ್ಕಿಂತ ಅನುವಾದಕರಿಗೂ ಗೊತ್ತಿರಬೇಕು. ಗೊತ್ತಿರಲೇಬೇಕು. ಮೂಲಭಾಷೆಯ ಕೃತಿಯು ತನ್ನ ಭಾಷೆಯ ಓದುಗನಿಗೆ ಅಜ್ಞಾತವಾಗಿರುವದರಿಂದ ಅದನ್ನು ತನ್ನ ಭಾಷೆಯಲ್ಲಿ ಉಪಲಬ್ಧ ಮಾಡಿಕೊಡುವದೇ ಅನುವಾದದ ಉದ್ದೇಶ. ಈ ಉದ್ದೇಶ ಈಡೇರಬೇಕಾದರೆ ಹಲವು ಸಂಗತಿಗಳ ನೆರವು ಬೇಕಾಗುತ್ತದೆ. ಅನುವಾದ ಎಂದರೇನು, ಅದರ ಕ್ಷೇತ್ರ ಎಷ್ಟು ವ್ಯಾಪಕ ಮತ್ತು ಸ್ಥಿಮಿತವಾಗಿದೆ ನಾವು ಯಾರಿಗಾಗಿ ಏಕೆ ಅನುವಾದವನ್ನು ಮಾಡುತ್ತಿದ್ದೇವೆ ಎಂಬ ಅರಿವು ಅನುವಾದಕನಿಗೆ ಬರದ ಹೊರತು ಈ ಯಶಸ್ಸು ಪ್ರಾಪ್ತವಾಗುವುದು ಕಠಿಣ. ಸಾಮಾಜಿಕ ಅಗತ್ಯವನ್ನೇ ಗಮನಿಸುವುದಾದರೆ, ಎಲ್ಲ ಬಗೆಯ ಒಳಿತು, ಕೆಡಕು ಸಾಹಿತ್ಯ ಕೃತಿಗಳು ಸಮಾಜದ ಬೇರೆ ಬೇರೆ ಸ್ತರದವರಿಗೆ ಬೇಕಾಗುತ್ತದೆ. ತನ್ನ ಓದುವ ವರ್ಗಕ್ಕೆ ಆಯಾ ಬಗೆಯ ಅನುವಾದವನ್ನು ಪೂರೈಕೆ ಮಾಡುವುದೂ ಸಹ ಒಂದು ದೃಷ್ಟಿಯಿಂದ ಅನಿವಾರ್ಯವೇ ಆಗುತ್ತದೆ. ಅರ್ನಾಳಕರರು ಕ್ಷುದ್ರ ರೂಪಾಂತರದ ಪತ್ತೇದಾರಿ ಕಾದಂಬರಿಗಳನ್ನು ಮಣಗಟ್ಟಲೆ ಬರೆಯಲೇಬೇಕಾಗುತ್ತದೆ. ಪತ್ರಕರ್ತನಾದವನಿಗೆ ವಿದೇಶಿ ಸುದ್ದಿಯನ್ನು ಸರಸರ ಭಾಷಾಂತರಿಸದೇ ಬೇರೆ ಗತಿಯೇ ಇಲ್ಲ. ರೈಲ್ವೆಯ ಫಲಕ, ಜಾಹಿರಾತು, ವೈಜ್ಞಾನಿಕ ಸುಲಭ ಪಠ್ಯ ಇದನ್ನೆಲ್ಲ ಇಂದಿಗೇ ಮಾಡಿ ಮುಗಿಸಬೇಕಾಗುತ್ತದೆ. ಈ ವ್ಯವಹಾರಿಕ ಮುದ್ರೆಯ ಅನುವಾದದ ಕ್ಷೇತ್ರ ತುಂಬ ವ್ಯಾಪಕವಾಗಿದೆ. ಅದು ಆಳವಾಗಿರದಿದ್ದರೂ ಹಲವು ಕಡೆಗಳಲ್ಲಿ ಸುಲಭವಾಗಿರುವುದಿಲ್ಲ. ಶಾಬ್ದಿಕ ಅಡಚಣೆಯು ಮೇಲಿಂದ ಮೇಲೆ ಸತಾಯಿಸುತ್ತದೆ. ಮರಾಠಿಯ ಬಟ್ಟೆಯು ಪಾಶ್ಚಾತ್ಯ ಪರಿಭಾಷೆ ಮತ್ತು ಕಲ್ಪನೆಯನ್ನು ಸಮರ್ಥವಾಗಿ ಸಾಕಾರಗೊಳಿಸುವಲ್ಲಿ ಕುಂಠಿತವಾಗುತ್ತದೆ ಎಂಬ ಅನುಭವವು ಈ ಜುಜಬಿ ಮತ್ತು ಕಾಮಚಲಾವು (ಮಾರಲಾಗುವ) ಕ್ಷೇತ್ರದಲ್ಲೂ ಬರದೇ ಇರಲಾರದು.

ಆದರೆ ಈ ಕ್ಷೇತ್ರದ ಅನುವಾದಕ್ಕೆ ಅನುವಾದದ ಸ್ಥಾನವನ್ನು ನಾವು ನೀಡುವುದಿಲ್ಲ. ಸಾಹಿತ್ಯ ಕ್ಷೇತ್ರದಲ್ಲೇ ನಿಜವಾದ ಅನುವಾದವನ್ನು ಒರೆಗಲ್ಲಿಗೆ ಹಚ್ಚುವುದು ಸಾಧ್ಯ. ಈ ಕ್ಷೇತ್ರದ ವ್ಯಕ್ತಿಗಳೇ ಅನುವಾದದ ಸ್ವರೂಪದ ಬಗೆಗೆ ಸಮಗ್ರವಾಗಿ ಯೋಚಿಸುವ ದಿಟ್ಟತನ ತೋರಿದರೆ ಅಚ್ಚರಿಪಡಬೇಕಿಲ್ಲ. ಡಾ. ಜಾನ್ಸನ್ ಹೇಳಿದ ಅನುವಾದದ ವ್ಯಾಖ್ಯೆ ಹೀಗಿದೆ:

'ಮೂಲ ಅರ್ಥವನ್ನು ಹಾಗೇ ಇಟ್ಟು ಒಂದು ಭಾಷೆಯನ್ನು ಮತ್ತೊಂದು ಭಾಷೆಗೆ ಬದಲಾಯಿಸುವುದೇ ಅನುವಾದ.' ಇಂದಿನ ಪರಿಣತ ಅನುವಾದಕನು ಈ ವ್ಯಾಖ್ಯೆಯನ್ನು ಕಿಂಚಿತ್ ಬದಲಾಯಿಸಿ ಹೇಳಬಹುದು–'ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ತರ್ಜುಮೆ ಮಾಡುವಾಗ, ಮೂಲಾರ್ಥವನ್ನು 'ಸಾಧ್ಯವಾದ

ಮಟ್ಟಿಗೆ ಹಾಗೇ ಉಳಿಸುವ ಪ್ರಯತ್ನವನ್ನು ಮಾಡುವದು.' ಏಕೆಂದರೆ ಅನುವಾದಕನ ಅನುಭವ ಹೇಗಿರುತ್ತದೆ ಎಂದರೆ ಅನುವಾದ ಮಾಡುವಾಗ ಮೂಲದ ಏನೋ ಕಳೆದೇಹೋಗಿರುತ್ತದೆ. ಅನುವಾದ ಮಾಡುವಾಗ ಶಾಸ್ತ್ರೀಯ ಇಲ್ಲವೇ ವಸ್ತುನಿಷ್ಠ ಅನುಭವವನ್ನು ಬಯಸಿದ್ದರೆ ಅನುವಾದದಲ್ಲಿ ಕೊರತೆ ಕಡಿಮೆಯಿರುತ್ತದೆ. ಆದರೆ ಆತ್ಮನಿಷ್ಠ ಮತ್ತು ಕಲಾತ್ಮಕ ಅನುಭವವಿರುವ ಸಾಹಿತ್ಯ ಕೃತಿಯನ್ನು ಅನುವಾದ ಮಾಡುವಾಗ ಈ ಕೊರತೆಯು ಮತ್ತಷ್ಟು ತೀವ್ರ ಕಾಡುತ್ತದೆ. ಶ್ರೇಷ್ಠ ಅನುವಾದದ ಸತ್ವಪರೀಕ್ಷೆ ಹೇಗಿರುತ್ತದೆ ಎಂದರೆ, ಆ ಗ್ರಂಥ ಮೂಲದಲ್ಲಿ ಯಾವ ಉದ್ದೇಶವನ್ನು ಈಡೇರಿಸಿದೆಯೋ ಹೊಸ ಭಾಷೆಯ ಅನುವಾದದಲ್ಲೂ ಅದೇ ಈಡೇರಬೇಕಾಗುತ್ತದೆ. ಮೂಲಗ್ರಂಥದ ಭವ್ಯತೆಯ, ಸೌಂದರ್ಯದ ಮತ್ತು ಆದೇಶದ ಸಾಕ್ಷಾತ್ಕಾರವು ಅನುವಾದದಲ್ಲೂ ಆಗಬೇಕು. ಆದರೆ ಈ ಧ್ಯೇಯವನ್ನು ಈಡೇರಿಸುವುದು ಕಷ್ಟಕರ. ಒಮ್ಮೊಮ್ಮೆ ಅನುವಾದವು ಮೂಲಕ್ಕಿಂತ ಮೇಲಾದರೂ ಏರುತ್ತದೆ ಇಲ್ಲವೇ ಕೆಳಗಾದರೂ ಇಳಿಯುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ರಿಲ್ಕೆಯದು. ಅವನು ಎಲಿಝಬೆಥ್ ಬೆರೆಟ ಬ್ರೌನಿಂಗರ ಸುನೀತವನ್ನು ಮತ್ತು ಮೈಕೆಲ್ ಎಂಜೆಲೋನ ಕವಿತೆಗಳನ್ನೂ ಅನುವಾದ ಮಾಡಿದ. ರಿಲ್ಕೆಯ ಸುನೀತವು ಮಿಸೆಸ್ ಬ್ರೌನಿಂಗ್‌ರ ಕವಿತೆಗಿಂತಲೂ ತುಂಬ ಸೊಗಸಾಗಿದೆ. ಆದರೆ ಮೈಕೆಲ್ ಏಂಜೆಲನ ವಿಷಯದಲ್ಲಿ ಅವನ ಅನುವಾದ ಕುಂಠಿತಗೊಂಡಿತು. ಮೂಲ ಕಾವ್ಯದ ಪ್ರತಿಭೆಯ ಭವ್ಯತೆಯನ್ನು ಅವನಿಂದ ಉಳಿಸಿಕೊಳ್ಳುವುದಾಗಲಿಲ್ಲ. ಫಿಟ್ ಝಿರಾಲ್ಡನು ಉಮರ್ ಖಯ್ಯಾಂನ ರುಬಾಯತ್‌ಗಳಿಗೆ ಅಪ್ರತಿಮ ಸೌಂದರ್ಯವನ್ನು ಇಂಗ್ಲೀಷಿನಲ್ಲಿ ಪ್ರಾಪ್ತ ಮಾಡಿಕೊಟ್ಟ, ಆದರೆ ಆ ಅಲಂಕಾರ ಅದರ ಸ್ವಂತದ್ದಲ್ಲ. ಅನುವಾದದಲ್ಲಿ ಅವನು ಸ್ವಂತದ್ದನ್ನು ಎರಕ ಹೊಯ್ದ. ಆದರೂ ಫಿಟ್‌ಝಿರಾಲ್ಡನು ಒಬ್ಬ ಹೊಣೆಗೇಡಿ ಅನುವಾದಕನಾಗಿರಲಿಲ್ಲ. ಪೌರ್ವಾತ್ಯ ಕಾವ್ಯ ಸಂಕೇತವನ್ನು ಯಥಾವತ್ತಾಗಿ ಪಾಶ್ಚಾತ್ಯ ಭಾಷೆಯಲ್ಲಿ ತರುವ ಹಲವು ಅಡಚಣೆ ಅವನಿಗೆ ಗೊತ್ತಿತ್ತು. ಭಾಷಾಂತರದಲ್ಲಿ ಮೂಲದ ಸಾಕಷ್ಟು ತೊಟ್ಟಿಕ್ಕಿ ಹೋಗಿರುವ ಅರಿವು ಅವನಿಗಿತ್ತು. ಹೀಗಾಗಿ ಅವನು ಅನುವಾದದ ವಿಷಯದಲ್ಲಿ ಅವನು ಹೇಳಿದ್ದು ಇಷ್ಟೇ 'ಸತ್ತ ಗರುಡಕ್ಕಿಂತ ಜೀವಂತ ಗುಬ್ಬಿ ಒಳಿತು, ಮೃತ ಸಿಂಹಕ್ಕಿಂತ ಜೀವಂತ ನಾಯಿ ಒಳಿತು.'

ಅವನ ಹೇಳಿಕೆಯ ಹಿಂದೆ ತುಂಬ ದೊಡ್ಡ ಆಶಯವಿದೆ. ಹಳೆಯ ಶ್ರೇಷ್ಠ ಸಾಹಿತ್ಯ ಮೊದಲೇ ಕಾಲಕ್ರಮದಂತೆ ನಮ್ಮಿಂದ ಕಣ್ಮರೆಯಾಗಿರುತ್ತದೆ. ಅದರಲ್ಲೂ ಪರಕೀಯ ಭಾಷೆಯೆಂದಾಗ ಎಷ್ಟು ಜನರಿಗೆ ಅರ್ಥವಾಗುತ್ತದೆ; ಅಲ್ಲಿಯ ಶ್ರೇಷ್ಠ ಸಾಹಿತ್ಯ ಕೃತಿಯು ಕನಿಷ್ಠಜ್ಞಾನವು ಕೊನೇಪಕ್ಷ ಅಭಿಜಾತ ರಸಿಕರಿಗೆ, ಅಧ್ಯಯನಕಾರರಿಗಾದರೂ ಸಿಗಬೇಕು. ಈ ಅವಕಾಶವನ್ನು ಮಾಡಿಕೊಡುವದು

ಈ ಅನುವಾದಕನ ಕೆಲಸ. ಆ ಕೃತಿಯ ಅಲ್ಪಸ್ವಲ್ಪ ಜ್ಞಾನವು ಸಂಪೂರ್ಣ ಅಜ್ಞಾನಕ್ಕಿಂತ ಉತ್ತಮ. ಗಯಟೆ ಕಾರ್ಲೈಲ್‌ನಿಗೆ ಪತ್ರ ಬರೆದ, ಅಲ್ಲಿ ಅನುವಾದದ ಬಗೆಗೆ ಹೀಗೆ ಹೇಳಿದ್ದಾನೆ 'ಅನುವಾದದ ಅಪೂರ್ಣತೆಯ ಬಗೆಗೆ ನೀವು ಬೇಕಾದುದು ಹೇಳಿ, ಜಗತ್ತಿನ ವ್ಯವಹಾರದ ಸಮಗ್ರ ಸಂಪಾದನೆಯ ವಿಷಯದಲ್ಲಿ ಅದರ ಮಹತ್ವ ಅನನ್ಯ ಸಾಧಾರಣವಾದುದು, ಅಮೂಲ್ಯವಾದುದು.' ಅನುವಾದವನ್ನು ಮಾಡಲೇಬಾರದು ಅಷ್ಟೇ ಅಲ್ಲ, ಅದು ಸಾಧ್ಯವಾಗಿರುತ್ತದೆ ಎಂದೆನ್ನುವವರೂ ಸಹ ಕಳಕಳಿಯ ಸಾಹಿತ್ಯೋಪಾಸಕರಾಗಿರುತ್ತಾರೆ. ಕಾವ್ಯದ ವಿಷಯದಲ್ಲಂತೂ ಅವರು ಖಚಿತವಾಗಿ ಅನುವಾದದ ಬಗೆಗೆ ಅಸಮಾಧಾನ ವ್ಯಕ್ತಮಾಡಿದರು. ಡಾ. ಜಾನ್ಸನ್‌ನು 'ಕಾವ್ಯದ ಅನುವಾದ ಮಾಡುವುದು ಸಾಧ್ಯವೇ ಇಲ್ಲ' ಎಂದು ಹೇಳಿದ್ದಾನೆ. ವಿಕ್ಟರ್ ಹ್ಯೂಗೋ ಕೆರಳಿ ಹೇಳುತ್ತಾನೆ. 'ಕಾವ್ಯಮಯ ಅನುವಾದ ಸಾಧ್ಯವೇ ಇಲ್ಲ. ಮಾಡಿದರೆ ಮೂರ್ಖತನದ ದ್ಯೋತಕವಾಗುತ್ತದೆ.' ಆದರೂ ಈ ಗಂಡಾಂತರವನ್ನು ಅರಿತೂ ಕೂಡ, ಎಲ್ಲ ಸೂಚನೆ ಆಲಿಸಿಯೂ ಸಹ ಗದ್ಯದಷ್ಟೇ ಅಲ್ಲ, ಕಾವ್ಯದ ಅನುವಾದ ಸಹ ಸಹಜವಾಗಿ ಮಾಡಲಾಗುತ್ತಿದೆ. ಮತ್ತದು ಆಗಲೇಬೇಕು. ಅದರ ಒಳಿತು ಕೆಡಕಿನ ಮುದ್ರೆ ಸಾಹಿತ್ಯದ ಮೇಲೆ ಬೀಳುವಂತಹದೇ ಅನುವಾದದ ವ್ಯಾಖ್ಯೆ ಮತ್ತು ಅದರ ಕಕ್ಷೆಯನ್ನು ಚರ್ಚಿಸುವಾಗ ಅನುವಾದದ ಪಾತ್ರವನ್ನು ಗಮನಿಸಬೇಕಾಗುತ್ತದೆ. ಕಾಫ್ಕಾನ ಕೃತಿಯ ಅನುವಾದಕರಾದ ಮ್ಯೂರ್ ದಂಪತಿಗಳಂತೆ ಹಲವು ವಿದ್ವಾಂಸರು 'ಅನುವಾದ ಒಂದು ಕಲೆಯಾಗಿದೆ. ಆದರದು ಎರಡನೇ ದರ್ಜೆಯ ಕಲೆ' ಎಂದೆನ್ನುತ್ತಾರೆ.

ಈ ಕಲೆಯು ಭಾಷ್ಯಾತ್ಮಕವಾಗಿರುತ್ತದೆ. ಮೂಲ ಕೃತಿಯ ಸ್ಪಷ್ಟೀಕರಣವನ್ನು ಈ ಕಲೆಯು ಬಯಸುತ್ತದೆ. ಆದರೆ ಈ ಕಲೆಯ ವಿಷಯದಲ್ಲಿ ಒಂದು ದೊಡ್ಡ ವಿರೋಧಾಭಾಸ ಕಂಡುಬರುತ್ತದೆ. ಅದು ಹೀಗಿದೆ. ಅನುವಾದಕನು ಕೇವಲ ಭಾಷ್ಯವನ್ನು ಆಡುವ ಕಲಾವಿದನಾಗಿದ್ದರೂ ಅವನ ಮಾಧ್ಯಮ ಹೇಗಿರುತ್ತದೆ ಎಂದರೆ ಅದರಲ್ಲಿ ಅವನು ಮೂಲ ಲೇಖಕನೊಂದಿಗೆ ಏಕರೂಪವಾಗಬೇಕಾಗುತ್ತದೆ, ಮತ್ತು ಪ್ರತ್ಯೇಕವಾಗಿಯೂ ಇರಬೇಕಾಗುತ್ತದೆ. ಮೂಲ ಭಾಷೆಯ ಪರಿಚಯವನ್ನು ವಾಚಕನಿಗೆ ಸ್ವಂತ ಭಾಷೆಯಲ್ಲಿ ಮಾಡಿಕೊಡುವಾಗ ಅವನು ಈ ವಿಶಿಷ್ಟ ಅವಸ್ಥೆಯಲ್ಲಿ ಹಾದು ಹೋಗಬೇಕಾಗುತ್ತದೆ. ಅಷ್ಟೇ ಅಲ್ಲ ಮೂಲ ಲೇಖಕನೊಂದಿಗೆ ಮತ್ತು ಓದುಗನೊಂದಿಗೂ ಪ್ರಾಮಾಣಿಕವಾಗಿರಬೇಕಾಗುತ್ತದೆ. ಅನುವಾದದಲ್ಲಿ ಪ್ರಾಮಾಣಿಕತೆ ಮತ್ತು ಓದಿಸಿಕೊಂಡು ಹೋಗುವ ಗುಣ ಎರಡೂ ಪ್ರಾಮುಖ್ಯವಾಗಿರಬೇಕು. ಒಟ್ಟಿನಲ್ಲಿ ಏಕನಿಷ್ಠ ಪ್ರೇಮಿಯ ಪಾತ್ರವನ್ನು ಮೂಲ ಲೇಖಕನ ವಿಷಯದಲ್ಲಿ ನಿರ್ವಹಿಸಬೇಕಾಗುತ್ತದೆ. ಇಷ್ಟಾದರೂ ಅವನ ಸ್ಥಾನವು ಸದಾಕಾಲ ಸ್ವತಂತ್ರ ಲೇಖಕನಕ್ಕಿಂತ ಕೆಳಗೇ ಇರುವುದು ನಿರ್ಧಾರಿತವಾದುದು. ಒಬ್ಬ ಅರಿಸ್ಟಾಟಲ್ ಕಾಳಿದಾಸ ಇಲ್ಲವೇ ಕೋಲ್‌ರಿಜ್ ಇನ್ನೂ ಅನುವಾದಕರಲ್ಲಿ ಹುಟ್ಟಿ ಬರಲಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ನೂರಿನ್ನೂರು ವರ್ಷಗಳಲ್ಲಿ ಮೂಲ ಲೇಖಕನಿಗೆ ನಿಷ್ಠೆಯನ್ನು ತೋರಿಸಿರುವುದು ಕಂಡುಬರುತ್ತದೆ. ಮ್ಯೂರ್‌ನು ಕಾಫ್ಕಾನ ಹೊರತು ಉಳಿದವರನ್ನು ಸ್ಪರ್ಶಿಸುವುದೂ ಇಲ್ಲ. ಮುಖ್ಯವಾಗಿ ಥಾಮಸ್ ಮ್ಯಾನ್‌ನ ಅನುವಾದಕನಾಗಿ ಲೋನೆ-ಪೋರ್ಟರ್‌ನ್ನು ಆಗಿರುತ್ತಾನೆ. ಶೇಕ್ಸ್‌ಪಿಯರ್, ಟಾಲ್‌ಸ್ಟಾಯ್, ದೊಸ್ತೋವಸ್ಕಿ, ರಿಲ್ಕೆ, ಲೋರ್ಕಾ, ಇವರೆಲ್ಲರ ಅನುವಾದಕರು ಹೀಗೆಯೇ ವ್ರತನಿಷ್ಠರಾಗಿದ್ದಾರೆ. ಈ ನಿಷ್ಠೆಯು ನಮ್ಮಲ್ಲಿ ಅವತರಿಸಿದ್ದು ಕಂಡು ಬರುವುದಿಲ್ಲ. ಒಬ್ಬ ಸಮರ್ಥ ಲೇಖಕನನ್ನು ಸಂಪೂರ್ಣವಾಗಿ ಅನುವಾದಿಸುವ ಶಕ್ತಿ ಮತ್ತು ಧೈರ್ಯ ನಮ್ಮಲ್ಲಿ ಈವರೆಗೂ ಕಂಡುಬರುವದಿಲ್ಲ.

ಅನುವಾದಕನು ಮೂರು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಮೊದಲನೆಯದು ಸ್ವಂತ ಭಾಷೆಯ ಮೇಲಿನ ಪ್ರಭುತ್ವ ಎರಡನೆಯದು ಅವನ ಮೇಲಿನ ಸಂಸ್ಕಾರವು ವಿಶಾಲವಾಗಿರಬೇಕು ಮತ್ತು ಸಾಮಾನ್ಯ ಸಂಸ್ಕೃತಿಯ ಅವನ ಗ್ರಹಿಕೆಯು ಚೆನ್ನಾಗಿರಬೇಕು. ಮೂರನೆಯದು ಯಾವ ಭಾಷೆಯನ್ನು ಅವನು ಅನುವಾದಿಸಲು ಬಯಸುವನೋ ಆ ಪರಕೀಯ ಸಮಾಜ ಜೀವನದ ಹಾಗೂ ಸಂಸ್ಕೃತಿಯ ಪರಿಚಯ ಅವನಿಗಿರಬೇಕು. ಅಂದಾಗಲೇ ಅನುವಾದವು ಅನುಕೃತಿಯೆನಿಸದೇ ಒಂದು ಸ್ವತಂತ್ರ ಕೃತಿಯಾಗಿದೆ ಎಂಬ ಭಾವನೆಯು ಓದುಗನಿಗೆ ಬರುತ್ತದೆ.

ಅನುವಾದಕನ ಹಾದಿಯಲ್ಲಿಯ ಅಡ್ಡಿ ಹಾಗೂ ದೋಷ ಹೀಗಿದೆ– ಮೂಲ ಲೇಖಕ ಮತ್ತು ಅನುವಾದಕ ಇವರ ದೃಷ್ಟಿಕೋನದಲ್ಲಿರುವ ಮೂಲಭೂತ ಭೇದ. ಅನುವಾದಕನ ಭಾಷೆಯ ಶಾಬ್ದಿಕ ಸಂಪತ್ತಿನಲ್ಲಿರುವ ದೌರ್ಬಲ್ಯ ಮತ್ತು ಸಂಕುಚಿತತೆ, ಅಜ್ಞಾನ ಇಲ್ಲವೇ ಹಿಂಜರಿಕೆಯಿಂದ ಮಾಡಿದ ತಪ್ಪು, ಅಜಾಗ್ರತೆಯಿಂದ ಉಳಿದುಕೊಂಡ ದೋಷ ಮತ್ತು ಬೇಕೆಂದೇ ಮಾಡಿದ ವಿಪರ್ಯಾಸ.

ಜಾರ್ಜ್ ಮೆನೆನ್ ಮಾಡಿದ ಅನುವಾದ ಬಗೆಗಿನ ವಿಶ್ಲೇಷಣೆಯು ಉದ್ಬೋಧಕವಾಗಿದೆ. ಅವನು ಹೇಳಿದ್ದು ಹೀಗೆ: ಅನುವಾದ ಒಂದು ಗಾಜಿನಂತಿದ್ದು. ಆ ಗಾಜಿನ ಮೂಲಕ ನಾವು ಮೂಲ ಕಲಾಕೃತಿಯನ್ನು ನೋಡುತ್ತೇವೆ. ಈ ಗಾಜು ಸ್ವಚ್ಛ ಬಣ್ಣದ್ದು ಇಲ್ಲವೇ ಭಗ್ನಗೊಂಡಿರುವ ಸಾಧ್ಯತೆಯಿದೆ. ಗೋಗೊಲ್ ಸಹ ಇದೇ ಉಪಮೆಯನ್ನು ನೀಡಿದ್ದಾನೆ. ಈ ಗಾಜು ಸ್ವಚ್ಛವಾಗಿದ್ದರೆ ಓದುಗರಿಗೆ ಗಾಜಿನ ಭಾವನೆಯೇ ಆಗುವುದಿಲ್ಲ. ಆದರೆ ಪ್ರತ್ಯಕ್ಷದಲ್ಲಿ ಇಂಥ ನಿರ್ಮಲ, ನಿರ್ದೋಷ, ಪಾರದರ್ಶಕ ಗಾಜು ಸಿಗುವುದು ಕಷ್ಟಸಾಧ್ಯ. ಆ ಗಾಜಿನ ಮೇಲೆ ಗೀರು ಬಿದ್ದಿರುತ್ತದೆ. ತೀರ ಶುಭ್ರವಾಗಿರುವ ಗಾಜಿನಲ್ಲೂ ಸಹ ವಕ್ರೀಭವನದ ದರ್ಶಕ ಇದ್ದೇ ಇರುತ್ತದೆ. ಅಂದರೆ ಕಿಂಚಿತ್ ವಕ್ರತನ ಅನುವಾದದಲ್ಲೂ ಅನಿವಾರ್ಯವಾಗಿ ಬರುತ್ತದೆ. ಮೂಲ ಲೇಖನದಲ್ಲಿ ಅದ್ಭುತ ರಮ್ಯತೆ, ವಿಕೃತಿಯಿದ್ದರೆ

ಅದರ ಸಾಂಸ್ಕೃತಿಕ ಹಿನ್ನೆಲೆ ನಮಗಿಂತಲೂ ತೀರ ದೂರದಲ್ಲಿದ್ದರೆ, ಅದರ ಅರಿವು ಓದುಗನಿಗೆ ತಂದುಕೊಡಲು ಬಣ್ಣದ ಗಾಜಿನ ಅನುವಾದ ಉಪಯೋಗಕ್ಕೆ ಬರುತ್ತದೆ. ಮೂಲ ಲೇಖನ ತೀರ ಪ್ರಾಚೀನ ಕಾಲದ್ದಾಗಿದ್ದರೆ ಬಣ್ಣ ಗಾಜಿನ ಇಲ್ಲವೇ ಹಿಗ್ಗಿಸಿ, ವರ್ಣಿಸಿ ಬರೆದ ಅನುವಾದದ ಉಪಯೋಗವಾಗುತ್ತದೆ. ಆನಿಬೆರ್ಘುಂಟ್‌ರು ಸಾಂಗ್ ಸಿಲೇಸಿಯಲ್ ಎಂಬ ಗೀತೆಯ ಅನುವಾದ ಮಾಡುವಾಗ ಇದೇ ಪದ್ಧತಿಯನ್ನು ಬಳಸಿದ್ದಾರೆ. ಕಾಲೇಲಕರರು ಜಾತಕ ಕಥೆಗಳ ಭಾಷಾಂತರವನ್ನು ಹೀಗೇ ಮಾಡಿದ್ದಾರೆ. ಈ ಭಾಷಾಂತರ ಸಡಿಲಾಗಿದ್ದರೂ ಮೂಲದ ವಾತಾವರಣದ ಅರಿವನ್ನು ತಂದುಕೊಡಲು ಓದುಗನಿಗೆ ಸಹಾಯ ಮಾಡುತ್ತವೆ.

ಅನುವಾದಕನು ಮೂರು ಸಂಗತಿಗಳ ಬಗೆಗೆ ಜಾಗೃತಿ ವಹಿಸಬೇಕು. ಮೂಲ ಲೇಖನದಲ್ಲಿಯ ಸಂಪೂರ್ಣ ಕಲ್ಪನೆಯು ಯಥಾವತ್ತಾಗಿ ಅನುವಾದದಲ್ಲಿ ಮೂಡಿಬರಬೇಕು. ಅನುವಾದದ ಶೈಲಿ ಮತ್ತು ಲೇಖನ ಅಭಿವ್ಯಕ್ತಿ ಕ್ರಮವು ಮೂಲ ಲೇಖನದಂತೆಯೇ ಇರಬೇಕು. ಮೂಲದ ಸಹಜತೆಯು ಅನುವಾದದಲ್ಲಿ ಬಂದಿರಬೇಕು.

ಇದನ್ನೆಲ್ಲ ಪ್ರತ್ಯಕ್ಷದಲ್ಲಿ ತರುವಾಗ ಲೇಖಕನಿಗೆ ಬರುವ ಅಡಚಣೆಯೆಂದರೆ ಭಾಷಿಕ ಪ್ರತೀಕ ಮತ್ತು ಸಂಕೇತಗಳದ್ದು. ಆ ಹೊಸ್ತಿಲಲ್ಲೇ ಪ್ರತಿಯೊಬ್ಬ ಅನುವಾದಕ ಮುಗ್ಗರಿಸುತ್ತಾನೆ. ಪ್ರತೀಕ ಮತ್ತು ಸಂಕೇತಗಳನ್ನು ಸರಿಯಾಗಿ ತರುವಾಗ ಯಾವ ಪ್ರಮಾಣದಲ್ಲಿ ಸಿದ್ಧಿ ಮತ್ತು ಗತಿಯಿರುವುದೋ ಆ ಪ್ರಮಾಣದಲ್ಲಿ ಅನುವಾದ ಯಶಸ್ವಿಯಾಗುತ್ತದೆ. ಏಕೆಂದರೆ ಭಾಷೆಯು ವ್ಯವಸ್ಥಿತವಾಗಿ ರಚಿಸಿದ ಮೌಖಿಕ ಮತ್ತು ಶ್ರುತ ಪ್ರತೀಕಗಳ ಸಮೂಹದಿಂದ ರೂಪಗೊಂಡಿರುತ್ತದೆ. ಪ್ರತೀಕಗಳ ವಿಷಯದಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ ಪ್ರತೀಕಗಳು ಸಂದರ್ಭವನ್ನು ಆಧರಿಸಿರುತ್ತದೆ. ಮೂಲ ಸಂದರ್ಭದಲ್ಲಿಯ ಕಲ್ಪನೆಯ ಮತ್ತು ಪ್ರತೀಕದ ಸಂಬಂಧವು ಜಾರಿಕೆಯದಾಗಿರುತ್ತದೆ. ಈ ಅರೆಸ್ಫುಟ ಸಂಬಂಧವು ಮೂಡುವುದು ಕಷ್ಟಕರವಾಗಿರುತ್ತದೆ. ಪ್ರತೀಕದ ಮೂಲ ಸಂಕೇತದೊಂದಿಗೆ ಹೊಂದಿರುವ ಸಂಬಂಧವನ್ನು ವ್ಯಕ್ತಮಾಡುವ ಪ್ರತೀಕಗಳು ತೀರ ಕಡಿಮೆ. ಹೀಗಾಗಿ ಒಂದು ಕಾಲದ ಪ್ರತೀಕವು ಮುಂದಿನ ಕಾಲದಲ್ಲಿ ಅರ್ಥವಾಗುವುದಿಲ್ಲ. ಭಾಷಿಕ ಪ್ರತೀಕದಿಂದ ಬರುವ ಅನುಭವದ ಸ್ವರೂಪವು ಸಂದಿಗ್ಧವಾಗಿರುತ್ತದೆ. ಅದೂ ಅಲ್ಲದೆ ಯಾವುದೇ ಎರಡು ಭಾಷೆಗಳ ಪ್ರತೀಕ ಮತ್ತು ಸಂಕೇತಗಳು ಒಂದೇ ರೀತಿಯಾಗಿರುವುದಿಲ್ಲ. ಪ್ರಾಚೀನ ಕೃತಿಗಳ ಅನುವಾದ ಮಾಡುವಾಗ ಈ ಸಮಸ್ಯೆ ತುಂಬ ಕಾಡುತ್ತದೆ. ಪರಸಂಸ್ಕೃತಿಯ ಭಾಷೆಗಳ ಅನುವಾದದಲ್ಲೂ ಇದು ಸತತವಾಗಿ ಅರಿವಾಗುತ್ತದೆ.

ಇಂಥ ಕಠಿಣ ಪರಿಸ್ಥಿತಿಯಲ್ಲಿ ಪ್ರಾಮಾಣಿಕ ಅನುವಾದಕನು ಅನುವಾದದ

ತತ್ವಗಳ ಬಗೆಗೆ ಯೋಚಿಸಲಾರಂಭಿಸಿದಾಗ ಅವನ ಎದುರಿಗೆ ಉಲ್ಲಟ-ಪಲ್ಲಟ ತತ್ವಗಳು ಗೋಚರಿಸಲಾರಂಭಿಸುತ್ತವೆ. ಅದು ಹೀಗಿದೆ:

ಅನುವಾದದಲ್ಲಿ ಮೂಲ ಲೇಖನದ ಪದಗಳು ಬಂದಿರಬೇಕು, ಕಲ್ಪನೆಯೂ ಬಂದಿರಬೇಕು. ಅನುವಾದ ಓದುವಾಗ ಮೂಲ ಕೃತಿಯಂತೆ ಅನಿಸಿರಬೇಕು. ಅನುವಾದದಲ್ಲಿ ಮೂಲ ಲೇಖನದ ಶೈಲಿ ಬಂದಿರಬೇಕು, ಹಾಗೆಯೇ ಅನುವಾದಕನ ಶೈಲಿಯೂ ಬಂದಿರಬೇಕು. ಅನುವಾದವನ್ನು ಓದುವಾಗ ಅದು ಮೂಲಕೃತಿಯ ಸಮಕಾಲೀನ ಎನಿಸಿರಬೇಕು. ಹಾಗೆಯೇ ಅನುವಾದಕನ ಸಮಕಾಲೀನವೂ ಆಗಿರಬೇಕು. ಅನುವಾದಕನು ಮೂಲದ ಕೆಲವನ್ನು ಕೈಬಿಟ್ಟಿರಬೇಕು, ತನ್ನದನ್ನು ಸೇರಿಸಬೇಕು. ಅನುವಾದದಲ್ಲಿ ಮೂಲದ ಏನನ್ನೂ ಬಿಡಬಾರದು, ಹೆಚ್ಚಿನದೇನನ್ನು ಸೇರಿಸಬಾರದು, ಗದ್ಯದ ಅನುವಾದ ಗದ್ಯದಲ್ಲಿ, ಪದ್ಯದ ಅನುವಾದ ಪದ್ಯದಲ್ಲೇ ಇರಬೇಕು.

ಈ ಹತ್ತಾರು ಬಗೆಯ ಅನುವಾದದ ಅಪೇಕ್ಷೆಯನ್ನು ಈಡೇರಿಸುವದು ಯಾವ ಅನುವಾದಕರಲ್ಲಿಯೂ ಸಾಧ್ಯವಿಲ್ಲ. ಹಾಗೆ ಮಾಡಿದರೆ ಅವನ ಅನುವಾದ ಆದರ್ಶವಂತೂ ಆಗುವುದೇ ಇಲ್ಲ. ಆದರದು ದುರ್ಬಲವೂ ಹುಸಿಯೂ ಆಗಬಲ್ಲದು. ಅವನು ಈ ತತ್ವದ ಮೂಲಕ ತನ್ನ ಸಾಮರ್ಥ್ಯ ಮತ್ತು ಉದ್ದೇಶಕ್ಕೆ ತಕ್ಕಂತೆ ಆಯ್ಕೆ ಮಾಡಬೇಕಾಗಿರುತ್ತದೆ. ಖ್ಯಾತ ಸೌಂದರ್ಯಶಾಸ್ತ್ರಜ್ಞನಾದ ಕ್ರೋಶೆಯು ಇದರ ಬಗೆಗೆ ಹೇಳಿಯೇ ಇದ್ದಾನೆ. 'ಪ್ರಾಮಾಣಿಕ ಆದರೆ ಕುರೂಪಿ ಮತ್ತು ಸುಂದರ ಆದರೆ ಕೃತಘ್ನ.' ಈ ನಾಣ್ಣುಡಿಯನ್ನು ಅನುವಾದಕ್ಕೆ ಹೋಲಿಸಿ ಹೇಳಿದ್ದಾನೆ. ನಂಬಿಕೆ ಮತ್ತು ಸೌಂದರ್ಯವನ್ನು ಮೇಳೈಸುವುದು ಅನುವಾದದಲ್ಲಿ ತೀರ ಜಟಿಲವಾದ ಕೆಲಸ. ಜಾತಿವಂತ ಅನುವಾದಕನು ಈ ಎರಡಕ್ಕಾಗಿ ಟೊಂಕ ಕಟ್ಟಲೇಬೇಕಾಗುತ್ತದೆ.

ಅನುವಾದ ಮಾಡುವಾಗ ಪ್ರತೀಕ, ಹೆಸರು ಮತ್ತು ಇತರ ಹಲವು ಸಾಮಾಜಿಕ ಸಂದರ್ಭಗಳನ್ನು ಬದಲಾಯಿಸಿದ್ದು ಕಂಡುಬರುತ್ತದೆ. ೧೮ನೇ ಶತಮಾನದಲ್ಲಿ ವಿಲಿಯಂ ಜೋನ್ಸ್ ಸಂಸ್ಕೃತ ಗ್ರಂಥವನ್ನು ಅನುವಾದಿಸಿದ. ಅವನದನ್ನು ಭಾರತೀಯ ಇಲ್ಲವೇ ಸಂಸ್ಕೃತದ ಸಂಕೇತದಂತೆ ಮಾಡಲಿಲ್ಲ. ಅವನ ಕಾಲದ ಗ್ರೇ ಮತ್ತು ಕಾಲಿನ್ಸ್‌ರು ನಿರ್ಮಿಸಿದ ಸಾಹಿತ್ಯಿಕ ಪರಂಪರೆಗೆ ತಕ್ಕಂತೆ ಮಾಡಿದ. ಆ ಕಾಲದ ಅವನ ವಾಚಕರಿಗೆ ಅವನ ಭಾಷೆ ಮತ್ತು ಪರಂಪರೆಯು ಕರಗತವಾಗಿತ್ತು. ಆ ಭಾಷೆಯನ್ನು ಅವನು ಬಳಸದೆ ಇದ್ದಿದ್ದರೆ ಗಯಟೆಯಂತಹ ಮಹಾಕವಿಯೂ ಸಹ 'ಶಾಕುಂತಲೆ'ಯನ್ನು ಹಾಡಿ ಹೊಗಳುತ್ತಿರಲಿಲ್ಲ. ೧೯ನೇ ಶತಮಾನದಲ್ಲೇ ಪಾಶ್ಚಾತ್ಯ ಚಿಂತಕರಿಗೆ, ಅನುವಾದದಲ್ಲಿ ಮೂಲಕೃತಿಯ ರಸವಷ್ಟೇ ಅಲ್ಲ, ಜೀವಂತ ವಾತಾವರಣವೇ ಇಳಿದು ಬರಬೇಕು.

ಈವರೆಗೆ ಅನುವಾದ ಮತ್ತು ಅನುವಾದಕ ಇವರ ಬಗೆಗೆ ಮಾಡಿದ ಚರ್ಚೆಯು ಸರ್ವಸಾಮಾನ್ಯ ಹಾಗೂ ತಾತ್ವಿಕ ಸ್ವರೂಪದ್ದಾಗಿತ್ತು. ಈ ಚರ್ಚೆಗೆ ಮರಾಠಿ ಅನುವಾದ ಮತ್ತು ಅನುವಾದಕರ ಸದ್ಯ ಸ್ಥಿತಿಯ ವಿಚಾರವನ್ನು ಹೇಳದೆ ಹೋದರೆ, ಈ ಲೇಖನವು ಕೇವಲ ಸಂಕಲನಪರವೇ ಆದೀತು. ಮತ್ತು ಅನುವಾದಕನ ಧೋರಣೆಯ ಬಗೆಗೆ ನನಗೇನು ಹೇಳಬೇಕಾಗಿದೆಯೋ ಅದು ಹಾಗೇ ಉಳಿದುಬಿಡಬಹುದು. ಹೀಗಾಗಿ ಈ ಕೆಳಗೆ ಅಂಥವುಗಳ ಬಗೆಗೆ ಚರ್ಚಿಸಿದ್ದೇನೆ. ಇದು ಮರಾಠಿ ಅನುವಾದದ ಪಟ್ಟಿಯಲ್ಲ, ಕೇವಲ ನಿರ್ದೇಶನ. ಮರಾಠಿಯಲ್ಲಿ ಅನುವಾದ ಸಾಹಿತ್ಯದ ಬಗೆಗೆ ವಿವರವಾಗಿ ಸಮಾಲೋಚನೆಯಾಗಬೇಕಾಗಿದೆ. ಅದರೆ ಇದು ಒಬ್ಬ ವ್ಯಕ್ತಿಯ ಕಾರ್ಯವಲ್ಲ. ಬೇರೆ ಬೇರೆ ಭಾಷೆ ಬಲ್ಲ ವಿವಿಧ ಪರಿಣತ ವ್ಯಕ್ತಿಗಳ ಒಂದೊಂದೇ ವಿಭಾಗದ ಬಗೆಗೆ ಪರಾಮರ್ಶೆ ಕೈಗೊಳ್ಳಬೇಕು. ಆ ವಿಷಯದ ಬಗೆಗೆ ವಿಚಾರ ಸಂಕಿರಣ ನಡೆಯಬೇಕು. ಅಂದಾಗಲೇ ಅನುವಾದದ ಧೋರಣೆಗೆ ಸುಸೂತ್ರತೆ ಬರಬಹುದು ಮತ್ತು ಆ ಕ್ಷೇತ್ರದಲ್ಲಿಯ ಕಳೆ ಕಡಿಮೆಯಾಗಬಹುದು.

ಒಬ್ಬ ಗ್ರಂಥಕಾರನ ಸಮಗ್ರ ಕೃತಿಗಳನ್ನು ಭಾಷಾಂತರಿಸುವ ದಿಟ್ಟತನ ನಮ್ಮ ಅನುವಾದಕರಲ್ಲಿನ್ನೂ ಬರಲಿಲ್ಲವೆಂದು ಹೇಳಿದ್ದು ಪ್ರಾಮುಖ್ಯವಾಗಿ ಪಾಶ್ಚಾತ್ಯ ಕೃತಿಗಳನ್ನು ಉದ್ದೇಶಿಸಿ, ವರೇಕರರು ಮಾಡಿದ ಶರದ ಬಾಬುಗಳ ಕೃತಿಯ ಅನುವಾದ, ಕಾ. ಭಿ. ಜೋಶಿಯವರು ತೋರಿಸಿದ ಕೃಷ್ಣಚಂದ, ಹಿಂದೆ ವಾ. ಗೋ. ಆಪ್ಟೆ ಅನುವಾದಿಸಿದ ಬಂಕಿಮಚಂದ್ರರು ನನ್ನ ನೆನಪಿನಲ್ಲಿದ್ದಾರೆ. ಶ್ರೀಪಾದ ಜೋಶಿ ಹಾಗೂ ಸೇತು ಮಾಧವರಾವ ಪಗಡಿಯವರು ಉರ್ದು ಕವಿಗಳ ಪರಿಚಯ ಮಾಡಿಕೊಟ್ಟರು. ಕಾಕಾಕಾಲೇಲಕರ, ಆಚಾರ್ಯ ಭಾಗವತ, ಶ್ರೀಕಾಂತ ಗೋಗಟೆಯವರು ಟಾಗೋರರ ಅನುವಾದವನ್ನು ನೀಡುತ್ತಲೇ ಇರುತ್ತಾರೆ. ಮುಂದೆ ವಿಚಾರವಂತರು ಈ ಕೃತಿಗಳ ಯೋಗ್ಯ ವಿಮರ್ಶೆಯನ್ನು ಕೈಕೊಳ್ಳಬಹುದು. ಆದಾಗ್ಯೂ ಭಾರತೀಯ ಭಾಷೆಗಳಲ್ಲಿಯ ಪರಸ್ಪರಾನುವಾದದ ಕ್ಷೇತ್ರವು ತೀರ ಸಂಕುಚಿತವೂ ಕ್ಷೀಣವೂ ಆಗಿರುವುದರಲ್ಲಿ ಎರಡು ಮಾತಿಲ್ಲ. ವಿಶೇಷವಾಗಿ ದಕ್ಷಿಣದ ಸಾಹಿತ್ಯದ ಜ್ಞಾನ ನಿಜಕ್ಕೂ ನಮಗಿಲ್ಲ. ತೆಲುಗು ಜನರು ಖಾಂಡೇಕರರ ಅನುವಾದವನ್ನು ಮಾಡಿದರು. ಆದರೂ ಮರಾಠಿಯಲ್ಲಿ ಶ್ರೇಷ್ಠ ತೆಲುಗು ಸಾಹಿತ್ಯ ಬಂದಿಲ್ಲವೆಂದವರು ಅಸಮಾಧಾನಿಯಾಗಿದ್ದಾರೆ. ಕಾರಂತರು ಕನ್ನಡದಷ್ಟೇ ಅಲ್ಲ ಒಬ್ಬ ಶ್ರೇಷ್ಠ ಪ್ರತಿಭಾವಂತ ಲೇಖಕರು. ಆದರೆ ಅವರ ಕೃತಿಗಳೂ ಸಹ ಮರಾಠಿಗೆ ಬರಲಿಲ್ಲ. ಅಂತರ ಭಾರತಿ ಚಳವಳಿಯಿಂದಾಗಿ ಇಂಥ ಶ್ರೇಷ್ಠ ಲೇಖಕರ ಕಿಂಚಿತ್ ಆದರೂ ಪರಿಚಯವಾಗುತ್ತದೆ ಎಂಬುದು ನಿಜ. ಆದರೆ ಪ್ರಚಾರದಲ್ಲೇನೋ ಕೊರತೆ ಇದ್ದಂತಿದೆ. ಆದರೆ ನಿರ್ದಿಷ್ಟ ಧೋರಣೆಯನ್ನು ಎದುರಿಗಿರಿಸಿಕೊಂಡು

ಯಾವುದೋ ಒಬ್ಬ ಲೇಖಕನನ್ನು ಸ್ತುತಿ ಮಾಡಲಾಗುತ್ತದೆ. ಅವರಿಂದ ಆ ಲೇಖಕನ ಸಮಗ್ರ ಸಾಹಿತ್ಯ ಓದುವ ಹಸಿವು ಜನರಿಗಾಗುವುದಿಲ್ಲ. ಎಲ್ಲಿವರೆಗೆ ಅನುವಾದಕನು ಸ್ವಯಂಸ್ಫೂರ್ತಿಯಿಂದ ಪರಭಾಷಿಕ ಲೇಖಕನನ್ನು ಆಯ್ಕೆ ಮಾಡಿ, ಅವನ ಸಮಗ್ರ ಕೃತಿಯನ್ನು ಜೀವ ಪಣಕ್ಕಿಟ್ಟು ನೀಡಲು ಸಿದ್ಧವಾಗುವುದಿಲ್ಲವೋ ಅಲ್ಲಿವರೆಗೆ ಈ ಸ್ಥಿತಿ ಬದಲಾಗಲಾರದು. ತುಣುಕು ಉತ್ತೇಜನೆಯಿಂದ ಸಾಹಿತ್ಯ ತಾಳಿಯುಳಿಯಲಾರದು ಎನ್ನುವದು ಮರಾಠಿಯಲ್ಲಿ ಸ್ವಾಗತಿಸಲಾದ ಅಮೆರಿಕೆಯ ಕೃತಿಗಳಿಂದ ಸಿದ್ಧವಾಗಿದೆ.

ಇಂದಿನ ಮರಾಠಿಯಲ್ಲಿಯ ರೂಪಾಂತರದ ಅಗ್ಗದ ಫಸಲಿನ ಬಗೆಗೆ ನನ್ನ ತಕರಾರಿದೆ. ಅದರಿಂದ ಶ್ರೇಷ್ಠ ಕೃತಿಗಳು ಮೂಲೆಗುಂಪಾಗುತ್ತವೆ. ಉದಾಹರಣೆಗಾಗಿ ನಾಟಕವನ್ನೇ ನೋಡಬಹುದು. ಎಲ್ಲಕ್ಕಿಂತ ದೊಡ್ಡ ಬಲಿಯೆಂದರೆ ಶೇಕ್ಸ್‌ಪಿಯರ್, ಇಬ್ಸನ್ ಬಳಿಕ ಮೋಲಿಯರ್, ವೈಲ್ಡ್, ಗೋಗೋಲ್, ಪ್ರಿಸ್ಲೆ ಮತ್ತು ಇತರರು. ಶಾ ಜಾಣನಾಗಿದ್ದರಿಂದ ತನ್ನ ಪುಸ್ತಕಗಳನ್ನು ಅನುವಾದ ಮಾಡಲು ಭಾರತೀಯ ಲೇಖಕರಿಗೆ ಬೃಹತ್ ಮೊತ್ತ ಹಾಗೂ ಇತರ ಕರಾರು ಹಾಕಿ ನಿಷೇಧ ಹಾಕಿದ.

ಈ ಜನರ ಒದ್ದಾಟವನ್ನು ಎಷ್ಟೆಂದು ಹೇಳಲಿ? ಆಗರಕರನಿಂದ ನಾನಾ ಜೋಗ್‌ವರೆಗೆ ಹಲವರು ಶೇಕ್ಸ್‌ಪಿಯರ್‌ನ ಮೇಲೆ ಸೇಡು ತೀರಿಸಿಕೊಂಡರು. ಅವನ ನಾಕಟದ ಅನುವಾದವಲ್ಲ. ರೂಪಾಂತರ ಮಾಡಿ ಹೆಮ್ಲೆಟನನ್ನು ಚಂದ್ರಕಾಂತನೋ ಚಂದ್ರಹಾಸನನ್ನೋ ಮಾಡಿಬಿಟ್ಟರೆ ಡೆನ್ಮಾರ್ಕದ ರಾಜಪುತ್ರನು ಹೆಸರಿಗೂ ಉಳಿಯಲಿಲ್ಲ. ಯಾವುದೋ ಕಲ್ಪನಾ ವಿಶ್ವದ ಯಾವ ಬಣ್ಣವನ್ನೂ ಸರಿಯಾಗಿ ಮೂಡಿಸದ, ಯಾವುದೇ ಸಮಾಜದಲ್ಲಿ ಸರಿಯಾಗಿ ಬೇರು ಬಿಡದ, ಯಾವುದೇ ಕಾಲದೊಂದಿಗೆ ಪ್ರಾಮಾಣಿಕವಾಗಿರದ, ವಾತಾವರಣದ ಭೂತವು ರಂಗಭೂಮಿಯ ಮೇಲೆ ಕುಣಿಯಲು ಆರಂಭಿಸುತ್ತದೆ. ಅದನ್ನೂ ಮನರಂಜನೆಯ ಹಪಾಪಿಗೊಳಗಾದ, ನಮ್ಮ ಉಪವಾಸಿ, ಅಜ್ಞ ಮನಗಳು ಆಕೃತಿಯಲ್ಲೂ ರಸಾನಂದ ಪಡೆದು ಅರಗಿಸಿಕೊಳ್ಳುತ್ತಾರೆ. ಹಿಂದೆ ನಿಂತುಕೊಂಡು ಬಾಲಕ ಅಶ್ವತ್ಥಾಮನ ಹಿಟ್ಟಿನ ನೀರು ಕುಡಿದು 'ನಾನು ಹಾಲು ಕುಡಿದೆ' ಎಂದು ಹೇಳುತ್ತಲೇ ಇರುತ್ತಾನೆ. ಹೆಮ್ಲೆಟ್ ಚಂದ್ರಕಾಂತನಾದನೆಂದರೆ ಶೇಕ್ಸ್‌ಪಿಯರ್‌ನೊಂದಿಗಿನ ಸಂಬಂಧ ಕಡಿಯುತ್ತದೆ. ಕೇವಲ ಕಥಾವಸ್ತುವಿನ ಮೇಲೆ ರೂಪಾಂತರಕಾರನು ತನ್ನ ಕೃತಿಯನ್ನು ಉಳಿಸುತ್ತಾನೆ. 'ಸಂಶಯ ಕಲ್ಲೋಳ,' 'ಎಲ್ಲರೂ ಸಜ್ಜನರು', 'ಅಮಲ್ದಾರ', 'ಗಾಳಿಪಟದ ದಾರ,' ರಂಗಭೂಮಿಯ ಮೇಲೆ ಯಶಸ್ವಿಯಾಗುತ್ತದೆ. ಆದರೆ ಅದರಲ್ಲಿ ನಮಗೆ ಮೂಲ ನಾಟಕಕಾರನ ದರ್ಶನ ಸಹ ಆಗುವುದಿಲ್ಲ. ಶ್ರೇಷ್ಠ ಲೇಖಕನಾದವನು ಕೊನೆ ಪಕ್ಷ ಕಥಾವಸ್ತುವಿಗೆ ಸರಿಯಾದ ನ್ಯಾಯ ಸಿಗಬೇಕು.

ಆದರೆ ಅದರಲ್ಲೂ 'ನ ಹಿಂದೂರ್ನ್ ಯವನ' ಎಂಬ ಸ್ಥಿತಿಯು ಶಾಶ್ವತವಾಗಿ ಉಳಿದೇಬಿಡುತ್ತದೆ. ವೈಜಯಂತಿ ಶಿರವಾಡಕರರ ಕೃತಿ. ಮೂಲನಾಟಕದ ಉಚ್ಚಬಿಂದು 'ವ್ಯಭಿಚಾರ'ದ ಸುತ್ತಲೂ ಇದ್ದರೂ, ಮೆಟರ್‌ಲಿಂಕನ ನಾಟಕದ ವಾತಾವರಣ ನಿರ್ಮಿತಿಯಲ್ಲಿಯ ನಾಜೂಕುತನ, ಅಷ್ಟೇ ಅಲ್ಲ, ಆ ನಾಟಕದ ಪ್ರಾಣಭೂತವಾದ ಸಂಕೇತವೇ ಯಾವುದೇ ಕಾಲಕ್ಕೆ ಮತ್ತು ಸ್ಥಳಕ್ಕೆ ಒಗ್ಗದ, ರಜಪೂತ ರಮಣಿಯ ಆಕ್ರಂದನದಿಂದ ತೀರ ಅತಿರೇಕ ಮತ್ತು ದೂಷಿತವಾಗಿದೆ.

ರಶಿಯಾದಲ್ಲಿ ಟಾಗೋರ, ಕಾಳಿದಾಸ ಮತ್ತು ಶೂದ್ರಕನ ನಾಟಕದ ಪ್ರಯೋಗ ನಡೆಯುತ್ತದೆ. ಆದರೆ ಭಾರತೀಯ ಹೆಸರಷ್ಟೇ ಅಲ್ಲ, ಪ್ರಸಂಗ, ಪೋಷಾಕಿಗೆ ಕಿಂಚಿತ್ತೂ ಧಕ್ಕೆ ಬರದಂತೆ ನೋಡಿಕೊಳ್ಳುತ್ತಾರೆ. ಹೀಗಿರುವಾಗ ನಾನು ಈಗಲೂ ಈ ಅಂತರ್‌ರಾಷ್ಟ್ರೀಯ ಹೆಸರುಗಳಿಗೆ, ಪ್ರಸಂಗಗಳಿಗೆ ಏಕೆ ಭಯಪಡಬೇಕು; ಯಾರೇ ಆಗಲಿ ಶೇಕ್ಸ್‌ಪಿಯರ್‌ನ ಒಂದಾದರೂ ನಾಟಕವನ್ನು ಯಥಾವತ್ತಾಗಿ ಅನುವಾದಿಸುವದಾಗಲಿ, ಅದನ್ನು ರಂಗಭೂಮಿಗೆ ತರುವುದಾಗಲಿ ಸಾಧ್ಯವಿಲ್ಲವೇ? ಇಷ್ಟವಲ್ಲವೇ?

ಯಾವ ಸ್ಥಿತಿ ನಾಕಟಗಳದ್ದೋ, ಅದೇ ಸ್ಥಿತಿ ಕಾದಂಬರಿ ಮತ್ತು ಕಾವ್ಯಗಳದ್ದು. ಭಾರತಗೌರವ ಗ್ರಂಥಮಾಲೆಯ ಭಾಷಾಂತರಗಳು ಈಗಲೂ ಚಲಾವಣೆಯಲ್ಲಿವೆ. ಆ ಛಾಪು ಇತರ ಅನುವಾದಕರಿಗೂ ಇಷ್ಟವಾಗುತ್ತದೆ. ಓದುಗರೂ ಕೊಂಡು ಕೊಳ್ಳುವುದೂ ಅಚ್ಚರಿಯೇ. ಕೇವಲ ಪಾಶ್ಚಾತ್ಯ ಕೃತಿಗಳದ್ದಷ್ಟೆ, ಅಲ್ಲ ನಮ್ಮಲ್ಲಿಯ ಕೃತಿಗಳೂ ನಾಮಾಂತರಗೊಳ್ಳುತ್ತವೆ. ರತ್ನದೀಪವನ್ನು ಹುಣ್ಣಿಮೆಯ ಚಂದ್ರನೆಂದು ಗುರ್ಜರ್ ಅವರು ಭಾಷಾಂತರ ಮಾಡಿದ್ದಾರೆ. ಅಲ್ಲಿ ಕಲ್ಕತ್ತೆ ಮುಂಬೈಯಾಗುತ್ತದೆ. ಬಂಗಾಲಿ ಹೆಸರಿನ ಬದಲಿಗೆ ಮರಾಠಿ ಹೆಸರು ನೀಡಲಾಗುತ್ತದೆ. ಗೀತಗೋವಿಂದವನ್ನು 'ಶೃಂಗಾರ ಶ್ರೀರಂಗ'ವೆಂದೂ, ಮೇಘದೂತವನ್ನು 'ಸುಶ್ಲೋಕ ಮೇಘ'ವೆಂದೂ ನಾಮಾಂತರ ಮಾಡಿದ್ದು ಸರಿಯಲ್ಲ. ಈಗಲೂ ಸದಾನಂದ ರೇಗೆಯಂತಹ ಸಮರ್ಥ ಹಾಗೂ ಪ್ರತಿಭಾವಂತ ಕಲಾವಿದನು ಇಡಿಪಸ್‌ಗಾಗಿ 'ಜಯಕೇತು' ಎಂಬ ಹೆಸರಿನ ಆಸರೆಯನ್ನು ಪಡೆಯಬೇಕಾಗಿರುವುದು ಒಳ್ಳೆಯ ಲಕ್ಷಣವಲ್ಲ. ಗ್ರೀಕ್‌ನ ಚರಿತ್ರೆ ಬೇರೆ, ತತ್ವಜ್ಞಾನ ಬೇರೆ, ಕಲಾದೃಷ್ಟಿಯೂ ಖಂಡಿತಕ್ಕೂ ಸ್ವಂತದ್ದು. ಒಂದು ಮಹಾಕಾವ್ಯದ ಅನುವಾದದ ಶುಭಗಳಿಗೆ ಬಂತು, ಅದಕ್ಕೆ ಯೋಗ್ಯ ಅನುವಾದಕನೂ ಲಭಿಸಿದ. ಆದರೆ ಪರಂಪರೆಯ ಕಲ್ಪನೆಯು ಮುತ್ತಿಕೊಂಡಿತು. ಆ ಹಳೆಯ ಪರದೆಯನ್ನು ರೇಗೆಯವರು ಏಕೆ ಕೈ ಬಿಡಬಾರದಾಗಿತ್ತು? ಇಡಿಪಸ್‌ನ ಪರಿಚಯ ನನಗಿದೆ. ಗ್ರೀಕ್ ಬಗೆಗೂ ನನಗೆ ಮೋಹವಿದೆ. ಆದರೆ 'ಜಯಕೇತು'ವನ್ನು ಹೇಗೆ ಬಳಿಗೆ ಕರೆದುಕೊಳ್ಳಲಿ? ಅವನು ಈ 'ಮುಗ್ಧ' ಧೋರಣೆಯಿಂದಾಗಿ ಪ್ರಾಯಃ ಡಾಂಭಿಕನೂ ಆಗಿಬಿಡಬಹುದು.

ಈ ಸಂಗತಿಯಿಂದ ಏನಾಗುತ್ತದೆ ಎಂದರೆ, ಅನುವಾದ ಮತ್ತು ರೂಪಾಂತರ ಇದರ ನಡುವಿನ ಸೀಮಾರೇಖೆಯೇ ಅಳಿಸಿಹೋಗುತ್ತದೆ. ಉದಾಹರಣೆಗೆ ಕೊನೆಯಿಲ್ಲ. ಬೇಕಾದಷ್ಟು ನೀಡಬಹುದು. ಒಟ್ಟಿನಲ್ಲಿ ರೂಪಾಂತರದ ಲಾಭ ಏನೇ ಇರಲಿ, ಈಗ ಅದರ ಉತ್ಪತ್ತಿಯ ನಿಯಮ ಮಾಡುವದು ಅಗತ್ಯವಾಗಿದೆ. ಎಜ್ರಾಪೌಂಡ್ ಚೀನಿ ಕವಿತೆಗಳ ಅನುವಾದ ಮಾಡಿದ. ಹಠ ಹಿಡಿದು ಮಾಡಿದ. ಸಮಸ್ಯೆಗಳನ್ನು ಎದುರಿಸಿ ಮಾಡಿದ. ಅದರಲ್ಲಿ ಕೊರತೆಯುಳಿಯಬಹುದೆಂಬ ಅರಿವಿದ್ದೂ ಮಾಡಿದ. ಅದೇ ಛಲದಿಂದ ಹೊಸ ಉಮೇದಿಯಿಂದ ಹೊಸ ಲೇಖಕರು ಶ್ರೇಷ್ಠ ವಿದೇಶಿ ಕಲಾಕೃತಿಗಳ ಅನುವಾದಕ್ಕೆ ಸಿದ್ಧರಾಗಬೇಕು. ಶೇಕ್ಸ್‌ಪಿಯರ್, ಗಯಟೆ, ಟಾಲ್‌ಸ್ಟಾಯ್, ದೊಸ್ತೋವಸ್ಕಿ ಮತ್ತು ಎಷ್ಟೋ ಶ್ರೇಷ್ಠ ಲೇಖಕರು ಹಾದಿ ಕಾಯುತ್ತ ನಿಂತಿದ್ದಾರೆ. ಅವರನ್ನು ಅತ್ಯಂತ ವಿಶ್ವಾಸಾರ್ಹದಿಂದ ಅನುವಾದ ಮಾಡುವದು ಜಗತ್ತಿನ ಪ್ರತಿಯೊಂದು ಭಾಷೆಯ ಅನುವಾದಕರ ಕಾರ್ಯವಾಗಿದೆ. ಇದು ಕಠಿಣ ಎನ್ನುವುದು ಅಷ್ಟೇ ಸತ್ಯ. ಆದರೆ ಈ ವ್ರತವನ್ನು ಸ್ವೀಕರಿಸಲು ಇದು ಯೋಗ್ಯ ಕಾಲ.

ನೋವು ಉಂಟು ಮಾಡುವ ಮತ್ತೂ ಒಂದು ಸಂಗತಿ ಏನೆಂದರೆ ಮೂಲಕೃತಿಯನ್ನು ಓದಬೇಕೆಂಬ ಜ್ಞಾನ ಕೂಡ ಅನುವಾದಕನಿಗೆ ಇರುವದಿಲ್ಲ. ಜಗತ್ತಿನ ಶ್ರೇಷ್ಠ ಕೃತಿಗಳನ್ನೆಲ್ಲ ಇಂಗ್ಲೀಷಿನಲ್ಲಿ ಭಾಷಾಂತರ ಮಾಡಲಾಗಿದೆ. ನಮ್ಮಲ್ಲಿಯ ಬಹುಜನರು ಅನುವಾದದ ಅನುವಾದ ಮಾಡುವುದರಲ್ಲಿ ಕುಶಲರು. ಮೂಲ ಭಾಷೆಯನ್ನು ಕಲಿಯುವ, ಅರಗಿಸಿಕೊಳ್ಳುವ ಹಠ ಬಹಳ ಕಡಿಮೆ. ಭಾರತ ಸರಕಾರ ಇಲ್ಲವೇ ಅಕಾಡೆಮಿಯು ಪುರಸ್ಕರಿಸಿದ ಕೆಲವು ಅನುವಾದಗಳ ಗತಿಯಿದು. ಹೋಗಲಿ, ಅನುವಾದಕನಿಗೆ ತನ್ನ ಸ್ವಂತ ಭಾಷೆಯ ಮೇಲಾದರೂ ಪ್ರಭುತ್ವವಿದೆಯೇ? ಆದರೆ ಅದರ ಅಗತ್ಯವಾದರೂ ಯಾರಿಗಿದೆ? ಅನುವಾದದ ವಿಷಯದಲ್ಲಿ ಆದರ್ಶವೆನ್ನಬಹುದಾದ ಉದಾಹರಣೆಯು ತೀರ ವಿರಳ. ಇವರಲ್ಲಿ ರಾ. ಭಿ. ಜೋಶಿ, ಮಾಧವ ಮನೋಹರ (ಪ್ರಕ್ಷಿಪ್ತ ಕಥೆಗಳ ವಿಷಯದಲ್ಲಿ), ಅಶೋಕ ಶಹಾಣೆ–ಮುಂತಾದ ಕೆಲವರ ಅನುವಾದ ಆಶಾದಾಯಕವೆನಿಸುತ್ತವೆ.

ಅನುವಾದ ಹೇಗಿರಬೇಕು ಎಂಬ ಬಗೆಗೆ ಶೀಲವತಿ ಕೇತಕರ ಅವರ ಉದಾಹರಣೆ ನೀಡಬೇಕೆಂದೆನಿಸುತ್ತದೆ. ಸುಮಾರು ಹದಿನೈದು ವರ್ಷಗಳಾಗಿರಬಹುದು. ವಯಸ್ಸು ಸುಮಾರು ಅರವತ್ತು. ಕಡು ಬಡತನದಿಂದ ಒದ್ದಾಟ. ಅಂದರೆ ಉಪವಾಸವೇ ಅನ್ನಿ. ಅಂಥ ಕಾಲಕ್ಕೆ ಫಾರಶಿ ಪಂಚಾಯತಿಯವರು ಝುರತ್ರುಷ್ಟನ ಧರ್ಮದ ಬಗೆಗಿನ ಐನೂರು ಪುಟಗಳ ಜರ್ಮನ್ ಭಾಷೆಯಲ್ಲಿರುವ ಒಂದು ವಿದ್ವತ್ಪೂರ್ಣ ಗ್ರಂಥವನ್ನು ಅನುವಾದಕ್ಕಾಗಿ ಅವರಿಗೆ ಕಳಿಸಿದರು. ವಿಂಟರ್ ನಿಟ್ಝ್‌ನ್ 'ಭಾರತೀಯ ಸಾಹಿತ್ಯದ ಇತಿಹಾಸ'ದ

ಎರಡು ಸಂಪುಟವನ್ನು ಅನುವಾದಿಸಿದ್ದರಿಂದ ಶೀಲವತಿಯವರಿಗೆ ಅನುವಾದಕರಲ್ಲಿ ಪ್ರತಿಷ್ಠೆ ಲಭಿಸಿತ್ತು. ಶೀಲವತಿಯವರು ಗ್ರಂಥ ಕೈಗೆ ಬಂದ ನಂತರ ಅದರ ಪಾರಾಯಣ ಮಾಡಿದರು. ಅದನ್ನು ಅರ್ಥ ಮಾಡಿಕೊಂಡರು. ಫಾರಶಿ ಜನರ ಬಗೆಗೆ, ಇರಾನಿಗಳ ಚರಿತ್ರೆಯ ಬಗೆಗೆ ಸಾಕಷ್ಟು ಓದಿದರು. ಪುಸ್ತಕದಲ್ಲಿರುವ ಶಕೆಗಳ ಟಿಪ್ಪಣಿಯನ್ನು ತಯಾರು ಮಾಡಿದರು. ಪರ್ಶಿಯನ್ ಮತ್ತು ಅವೆಸ್ತಾದ ಹಲವು ಪಂಡಿತರನ್ನು ಭೇಟಿಯಾದರು, ಅವರೊಂದಿಗೆ ಚರ್ಚಿಸಿದರು. ಅನಂತರ ಐನೂರು ಪುಟಗಳ ಫುಲ್‌ಸ್ಕೇಪ್ ಹಾಳೆಗಳನ್ನು ತರಿಸಿದರು. ಸಾಕಷ್ಟು ದೊಡ್ಡ ಮಾರ್ಜಿನ್ ಬಿಟ್ಟರು. ಮೂಲಗ್ರಂಥದಲ್ಲಿ ಒಂದು ಪುಟದಲ್ಲಿ ಎಷ್ಟು ಪದವೋ, ಅಷ್ಟೇ ಪದಗಳನ್ನು ತಮ್ಮ ಹಸ್ತಲಿಖಿತದಲ್ಲೂ ಬರೆದರು. ಆ ಕಾರಣಕ್ಕಾಗಿ ಹಸ್ತಾಕ್ಷರವನ್ನು ಕಿರಿದುಗೊಳಿಸಿ ಬರೆದರು. ಸಂಶಯವಿದ್ದಲ್ಲಿ ಆ ಪದವನ್ನು, ಆ ಜಾಗವನ್ನು ಖಾಲಿಬಿಟ್ಟು, ಪುಟದ ಹಿಂಬದಿಯಲ್ಲಿ ಪೆನ್ಸಿಲ್ಲಿನಿಂದ ಬರೆದರು. ಬಳಿಕ ಇಂಗ್ಲಿಷ್-ಜರ್ಮನ್ ಶಬ್ದಕೋಶವನ್ನು ಓದಿ, ಚರ್ಚಿಸಿ, ಬಳಿಕ ತಮ್ಮ ಅನುವಾದದಲ್ಲಿ ಬಳಸಿಕೊಂಡರು. ಈ ಹಸ್ತಪ್ರತಿಯನ್ನು ಕಂಡು, ನನಗೆ ಅವರ ಶಿಸ್ತಿನ ಮತ್ತು ಧೋರಣೆಯ ಬಗೆಗೆ ಬೆರಗೆನಿಸಿತು. ಇದೇ ಪ್ರಾಮಾಣಿಕತೆ, ಸ್ವಾಭಿಮಾನ, ಅನುವಾದದ ಬಗೆಗೆ ಕಳಕಳಿಯು ನಮ್ಮಲ್ಲಿ ಎಂದು ಬರುತ್ತದೆ ಎಂಬ ಯೋಚನೆಯು ನನ್ನನ್ನು ಅಂದಿನಿಂದ ಕಾಡತೊಡಗಿದೆ.

(ಸತ್ಯಕಥೆ, ದೀಪಾವಳಿ ಸಂಚಿಕೆ, ೧೯೬೦)

(ಈ ಲೇಖನವನ್ನು ಸಿದ್ಧಪಡಿಸುವಾಗ on Translation, Harward Studies in Comparative Literature, 1-23, 1959. The Art of Translation by Theodore Savory, London, 1957.

Aspects of Translation, Communication Researach Centre, University of London, 1958.

– ಈ ಗ್ರಂಥಗಳ ಹಾಗೂ ಹಲವು ಅನುವಾದಗಳ ಪ್ರಸ್ತಾವನೆಯ ಸಹಾಯ ಪಡೆದಿದ್ದೇನೆ.)

೧೯. ಗಾಂಧೀಜಿ ಮತ್ತು ಮಹಿಳೆಯರ ಪ್ರಶ್ನೆ

೧೯೩೦ರ ಕ್ರಾಂತಿಕಾರಿ ವರ್ಷ. ರಾಜಕೀಯ ಚಳವಳಿಯು ಉಲ್ಬಣಿಸಿತ್ತು. ಸ್ವತಃ ಗಾಂಧೀಜಿಯವರು ಕಾರಾಗೃಹದಲ್ಲಿದ್ದರು. ಮಹಿಳೆಯರು ಅಪಾರ ಸಂಖ್ಯೆಯಲ್ಲಿ ರಾಜಕಾರಣದಲ್ಲಿ ಭಾಗವಹಿಸಲಾರಂಬಿಸಿದರು. ಸ್ವಾತಂತ್ರ್ಯದ ತೃಷೆ ಆಗ ಹಿಂದುವಾಸಿಯರಿಗೆ ಎಷ್ಟೆಲ್ಲ ಹತ್ತಿತ್ತೆಂದರೆ ಪುರುಷ, ಮಹಿಳೆ, ಬಾಲಕ-ವೃದ್ಧ ಎಂಬ ಭಾವನೆಯೇ ಲುಪ್ತವಾಗಿತ್ತು. ಪಿಕೆಟಿಂಗ್ ಮತ್ತು ಲಾಠಿ ಹೊಡೆತದಲ್ಲಿ ಆಗ ಮಹಿಳೆಯರು ನಿಜಕ್ಕೂ ದೊಡ್ಡ ಕಾರ್ಯವನ್ನೇ ಮಾಡಿ ತೋರಿಸಿದರು. ಅನಂತರ ಯಾವುದೇ ಸಾಮಾಜಿಕ ಕಾರ್ಯದಲ್ಲಿ ಮಹಿಳೆಯರು ಸ್ತ್ರೀಯರು ಎಂಬ ಕಾರಣಕ್ಕಾಗಿ ಹಿಂದೆ ಉಳಿಯಬೇಕಾಗಿಲ್ಲ ಎಂಬ ಹೊಸ ಅರಿವು ಆ ವರ್ಷದಿಂದ ಎಲ್ಲರಿಗೂ ಮನವರಿಕೆಯಾಯಿತು.

* * * *

ಆದರೂ ಈ ಬಗೆಯ ಅರಿವು ಪ್ರಭಾವಿಯಾಗಿದ್ದರೂ ಅದು ಮೂಕವೇ ಆಗಿತ್ತು. ಅದಕ್ಕೆ ಮಹಾರಾಷ್ಟ್ರದಲ್ಲಿ ಯಾರಾದರೂ ಬಾಯಿಯಾಗಿದ್ದರೆ ಅದು ಮಹರ್ಷಿ ಅಣ್ಣಾ ಸಾಹೇಬ ಕರ್ವೆಯವರು. ಯಾರಾದರೂ ತನ್ನ ಮನೋದಯವನ್ನು ತನಗಿಂತಲೂ ಚೆನ್ನಾಗಿ ವ್ಯಕ್ತಮಾಡಿ ತೋರಿಸಬೇಕು ಮತ್ತು ಅದು ಹೇಗೆಂದರೂ ತನಗೂ ಅದರ ಬಗೆಗೆ ಬೆರಗಾಗುವಂತಿರಬೇಕು. ಹಾಗೆಯೇ ಇತ್ತು ಆ ಸಂಗತಿ. ಕೊನೆಪಕ್ಷ ನನ್ನ ಮಟ್ಟಿಗಾದರೂ ಹಾಗಾಯಿತು. ಈ ಲೇಖನದಲ್ಲಿ ಮಹಿಳೆಯರ ಬಗೆಗೆ ಗಾಂಧಿವಾದದ ಮುದ್ರೆ ವ್ಯಕ್ತಿಗತವಾಗಿ ನಮ್ಮ ಮನದ ಮೇಲೆ ಹೇಗೆ ಮೂಡಿತು ಎನ್ನುವುದನ್ನು ಹೇಳಲಿದ್ದೇನೆ. ಏಕೆಂದರೆ ಗಾಂಧಿವಾದದ ಬಗ್ಗೆ ರಾಜಕಾರಣಿ ಅಥವಾ ಸಾಮಾಜಿಕ ಕಾರ್ಯಕರ್ತರಂತೆ ಏನಾದರೂ ಹೇಳುವುದು ನನಗೆ ಸಾಧ್ಯವಿಲ್ಲ. ಒಬ್ಬ ಸಾಮಾನ್ಯ ಮಹಿಳೆಯಾಗಿ ನನ್ನ ಮನದ ಮೇಲೆ ಗಾಂಧಿವಾದದ ಪ್ರಭಾವ ಹೇಗಾಯಿತು ಎಂಬುದನ್ನು ಮಾತ್ರ ನಾನಿಲ್ಲಿ ಹೇಳಲಿದ್ದೇನೆ.

ಒಮ್ಮೆ ಮಹರ್ಷಿ ಕರ್ವೆಯವರು ನಮ್ಮ ಮನೆಗೆ ಬಂದರು. ನನ್ನಜ್ಜ ನೂಲು ತೆಗೆಯುತ್ತ ಹಾಸಿಗೆಯ ಮೇಲೆ ಕೂತಿದ್ದ. ಪಕ್ಕದ ಆರಾಮ ಕುರ್ಚಿಯಲ್ಲಿ ಕರ್ವೆ

ಕೂತಿದ್ದರು. ಕರ್ವೆ ಬಂದಾಗಲೆಲ್ಲ ತಮ್ಮ ಸಂಸ್ಥೆಯ ಬಗೆಗೆ ಹೇಳುತ್ತಿದ್ದರು. ಆದರೆ ಈ ಸಲ ತಕಲಿ ನೋಡಿದ್ದರಿಂದಲೋ ಏನೋ ಅವರು ಗಾಂಧೀಜಿಯ ಬಗೆಗೆ ಹೇಳಲಾರಂಭಿಸಿದರು. ಗಾಂಧೀಜಿಯ ಖಾದಿ ಕಾರ್ಯ ಮತ್ತು ಅವರ ಒಟ್ಟು ಹಿಂದುಳಿದವರ ಬಗೆಗಿನ ಸಹಾನುಭೂತಿಯು ತಿಲಕರ ಕಾರ್ಯಕ್ಕಿಂತ ತೀರ ವ್ಯಾಪಕವಾಗಿದೆ ಎಂದು ನನ್ನಜ್ಜ ಹೇಳಿದರು. ಅದರಿಂದಾಗಿ ಗಾಂಧೀಜಿಯವರು ಮಹಿಳೆಯರನ್ನೂ ಅದೆಷ್ಟು ಕಾರ್ಯಕ್ಷಮತೆ ಮತ್ತು ಉತ್ಸಾಹಿಯನ್ನಾಗಿ ಮಾಡಿದರು ಎಂಬ ಬಗೆಗೆ ಆ ವೃದ್ಧರಿಬ್ಬರ ಸಂಭಾಷಣೆಯು ಹೊರಳಿತು. ಆಗ ಸಹಜವಾಗಿ ಕರ್ವೆಯವರ ಬಾಯಿಂದ ಮಾತು ಹೊರಬಿತ್ತು. ನಾನು ಮಹಿಳೆಯರಿಗಾಗಿ ಜನ್ಮವಿಡೀ ಕಾರ್ಯ ಮಾಡಿದೆ. ಪ್ರಾಂತ-ಪ್ರಾಂತಗಳಲ್ಲಿ ಶಿಕ್ಷಣ ಸಂಸ್ಥೆಯನ್ನು ಸುರು ಮಾಡಿದೆ. ಆದರೆ ಗಾಂಧಿಯಂತೆ ಆತ್ಮವಿಶ್ವಾಸ ಮತ್ತು ಉತ್ಸಾಹ ಮಾತ್ರ ನನ್ನಿಂದ ಎಂದೂ ನಿರ್ಮಾಣ ಮಾಡುವುದಾಗಲಿಲ್ಲ. ಈ ಪವಾಡ ಕೇವಲ ಗಾಂಧಿ ಮಾತ್ರ ಮಾಡಬಲ್ಲರು.

ಅಂದಿನಿಂದ ನನ್ನ ಮನದಿಂದ ಅವರೆಂದೂ ಅಳಿಸಿಹೋಗಲಿಲ್ಲ. ಆಗ ಸಾರಾಸಾರ ಯೋಚಿಸುವ ವಯಸ್ಸಾಗಲಿ, ಸ್ವಭಾವವಾಗಲಿ ನನ್ನದಾಗಲಿ ಆಗಿರಲಿಲ್ಲ. ಬೇರೆ ಬೇರೆ ವ್ಯಕ್ತಿಗಳ ಕೃತಿಯ, ಮಾತಿನ ಮುದ್ರೆ ಮತ್ತು ಒಳಿತು ಕೆಡುಕಿನ ರೂಪದಲ್ಲಿ ಮೂಡುತ್ತ ಇರುತ್ತಿತ್ತು. ಹಾಗೆಯೇ ಇದೂ ಸಹ ಮೂಡಿತು.

* * *

ಆ ಬಳಿಕ ಮಹಾರಾಷ್ಟ್ರದಲ್ಲಿ ತಮ್ಮನ್ನು ಬುದ್ಧಿಜೀವಿಗಳು ಎಂದುಕೊಳ್ಳುವವರು ಇಲ್ಲವೇ ಕಮ್ಯುನಿಸ್ಟ್ ಪಕ್ಷದ ಕೆಲವು ವ್ಯಕ್ತಿಗಳು ಗಾಂಧೀಜಿಯ ಮೇಲೆ ಆಗಾಗ ಹಲ್ಲೆ ಮಾಡಿ, ನನ್ನ ಗಾಂಧಿನಿಷ್ಠೆಯ ಬಗ್ಗೆ ಮತ್ತು ಪರ್ಯಾಯವಾಗಿ ಜಡಬುದ್ಧಿಯ ಬಗೆಗೆ ನನ್ನನ್ನು ತುಂಬ ಟಿಂಗಲ್ ಮಾಡಿದರು. ಹಲವು ಸಲ ನಾನು ರಾಜಕಾರಣದಲ್ಲಿ ತೀರ ಮಂದವಾಗಿರುವುದರಿಂದ ನನಗೆ ಮಾರುತ್ತರ ಕೊಡುವದಾಗುತ್ತಿರಲಿಲ್ಲ. ಹಲವು ಸಲ ನಾನು ಉತ್ತರ ಗೊತ್ತಾಗದೇ ಸುಮ್ಮನೆ ಕೂತಿರುತ್ತಿದ್ದೆ. ಆದರೆ ಮನದೊಳಗೆ ಮಾತ್ರ ನಿರುತ್ತರಗೊಳಿಸುವವರ ಬುದ್ಧಿವಾದ ಪ್ರಶ್ನೋತ್ತರ ಎಂದಿಗೂ ಒಪ್ಪಿಗೆಯಾಗಲಿಲ್ಲ. ಮಹಿಳೆಯರ ಬಗೆಗೆ ಪ್ರಶ್ನೆ ಬಂತೆಂದರೆ, ನಾನು ಕರ್ವೆಯವರ ವಾಕ್ಯವನ್ನು ಎದುರಿಗಿಡುತ್ತಿದ್ದೆ. ಆಗ ಪ್ರತಿಪಕ್ಷದ ಜನರೂ ಸಹ ನನ್ನಂತೆಯೇ ಹಲವು ಸಲ ಬಾಯಿ ಮುಚ್ಚಿಕೊಂಡು ಕೂತಿರುವುದು ನನ್ನ ಗಮನಕ್ಕೆ ಬಂತು. ಅವರನ್ನು ನಿರುತ್ತರಗೊಳಿಸಲೆಂದು ನಾನವರಿಗೆ ಪ್ರಾಂಜಲವಾಗಿ, ಅಜ್ಞಾನದಿಂದಾಗಿ ಮತ್ತು ನನ್ನ ಮಾನಸಿಕ ದೌರ್ಬಲ್ಯ ದೊಡ್ಡದಾಗಿರುವುದರಿಂದಾಗಿ ಗಾಂಧಿವಾದದ ಸರ್ವ ತಾತ್ವಿಕ ಸಂಗತಿಗಳ ಬಗೆಗೆ ಈಗಲೇ ಚರ್ಚೆ ಮಾಡುವುದು ಸಾಧ್ಯವಿಲ್ಲೆಂದು ಹೇಳುತ್ತಿದ್ದೆ. ಅದರಿಂದಾಗಿ ಮಾರ್ಕ್ಸ್ ಮತ್ತು ತಿಲಕರ ಬಲದಿಂದ

ಬದುಕುವ ಪ್ರತಿಪಕ್ಷದವರು ನನ್ನ ಬಗೆಗೆ ಕರುಣೆ ತೋರಿ ಸುಮ್ಮನಾಗುತ್ತಿದ್ದರು! ವಿದ್ಯಾರ್ಥಿ ಜಗತ್ತಿನಲ್ಲಿ ನಿಕಟವರ್ತಿಗಳಾದ ವಿರೋಧಿ ಪಕ್ಷದ ಜನರು ಗಾಂಧಿವಾದದ ಬಗೆಗೆ ಸ್ವಂತ ಬಚಾವಿಗಾಗಿ ಕ್ರಮೇಣ ಯೋಚಿಸುವಂತೆ ಮಾಡಿದರು. ವಿಶೇಷವಾಗಿ ಪ್ರಸಾದ ದೀಕ್ಷೆ ಪ್ರಕಟಗೊಂಡ ಬಳಿಕ ಸಮಾಜಶಾಸ್ತ್ರ ಕಲಿಯುವ ವಿದ್ಯಾರ್ಥಿಗಳ ಮತ್ತು ಅವರ ಗುರುಗಳ, ಆ ಕಾಲದ ಗಾಂಧೀಜಿ ಮತ್ತು ಪ್ರೇಮಾಬಾಯಿಯ ಸಂಬಂಧದ ಪ್ರತಾಪವನ್ನು ಕೇಳಿದ್ದೆ– ನನ್ನಂತೆ ಎಲ್ಲರೂ ಕೇಳಿರಬೇಕು. ಆಗ ಮಾತ್ರ ನನಗೆ ಈ ಎಲ್ಲ ಜನಗಳ ತರ್ಕಶಾಸ್ತ್ರದ ಬಗೆಗೆ ನಿಜಕ್ಕೂ ದಯೆ ಬಂತು. ಮಾರ್ಕ್ಸ್ ಮತ್ತು ರಸೆಲ್‌ನನ್ನು ಅರಗಿಸಿಕೊಂಡವರಿಗೆ 'ಪ್ರಸಾದ ದೀಕ್ಷೆ'ಯಲ್ಲಿ ವ್ಯಭಿಚಾರ ಕಾಣಲಾರಂಭಿಸಿತು. ರಸೆಲ್ ಮತ್ತು ಮಾರ್ಕ್ಸ್‌ರ ಚರಿತ್ರೆಯು ಜಗತ್ತಿನ ಎದುರಿಗಿತ್ತು. ಅವರ ನೈತಿಕ ಕಕ್ಷೆಯು ತೀರ ಬೇರೆಯಾಗಿತ್ತು. ಆದರೆ ಅವರ ಬೌದ್ಧಿಕ ಸಾಮರ್ಥ್ಯದಿಂದ ಸಾಕಲ್ಪಡುವವರಿಗೆ ಅವರ ಲೇಖನದಲ್ಲಿ ನಿರುಪಯೋಗಿಯಾದುದು ಏನೂ ಕಾಣಲಿಲ್ಲ. ಬದಲು ಅದರಲ್ಲಿರುವ ಸ್ಪಷ್ಟೋಕ್ತಿ ಪೋಷಕವೆನಿಸಿತು. ಆದರೆ ಗಾಂಧೀಜಿಯವರು ಅಹಿಂಸೆ ಮತ್ತು ಬ್ರಹ್ಮಚರ್ಯೆಯ ಆಚಾರ್ಯರು; ಹೀಗಾಗಿ ಅವರ ತತ್ವಜ್ಞಾನವನ್ನು ರದ್ದುಗೊಳಿಸಲು ಇದಕ್ಕಿಂತ ಪ್ರಬಲವಾದ ಪುರಾವೆ ಬೇರೆ ಯಾವುದಿದೆ? ಇದೇ ಕಾಲಕ್ಕೆ ವಿವಿಧ ವೃತ್ತ ಮತ್ತು ಕಿರ್ಲೋಸ್ಕರ ಪತ್ರಿಕೆಯ 'ಡಾಂಭಿಕತನ'ದ ಬಗೆಗಿನ ಮೋಡಿಯ ಪ್ರಭಾವ ಜನರ ಮನದಿಂದ ಅಳಿದಿರಲಿಲ್ಲ. ಅಂಥದರಲ್ಲಿ ಬಹಳ ದೊಡ್ಡ ಗೊಬ್ಬರ ಟೀಕಾಕಾರರಿಗೆ ಸಿಕ್ಕಿತ್ತು. 'ಇವನು ನಿಮ್ಮ ಗಾಂಧೀ' ನನ್ನ ಸಮಾಜಶಾಸ್ತ್ರದ ಸಹಪಾಠಿ ಮತ್ತು ಆಚಾರ್ಯರು ನನಗೆ ಹೇಳಿದರು.

* * *

ಆ ಕಾಲದಲ್ಲಿ ಆದಿವಾಸಿಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಲೈಂಗಿಕ ಸಮಸ್ಯೆ ಬಗೆಗಿನ ಲೇಖನ ಸಿದ್ಧಪಡಿಸಬೇಕಾಗುತ್ತಿತ್ತು. ಅದರ ಬಗೆಗೆ ಯಾರಿಗೂ ಏನೂ ಅನಿಸುತ್ತಿರಲಿಲ್ಲ. ಇದನ್ನೆಲ್ಲ ನಾವು ಅತ್ಯಂತ ತಾರ್ಕಿಕ ನಿಲುವಿನಿಂದ ಮತ್ತು ಉತ್ತಮವಾಗಿ ಮಾಡುತ್ತಿದ್ದೆವು. ವಿಶೇಷವಾಗಿ ಕಾಲೇಜಿನಲ್ಲಿ ಲೈಂಗಿಕ ಶಿಕ್ಷಣವನ್ನು ಸೇರ್ಪಡೆ ಮಾಡಿದರೆ ಮುಂದಿನ ಜೀವನದ ಹಲವು ಪ್ರಶ್ನೆಗಳು ಸುಲಭವಾಗಿ ಬಗೆಹರಿಯಬಹುದು ಎಂದೇ ಎಲ್ಲರ ಅಭಿಪ್ರಾಯವಾಗಿತ್ತು. ಈಗಲೂ ಇದ್ದಿರಬೇಕು. ಆದರೆ ಗಾಂಧಿ ಮತ್ತು ಪ್ರೇಮಾಬಾಯಿಯ ಬಗೆಗೆ ಟೀಕಾಕಾರರು ಬಯಸಿದ 'ರಾಜಕಾರಣ ಡಾಂಭಿಕ'ತನ ಮಾತ್ರ ಈ ಪಾಶ್ಚಾತ್ಯ ತತ್ವಲೋಚನದಲ್ಲಿ ಸಿಗಲಿಲ್ಲ. ಗಾಂಧೀಜಿಯ ನೈತಿಕ ಬಲದ ಬಗೆಗೆ ಮತ್ತು ಪ್ರೇಮಾಬಾಯಿಯ ವರ್ತನೆಯ ಬಗೆಗೂ ಸಹ ಗೌರವವಿರುವುದರಿಂದ ಯಾವುದೇ ವಿಷಯದ ಬಗೆಗೆ ನಿರ್ವಿಕಾರ ಮನದಿಂದ ಚರ್ಚಿಸಲು ಎಂಥ ಮನೋಧೈರ್ಯ ಬೇಕಾಗುತ್ತದೆ

ಮತ್ತು ಅದನ್ನು ಜನರೆದುರಿಗೆ ಮಂಡಿಸುವಾಗ ಹೇಗೆ ಮಂಡಿಸಬೇಕು ಎಂಬ ಮಹತ್ವದ ವಿಷಯ ನನಗೆ ಗೊತ್ತಾಯಿತು. ಈ 'ಪ್ರಸಾದ ದೀಕ್ಷೆ'ಯಿಂದಲೇ ಆ ಬಳಿಕ ಗಾಂಧಿವಾದದ ಆಕ್ಷೇಪಕರು ಮೂರನೆಯ ಒಂದು ಮಹತ್ವದ ಸಂಗತಿಯನ್ನು ನನ್ನ ಮನದ ಮೇಲೆ ಬಿಂಬಿಸಿದರು. ಅದೆಂದರೆ ಇಂದುಮತಿ ಗುಣಾಜಿ ಮತ್ತು ಡಾ. ತೆಂಡೂಲ್ಕರ್ ಇವರ ನಡುವೆ ಸೇವಾ ಗ್ರಾಮದಲ್ಲಿ ನಡೆದ ವಿವಾಹ. ಆಗ ಗಾಂಧೀಜಿಯವರೇ ಪುರೋಹಿತರಾಗಿ ಅವರಿಗೆ ಬ್ರಹ್ಮಚರ್ಯೆಯಿಂದ ಬಾಳುವಂತೆ ಉಪದೇಶ ಮಾಡಿ ಅವರಿಂದ ಸಮ್ಮತಿ ಪಡೆದರು. ಆಗಂತೂ ಹಾಸ್ಯಕ್ಕೆ ಮೇರೆಯೇ ಇರಲಿಲ್ಲ. ಗಾಂಧೀಜಿಯ 'ಪೇಟಂಟ್' ಹುಚ್ಚಿನಲ್ಲಿ ಮತ್ತು 'ಮುತ್ಸದ್ದಿತನ'ದಲ್ಲಿ ಈ ಸಂಗತಿಯು ಪ್ರಾಮುಖ್ಯದಿಂದ ಗಣನೆಯಾಗುತ್ತದೆ. ವಿವಾಹಿತರು ಬ್ರಹ್ಮಚರ್ಯೆ ಪಾಲಿಸುವುದಾದರೆ ಸಂತತಿಯನ್ನು ಯಾರು ಮತ್ತು ಏಕೆ ನಿರ್ಮಾಣ ಮಾಡುವದು? ಈ ಪ್ರಶ್ನೆ ನಿಜಕ್ಕೂ ಯೋಚಿಸುವಂತಹದಾಗಿದೆ. ಹೇಗೆ ಉತ್ತರಿಸಿದರೂ ಕೇಳುಗನನ್ನು ಸಮಾಧಾನಪಡಿಸುವದು ಸಾಧ್ಯವಿಲ್ಲ. ಅದನ್ನು ಆಶ್ರಮವಾಸಿಗಳು ಸ್ವಾನುಭವವೆಂದು ಸಿದ್ಧ ಮಾಡಿ ತೋರಿಸಬಹುದು. ಆದರೆ ನಿಮ್ಮಂಥವರು ಏನು ಹೇಳಬೇಕು? ನಾನು ಸಾಕಷ್ಟು ಯೋಚಿಸಿದೆ. ವರ್ಷಗಳ ಬಳಿಕ ವರ್ಷಗಳೇ ಉರುಳಿದವು. ನೌಖಾಲಿ, ಪಂಜಾಬಿನ ಅತ್ಯಾಚಾರವನ್ನು ಕಂಡೆ. ಹಣಕ್ಕಾಗಿ ಯುದ್ಧದಲ್ಲಾದ ಮಹಿಳೆಯರ ಬಲಿದಾನ ಮತ್ತು ಬೆಳೆಯುತ್ತಿರುವ ಭೋಗಲಾಲಸೆಯನ್ನು ಕಂಡೆ. ಕ್ರಮೇಣ ಒಂದು ಕಲ್ಪನೆ ಮನದೊಳಗೆ ಮೂಡುತ್ತಿದೆ ಮತ್ತು ಅದು ಬೆಳೆಯುತ್ತಲೇ ಇದೆ. ಇಂಥ ಅತ್ಯಾಚಾರಗಳಿಗೆ ಬಂಧನ ಹಾಕುವ ಸಾಮರ್ಥ್ಯ ಮಾನವನ ಕಾನೂನಿನ ಆಚೆಗಿನದು. ಬೇಕಾದರೆ ಅದು ಸೋವ್ಹಿಯೆಟ್ ಆಗಿರಲಿ. ಮಾನವೀತೆಯ ಹ್ರಾಸವನ್ನು ಕೇವಲ ಮಾನವೀಯತೆಯೇ ತಡೆಗಟ್ಟಬಲ್ಲದು ಎಂಬ ಅಮೂಲ್ಯ ತತ್ವವನ್ನು ಗಾಂಧೀಜಿಯವರು ಮಹಿಳೆ-ಪುರುಷರ ಬಗೆಗೆ ಮಾಡಿದ ಚಿಕಿತ್ಸೆಯಲ್ಲಿ ಸಿಗಬಹುದು.

* * *

ಮಹಿಳೆಯು ಪ್ರತಿಯೊಬ್ಬ ಗಂಡಸು ಮತ್ತು ಹೆಣ್ಣಿನ ಜನನಿಯಾಗಿದ್ದಾಳೆ. ನಮ್ಮ ದೇಹ ಕೇವಲ ಮಾತೆಯದು ಎಂಬ ಅರಿವು ಗಾಂಧೀಜಿಯವರ ಲೇಖನದಲ್ಲಿ ತೀವ್ರವಾಗಿ ಅನುಭವಕ್ಕೆ ಬರುತ್ತದೆ. ಹೆಂಡತಿಯ ಸಂಬಂಧವು ನಿರ್ಮಾಣ ಕಾರ್ಯದ ಮಹತ್ವದ ಅಂಗವಾಗಿದೆ. ಹೆಣ್ಣು ಸುಂದರವಾಗಿದ್ದರೂ ಸಿಂಗಾರದ ಅಲಂಕಾರ, ಸಿಂಗಾರದ ಜೀವನ, ಸಿಂಗಾರದ ಯೋಚನೆ ಈ ಮೂರು ಸಂಕೋಲೆಯಿಂದ ಪುರುಷನಾದವನು ಮಹಿಳೆಯ ಮುಕ್ತತೆ ಮಾಡಿದ್ದಾದರೆ ಮಹಿಳೆಯೂ ಈ ಪಾಶದಿಂದ ಮುಕ್ತಗೊಂಡು ಶೃಂಗಾರಕ್ಕಿಂತ ದೊಡ್ಡದಾದ ವಿಚಾರಗಳ, ಕಾರ್ಯಗಳ ಸಹಜೀವನವನ್ನು ಪುರುಷನ ಜೊತೆ ಕಳೆಯುವ ನಿರ್ಧಾರವನ್ನು ಮನಸ್ಸಿನಿಂದ ಮಾಡಿದ್ದಾದರೆ, ಅದರಿಂದ ಅವರಿಬ್ಬರ ಮನದ ಹಾಗೂ ದೇಹದ ಹೊರೆ ಎಷ್ಟೋ ಇಳಿಯುತ್ತದೆ.

ಪತ್ನಿಯನ್ನು ಸದಾಕಾಲ ಕೇವಲ ಹೆಂಡತಿಯನ್ನಾಗಿ ನೋಡುವ ಪುರುಷನು ಅವಳನ್ನು ನಿರ್ದಿಷ್ಟ ಕಕ್ಷೆಯಿಂದಂತೂ ಹೊರಬರಲು ಬಿಡುವುದೇ ಇಲ್ಲ. ಆದರೆ ಅದರಿಂದಾಗಿ ಅವನ ಹಾಗೂ ಅವನ ಒಟ್ಟೂ ಕುಟುಂಬದ ಹ್ರಾಸವೇ ಆಗುತ್ತಿರುತ್ತದೆ. ಹೇಗೆ ಅನ್ನುವುದು ನೋಡಿ. ಮಹಿಳೆಯೊಂದಿಗೆ ನಿಜವಾದ ಸಹಜೀವನ ನಡೆಸುವ ಪುರುಷನು, ಅವಳನ್ನು ಬೇಡವಾದ ಸಂತತಿಯಿಂದ ಮುಕ್ತ ಮಾಡುತ್ತಾನೆ. ಬಯಸಿದ ಸಂತತಿಯು ಭಾರವನ್ನು ಹೊರುವುದು ಸಾಧ್ಯ. ಮನೆ ಹೊರಗಿನ ಕಾರ್ಯಕ್ಷೇತ್ರದಲ್ಲಂತೂ ಅವನು ಅವಳ ಸಹಾಯದಿಂದ ಅಪಾರ ಕಾರ್ಯವನ್ನು ಮಾಡುವುದು ಸಾಧ್ಯ. ಪತ್ನಿ ಅಂಗವಿಕಲೆಯಾಗಿದ್ದರೂ ಅವನು ವಾಮಮಾರ್ಗವನ್ನು ಹಿಡಿಯಲಾರ. ಎಲ್ಲ ಮಾನಸಿಕ ವಿಕೃತಿಯ ಮೇಲೆ ನಿಜಕ್ಕೂ ಮಹಿಳೆಯ ಬಗೆಗೆ ಇಂಥ ಭಾವನೆಯಿರದ ಹೊರತು ಬೇರೆ ಯಾವುದಾದರೂ ಪಾರಾಗುವ ಉಪಾಯವಿದೆಯೇ? ಮಹಿಳೆ ಕೇವಲ ಹೆಣ್ಣೆಂದಲ್ಲ ಗೆಳತಿಯೆಂದು ಅವಳ ಎಲ್ಲ ಜೀವನ ಕಲೆಯ ವಿಕಾಸ, ಜೊತೆಗೆ ತನ್ನ ಕುಟುಂಬದ ಹಾಗೂ ದೇಶದ ವಿಕಾಸ ಮಾಡುವ ಧ್ಯೇಯವು ಹಲವರಿಗಿದು ಹಾಸ್ಯಾಸ್ಪದವೆನಿಸಿದರೂ, ಒಂದು ಪ್ರಯೋಗ ಮಾಡಿ ನೋಡಬಹುದು ಎನ್ನುವುದರಲ್ಲಿ ಎರಡು ಮಾತಿಲ್ಲ. ಗಾಂಧೀಜಿಯವರ ಸ್ವಂತ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಅರವಿಂದಬಾಯಿರವರ, ಮೃಣಾಲಿನಿ ದೇವಿಯ ಅಕಾಲಿಕ ಹಾಗೂ ದುರಂತ ಅಂತ್ಯ. ತಿಲಕರು ಕಾರಾಗೃಹ ಸೇರಿದ ಬಳಿಕ ಕೊರಗಿ ಕೊರಗಿ ಅಸುನೀಗಿದ ಅವರ ಪತ್ನಿ, ಆಗರಕರರ ಸಾವಿನ ಬಳಿಕ ಅವರ ಪತ್ನಿಯ ಅಸಹಾಯಕತೆ ಈ ಸಂಗತಿಗಳ ಬಗೆಗೆ ಯೋಚಿಸಿದಿರಾದರೆ ಎಲ್ಲರೂ ಗಾಂಧೀಜಿಯವಂತೆ ತಮ್ಮ ಪತ್ನಿಯರನ್ನು ತಮ್ಮ ಕಾರ್ಯದಲ್ಲಿ ಸಮಾವೇಶ ಮಾಡಿಕೊಂಡಿದ್ದರೆ ಈ ಎಲ್ಲ ಘಟನೆಗಳಿಗೆ ಬೇರೆಯೇ ತಿರುವು ಸಿಕ್ಕು ಹಿಂದೂಸ್ತಾನದ ಇತಿಹಾಸವೇ ಬೇಗ ಬದಲಾಗಬಹುದಿತ್ತು ಎಂದು ನನಗನಿಸುತ್ತದೆ.

* * *

ವಿಶೇಷವಾಗಿ ಒಂದು ಕೆಟ್ಟ ವಿಷಯ ಮನದಲ್ಲಿ ಮೂಡಿತು ಅಂದರೆ ಸ್ತ್ರೀ ಪುರುಷರು ಪರಸ್ಪರರನ್ನು ನೋಡುವ ದೃಷ್ಟಿಯನ್ನು ಉನ್ನತಗೊಳಿಸಿದರೆ, ತೀರಾ ಗಾಂಧೀಜಿ ಹೇಳಿದಂತೆ ಅಲ್ಲವಾದರೂ ಈಗಿರುವುದಕ್ಕಿಂತ ಸಾಕಷ್ಟು ಅಧಿಕ ಪ್ರಮಾಣದಲ್ಲಿ ಸಂಯಮವನ್ನು ಜಾರಿಗೆ ತಂದರೆ ಕೊನೆಪಕ್ಷ ಸುಸಂಸ್ಕೃತ ಎನಿಸಿಕೊಳ್ಳುವರು ಮಾಡಿದರೂ, ಹಿಂದೂಸ್ತಾನದಲ್ಲಷ್ಟೇ ಅಲ್ಲ ಸಂಪೂರ್ಣ ಸುಧಾರಿಸಿದ ಜಗತ್ತಿನಲ್ಲೇ ವೇಶ್ಯಾ ವ್ಯವಸಾಯದ ಅಂದರೆ ಸ್ತ್ರೀ ವಿಕ್ರಯದ ಹೇಸಿಗೆಯೆನಿಸುವ ರೂಪಕ್ಕೆ ನಿಯಂತ್ರಣ ಬೀಳದೆ ಇರಲಾರದು. ೧೯೨೨ರಲ್ಲಿ ೧೦,೫೦,೦೦೦ರದಷ್ಟು ವೇಶ್ಯೆಯರ ಸಂಖ್ಯೆಯನ್ನು ಕಂಡು ಗಾಂಧೀಜಿಯ ಅಂತಃಕರಣವು ನುಚ್ಚುನೂರಾಯಿತು. ಕೇವಲ ಹಣದ ವ್ಯವಸ್ಥೆಯನ್ನು ನಿಲ್ಲಿಸಿ

ಮತ್ತು ಲೈಂಗಿಕ ಚಿಕಿತ್ಸೆಯ ಗೃಹವನ್ನು ಆರಂಭಿಸಿ ಯಾವ ಸರಕಾರ ಬಂದರೂ ಈ ಪ್ರಶ್ನೆಯನ್ನು ಬಗೆಹರಿಯಿಸುವದು ಸಾಧ್ಯವಿಲ್ಲ ಎನ್ನುವುದು ಯುದ್ಧದ ನಂತರ ಸ್ಪಷ್ಟವಾಗಿದೆ.

ನಾವು ಸ್ತ್ರೀ ಪುರುಷರ ಬಗೆಗೆ ಯೋಚಿಸಿದಾಗ ನಮ್ಮ ಮನದೊಳಗೆ ಒಂದು ಹೆಣ್ಣು ಮತ್ತು ಒಂದು ಗಂಡು ಇಬ್ಬರೇ ಇರುತ್ತಾರೆ. ಆದರೆ ಗಾಂಧೀಜಿಯವರಿಗೆ ೧೦,೫೦,೦೦೦ ಮಹಿಳೆಯರ ಹಿಂದೆ ಅವರಿಗಿಂತ ನೂರು ಪಟ್ಟು ಹೆಚ್ಚಿರುವ ಅವರ ಪೂರ್ವಜರ ವಂಶಜರ ಅಸಹಾಯಕ ಸಾಲು ಕಾಣಿಸಿತು. ಮತ್ತು ಅದಕ್ಕಿಂತ ಎಷ್ಟೋ ಪಟ್ಟು ದೊಡ್ಡ ತರುಣರ ಸಂಖ್ಯೆ ಕಾಣಿಸಿತು. ಬಡಪೀಡಿತ, ಪರತಂತ್ರ ಮತ್ತು ಅಜ್ಞಾನಿ ದೇಶದಲ್ಲಿ ಅವರಿಗಿದು ಅತೀ ದೊಡ್ಡ ಸಂಕಟವೆನಿಸಿತು. ಹೆಣ್ಣಿಗೆ ಆಭರಣ ಬೇಡ, ರೂಪ ಬೇಡ, ತಾರುಣ್ಯವಿಲ್ಲದಿದ್ದರೂ ನಡೆಯಬಹುದು. ಆದರೆ ಶೀಲ ಅವಳ ಅಮೂಲ್ಯ ಆಭರಣ ಇದನ್ನವಳು ಕಾಯ್ದಿಟ್ಟುಕೊಳ್ಳಬೇಕೆಂದವರು ಹೇಳುತ್ತಿದ್ದರು. ಆಭರಣದಿಂದ ಮುಕ್ತಿಯೆಂದರೇನೆ ಪುರುಷರ ಕಾಮುಕ ಪಶುವೃತ್ತಿಯಿಂದ ಮುಕ್ತಿ ಎಂದರ್ಥ. ಹೆಣ್ಣಿನ ಸಾಮರ್ಥ್ಯವು ಅವಳ ಸೇವಾವೃತ್ತಿಯಲ್ಲಿ ಮತ್ತು ಮಕ್ಕಳ ಸಂಗೋಪನೆಯಲ್ಲಿ ಹುಟ್ಟಿನಿಂದಲೇ ಬಂದಿದೆ. ಅದನ್ನು ದೊಡ್ಡ ಪ್ರಮಾಣದಲ್ಲಿ ಜಾಗೃತಗೊಳಿಸಿ, ಮೇಲೆ ಹೇಳಿದ ನೀತಿ, ದೇಹ, ಹಣ, ಬಲ ಮತ್ತು ಭಾವನೆಯನ್ನು ವಿನಾಕಾರಣ ಹಾನಿ ಮಾಡಿಕೊಳ್ಳುವುದನ್ನು ತಕ್ಷಣ ಮತ್ತು ಬೃಹತ್ ಪ್ರಮಾಣದಲ್ಲಿ ನಿಲ್ಲಿಸಬೇಕೆಂದು ಅವರು ಕೊನೆವರೆಗೂ ಹೇಳುತ್ತಿದ್ದರು. ಸ್ತ್ರೀಯನ್ನು ಮುಕ್ತ ಸಖೀ ಎಂದು ನೋಡುವ ದೃಷ್ಟಿಯನ್ನು ಗಂಡಸರಿಗೆ ಖಂಡಿತ ನೀಡಬೇಕು ಎಂದವರು ಹೇಳುತ್ತಿದ್ದರು. ಬಾಲಹತ್ಯೆ, ಒಪ್ಪಿಗೆಯಿರದ ವೈಧವ್ಯ ಮತ್ತು ಗರ್ಭಪಾತ, ಈ ಸಂಕಟದ ಬಗೆಗೂ ಸಹ ಬೇರೊಂದು ಉಪಾಯ ಅವರಿಗೆ ಕಾಣಲಿಲ್ಲ. ಈ ಸಾಮಾಜಿಕ ಆಪತ್ತಿಗಾಗಿ ಅನಾಥಾಲಯವಾಗಲಿ, ಶುಷ್ಕ ಸಂಸ್ಥೆಯನ್ನು ತೆರೆದು ಏನೂ ಲಾಭವಾಗಲಾರದು. ಈ ವ್ಯಾಧಿಯನ್ನು ಮೂಲದಲ್ಲೇ ಹೊಸಕಿ ಹಾಕಬೇಕೆನ್ನುವದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಇತ್ತೀಚೆಗೆ ಪಾಕಿಸ್ತಾನ ಅಸ್ತಿತ್ವಕ್ಕೆ ಬಂದಾಗಿನಿಂದಲೂ ತಮ್ಮ ಚಾರಿತ್ರ್ಯದ ಬಗ್ಗೆ ಪ್ರತಿಯೊಬ್ಬ ಕುಲೀನ ಸ್ತ್ರೀ ಚಿಂತಾತುರಳಾಗಿದ್ದಾಳೆ. ಇಂಥ ಕಾಲಕ್ಕೆ ಚಾರಿತ್ರ್ಯದ ಮಹತಿ ಮತ್ತು ತನುಮನವನ್ನು ಪಣಕ್ಕೊಡ್ಡಿ ಪ್ರಾಣಾರ್ಪಣೆ ಮಾಡುವ ಬಗೆಗೆ ಸ್ತ್ರೀಯರಿಗೆ ಮಹಿಳೆಯರ ಸಂರಕ್ಷವಾದ ಈ ವ್ಯಕ್ತಿಗಿಂತ ಬೇರೆ ಯಾರು ಯೋಗ್ಯ ಮಾರ್ಗದರ್ಶನ ಮಾಡಬಲ್ಲರು? 'ದುಡಿಯಲು ಹಿಂಜರಿಯದಿರಿ, ಸರಳಜೀವನ ತೊರೆಯದಿರಿ, ಶೀಲವನ್ನು ಕಳಕೊಳ್ಳದಿರಿ' ಎಂದು ಹೆಣ್ಣು ಜಾತಿಗೆ ಎಷ್ಟು ಆರ್ತತೆಯಿಂದ ಈಗ ಯಾರು ಹೇಳಬಲ್ಲರು?

(ಧನುರ್ಧಾರಿ, ೨೯, ಜನವರಿ ೧೯೪೯)

೨೦. ದಲಿತ ಮತ್ತು ಸವರ್ಣ – ಈ ಎರಡೂ ಶಬ್ದ ನಾಶಗೊಳಿಸಬೇಕು

ರಿಡಲ್ಸ್ ಪ್ರಕರಣದ ಒಂದು ಉತ್ತಮ ಫಲಶ್ರುತಿ ಎಂದರೆ ಪ್ರಾ. ಬಿ. ಸಿ. ಕಾಂಬಳೆ ಅವರ ಹೇಳಿಕೆ. 'ನಾನು ಬೌದ್ಧ, ದಲಿತನಲ್ಲ.' ಈ ಹೇಳಿಕೆಗಾಗಿ ನಾನವರನ್ನು ಅಭಿನಂದಿಸುತ್ತೇನೆ.

ದಿಟವೆಂದರೆ 'ದಲಿತ' ಎಂಬ ಪದವು ಇಂಗ್ಲೀಷಿನ 'ಡಿಪ್ರೆಸ್ಡ್' ಈ ಪದದ ಭಾಷಾಂತರವಾಗಿದೆ. ಇದು ರೂಪಗೊಂಡ ಪದ. ಹಾಗೆಯೇ ಇದರ ವಿರುದ್ಧ ಬಳಸಲಾಗುವ 'ಸವರ್ಣ' ಪದ ಸಹ ನಿರ್ಗತಿಕವೇ ಆಗಿದೆ. ಚಾತುರ್ವರ್ಣ್ಯ ಎಂಬ ಹಳೆಯ ಸದ್ಯ ಪ್ರಚಲಿತವಾಗಿರದ ಪದದೊಂದಿಗೆ ಮತ್ತು ಜಾತಿಯ ಸಮೂಹದೊಂದಿಗೆ ಅದನ್ನು ಜೋಡಿಸಲಾಗಿದೆ. 'ದಲಿತ ವಿರುದ್ಧ ಸವರ್ಣ' ಎಂಬ ಅರ್ಥವನ್ನೇ ಅದಕ್ಕೆ ನೀಡಲಾಗುತ್ತಿದೆ. ದಲಿತ ಹಾಗೂ ಸವರ್ಣ ಎರಡೂ ಕೆಟ್ಟ ಪದಗಳು. ಅದು ಡಾ. ಅಂಬೇಡ್ಕರ್‌ರ ಸಾವಿನ ಕೆಲ ವರ್ಷಗಳ ಬಳಿಕ ಪ್ರಚಾರದಲ್ಲಿ ಬಂತು. ಮುಖ್ಯವಾಗಿ ಪತ್ರಿಕಾರಂಗದ ವ್ಯವಹಾರದಲ್ಲಿ ಇದನ್ನು ಚಲಾವಣೆ ನಾಣ್ಯವಾಗಿ ಬಳಸಲಾಯಿತು. ಬಳಿಕ ದೂಷಿತ ಲೋಕ ವ್ಯವಹಾರದ್ದೇ ಮುಖ್ಯವಾಗಿ ಗಮಕವಾದ ಈ ಎರಡೂ ಪದವನ್ನು ಈಗ ಸವರ್ಣ ಎಂದರೆ ಹಿಂದೂ ಮತ್ತು ದಲಿತ ಎಂದರೆ ಪೂರ್ವಾಸ್ಪೃಶ್ಯ ಆದಿವಾಸಿ ಮತ್ತು ಹಲವರು ಎಂದು ಸಮೀಕರಿಸಲಾಯಿತು. ಈ ದ್ವೇಷ ಹರಡಲು ಕಾರಣವೆಂದರೆ ಸಂವಿಧಾನದಲ್ಲಿ ಈ ಎರಡೂ ಶಬ್ದಗಳಿಲ್ಲ. 'ಶೆಡ್ಯೂಲ್ಡ್ ಕಾಸ್ಟಸ್ ಎಂಡ್ ಟ್ರೈಬ್ಸ್' ಅನುಸೂಚಿತ ಜಾತಿ ಮತ್ತು ಸಮುದಾಯ ಎಂಬ ಶಬ್ದ ನಮಗೆ ಗೊತ್ತೇ ಇದೆ. 'ದಲಿತ ಮತ್ತು ಸವರ್ಣ' ಈ ಪದಗಳಿಗೂ ಮಾನ್ಯತೆಯಿಲ್ಲ. ಹೀಗಾಗಿ ಸವರ್ಣ ಎಂಬ ಪದವನ್ನು ಸಾಮಾನ್ಯ ಹಿಂದೂಗಳಿಗಾಗಿ ಬಳಸುವುದು ಯೋಗ್ಯವಲ್ಲ. ಧರ್ಮದ ಸಾಮೂಹಿಕತೆಯನ್ನು ನಾವೆಲ್ಲ ಒಪ್ಪುತ್ತೇವೆ. ಹಿಂದೂ, ಬೌದ್ಧ, ಜ್ಯೂ, ಕ್ರೈಸ್ತ, ಮುಸಲ್ಮಾನ ಮುಂತಾದವರು. ಇದರಲ್ಲಿ ಏನೂ ತಪ್ಪಿಲ್ಲ. ಆದರೆ ದಲಿತ ಮತ್ತು ಸವರ್ಣ ಎಂಬ ಪದದಲ್ಲಿ ದ್ವೇಷವಿದೆ. ಮತ್ತದು ಅಹಿತಕಾರಕವಾಗಿದೆ. ಹೀಗಾಗಿ ಈ ಎರಡೂ ಶಬ್ದಗಳು ವಿಕೃತ ಪ್ರವೃತ್ತಿಯ ದ್ಯೋತಕವಾಗಿರುವದರಿಂದ ಅದನ್ನು

ಆದಷ್ಟು ಬೇಗ ಉಚ್ಚಾಟನೆ ಮಾಡುವುದು ಅವಶ್ಯಕವಾಗಿದೆ. ನಾವೆಲ್ಲ ವಿವಿಧ ಧಾರ್ಮಿಕ ಮತ್ತು ವ್ಯವಸಾಯಿಕ ಗುಂಪಿನಲ್ಲಿ ಸೇರಿಕೊಂಡ ಭಾರತೀಯರು. ಭಾರತೀಯತೆಯು ನಮ್ಮ ಜೀವಂತಿಕೆಯ ಬೆನ್ನೆಲುಬು. ಧರ್ಮ, ಜಾತಿ ಇದೆಲ್ಲ ಗೌಣ ಆದ್ದರಿಂದ ಕೇವಲ ಭಾರತೀಯತೆಯ ಬಗೆಗೆ ಅಭಿಮಾನವಿರಲಿ, ಉಳಿದ ಯಾವುದರ ಬಗೆಗೂ ಬೇಡ.

ಲೋಕಸತ್ತಾ, ೨೩.೨.೧೯೮೮

* * * *

೨೧. 'ಸರಸ್ವತಿ–ಸಮ್ಮಾನ' ಕುರಿತು

ಕೆ. ಕೆ. ಬಿರ್ಲಾ ಪ್ರತಿಷ್ಠಾನದ 'ಸರಸ್ವತಿ ಸಮ್ಮಾನ' ಮತ್ತು 'ವ್ಯಾಸ ಸಮ್ಮಾನ'ದ ಬಗೆಗಿನ ಪ್ರಕಟಣೆ ಹಾಗೂ ಫಾರ್ಮ್‌ನ್ನು ನನಗೆ ಕಳುಹಿಸಿದ ಬಗ್ಗೆ ನಾನು ತಮಗೆ ಆಭಾರಿಯಾಗಿದ್ದೇನೆ. ಸಾಹಿತ್ಯಿಕ ಪುರಸ್ಕಾರದ ಬಗೆಗೆ ನನ್ನ ಅಭಿಪ್ರಾಯ ಅನುಕೂಲವಾಗಿಲ್ಲ ಎಂಬುದನ್ನು ಮೊದಲೇ ತಿಳಿಸುವುದು ಅಗತ್ಯ ಎಂದೆನಿಸುತ್ತದೆ. ಈ ಪ್ರಶಸ್ತಿ ಬೇಕಾದರೆ ದೊಡ್ಡದೇ ಇರಲಿ ಚಿಕ್ಕದೇ ಇರಲಿ, ಅದನ್ನು ಸರಕಾರವೇ ಪ್ರದಾನ ಮಾಡಿದ್ದಿರಲಿ, ಇಲ್ಲವೇ ಖಾಸಗಿ ಸಂಸ್ಥೆಗಳು ಪ್ರತಿಷ್ಠಾನಗಳು ನೀಡಿದ್ದೇ ಇರಲಿ. ಈ ಕಾರಣಕ್ಕಾಗಿ 'ಸರಸ್ವತಿ ಸಮ್ಮಾನ'ಕ್ಕಾಗಿ ಒಬ್ಬ ಲೇಖಕನ ಹೆಸರು ಸೂಚಿಸುವಂತೆ ನೀವು ಮಾಡಿದ ಕೋರಿಕೆಯನ್ನು ನಾನು ಒಪ್ಪುವದು ಸಾಧ್ಯವಿಲ್ಲ.

ಈ ದೇಶದಲ್ಲಿ ಲೇಖಕರಿಗೆ ಚಿಕ್ಕದು, ದೊಡ್ಡದು, ಮಧ್ಯಮದ ಸಾಕಷ್ಟು ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಈ ಪ್ರಶಸ್ತಿಯನ್ನು ಪ್ರತಿಷ್ಠಿತ ಹಾಗೂ ಹಿರಿಯ ಲೇಖಕರಿಗೆ ಕೊಡಲಾಗುತ್ತದೆ. ಈ ಪ್ರೌಢ ವಿಜೇತರಿಗೆ ಸಾಕಷ್ಟು ಭೂತಕಾಲ ಇರುತ್ತದೆ. ಅವರಿಗೆ ಭವಿಷ್ಯ ಕಾಲವಿರುವುದಿಲ್ಲ.

ನೀವು 'ಸರಸ್ವತಿ–ಸಮ್ಮಾನ'ದಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಆಯ್ಕೆಗಾಗಿ ನೀಡಿದ್ದೀರಿ. ಅವು ಯಾವವು ಎಂದರೆ ಕಾವ್ಯ, ಕಾದಂಬರಿ, ಕಥೆ, ಹಾಸ್ಯ, ನಾಟಕ, ನಿಬಂಧ, ಚರಿತ್ರೆ ಮತ್ತು ಆತ್ಮಕಥೆ. ಆದರೆ ಸತ್ಯವಾಗಿ ಹೇಳಬೇಕೆಂದರೆ ನಮ್ಮ ಸದ್ಯದ ಭಾರತೀಯ ಸಾಹಿತ್ಯಕ ಕೃತಿಗಳಲ್ಲಿ ಒಂದು ಪ್ರಕಾರವೂ ಪಾಶ್ಚಾತ್ಯರ ಸಾಹಿತ್ಯ ಪ್ರಕಾರಗಳೊಂದಿಗೆ, ಶ್ರೇಷ್ಠ ಕೃತಿಗಳೊಂದಿಗೆ ತುಲನೆ ಮಾಡಿದಾಗ ಅಷ್ಟು ಸಮರ್ಥವಾಗಿದೆ ಎಂದು ನನಗೆ ಅನಿಸುವುದಿಲ್ಲ. ನನಗನಿಸುವುದೇನೆಂದರೆ ನೀವು ಖರ್ಚು ಮಾಡುವ ಅಪಾರ ಹಣವು ಸ್ವತಂತ್ರ ಸ್ವಯಂ ಪ್ರಜ್ಞೆ, ಅಂತರ್ದೃಷ್ಟಿಯಿರುವ ಮತ್ತು ಸ್ಫುರಣೆಯಿಂದ ಕೂಡಿದ ಕೃತಿಗಿಂತ ಕೇವಲ (ಹಿಂದಿನ ಅನುಭವವನ್ನು ಕಂಡಾಗ) ಪುನರಾವರ್ತಿತ ಕೃತಿಗಾಗಿಯೇ ಉಪಯೋಗವಾಗುವ ಸಾಧ್ಯತೆಯಿದೆ.

ನೀವು ಕೇವಲ ಸಾಹಿತ್ಯ ಕೃತಿಗಳಿಗಾಗಿ ಮಾತ್ರವೇ ಪ್ರಶಸ್ತಿಯನ್ನು ನೀಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಇದಕ್ಕೂ ನನ್ನ ಆಕ್ಷೇಪವಿದೆ. ಪಾರಿತೋಷಕದ ವ್ಯಾಪ್ತಿಯನ್ನು ವಿಸ್ತೃತಗೊಳಿಸಬೇಕು. ಪಾರಿತೋಷಕಕ್ಕಿಂತ ಅನುದಾನದ ಕಲ್ಪನೆಯು

ಇದಕ್ಕಿಂತ ಶ್ರೇಯಸ್ಕರ. ಈ ವ್ಯವಸ್ಥೆಯಲ್ಲಿ ತಾವು ಮಾನವಿಕದ ಸರ್ವ ಶಾಖೆಗಳನ್ನು ಸಮಾವೇಶ ಮಾಡಿಕೊಂಡಿದ್ದರೆ ಒಳಿತಾಗುತ್ತಿತ್ತು. ಅದು ತಮಗೆ ಸಾಧ್ಯವಿತ್ತು. ನಾವು ಸರ್ವ ಪ್ರಕಾರದ ಆಧುನಿಕ ಜ್ಞಾನಕ್ಕಾಗಿ ಪಶ್ಚಿಮವನ್ನು ಅವಲಂಬಿಸಿದ ಸತ್ಯವನ್ನು ಗಮನಕ್ಕೆ ತಂದುಕೊಂಡಾಗ ನನಗನಿಸುವದೇನೆಂದರೆ ವಿವಿಧ ವಿಶ್ವವಿದ್ಯಾಲಯಗಳ ಹೊಸ ಪದವೀಧರ ಯುವ ವಿದ್ಯಾರ್ಥಿಗಳಿಗಾಗಿ ಆಯಾ ಜ್ಞಾನಶಾಖೆಯ ಮೂಲ ಬುನಾದಿಯನ್ನು ನಾವು ಈಗಲೇ ಸಿದ್ಧಪಡಿಸುವುದು ಸಾಧ್ಯವಿದೆ. ಅಧ್ಯಯನಶೀಲ ಪ್ರಾಧ್ಯಾಪಕರಿಗಾಗಿ ವಿಶ್ವವಿದ್ಯಾಲಯವು ವ್ಯವಸ್ಥೆಯನ್ನು ಮಾಡಿದೆ. ಆದರೆ ಹೊಸ ಜ್ಞಾನ ಸಂಪಾದನೆಗಾಗಿ ಮತ್ತು ಅದೂ ಸಹ ಅನುಭವಿ ಪ್ರಾಧ್ಯಾಪಕರ ನಿರೀಕ್ಷಣೆಯ ಕೆಳಗೆ, ಅವರ ಮಾರ್ಗದರ್ಶನದ ಅಡಿಯಲ್ಲಿ ಮಾಡುವ ವಿದ್ಯಾರ್ಥಿಗಳಿಗಾಗಿ ಮಾಡಿದ ವ್ಯವಸ್ಥೆ ವಿರಳವಾಗಿ ಗೋಚರಿಸುತ್ತದೆ. ವಿದೇಶಿ ಭಾಷೆಗಳ ವಿವಿಧ ದೇಶಗಳಲ್ಲಿಯ ಮಾನವಿಕ ಜ್ಞಾನಗಳ ಬಗೆಗಿನ ಗ್ರಂಥಗಳು ಭಾರತೀಯ ಭಾಷೆಗಳಲ್ಲಿ ಬರಬೇಕಾದ ಅಗತ್ಯವಿದೆ.

ಮತ್ತೊಂದು ವ್ಯಾಪಕ ಕ್ಷೇತ್ರವೆಂದರೆ ಪುಸ್ತಕಗಳದ್ದು. ಪ್ರಾಚೀನ, ಮಧ್ಯಯುಗೀನ ಅರ್ವಾಚೀನ (ಮತ್ತು ಸಮಕಾಲೀನ) ಭಾರತೀಯ ಮತ್ತು ವಿದೇಶಿ ಗ್ರಂಥಗಳನ್ನು ಸಂಗ್ರಹಿಸಿ, ಅವುಗಳನ್ನು ಭಾರತೀಯ ಭಾಷೆಗಳಿಗೆ ಅನುವಾದ ಮಾಡುವ ಅಗತ್ಯವಿದೆ. ಈ ಗ್ರಂಥಗಳು ಪಾಂಡಿತ್ಯಪೂರ್ಣವೇ ಆಗಿರಲಿ ಅಥವಾ ಸಾಹಿತ್ಯಕವೇ ಆಗಿರಲಿ, ಉದಾಹರಣೆಗಾಗಿ ಮಧ್ಯಯುಗೀನ ಭಾರತೀಯ ಭಾಷೆಗಳ ಪುಸ್ತಕಗಳು, ಸಂಸ್ಕೃತ, ಪಾಲಿ, ಅರ್ಧಮಾಗದಿ, ಪ್ರಾಕೃತ ಮತ್ತು ವಿವಿಧ ಹಳೆಯ ದೇಸಿ ಭಾಷೆಗಳಲ್ಲಿ ಹಸ್ತಲಿಖಿತಗಳಲ್ಲಿ ಉಪಲಬ್ಧವಿವೆ. ವಿಪುಲವಾಗಿದೆ. ವಿದ್ಯಾರ್ಥಿಗಳಿಗೆ ಈ ಹಸ್ತಲಿಖಿತ ಗ್ರಂಥಗಳನ್ನು ಓದುವ ಕಲೆಯನ್ನು ಅಗತ್ಯ ಕಲಿಸಬೇಕಾಗಿದೆ. ಈ ಗ್ರಂಥಗಳನ್ನು ಮೂಲಭಾಷೆಗಳಲ್ಲಿ ಮುದ್ರಿಸಬೇಕು, ಅಧ್ಯಯನ ನಡೆಸಬೇಕು ಮತ್ತು ಅವುಗಳ ಅನುವಾದವೂ ಆಗಬೇಕು.

ಪಾಶ್ಚಾತ್ಯ ಲೇಖಕರಲ್ಲಿ ಆಲ್ಬರ್ಟ್ ಕಾಮೂ, ಹರಮನ್ ಹೆಸ್, ಆರ್ಥರ್ ಕೋಸ್ಲರ್ ಮತ್ತು ಉಳಿದ ಹಲವು ಶ್ರೇಷ್ಠರ ಪುಸ್ತಕಗಳು ಬುದ್ಧಿಯು ಪರಿಪಕ್ವಗೊಳ್ಳಲು ಅವಶ್ಯಕವಾಗಿವೆ. ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ಪ್ರಕಟಿಸಿದ 'ಪಾಸ್ಟ್ ಮಾಸ್ಟರ್ಸ್' ಎಂಬ ವಿಶ್ವವಿಖ್ಯಾತ ಮಾಲಿಕೆ ಹಾಗೂ ಫಾಂಟಾನಾ ಎಂಬ ಪ್ರಕಾಶದನವರ ಶ್ರೇಷ್ಠ ಲೇಖಕರ ಹೊಸ ಪುಸ್ತಕಗಳು ಇವು ಹಲವು ಉದಾಹರಣೆಯಲ್ಲಿ ಎರಡು ಮಾತ್ರ ನೀಡುತ್ತಿದ್ದೇನೆ. ಈ ಎಲ್ಲ ಗ್ರಂಥಗಳು ಉಪಯುಕ್ತ, ಆಶಯ ಘನ ಮತ್ತು ಶೈಲಿಯಿಂದ ಕೂಡಿವೆ. ಈ ಗ್ರಂಥಗಳ ಓದು, ಅವುಗಳ ವಿಶ್ಲೇಷಣೆ ಮತ್ತು ಅನುವಾದಗೊಳ್ಳಬೇಕಾದ ಅಗತ್ಯವಿದೆ.

ನನ್ನ ಮೂರನೇ ಸೂಚನೆಯು ಈ ದೇಶದಲ್ಲಿಯ ಚಿಕ್ಕ ದೊಡ್ಡ ಗ್ರಂಥಾಲಯಗಳ ಬಗೆಗಿದೆ. ಈ ಎಲ್ಲ ಗ್ರಂಥಾಲಯಗಳು ಅವಸಾನದಂಚಿನಲ್ಲಿದ್ದು, ತೀರ ನಿರ್ಲಕ್ಷ್ಯಕ್ಕೊಳಗಾಗಿವೆ. ರೂಪಾಯಿಯ ಅಪಮೌಲ್ಯಗೊಂಡಿದ್ದರಿಂದ ಗ್ರಂಥಾಲಯಗಳಿಗೆ ಪಾಶ್ಚಾತ್ಯ ಪ್ರಕಾಶಕರು ಪ್ರಕಟಿಸಿದ ಶ್ರೇಷ್ಠ ಲೇಖಕರ ಹೊಸ ಕೃತಿಗಳನ್ನು ಖರೀದಿಸುವುದು ಅಸಾಧ್ಯವಾಗಿದೆ. ನಮ್ಮ ದೇಶದ ಗ್ರಂಥ ಮಾರಾಟಗಾರರ ವ್ಯವಹಾರ ಸಹ ಮಹಾ ಸಂಟಕದಿಂದ ಬಳಲುತ್ತಿದೆ.

ನಾನು ಧಾರ್ಷ್ಟ್ಯ ಸೂಚನೆ ಮಾಡುತ್ತಿರುವ ಬಗ್ಗೆ ಕ್ಷಮೆಯಿರಲಿ. ತುರ್ತು ಪರಿಸ್ಥಿತಿಯ ಅನುಭವದ ಬಳಿಕ ನಾನು ಪ್ರಶಸ್ತಿಯನ್ನು ನಿರಾಕರಿಸುತ್ತ ಬಂದಿದ್ದೇನೆ. ಲೇಖಕನು (ಪ್ರೌಢರು ಸಹ) ಪ್ರಶಸ್ತಿಗಾಗಿ ಏನೇನು ರಾಜಕಾರಣ ಮಾಡುತ್ತಾರೆ ಎಂಬುದನ್ನು ದುಃಖಿತಳಾಗಿ ಗಮನಿಸುತ್ತಿದ್ದೇನೆ. ಸಾಮಾನ್ಯ ಅರ್ಹತೆಯ ತಮ್ಮ ತಮ್ಮ ಗುಂಪಿನ ಲೇಖಕನನ್ನು ಮುಂದೆದೂಡುವ ರೋಗಗ್ರಸ್ತ ಮನೋವೃತ್ತಿ ಮತ್ತು ರಹಸ್ಯ ತಂತ್ರಗಳು ಬೆಳೆಯುತ್ತ ಸಾಗಿರುವುದನ್ನು ಕಾಣಬಹುದಾಗಿದೆ. ಬೌದ್ಧಿಕ ವಾತಾವರಣವು ದಿನೇದಿನೇ ಮತ್ತಷ್ಟು ಕಲುಷಿತಗೊಳ್ಳುತ್ತ ಸಾಗಿದೆ.

ಪ್ರಶಸ್ತಿಯು ಯಾರನ್ನೂ ಅಧಿಕ ಪ್ರಜ್ಞಾವಂತರನ್ನಾಗಿ, ಪ್ರತಿಭಾಶಾಲಿಯನ್ನಾಗಿ ಮಾಡುವುದಿಲ್ಲ. ಅದು ಕೇವಲ ಶ್ರೀಮಂತನನ್ನಾಗಿ ಮಾಡಬಹುದು. ಸದ್ಯ ಈ ದೇಶದಲ್ಲಿ ಸರಕಾರ, ಸಂಸ್ಥೆ ಮತ್ತು ಪ್ರತಿಷ್ಠಾನದಿಂದ ಸಿಗುವ ಪ್ರಶಸ್ತಿಯಿಂದಾಗಿ ಸಾಹಿತ್ಯವು ಆಶ್ರಯವಿಲ್ಲದೆ ಬದುಕಲಾರದು ಎಂಬ ವಾತಾವರಣವು ನಿರ್ಮಾಣವಾಗುತ್ತಲಿದೆ. ಅದರಲ್ಲಿ ಖ್ಯಾತಿಯ ಲೋಭವೂ ಹರಡುತ್ತಿದೆ. ಆದಷ್ಟು ಬೇಗ ಪ್ರಶಸ್ತಿ ನೀಡುವ ಸರಕಾರ, ಖಾಸಗಿ ಸಂಸ್ಥೆಗಳು ಸರ್ವಾಧಿಕಾರದ ಚಾಲಕರಾಗಿ ನಮ್ಮ ಲೇಖಕರನ್ನು ನಿವೃತ್ತರನ್ನಾಗಿ ಮಾಡಿಬಿಡುತ್ತವೆ ಎಂದೆನಿಸುತ್ತಿದೆ. ಒಮ್ಮೆ ಪ್ರಶಸ್ತಿ ಲಭಿಸಿದ ಬಳಿಕ, ಬೇರೊಂದು ಶ್ರೇಷ್ಠ ಪ್ರಶಸ್ತಿಯು ಸಿಗಲೆಂದು ಲೇಖಕರೂ ಆಶ್ರಯದಾತನನ್ನು ಆಕರ್ಷಿಸುವ ಪ್ರಯತ್ನ ಮಾಡುತ್ತಾರೆ. ಮತ್ತೊಂದು ಭಯವೆಂದರೆ ಬೇಗ ಪ್ರಶಸ್ತಿ ಮತ್ತು ಅನುದಾನವಿಲ್ಲದೆ ಬದುಕುವ ಅಸಮರ್ಥ ಲೇಖಕರ ಪೀಳಿಗೆಯು ನಿರ್ಮಾಣಗೊಳ್ಳುವ ಸಾಧ್ಯತೆಯೂ ಇದೆ. ಕಲ್ಪನಾ ಶಕ್ತಿಯನ್ನು ಖರೀದಿಸುವುದು ಸಾಧ್ಯವಿಲ್ಲೆಂದು ಅಮೆರಿಕೆಯ ಪಾಲ್ ಥೆರಾಕ್ಸ್ ಹೇಳಿದ್ದಾನೆ. ನಾನಿದನ್ನು ಒಪ್ಪುತ್ತೇನೆ.

ಆದರೆ ಅದರ ಅರ್ಥ ಹಣಕ್ಕೆ ಬೆಲೆಯಿಲ್ಲ, ಅದು ನಿರುಪಯೋಗಿ ಎಂದೇನಲ್ಲ. ಇದೇ ಹಣವನ್ನು ಗ್ರಂಥಾಲಯಗಳಿಗೆ ನೀಡಬಹುದು. ಕಳೆದ ೨-೩ ದಶಕಗಳಿಂದ ಗ್ರಂಥಾಲಯಗಳು ದರಿದ್ರಗೊಂಡಿವೆ. ಎಷ್ಟೋ ಮುಚ್ಚಿವೆ. ಗ್ರಂಥಾಲಯ, ನಿಯತಕಾಲಿಕ, ಕಿರು ಪ್ರಕಾಶಕ ವಿಶ್ವವಿದ್ಯಾಲಯಗಳ ಜಾಣ ವಿದ್ಯಾರ್ಥಿಗಳು ಆಶ್ರಯ

ಪಡೆಯಲು ಅರ್ಹರಾಗಿದ್ದಾರೆ. ಅವರಿಲ್ಲದೆ ವಿದ್ಯಾ-ವ್ಯವಸಾಯ ಬದುಕಲಾರದು. ವಿದ್ಯಾರ್ಥಿಗಳು ಆರ್ಥಿಕ ಸಹಾಯಕ್ಕೆ ಹೊಣೆಗಾರರಾಗಿರುತ್ತಾರೆ. ಹೊಣೆಗಾರರಿಗೇ ಆರ್ಥಿಕ ಸಹಾಯ ಮಾಡಬೇಕು.

ತಮ್ಮ ವಿಶ್ವಾಸಿ

ದುರ್ಗಾ ಭಾಗವತ

(೨೭ ಜುಲೈ, ೧೯೯೧ರಂದು ಬಿರ್ಲಾ ಫೌಂಡೇಶನ್ನಿನ ಸಂಚಾಲಕರಿಗೆ ಬರೆದ ಪತ್ರ)

* * * *

೨೨. ಮಹಾರಾಷ್ಟ್ರದ ಮಹಿಳೆ : ಅಂದು – ಇಂದು

ಹಲವು ಸಲ ನಾಲ್ಕಾರು ಜನರು ಸೇರಿ ಸಮಾಜ ಕಲ್ಯಾಣದ ಚರ್ಚೆ ಮಾಡಲಾರಂಭಿಸಿದಾಗ, ಆ ಚರ್ಚೆಯ ಯಾವುದಾದರೂ ಸೂತ್ರ ಇಂದಿನ ಆಧುನಿಕ ಮಹಿಳೆಯ ಸುತ್ತಲೇ ಹೆಣೆದಿರುವುದನ್ನು ಕಾಣುತ್ತೇವೆ. ತಿಲಕ–ಅಗರಕರರ ಕಾಲದಿಂದಲೂ ಒಳಿತು–ಕೆಡುಕಿನ ಸ್ತುತಿ–ನಿಂದೆಗೆ ಬಲಿಯಾದ ಕಲಿತ ಮಹಿಳೆಯು ಬೇರೆ ಅವಸ್ಥೆಯಿಂದಲಾದರೂ ಇಂದಿಗೂ ಅದೇ ಚರ್ಚೆ ಸುಳಿಯಲ್ಲಿ ಸಿಕ್ಕು ಒದ್ದಾಡುತ್ತಿದ್ದಾಳೆ ಎಂದರೆ ಅತಿಶಯೋಕ್ತಿಯಾಗಲಾರದು. ವ್ಯತ್ಯಾಸವಿಷ್ಟೇ ೭೦–೮೦ ವರ್ಷಗಳ ಹಿಂದೆ ಮಹಿಳೆಯರ ಶಿಕ್ಷಣದ ಕಲ್ಪನೆಯೇ ಬೇರೆಯಾಗಿತ್ತು. ಸಮಾಜದ ಸಾಂಘಿಕ ಪ್ರವೃತ್ತಿಯ ಮತ್ತು ಕೃತಿಯ ಕ್ಷೇತ್ರವು ಸಂಪೂರ್ಣವಾಗಿ ಪುರುಷರೇ ನಿರ್ಮಿಸಿದವುಗಳು. ರಾಮ ಮೋಹನರಾಯ್ ಇವರು ಮೊದಲಿಗೆ ಸತಿ ಪದ್ಧತಿಯನ್ನು ಹೋಗಲಾಡಿಸುವ ಪ್ರಯತ್ನ ಮಾಡಿದರು. ಪಾಶ್ಚಾತ್ಯ ಸಾಮಾಜಿಕ ಪ್ರವೃತ್ತಿಗೆ ಅನುಗುಣವಾಗಿ ಕರುಣೆ, ಈಶಪ್ರೇಮ ಇವುಗಳ ಆಂತರಿಕ ಭಾವನೆಯಿಂದಾಗಿ ಭಾರತೀಯ ನಾರಿಗೆ ಮುಕ್ತ ಸಾಮಾಜಿಕ ಜೀವನದ ವರದಾನ ಲಭಿಸಿತು. ಪ್ರಾಂತ–ಪ್ರಾಂತಗಳಲ್ಲಿ ಈ ಬೀಜ ಅಂಕುರಿಸಿತು. ಮಹಾರಾಷ್ಟ್ರದಲ್ಲಿ ನೋಡು–ನೋಡುವಷ್ಟರಲ್ಲಿ ಅದು ವೃಕ್ಷವಾಯಿತು. ೧೯೫೦ರ ವರೆಗಿನ ಕಾಲದಲ್ಲೇ ಕೈಬೆರಳಿನಲ್ಲಿ ಎಣಿಸುವಷ್ಟು ಮಹಾರಾಷ್ಟ್ರದ ಮಹಿಳೆಯರ ಕೆಲವೇ ಕಾರ್ಯದಿಂದಲೇ ಈ ಅಪೂರ್ವ ವೃಕ್ಷ ಅಪರೂಪಕ್ಕೆ ರೂಪಗೊಂಡಿತು. ಆ ಕಾಲದ ಋಷಿಸದೃಶ, ಆದರೂ ಕನಸುಗಾರ ಸಮಾಜ ಸುಧಾರಕರು, ಕೋಮಲ, ವರ್ಣರಂಜಿತ, ಮೃದು ಮತ್ತು ತನ್ನೊಳಗೆ ಮುಳುಗಿರುವ ಮಹಿಳೆಯರ ಕೃತಿಯನ್ನು ಈ ಸುಧಾರಕರು ಮನದುಂಬಿ ಚಿತ್ರಿಸಿದ್ದರು. ಮಹಿಳಾ ಶಿಕ್ಷಣ ಅರಿತೋ ಅರಿಯದೋ ಕೈಕೊಂಡ ಕೃತಿಯಿಂದ ಹೊರಬಂದ ವಿಚಿತ್ರ ಪರಾವಲಂಬಿ ಬಳ್ಳಿಯನ್ನು ಕಂಡು ಸುಧಾರಕರ ಕನಸು ಭಗ್ನಗೊಂಡಿತ್ತು.ಇದು ಹೂವಿನದಾಗಲಿ ಹಣ್ಣಿನದಾಗಲಿ ಗಿಡವಾಗಿರಲಿಲ್ಲ, ಒಂದು ವಿಚಿತ್ರ ಅಪರೂಪದ ಗಟ್ಟಿಮುಟ್ಟು ಜಾತಿಯ ಮರವಾಗಿತ್ತು. ಅದಕ್ಕೆ ಪೌರ್ವಾತ್ಯದ್ದಾಗಲಿ, ಪಾಶ್ಚಾತ್ಯದ್ದಾಗಲಿ ಸಂಸ್ಕಾರದ ಆಧಾರವಿರಲಿಲ್ಲ. ಎರಡೂ ಸಂಸ್ಕಾರದಲ್ಲಿಯ ಸದೃಢ ಸಂಕಲ್ಪ ಮತ್ತು ಸ್ವಾನುಭವದ ಅಪೂರ್ವ ಪರಿಪಾಕದಿಂದ ಒಂದು ಪವಾಡ ಸದೃಶ್ಯ ನಿರ್ಮಾಣವೇ ಸಿದ್ಧಗೊಂಡಿತು. ಇದು ಎಲ್ಲ ಪ್ರಾಂತಗಳಲ್ಲೂ

ಸಿದ್ಧಗೊಳ್ಳಲಾರಂಭಿಸಿತ್ತು. ಆದರೆ ಮಹಾರಾಷ್ಟ್ರದಲ್ಲಿ ಕೆಲವೇ ಸಮಯದಲ್ಲಿ ಸಾಕಷ್ಟು ಸಮೃದ್ಧವಾದ ರೀತಿಯಲ್ಲಿ ಸಿದ್ಧಗೊಂಡಿತು. ಇದಕ್ಕೆ ಯಾರೂ ಸಮಾನರಿಲ್ಲ. ಇದಕ್ಕೆಲ್ಲ ನಾಲ್ಕಾರು ಮಹಿಳೆಯರ ಕರ್ತೃತ್ವ ಶಕ್ತಿಯೇ ಕಾರಣವಾಯಿತು. ಪಂಡಿತೆ ರಮಾಬಾಯಿ, ಡಾ. ಆನಂದಬಾಯಿ ಜೋಶಿ, ಡಾ. ರಖಮಾಬಾಯಿ ಮತ್ತು ಸಾವಿತ್ರಿಬಾಯಿ ಫುಲೆ - ಇವರೇ ಆ ನಾಲ್ವರು.

ಈ ಮಹಿಳೆಯರಿಗಿಂತ ಮೊದಲು ಪೇಶ್ವೆಯರ ಕೊನೆಗಾಲದಲ್ಲಿ ಬೇರೆ ಮೂವರು ಮಹಿಳೆಯರು ಆಗಿಹೋದರು. ಅವರೆಂದರೆ ಆನಂದಿಬಾಯಿ ಪೇಶ್ವೆ, ಅಹಲ್ಯಾಬಾಯಿ ಹೋಳ್ಕರ್ ಮತ್ತು ಝಾಂಸಿ ಲಕ್ಷ್ಮೀಬಾಯಿ. ಈ ಮೂವರು ಮೂರು ಬೇರೆ-ಬೇರೆ ರೀತಿಯಲ್ಲಿ ಮಹಾರಾಷ್ಟ್ರದ ಮತ್ತು ಪರ್ಯಾಯವಾಗಿ ಸಂಪೂರ್ಣ ಭಾರತದ ಭಾಗ್ಯ ದುರ್ಭಾಗ್ಯವನ್ನು ನಿರ್ಧರಿಸಿದರು. ಈ ಮೂವರ ಸ್ವಭಾವ ಭಿನ್ನ-ಭಿನ್ನವಾಗಿತ್ತು ಮತ್ತು ತೀರ ಸ್ವತಂತ್ರ ಬುದ್ಧಿಯವರಾಗಿದ್ದರು. ಅವರ ಕಾರ್ಯದ ಯಶ-ಅಪಯಶದ ವಿವರಣೆ ಇಲ್ಲಿ ಮಾಡಬೇಕಾಗಿಲ್ಲ. ಸ್ಥೂಲವಾದ ವಿಷಯವೇನೆಂದರೆ ಸ್ವಾತಂತ್ರ್ಯ ಅಸ್ತ್ರದ ಕೊನೆಯ ಗಳಿಗೆಯೊಂದಿಗೆ ಅವರ ಕಾರ್ಯವನ್ನು ಜೋಡಿಸಿದ್ದರಿಂದ ಅವರು ಸಂಪೂರ್ಣವಾಗಿ ಮಸಕಾಗಿಹೋದರು. ಅವರ ಕಾರ್ಯ ಕೌಶಲ್ಯದ ಜೀವಂತ ಗುರುತು ಹಿಂದೆ ಉಳಿಯಲಿಲ್ಲ.

ಆದರೆ ಈ ಮೂವರೂ ಮಹಾರಾಷ್ಟ್ರದವರೇ ಆಗಿರುವದರಿಂದ ಆ ಮೂವರ ಗುಣಾವಗುಣದ ಉತ್ಕರ್ಷ ಹಿಂದೆ ಅಷ್ಟೊಂದು ಉಳಿಯಲಿಲ್ಲ. ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಚರಿತ್ರೆಯ ಅಧ್ಯಯನವು ರಾಷ್ಟ್ರಾಭಿಮಾನದ ಏಕಮೇವ ಪ್ರತೀಕವಾಗಿದೆ ಎಂಬ ನಿಷ್ಠೆಯು ಹಲವು ವರ್ಷಗಳ ಕಾಲ ಇದ್ದುದರಿಂದ ಆನಂದಿಬಾಯಿ ಮಹಾರಾಷ್ಟ್ರದ ದುರ್ಗುಣದ ಪ್ರತೀಕವಾಗುಳಿದಳು. ಅಹಲ್ಯಾಬಾಯಿಯು ಪವಿತ್ರದ ಪ್ರತೀಕವಾದಳು. ಅವಳ ಕರ್ತೃತ್ವದ ಅರಿವು ಮಾತ್ರ ಸಾಮಾಜಿಕ ಕೃತಿಯಿಂದ ಜಾರಿತು. ಮತ್ತು ಲಕ್ಷ್ಮೀಬಾಯಿ ತರುಣರ ಬಲಿದಾನದ ವಿದ್ಯುತ್ತುಲ್ಯ ಪ್ರತೀಕವೆನಿಸಿದಳು. ಇದಕ್ಕಿಂದ ಆಳಕ್ಕಿಳಿದು ಈ ಮಹಿಳೆಯರ ಕರ್ತೃತ್ವದ, ಅವರ ವ್ಯಕ್ತಿತ್ವದ ಅನುಭವದಿಂದ ಸಾಕಾರಗೊಳ್ಳುವ ದರ್ಶನವನ್ನು ಪಡೆಯುವ ಅಗತ್ಯ ಯಾರಿಗೂ ಬೀಳಲಿಲ್ಲ.

* * *

ಪ್ರತೀಕರೂಪವಾದ ಈ ಪೂರ್ವಜರಿಂದ ಯಾವುದೇ ಸಂದೇಶವು ಈ ಹೊಸ ತಲೆಮಾರಿನ ನಾಲ್ವರು ಮಹಿಳೆಯರಿಗೆ ಸಿಗಲೇ ಇಲ್ಲ. ಆಗ ಕಾಲದ ಅಂತರ ಅಷ್ಟೊಂದು ಇರದಿದ್ದರೂ, ಅವರ ಈ ಮೊದಲಿನ ಸಾಮಾಜಿಕ ಜೀವನ ಪ್ರಖರ ಅರಿವು ಇರುವ, ಕರ್ತೃತ್ವಶಾಲಿ ಮಹಿಳೆಯರಿಂದ ದೂರ ಸರಿದಿದೆ. ಅದೆಷ್ಟೆಂದರೆ ಅವರ ಯಾವುದೇ ವಾರಸುದಾರಿಕೆಯು ಇವರಿಗೆ ತಲುಪಲೇ

ಇಲ್ಲ. ಅವರ ಜೀವನದಿಂದ ಯಾವುದೇ ಪ್ರೇರಣೆಯು ಇವರಿಗೆ ಸಿಗಲಿಲ್ಲ. ಅವರ ಮತ್ತು ಇವರ ಜೀವನದ ಗತಿಸೂತ್ರವೇ ಭಿನ್ನವಾದುದು. ಮೊದಲ ಗುಂಪಿನ ಮಹಿಳೆಯರ ಜೀವನವು ಸ್ಥಳೀಯ ಅರಿವಿನಿಂದಲೇ ರೂಪಗೊಂಡಿರುವಂತಹದು. ಆ ಮಹಿಳೆಯರು ಸಂಪೂರ್ಣವಾಗಿ ಇದೇ ನೆಲದವರಾಗಿದ್ದರು. ಪೂರ್ಣ ಭಾರತೀಯ, ಪೂರ್ಣ ಹಿಂದು. ಆರ್ಯ ಜಾತಿನಿಷ್ಠ ಪ್ರಕ್ರಿಯೆಯಿಂದಲೇ ಗುಣದೋಷ ಸಹಿತ ರೂಪಗೊಂಡವರು. ಆದರೆ ಎರಡನೇ ವರ್ಗದ ಮಹಿಳೆಯರು ಮಾತ್ರ ತುಂಬ ತುಂಬ ಪರಿವರ್ತನೆಯಾಗಿದ್ದು ಕಂಡುಬರುತ್ತದೆ. ಮುಸ್ಲಿಂ ಆಡಳಿತದಲ್ಲಿ ನಡೆಯದೇ ಇದ್ದ ಬದಲಾವಣೆಯು ಆಂಗ್ಲರ ಆಡಳಿತದಲ್ಲಿ ಮಂತ್ರದ ಕೋಲಿನಿಂದ ಜಾದೂ ಮಾಡಿದಂತೆ ನಡೆದುಹೋಯಿತು. ಇದಕ್ಕೆ ಪಾಶ್ಚಾತ್ಯ ಆಚಾರ–ವಿಚಾರಗಳ ಅನನ್ಯ ಪ್ರಭಾವ ಭಾರತೀಯ ಪುರುಷರ ಮನದ ಮೇಲೆ ಬಿದ್ದಿರುವ ಪ್ರಭಾವ ಕಾರಣವಾಯಿತು. ಜಾಗತಿಕ ಅರಿವು ಅರಿಯದೆಯೇ ಭಾರತೀಯರ ಮನದೊಳಗೆ ಬೇರೂರಿ, ಅದು ಹಬ್ಬುತ್ತ ಹೋಯಿತು. ಜಾಜ್ವಲ್ಯ ದೇಶಾಭಿಮಾನವೇ ಇರಲಿ, ಇಲ್ಲವೇ ಕಠೋರ ಧರ್ಮಾಭಿಮಾನವೇ ಇರಲಿ, ಅಥವಾ ಯಾವುದೇ ಸಾಮಾಜಿಕ ನಿಲುವೇ ಆಗಿರಲಿ, ಅದರ ನಿಯಂತ್ರಣವು ಪ್ರಾಚೀನ ಭಾರತೀಯ ಆದರ್ಶಕ್ಕನುಗುಣವಾಗಿ ಜರುಗದೆ, ಪಾಶ್ಚಾತ್ಯ ಸಾಮಾಜಿಕ ಆದರ್ಶಕ್ಕನುಗುಣವಾಗಿ ಜರುಗಿತು. ಪಾಶ್ಚಾತ್ಯರ ವಿಜ್ಞಾನ ಅನುಸಂಧಾನ ಮತ್ತು ಕಾಯ್ದೆಯ ಬಗೆಗಿನ ಅವರ ನೈಪುಣ್ಯದ ಪರಿಣಾಮವು ನಮ್ಮ ಸರ್ವ ಚಿಂತಕರ ಮೇಲಾಯಿತು. ವಿವೇಕಾನಂದರ ಎದುರಿಗೆ ಕ್ರೈಸ್ತ ಮಿಶನರಿಗಳ ಆದರ್ಶವಿತ್ತು. ಸಂಶೋಧಕನಿದ್ದರೆ ಅವನ ಮೇಲೆ ಪಾಶ್ಚಾತ್ಯ ಮಿಲ್ ಮತ್ತು ಸ್ಪೆನ್ಸರ್‌ನ ಆದರ್ಶವಿತ್ತು. ದೇಶಭಕ್ತನ ಎದುರಿಗೂ ಮೇಝಿನಿಯ ಆದರ್ಶವಿತ್ತು. ಇದೇ ರೀತಿ ಯಾವ ಯಾವ ಕಾರ್ಯಕ್ಷೇತ್ರವನ್ನು ಆ ಕಾಲದಲ್ಲಿ ಭಾರತೀಯರು ಕರಗತ ಮಾಡಿಕೊಂಡಿದ್ದರೋ ಆ ಆದರ್ಶವೂ ಸಹ ಮೂಲತಃ ಪಾಶ್ಚಾತ್ಯರದ್ದಾಗಿತ್ತು. ಹೀಗಾಗಿ ಸತ್ಯಂ ಶಿವಂ ಸುಂದರಂದಂತಹ ಕೂಝು ಫ್ರೆಂಚ್ ಚಿಂತಕನ ಪ್ರತೀಕವನ್ನು ನಮ್ಮ ವಿದ್ವಾಂಸರು ಎಂಥ ಚಾಣಾಕ್ಷತನದಿಂದ ಕರಗತ ಮಾಡಿಕೊಂಡಿದ್ದರೆಂದರೆ ಅದಕ್ಕೆ ಸಂಸ್ಕೃತ ಶ್ಲೋಕದ ಲೇಪನವನ್ನು ಹೇಗೆ ನೀಡಿದ್ದರೆಂದರೆ ಅದು ನಮ್ಮದೇ ಉಪನಿಷತ್ತಿನ ವಚನವಾಗಿದೆ ಎಂದೆನಿಸುತ್ತದೆ. ಅದೇ ರೀತಿ 'ಹಾಗೆ ನೋಡಿದರೆ ಒಬ್ಬನೇ ದೇವರು' ಎಂಬುದು ತುಕಾರಾಮನ ಉಕ್ತಿಗೆ ಹೊರನೋಟಕ್ಕೆ ಸಾಮ್ಯವಾಗಿರುವಂತೆ ಕಾಣುವ ಕ್ರೈಸ್ತಧರ್ಮಕ್ಕೆ ಪೋಷಕವಾಗಿರುವ ಅಭಂಗವು ಪಠ್ಯದಲ್ಲಿ ನಾನಾ ರೀತಿಯಲ್ಲಿ ಸೇರ್ಪಡೆ ಮಾಡಲಾಯಿತು. ಆರಂಭದಲ್ಲಿ ಪಠ್ಯ ಪುಸ್ತಕಗಳು ಭಾಷಾಂತರ ಮತ್ತು ರೂಪಾಂತರಗಳಾಗಿದ್ದವು. ಆ ಕಾಲದಲ್ಲಿ ವಿಶಿಷ್ಟ ಧರ್ಮಸಂಪ್ರದಾಯ ಬಿಟ್ಟರೆ ಎಲ್ಲ ಸಾಮಾಜಿಕ ಪ್ರಜ್ಞೆಯು ಕ್ರೈಸ್ತ ವಿಚಾರಧಾರೆಗೆ

ಹೋಲುವಂತಿತ್ತು. ಸಾಹಿತ್ಯದಲ್ಲಷ್ಟೇ ಅಲ್ಲ. ಸಾಮಾಜಿಕ ಜೀವನದಲ್ಲೂ ಪಾಶ್ಚಾತ್ಯ ರೂಪಾಂತರದ ಮೇಲೆಯೇ ಆಂಗ್ಲರ ಆಡಳಿತದ ಕಾಲದಲ್ಲಿ ಭಾರತೀಯರು ಅವಲಂಬಿಸಿರಬೇಕಾಯಿತು. ಈ ಮೊದಲಿನ ತಲೆಮಾರು ಹಾಗೂ ಈ ತಲೆಮಾರಿನ ಅಂತರವನ್ನು ಯಾರೂ ಹೆಚ್ಚು ಅಧ್ಯಯನ ಮಾಡಿದಂತಿಲ್ಲ. ಆದರೂ ಇದು ಯಾರಿಗೂ ಎಲ್ಲೂ ಗೋಚರಿಸಿದ ರೀತಿಯಲ್ಲಿದೆ; ಭಾರತೀಯರ ಶಾರೀರಿಕ ಪರಂಪರೆಯು ಅಭಂಗವಾಗುಳಿದರೂ ಮಾನಸಿಕ ಪರಂಪರೆ ಮಾತ್ರ ಹರಿದು ಹೋಯಿತು. ಹೊಸ ಕಲಮನ್ನು ಅದಕ್ಕೆ ಮಾಡಲಾಯಿತು. ಮುಂದೆ ಜಾಗತಿಕ ವಿಚಾರಧಾರೆಗೆ ಅನುಗುಣವಾಗಿ ಸ್ವಂತದ ಜೀರ್ಣ, ಹಳೆಯದಾದರೂ ತೀರ ಜಿಗುಣದ ಇಂಥ ಸಂಸ್ಕೃತಿಯ ಭಾರವನ್ನು ಮೌನವಾಗಿ ಹೊರುತ್ತ ಈ ಇಬ್ಬಗೆಯ ಮನಸ್ಸಿನ ತಲೆಮಾರು ಹೊಸ ಮಾರ್ಗದಲ್ಲಿ ಮುಗ್ಗರಿಸುತ್ತಲೇ ಹೆಜ್ಜೆ ಇಡಲಾರಂಭಿಸಿತು. ಈ ಇಬ್ಬಗೆಯ ಮನಸ್ಸು ಇಂದಿಗೂ ಭಾರತೀಯರ ಅತೀದೊಡ್ಡ ಹೊರೆಯಾಗಿದೆ. ಆದರೆ ಇದೇ ಅದರ ಸುಪ್ತ ವರದಾನವೂ ಆಗಿದೆ. ಏಕೆಂದರೆ ನಾಳೆಯ ಸ್ವತ್ವ ಸ್ಥಾಪನೆಗಾಗಿ ಅದಕ್ಕೆ ಇದೇ ಸಂಘರ್ಷದಿಂದಲೇ ಸ್ಫೂರ್ತಿ ಸಿಗಲಿದೆ. ಸಂಘರ್ಷದ ಮೊದಲ ಉದ್ರೇಕದಲ್ಲಿ ಪಂಡಿತ್ ರಮಾಬಾಯಿ, ಸಾವಿತ್ರಿಬಾಯಿ, ಆನಂದಿಬಾಯಿ ಮತ್ತು ರಖಮಾಬಾಯಿ ಇವರ ಕರ್ತೃತ್ವದ ಅಡಿಪಾಯ ಹಾಕಲಾಗಿದೆ. ಅವರ ಕರ್ತೃತ್ವಕ್ಕೆ ಸಂಕೋಲೆಯೂ ಇದೇ ಸಂಘರ್ಷದಿಂದ ನಿರ್ಮಾಣವಾಯಿತು.

* * *

ಈ ಮಹಿಳೆಯರಲ್ಲಿ ಸಾವಿತ್ರಿಬಾಯಿ ಫುಲೆಯ ಕಾರ್ಯವು ಸಂಪೂರ್ಣವಾಗಿ ಜ್ಯೋತಿಬಾ ಫುಲೆಯವರ ಪೇರಣೆಯಿಂದಲೇ ನಡೆದಿತ್ತು. ಬ್ರಾಹ್ಮಣೇತರರ ಉನ್ನತಿಯೇ ಫುಲೆಯವರ ಪ್ರತಿಜ್ಞೆಯಾಗಿತ್ತು. ಮಹಿಳೆಯರಿಗೆ ಶಿಕ್ಷಣ ಮತ್ತು ಅನಾಥ ಮಹಿಳೆಯರಿಗೆ ಆಸರೆ ಇದು ಅವರ ಕಾರ್ಯದ ಮುಂದಿನ ಅಂಗವಾಗಿತ್ತು. ಆದರೆ ಈ ಕಾರ್ಯದ ಹೊಣೆಯನ್ನು ಸಾವಿತ್ರಿಬಾಯಿ ಹೊತ್ತಳು. ಆದರೆ ಅವರಿಂದ ಬ್ರಾಹ್ಮಣೇತರ ಮಹಿಳೆಯರಿಗೆ ಸ್ಫೂರ್ತಿ ನೀಡುವ ಕಾರ್ಯ ಹೊರುವದಾಗಲಿಲ್ಲ. ಅವಳೊಬ್ಬ ನಿಷ್ಠಾವಂತ ಕಾರ್ಯಕರ್ತೆ, ಇದೇ ಅವಳ ಬಿರುದು. ಪಂಡಿತೇ ರಮಾಬಾಯಿಯ ಸ್ವತಂತ್ರಪ್ರಜ್ಞೆ ಮತ್ತು ಕರ್ತೃತ್ವ ಅವಳ ಬಳಿಯಿರಲಿಲ್ಲ. ಹೀಗಾಗಿ ಅವಳು ಜ್ಯೋತಿಬಾ ಅವರ ಕಾರ್ಯದ ಪರಿಧಿಯಲ್ಲೇ ಉಳಿದಳು. ಅವರ ಕೃತಿಗೆ ಹೊಸ ಹೊಸ ರೆಂಬೆ ಕೊಂಬೆಗಳು ಮೂಡಲೇ ಇಲ್ಲ. ಮಹಿಳಾ ಶಿಕ್ಷಣ ಬೆಳೆಯಿತು. ಅನಾಥಾಶ್ರಮವೂ ಆರಂಭಗೊಂಡಿತು. ಆದರದು ಸಾವಿತ್ರಿಬಾಯಿಯ ಪ್ರೇರಣೆಯಿಂದಲ್ಲ. ಬೇರೆ ಕಾರಣಗಳಿಂದ ಅದರ ಅಗತ್ಯ ಬೆಳೆಯಿತೆಂದು. ಆದರೆ ಸಾವಿತ್ರಿಬಾಯಿಯು ಹೊತ್ತ ಮಹಿಳಾ ಶಿಕ್ಷಣದ ಕಾರ್ಯದ ಬಗೆಗಿನ ಒಂದು

ಮಗ್ಗಲನ್ನು ಡಾ. ಕೇತಕರ ಅವರು ತಮ್ಮ 'ಬ್ರಾಹ್ಮಣ ಕನ್ಯೆ' ಎಂಬ ಕಾದಂಬರಿಯಲ್ಲಿ ಬ್ರಾಹ್ಮಣೇತರ ಮಹಿಳೆಯರ ಶಿಕ್ಷಣದ ಸಂದರ್ಭದಲ್ಲಿ ಉಲ್ಲೇಖಿಸಿದ್ದು ಕಂಡು ಬರುತ್ತದೆ. ಆ ಕಾಲದಲ್ಲಿ ಬ್ರಾಹ್ಮಣ ಮಹಿಳೆಯರಿಗೆ ಶಿಕ್ಷಣ ಪಡೆದು ನೌಕರಿ ಮಾಡುವದೆಂದರೆ ಕೀಳರಿಮೆಯೆನಿಸುತ್ತಿತ್ತು. ಹೀಗಾಗಿ ಬಹಳಷ್ಟು ಶಿಕ್ಷಕಿಯರು ಬ್ರಾಹ್ಮಣೇತರರೇ ಆಗಿದ್ದರು ಎಂಬ ಅಭಿಪ್ರಾಯವನ್ನು ಅವರು ನಮೂದಿಸಿದ್ದಾರೆ. ಇದರಲ್ಲಿ ತಥ್ಯವಿಲ್ಲವೆಂದು ಯಾರಾದರೂ ಹೇಳಬಹುದೇ? ಆದರೆ ಈ ಪರಿಸ್ಥಿತಿಯು ಬಹಳ ಕಾಲ ಉಳಿಯಲಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಬ್ರಾಹ್ಮಣ ಹಾಗೂ ಬ್ರಾಹ್ಮಣ ಸದೃಶ ಸಾರಸ್ವತ, ಕಾಯಸ್ಥ (ಲೇಖನ ಕಾರ್ಯ ಮಾಡುವ ಒಂದು ಜಾತಿ) ಮುಂತಾದ ಉಚ್ಚ ಜಾತೀಯ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಸೇರಿಕೊಂಡರು. ಕೇತಕರ ಅವರು ಉಲ್ಲೇಖಿಸಿದ ಅದಕ್ಕಿಂತ ಕೆಳಜಾತಿಯ ಮಹಿಳೆಯರ ಸಂಖ್ಯೆಯು ಹೆಚ್ಚಿದರೂ ಪ್ರಮಾಣ ಮಾತ್ರ ಕಡಿಮೆಯೇ ಉಳಿಯಿತು. ಈಗಿನ ಮಹಾರಾಷ್ಟ್ರದ ಸಾಮಾಜಿಕ-ರಾಜಕೀಯ ಭೂಮಿಕೆಯನ್ನು ಗಮನಕ್ಕೆ ತಂದುಕೊಂಡಲ್ಲಿ ಶಿಕ್ಷಣ ಕ್ಷೇತ್ರದಲ್ಲಿ, ಶಿಕ್ಷಣಕ್ಕಿಂತ ಸುರಕ್ಷಿತವಾದ ಚಾಕರಿ ವೃತ್ತಿಗೆ ಹೆಚ್ಚು ಮಹತ್ವ ಬಂದಿರುವುದರಿಂದ ಉಮೇದುವಾರರ ಸ್ಪರ್ಧೆ ತುಂಬ ದೊಡ್ಡದಿದೆ. ಇದರಿಂದಾಗಿಯೂ ಉಚ್ಚಜಾತೀಯ ಮಹಿಳೆಯರ ಸ್ಥಾನ ಈ ಕ್ಷೇತ್ರದಲ್ಲಿ ತನ್ನಿಂದ ತಾನೇ ಮತ್ತೆ ಸಂಕೋಚಗೊಳ್ಳುತ್ತಿದೆ. ಪಂಡಿತೆ ರಮಾಬಾಯಿಯ ಹೆಸರು ವಿರೋಧದ ಧಾರೆಯಲ್ಲಿ ಸತತ ಉಳಿಯಿತು. ಅವರ ಪೂರ್ವಜೀವನದ ಸಂಕ್ರಮಣವನ್ನು ಕಂಡಾಗ ಅಚ್ಚರಿಯಾಗುತ್ತದೆ. ಆ ಜೀವನವು ಪವಿತ್ರ, ಉಕ್ಕಿ ಹರಿಯುವ ನದಿಯ ವೇಗದ, ಸತ್ಯದ ಶೋಧದಲ್ಲಿ ಸುತ್ತು ಹಾಕುವ ಅಸ್ಥಿರಮಯವಾಗಿತ್ತು. ಪಂಡಿತೆ ರಮಾಬಾಯಿಯ ಬಳಿಕ, ಇಂದಿಗೂ ಹೀಗೆ ಸಾಮಾಜಿಕ ಜೀವನದ ಮಹತ್ವ ಅರಿತವರು, ಸತ್ಯದ ಬೆನ್ನು ಹತ್ತಿ ಅದಕ್ಕಾಗಿ ಹೊಸ-ಹೊಸ ಪ್ರಯೋಗ ಮಾಡಲು ಸಿದ್ಧವಾಗಿರುವವರು, ಪಾವಿತ್ರ್ಯದ ಪ್ರೇರಣೆಯ ದಿಟ್ಟತನ ಬೆಳೆಸಿಕೊಂಡ ಮತ್ತೊಬ್ಬ ಮಹಿಳೆ ಮಹಾರಾಷ್ಟ್ರದಲ್ಲಿ ಕಾಣಸಿಗಲಾರದು. ಕಲಿತ ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ವ್ಯವಸಾಯ ಕ್ಷೇತ್ರದಲ್ಲೂ ಉಚ್ಚ ಹುದ್ದೆ ಪಡೆದ ಧನ-ಮಾನ ವಿಭೂಷಿತ ವಿದೂಷಿಯೂ ಅಲ್ಲಲ್ಲಿ ನೋಡಲು ಸಿಗುತ್ತಾರೆ. ಆದರೆ ಸ್ವತಂತ್ರ ಪ್ರಜ್ಞೆ ಮತ್ತು ನವನವೋನ್ಮೇಷಶಾಲಿ ಪ್ರಯೋಗಶೀಲತೆಯ ಸ್ಪರ್ಶ ಇಂದಿಗೂ ಆಗುತ್ತಿಲ್ಲ. ಆಶ್ರಮ ಮುನ್ನಡೆಸುವ ತಂತ್ರ ರಮಾಬಾಯಿಯಿಂದಲೇ ಪ್ರಗಲ್ಭಗೊಂಡಿತು. ಅದೂ ಸಹ ಅವರ ಬಳಿಕ ಕರ್ವೆ, ರಮಾಬಾಯಿ ರಾನಡೆ ಮುಂತಾದವರು ಮತ್ತಷ್ಟು ವಿಸ್ತೃತಗೊಳಿಸಿ ಸಾರ್ವತ್ರಿಕವನ್ನಾಗಿ ಮಾಡಿದರು. ಈಗ ಅಲ್ಲಲ್ಲಿ ಹಲವು ನಿಷ್ಠಾವಂತ ಮಹಿಳೆಯರು ಆ ಕಾರ್ಯವನ್ನು ಮುನ್ನಡೆಸುವುದನ್ನು ಕಾಣಬಹುದಾಗಿದೆ. ಇಂಥ ಕಾರ್ಯಗಳ ಬಗ್ಗೆ ಬಹಳ ಚರ್ಚೆಯಾಗುವದಿಲ್ಲ. ಆದರೆ ಇಂಥ ಸಂಸ್ಥೆಗಳು

ಹಲವು ಕಡೆಗಳಲ್ಲಿ ಕಾರ್ಯನಿರತಗೊಂಡಿವೆ. ಅಷ್ಟೇ ಅಲ್ಲ. ಅದಕ್ಕೆ ಪೂರಕವಾಗಿ ಹೆರಿಗೆಗೃಹ, ಆಸ್ಪತ್ರೆ ಮುಂತಾದವುಗಳನ್ನು ಸ್ತ್ರೀಯರು ಅಚ್ಚುಕಟ್ಟಾಗಿ ನಡೆಸುತ್ತಿದ್ದಾರೆ. ನಾಗಪುರದ ಕಮಲಾಬಾಯಿ ಹೋಸ್ಪೇಟ, ಅಹಮದನಗರದ ಜಾನಕಿಬಾಯಿ ಆಪ್ಟೆ-ಮುಂತಾದ ಮಹಿಳೆಯರನ್ನು ಇಂಥ ಕಾರ್ಯದಲ್ಲಿ ಪ್ರಾಮುಖ್ಯವಾಗಿ ಪರಿಗಣಿಸಬೇಕಾಗುತ್ತದೆ. ಈಗ ಈ ಕಾರ್ಯ ಯಾವ ಬಗೆಯಲ್ಲಿ ಜರುಗುತ್ತಿದೆ ಎಂದರೆ ಹಲವು ಅನಾಮಿಕ ಕಾರ್ಯಕರ್ತರೂ ಇದರಲ್ಲಿ ಸುಖದಿಂದ ಸಮಾವೇಶವಾಗುತ್ತಿದ್ದಾರೆ. ಅನಾಮಿಕ ಕಾರ್ಯಕರ್ತರು ಸಿಕ್ಕರೆ ಆ ಕಾರ್ಯವು ಮುಖ್ಯನದಿಗೆ ಚಿಕ್ಕಚಿಕ್ಕ ಹಳ್ಳಗಳು ಬಂದು ಸೇರಿದಂತೆ ಸುಖದಿಂದ ಮುನ್ನಡೆ ಸಾಗಿಸುತ್ತದೆ. ಇನ್ನೂ ಈ ಕಾರ್ಯವು ಪೂರ್ಣಾವಸ್ಥೆಗೆ ಬಂದು ತಲುಪದೆ ಇದ್ದರೂ ಸಮಾಜಸೇವೆಯ ಒಂದೇ ಸದೃಢ ಅಂಗ ನನಗೀಗ ಗೋಚರಿಸುತ್ತಿದೆ. ಮಹಿಳೆಯರ ಕರ್ತೃತ್ವದಿಂದಾಗಿ ಈ ಅಂಗವು ಮಹಾರಾಷ್ಟ್ರದಲ್ಲಿ ಇತರ ಪ್ರಾಂತಕ್ಕಿಂತ ಅಧಿಕ ಸ್ಪಷ್ಟಗೊಂಡಿದೆ ಎನ್ನುವುದರಲ್ಲಿ ಶಂಕೆಯಿಲ್ಲ. ಏಕೆಂದರೆ ಯಾರು ತಮ್ಮ ಜೀವನವನ್ನು ಕಾರ್ಯಕ್ಕೆ ಸಮರ್ಪಣೆ ಮಾಡಿಕೊಂಡಿದ್ದಾರೋ ಇಂಥ ನಿಷ್ಠಾವಂತ ಸ್ತ್ರೀಯರ ಕೊರತೆ ಈವರೆಗೂ ಬೀಳಲಿಲ್ಲ.

ಯಾವಾಗ ಪಂಡಿತೆ ರಮಾಬಾಯಿಯು ಮತಾಂತರ ಮಾಡಿದಳೋ ಡಾ. ಆನಂದಬಾಯಿ ಅಮೇರಿಕೆಯ ಯಾತ್ರೆಯನ್ನು ಕೈಕೊಂಡಳೊ, ಡಾ. ರಖಮಾಬಾಯಿಯು ವಿವಾಹ ವಿಚ್ಛೇದನೆಯ ಬೇಡಿಕೆಯನ್ನಿಟ್ಟು ಬಳಿಕ ವಿದೇಶದಲ್ಲಿ ಶಿಕ್ಷಣವನ್ನು ಪಡೆಯಲಾರಂಭಿಸಿದಳೋ, ಆಗ ಭಾರತೀಯ ಮಹಿಳೆಯರ ಒಳಿತು-ಕೆಡುಕಿನ ಹಣೆಬರಹವು ಈ ಮಹಿಳೆಯರ ಅಡಿಯಾಳಾಗಿರುವುದನ್ನು ಸಂಪೂರ್ಣ ದೇಶವೇ ಕಂಡಿತು. ಮಹಾರಾಷ್ಟ್ರದ ಮಹಿಳೆಯರು ಅಸಾಮಾನ್ಯರಾಗಿದ್ದಾರೆ. ಅವರು ಏನೇ ಒಳಿತು ಕೆಡುಕನ್ನು ಮಾಡಲು ಹಿಂಜರಿಯಲಾರರು ಎಂಬ ಕೂಗು ಆ ಕಾಲದ ಸರ್ವ ಪ್ರಾಂತಗಳ ಪತ್ರಿಕೆಗಳಲ್ಲಿ, ಸಭೆಗಳಲ್ಲಿ ಕೇಳಿಬಂತು.

ರಮಾಬಾಯಿ ಕ್ರೈಸ್ತರಾಗಿ ಮತಾಂತರಗೊಂಡರು. ಹಾಗೆಯೇ ಉಳಿದ ಸುಶಿಕ್ಷಿತ ಮಹಿಳೆಯರೂ ಆಗುತ್ತಾರೆ, ವಿಶೇಷವಾಗಿ ವಿದೇಶಕ್ಕೆ ಪ್ರಯಾಣ ಮಾಡಿದವರು ಎಂದು ದೊಡ್ಡ ಹಾಹಾಕಾರ ಎದ್ದಿತು. ಈ ಹಾಹಾಕಾರದ ಝಳ ಮೊಟ್ಟ ಮೊದಲಿಗೆ ತಲುಪಿದ್ದು ಆನಂದಿಬಾಯಿಗೆ. ಆಹಾರ, ವಿಹಾರ, ವಿಕ್ಷಿಪ್ತ ಪತಿಯ ಮೇಲಿರುವ ಶ್ರದ್ಧೆ, ಬಡತನ ಇದರಿಂದಾಗಿ ಅವರು ಮಾನಸಿಕವಾಗಿ ತೀರ ಬಳಲಿ ಬೆಂಡಾದರು. ಪಂಡಿತೆ ರಮಾಬಾಯಿ ಪಡೆದ ಸ್ವಾತಂತ್ರ್ಯದ ಪ್ರಾಯಶ್ಚಿತ್ತವನ್ನೇ ಆನಂದಿಬಾಯಿ ಮಾಡಿಕೊಳ್ಳಬೇಕಾಯಿತು. ಈ ಸಂಘರ್ಷದಲ್ಲಿ ಅವರು ತಮ್ಮ ಆರೋಗ್ಯ ಪ್ರಾಣ ಎರಡನ್ನು ಕಳಕೊಳ್ಳಬೇಕಾಯಿತು. ಅವರ

ಶಿಕ್ಷಣದ ಲಾಭ ಅವರಿಗಾಗಲಿ, ಇತರಿಗಾಗಲಿ ಆಗಲೇ ಇಲ್ಲ. ಹಿಂದೆ ಉಳಿದದ್ದು ಬರೇ ಒಬ್ಬ ಕರಾರುವಾಕ್ಕಾದ ಹಾಗೂ ವಾತ್ಸಲ್ಯಮಯಿ ವ್ಯಕ್ತಿಯ ಕರುಣ ಗಾಥೆ.

ಪಂಡಿತೆ ರಮಾಬಾಯಿ ಸ್ವತಃ ಸಂಘರ್ಷ ಮಾಡಿದವರು, ತಮ್ಮ ಸ್ವಂತ ಕೃತಿಯಿಂದ ಭಿನ್ನ ಸಂಘರ್ಷದ ಬೀಜವನ್ನು ಸಮಾಜದಲ್ಲಿ ಬಿತ್ತಿದರು. ಅದರಿಂದ ಏನಾಯಿತೆಂದರೆ ಅವರ ಜೀವನ ಕೊನೆಯವರೆಗೂ ಶಿಕ್ಷಣ ಮತ್ತು ಅನಾಥರ ಸಂಗೋಪನೆಗಷ್ಟೇ ಸೀಮಿತಗೊಂಡಿತು. ಬೃಹತ್ ಹಿಂದೂ ಸಮಾಜದಿಂದ ದೂರ ಸರಿದಿದ್ದರಿಂದ ಅವರ ಕಾರ್ಯದಿಂದ ಯಾವುದೇ ಸ್ಫೂರ್ತಿಯು ಸರ್ವಸಾಮಾನ್ಯ ಮಹಾರಾಷ್ಟ್ರಕ್ಕೆ ಸಿಗದೇ ಹೋಯಿತು. ಇತರ ಆಶ್ರಮವನ್ನು ನಡೆಸುವ ಹಲವು ಕ್ರಿಯಾಶೀಲ ಮಹಿಳೆಯರಿಗೂ ಮತ್ತು ರಮಾಬಾಯಿಗೂ ಯಾವುದೇ ವ್ಯತ್ಯಾಸ ಉಳಿಯಲಿಲ್ಲ.

ಡಾ. ರಖಮಾಬಾಯಿ ಇವರ ಹೆಸರು ವಿವಾಹ ವಿಚ್ಛೇದನೆಯಿಂದಾಗಿ ಮಹಾರಾಷ್ಟ್ರದಲ್ಲಿ ತೀರ ನಿಂದೆಯ ವಿಷಯವಾಗಿಬಿಟ್ಟಿತು. ಅವರನ್ನು ಸತತ ಏಕವಚನದಿಂದಲೇ ಕರೆಯಲಾಗುತ್ತಿತ್ತೋ ಆಗವರು ವೈದ್ಯರಾಗಿರಲಿಲ್ಲ. ಡಾಕ್ಟರ್‌ರಾದ ಬಳಿಕ ಅವರು ಸುದೀರ್ಘ ಜೀವನವನ್ನು ಸಾಗಿಸಿದರು. ನೌಕರಿಯಲ್ಲಿ ಯಶಸ್ಸನ್ನೂ ಸಾಕಷ್ಟು ಸಂಪತ್ತನ್ನೂ ಗಳಿಸಿದರು. ಆದರೆ ಹಿಂದಿನ ವಯಸ್ಸಿನ ಸಂಘರ್ಷದಿಂದಾಗಿ ಅವರಲ್ಲಿಯ ಸಾಮಾಜಿಕ ಕರ್ತೃತ್ವವು ಶಾಶ್ವತವಾಗಿ ಕುಂಠಿತಗೊಂಡಿತು. ಹಾಗೆ ನೋಡಿದರೆ ಮೊದಲ ಅಧಿಕ ಸಂಘರ್ಷವನ್ನು ಅವರ ಪಾಲಕರಾದ ಡಾ. ಸಖಾರಾಮ ಅರ್ಜುನ ಹಾಗೂ ಅವರ ಗೆಳೆಯರು ಮತ್ತು ಸುಧಾಕರ ಪಕ್ಷ ಇವರೇ ನೀಡಿದರು. ಇದರಿಂದಾಗಿಯೋ ಏನೋ ಉತ್ತರ ಕಾಲದಲ್ಲಿ ರಖಮಾಬಾಯಿ ಅವರಿಗೆ ಸಾಮಾಜಿಕ ಕಾರ್ಯದ ಆಕರ್ಷಣೆ ಹೆಚ್ಚಾಗಿ ಉಳಿಯಲಿಲ್ಲ. ಒಂದೆರಡು ಸಲ ಪ್ರಾರ್ಥನಾ ಸಮಾಜದ ಕಾರಣದಿಂದಾಗಿ ಒಂದಿಷ್ಟು ಪ್ರಯತ್ನವನ್ನು ಮಾಡಿದರು. ಆದರೆ ಅದರಲ್ಲಿ ಜೀವವಿರುವಂತಹದು ಏನೂ ಇರಲಿಲ್ಲ.

ಈವರೆಗೆ ನಮ್ಮೆದುರಿಗಿರುವ ವೈದ್ಯರ ಪೀಳಿಗೆಯು ಡಾ. ರಖಮಾಬಾಯಿಯ ಸನಿಹದವರು. ಅಂದರೆ ಸ್ವಂತ ಉದ್ಯೋಗದಲ್ಲಿ ಪಕ್ಷ, ಪ್ರಾಪ್ತಿಗಾಗಿ ಜಾಗರೂಕ, ಆದರೆ ಸ್ವತಂತ್ರ ಪ್ರಜ್ಞೆ ತೀರ ಕಡಿಮೆ ಇರುವವರು. ಮಹಾರಾಷ್ಟ್ರದ ಮಹಿಳೆಯರಲ್ಲಿ ಎಲ್ಲಕ್ಕಿಂತ ಸುಸ್ಥಿತಿಯಲ್ಲಿದ್ದ ವರ್ಗವೆಂದರೆ ಇದೇ.

* * *

ಆದರೆ ಕಳೆದ ೨೫ ವರ್ಷಗಳಲ್ಲಿ ಕಲಾವಿದೆಯರು ಒಂದು ಹೊಸ ವರ್ಗವನ್ನೇ ಮಹಾರಾಷ್ಟ್ರದಲ್ಲಿ ನಿರ್ಮಾಣ ಮಾಡಿದ್ದಾರೆ. ಈ ವರ್ಗದವರ ಕರ್ತೃತ್ವವೇನೇ ಇರಲಿ, ಆದರೆ ಅವರ ಜನಪ್ರಿಯತೆ ಮಾತ್ರ ಅಪಾರ. ಸಾಮಾನ್ಯವಾದ

ಚುರುಕು ಹುಡುಗಿಯರಿಗೆ ಕಲಾವಿದೆಯಾಗುವ ಅದರಲ್ಲೂ ಸಿನೇ ಕಲಾವಿದೆಯಾಗುವ ಆಕರ್ಷಣೆ ತುಂಬ ಇರುತ್ತದೆ. ಮಹಾರಾಷ್ಟ್ರದಲ್ಲಿ ಒಂದು ಕಾಲ ಹೇಗಿತ್ತೆಂದರೆ, ಮಹಿಳಾ ವರ್ಗಕ್ಕೇ ವೇಶಭೂಷಣ, ಆಭರಣ, ಬೆಲೆ ಬಾಳುವ ಸೀರೆ ಉಡುವ-ತೊಡುವುದರ ಆಚೆ ಏನೂ ಗೊತ್ತಿರಲಿಲ್ಲ. ಅದೂ ಅಲ್ಲದೆ ಆಕರ್ಷಕ ವ್ಯಕ್ತಿತ್ವವು, ಅಚ್ಚುಕಟ್ಟಾದ ವೇಷ-ಭೂಷಣವನ್ನು ಅವಲಂಬಿಸಿರುತ್ತದೆ. ಮತ್ತು ಈ ಅಂಗವು ಮಹಿಳೆಯರ ಜೀವನದಲ್ಲಿ ತೀರ ಅಗತ್ಯದ್ದು ಎಂಬ ವಿಚಾರವು ಹಳೆಯ ಮಹಾರಾಷ್ಟ್ರಕ್ಕೆ ಅಪರಿಚಿತವಾಗಿತ್ತು. ಅಷ್ಟೇ ಅಲ್ಲ, ಸೀರೆಯನ್ನು ಮೈಗೆ ಬಿಗಿಯಾಗಿ ಉಡುವುದೂ ಸಹ ಮಹಿಳೆಯರ ಕುಲೀನತೆಗೆ ಶೋಭಿಸುವಂತಹದಾಗಿರಲಿಲ್ಲ. 'ನಿರಿಗೆಯಿಂದ ಕೂಡಿದ ಕಚ್ಚೆಸೀರೆ ಉಡಲು ಕಸುಬುದಾರರೇ ಬೇಕು' ಎಂಬ ಹಳೆಯ ನಾಣ್ಣುಡಿಯಲ್ಲಿ ಇದು ಸ್ಪಷ್ಟವಾಗಿ ಕಾಣಬರುತ್ತದೆ. ಆಕರ್ಷಕ ಕೇಶವಿನ್ಯಾಸ, ಸುಂದರವಾಗಿ ಸೀರೆಯನ್ನು ಉಡಲು ಮಹಾರಾಷ್ಟ್ರದ ಸುಶಿಕ್ಷಿತ ಮಹಿಳೆಯರಿಗೆ ಕಲಿಸಿದ್ದೇ ಬಾಲಗಂಧರ್ವರು; ಅಂದಿನಿಂದ ನಟಿಯರು, ಕಲಾವಿದೆಯರು ಒಂದಲ್ಲ ಒಂದು ದೃಷ್ಟಿಯಿಂದ ಪ್ರಸಾದನದ ಆದರ್ಶರಾದರು. ಇದರ ಒಳಿತು ಕೆಡಕು ಫಲ ಏನೇ ಇರಲಿ, ಇಂದಿನ ಮಹಾರಾಷ್ಟ್ರದ ಮಹಿಳೆಯು ನಗರದಲ್ಲೇ ಇರಲಿ, ಇಲ್ಲವೇ ಗ್ರಾಮೀಣ ಪ್ರದೇಶಲ್ಲೇ ಇರಲಿ, ಸ್ವಂತ ವೇಷ-ಭೂಷಣಕ್ಕೆ ಹೆಚ್ಚು ಮಹತ್ವ ನೀಡುತ್ತಾಳೆ. ತಾನು ಯಾವುದರಿಂದ ಅರಳಿ ಕಾಣಬಹುದು ಎನ್ನುವುದು ಅವಳಿಗೆ ಗೊತ್ತಿದೆ. ಅವಳ ಅಭಿರುಚಿ ಹೆಚ್ಚು ಸಂಪನ್ನಗೊಂಡಿದೆ. ಮಕ್ಕಳ ಬಟ್ಟೆಬರೆಯ ಬಗೆಗೆ ಅವಳು ಹಿಂದಿನ ಗೃಹಿಣಿಗಿಂತ ಹೆಚ್ಚು ಜಾಗರೂಕಳಾಗಿದ್ದಾಳೆ.

ಹಲವರಿಗೆ ಇಂದಿನ ಮಹಿಳೆ ಎಲ್ಲಿಗೆ ಹೊರಟಿದ್ದಾಳೆ ಎಂಬ ಪ್ರಶ್ನೆಯು ಕಾಡುತ್ತದೆ. ಅದಕ್ಕೆ ಮಹಿಳೆಯರ ಆಕರ್ಷಕ ವೇಷ-ಭೂಷಣ, ಬೆಳೆಯುತ್ತಿರುವ ಅವಳ ಅಭಿಲಾಷೆ, ಹಾಸ್ಯ-ವಿನೋದಕ್ಕೆ ಸಿಕ್ಕಿರುವ ಅವಕಾಶ, ಸಂಪೂರ್ಣ ಸ್ವಾತಂತ್ರ್ಯವನ್ನು ಭೋಗಿಸುವ ಪ್ರವೃತ್ತಿಯೇ, ಮುಖ್ಯ ಕಾರಣವಾಗಿದೆ. ಅದೂ ಅಲ್ಲದೆ ವೈವಾಹಿಕ ವಿಷಯದಲ್ಲಿ ಕಾನೂನು ಅವಳಿಗೆ ನೀಡಿದ ಸ್ವಾತಂತ್ರ್ಯವೂ ಮತ್ತೊಂದು ಕಾರಣ.

ತಾರುಣ್ಯದ ಹೊಸ್ತಿಲಲ್ಲಿ ನಿಂತಿರುವ, ಗುಮಾಸ್ತೆ ಜೀವನವನ್ನು ಸಾಗಿಸುವ ಮಹಿಳೆಯರ ಅತೀ ದೊಡ್ಡ ಸಂಖ್ಯೆ, ಪುರುಷರೊಂದಿಗಿನ ವಿವಿಧ ಬಗೆಯ ಸಾಹಚರ್ಯೆ ಅದರಿಂದ ಕುಟುಂಬಸಂಸ್ಥೆಯ ಮೇಲಾಗುವ ಒಳಿತು-ಕೆಡುಕಿನ ಪರಿಣಾಮ- ಇದೂ ಸಹ ಹಲವರನ್ನು ತ್ರಸ್ತಗೊಳಿಸುವ ವಿಷಯವಾಗಿದೆ. ಈ ಮಹಿಳೆಯರ ಜೀವನದಿಂದಾಗಿ ಹಲವು ಸಮಸ್ಯೆಗಳು ನಿರ್ಮಾಣಗೊಂಡವು. ವಿಭಾವರಿ ಶಿರೂರಕರ ಅವರು 'ಮೊಗ್ಗಿನ ನಿಟ್ಟುಸಿರು'ನಲ್ಲಿ ಜೀವನದ ಒಂದು ಮಗ್ಗಲಿನ ಕೈಫಿಯತ್ ಮಂಡಿಸಿದ್ದಾರೆ. ಎರಡನೇ ಗಂಭೀರ ಇದೇ ಪ್ರವೃತ್ತಿಯ

ಧ್ವನಿಯನ್ನು ಅರವಿಂದ ಗೋಖಲೆಯವರು ವ್ಯಕ್ತ ಮಾಡಿದ್ದಾರೆ. ಅದಕ್ಕಿಂತ ಭಿನ್ನ ಹಾಗೂ ತೀವ್ರವಾದ ಧ್ವನಿಯು ಗಂಗಾಧರ ಗಾಡಗೀಳರ ಸಾಹಿತ್ಯದಲ್ಲೂ ಕಾಣಬರುತ್ತದೆ. ಆದರೆ ಇದನ್ನೇ ಗಮನಿಸಿಯೂ ಇಂದಿನ ಮಹಾರಾಷ್ಟ್ರದ ಮಹಿಳೆಯು ಇಳಿಮುಖದ ಹಾದಿಯಲ್ಲಿದ್ದಾಳೆ ಎಂಬ ನಿರ್ಣಯಕ್ಕೆ ಬರುವುದು ಯೋಗ್ಯವಲ್ಲ. ಇಂದಿನ ಮಹಾರಾಷ್ಟ್ರದ ಮಹಿಳೆಯರ ವ್ಯಕ್ತಿತ್ವವು ಚೆನ್ನಾಗಿ ಸಾಕಾರಗೊಂಡಿದೆ. ಯಾವುದೇ ವ್ಯಕ್ತಿಯಲ್ಲಿರುವ ನಿಯಂತ್ರಕ ಶಕ್ತಿಯು ಆಯಾ ವ್ಯಕ್ತಿಯ ಆಂತರಿಕ ವ್ಯಕ್ತಿತ್ವವನ್ನೇ ಅವಲಂಬಿಸಿರುತ್ತದೆ. ಒಂದು ಮಾತ್ರ ಸತ್ಯ, ಪಂಡಿತೆ ರಮಾಬಾಯಿಯು ಪೂರ್ವಕಾಲದಲ್ಲಿ ಯಾವ ಅಮೂಲ್ಯ ವ್ಯಕ್ತಿತ್ವವನ್ನು ಪೋಷಿಸಿದಂತೆ, ಸಂಪೂರ್ಣ ಜಾಗೃತವಾಗಿದ್ದು ಪೋಷಿಸಿದಂತೆ ಇಂದಿನ ಮಹಿಳೆಯೂ ಸಹ ಅದೇ ಮಾರ್ಗವನ್ನು ಅನುಸರಿಸುವುದು ತೀರ ಅಗತ್ಯವಾಗಿದೆ. ಇಲ್ಲದಿದ್ದರೆ ಅವಳು ವ್ಯವಸಾಯಿಕ ಜೀವನವನ್ನು ಯಶಸ್ವಿಯಾಗಿ ಸಾಗಿಸಿದರೂ ಕೇವಲ ಪ್ರವಾಹ ಪತಿತವಾಗುತ್ತಾಳೆ.

ಕೇಸರಿ, ದೀಪಾವಳಿ ಸಂಚಿಕೆ, ೧೯೬೨

* * * *

೨೩. ದೇಹದಾನ

ದೇಹದಾನದ ಅತ್ಯಂತ ಅಗತ್ಯವಾಗಿರುವ ಕಾರ್ಯಕ್ಕೆ ಸಂಘಟಿತವಾದ ರೀತಿಯಲ್ಲಿ ತಮ್ಮನ್ನು ಅರ್ಪಿಸಿಕೊಂಡ ಶ್ರೀ ಸೋಮಣೆ ತೀರಿಕೊಂಡರು. ಆದರೆ ಅವರ ನಂತರ ಈ ಕಾರ್ಯವು ಪುಣೆಯಲ್ಲಿ ಇಂದಿಗೂ ಮುಂದುವರೆದಿದೆ. ನಾಗರಿಕರಲ್ಲಿ ಅವರು ದೇಹದಾನದ ಬಗೆಗೆ ನಂಬಿಕೆಯನ್ನು ನಿರ್ಮಾಣ ಮಾಡಿದರು. ಆದರೆ ಮುಂಬೈಯಲ್ಲಿರುವ ಸುಶಿಕ್ಷಿತರು ಮಾತ್ರ ಈ ವಿಷಯದಲ್ಲಿ ಇವತ್ತಿಗೂ ಸಂಘಟಿತರಾಗಿಲ್ಲ. ಕಾರ್ಯೋನ್ಮುಖರಾಗಿಲ್ಲ.

ತಮ್ಮ ಆರ್ಥಿಕ ವ್ಯವಹಾರದ ಬಗೆಗೆ ನಾಗರಿಕರು ಮೃತ್ಯುಪತ್ರವನ್ನು ಮಾಡುತ್ತಾರೆ. ಆ ಕಾರ್ಯ ಸಮಾಜಮಾನ್ಯ, ಧರ್ಮಮಾನ್ಯವಾಗಿದೆ. ಆದರೆ ಸಾವಿನ ನಂತರ ತಮ್ಮ ಕಣ್ಣಿನ ಇಲ್ಲವೇ ದೇಹದ ದಾನಪತ್ರ ಮಾಡುವ ಪದ್ಧತಿಯು ಇಂದಿಗೂ ಸಂದೇಹದಿಂದ ಕೂಡಿದ್ದರಿಂದ ಆರಂಭಗೊಂಡಿಲ್ಲ. ನಾನು ಸ್ವತಃ ಸಹ ಸಂದೇಹದೊಳಗೆ ಸಿಲುಕಿದ ಮುದಿ ಮಹಿಳೆ. ನನ್ನ ವೈಯಕ್ತಿಕ ಅಭಿಪ್ರಾಯವು ದೇಹದಾನದ ಪರವಾಗಿದೆ. ಆದರೆ ಕುಟುಂಬದವರ ಪ್ರಕಾರ ಇಂದಿನ ದೇಹದಾನ ಮತ್ತು ನೇತ್ರದಾನದ ಕಾರ್ಯಪದ್ಧತಿಯು ದೋಷದಿಂದ ಕೂಡಿದ್ದರಿಂದ ಈ ವಿಷಯದಲ್ಲಿ ಅಷ್ಟೊಂದು ಅನುಕೂಲವಾಗಿಲ್ಲ. ಈ ಕಾರಣದಿಂದಾಗಿ ನನ್ನ ಮನದೊಳಗೂ ಸ್ವಂತ ದೇಹದಾನದ ಬಗೆಗೆ ಸಂದೇಹ ನಿರ್ಮಾಣವಾಗಿದೆ. ಆದ್ದರಿಂದ ಈ ಲೇಖನವನ್ನು ಬರೆದು ನಾನು ವೈದ್ಯರ ಹಾಗೂ ಪ್ರಜ್ಞಾವಂತ ವಾಚಕರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಬಯಸುತ್ತೇನೆ. ಹಾಗೆಯೇ ಯೋಗ್ಯ ಸಂಘಟಿತ ಮಾರ್ಗದರ್ಶನವನ್ನು ಬಯಸುತ್ತೇನೆ.

ನೇತ್ರದಾನ : ನೇತ್ರದಾನದ ಬಗೆಗೆ ಜನಮತವನ್ನು ಜ್ವಲಂತವಾಗಿ ಜಾಗೃತ ಮಾಡುವುದು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಕರ್ತವ್ಯವಾಗಿದೆ. ಶ್ರೀಲಂಕಾದಂತಹ ಚಿಕ್ಕ ದೇಶವು ಈ ವಿಷಯದಲ್ಲಿ ಕಣ್ಣು ಕುಕ್ಕುವ ವಿಕ್ರಮವನ್ನು ಮಾಡಿದೆ. ವ್ಯಕ್ತಿಯು ಸತ್ತ ನಂತರ ಅವನ ಕಣ್ಣನ್ನು ತಕ್ಷಣ ತೆಗೆದು, ಅದರಲ್ಲಿಯ ಕಾರ್ನಿಯಾವನ್ನು ಶ್ರೀಲಂಕಾ ಬೇರೆ ದೇಶಗಳಿಗೂ ಪೂರೈಸುತ್ತದೆ. ಅದರಿಂದ ಎಷ್ಟೋ ಕುರುಡರಿಗೆ ದೃಷ್ಟಿಯ ಲಾಭವಾಗುತ್ತದೆ.

ನಮ್ಮಲ್ಲಿ ಲೀಲಾಬಾಯಿ ಮುಳಗಾಂವಕರರಂಥವರು ರಕ್ತದಾನದ ವ್ಯವಸ್ಥೆಗಾಗಿ

ತಮ್ಮನ್ನು ಮುಡುಪಾಗಿರಿಸಿದ್ದಾರೆ. ಅದರಿಂದ ಲಾಭವೂ ಆಗಿದೆ. ಇದನ್ನು ಒಪ್ಪಿಕೊಂಡೂ ಸಹ ನಮ್ಮಲ್ಲಿಯ ನೇತ್ರ ಬ್ಯಾಂಕ್‌ಗಳು ಮಾತ್ರ ಈಗಲೂ ಅಸಂಘಟಿತ ಹಾಗೂ ಅಕಾರ್ಯಕ್ಷಮವಾಗೇ ಉಳಿದಿವೆ. ಜನಮಾನಸದಲ್ಲಿ ಮರಣೋತ್ತರ ನೇತ್ರದಾನದಂತಹ ಬೇರೊಂದು ಪುಣ್ಯ ಕಾರ್ಯವಿಲ್ಲ ಎಂಬ ಭಾವನೆಯು ಬೇರೂರಿಲ್ಲ. ಇದಕ್ಕೆ ಕಾರಣವೇನೆಂದರೆ ನೇತ್ರದಾನ ಚಳವಳಿಯಲ್ಲಿ ಸಂಘಟನ ಕುಶಲ ವೈದ್ಯ ಪ್ರಚಾರಕರ ಕೊರತೆಯಿದೆ. ಸಾವಿನ ನಂತರ ಅರ್ಧ ಗಂಟೆಯೊಳಗೆ ಕಣ್ಣನ್ನು ತೆಗೆದು, ಅದನ್ನು ದೃಷ್ಟಿದಾನಕ್ಕಾಗಿ ಬಳಸುವಲ್ಲಿ ಸಹ ನಿರ್ಲಕ್ಷ್ಯತನ ತೋರಿಸಲಾಗುತ್ತದೆ. ಕೆಲವು ವೈದ್ಯರು ನೇತ್ರದಾನ, ದೇಹದಾನ ಮಾಡಿಯೂ ಅವರ ಕುಟುಂಬದವರು ಒಪ್ಪದೇ ಇರುವುದರಿಂದ ನೇತ್ರದಾನವೂ ಜರುಗಲಿಲ್ಲ. ಇದು ನನ್ನ ಅನುಭವ. ಮೃತ ವ್ಯಕ್ತಿಯು ನೇತ್ರದಾನ ಹಾಗೂ ದೇಹದಾನದ ಪ್ರತಿಜ್ಞಾ ಪತ್ರವನ್ನು ಮಾಡಿ ಇರಿಸಿದರೂ, ಅವನ ಮೃತದೇಹವು ಅವರ ಕುಟುಂಬದವರ ವಶದಲ್ಲಿರುವದರಿಂದ ಅವರು ವಿರೋಧ ಮಾಡಿದರೆ ನೇತ್ರದಾನವೂ ಸಾಧ್ಯವಾಗುವದಿಲ್ಲ.

ತಾನು ಎಲ್ಲಿ, ಹೇಗೆ ಸಾಯುತ್ತೇನೆ ಎನ್ನುವುದು ಯಾರಿಗೂ ಗೊತ್ತಿರುವದಿಲ್ಲ. ಸತ್ತ ಅರ್ಧಗಂಟೆಯ ಒಳಗೆ ಕಣ್ಣು ತೆಗೆಯದಿದ್ದರೆ ಅದರಿಂದ ಯಾವ ಉಪಯೋಗವು ಇಲ್ಲ. ವ್ಯಕ್ತಿ ರಾತ್ರಿ ಹೃದಯ ನಿಂತು ಸತ್ತರೆ ಬೆಳಗಿನವರೆಗೆ ಮನೆಯವರಿಗೂ ಗೊತ್ತಾಗದೇ ಇರೋದು ಅಸಂಭವನೀಯವೇನಲ್ಲ. ಅಂಥದರಲ್ಲಿ ನೇತ್ರ ಬ್ಯಾಂಕಿನ ಪ್ರಚಾರಕರು ಕೃತಿಶೀಲರಾಗಿ, ವೇಗವಾಗಿ ಮತ್ತು ಸೇವಾಭಾವನೆಯಿಂದ ಕೆಲಸ ಮಾಡುವದಿಲ್ಲ. ಹೀಗಾಗಿ ನೇತ್ರದಾನ ಬರೆದಿಟ್ಟರೂ ಕಾರ್ಯರೂಪಕ್ಕೆ ಬರುವುದಿಲ್ಲ. ವಿಜಯ ಮರ್ಚಂಟ ರಕ್ತದಾನ, ನೇತ್ರದಾನ ಮತ್ತು ದೇಹದಾನದ ಬಗೆಗೆ ಜಾಗರೂಕರಾಗಿದ್ದರೂ ಅದು ಸಾಧ್ಯವಾಗಲಿಲ್ಲ ಎಂದು ಹೇಳಲಾಗುತ್ತದೆ. ಅಂದಾಗ ಉಳಿದವರ ಸ್ಥಿತಿಯೇನು?

ದೇಹದಾನ : ದೇಹದಾನದ ಮುಖ್ಯ ಉದ್ದೇಶವೆಂದರೆ ವೈದ್ಯಕೀಯ ಶಾಸ್ತ್ರವನ್ನು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮತ್ತು ಶರೀರಶಾಸ್ತ್ರದ ಸಂಶೋಧನೆ ಮಾಡುವ ವೈದ್ಯರಿಗೆ ಮೃತದೇಹದ ವಿಚ್ಛೇದನೆ ಮಾಡಿ ಅವರ ಜ್ಞಾನ ಬೆಳೆಯಲಿ ಮತ್ತು ಅದರ ಲಾಭ ರೋಗಿಗಳಿಗೆ ಸಿಗಲಿ ಎನ್ನುವದಾಗಿದೆ. ಪತ್ರಿಕೆಯಲ್ಲಿ ನಾವು ಮೆಡಿಕಲ್ ಕಾಲೇಜಿನಲ್ಲಿ ವಿಚ್ಛೇದನೆಗಾಗಿ ಮೃತದೇಹದ ಕೊರತೆಯಿದೆ ಎಂದೆಲ್ಲ ಓದುತ್ತೇವೆ. ಹೀಗಾಗಿ ದೇಹದಾನದ ಅಗತ್ಯವಿದೆ ಎನ್ನುವದು ವಿಚಾರಾರ್ಹವಾದುದು ಸ್ವೀಕಾರಾರ್ಹವಾದುದು. ಅದೂ ಅಲ್ಲದೆ ಆ ದೇಹದ ಅವಯವವೂ ಜೀವಂತ ರೋಗಿಗಳ ಉಪಯೋಗಕ್ಕೆ ಬರುತ್ತದೆ. ರೋಗಿಗಳ ರೋಗ ಹೋಗಲಿ ಎಂಬ ಕಾರಣಕ್ಕೆ ವಿಶಿಷ್ಟ ಅವಯವದ ಉಪಯೋಗ ದೇಹದಾನದಿಂದ ಸಾಧ್ಯವಾಗುತ್ತದೆ.

ಈ ಕಾರಣಕ್ಕಾಗಿ ನಾನು ದೇಹದಾನಕ್ಕೆ ಮುಂದಾಗಿದ್ದೆ. ಈಗಲೂ ಸಿದ್ಧಳಿದ್ದೇನೆ. ಆದರೆ ಸಂದೇಹ ಬಂತು. ಏಕೆ, ಹೇಗೆ ಎನ್ನುವುದನ್ನು ಹೇಳುತ್ತೇನೆ.

ದೇಹದಾನದ ನಂತರ ಆ ದೇಹವನ್ನು ಅಪಮಾನ ಮಾಡಲಾಗುತ್ತದೆ. ವಿಶೇಷವಾಗಿ ಮಹಿಳೆಯರ ದೇಹದ್ದು. ಈ ಸಂದೇಹ ಕ್ರೈಸ್ತ ಯೋಗಿನಿಯ ಪೋಸ್ಟ್ ಮಾರ್ಟಮ್ ನಂತರ ಉದ್ಭವಿಸಿತು. ವಿಶೇಷವಾಗಿ ಆ ವ್ಯಕ್ತಿಯು ಜನಪ್ರಿಯವಾಗಿದ್ದರೆ ಈ ಪ್ರಸಂಗ ನಡೆಯಲೇಬಾರದೆಂದು ಬಂದು ಬಳಗ ಹಾಗೂ ಉಳಿದ ಸಂಬಂಧಿಸಿದ ವ್ಯಕ್ತಿಗಳಿಗೆ ಅನಿಸುತ್ತದೆ. ಇದು ಭಾವನೆಯ ಪ್ರಶ್ನೆ. ತಾನು ಸತ್ತ ಬಳಿಕ ತನ್ನ ದೇಹದ ಬಗೆಗೆ ಯಾವ ತರ್ಕ ಮತ್ತು ಕುತರ್ಕ ನಡೆಯಬಹುದು ಎನ್ನುವುದು ಮೃತವ್ಯಕ್ತಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದರೆ ಸಂಬಂಧಿಕರು ನಿರ್ಲಕ್ಷಿಸುವಂತಿಲ್ಲ. ಹೀಗಾಗಿ ಸಂದೇಹ ಬರುತ್ತದೆ. ಈ ಬಗೆಗೆ ನಾನು ಕೇಳಿದ ಸಂಗತಿ ಹೀಗಿದೆ. ಮೃತದೇಹವನ್ನು ಯಾವ ಆಸ್ಪತ್ರೆಗೆ ನೀಡಲಾಗುವುದೋ ಅಲ್ಲಿ ಮೃತನ ಹೆಸರು, ಅವನ ಪರಿಚಯವನ್ನು ನೀಡದೇ ಬರೇ ಕ್ರಮಾಂಕವನ್ನು ನೀಡಲಾಗುವುದು. ಎರಡನೆಯ ಅಪಮಾನವೆಂದರೆ ಮೃತದೇಹದ ಬಗೆಗಿನ ಅಕ್ಷಮ್ಯ ನಿರ್ಲಕ್ಷ್ಯ ಮತ್ತು ಆ ದೇಹದ ಬಗೆಗೆ ತೋರುವ ಹೇಸಿಗೆ ಬರಿಸುವ ತಿರಸ್ಕಾರದ ಜ್ಞಾತ ಉದಾಹರಣೆ; ಡಾ. ಜೆ. ಬಿ. ಎಸ್. ಹಾಲ್ಡೇನ್ ಎಂಬ ಜಗಪ್ರಸಿದ್ಧ ಭಾರತ ಪ್ರೇಮಿ ವೈಜ್ಞಾನಿಕನು ತನ್ನ ದೇಹದಾನವನ್ನು ವಿದ್ಯಾರ್ಥಿಗಳಿಗೆ ಉಪಯೋಗಕ್ಕೆ ಬಂದು ಜ್ಞಾನ ಸಿಗಲಿ ಎಂಬ ಉದ್ದೇಶದಿಂದ ಮಾಡಿದ್ದನು. ಆದರೆ ಆ ಉದ್ದೇಶ ಸಫಲಗೊಳ್ಳಲಿಲ್ಲ. ಕೊನೆಗೆ ಅವನ ಹೆಣವು ಗಟಾರಿನಲ್ಲಿ ಕೊಳೆತ ಅವಸ್ಥೆಯಲ್ಲಿ ಸಿಕ್ಕಿತು. ಈ ಮಾತು ಕೇಳಿ ಅವನ ಪತ್ನಿ ಲಂಡನ್‌ನಲ್ಲಿ ಮರುಗಿದರು, ನೊಂದುಕೊಂಡರು.

೧೮ ಮಾರ್ಚ್ ೧೯೯೨ರಂದು ಸಂದೇಹ ನನ್ನ ಮನದೊಳಗೆ ಬೇರೂರಿತು. ಒಂದು ಆಂಗ್ಲ ಸಂಜೆ ಪತ್ರಿಕೆಯಲ್ಲಿ ವಿಶಿಷ್ಟ ತಲೆ ಬರೆಹದಡಿಯಲ್ಲಿ ಒಂದು ಪತ್ರ ಪ್ರಕಟಗೊಂಡಿತ್ತು. ಪತ್ರಲೇಖಕನ ಸೋದರನು ದೇಹದಾನ ಮಾಡಿದ್ದನು. ಪ್ರತಿಜ್ಞಾ ಪತ್ರದಂತೆ ಜೆ. ಜೆ. ಆಸ್ಪತ್ರೆಯ ಸಂಬಂಧಿತ ಅಧಿಕಾರಿಗೆ ಫೋನು ಮಾಡಿದನು. ರಾತ್ರಿ ಅಧಿಕಾರಿಯಿರಲಿಲ್ಲ. ಆದರೆ ರಾತ್ರಿ ದೇಹವನ್ನು ಸ್ವೀಕರಿಸಲಾಗುವುದಿಲ್ಲವೆಂದು ಉತ್ತರ ಬಂತು. ಶನಿವಾರ ಮತ್ತು ಭಾನುವಾರ ರಜೆಯಿದ್ದುದರಿಂದ ನಾವು ಶವವನ್ನು ಸೋಮವಾರ ಸ್ವೀಕರಿಸುತ್ತೇನೆ. ಅಲ್ಲಿವರೆಗೆ ನೀವು ಶವವನ್ನು ಶವಾಗಾರದಲ್ಲಿಡಿ. ಅದರಂತೆ ಆ ಸೋದರ ಮತ್ತು ಬಂಧುಗಳು ಶವಾಗಾರಕ್ಕೆ ಹೋದರು. ಅಲ್ಲಿಯ ಸಿಬ್ಬಂದಿಯು ಅದನ್ನು ಕಟ್ಟಿಗೆಯ ಕೊರಡಿನಂತೆ ಎಳೆದೊಯ್ದನು ಮತ್ತು ಶವಾಗಾರದಲ್ಲಿ ಚೆಲ್ಲಿದನು. ಆಗ ಆ ಶೋಕಗ್ರಸ್ತ ಸೋದರನು ದೇಹದಾನ ಮಾಡುವ ಮೊದಲು ಎರಡೆರಡು ಬಾರಿ ಯೋಚಿಸಿ ಎಂದು ದುಃಖ ತೋಡಿಕೊಂಡನು.

ಇದನ್ನು ಓದಿ ನನ್ನ ಸೋದರಿ ಡಾ. ಕಮಲ ಸೋಹೇನಿ ನನಗೆ ಫೋನು ಮಾಡಿ ಜಾಗರೂಕ ಮಾಡಿದಳು. ನನ್ನ ತಮ್ಮನ ಮಗ ಡಾ. ಶಿರೀಷ ಭಾಗವತ ನನಗೆ ಆ ಪತ್ರಿಕೆಯ ಕಟಿಂಗ್ ಕಳಿಸಿದನು. ಅಲ್ಲಿಂದ ಸಂದೇಹ ಹೆಚ್ಚಾಯಿತು. ನಮ್ಮ ಸಮಗ್ರ ಜೀವನವು ಕುಟುಂಬದವರ ಆಧಾರದಿಂದಲೇ ಸಾಗುತ್ತದೆ. ಮರಣೋತ್ತರ ನಮ್ಮ ದೇಹದ ಮೇಲೆ ಅವರಿಗೇ ಹಕ್ಕಿರುತ್ತದೆ. ಹೀಗಾಗಿ ಅವರು ನೊಂದುಕೊಳ್ಳುವಂತೆ ಮಾಡುವದು ಸರಿಯಲ್ಲ ಎಂಬ ಯೋಚನೆಯು ಮನದಲ್ಲಿ ಬಲಗೊಂಡಿತು. ಆದರೆ ಮತ್ತೊಂದಡೆ ಮೃತದೇಹದ ಸಂಭವನೀಯ ವಿದ್ಯಾರ್ಜನೆಯ ಅಗತ್ಯವೂ ಸೆಳೆಯತೊಡಗಿತು.

ಶ್ರೀ ಸೋಮಣೆಯವರ ಕಾರ್ಯ ನೆನಪಾಗುತ್ತದೆ. ಸೊಲ್ಲಾಪುರದ ಸರಕಾರಿ ಆಸ್ಪತ್ರೆ ಹಾಗೂ ಅದಕ್ಕೆ ಸಂಲಗ್ನವಾಗಿರುವ ಮೆಡಿಕಲ್ ಕಾಲೇಜಿಗೆ ಕೆಲವರು ದೇಹದಾನ ಮಾಡಿದ್ದನ್ನು ಓದಿದೆ. ಸಾತಾರಾದಲ್ಲಿ ಡಾ. ನರೇಂದ್ರ ದಾಭೋಲ್ಕರ ಸೋದರಿಯ ದೇಹದಾನ ಮಾಡಿರುವುದು ಗೊತ್ತಾಯಿತು. ಪುಣೆಯಲ್ಲಿ ಕೆಲವು ಮಹಿಳೆಯರು ದೇಹದಾನ ಮಾಡಿರುವುದಾಗಿ ಓದಿದೆ. ಮುಂಬೈಯ ಸಾರಸ್ವತ ಸಮಾಜದ ಒಬ್ಬ ಮಹಿಳೆಯು ದೇಹದಾನ ಮಾಡಿದ್ದು ನನಗೆ ಗೊತ್ತು. ದಿ. ದಿ. ಕೆ. ಬೇಡೆಕರರು ದೇಹದಾನ ಮಾಡಿದರು. ನಾನಾಗ ಅವರ ಅಂತ್ಯ ದರ್ಶನಕ್ಕೂ ಹೋಗಿದ್ದೆ. ಅಂದಿನಿಂದ ನನ್ನಲ್ಲಿ ಈ ಇಚ್ಛೆ ನನ್ನ ಮನದೊಳಗೆ ಉದ್ಭವಿಸಿತು.

ಆದರೆ ಈಗ ಮತ್ತೆ ಕಿವಿಗೆ ಬಿದ್ದ ಸುದ್ದಿ ಏನೆಂದರೆ ಒಬ್ಬ ಸಿಂಧಿ ಮಹಿಳೆಯು ದೇಹದಾನ ಮಾಡಿದ ಮೃತದೇಹವು ಕೊಳೆತುಹೋಯಿತಂತೆ. ಕೆ. ಇ. ಎಂ. ಆಸ್ಪತ್ರೆಯಲ್ಲೂ ಹೀಗೆಯೇ ಒಬ್ಬ ಪ್ರತಿಷ್ಠಿತರ ದೇಹ ಕೊಳೆತುಹೋಯಿತು. ಆದರೂ ಅವರ ಕುಟುಂಬದ ಕೆಲವರು ದೇಹದಾನದ ಯೋಚನೆಯನ್ನು ಕೈಬಿಡಲಿಲ್ಲ. ಆದರೆ ಇಂಥ ಸಂಗತಿಗಳನ್ನು ಓದಿ–ಕೇಳಿ ಸಂದೇಹವಾಗುತ್ತದೆ.

ನನ್ನ ಪರಿಚಯದವರೊಬ್ಬರು ತಮ್ಮ ಕುಟುಂಬದವರ ಸಮ್ಮತಿಯನ್ನು ಪಡೆದು ದೇಹದಾನ ಮಾಡುವ ನಿರ್ಣಯವನ್ನು ತೆಗೆದುಕೊಂಡರು. ಮರಣೋತ್ತರ ದೇಹವನ್ನು ಶ್ರೀ ವಿಶ್ವಾಸ ಪಾಟೀಲರು ಸಾಯುವ ಆಸ್ಪತ್ರೆಯ ಅನಾಟಮಿ ವಿಭಾಗಕ್ಕೆ ವಿಚ್ಛೇದನೆಗಾಗಿ ಒಯ್ದು ತಲುಪಿಸಬೇಕು. ಈ ವಿಭಾಗದ ಪ್ರಮುಖ ಮಹಿಳಾ ವೈದ್ಯರು ದೇಹದ ಸರಿಯಾದ ಉಪಯೋಗವಾಗುವ ಹೊಣೆಯನ್ನು ಹೊತ್ತಿದ್ದಾರೆ.

ನಾನು ಇನ್ನೂ ನಿರ್ಣಯವನ್ನು ತೆಗೆದುಕೊಂಡಿರದಿದ್ದರೂ ಇದರಿಂದ ತರ್ಕಶುದ್ಧವಾದ ನಿರ್ಣಯಕ್ಕೆ ಬರಬಹುದಾಗಿದೆ. ಇದರಲ್ಲಿ ಭಾವನೆಗೆ ಅವಕಾಶವಿಲ್ಲ.

೧. ದೇಹದಾನದ ಉದ್ದೇಶವಾಗಿರುವ ವಿದ್ಯಾರ್ಥಿಗಳ ಜ್ಞಾನ ಸಂವರ್ಧನೆಯಾಗುವುದು ಎಲ್ಲಕ್ಕಿಂತ ಮಹತ್ವದ್ದು.

೨. ಒಂದು ವೇಳೆ ಮೃತದೇಹದ ವಿಲೇವಾರಿಯನ್ನು ಸುಸಂಸ್ಕೃತವಾದ

ರೀತಿಯಲ್ಲಿ ನಡೆಯುವುದಿಲ್ಲ ಎಂದು ಭಾವಿಸಿಕೊಂಡರೂ, ಸಂಬಂಧಿಕರು ಈ ಪರಿಸ್ಥಿತಿಯಲ್ಲಿ ಮೃತದೇಹ ಒಪ್ಪಿಸಿದ ಬಳಿಕ ಮರಳಿ ನೋಡಬಾರದು. ಅದರ ಬಗೆಗೆ ವಿಚಾರಣೆ ಮಾಡಬಾರದು. ಸ್ವತಃ ಮೃತದೇಹಕ್ಕೆ ಸುಟ್ಟರೆ, ಹೂತರೆ ಇಲ್ಲವೇ ಕೊಳೆತರೆ ಅದರಿಂದ ಯಾವ ಹಾನಿಯೂ ಆಗಲಾರದು.

೩. ದೇಹದಾನ ಮಾಡಿದ ಹೆಣವನ್ನು ವಿಶೇಷವಾಗಿ ಸಂಬಂಧಿಕರಿಂದ ಸ್ವಾಧೀನಪಡಿಸಿಕೊಳ್ಳುವಾಗ ಸಂಬಂಧಿಸಿದ ಅಧಿಕಾರಿಗಳಿಗೆ, ಸಿಬ್ಬಂದಿಯವರಿಗೆ ಮೃತದೇಹವನ್ನು ಗೌರವದಿಂದ ಕಾಣುವ ತರಬೇತಿ ನೀಡಬೇಕಾದ ಅಗತ್ಯವಿದೆ. ಮೃತದೇಹವನ್ನು ಒಯ್ಯುವಾಗ ಹೂವಾಗಲಿ–ಹಾರವಾಗಲಿ ಹಾಕಿ ನಮಸ್ಕರಿಸಿದರೂ ಸಾಕಾಗುತ್ತದೆ. ಈ ಕಾರಣಕ್ಕಾಗಿ ದೇಹದಾತರ ಹೆಣವನ್ನು ಸ್ವಾಧೀನ ಮಾಡಿಕೊಳ್ಳುವ ಆಸ್ಪತ್ರೆಯ ಹೆಸರನ್ನು ಬಹಿರಂಗಪಡಿಸುವುದು ಯೋಗ್ಯ. ಸರಕಾರದ್ದಾಗಲಿ ಮಹಾನಗರ ಪಾಲಿಕೆಯದ್ದಾಗಲಿ ಕರ್ತವ್ಯವದು. ಅಂಥ ಆದೇಶ ಹೊರಡಿಸಬೇಕು. ವಿಧಾನಸಭೆಯಲ್ಲಿ ಈ ಬಗೆಗೆ ಚರ್ಚೆಯಾಗಬೇಕು.

ಜನರಲ್ಲಿ, ಎಲ್ಲ ಧರ್ಮದ ಜನರಲ್ಲಿ ಅಂತ್ಯಸಂಸ್ಕಾರದ ಬಗೆಗಿನ ಪರಂಪರಾಗತ ಪದ್ಧತಿಯು ಮುನ್ನಡೆಯಬೇಕೆಂಬ ಇಚ್ಛೆಯು ಪ್ರಬಲವಾಗಿರುತ್ತದೆ. ಮದುವೆ ಮತ್ತು ಅಂತ್ಯಸಂಸ್ಕಾರವು ಅತ್ಯಂತ ದುಬಾರಿಯಾದುದು. ವಿದ್ಯುತ್ ಚಿತೆ ಬಳಕೆಗೆ ಬಂತು. ಆಗ ಸಹ ಹಲವು ತಪ್ಪು ಗ್ರಹಿಕೆಯು ತಲೆದೋರಿತು. ರಖಮಾಬಾಯಿಯು ತನ್ನ ಅಂತ್ಯ ಸಂಸ್ಕಾರವು ವಿದ್ಯುತ್ ಚಿತೆಯಲ್ಲೇ ನಡೆಯಬೇಕೆಂದು ಬರೆದಿಟ್ಟಿದ್ದರೂ ಬಂಧುಗಳು ಅವರ ಅಂತ್ಯಸಂಸ್ಕಾರವನ್ನು ಗೋಣಪುರದಲ್ಲಿ ಮಾಡಿದರು. ಇದನ್ನು ಕಂಡು ನಾನು ವಿದ್ಯುತ್ ಚಿತೆಯ ಪ್ರಚಾರವನ್ನು ಮಾಡಿದೆ. ೧೯೫೫ರಲ್ಲಿ 'ಸಾಧನಾ' ಪತ್ರಿಕೆಗಾಗಿ ಒಂದು ಲೇಖನವನ್ನು ಬರೆದೆ. ಆಗ 'ಋತುಚಕ್ರ ಬರೆದು ಮುಗಿಸಿದಿರಿ. ಈಗ ಹೆಣದ ಬಗೆಗೆ ಏನು ಬರೆಯುತ್ತೀರಿ?' ಎಂಬ ಟೀಕೆಯೂ ಕೇಳಿಬಂತು. ಅದರ ಕುರಿತು ನಾನು ಭಾಷಣವನ್ನು ಮಾಡಿದೆ. ಪ್ರಾರ್ಥನಾ ಸಮಾಜದಲ್ಲಿ ಈ ಭಾಷಣ ನಡೆಯಿತು. ಆಗ 'ಸುಬೋಧ ಪತ್ರಿಕೆ'ಯು ಟೀಕಿಸಿತು. ಪುಣೆಯ ಡೆಕ್ಕನ್ ಕಾಲೇಜಿನ ಮಹಿಳಾ ಮಂಡಳದ ಎದುರಿಗೂ ಭಾಷಣ ನೀಡಿದಾಗ 'ಇವರು ಈ ವಿಷಯದ ಬಗೆಗೆ ಏಕೆ ಮಾತಾಡುತ್ತಾರೆ' ಎಂದು ಮಹಿಳೆಯರು ಬೆನ್ನು ಮಾಡಿ ಕೂತರು. ಇದಕ್ಕೆ ನಾನು 'ವಿದ್ಯುತ್ ದಾಹಿನಿ' ಎಂದು ಹೆಸರಿಸಿದ್ದೆ. ಈಗ ಇದು ಜನಪ್ರಿಯವಾಗುತ್ತಲಿದೆ. ನೇತ್ರದಾನ, ದೇಹದಾನಕ್ಕಾಗಿ ಸಮಾಜದ ಮನವನ್ನು ಸಜ್ಜುಗೊಳಿಸುವುದು ತೀರ ಅಗತ್ಯವಾಗಿದೆ.

(ಮಹಾರಾಷ್ಟ್ರ ಟೈಮ್ಸ್, ೧೮, ಮೇ ೧೯೯೨)

* * * *

೨೪. ಮರ್ಹಾಟಿ ಸಂಸ್ಕೃತಿ – ಕೆಲವು ಸಮಸ್ಯೆ

ಸದ್ಯ ಸಂಸ್ಕೃತಿಯ ಬಗೆಗೆ ವಿದ್ವಾಂಸರಲ್ಲಿ ಹಾಗೂ ಜನಸಾಮಾನ್ಯರಲ್ಲಿ ಬೆಳೆದ ಕುತೂಹಲ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಇಷ್ಟೊಂದಿರಲಿಲ್ಲ. ವಿದ್ವಾಂಸರು ಈ ವಿಷಯದ ಬಗ್ಗೆ ಗ್ರಂಥ ಬರೆದರು. ಆದರದು ಜನರಿಗೆ ತಲುಪಲಿಲ್ಲ. ಸಂಸ್ಕೃತಿಯ ಬಗೆಗೆ ಶಿಸ್ತಿನಿಂದ ಅಧ್ಯಯನ ಮಾಡುವ ಪ್ರೇರಣೆಯು ಭಾರತದಲ್ಲಿ ಮೊದಲಿಗೆ ಮಹಾರಾಷ್ಟ್ರದಲ್ಲೇ ಉದಯಗೊಂಡಿತು. ಲೋಕಹಿತವಾದಿ (ದೇಶಮುಖ) ರಾಜಾರಾಮ ಶಾಸ್ತ್ರಿ ಭಾಗವತ, ರಾಜಾವಾಡೆ, ಡಾ. ಕೇತಕರ ಹೀಗೆ ಸಮಾಜಶಾಸ್ತ್ರದ ಕುರಿತು ಪ್ರಬಲ ಇಚ್ಛೆಯಿರುವ ನಾಲ್ಕು ತಲೆಮಾರು ಮಹಾರಾಷ್ಟ್ರದಲ್ಲಾಗಿ ಹೋಯಿತು. ತಮ್ಮ ಸುತ್ತಮುತ್ತಲಿನ ಪರಿಸ್ಥಿತಿಯ ಚಾರಿತ್ರಿಕ ಮತ್ತು ತೌಲನಿಕ ಪದ್ಧತಿಯ ನಿರೀಕ್ಷಣೆ ಮಾಡಿ ಅವರು ಸಾಮಾಜಿಕ ಪರಿಸ್ಥಿತಿ, ಅವರಿಗೆ ಕೀಳು ಎನಿಸುವ ಆ ಕಾಲದ ಸಾಮಾಜಿಕ ಅವಸ್ಥೆಯನ್ನು ಬದಲಾಯಿಸುವ ಉದ್ದೇಶದಿಂದ ಜನಕಲ್ಯಾಣದ ಜವಾಬ್ದಾರಿಯನ್ನು ಸ್ವೀಕರಿಸಿದರು.

೧೮೯೦ರಲ್ಲಿ ರಾಜವಾಡೆಯವರು ಸಂಸ್ಕೃತಿ ಎಂಬ ಪದವನ್ನು ರೂಪಿಸಿದರು. ಆಗ ರವೀಂದ್ರನಾಥ ಟಾಗೋರರಿಗೆ Civilization ಮತ್ತು Culture ಎಂಬ ಪದಗಳಿಗೆ ಬೇರೊಂದು ಭಾರತೀಯ ಪದ ಬೇಕಾಗಿತ್ತು. ಅವರಿಗೆ ತೋಚಲಿಲ್ಲ. ಯಾವಾಗ ಅವರಿಗೆ ಮರಾಠಿಯಲ್ಲಿ ಸಂಸ್ಕೃತಿ ಎಂಬ ಪದ ಬಳಕೆಯಲ್ಲಿರುವುದು ಅರಿವಿಗೆ ಬಂತೋ ಆಗವರು ಸಂತೋಷದಿಂದ ಇದನ್ನು ಸ್ವಾಗತಿಸಿ ಎತ್ತಿ ಹಿಡಿದರು. ಅಂದಿನಿಂದ ಭಾರತದ ಮನೆ ಮನೆಗಳಲ್ಲೂ ಸಂಸ್ಕೃತಿ ಪದ ಬಳಕೆಯಾಗಲಾರಂಭಿಸಿತು. ಪದ ಸಿಕ್ಕಿತು. ಕಲ್ಪನೆ ಮತ್ತು ಆಕಾಂಕ್ಷೆಗೆ ರೆಕ್ಕೆ ಮೂಡಿತು ಕೆಲಕಾಲ ಶಿಕ್ಷಿತ ಹುಡುಗರ ಹವ್ಯಾಸದ ವಿಷಯವಾಯಿತು. ಭಾರತೀಯ ಸಮಾಜದ ದುರ್ದೆಶೆಯ ಬಗೆಗೆ ಹೇಸಿಗೆ ಮತ್ತು ನವಸಮಾಜ ನಿರ್ಮಿತಿಯ ಆಕಾಂಕ್ಷೆ ಈ ಎರಡು ಕಾರಣದಿಂದಾಗಿ ಸಾಂಸ್ಕೃತಿಕ ಅಧ್ಯಯನದ ಮಹತ್ವ ಬೆಳೆಯಿತು. ಕೇವಲ ಸದ್ಯಕಾಲದ ಸ್ಥಿತಿಯ ಬಗೆಗೆ ಉಪಾಯ ಮಾಡಿದರೆ ಸಾಲದು. ಏಕೆಂದರೆ ಪ್ರತಿಯೊಂದು ಆಚಾರ ವಿಚಾರಗಳ ಮೂಲಬೇರು ಚರಿತ್ರೆಯಲ್ಲಿ ದೂರ ದೂರದವರೆಗೂ ಹರಡಿರುತ್ತದೆ. ಸಾವಿರಾರು ಶತಕಗಳ ತೇವಾಂಶದಿಂದ

ಬೆಳೆದಿರುತ್ತದೆ. ಇದನ್ನು ಅರಿತು ಪ್ರಾಂತ ಪ್ರಾಂತದಲ್ಲಿಯ ಔದಾಸೀನ್ಯವನ್ನು ಹೋಗಲಾಡಿಸಿ ಸಮಾಜಕ್ಕೆ ಕಾರ್ಯದ ಪ್ರೇರಣೆ ಮತ್ತು ಧ್ಯೇಯದ ದಿಕ್ಕನ್ನು ತೋರಿಸುವ ದೃಷ್ಟಿಯಿಂದ ಗೀತೆಯಂತಹ ಪ್ರಾಚೀನ ಧರ್ಮಗ್ರಂಥಗಳ ಅಧ್ಯಯನ ಶುರುವಾಯಿತು. ಚರಿತ್ರೆಯನ್ನು ಅಗೆಯಲಾಯಿತು. ರಾಮದಾಸ್, ಶಿವಾಜಿಯಂಥವರ ಸುತ್ತಲೂ ಸತ್ಯ ಮತ್ತು ಕಲ್ಪನಾ ಮಿಶ್ರಿತ ಸುಂದರ ತೇಜೋವಲಯ ನಿರ್ಮಾಣಗೊಂಡಿತು. ಶಿಕ್ಷಿತರಲ್ಲಿ ಸರ್ವಧರ್ಮ ಪಂಥಗಳ ಸಂಸ್ಥಾಪಕರ ಚರಿತ್ರೆ ಮತ್ತು ಪಂಥಗಳ ಪ್ರಸಾರ ಮಾಡಲಾಯಿತು. ಬುದ್ಧ-ಮಹಾವೀರರ ಕಾರ್ಯದ ವಿವರಗಳನ್ನು ಅರಿಯಲು ನಾವು ಕಲಿತೆವು. ಕಳೆದ ತಲೆಮಾರಿನವರೆಗೆ ಈ ಎಲ್ಲದರಿಂದ ಸ್ಫೂರ್ತಿಯನ್ನು ಪಡೆಯುವುದು ಮತ್ತು ನಮ್ಮ ರಾಷ್ಟ್ರತೇಜವನ್ನು ಜಾಗೃತವಾಗಿಸುವುದರಷ್ಟೇ ನಮ್ಮ ಅಗತ್ಯವಾಗಿತ್ತು.

ಆದರೆ ಈಗ ಅಗತ್ಯ ಬೆಳೆಯಿತು ಮತ್ತು ಬದಲಾಯಿತು. ಎರಡನೇ ಮಹಾಯುದ್ಧದಲ್ಲಿ ಜಗತ್ತಿನ ಪ್ರತಿಯೊಂದು ದೇಶದ ನಾಗರಿಕರ ವೈಯಕ್ತಿಕ ಮತ್ತು ಸಾಮುದಾಯಿಕ, ಸಾಮಾಜಿಕ ಶ್ರದ್ಧೆ ಶಾಶ್ವತವಾಗಿ ಬಿರುಕು ಬಿಟ್ಟಿತು. ವಿಜ್ಞಾನದಿಂದ ಮಾಡಬೇಕಾಗಿರುವುದನ್ನು ಸಾಮುದಾಯಿಕವಾಗಿ ಮಾಡಿದರೆ ಮಾತ್ರ ಸಫಲವಾಗುವ ಆಶೆಯಿದೆ. ಏಕೆಂದರೆ ಯಂತ್ರಯುಗದಲ್ಲಿ ದೊಡ್ಡ ಪ್ರಮಾಣದಲ್ಲಿ ಆದಾಯವೆಂಬ ತತ್ವವೇ ನಮ್ಮ ಆಚಾರ ವಿಚಾರಗಳಲ್ಲೂ ಆಕ್ರಮಣ ಮಾಡುತ್ತಿದೆ. ವೈಯಕ್ತಿಕ ಜೀವನ ಕೇವಲ ಒದ್ದಾಡುತ್ತ ಬದುಕಿದ್ದಾಯಿತು. ಜಗತ್ತಿನ ಸ್ಥಿತಿ ಹೀಗಾಗಿದೆ. ಹೊಸ ಸಂಸ್ಕೃತಿಯ ಕರೆ ಪ್ರತಿ ಮನಕ್ಕೂ ಕೇಳಿಬರುತ್ತಲಿದೆ. ಸಾಂಸ್ಕೃತಿಕ ಅಂಗವಿರುವ ವಿವಿಧ ರಾಜಕೀಯ ಪ್ರಣಾಲಿಯೂ ಜಾಹಿರಾತು ಮಾಡಿ ಅರ್ಥಕಾರಣ, ರಾಜಕಾರಣದ ಕುದುರೆಯನ್ನು ಮುನ್ನಡೆಸುತ್ತಿದೆ. ಸಾಮಾನ್ಯ ಮನುಷ್ಯನಿಗೆ ಈ ಮೂರೂ ಪ್ರಣಾಲಿಯಲ್ಲಿ ಅಗ್ರಗಣ್ಯ ಸ್ಥಾನವಿದೆ. ಸಂಸ್ಕೃತಿ, ಅರ್ಥಕಾರಣ ಮತ್ತು ರಾಜಕಾರಣವು ಸಾಮಾನ್ಯರ ಮುಕ್ತಿಗಾಗಿಯೇ ಇದೆ ಎಂಬುದನ್ನು ಪ್ರತಿ ದಿನ ಪ್ರತಿಯೊಂದು ಪಕ್ಷ, ಗ್ರಂಥ, ಪಾತ್ರ, ನಾಯಕರು ಚಿಕ್ಕವರಿರಲಿ ದೊಡ್ಡವರಿರಲಿ ಎಲ್ಲರೂ ತಪ್ಪದೇ ಹೇಳುತ್ತಿದ್ದಾರೆ. ಆದರೆ ಈ ಪ್ರಯತ್ನದಿಂದಾಗಿ ಬಡಪಾಯಿ ಶ್ರೀಸಾಮಾನ್ಯ ಮನುಷ್ಯ ಮಾತ್ರ ಉಸಿರುಗಟ್ಟಿ ಹೋಗುತ್ತಿದ್ದಾನೆ. ನಾನು ಯಾರು? ನನ್ನ ಚರಿತ್ರೆ ಏನು? ನಾನು ಹೇಗೆ ಬದುಕಲಿ? ನನ್ನ ಉದ್ದೇಶವೇನು? ನನ್ನ ನಿಜವಾದ ಶತ್ರು ಯಾರು? ಗೆಳೆಯ ಯಾರು? ಒಂದೂ ಅವನಿಗೆ ಗೊತ್ತೇ ಆಗಲಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಹಲವು ಸಲ ಸಾಮಾನ್ಯ ಜನರಿಂದ ದೂರ ಸರಿದ ಶ್ರೇಷ್ಠ ವಿದ್ವಾಂಸರಿಗಿಂತ, ಜಿಜ್ಞಾಸೆಯಿಂದ ಪರಿಪೂರ್ಣ, ದೀರ್ಘಕಾಲ ಅಧ್ಯಯನ ಮತ್ತು ಚಿಂತನೆ ಮಾಡುವ ಕಿರಿಯ – ಹಿರಿಯ ಅಧ್ಯಯನಕಾರರ ಅಗತ್ಯ

ಸಮಾಜಕ್ಕಿದೆ. ಜನಪ್ರಿಯತೆಯು ಸಾಮಾನ್ಯವಾಗಿ ಹಠಮಾರಿ, ಒಂಟಿ ಅಧ್ಯಯನಕಾರ ಸಾಲಿಗೆ ಬರುವುದಿಲ್ಲ. ಆದರೂ ಸಹ ಪ್ರಾಂಜಲ ಮನದಿಂದ ತನ್ನ ಅಧ್ಯಯನದ ಫಲಶ್ರುತಿಯನ್ನು ಜಗದ ಎದುರಿಗೆ ಇರಿಸುವ ಲೇಖಕರ ಸಂಖ್ಯೆಯು ಬೆಳೆದಂತಿಲ್ಲ. ಅದೇ ಬಗೆಯ ಛಲ ಜಿಜ್ಞಾಸು, ಶಿಸ್ತಿನ ಮತ್ತು ಸಹೃದಯ ವಾಚಕ ವರ್ಗವೂ ಸಹ ಸಮಾಜದಲ್ಲಿ ದೊಡ್ಡ ಪ್ರಮಾಣದಲ್ಲಿ ರೂಪಗೊಳ್ಳುತ್ತಲೇ ಇರುತ್ತದೆ. ವಿಭೂತಿ ಪೂಜೆಗೆ ನಿಯಂತ್ರಣ ಬಂದು, ವ್ಯಕ್ತಿಗಿಂತ ವೈಚಾರಿಕತೆಯ ಕಡೆಗೆ ಸುಶಿಕ್ಷಿತರ ಮನಸು ಹರಿಯುವುದು. ಈ ಕಾರಣದಿಂದಾಗಿಯೇ ಶ್ರೀ ಶಂ. ಬಾ. ಜೋಶಿಯವರ ಮರ್ಹಾಟಿ ಸಂಸ್ಕೃತಿ ಕೆಲವು ಸಮಸ್ಯೆ ಎಂಬ ಪುಸ್ತಕವನ್ನು ನಾನು ಸ್ವಾಗತಿಸುತ್ತೇನೆ.

ಸಂಸ್ಕೃತಿ ಅಧ್ಯಯನ ಯಾತ್ರೆಯ ಸಹ ಪ್ರವಾಸಿಯಾಗಿ ನಾನು ಈ ಪುಸ್ತಕವನ್ನು ಓದಿದಾಗ ನಿಜಕ್ಕೂ ಅಧ್ಯಯನದ ಒಂದು ಅಜ್ಞಾತ ಕೋಣೆಯು ನಮ್ಮ ಸಂಚಾರಕ್ಕಾಗಿ ತೆರೆದುಕೊಂಡ ಸಂತೋಷ ನನಗಾಯಿತು. ಮರಾಠಿ ಸಂಸ್ಕೃತಿಯು ನನ್ನ ಅಧ್ಯಯನದ ಮೂಲ ವಿಷಯವಲ್ಲದಿದ್ದರೂ ಅಖಿಲ ಭಾರತೀಯ ಸಂಸ್ಕೃತಿ ಮತ್ತು ತನ್ಮೂಲಕ ಬದುಕಿದ ಪ್ರಾದೇಶಿಕ ಸಂಸ್ಕೃತಿಯ ಮಾಹಿತಿಯನ್ನು ಪಡೆಯಬೇಕೆಂದು ಹಲವು ವರ್ಷಗಳಿಂದ ನಾನು ಪ್ರಯತ್ನಿಸುತಲಿದ್ದೆ. ಅದರಲ್ಲೂ ಮರಾಠರ ಸಂಸ್ಕೃತಿಯ ಬಗೆಗೆ ರಾಜಾರಾಮ ಶಾಸ್ತ್ರಿ ಭಾಗವತ ಮತ್ತು ಡಾ. ಕೇತಕರರು ಸಮನ್ವಯ ಪದ್ಧತಿಯಿಂದ ಮಾಡಿದ ಬರವಣಿಗೆಯ ವ್ಯಾಸಂಗ ಮಾಡಿದ್ದರಿಂದ ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನ ಮಾಡುವುದಾದರೆ ನಿಷ್ಪಕ್ಷಪಾತದಿಂದ ಆಚೆ ಈಚೆಯ ಪ್ರಾಂತಿಕ ಸಂಸ್ಕೃತಿಯ ಕೊಡುಕೊಳ್ಳುವಿಕೆಯು ಮೊದಲಿನಿಂದಲೂ ಯಾವ ಬಗೆಯಲ್ಲಿ ನಡೆಯಿತು ಎನ್ನುವುದು ಗೊತ್ತಾಗಬೇಕು; ಅಂದಾಗಲೇ ಪ್ರಾದೇಶಿಕ ಸಂಸ್ಕೃತಿಯ ಬಲಶಾಲಿ ಅಂಕುರ ಮತ್ತು ಅದರಲ್ಲಿಯ ದೌರ್ಬಲ್ಯದ ಬಗೆಗೆ ನಮಗೆ ಸರಿಯಾದ ಅರಿವು ಮೂಡಬಹುದು ಎಂಬ ತತ್ವವು ನನ್ನ ಮನದಲ್ಲಿ ಮೂಡಿತು. ಮಹಾರಾಷ್ಟ್ರದ ಅಧ್ಯಯನ ಮಾಡುವುದಾದರೆ ಗುಜರಾತ-ತೆಲಂಗಾಣ-ಕರ್ನಾಟಕ ಇವರ ಸಾಹಚರ್ಯದ ಅಂಗವು ಅರಿಯದ ವಿನಾ ಮುಂದಡಿಯಿಡುವದು ಸಾಧ್ಯವಾಗಲಾರದು. ಸಂಸ್ಕೃತಿ ಅಧ್ಯಯನದ ಮೊದಲ ಹೆಜ್ಜೆಯೆಂದರೆ ಆಯಾ ಪ್ರದೇಶದ ಭಾಷೆ, ರೀತಿ ರಿವಾಜು, ಸಂಸ್ಕಾರ ಮುಂತಾದ ಸರ್ವ ಸಾಂಸ್ಕೃತಿಕ ಸಾಮಾಜಿಕ ಮತ್ತು ಐತಿಹಾಸಿಕ ಘಟನೆಗಳ ವ್ಯವಸ್ಥಿತ ಮಾಹಿತಿಯನ್ನು ಸಂಗ್ರಹಿಸುವದು. ದುರ್ದೈವಕ್ಕೆ ನಮ್ಮ ಮೊದಲ ಹೆಜ್ಜೆಯೇ ಪೂರ್ಣಗೊಂಡಿಲ್ಲ. ಎರಡನೇ ಹೆಜ್ಜೆ ನೆರೆಯ ಪ್ರಾಂತದ ಸಾನಿಧ್ಯದ ತೌಲನಿಕ ಅಧ್ಯಯನ. ಮಹಾರಾಷ್ಟ್ರ ಕರ್ನಾಟಕದ ವಿಷಯದಲ್ಲಿ ಎರಡನೇ ಹೆಜ್ಜೆಯನ್ನು ಶ್ರೀ ಜೋಶಿಯವರು ಇರಿಸಿದ್ದಾರೆ. ಮಹಾರಾಷ್ಟ್ರ-ಕರ್ನಾಟಕ-ತೆಲಂಗಾಣ-ಪ್ರಾಂತಗಳು ಭಾಷೆಯಿಂದ ಭಿನ್ನವಾಗಿದ್ದರೂ ಸಾಂಸ್ಕೃತಿಕ ದೃಷ್ಟಿಯಲ್ಲಿ ಕೆಲವು ಸಾಮಾನ್ಯ ವೈಶಿಷ್ಟ್ಯವನ್ನು ಬಿಟ್ಟರೆ, ಅಭಿನ್ನವಾಗಿವೆ.

ಈ ಮೂರೂ ಪ್ರಾಂತ ಸೇರಿ ಒಂದು ಸಾಂಸ್ಕೃತಿಕ ವಿಭಾಗವಾಗುತ್ತದೆ. ಭಾಷೆಯ ಭಿನ್ನತೆ ಮತ್ತು ಸಮಾನ ಸಂಸ್ಕೃತಿಯ ಸ್ಥಳಗಳು ಅಪರೂಪವಾಗಿ ಕಾಣಸಿಗುತ್ತವೆ. ಹೀಗಾಗಿ ಶ್ರೀ ಜೋಶಿಯವರು ಪುಸ್ತಕದಲ್ಲಿ ಎತ್ತಿದ ಸಮಸ್ಯೆ. ಯಾರಿಗೇ ಅಪೂರ್ಣವೆನಿಸಿದರೂ ಯೋಗ್ಯದಿಕ್ಕಿನತ್ತ ಪ್ರೇರಿತಗೊಂಡ ಸಮಸ್ಯೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಶ್ರೀ ಜೋಶಿಯವರ ಈ ಕಾರ್ಯವು ಒಬ್ಬ ಹವ್ಯಾಸಿಯ ಉಪದ್ವ್ಯಾಪ ಆಗಿರದೇ ಒಬ್ಬ ವಿನಯಶೀಲ ಮತ್ತು ವ್ಯುತ್ಪತ್ತಿ ಅಧ್ಯಯನಕಾರನ ಸೀಮಿತ ಕಕ್ಷೆಯಲ್ಲಿ ಹೊಂದಿಕೊಂಡ ಹಲವು ವರ್ಷಗಳ ಅಧ್ಯಯನದ ನಿಕಷವಾಗಿದೆ ಎನ್ನುವುದು ಪುಸ್ತಕದ ಕೆಲ ಪುಟ ಓದಿದಾಗ ಅರಿವಿಗೆ ಬರುತ್ತದೆ. ಅಷ್ಟೇ ಅಲ್ಲ. ಅದರಲ್ಲಿಯ ಕೆಲವು ಪುಟಗಳು ಮಹಾರಾಷ್ಟ್ರ ಸಂಸ್ಕೃತಿಯ ಇತಿಹಾಸದಲ್ಲಿಯ ಕೆಲವು ಕೊರತೆಯನ್ನು ನೀಗಿಸಿ ಬರೆಯಬೇಕಾಗುವುದು ಎನ್ನುವುದರಲ್ಲಿ ಶಂಕೆಯಿಲ್ಲ. ಭಾಷೆಯದೇ ಉದಾಹರಣೆ ನೋಡಿ ಶ್ರೀ ಜೋಶಿಯವರು ಮರಾಠಿ–ಕನ್ನಡ–ತೆಲುಗು ಭಾಷೆಗಳ ಕೋಷ್ಟಕ ನೀಡಿದ್ದಾರೆ (ಪು. ೪೫) ಕಿರಿದಾಗಿದ್ದರೂ ಖಚಿತವಾಗಿದೆ. ಸಂಸ್ಕೃತಿಯ ತೌಲನಿಕ ಅಧ್ಯಯನಕ್ಕೆ ಇಂಥ ಕೋಷ್ಟಕದಿಂದಲೇ ಪುಷ್ಟಿ ದೊರೆಯುತ್ತದೆ. ಇಂಥ ಕೋಷ್ಟಕವನ್ನು ೧೮೮೫ರಲ್ಲಿ ದಿ. ರಾಜಾರಾಮಶಾಸ್ತ್ರಿ ಭಾಗವತರು ಗೋಂಡ ಭಾಷೆ ಎಂಬ ಲೇಖನದಲ್ಲಿ ಮತ್ತು ಮರಾಠಿ ಕನ್ನಡ ಮತ್ತು ತೆಲಂಗಿ ಈ ಭಾಷೆಯ ಕೋಷ್ಟಕವನ್ನು ನೀಡಿದ್ದರು. ನಾಗಪುರದ ದಿ. ಘಂಟಯ್ಯಾ ಅವರು ಇದಕ್ಕಿಂತ ಹಿಂದೆ ನೀಡಿದ್ದರು. ಈ ಇಬ್ಬರು ವಿದ್ವಾಂಸರ ಬಳಿಕ ಇಷ್ಟು ವರ್ಷಗಳ ನಂತರ ಒಬ್ಬ ಅಧ್ಯಯನಕಾರನಿಗೆ ಇದೇ ಬಗೆಯ ಕಾರ್ಯದ ಸ್ಫೂರ್ತಿ ಬಂದಿರುವುದರರಲ್ಲೇ ಪ್ರಯೋಗದ ಯಶಸ್ಸು ಅಡಗಿದೆ.

'ಮಹಾರಾಷ್ಟ್ರದ ಮೂಲ ಹೆಸರು' ಎಂಬ ಅಧ್ಯಾಯದಲ್ಲಿ ತೌಲನಿಕ ವ್ಯುತ್ಪತ್ತಿಯ ಸಹಾಯದಿಂದ ಇದನ್ನು ಊಹಾಪೋಹ ಮಾಡಿದ್ದಾರೆ– ಮಹಾರಾಷ್ಟ್ರ ಈ ಪದದ ಬಗ್ಗೆ ಜ್ಞಾನೇಶ್ವರಿಯಲ್ಲಿಯ ಮರ್ಹಾಟಾ ಎಂಬ ಪದವನ್ನು ಸಾರ್ಥ ಪದವೆಂದು ಸ್ವೀಕರಿಸಿದ್ದಾರೆ. ಮಹರಟ್ಠ, ಮಹರತ್ಥ, ಮಹಾರಥಿ, ರಾಷ್ಟ್ರೀಕ ಮುಂ. ಡಾ. ಭಂಡಾರಕರಿಂದ ಡಾ. ಕಾಣೆಯವರೆಗಿನ ವ್ಯುತ್ಪತ್ತಿಯನ್ನು ಗಮನಿಸಿ ಅವು ಸಮಾಧಾನಕಾರಕವಾಗಿಲ್ಲವೆಂದು ಶ್ರೀ ಜೋಶಿಯವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯ ಯೋಗ್ಯವಾಗಿದೆ. ಆದರೆ ಮಹಾರ ಎಂಬ ಜನವಾಚಕ ಪದ ಈಗಲೂ ಅವ್ಯುತ್ಪತ್ತಿಯಾಗಿದ್ದು. ಡಾ. ವಿಲ್ಸನ್ ಮತ್ತು ಲೋಕಹಿತವಾದಿ ದೇಶಮುಖ ಅವರು ಮಹಾರರ ರಾಷ್ಟ್ರವೇ ಮಹಾರಾಷ್ಟ್ರ ಎಂಬ ಶಂಕೆಯಿಂದ ಕೂಡಿದ ವ್ಯುತ್ಪತ್ತಿಯ ಬಗ್ಗೆ ಹೇಳಿದ್ದಾರೆ. ಅದರ ಸಹಾಯದಿಂದ ರಾಜಾರಾಮಶಾಸ್ತ್ರಿಯವರು ಮಹಾರರು ಮಹಾರಾಷ್ಟ್ರದ ಮೂಲನಿವಾಸಿಗಳು ಎಂದು ನಿರ್ಧರಿಸಿ ನಾಗ

ಸಮುದಾಯವೇ ಮಹಾರರು ಎಂಬ ತರ್ಕವನ್ನು ಮಂಡಿಸಿದರು. ರಾಜಾವಾಡೆಯವರು ಅದನ್ನು ಎತ್ತಿ ಹಿಡಿದು ಬೆಳೆಸಿದರು. ಡಾ. ಕೇತಕರರು ತಲೆಯ ಮೇಲೆತ್ತಿಕೊಂಡರು. ವಿಷ್ಣು ಕರಂದಿಕರರೂ ಬೆಂಬಲಿಸಿದರು. ಕೇವಲ ವ್ಯುತ್ಪತ್ತಿವಾಚಕ ಉಪಪತ್ತಿಯನ್ನು ನೀಡುವಾಗ ಜನಸಮೂಹದೊಂದಿಗೆ ಸಂಲಗ್ನವಾಗಿರುವ ಶಬ್ದಾರ್ಥವನ್ನು ಬೇರ್ಪಡಿಸುವುದು ಹೆಚ್ಚು ಅಪೇಕ್ಷಿತವಾಗಿರುತ್ತದೆ. ಶ್ರೀ ಜೋಶಿಯವರು ಹಟಗರ ಮುಂತಾದವರ ವಿಷಯದಲ್ಲಿ ಆ ಮಾರ್ಗವನ್ನು ಅವಲಂಬಿಸಿದ್ದಾರೆ. ಆದರೆ ರಾಷ್ಟ್ರೀಕ ಇಲ್ಲವೇ ರಠ್ಠ ಎಂದರೆ 'ಕುಣಬಿ' (ರೈತ) ಎಂಬ ಸಮೀಕರಣವು ಉಪರೋಧ ವಿದ್ವಾಂಸರ ತರ್ಕದಲ್ಲಿ ಕಾಣಬರುತ್ತದೆ. ಡಾ. ಕೇತಕರ ಅವರು ಸಾಧಕ ಬಾಧಕ ಪ್ರಮೇಯವನ್ನು ಮುಂದಿಟ್ಟು ಅದರ ಊಹಾಪೋಹವನ್ನು ಪ್ರಾಚೀನ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ಆ ಭಾಗವನ್ನು ಇಲ್ಲಿ ಸ್ವಲ್ಪದರಲ್ಲಿ ಮಂಡಿಸಿ ಅದನ್ನು ಶ್ರೀ ಜೋಶಿಯವರು ಅಳಿಸಿಹಾಕಿದ್ದರೆ ಅವರ ತರ್ಕಕ್ಕೆ ಹೆಚ್ಚು ಬಲ ಬರುತ್ತಿತ್ತು.

'ಮರದಾಟ ಎಂದರೆ ಗಿಡಗಂಟಿ' (ಸು. ೩೧) ಎಂಬ ಜೋಶಿಯವರ ಹೇಳಿಕೆಯು ಕೆಲವರಿಗೆ ಆಭಾಸಕರವೆನಿಸಬಹುದು. ಆದರೆ, ನನಗದು ಯೋಗ್ಯವೆನಿಸುತ್ತದೆ. ಏಕೆಂದರೆ ಒಂದೋ ಪ್ರಕೃತದ ಸಂಸ್ಕೃತೀಕರಣ ಅಥವಾ ಒಂದು ಪದ ಬೇರೊಂದರಲ್ಲಿ ಭಾಷಾಂತರವಾಗುವುದು. ನಾನು ಆದಿವಾಸಿಗಳ ಭಾಷೆಯ ಅಥವಾ ಹಳೆಯ ವೈದಿಕ ಮತ್ತು ಲೌಕಿಕ ಸಂಸ್ಕೃತದಲ್ಲಾಗುವ ಶಬ್ದಗಳ ಹಾಗೂ ಅರ್ಥಗಳ ಬದಲಾವಣೆಯ ಅಧ್ಯಯನ ಮಾಡಿದ್ದೇನೆ. ಅದರ ಮೇಲಿಂದ ಇದು ಅಸಂಭವನೀಯವೆಂದೇನೂ ಅನಿಸುವುದಿಲ್ಲ. ಮರವೆಂದರೆ ಗಿಡ, ಇದು ಕನ್ನಡ ಇಲ್ಲವೇ ದ್ರಾವಿಡ ಪದ. ಜೆ. ಎಫ್. ಹ್ಯುಯಿಟ್ ಇವರು ಛೋಟಾ ನಾಗಪುರದ ಕಮಿಶನರ್, ಸುಪ್ರಸಿದ್ಧ ಪ್ರಾಚ್ಯ ವಿದ್ವಾಂಸರಾದ ಮ್ಯಾಕ್ಸ್ ಮುಲ್ಲರ್‌ನ ಶಿಷ್ಯರು. ಅವರು ಬರೆದ, ಆರ್ಯ ಹಾಗೂ ದ್ರಾವಿಡ ಸಂಸ್ಕೃತಿಯು ಏಶಿಯಾ, ಈಜಿಪ್ಟ್ ಮತ್ತು ಯುರೋಪದೊಂದಿಗೆ ಎಂಥ ಸಂಬಂಧ ಹೊಂದಿದೆ ಎಂದು ತೋರಿಸುವ ೧೯೦೭ರಲ್ಲಿ ಪ್ರಕಟಗೊಂಡ *'Primitive Traditional History'* ಎಂಬ ಗ್ರಂಥದಲ್ಲೂ ಭಾರತದಲ್ಲಿಯ ದ್ರಾವಿಡ ಸಂಸ್ಕೃತಿಯ ಅಂಶದ ಪ್ರತೀಕವೆಂದು ಬಳಸಲಾಗಿದೆ. ದಕ್ಷಿಣದ ಮೇಲೆ ಅದರ ದೊಡ್ಡ ಪ್ರಭಾವವಿರಬೇಕು ಎನ್ನುವುದರಲ್ಲಿ ಸಂಶಯವಿಲ್ಲ. ಮಾರುತಿ ಎಂದರೆ ಮರದ ಮೇಲೆ ವಾಸಿಸುವ ದೇವರು ಎಂಬ ನಿರ್ಣಯವನ್ನು ಈ ಗ್ರಂಥದಲ್ಲಿ ಕಾಣಬಹುದು. ಎರಡು ವರ್ಷಗಳ ಹಿಂದೆ ಈ ಹೇಳಿಕೆಯು ಹೊಂದಾಣಿಕೆ ಆಗುವಂತಹದಲ್ಲ ಎಂದೆನಿಸಿತು. ಆದರೆ ಶ್ರೀ ಜೋಶಿಯವರು ಎತ್ತಿ ತೋರಿಸಿದ ವ್ಯುತ್ಪತ್ತಿರೂಪದ ಕಾರಣದಿಂದಲಾದರೂ ಅದನ್ನು ಮರುಯೋಚನೆ ಮಾಡುವುದೇ ಶ್ರೇಯಸ್ಕರ ಎಂದೆನಿಸಿತು. ಆ ವಿಷಯದ ಬಗೆಗೆ

ಆಳವಾಗಿ ಯೋಚಿಸುತ್ತ ಹೋದಂತೆಲ್ಲ ಅದು ಮಹಾರಾಷ್ಟ್ರದ ಸಾಂಸ್ಕೃತಿಕ ಚರಿತ್ರೆಯಲ್ಲಿಯ ಅತ್ಯಂತ ಚಿಂತನೀಯವಾದ ವಿಷಯ ಎಂದೆನಿಸಿತು. ಅದರ ಬಗೆಗೆ ನನಗೆ ಸಂಶಯವೆನಿಸುವುದಿಲ್ಲ.

'ಸ್ಥಳನಾಮ ಮತ್ತು ಸಮಾಜೋತಿಹಾಸ' ಈ ಪ್ರಕಟಣದವರೆಗಿನ ಮಾಹಿತಿಯು ತೀರ ಉಪಯುಕ್ತ ಹಾಗೂ ಮನನೀಯವಾಗಿಹೆ. ಗೋಪಾಲನೆಯಿಂದ ಕೃಷಿತನಕದ ಅವಸ್ಥೆವರೆಗೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಯಲ್ಲಿ ಸ್ಥಿರಗೊಂಡ ಮತ್ತು ಭಾರತದ ತುಂಬ ರೂಢಿಯಾದ ಪತ್ತಿ, ಪಟ್ಟಿ, ಹಟ್ಟಿ, ಪಾಡಿ, ವಾಡಿ – ಮುಂತಾದ ಪದಗಳ ಬಗೆಗಿನ ಅವರ ಮಾಹಿತಿಯು ಒಪ್ಪಿಗೆಯಾಗುವಂತೆಯೆ ಇದೆ. ಏಕೆಂದರೆ ಧನಗರ (ಕುರುಬರು), ಗೌಳಿ (ಗೊಲ್ಲಗೋವಳಿಗ) ಮುಂತಾದವರ ರೀತಿ ರಿವಾಜು ಮತ್ತು ಇತರ ಸಾಂಸ್ಕೃತಿಕ ಅಂಗಗಳ ಬಗೆಗೆ ನಾನು ಸದ್ಯ ಅವಲೋಕಿಸುತ್ತಿದ್ದೇನೆ. ಅಲ್ಲೂ ಶ್ರೀ ಜೋಶಿಯ ಹೇಳಿಕೆಗೆ ಪುಷ್ಟಿ ನೀಡುವ ಮಾಹಿತಿಯು ಉಪಲಬ್ಧವಾಗುತ್ತಿದೆ. ಆದರೆ ಪತ್ತಿಯು ಆರ್ಯೇತರ ಮತ್ತು ಹಳೆಯ ವೈದಿಕ ಕಾಲದ, ಆರ್ಯಕ್ಕಿಂತ ಪೂರ್ವದ ಭಾರತೀಯರು ಎಂಬ ಹೇಳಿಕೆ ಮಾತ್ರ ವಿವಾದದಿಂದ ಕೂಡಿದೆ. ಹಾಗೆಯೇ ಹಾಟಕ ಎಂದರೆ ಸುವರ್ಣ ಭೂಮಿ. ಹಾಟ್ ದೇಶವು ಮುಂದೆ ಮಹಾರಾಷ್ಟ್ರ ಮತ್ತು ಕರ್ನಾಟಕ ಎಂಬ ಎರಡು ಭಾಗವಾಯಿತು ಎಂಬ ಹೇಳಿಕೆಯು ಸಹ ಹೆಚ್ಚು ಸ್ಪಷ್ಟೀಕರಣ ಬಯಸುತ್ತದೆ.

'ಈ ಮರಹಟರು ಯಾರು?' ಈ ಪ್ರಕಟಣದಲ್ಲಿಯ ಯದು ಮತ್ತು ತರ್ವಶ ಎಂಬ ಹೆಸರಿನಿಂದ ಗುರುತಿಸಲಾಗುವ ಆರ್ಯೇತರ ಜನಸಮೂಹವು ಗೋಪಾಲಕರಾಗಿದ್ದು, ಅವರು ನರ್ಮದೆಯ ದಕ್ಷಿಣದ ಸಂಸ್ಕೃತಿಯನ್ನು ನಿರ್ಮಿಸಿದರು ಎಂದು ಶ್ರೀ ಜೋಶಿ ಹೇಳಿದ ಮಾತು ಯೋಗ್ಯವಾಗಿದೆ ಎಂದೆನಿಸುತ್ತಿದೆ. (ಈ ವಿಷಯದ ಪೂರಕ ಅಲ್ಲಿ ಬ್ರಾಹ್ಮಣರು ಯಾವಾಗ ಬಂದರು ಎಂಬ ಲೇಖನದಲ್ಲಿ ವ್ಯಕ್ತವಾಗಿದೆ).

ಆದರೆ ಗೋಪಾಲಕರ ಉಪಲಬ್ಧವಿರುವ ಸಾಂಸ್ಕೃತಿಕ ಇತಿಹಾಸದ ಮೇಲಿಂದ ಈ ಜನರು ಆರ್ಯೇತರ ಮತ್ತು ಅಸುರವಂಶದವರಾಗಿದ್ದರು (ಪು. ೫೮) ಎಂಬ ಹೇಳಿಕೆಯು ಲೇಖಕನ ಯುಕ್ತಿವಾದದಿಂದಲೂ ಸಿದ್ಧವಾಗುವುದಿಲ್ಲ. ಪೌರವ ಆರ್ಯೇತರ ಇಲ್ಲವೇ ಅವೈದಿಕರೆಂದು ಭಾವಿಸಿದರೆ ಭರತನ ಸ್ಥಿತಿ ಯಾವುದು ಎಂದು ತಿಳಿಯಬೇಕು? ಹಾಗೇ ಆದಲ್ಲಿ ಮಹಾಭಾರತದ ಪೌರವರ ಗಾಥೆಯ ಸಂಬಂಧ ಪ್ರಯತ್ನವೇ ವಿಫಲವೆಂದು ಭಾವಿಸಬೇಕಾಗುತ್ತದೆ.

'ಅವಳಿ ಸೋದರರು ಮರಹಟ್ಟಿ ಮತ್ತು ಕನ್ನಡಿಗರು' ಮತ್ತು 'ಭಾಷಿಕ ಪುರಾವೆ' ಈ ಎರಡು ಪ್ರಕರಣಗಳು ಈ ಪುಸ್ತಕದ ಸಾರಸರ್ವಸ್ವ ಆಗಿದೆ. ಯದುವಂಶದವರು ಮಹಾರಾಷ್ಟ್ರದೊಂದಿಗೆ ತುರ್ವಂಶದವರು ಕರ್ನಾಟಕದೊಂದಿಗೆ

ಸಂಬಂಧ ಹೊಂದಿದೆ. ಈ ಹೇಳಿಕೆಯು ಈ ಪ್ರಕಟಣದ ಮುಖ್ಯ ಆಶಯವಾಗಿದೆ. ಇದರಲ್ಲಿ ಶ್ರೀ ಜೋಶಿ ಅವರು ನೀಡಿದ ಭಾಷಿಕ ಮತ್ತು ಉಳಿದ ಗ್ರಾಂಥಿಕ ಪುರಾವೆಗಳು ನಿರ್ದೋಷವೆನಿಸುತ್ತವೆ. ಪಶುಪಾಲಕ ಸಂಸ್ಕೃತಿಯು ಈ ಎರಡೂ ಪ್ರಾಂತಗಳಲ್ಲಿ ಹೇಗೆ ನೆಲೆಸಿತು ಎನ್ನುವುದನ್ನು ಆಧಾರಸಹಿತ ವಿವೇಚಿಸಲಾಗಿದೆ.

ರಾಷ್ಟ್ರೀಕದ ಬಗೆಗಿನ ಶ್ರೀ ಜೋಶಿಯವರ 'ಕರ್ನಾಟಕದ 'ನಾಡವ'ರೆಂದರೆ ರಾಷ್ಟ್ರೀಕ' ಎಂಬ ಹೇಳಿಕೆಯು 'ಮರ ಮತ್ತು ಗಿಡಗಂಟಿ' ಈ ಭಾಷಾಂತರದ ನ್ಯಾಯವನ್ನೇ ಆಧರಿಸಿದೆ. ಈ ಮಾತನ್ನು ಅವರು ಬೇರೊಂದು ಪುರಾವೆಯನ್ನು ನೀಡಿ ಪುಷ್ಟಿಗೊಳಿಸಿದ್ದಾರೆ. ಆದರೂ ಭೋಜ ಮತ್ತು ರಾಷ್ಟ್ರೀಕ ಈ ಇಬ್ಬರು ಜನರ ಬಗೆಗೆ ವಿದ್ವಾಂಸರಲ್ಲಿ ಎಷ್ಟೆಲ್ಲ ತರ್ಕ ಕುತರ್ಕ ಬೆಳೆದಿದೆ ಎಂದರೆ ಸದ್ಯಕ್ಕಂತೂ ಆ ಬಗೆಗೆ ಖಚಿತ ನಿರ್ಣಯವನ್ನು ತೆಗೆದುಕೊಳ್ಳುವ ಅವಸ್ಥೆಯವರೆಗೆ ನಾವು ತಲುಪಿದ್ದೇವೆ ಎಂದೇನೂ ನನಗನಿಸುವುದಿಲ್ಲ. ಆದರೆ ಉಳಿದವರಿಗೆ ಅಜ್ಞಾತವಾಗಿರುವ ಕನ್ನಡದ ಭಾಷಿಕ ಮತ್ತು ಮಾನವವಾಂಶಿಕ ಸಂಗತಿಯನ್ನು ಶ್ರೀ ಜೋಶಿಯವರು ಅಧ್ಯಯನಕಾರರಿಗೆ ಉಪಲಬ್ಧ ಮಾಡಿಕೊಟ್ಟಿರುವುದರಿಂದ ಈ ಪ್ರಶ್ನೆಯ ರೂಪವು ಅಧಿಕ ವ್ಯಾಪಕವು ಮತ್ತು ದಿಕ್ಕು ಅಧಿಕ ನಿಶ್ಚಿತವೂ ಆಗಲು ಸಹಾಯವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಖಾನದೇಶ ಎಂಬ ಪದಕ್ಕೆ ಗೋಪಾಲಕೃಷ್ಣನೊಂದಿಗೆ ಸಂಬಂಧವಿಲ್ಲ ಎಂಬ ಮಹತ್ವದ ಹೇಳಿಕೆಯು ಈ ಪ್ರಕರಣದಲ್ಲಿ (ಪು. ೭೭) ಲಭಿಸುತ್ತದೆ. ಇಂದು ಖಾನದೇಶವು ಮರಾಠಿ ಪ್ರಾಂತವಾಗಿದ್ದರೂ ಹಿಂದೆ ಅದು ಕನ್ನಡಿಗರ ಪ್ರದೇಶವಾಗಿತ್ತು. ಕನ್ನಡ ಮತ್ತು ಕನ್ನದೇಶ ಇಲ್ಲವೇ ಖಾನದೇಶ ಎಂಬ ಸಂಬಂಧ ಈ ಬಗೆಯದಾಗಿದೆ ಎಂಬ ಸಂಗತಿಯೂ ಸಂಸ್ಕೃತಿಯ ಅಧ್ಯಯನಕಾರರಲ್ಲಿ ಹೊಸ ಅಲೆಯನ್ನು ಹುಟ್ಟಿಸುವಂತಹದು.

ಭಾಷಿಕ ಪುರಾವೆ ಈ ಪ್ರಕರಣದಲ್ಲಿಯ ಪತ್ತಿಜನರು ಆರ್ಯೇತರ ಮತ್ತು ವೇದಕಾಲೀನ ಭಾರತೀಯರು ಎಂಬ ಶ್ರೀ ಜೋಶಿಯವರ ಹೇಳಿಕೆಯು ವಾದಗ್ರಸ್ತವಾಗಿದೆ. ವೇದಭಾಷೆಯಲ್ಲಿ ನುಸುಳಿದ ಪತ್ತಿಜನರ ಭಾಷೆಯ ಪುರಾವೆಯೂ ವಾದಗ್ರಸ್ತವಾದುದು. ನಿರುಕ್ತದ ಅಧ್ಯಯನ ಮಾಡಿದವರಿಗೆ ವೈದಿಕ ಸಂಸ್ಕೃತದಲ್ಲಿ ಎಷ್ಟು ಮತ್ತು ಎಂಥ ಆರ್ಷರೂಪಗಳಿವೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಪಾಣಿನಿಯು ಸಿಂಹ ಎಂಬ ಶಬ್ದವನ್ನು ಅವ್ಯುತ್ಪತ್ತಿ ಎಂದು ನಿರ್ಧರಿಸಿದ್ದಾರೆ. ಅಂದರೆ ಈ ಪದವೂ ಹೊರಗಿನಿಂದ ಬಂದು ಸಂಸ್ಕೃತ ಭಾಷೆಯಲ್ಲಿ ಸೇರಿದೆ. ಇದರಲ್ಲಿ ಸಂಶಯವಿಲ್ಲ. ಶ್ರೀ ಜೋಶಿಯವರು ಇಂಥದೇ ಮತ್ತೊಂದು ಜೋಡು ಪದದ ಉದಾಹರಣೆಯನ್ನು (ಪು. ೮೫) ನೀಡಿದ್ದಾರೆ. ಚಂದ್ರ ಎಂಬ ಶಬ್ದವು ಆರ್ಯೇತರ ಪತ್ತಿ ಜನರ ಭಾಷೆಯದು ಎಂಬ ಹೇಳಿಕೆಯು ಪತ್ತಿಜನ ಎಂಬ

ಪದವನ್ನು ಕೈಬಿಟ್ಟರೆ ಸ್ವೀಕರಿಸಬಹುದು. ಆದರೆ ವಿ. ಕೆ. ರಾಜವಾಡೆಯವರು ಸೂಚಿಸಿದಂತೆ ಚ ಎಂಬ ಉಚ್ಚಾರವನ್ನು ಶ ಎಂದು ಮಾಡುತ್ತಿರಬೇಕು. ಇದರ ಮೇಲಿಂದ ತಮಿಳಿನ ಚೆನ್ (ಚಂದ್ರ)ನ್ನು ಸಂಸ್ಕೃತ ಚಂದ್ರದ ಸಂಬಂಧವನ್ನು ಜೋಡಿಸುವುದಾದರೆ **'ಸ್ಥೂಣಾನಿಖನನ'** ನ್ಯಾಯದಂತೆ ಈ ವಿಷಯವನ್ನು ಎಲ್ಲ ಮಗ್ಗಲಿನಿಂದ ಚರ್ಚಿಸಿ ಬಳಿಕ ಸ್ವೀಕರಿಸಬೇಕಾಗುತ್ತದೆ. ಭಾರತದಲ್ಲಿಯ ವೈದಿಕ ಮತ್ತು ಅವೈದಿಕ ಜನರು ಭಿನ್ನಭಾಷಿಕರಾಗಿದ್ದು, ಅವರ ಭಾಷೆಗಳ ಪರಸ್ಪರರ ಸಂಸ್ಕೃತಿ ಸಂಘರ್ಷದಿಂದಾದ ಪರಿಣಾಮದ ಬಗ್ಗೆ ಭಿನ್ನಾಭಿಪ್ರಾಯವಾಗುವದು ಸಾಧ್ಯವಿಲ್ಲ. ವ್ಯತ್ಯಾಸವಿಷ್ಟೇ, ಇಂದು ದಾಕ್ಷಿಣಾತ್ಯ ಅಂದರೆ ದ್ರಾವಿಡ ಇಲ್ಲವೇ ಶ್ರೀ ಜೋಶಿಯವರು ಈ ಗ್ರಂಥದಲ್ಲಿ ಖಚಿತವಾಗಿ ತೋರಿಸಿದ ತಮಿಳಿನೊಂದಿಗೆ ಹಳೆಯ ವೈದಿಕ ಸಂಸ್ಕೃತದ ಸಂಘರ್ಷವು ಹೇಗಾಯಿತು ಎಂಬ ಪುರಾವೆ ಎರಡೂ ಕಡೆಗಳಲ್ಲಿ ಉಪಲಬ್ಧವಿಲ್ಲ. ಹೀಗಾಗಿ ಚಂದರಮಸ್‌ದಂತಹ ಒಂದು ಪದವನ್ನೂ ಸಹ ಸಂಪೂರ್ಣ ಹೇಳಿಕೆಗೆ ಆಧಾರವೆಂದು ನೀಡಬೇಕಾಗುತ್ತದೆ. ತಾತ್ಪರ್ಯವೇನೆಂದರೆ ಈ ಆರ್ಯೇತರ ಭಾಷೆಗಳ ಪರಿಣಾಮವಾಗಿ ವೇದಭಾಷೆಯು ಲೌಕಿಕ ಸಂಸ್ಕೃತದಲ್ಲಿ ರೂಪಾಂತರಗೊಂಡಿತು. ಮತ್ತು ಆ ವೈದಿಕ ಹಾಗೂ ತದನಂತರ ಲೌಕಿಕ ಸಂಸ್ಕೃತದ ಪ್ರಭಾವದಿಂದಾಗಿ ದಾಕ್ಷಿಣಾತ್ಯ ಹಳೆಯ ಭಾಷೆ (ಅದು ಒಂದೇ ಆಗಿತ್ತೇ ಹಲವು?) ನಂತರದ ತಮಿಳು, ತೆಲುಗು, ಕನ್ನಡ ಮುಂತಾದ ಭಾಷೆಗಳಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಬಗೆಯಾಗಿ ರೂಪಾಂತರ ಹೊಂದುತ್ತ ಹೋಯಿತು. ಅದನ್ನೆಲ್ಲ ಈಗಲೂ ಕೇವಲ ಕಲ್ಪನೆಯ ಸಹಾಯದಿಂದಲೇ ಬಳಸಲಾಗುತ್ತಿದ್ದ ಸಿದ್ಧಾಂತವನ್ನು ಎಲ್ಲಿಯವರೆಗೆ ಭಾಷಾಶಾಸ್ತ್ರದ ಸಹಾಯದಿಂದಲೇ ಕೋಷ್ಟಕವನ್ನು ನೀಡಿ ಅಖಂಡರೂಪದಲ್ಲಿ ಮಂಡಿಸುವುದು ಸಾಧ್ಯವಿಲ್ಲವೋ ಅಲ್ಲಿಯವರೆಗೆ ಭಾಷಿಕ ಪುರಾವೆಯ ಆದ್ಯ ಪ್ರತಿಷ್ಠಾನವು ಸದಾ ಅನಿಶ್ಚಿತವಾಗೇ ಉಳಿಯುತ್ತದೆ. ಈ ಪುಸ್ತಕದಲ್ಲದು ಹಾಗೇ ಉಳಿದಿದೆ. ಬುನಾದಿಯ ಈ ಅಪರಿಹಾರದ ಕೊರತೆಯೊಂದನ್ನು ಬಿಟ್ಟರೆ ಚಿಕ್ಕ ಪುಟ್ಟ ತಪಶೀಲು ಉದಾಹರಣೆಗಾಗಿ ಕನ್ನಡ–ಮರಾಠಿ ಭಾಷೆಯಲ್ಲಿಯ ಶಾಬ್ದಿಕ ಸಾಧರ್ಮ್ಯ (ಪು. ೮೭–೯೦) ತೌಲನಿಕ ಅಧ್ಯಯನಕ್ಕೆ ಯೋಗ್ಯವಾಗೇ ಇದೆ. ಆದರೂ ಸಹ 'ಚಂದ್ರಮಸ್' ಈ ಶಬ್ದದ ವ್ಯುತ್ಪತ್ತಿಯಲ್ಲಿ 'ಚೆನ್' ಪದದ ಸಾಧರ್ಮ್ಯವು ಹೊಂದಿಕೆಯಾಗಿದ್ದರಿಂದ ಯಾವುದೋ ಅತೀ ಪ್ರಾಚೀನ ಭಾಷಿಕ ಕೊಂಡಿಯು ಸಿಕ್ಕಿದೆ ಎಂದು ಭಾವಿಸುವಷ್ಟರಲ್ಲಿ ಅದರಿಂದ ಹೇಳಿಕೆಗೆ ಒಂದು ಬಗೆಯ ಓಘ ಬಂದಿದೆ ಎಂದುಕೊಳ್ಳುವಷ್ಟರಲ್ಲಿ ಅದು ಮುಂದೆ ಐತಿಹಾಸಿಕ ಪುರಾವೆಯ ಸಾತತ್ಯ ಉಳಿಯದಿರುವದರಿಂದ ಸ್ಥಗಿತಗೊಂಡಿತು. ಅನಂತರ ಈ ಪುರಾವೆ ಅದಕ್ಕೆ ಹೋಲಿಸಿದಾಗ 'ಆಧುನಿಕ'ವಾಗಿದ್ದರಿಂದ ಅಧ್ಯಾಯದಲ್ಲಿಯ ಚಾರಿತ್ರಿಕ

ಕರಾರುವಾಕ್ಕುತನ ಹೊರಟುಹೋಗಿದೆ. ಶ್ರೀ ಜೋಶಿಯವರ ಪತ್ತಿಜನರೊಂದಿಗೆ ಅನಂತರದ ಎರಡನೇ ಪುರಾವೆಯಲ್ಲಿ ದೊಡ್ಡ ಬಿರುಕು ಬಿಟ್ಟಂತಾಗಿದೆ. ಅದರಿಂದಾಗಿ ಐತಿಹಾಸಿಕ ಸಾತತ್ಯದ ಕೊರತೆಯು ಅಧ್ಯಾಯದ ಉತ್ತರಾರ್ಧದಲ್ಲಿ ಭಾಸವಾಗುತ್ತದೆ.

ಈ ಅರ್ಯ ದ್ರಾವಿಡ ಭಾಷೆಯ ಮಿಶ್ರಣಕ್ಕೆ ಸಾವಿರಾರು ವರ್ಷಗಳ ಕಾಲಾವಧಿ ಹಿಡಿಯಿತು ಎಂಬ ಅರಿವು ಶ್ರೀ ಜೋಶಿಯವರಿಗಿದೆ (ಪು. ೮೭). ಹೀಗಾಗಿಯೇ ಈ ಅಧ್ಯಾಯದಲ್ಲಿಯ ಭಾಷಾಶಾಸ್ತ್ರೀಯ ದೌರ್ಬಲ್ಯದ ಕಾರಣವನ್ನು ನಾವು ಸಹಾನುಭೂತಿಪೂರ್ವಕ ಅರಿಯುವುದು ಸಾಧ್ಯ. ಈ ಭಾಗವನ್ನು ಸಿದ್ಧಾಂತದ ಅಪೇಕ್ಷೆಯಿಂದ ನೋಡದೆ ಟಿಪ್ಪಣಿಯ ಉಪಯೋಗಕ್ಕಾಗಿ ಅದನ್ನು ಬಳಸಬಹುದಾಗಿದೆ. ಸಾಂಸ್ಕೃತಿಕ ಚರಿತ್ರೆಯಲ್ಲಿ ಪದ-ಪದಗಳ ಟಿಪ್ಪಣಿ ಸಹ ಅದೆಷ್ಟು ಮಹತ್ವದ್ದು ಎಂದು ಬೇರೆ ಹೇಳಬೇಕಿಲ್ಲ.

ಈ ಅಧ್ಯಾಯದಲ್ಲಿ ಮರಾಠಿ ಕಾವ್ಯದ ಮೇಲಾದ ಕನ್ನಡದ ಪ್ರಭಾವವನ್ನು ಉತ್ಕೃಷ್ಟವಾಗಿ ಮಂಡಿಸಲಾಗಿದೆ. ಇದರ ಬಗ್ಗೆ ಎರಡು ಮಾತಿಲ್ಲ. 'ಮರಾಠಿ ಮತ್ತು ಕನ್ನಡದ ಆತ್ಮೀಯ ಸಂಬಂಧ' ಎಂಬ ಪ್ರಕರಣವೂ ಅನನ್ಯವಾಗಿದೆ.

'ದೇವದೇವತೆ' ಎಂಬ ಅಧ್ಯಾಯದಲ್ಲಿ ಶಿವನು ಮಹಾರಾಷ್ಟ್ರ ಕರ್ನಾಟಕದ ಮೂಲದೇವತೆ ಎಂದು ಹೇಳಲಾಗಿದೆ. ಇದೂ ಒಪ್ಪಿಗೆಯಾಗುವಂತೆಯೇ ಇದೆ. ಆದರೆ 'ಚಂದ್ರಮಸ್' ಬಗೆಗಿನ ಪುನರುಕ್ತಿಯು ಇಲ್ಲಿ ಬೇಸರ ತರಿಸುತ್ತದೆ. ವೈದಿಕ ರುದ್ರ ಮತ್ತು ಶಿವ ಒಂದೇ ಅರ್ಥದ ಎರಡು ಶಬ್ದಗಳಾಗಿವೆ. ರುದ್ರ ಶಬ್ದ ವೈದಿಕವಾದರೆ, ಶಿವ ಅವೈದಿಕ. ರುದ್ರ ಮತ್ತು ಶಿವ ಈ ಎರಡೂ ಪದಗಳ ಮೂಲಾರ್ಥ ಕೆಂಪು ಎಂದಿದೆ. ಈ ಸಾಧರ್ಮ್ಯವನ್ನು ಗಮನಕ್ಕೆ ತಂದುಕೊಂಡೇ ರುದ್ರ ಮತ್ತು ಶಿವನ ಕಲ್ಪನೆಯಲ್ಲಿ ಮುಂದೆ ಬದಲಾವಣೆ ಮಾಡಲಾಯಿತು. ಆರ್ಯರಿಗೆ ಶ್ವೇತ ಬಣ್ಣ ಪ್ರಿಯವಾಗಿದ್ದರಿಂದ ಅವರು ಶಂಕರನನ್ನು ಗೌರವ ಎಂದು ಕರೆದರು. ಆರ್ಯೇತರರಿಗೆ ಕೆಂಪು ಬಣ್ಣ ಪ್ರಿಯ. ಅದರಿಂದಾಗಿ ದೇವತೆಯ ಸ್ವರೂಪದಲ್ಲೂ ವ್ಯತ್ಯಾಸವಾಗುತ್ತದೆ. ರುದ್ರ ಪುತ್ರ ಗಣಪತಿಗೆ ಈ ಕಾರಣಕ್ಕಾಗೇ ಸಿಂಧೂರವನ್ನು ಲೇಪಿಸಲಾಗುತ್ತದೆ ಎಂದು ಶ್ರೀ ಜೋಶಿ ಎನ್ನುತ್ತಾರೆ. ಅವರು ಸಿಂಧೂರದ ಸಂಬಂಧವನ್ನು ಚಂದ್ರನೊಂದಿಗೆ ಮತ್ತು ಚಂದ್ರನ ಸಂಬಂಧವನ್ನು ರುದ್ರನೊಂದಿಗೆ ಜೋಡಿಸುತ್ತಾರೆ. ಈ ಎಲ್ಲ ತರ್ಕವನ್ನು ಒರೆಗಲ್ಲಿಗೆ ತಿಕ್ಕಿತಿಕ್ಕಿ ಪರೀಕ್ಷೆಗೊಳಪಡಿಸಬೇಕು. ಇಂಥ ಎಷ್ಟೋ ವಿಚಾರಗಳಿಗೆ ಯೋಗ್ಯದಿಕ್ಕು ನೀಡುವ ತರ್ಕವು ಈ ಪುಸ್ತಕದಲ್ಲಿದೆ. ಶಿವ ಮತ್ತು ಲಿಂಗ ಬೇರೆ ಬೇರೆ ಎಂಬ ಸಮಸ್ಯೆ ಸಹ ಆಘಾತ ನೀಡುವಂತಹದಾಗಿದೆ. ಆದರೆ ಈ ಕುರಿತು ಶ್ರೀ ಜೋಶಿಯವರ ವಿವೇಚನೆಯು ಅಪೂರ್ಣವಾಗಿದ್ದಾಗಿದ್ದರಿಂದ ಲಿಂಗಪೂಜೆಯ ಮಹಿಮೆ ಮತ್ತು ಲಿಂಗಪೂಜೆಯ ಉತ್ಪತ್ತಿಯು ಯಾವುದು ಪುರಾಣದಲ್ಲಿದೆಯೋ ಅದರ ಕಿಂಚಿತ್ತೂ

ಪರಾಮರ್ಶೆಯು ಈ ಅಧ್ಯಾಯದಲ್ಲಿ ಬರದೇ ಇರುವುದರಿಂದ ಶಿವರುದ್ರರ ಸಂಪೂರ್ಣ ವಿವೇಚನೆಯು ದುರ್ಬಲಗೊಂಡಿದೆ.

ಮಲ್ಹಾರಿ ಮತ್ತು ಖಂಡೋಬಾರ ಬಗೆಗಿನ ಶ್ರೀ ಜೋಶಿಯವರ ಹೇಳಿಕೆಯು ಗಲಿಬಿಲಿಯನ್ನುಂಟುಮಾಡುವಂತಹದು. ಮಲ್ಹಾರಿ–ಖಂಡೋಬಾ ಈ ಸಮೀಕರಣ ಅವರಿಗೆ ಒಪ್ಪಿಗೆಯಿಲ್ಲ. ಮಲ್ಹಾರಿಯು ಶಿವಸ್ವರೂಪವಲ್ಲ. ಏಕೆಂದರೆ ಶಿವ ತ್ರಿಶೂಲಧಾರಿ, ಖಂಡೋಬಾ ಖಡ್ಗಧಾರಿ ಶಿವನ ವಾಹನ ನಂದಿ, ಖಂಡೋಬಾನದು ಕುದುರೆ. ಈ ಕಾರಣವು ಸತ್ಯವಾದದ್ದೇ. ಆದರೆ ಈ ಬಾಹ್ಯ ಭೇದದಿಂದ ಮಲ್ಹಾರಿ, ಖಂಡೋಬಾ, ಮತ್ತು ಶಿವ ಇವುಗಳ ಪರಂಪರೆಯಿಂದ ಬಂದ ಏಕೀಕರಣವನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಏಕೀಕರಣವೆಂದರೆ ಬರೇ ಸಮೀಕರಣವಲ್ಲ. ಭಾರತೀಯ ದೈವದ ಚರಿತ್ರೆಯಲ್ಲಿ ಸಮೀಕರಣವು ನಮ್ಮನ್ನು ದೂರದವರೆಗೆ ಒಯ್ಯಲಾರದು. ಶಿವ ಮತ್ತು ರುದ್ರರ ಸಮೀಕರಣದಲ್ಲಿ ತೀರ ಮಸಕಾದ ಸಾಧರ್ಮ್ಯ ಮತ್ತು ಇತರ ಹಲವು ಭಿನ್ನ ಅಂಗಗಳಾಗಿ ಶಿವನ ಕಲ್ಪನೆ ಸಾಕಾರಗೊಂಡಿದೆ. ಪ್ರಾಂತ ಪ್ರಾಂತಗಳಲ್ಲಿ ಸೌಂದರ್ಯಾಭಿರುಚಿಯಿಂದಾಗಿ ಮಾತ್ರ ಪರಂಪರೆಯಿಂದಾಗಿ ಭಿನ್ನ ರೂಪದಲ್ಲಿ ಪ್ರಕಟಗೊಂಡವು. ಶ್ರೀ ಜೋಶಿಯವರು ಮಂಡಿಸಿದ ಈ ಸತ್ಯವನ್ನು ಮಲ್ಹಾರಿ ಖಂಡೋಬನ ವಿಷಯದಲ್ಲಿ ಏಕೆ ಅನ್ವಯಿಸಬಾರದು? ಖಂಡೋಬಾ ಮತ್ತು ಮಲ್ಹಾರಿಯ ಇತಿಹಾಸವು ತುಂಬ ಗೋಜಲು ಗೋಜಲಾಗಿದೆ ಎನ್ನುವದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬ ಅಧ್ಯಯನಕಾರನು ಮುಗ್ಗರಿಸಿಯೇ ಮುಂದೆ ಸಾಗಬೇಕಾಗುತ್ತದೆ ಎನ್ನುವದರಲ್ಲಿ ಸಂಶಯವಿಲ್ಲ. ಮಲ್ಹಾರಿಯು ಮಾರ್ತಾಂಡನೂ ಹೌದು, ವೇದದಲ್ಲಿ ರುದ್ರ ಮತ್ತು ಆದಿತ್ಯ ಇವರ ಗಾಢ ಸಂಬಂಧವನ್ನು ಗಮನಿಸಿದಿರಾದರೆ ಶಿವ ಮತ್ತು ಸೂರ್ಯ ಇವರಿಬ್ಬರು ಏಕೀಕರಣಗೊಂಡು ನಿರ್ಮಾಣಗೊಂಡ ಹಲವು ಗ್ರಾಮದೇವತೆಗಳಲ್ಲಿ– ಅವರಲ್ಲಿ ಮಲ್ಹಾರಿಯೂ ಒಬ್ಬ ಎಂದು ನಾವು ಹೇಳಬಹುದು.

ಶಿವ ಮತ್ತು ರುದ್ರ ಇವರಿಬ್ಬರೂ ಕಾಳಗದ ದೇವರು. ಖಂಡೋಬಾ ಖಡ್ಗಧಾರಿ ದೇವರಾಗಿದ್ದರಿಂದ ವೀರರ ದೇವರೂ ಹೌದು. ರುದ್ರಪುತ್ರ ಮತ್ತು ಶಿವಪುತ್ರನಾದ ಸ್ಕಂದನೇ ಖಂಡೋಬಾ ಎಂದು ಭಾವಿಸಲಾಗಿದೆ. ಶ್ರೀ ಜೋಶಿಯವರು ಸ್ಕಂದ ಮತ್ತು ಖಂಡೋಬಾ ಇವರ ಸಮೀಕರಣದ ಬಗೆಗೆ ಎತ್ತಿದ (ಪು. ೧೩೦) ಆಕ್ಷೇಪವು ಹೆಚ್ಚು ಪರೀಕ್ಷೆಯನ್ನು ಬಯಸುತ್ತದೆ. ಖಂಡೋಬಾ ಖಡ್ಗಧಾರಿ, ಅಶ್ವಾರೋಹಿ ಮತ್ತು ಮ್ಹಾಳಸಾಪತಿ (ಶ್ರೀ ಜೋಶಿಯವರು ಮಲ್ಹಾರಿಗೆ ಒಬ್ಬಳೇ ಹೆಂಡತಿ ಎಂದೊಪ್ಪುತ್ತಾರೆ. ವಾಸ್ತವಿಕವಾಗಿ ಇಬ್ಬರು ಹೆಂಡಂದಿರು ಮ್ಹಾಳಸಾ ಮತ್ತು ಬಾಣಾಯಿ) ಶಿವನು ತ್ರಿಶೂಲಧಾರಿ. ಎತ್ತಿನ ಮೇಲೆ ಕುಳಿತಿದ್ದಾನೆ. ಹೀಗಾಗಿ ಶಿವ ಮತ್ತು ಮಲ್ಹಾರಿಯ ಏಕೀಕರಣವಾಗುವುದಿಲ್ಲ ಎಂದು ಶ್ರೀ ಜೋಶಿ ಹೇಳುತ್ತಾರೆ.

ದಿ. ಭಾಸ್ಕರರಾವ ಜಾಧವರಂತೆಯೇ ಸ್ಕಂದ ಮತ್ತು ಖಂಡೋಬ ಅವರ ಸಮೀಕರಣ ಅವರಿಗೆ ಒಪ್ಪಿಗೆಯಿಲ್ಲ. ಏಕೆಂದರೆ ಸ್ಕಂದನ ವಾಹನ ಮಯೂರ ಮತ್ತು ಖಂಡೋಬನದು ಕುದುರೆ. ಕಾರ್ತಿಕೇಯ ಬ್ರಹ್ಮಚಾರಿಯಾದರೆ ಖಂಡೋಬಾ ಸಪತ್ನಿಕ. ಮ್ಹಾಳಸಾಳನ್ನು ಖಂಡೋಬಾಳನ್ನು ಪತ್ನಿ ಎಂದೊಪ್ಪಿದರೆ ಭಾರತೀಯ ನೈತಿಕ ಪರಂಪರೆ ಗೊತ್ತಿದ್ದವರಿಗೆ ಮಾತೆಯೊಂದಿಗೆ ಲಗ್ನ ಮಾಡಿಕೊಂಡ ಕಾರ್ತಿಕೇಯುನನ್ನು ಒಪ್ಪುವ ಪೇಚಿನ ಪ್ರಸಂಗ ಬರಬಹುದು ಎಂದು ಶ್ರೀ ಜೋಶಿಯವರ ಹೇಳಿಕೆ.

ಆದರೆ ಸ್ವಲ್ಪ ಆಳವಾಗಿ ಯೋಚಿಸಿದರೆ ಬೇರೊಂದು ಮಗ್ಗಲೂ ಗಮನಕ್ಕೆ ಬರುವದು ಹೀಗೆ– ಪುರಾಣವು ಕಾರ್ತಿಕೇಯನನ್ನು ಬ್ರಹ್ಮಚಾರಿ ಎಂದು ನಿರ್ಧರಿಸಿ ಪುರಾಣದಲ್ಲಿರುವ ಅದುವೇ ಭಾರತೀಯ ಪರಂಪರೆ ಮತ್ತು ಅದನ್ನೇ ಲೋಕಮಾನ್ಯವೆಂದೂ ಭಾವಿಸಬೇಕಿಲ್ಲ. ದಕ್ಷಿಣದಲ್ಲಿ ಸುಬ್ರಹ್ಮಣ್ಯನನ್ನು ಕಾರ್ತಿಕೇಯನೆಂದು ಭಾವಿಸಲಾಗುತ್ತದೆ. ಅವನು ಬ್ರಹ್ಮಚಾರಿಯಾಗಿರದೇ ಮೂವರು ಸತಿಯರ ಪತಿ ಎಂದು ಭಾವಿಸಲಾಗಿದೆ. ಸ್ಕಂದನು ಖಂಡೋಬಾನಾಗಿದ್ದು, ಅವನು ರಣದೈವ ಎಂದು ಡಾ. ಕೇತಕರರೂ ಸಹ ಸುಬ್ರಹ್ಮಣ್ಯನ ಆಧಾರ ಬಳಸಿ ಸೂಚಿಸಿದ್ದಾರೆ. ಅಂದರೆ ಈ ದೈವದ ಸಂಬಂಧವು ಕರ್ನಾಟಕಕ್ಕಿಂತ ತಮಿಳು ಪ್ರಾಂತದೊಂದಿಗೆ ಹೆಚ್ಚಾಗಿ ಬರುವದರಲ್ಲಿ ಸಂಶಯವಿಲ್ಲ.

ಶಿವ ಮತ್ತು ಸೂರ್ಯನ ಸಮನ್ವಯದ ಬಗೆಗೆ ರಾಜಾರಾಮ ಶಾಸ್ತ್ರಿ ಭಾಗವತರು ತ್ರಿಮೂರ್ತಿ ವಿಚಾರ ಎಂಬ ಲೇಖನಮಾಲೆಯಲ್ಲೂ ಮನನೀಯ ವಿಚಾರ ಮಂಡಿಸಿದ್ದಾರೆ. ಖಂಡೋಬಾ ಮತ್ತು ಸ್ಕಂದ ಇವರ ವಾಹನದಲ್ಲಿ ವ್ಯತ್ಯಾಸವಿದೆ. ಆದರೆ ಈ ವ್ಯತ್ಯಾಸದಿಂದಾಗಿಯೇ ಒಬ್ಬ ದೈವ ಮತ್ತೊಂದು ದೈವದಲ್ಲಿ ವಿಸರ್ಜನ ಇಲ್ಲವೇ ರೂಪಾಂತರವಾಗುತ್ತದೆ. ಆಗ ಬೇರೆ ಹೆಸರಿನ ಜೊತೆಗೆ ಬೇರೆ ಗುಣಧರ್ಮವೂ ಅವನಿಗೆ ಅಂಟಿಕೊಳ್ಳುತ್ತದೆ. ಖಂಡೋಬಾ ಯುದ್ಧದೇವರು ಖಂಡಪರಶು ಎಂಬ ಹಳೆಯ ಶಬ್ದವೂ ಖಡ್ಗದ ಸಮರ್ಥನೆ ಮಾಡುತ್ತದೆ. ಭಾರತದಲ್ಲಿ ಉತ್ತರದಲ್ಲಿಯಂತೆ ದಕ್ಷಿಣದಲ್ಲೂ ಸತ್ತವರ ಇಲ್ಲವೇ ವಿಶೇಷವಾಗಿ ವೀರರ ಕಟ್ಟಿಗೆಯ ಇಲ್ಲವೇ ಕಲ್ಲಿನ ಸ್ಮಾರಕವನ್ನು ಮಾಡುತ್ತಾರೆ. ಹಲವು ಸಲ ಅವರನ್ನು ವೀರರು ಎಂದೇ ಸಂಬೋಧಿಸುತ್ತಾರೆ. ಈ ವೀರರನ್ನು ಕುದುರೆಯ ಮೇಲೆ ಕೂತಿರುವದನ್ನು ತೋರಿಸುತ್ತಾರೆ. ಈ ಪದ್ಧತಿಯು ತೀರಾ ಪುರಾತನವಾದುದು. ಆದರೆ ಸ್ಕಂದದ ಮಯೂರ ವಾಹನದ ನಂತರ ಯಾವಾಗ ಕುದುರೆಯು ಸಾರ್ವತ್ರಿಕ ಯುದ್ಧವಾಹನವೆಂದು ಪ್ರಚಾರದಲ್ಲಿ ಬಂತೋ ಅಂದಿನಿಂದಿನದಿರಬೇಕು–ಎಂದು ತರ್ಕ ಮಾಡಬಹುದು, ಇರಲಿ. ಹೇಳಬೇಕಾದ ಸಂಗತಿ ಏನೆಂದರೆ ದೈವದ ಸಮೀಕರಣವು ಶುದ್ಧವೆಂದರೆ ಹೇಗಿದೆಯೋ ಹಾಗಾಗದೆ,

ಅದು ಸಂಕೀರ್ಣ ಮತ್ತು ಸಮ್ಮಿಶ್ರತೆಯಿಂದ ಆಗುತ್ತಿರುತ್ತದೆ. ಇದೇ ಗಲಿಬಿಲಿಯು ಮಹಾಲಕ್ಷ್ಮಿ ಮತ್ತು ದುರ್ಗೆಯ ನಡುವೆ ಮತ್ತು ರೇಣುಕೆ ಮತ್ತು ರಾಣುಬಾಯಿ ಈ ದೇವತೆಗಳಲ್ಲೂ ಕಾಣಬರುತ್ತದೆ. ಖಂಡೋಬಾನಿಗೆ ಖಂಡೇರಾಯ ಖಂಡೇರಾವ ಎಂದೂ ಕರೆಯುವ ಪದ್ಧತಿಯಿದೆ. ಸಾತುಪುರಾದ ಚಾಂದಾ ಜಿಲ್ಲೆಯಲ್ಲಿ ಖಂಡೇರಾ ಹೆಸರಿನ ವೀರಮರಣ ಹೊಂದಿದ ದೇವರು ಗೋಂಡರ ದೇವತಾಸಮೂಹಗಳ *(Pantheon)* ನಡುವೆ ಇರುತ್ತಾನೆ. ಆದರೆ ಎಲ್ಲೆಡೆ ಗೋಂಡರ ನಡುವೆಯಿದ್ದೇ ಇರುತ್ತಾನೆ ಎಂದೇನಿಲ್ಲ. ಅದೇ ರೀತಿ ಹೋಶಂಗಾಬಾದ ಜಿಲ್ಲೆಯ ಕೊರಕು ವಿಭಾಗದಲ್ಲಿ ಖಂಡೇರಾವ ಅಂದರೆ ವೀರದೇವನು ಹೋಳಿಯ ದಿನ ಕಟ್ಟಿಗೆಯ ಕಂಬದ ರೂಪದಲ್ಲಿ ನಿಲ್ಲಿಸಿರುತ್ತಾರೆ. ಈ ಪದ್ಧತಿಯು ಸಾತಪುಡಾದಲ್ಲಿ ಎಲ್ಲೆಡೆ ಪಸರಿಸಿದೆ. ಈ ಕಂಬಕ್ಕೆ ಮೇಘನಾದ ಅಂದರೆ ಇಂದ್ರಜಿತ ಎನ್ನುತ್ತಾರೆ. ಕೆಲವರು ಮೇಘನಾದನು ಇಂದ್ರನ ಮಗನೆಂದೂ ಹೇಳುತ್ತಾರೆ. ಇಂದ್ರನ ಮಗನಾಗಿರಲಿ ಅಥವಾ ರಾವಣನ ಮಗನಾಗಿರಲಿ ಇಬ್ಬರೂ ಪುರಾಣದಲ್ಲಿ ವೀರರೆಂದೇ ಗುರುತಿಸಲ್ಪಟ್ಟವರು. ಇಂದ್ರಜಿತನ ವೀರ ಮರಣವಂತೂ ಅತ್ಯಂತ ರೋಮಾಂಚಕಾರಕವಾಗಿದೆ. ವಿಕಲ್ಪದಿಂದ ಖಂಡೇರಾ ಇವನು ಜಯಂತ, ಇಂದ್ರಜಿತ ಇಲ್ಲವೇ ಇತರ ಯಾರೋ ಪ್ರಾಚೀನ ಖಡ್ಗಧಾರಿ ವೀರನು ಸಾವನ್ನಪ್ಪಿದ ಆ ಜಾತಿಯ ಇಲ್ಲವೇ ಪ್ರಾಂತದ ಪುರುಷನಾಗಿರುವ ಸಾಧ್ಯತೆಯಿದೆ. ಖಂಡೇರಾ ಇದರ ಸಾಮಾನ್ಯ ಅರ್ಥವು ಖಡ್ಗಧಾರಿ ಪುರುಷ ಎಂದಿದ್ದು ಲಾಕ್ಷಣಿಕ ಅರ್ಥವು ವೀರಮರಣ ಹೊಂದಿದವನು ಅಥವಾ ಯುದ್ಧ ದೇವನೆಂದೂ ಆಗುತ್ತದೆ. ಈ ಸಮನ್ವಯದ ಪದ್ಧತಿಯಿಂದ ನೋಡಿದರೆ ಮಹಾರಾಷ್ಟ್ರದ ಖಂಡೋಬಾ ಮತ್ತು ನರ್ಮದಾ ಕಣಿವೆಯ ಖಂಡೇರಾ ಇವರು ಪರಸ್ಪರರಿಂದ ಭಿನ್ನವಾಗಿಲ್ಲ ಎಂದೆನಿಸುತ್ತದೆ.

'ಧರ್ಮಪಂಥ' ಎನ್ನುವ ಅಧ್ಯಾಯವು ಈ ಪುಸ್ತಕದ ಅತ್ಯಂತ ಹೃದ್ಯಭಾಗವಾಗಿದೆ. ಆದರೆ ಅದರಲ್ಲಿಯ ಯತಿ ಪಂಥದ ಉಗಮದ ಬಗೆಗೆ ನಾನು ಶ್ರೀ ಜೋಶಿಯವರೊಂದಿಗೆ ಭಿನ್ನಾಭಿಪ್ರಾಯವನ್ನು ಹೊಂದಿದ್ದೇನೆ. ಶ್ರೀ ಜೋಶಿಯವರು ಯತಿ ಪಂಥ ಅಂದರೆ ಚತುರ್ಥಾಶ್ರಮವನ್ನು ಸಂಹಿತೆಯ ಕಾಲದ್ದೆಂದು ಭಾವಿಸುತ್ತಾರೆ. ನಾನು ೧೯೩೯ರಲ್ಲಿ ಮುಂಬೈ ವಿಶ್ವವಿದ್ಯಾಲಯದ ನಿಯತ ಕಾಲಿಕದಲ್ಲಿ *'The Oigin of Indian Monachism'* ಎಂಬ ವಿವರವಾದ ನಿಬಂಧವನ್ನು ಬರೆದಿದ್ದೆ. ಅದರಲ್ಲಿ ಸಂಹಿತಾ ಕಾಲದಲ್ಲಿ ಶ್ರಮಣಧರ್ಮದ ಸಿದ್ಧತೆ ನಡೆದಿರಲಿಲ್ಲ. ಬ್ರಾಹ್ಮಣ ಕಾಲದಲ್ಲಿ ಯತಿ ಎಂಬ ಶಬ್ದ ಸನ್ಯಾಸ ಎಂಬ ಅರ್ಥದಲ್ಲಿ ಬಳಕೆಗೆ ಬಂತು. ಏಕೆಂದರೆ ಅದಕ್ಕಿಂತ ಮೊದಲು ಪ್ರವ್ರಜ್ಯೆ ಕಲ್ಪನೆಯು ಸಂಹಿತೆಯಲ್ಲಿಲ್ಲ ಎಂದು ಸೋದಾರಣವಾಗಿ ವಿವರಿಸಿದ್ದೆ. ಶ್ರೀ ಜೋಶಿಯವರು ತಮ್ಮ ಹೇಳಿಕೆಗೆ

ಬೆಂಬಲ ನೀಡಲು ಬಳಸಿದ ಎಲ್ಲ ವಿಷಯವನ್ನು ಗಮನಿಸಿಯೇ ನಾನು ಸಂಪೂರ್ಣ ಸಂಹಿತೆಯ ಸಾಹಿತ್ಯವನ್ನು ಅಧ್ಯಯನ ಮಾಡಿ, ಯತಿಧರ್ಮದ ಸಕಲ ಅಂಗ ಉಪಾಂಗಗಳನ್ನು ಹೋಲಿಸಿ ನೋಡಿ ಈ ಹೇಳಿಕೆ ನೀಡಿದ್ದೆ. ಅಷ್ಟೇ ಅಲ್ಲ ಶ್ರೀ ರಮಾಪ್ರಸಾದ ಚಂದಾ ಅವರ ಹೇಳಿಕೆಯನ್ನು ಜೋಶಿ ಆಧಾರವಾಗಿ ಬಳಸಿದ್ದಾರೆ. ಅದನ್ನು ಪ್ರಮಾಣಸಹಿತ ವಿರೋಧಿಸಿ, ಮೊಹೆಂಜೋದಾರದಲ್ಲಿ ಸಿಕ್ಕ ಮೂರ್ತಿಯನ್ನು ಯತಿಯ ಮೂರ್ತಿಯೆಂದು ಹೇಳಿದ ಶ್ರೀ ಚಂದಾ ಅವರ ಹೇಳಿಕೆಯನ್ನೂ ವಿರೋಧಿಸಿ ಅದು ಯತಿಯ ಮೂರ್ತಿಯಲ್ಲ ಎಂದು ಸಿದ್ಧಮಾಡಿದ್ದೆ.

ಈ ಅಧ್ಯಾಯದಲ್ಲಿ ಗುರು ಮಾರ್ಗ, ಶಂಕರಾಚಾರ್ಯರ ಪರಂಪರೆ, ನಾಥ ಪರಂಪರೆ, ವೀರಶೈವ ಪರಂಪರೆ ಮುಂತಾದವುಗಳ ಮಾಹಿತಿಯು ಅತ್ಯಂತ ಉಪಯುಕ್ತವಾದುದಾಗಿದೆ. ಶ್ರೀ ಜೋಶಿಯವರು ವಿಶೇಷವಾಗಿ ವಿಠ್ಠಲ ಸಂಪ್ರದಾಯದ ಬಗ್ಗೆ ಮಾಡಿದ ಭಾಷ್ಯವು ಬುದ್ಧಿ ಮತ್ತು ಭಾವನೆಗೆ ಒಪ್ಪಿಗೆಯಾಗುವ ಹಾಗಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಋಣಾನುಬಂಧ ಮತ್ತು ಪ್ರತಿಕ್ರಿಯೆಯನ್ನೂ ಸಹ ಅತ್ಯಂತ ಸೊಗಸಾಗಿ ಬಣ್ಣಿಸಲಾಗಿದೆ.

ಹೀಗೆ ಉಪಯುಕ್ತ ಮಾಹಿತಿಯಿಂದ ಕೂಡಿದ ಮತ್ತು ನಮ್ಮ ಬುದ್ಧಿಗೆ ಚಾಲನೆ ಮತ್ತು ಆಹ್ವಾನ ನೀಡುವ ಈ ಪುಸ್ತಕವನ್ನು ರಚಿಸಿದ ಬಗ್ಗೆ ಶ್ರೀ ಜೋಶಿ ಅವರಿಗೆ ಧನ್ಯವಾದ ಹೇಳಲೇಬೇಕು. ಅಂತರ ಭಾರತಿಯವರು ಪ್ರಕಟಿಸಿದ ಈ ಮೊದಲನೇ ಗ್ರಂಥವು ಅತ್ಯಂತ ಆಶಾದಾಯಕ ಮತ್ತು ಮುಂದಿನ ಕಾರ್ಯದ ಬಗ್ಗೆ ಅಪೇಕ್ಷೆಯನ್ನು ಹೆಚ್ಚಿಸುವಂತಹದಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ.

(ಸತ್ಯಕಥಾ, ಆಗಸ್ಟ್ ೧೯೫೩)

* * * *

ಮರ್‍ಹಾಟಿ ಸಂಸ್ಕೃತಿ; ಕಾಹೀ ಸಮಸ್ಯಾ- ಶಂ. ಬಾ. ಜೋಶಿ
ಪ್ರಕಾಶಕರು : ಸ. ಜ. ಭಾಗವತ ಅಂತರಭಾರತೀ ಪ್ರಕಾಶನ, ಪುಣೆ, ಡಿಸೆ. ೧೯೫೨

ಶ್ರೀಮತಿ ದುರ್ಗಾ ಭಾಗವತ ಅವರು ಜಾನಪದ, ಮಾನವವಂಶಶಾಸ್ತ್ರ, ಸಮಾಜಶಾಸ್ತ್ರ, ಧಾರ್ಮಿಕ, ವಿಶೇಷವಾಗಿ ಬೌದ್ಧಧರ್ಮ ಮತ್ತು ಪರಂಪರೆ ಈ ಬಗೆಯ ಸಂಶೋಧನಾ ಬರಹಗಳನ್ನು ಬರೆಯುವುದರಲ್ಲಿ ಆಸಕ್ತರು. ಮಾನವ ಸೃಷ್ಟಿಯಲ್ಲಿನ ಜೈವಿಕಜಾಲದಲ್ಲಿನ ಪ್ರತಿಯೊಂದು ಜೀವಜಂತುವಿಗೂ ಒಂದು ಸ್ಥಾನವಿದೆ. ಮಾನವ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅವುಗಳೆಲ್ಲದರ ಸಹಭಾಗಿತ್ವವಿದೆ ಎಂಬುದನ್ನು ದುರ್ಗಾ ಭಾಗವತ ಅವರು ತಮ್ಮ ಬರಹಗಳಲ್ಲಿ ಶೋಧಿಸುತ್ತಾರೆ. ೧೯೩೫ ರಿಂದ ೧೯೪೦ರ ಅವಧಿಯಲ್ಲಿ ಮಧ್ಯಪ್ರದೇಶದ ಆದಿವಾಸಿಗಳ ತಾಣಗಳಲ್ಲಿ ಸುತ್ತಾಡಿ ಅವರ ಜೀವನಕ್ಕೆ, ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳನ್ನು, ನಾಗರಿಕ ಜಗತ್ತಿನಲ್ಲಿ ಅವರಿಗಿರುವ ಸ್ಥಾನಮಾನವನ್ನು ಅವರು ಇಲ್ಲಿ ವಿವೇಚಿಸಿದ್ದಾರೆ.

ಡಾ. ಕೆ. ಮರುಳಸಿದ್ದಪ್ಪ
ಅಧ್ಯಕ್ಷರು

KUVEMPU BHASHABHARATHI PRADHIKAR
KBBP 0378 PRICE Rs:150/-
9 789387 592735
ಸಂಸ್ಕೃತಿ-ಸಂಚಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು ೫೬೦೦೫೬